UNIVERSAL
LIBRARY

OU_200408

UNIVERSAL
LIBRARY

ರಾಜಾಮಲಯಸಿಂಹ

(ಎರಡು ಭಾಗಗಳಲ್ಲಿ)

ಎಂ. ಎ. ಶ್ರೀನಿವಾಸಾಚಾರ್ಯರಿಂದ
ವಿರಚಿತವಾದುದು

(ಮೊದಲನೆಯ ಭಾಗ)

ಬಂಗಳೂರು ಸಿಟಿ
ಗುರುಕುಲಾನಂದ ಮುದ್ರಾಲಯದಲ್ಲಿ
ಮುದ್ರಿತವಾಯಿತು

೧೯೨೩

(All rights reserved)

ಪೀಠಿಕೆ

ಈ ನವನ್ಯಾಸವು "ದಿ ಕೌಂಟ್ ಆಫ್ ಮಾಂಟಿಕ್ರಿಸ್ಟೊ" ಎಂಬ ಹೆಸರಿನಿಂದ ಇಂಗ್ಲೀಷರ ನುಡಿಯಲ್ಲಿ ಕಂಗೊಳಿಸುತ್ತಿರುವ ಗ್ರಂಥದ ಕರ್ನಾಟಕ ಗದ್ಯಾನುವಾದವಾಗಿದೆ. ಇದರ ಮೂಲಗ್ರಂಥವು ಫ್ರಾನ್ಸ್ ರಾಜ್ಯದ ಪ್ಯಾರಿಸ್ ನಗರದ ನಿವಾಸಿಯಾದ ಅಲೆಗ್ಜಾಂಡರ ಡೂಮಾ ಎಂಬ ವಿದ್ವಾಂಸನಿಂದ ಫ್ರೆಂಚ ಭಾಷೆಯಲ್ಲಿ ರಚಿತವಾಗಿರುವುದು. ಆ ವಿದ್ವಾಂಸನು ಬೇರೆಕಾಲದಲ್ಲಿಯೇ ಅಸಾಧಾರಣವಾದ ಖ್ಯಾತಿಯನ್ನೂ ಲಾಭವನ್ನೂ ಪಡೆದನು. ಅವನ ಪ್ರತಿಭೆಗೆ ಮುಗ್ಧರಾಗಿ ಅವನು ಹೇಳುವುದನ್ನೆಲ್ಲಾ ವಿದ್ವಾಂಸನೊಬ್ಬನು ಬರೆಯುತ್ತಿದ್ದನೆಂದೂ, ಅದಕ್ಕೆ ಬೇಕಾಗುವ ಲೇಖನೋಪಕರಣಗಳನ್ನು ವಿದ್ಯಾಭ್ಯಾಸಿಯಾದ ವರ್ತಕನೊಬ್ಬನು ಪೂರೈಸುತ್ತಿದ್ದನೆಂದೂ ಕಿಂವದಂತಿಯೊಂದುಂಟು. ಈ ಮೂಲಗ್ರಂಥವನ್ನು ಪ್ರಪಂಚದ ಬಹುಜನಾಂಗದವರು ತಮ್ಮ ತಮ್ಮ ದೇಶಭಾಷೆಗಳಲ್ಲಿ ಪರಿವರ್ತನೆ ಮಾಡಿಕೊಂಡಿದ್ದಾರೆ, ಎಂದರೆ ಇದರ ಖ್ಯಾತಿಯನ್ನು ಸ್ವಲ್ಪಮಟ್ಟಿಗೆ ವಿವರಿಸಿದಂತಾಗುತ್ತದೆ. ಇದನ್ನು ನಮ್ಮ ಭರತಖಂಡದ ಪೌತ್ತರೇಯರೂ ಮ್ಲೇಚ್ಛರೂ ಆಯಾ ಭಾಷೆಗಳಲ್ಲಿ ಪರಿವರ್ತಿಸಿಕೊಂಡಿದ್ದಾರೆ. ಕರ್ನಾಟ ಜನಪದದಲ್ಲಿ ಈ ಗ್ರಂಥವು ಅಷ್ಟಾಗಿ ಪ್ರಚಾರದಲ್ಲಿರುವಂತೆ ಕಾಣುವುದಿಲ್ಲ. ಆದುದರಿಂದ ನನ್ನ ಮಿತ್ರವರ್ಯರೂ ನೈಷ್ಕುರವಾಸಿಗಳೂ ಆದ ಶ್ರೀಮತ್ ಪುಂ. ಅ. ಶ್ರೀನಿವಾಸಾಚಾರ್ಯರವರು ಈ ಗ್ರಂಥವನ್ನು ಕನ್ನಡನುಡಿಯಲ್ಲಿ ಬರೆದಿರುವರು.

ಆಂಗ್ಲೇಯಭಾಷೆಯನ್ನರಿಯದ ಪಾಠಕರ ಸೌಕರ್ಯಕ್ಕಾಗಿ ಈ ಕಥೆಯಲ್ಲಿ ವರ್ಣಿಸಿರುವ ವಿಷಯಗಳ ಕಾಲ ದೇಶಗಳನ್ನು ಸೂಚಿಸುವುದು ಅಪ್ರಸಕ್ತವಾಗಲಾರದು. ಕ್ರಿಸ್ತಶಕ ಪದಿನೆಂಟನೆಯ ಶತಾಬ್ದದಲ್ಲಿ ಫ್ರಾನ್ಸ್ (France) ದೇಶದ ರಾಜಕೀಯಸ್ಥಿತಿಯೂ ಸಾಮಾಜಿಕಸ್ಥಿತಿಯೂ ಅತಿ ಘೋರವಾಗಿ ಭಗವದ್ಭಕ್ತರು ಮಾತ್ರವೇ ಅಲ್ಲದೆ ವಿಷಯಪ್ರಪಂಚದಲ್ಲಿ ಮಗ್ನರಾಗಿರುವವರೂ ಉಪಹಾಸಕರೂ ವಿಸ್ಮಾರಿಸತಕ್ಕುವಾಗಿದ್ದುವು. ರಾಜರು ಪ್ರಜಾಪಾಲನೆಯೆಂದು

ಹೆಸರಿಟ್ಟು ನಿರಂಕುಶಪ್ರಭುತ್ವವನ್ನೂ, ಪ್ರಜೆಗಳು ಸ್ವಾತಂತ್ರ್ಯವೆಂದು ಹೆಸರಿಟ್ಟು ಉಚ್ಛೃಂಖಲವೃತ್ತಿಯನ್ನೂ ಅವಲಂಬಿಸಿದ್ದರು. ಈ ತೆರದಲ್ಲಿ ರಾಜರಿಗೂ ಪ್ರಜೆಗಳಿಗೂ ಹುಟ್ಟಿದ ವಿರೋಧದಿಂದ ಆ ದೇಶದಲ್ಲಿ ರಾಜಪಕ್ಷೀಯರು ಪ್ರಜಾಪಕ್ಷೀಯರು ಎಂಬೆರಡು ಪಕ್ಷಗಳಾದುವು. ಪ್ರಜಾಪಕ್ಷೀಯರೊಳಗೆ ಪ್ರಮುಖರಾದವರು ಸಂಭಾವಿತರೂ ವಿವೇಕಿಗಳೂ ಆಗಿದ್ದರೂ ಉಳಿದವರನೇಕರು ಅಶಿಕ್ಷಿತರಾಗಿ ಯುಕ್ತಾಯುಕ್ತವನ್ನಾಲೋಚಿಸದೆ ಉನ್ಮತ್ತರಾಗಿ ಮನಸ್ಸು ಬಂದ ಹಾಗೆಲ್ಲ ನಡೆಯುತ್ತಿದ್ದರು. ಅವರೊಳಗೆ ದುರ್ಜನರೂ ದುರಾಚಾರಗಳೂ ಆಗಿದ್ದ ಜಾಕೊಬಿನ್ (Jacobin) ಕೂಟದವರು ಅನೇಕವಿಧವಾದ ಘಾತುಕ ಕೃತ್ಯಗಳನ್ನು ನಡೆಯಿಸಿ ಕಡೆಗೆ ಕ್ರಿ. ಶ. ೧೭೯೨ ರಲ್ಲಿ ತಮ್ಮ ಪ್ರಭುವಿನ ಶಿರಚ್ಛೇದನ ಮಾಡಿ ಶಾಸನಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಪ್ರಜಾಪ್ರತಿನಿಧಿಗಳ ಸಮಿತಿಯನ್ನು ಏರ್ಪಡಿಸಿಕೊಂಡರು. ಈ ರಾಷ್ಟ್ರವಿಪ್ಲವವು ನಡೆದ ತರುವಾಯ ಹತ್ತು ವರ್ಷಗಳ ಕಾಲ—ಅದರೊಳಗೂ ಜಾಕೊಬಿನ್ನರ ಘೋಷಣಪ್ರಭುತ್ವದಲ್ಲಿ—(Reign of Terror) ಫ್ರೆಂಚರು ನಾನಾವಿಧಕಷ್ಟಗಳನ್ನನುಭವಿಸಿದರು. ಸಾಲದುದಕ್ಕೆ ಈ ಪ್ರಜಾಪಕ್ಷೀಯರ ಮತವನ್ನು ತಮ್ಮ ಪ್ರಜೆಗಳೂ ಅವಲಂಬಿಸಿ ತಮ್ಮ ಅಧಿಕಾರಕ್ಕೆ ಕುಂದು ತರುವರೆಂಬ ಭಯದಿಂದ ಯೂರೊಪ್ ಖಂಡದ ರಾಷ್ಟ್ರಾಧಿಪರೆಲ್ಲರೂ ಫ್ರಾನ್ಸ್ ದೇಶದ ಪ್ರಜಾಪಕ್ಷೀಯರಿಗೆ ವಿರೋಧಿಗಳಾಗಿ ಯುದ್ಧಸನ್ನಾಹಗಳನ್ನು ಮಾಡತೊಡಗಿದರು. ಫ್ರೆಂಚರು ವಿಪ್ಲವ ಮೂಲಕವಾಗಿ ರಾಜ್ಯಭಾರಕ್ರಮವನ್ನು ಪರಿವರ್ತಿಸಿ ಅಧಿಕಾರವನ್ನು ತಮ್ಮ ಕೈಗೆ ತೆಗೆದುಕೊಂಡರೂ ಶಾಸನಕಾರ್ಯಕ್ಕೆ ತಕ್ಕ ಏರ್ಪಾಯಾಗಲಿ ಏನಾಯಿತುಗುಣಗಳಾಗಲಿ ಅವರಿಗೆ ಇರಲಿಲ್ಲವಾದ ಕಾರಣ ದೇಶವು ಅವ್ಯವಸ್ಥೆಗೆ ಬಂದು ಹಲವು ಬಗೆಯ ಸಂಕಟಗಳಿಗೆ ಗುರಿಯಾಯಿತು. ಪ್ರಜೆಗಳು ತಮ್ಮ ದುಃಖನಿವಾರಣಾರ್ಥವಾಗಿ ಉಪಾಯವನ್ನು ಚಿಂತಿಸುತ್ತಿದ್ದ ಸಮಯಕ್ಕೆ ಸರಿಯಾಗಿ ನೆಪೋಲಿಯನ್ ಬೋನಪಾರ್ಟ್ (Napoleon Bonaparte) ಎಂಬವನು ತನ್ನ ರಣಕುಶಲತೆಯಿಂದಲೂ ಕಾರ್ಯದಕ್ಷತೆಯಿಂದಲೂ ಲಬ್ಧಪ್ರತಿಷ್ಠನಾದನು. ಆಗ ಒಬ್ಬ ಸುಪ್ರಸಿದ್ಧ ಆಂಗ್ಲೇಯ ಲೇಖಕನು ಹೇಳುವಂತೆ ಧನಪ್ರಾಣರಕ್ಷಣಾರ್ಥವಾಗಿ ಧನಿಕರೂ, ಹೊಟ್ಟೆಪಾಡಿಗಾಗಿ ಬಡವರೂ, ಊರಿಗೆ ಬರಜೇಕೆಂದು ಬಯಸಿ ದೇಶಾಂತರಗತರಾದವರೂ, ದೇಶೋಚ್ಚಾಟನೆಯ ಭಯದಿಂದ ರಾಷ್ಟ್ರವಿಪ್ಲವಪಕ್ಷಪಾತಿಗಳೂ,

ಜಯಾಫಲಾಷೆಯಿಂದ ಫೈಯೋರ್ತಾನ್ಸಹಗಳನ್ನು ಳ್ಳವರೂ, ಪ್ರಾಣದಾಸೆಯಿಂದ ಜೀವ ಗಳ್ಳರೂ, ಅಂತು ಸರ್ವರೂ ಅವನ ಮಮವಾಶ್ರಯವನ್ನು ಬಯಸಲಾಗಿ ಸರ್ವಜನ ಸಮ್ಮತದಿಂದ ಅವನು ಪ್ರಥಾನದಂದಾಧಿಪತಿ (First Consul) ಯಾದನು. ಆಗ ಅವನು ಸರ್ವಸ್ವತಂತ್ರ್ಯವನ್ನೂ ಮಿಸಿ ತುಂಟರನ್ನಡಗಿಸಿ ಅರಾಜಕವಾಗಿದ್ದ ಆ ದೇಶವನ್ನು ಒಂದು ಕಡೆ ಸಿರಂಕುಶಪ್ರಭುತ್ವಕ್ಕೆ ಮರಳಿ ದಂತೆಯೂ, ಇನ್ನೊಂದು ಕಡೆ ಅಶ್ವವಸ್ಸಗೆ ಬಾರದಂತೆಯೂ ಕ್ರಮಕ್ಕೆ ತಂದು, ಸುತ್ತಮುತ್ತಲಿದ್ದ ರಾಷ್ಟ್ರಾಧಿಪತಿಗಳೆಲ್ಲರನ್ನೂ ತನ್ನ ವಶವರ್ತಿಗಳನ್ನಾಗಿ ಮಾಡಿಕೊಂಡು ಯೂರೊಪ್ ಖಂಡದ ರಾಜಮಂಡಲಗೆಲ್ಲ ಭಯಂಕರನಾದನು. ಅಷ್ಟೇ ಅಲ್ಲ ಹಿಂದುಸ್ಥಾನದಲ್ಲಿ ಇಂಗ್ಲೀಷರೂ ಫ್ರೆಂಚರೂ ರಾಜ್ಯವನ್ನು ಕಟ್ಟುವ ಸಲುವಾಗಿ ಪೈಪೋಟಿಮಾಡುತ್ತಿದ್ದ ಆ ಸಮಯದಲ್ಲಿಯೇ ಎಂದರೆ ಕ್ರಿ. ಶ. ೧೭೯೮ ರಲ್ಲಿ ಪ್ರೇರಂಗಪಟ್ಟಣದಲ್ಲಿ ಟಿಪ್ಪುಸುಲ್ತಾನನ್ನೂ, ೧೮೦೩ ರಲ್ಲಿ ಮಹಾದಾಷ್ಟ್ರರನ್ನೂ ಅವನು ಇಂಗ್ಲೀಷರ ಮೇಲೆ ಎತ್ತಿಟ್ಟನು. ತರುವಾಯ ೧೮೦೪ ರಲ್ಲಿ ಫ್ರೆಂಚರು ಅವನ ಸಾಮರ್ಥ್ಯ ಧೈರ್ಯಸ್ಥೈರ್ಯಾದಿ ಗುಣಗಳನ್ನೂ ಕಾರ್ಯದಕ್ಷತೆಯನ್ನೂ ನೋಡಿ ನೆಪ್ಟಿ ಅವನಿಗೆ ಚಕ್ರವರ್ತಿಯ ಪಟ್ಟವನ್ನು ಕಟ್ಟಿದರು. ಕೂಡಲೆ ಇಂಗ್ಲೆಂಡ್, ರುಷ್ಯಾ, ಜರ್ಮನಿ ದೇಶಗಳವರು ಒಂದಾಗಿ ಫ್ರಾನ್ಸ್ ದೇಶಕ್ಕೆ ದಂಡೆತ್ತಿ ಬರಲು ಅವನು ಸರ್ವಸಾಮಸಜ್ಜನ್ನು ಮಾಡಿದರೂ ಜಯ, ದಾಸೆಯನ್ನು ಕಾಣದ ಕಾಮಪ್ರಾಪ್ತಿಯನ್ನು ಪುರಸ್ಕಾರಮಾಡಿ ಭೂಮಧ್ಯಸಾಗರ (Mediterranean Sea) ದಲ್ಲಿರುವ ಎಲ್ಬಾ (Elba) ದ್ವೀಪದಲ್ಲಿ ವಾಸಮಾಡಿ ಕೊಂಡಿರಲು ಒಪ್ಪಿಕೊಂಡನು. ತರುವಾಯ, ದಂಡೆತ್ತಿ ಬಂದ ರಾಜರೆಲ್ಲರೂ ಸೇರಿ ಬೋರ್ಬನ್ (Bourbon) ರಾಜವಂಶಜನಾದ ಪದಿನೆಂಟನೆಯ ಲೂಯಿ (Louis XVIII) ಯೆಂಬವನನ್ನು ರಾಜನನ್ನಾಗಿಟ್ಟರು. ಆದರೆ ಆ ರಾಜನ ಆಳ್ವಿಕೆಯು ಪ್ರಜಾರಂಜಕವಾಗಿರಲಿಲ್ಲ ; ಅಲ್ಲದೆ ನೆಪೋಲಿಯನ್ನನ ಪಕ್ಷದವರು ಮತ್ತೆ ಅವನನ್ನು ಬರಮಾಡಿಕೊಂಡು ರಾಜ್ಯವನ್ನು ಅವನ ವಶಮಾಡುವುದಕ್ಕೋಸುಗ ಸಂಚುಮಾಡುತ್ತಲಿದ್ದರು. ಹೀಗಿರುವಲ್ಲಿ ನೆಪೋಲಿಯನ್ನನು ಫ್ರಾನ್ಸ್ ದೇಶಕ್ಕೆ ಮರಳಿ ಬರುತ್ತಲೆ ಪ್ರಜೆಗಳು ಅವನನ್ನು ಮತ್ತೆ ಚಕ್ರವರ್ತಿಯನ್ನಾಗಿ ಸ್ವೀಕಾರ ಮಾಡಿ ಲೂಯಿಯನ್ನು ಪುರ್ತಜಿಸಿದರು. ಹೀಗೆ ಅವನು ಎರಡನೆಯ ಸಾರಿ ಚಕ್ರವರ್ತಿಯಾಗಿ ನೂರು ದಿನಗಳು ರಾಜ್ಯವನ್ನಾಳಿ, ಆ ಬಳಿಕ ಬೆಲ್ಜಿಯಂ (Belgium)

ದೇಶದಲ್ಲಿರುವ ವಾಟರ್ಲೂ (Waterloo) ಎಂಬ ಗ್ರಾಮದಲ್ಲಿ ಅವನಿಗೂ ಇಂಗ್ಲೀಷರಿಗೂ ನಡೆದ ಯುದ್ಧದಲ್ಲಿ ಸೋತು ಒಂದಿಯಾಗಿ ಸೆಂಟ್ ಹೆಲೀನಾ (St. Helena) ದ್ವೀಪದಲ್ಲಿ ವಾಸಮಾಡುತ್ತಿದ್ದು, ಕೆಲವರಿಂದ ಲೋಕಕಂಟಕನು, ನರರಾಕ್ಷಸನು ಎಂದೂ, ಮತ್ತೆ ಕೆಲವರಿಂದ ಲೋಕಪಿತೈಷಿ, ಪ್ರಜಾಬಂಧು ಎಂದೂ ನಾಮಾಂಕಿತನಾಗಿ ೧೮೨೧ ರಲ್ಲಿ ಮೃತನಾದನು. ಅವನೇ ಕಥೆಯಲ್ಲಿ ಏಲಾ ದ್ವೀಪದ ರಾಕ್ಷಸನು (Ogre); ಲೂಯಿಡೋ ಜಮುಸಿಂಹನು

ರಾಜಾಮಲಯಸಿಂಹನ ಚರಿತ್ರೆಯು ಮೇಲೆ ಸೂಚಿಸಿರುವ ರಾಷ್ಟ್ರವಿಪ್ಲವ ಸಮಯದಲ್ಲಿ ಫ್ರೆಂಚರ ಸಾಮಾಜಿಕಸ್ಥಿತಿಯನ್ನೂ, ಪ್ರಾಸಂಗಿಕವಾಗಿ, ಅವರ ರಾಜ ಕೀಯಸ್ಥಿತಿಯನ್ನೂ ವರ್ಣಿಸುವುದು. ಕಾಮಕ್ರೋಧಗಳು ಸರ್ವಕಾಲ ಸರ್ವದೇಶಗಳ ಸಾಮಗ್ರಿಗಳಾದರೂ, ಆ ದೇಶದಲ್ಲಿ ಆ ಕಾಲದಲ್ಲಿ ಅವು ಅತ್ಯುಲ್ಬಣವಾಗಿದ್ದು ಅನೇಕ ವಾದ ಅಪಾಂಗಳಿಗೆ ಹೇತುವಾದುವು. ನೆಪೋಲಿಯನ್ನನು ಎಲ್ಬಾ (ಏಲಾ) ದ್ವೀಪದಲ್ಲಿ ವಾಸಮಾಡುತ್ತಿದ್ದ ಸಮಯದಲ್ಲಿ ಅವನ ಸಕ್ಷಪಾತಿಗಳಾದ ಫ್ರೆಂಚರು ಆಗಾಗ ದೇಶದ ರಾಜಕೀಯಸ್ಥಿತಿಯನ್ನು ಅವನಿಗೆ ತಿಳಿಸುತ್ತಲೂ ಮರಳಿ ಚಕ್ರ ವರ್ತಿಪದವಿಯನ್ನು ಅವನ ಕೈ ಸೇರುವ ಸಲುವಾಗಿ ತಕ್ಕ ಸನ್ನಾಹಗಳನ್ನು ಮಾಡು ತ್ತಲೂ, ಸಿಕ್ಕಿದಾಗ ದಂಡನೆಗೆ ಗುರಿಯಾಗುತ್ತಲೂ ಇದ್ದರು. ಪ್ರಸಕ್ತ ಕಥಾ ನಾಯಕನಾದ ಮಲಯಸಿಂಹನು ಈ ಸಂಚಿಗೆ ಒಳಗಾಗಿದ್ದನೆಂದು ಹೊರಬಿದ್ದುದ ರಿಂದ ಅವನು ಕಾರಾಗೃಹವಾಸಕ್ಕೆ ಗುರಿಯಾದನು. ಅವನಿಗೆ ಪ್ರಾಪ್ತವಾದ ಈ ಸಂಕಟಕ್ಕೆ ಅವನ ಉದ್ಯೋಗಕ್ಕೆ ಅಸೆಪಡುತ್ತಿದ್ದ ದುರ್ಮತಿಯೂ (Danglars), ಅವನು ಹಿಟ್ಟೆ ಮದುವೆಯಾಗಬೇಕೆಂದಿದ್ದ ಹೆಣ್ಣಿಗೆ ಆಸೆಪಡುತ್ತಿದ್ದ ಒಷಯ ಲಂಪಟನೂ (Fernand), ರಾಜನ ಅನುಗ್ರಹಕ್ಕೆ ಪಾತ್ರವಾಗಿ ಉನ್ನತಪದವಿಗೆ ಒರಬೇಕೆಂದಿದ್ದ ಪಲ್ಲಟಬೇವನೂ (Villefort) ಹೊಲವಾದರು. ಅವರ ಒಡ ನಾಡಿಗನಾದ ಕದಘರ್ಕ (Caderousse) ನೆಂಬ ಕೇಡಿಗನೊಬ್ಬನಿದ್ದನು. ಈ ದುಷ್ಟಚತುಷ್ಟಯವನ್ನು ಆ ಕಾಲದಲ್ಲಿ ಪೂರ್ತೀಕರಿಸಿದ್ದ ಕಾಮಕ್ರೋಧಗಳ ಪ್ರತಿ ರೂಪವೆನ್ನಬಹುದು. ಮಲಯಸಿಂಹನು ಹದಿನಾಲ್ಕು ವರ್ಷಗಳ ಕಾಲ ಸರೆ ಮನೆಯಲ್ಲಿ ಕೊಳೆತು, ಬಳಲಿ, ಉಪಾಯವಾಗಿ ಅಲ್ಲಿಂದ ಜಾರಿಕೊಂಡು, ಯಾವನು ಎಂತಹವನೋ ಅವನಿಗೆ ತಾನು ಎಂತಹವನಾಗಿರುವುದು ಧರ್ಮವೆಂದೆಣಿಸಿ ತನಗೆ ಅಪಕಾರಮಾಡಿದ ಕೇಡಿಗರಿಗೆ ಪ್ರತೀಕಾರವನ್ನು ಮಾಡಿ ದುಷ್ಟಜನಸಮಾಕೀರ್ಣ

ವಾಗಿ ಪಾಪಭೂಯಿಷ್ಠವಾಗಿದ್ದ ನಗರವನ್ನು ಬಿಟ್ಟು ಹೋಗುವ ಸಮಯದಲ್ಲಿ ಪರಮೇಶ್ವರಧ್ಯಾನಮಗ್ನನಾಗಿರುವಂತೆ ತಲೆಬಾಗಿಸಿಕೊಂಡು ಅಂಜಲಿಬದ್ಧನಾಗಿ ನಿಂತು ಇಂತೆಂದು ವಿಲಪಿಸಿದನು —

"ಮಹಾನಗರವೇ! ನಿನ್ನ ಬಾಗಿಲ ಹೊಕ್ಕು ಅರು ತಿಂಗಳಾಗುತ್ತಾ ಬಂದಿತು. ಪರಮಾತ್ಮನಿಂದ ಪ್ರೇರಿತನಾಗಿ ನಿನ್ನಲ್ಲಿಗೆ ಬಂದೆ; ಅವನ ಅನುಗ್ರಹದಿಂದ ಕೃತಾರ್ಥನಾದೆ; ಇನ್ನು ಹೊರಡುವೆನು. ನನ್ನ ಅಂತರಂಗವನ್ನು ಬಲ್ಲ ಅವನೊಬ್ಬನಿಗೇ ಇಷ್ಟು ದಿನಗಳು ನಾನು ಇಲ್ಲಿದ್ದ ರಹಸ್ಯವನ್ನು ಅರಿಕೆಮಾಡಿಕೊಂಡಿರುವೆನು. ನಿನ್ನನ್ನು ಬಿಟ್ಟು ಹೋಗುವ ಈ ಸಮಯದಲ್ಲಿ ನನಗೆ ಅಹಂಕಾರವಿಲ್ಲ, ದ್ವೇಷವಿಲ್ಲ; ಕೋಪವು ಮಾತ್ರ ನನ್ನನ್ನು ಬಿನ್ನ ಪತ್ತಿ ಒರುವುದೆಂಬುದನ್ನು ಆ ಪರಮಾತ್ಮ ನೊಬ್ಬನೇ ಬಲ್ಲ. ಅವನು ನನಗೆ ಕೊಟ್ಟ ಶಕ್ತಿಯನ್ನು ಸ್ವಾರ್ಥಸಾಧನಕ್ಕಾಗಲಿ ವ್ಯರ್ಥಕಾರ್ಯಕ್ಕಾಗಲಿ ಉಪಯೋಗಿಸಲಿಲ್ಲವೆಂಬುದನ್ನು ಅವನೊಬ್ಬನೇ ಬಲ್ಲ. ಮಹಾನಗರವೇ, ನಾನು ಹುಡುಕಿದುದನ್ನು ತಲ್ಲಣಿಸುತ್ತಿರುವ ನಿನ್ನ ಹೃದಯದಲ್ಲಿಯೇ ಕಂಡೆನು. ನಿನ್ನ ಗರ್ಭದಲ್ಲಿ ಹುಟ್ಟಿಗಿದ್ದ ವಾಸನೆಯನ್ನು ತಲಪರ್ಯಂತವಾಗಿ ಕೊಯ್ದಿಸಿ ಮೂಲೋತ್ಪಾಟನಮಾಡಿದೆನು. ಇನ್ನು ನನ್ನ ಕೆಲಸವಾಯಿತು. ನನ್ನ ಕರ್ತವ್ಯ ಕಾರ್ಯವು ಪೂರೈಸಿತು. ಇನ್ನು ನಿನ್ನ ದೆಸೆಯಿಂದ ನನಗೆ ಸುಖವೂ ಇಲ್ಲ, ದುಃಖವೂ ಇಲ್ಲ. ನಮೋ ನಮಃ."

ಈ ತೆರದಲ್ಲಿ ದುಷ್ಟರಿಗೆಲ್ಲ ತಾನೇ ದಂಡಪಾತನೆಂದು ಭಾವಿಸಿ ಮುನಿದಣಿಯೆ ತನ್ನ ಭೈರವನ್ನು ತೀರಿಸಿಕೊಂಡ ಬಳಿಕ ತರಾತ್ಮಾಗಿ ಕರುಣಾಪರವಶನಾಗಿ ನ್ಯಲ್ಪ ಕಾಲ ತಾನು ನಡೆದ ನಡೆಯಿಗೆ ತನ್ನೊಳಗೆ ತಾನೇ ಅನುತಾಪಪಟ್ಟು, ತಾನು ಪಟ್ಟ ಪಾಡೆಲ್ಲವನ್ನೂ ಪರಿಭಾವಿಸಿ, ದುಷ್ಟರನ್ನೂ ಕ್ರೂರಕರ್ಮಗಳನ್ನೂ ನಿಗ್ರಹಿಸುವುದು ಭಗವಂತನಿಗೆ ಅಭಿಮತವಾದ ಕಾರ್ಯವೆಂದು ಸಮಾಧಾನವನ್ನು ತಂದುಕೊಂಡು, ತಾನು ನೆರೆಹೊರೆಯಲ್ಲಿದ್ದಾಗ ತನ್ನಂತೆಯೇ ಬಂಧುವಾಗಿದ್ದ ಬಿಚ್ಚಿ ಸನ್ಯಾಸಿಯಿಂದ ತನಗೆ ದೊರೆತ ಧನದಿಂದ ಕೋಟೀಶ್ವರನೆನಿಸಿಕೊಂಡು, ದೇವರು ಕೊಟ್ಟ ಆಯುರಾರೋಗ್ಯೈಶ್ವರ್ಯಗಳು ಪರೋಪಕಾರಾರ್ಥವಾಗಿಯೇ ಎಂದರಿತು, ದೈವಯೋಗದಿಂದ ಲಭಿಸಿದ ಧನವನ್ನು ತನ್ನ ಪ್ರೀತಿವಿಶ್ವಾಸಕ್ಕೆ ಪಾತ್ರವಾದವರಿಗೂ ದೀನರಿಗೂ ಅನಾಥರಿಗೂ ದಾನಧರ್ಮಗಳನ್ನು ಮಾಡಿ ವಿನಿಯೋಗಿಸಿದನು. ದುಷ್ಟ ನಿಗ್ರಹವು ಧರ್ಮಸಮ್ಮತನಾದ ಕಾರ್ಯ, ಪರನಿತ್ಯಾಪಹಾರದಿಂದ ಗಳಿಸಿದ ಐಶ್ವ

ರ್ಯವು ಕೈ ಹತ್ತದು, ಎಂದು ಅಲ್ಲಲ್ಲಿ ನುಡಿದು, ಕಡೆಗೆ, ಭಗವಂತನು ಅನುಗ್ರಹಿಸಿ ಮನುಷ್ಯನ ಭವಿಷ್ಯತ್ತನ್ನು ತಿಳಿಸುವವರೆಗೂ ಮನುಷ್ಯನು ಧೈರ್ಯಗಿಡದೆ ಶುಭೋದರ್ಕವನ್ನು ನಿರೀಕ್ಷಿಸುತ್ತಿರುವುದು ಪ್ರಾಜ್ಞರ ಲಕ್ಷಣವೆಂದು ಕಥಾನಾಯಕನು ಕಾರ್ಯಾವಸಾನದಲ್ಲಿ ತನ್ನ ಅನುಭವಸಾರವನ್ನು ಸೂಚಿಸಿರುವನು.

ಗ್ರಂಥಕರ್ತನು ಮೂಲಗ್ರಂಥದಲ್ಲಿ ತೋರಿರುವ ಮನುಷ್ಯಪ್ರಕೃತಿಯ ತಲ ಸ್ಪರ್ಶವಾದ ಜ್ಞಾನ, ಲೋಕಾನುಭವ, ಕಲ್ಪನಾ ಶಕ್ತಿಗಳಿಗೆ ವಿಸ್ಮಯಬಟ್ಟು ಶ್ರೀಮತ್ ಶ್ರೀನಿವಾಸಾಚಾರ್ಯರು ಕೈಕೊಂಡ ಈ ಪರಿವರ್ತನಕಾರ್ಯವು ಮುಗಿದ ಬಳಿಕ, ಪ್ರೀತಿಪೂರ್ವಕವಾಗಿ ಗ್ರಂಥವನ್ನು ಒಂದು ಸಾರಿ ನನಗೆ ಓದಿ ಹೇಳಿದುದನ್ನು ಸಾವಧಾನವಾಗಿ ಕೇಳಿ ಸಂತುಷ್ಟನಾದೆ. ಕಥಾನಂವಿಧಾನವು ಕಿಡದಂತೆಯೂ ದೇಶಾಂತರದವರಾದ ಪಾತ್ರಗಳ ನಾಮಧೇಯ ವೇಷಭಾಷಾದಿಗಳನ್ನು ಅನ್ಮದ್ದೇಶೀಯರ ರುಚಿಗೆ ತಕ್ಕಂತೆ ಮಾರಿಸಿದರೂ ಗ್ರಂಥಕರ್ತನ ಮುಖ್ಯಾಶಯಕ್ಕೆ ಭಂಗಬಾರದಂತೆಯೂ, ಗ್ರಂಥಬಾಹುಳ್ಯಭಯದಿಂದ ಅಲ್ಲಲ್ಲಿ ಕೆಲವು ಅಂಶಗಳನ್ನು ಬಿಟ್ಟರೂ ವರ್ಣನಾಪ್ರವಾಹವು ತೊಡಕಾಗದಂತೆಯೂ ಲಲಿತವಾದ ಪದಗಳನ್ನು ಪ್ರಯೋಗಿಸಿ ಗಂಭೀರವಾದ ಶೈಲಿಯಲ್ಲಿ ಈ ಗ್ರಂಥವನ್ನು ಕನ್ನಡಿಸಿರುವುದು ಅಲ್ಪ ಗೌರವವಾದ ಕಾರ್ಯವಲ್ಲ.

ವಿದ್ಯಾವಿನಯಸಂಪನ್ನರಾದ ಶ್ರೀಮತ್ ಶ್ರೀನಿವಾಸಾಚಾರ್ಯರ ಪ್ರಥಮ ಪರಿಚಯವು ನನಗೆ ಹತ್ತಿರ ಹತ್ತಿರ ಮೂವತ್ತು ವರ್ಷಗಳ ಕೆಳಗೆ ಆಯಿತು. ತರುವಾಯ ಇಬ್ಬರೂ ಮಲ್ಲೇಶ್ವರದ ನಿವಾಸಿಗಳಾದ ಮೇಲೆ, ನಾನು ಅವರ ಸರಳಸ್ವಭಾವವನ್ನೂ ಸಚ್ಚರಿತ್ರವನ್ನೂ ಅರಿತು, ಅವರ ಸತ್ಸಂಗವನ್ನು ಬಯಸಿ ಪ್ರಾಯಶಃ ದಿನವೂ ಅವರ ಜತೆಯಲ್ಲಿರುತ್ತಿದ್ದೆ. ಈ ಮಿತ್ರವರ್ಯರು ಅಮರಶಾಂತವೂ ಜ್ಞಾನಾರ್ಜನೆಯಲ್ಲಿ ಆಸಕ್ತರಾಗಿ, ರಾಜ್ಯಾಂಗದಲ್ಲಿದ್ದಾಗಲೂ ಕಾರ್ಯಸ್ಥಾನದಿಂದ ಮನೆಗೆ ಬರುತ್ತಲೆ ಗ್ರಂಥಕಾಲಕ್ಷೇಪವನ್ನು ಮಾಡುತ್ತಿದ್ದರು. ಇವರು ವಿಶೇಷವಾಗಿ ಭಗವದ್ಭಕ್ತಿವಿಷಯಕವಾದ ಗ್ರಂಥಗಳನ್ನು ಓದುತ್ತಾ ಅಪರ ವಯಸ್ಸಿನಲ್ಲಿಯೂ ಸ್ತೋತ್ರಗಳನ್ನು ಕಂಠಸ್ಥವಾಗಿ ಕಲಿಯುತ್ತಿದ್ದರು. ಇವರು ಮೂವತ್ತುನಾಲ್ಕು ವರ್ಷಗಳ ಕಾಲ ರಾಜಸೇವೆಯನ್ನು ಮಾಡಿ ಹೆಸರುಗೊಂಡು, ಅಲ್ಲಿಂದ ವಿಶ್ರಾಂತರಾಗಿ ಭಾಷಾಸೇವೆಯನ್ನು ಮಾಡಲೆಣಿಸಿ ಆಂಗ್ಲೇಯಭಾಷೆಯಲ್ಲಿ ೧೧೦೦ ಪುಟಗಳುಳ್ಳ ದೊಡ್ಡ ಪುಸ್ತಕವನ್ನು ಸಾವಧಾನವಾಗಿ ಓದಿ ಅದರೊಳಗಿನ

ಸಾರವತ್ತಾದ ಅಂಶಗಳನ್ನು ಗ್ರಹಣಮಾಡಿ ಈ ನವನ್ಯಾಸವನ್ನು ಒಂದು ಸ್ವತಂತ್ರ ಗ್ರಂಥದಂತೆಯೇ ಬರೆದಿರುವರು. ಇವರು ತಮ್ಮ ಅಪರವಯಸ್ಸಿನಲ್ಲಿ ವಯಸ್ಸನ್ನನು ಸರಿಸಿ ಬಂದ ದೌರ್ಬಲ್ಯವನ್ನು ಲೆಕ್ಕಿಸದೆ ಪ್ರತಿದಿನವೂ ಬೇಸರದೆ ಕೆಲಸಮಾಡಿ ಒಂದು ವರ್ಷದೊಳಗೆ ಗ್ರಂಥವನ್ನು ಪೂರೈಸಿ ಕೃತಾರ್ಥರಾದರು. ಇವರು ಪ್ರಕೃತಗ್ರಂಥದ ವಿಷಯದಲ್ಲಿ ತೋರಿದ ಶ್ರಮಸಹಿಷ್ಣುತೆ, ಉತ್ಸಾಹ ಸಾಹಸ ಗಳು ಕ್ಷಾಯಪಟುಗಳಾದ ತರುಣರಿಗೂ ಗೌರವಾಸ್ಪದವಾದುವೆಂದಲ್ಲಿ ಅತ್ಯುಕ್ತಿ ಯಾಗಲಾರದು. ಇವರು ಇನ್ನೂ ಒಂದೆರಡು ಗ್ರಂಥಗಳನ್ನು ಪರಿವರ್ತಿಸ ಬೇಕೆಂದಿದ್ದರು. ಒಂದು ಅರೆಗೆಲಸವಾಗಿ ನಿಂತಿರುವುದು.

ಈ ಮಹನೀಯರ ಕಾರ್ಯೋತ್ಸಾಹದಿಂದ ಉತ್ತೇಜಿತರಾಗಿ ವಿದ್ಯಾವಂತರೂ ವರ್ಧಿಷ್ಣುಗಳೂ ಆದ ತರುಣರು ದೇಶಭಾಷೆಯ ಸೇವೆಯಲ್ಲಿ ದೀಕ್ಷೆಗೊಳ್ಳುವ ರಾದರೆ ದೇಶಕ್ಕೆ ಮಹೋಪಕಾರವಾಗುವುದರಲ್ಲಿ ಸಂದೇಹವಿಲ್ಲ. ಕನ್ನಡನಾಡಿನ ಭಾಷಾಭಿಮಾನಿಗಳೆಲ್ಲರೂ ಈ ಉದ್ಗ್ರಂಥವನ್ನು ಆಮೂಲಾಗ್ರವಾಗಿ ಓದಿ ಇದರ ರಸವನ್ನು ಆಸ್ವಾದನೆಮಾಡಿದಲ್ಲಿ ಪರಿವರ್ತನಕಾರರ ಶ್ರಮವು ಸಫಲವಾಗುವುದೆಂದು ಭಾವಿಸುತ್ತೇನೆ.

ಮಲ್ಲೇಶ್ವರ,
೩೦–೪–೧೯೨೩

ಇತಿ
ಚ. ವಾಸುದೇವಯ್ಯ.

॥ ಶ್ರೀಃ ॥

ಪ್ರಚಾರಕರ ವಿಜ್ಞಾಪನೆ

ಈ ನವನ್ಯಾಸದ ಗ್ರಂಥಕರ್ತರು ಗ್ರಂಥವನ್ನು ಬರೆಯಲು ಪ್ರಾರಂಭಿಸಿದ ಒಂದು ವರ್ಷದೊಳಗೆ ಇದನ್ನು ಪೂರ್ತಿಮಾಡಿದರು. ಇದು ೧೯೧೫ ರಲ್ಲಿಯೇ ಅಚ್ಚಾಗಲು ಸಿದ್ಧವಾಗಿದ್ದಿತು. ಆದರೆ ಯೂರೋಪ್ ಖಂಡದಲ್ಲಿನ ಮಹಾಯುದ್ಧದ ದೆಸೆಯಿಂದ ನಮ್ಮ ದೇಶದಲ್ಲಿಯೂ ಆಗ ಕಾಗದ ಮೊದಲಾದ ಪದಾರ್ಥಗಳ ಬೆಲೆಯು ಬಹಳ ಅಧಿಕವಾಗಿರಲು, ಪುಸ್ತಕದ ಬೆಲೆಯು ಹೆಚ್ಚಾಗಿ ಸಾಧಾರಣರಿಗೂ ದೊರೆಯುವಂತೆ ಇರಲಾರದೆಂಬ ಭೀತಿಯಿಂದಲೂ, ಇತರಕಾರಣಗಳಿಂದಲೂ ಇದನ್ನು ಅಚ್ಚು ಹಾಕಿಸಲಿಲ್ಲ. ಹೋದ ವರುಷವೇ ಇದು ಅಚ್ಚಾಗುವುದಕ್ಕೆ ಮೊದಲಾಯಿತು. ಗ್ರಂಥಕರ್ತರೂ ಕರ್ಣಾಟಕಪಾಠಕರಿಗೆ ಗ್ರಂಥವನ್ನು ಶೀಘ್ರವಾಗಿ ಸಮರ್ಪಿಸಿಬಿಡಬಹುದೆಂಬ ಉತ್ಸಾಹದಲ್ಲಿದ್ದರು. ಅವರು ಹೀಗೆ ಕೃತಕಾರ್ಯರಾಗಿ ಸಂತೋಷಪಡುವುದನ್ನು ಕಂಡು ಆನಂದಿಸುವ ಭಾಗ್ಯವು ಅವರ ಮಕ್ಕಳಾದ ನಮಗೆ ಲಭಿಸಲಿಲ್ಲ. ಸುಮಾರು ೩೨ ಪುಟಗಳ ವರೆಗೆ ಅಚ್ಚಾದಾಗ ಅವರು ಪರಂಧಾಮವನ್ನೈದಿದರು.

ಕರ್ಣಾಟದೇಶಬಾಂಧವರೂ ಭಾಷಾಭಿಮಾನಿಗಳೂ ಈ ಗ್ರಂಥವನ್ನು ಆದರದಿಂದ ಸ್ವೀಕರಿಸಿದರೆ ನಮ್ಮ ತಂದೆಗಳವರ ಶ್ರಮವು ಸಾರ್ಥಕವಾಯಿತೆಂದು ಭಾವಿಸುವೆವಲ್ಲದೆ, ಇದು ಅಚ್ಚಾದುದನ್ನು ಅವರು ಕಣ್ಣಾರೆ ಕಂಡು ಸಂತೋಷಪಡಲಿಲ್ಲವಲ್ಲವೆಂಬ ನಮ್ಮ ದುಃಖವು ಇದರಿಂದ ಸ್ವಲ್ಪಮಾತ್ರ ಶಮನವಾಗಬಹುದೆಂದು ಹಾರೈಸುತ್ತೇವೆ.

ಈ ಪುಸ್ತಕವು ಅಚ್ಚಾಗುತ್ತಿದ್ದಾಗ ಪರಿಶೋಧಿಸಿ, ಮುದ್ರಣದ ಸಕಲಭಾರವನ್ನೂ ಪ್ರೀತಿಯಿಂದ ವಹಿಸಿದ ಶ್ರೀಮಾನ್ ಎಸ್. ಜಿ. ಗೋವಿಂದರಾಜಯ್ಯಂಗಾರ್ಯರ ಮತ್ತು ಶ್ರೀಮಾನ್ ಎಂ. ಎ. ನರಸಿಂಹಾಚಾರ್ಯರ ಮಹೋಪಕಾರವು ಚಿರಸ್ಮರಣೀಯವಾಗಿದೆ. ಗ್ರಂಥವನ್ನು ಅತಿಶೀಘ್ರದಲ್ಲಿಯೇ ಅಂದವಾಗಿ ಅಚ್ಚು ಹಾಕಿಸಿಕೊಟ್ಟ ಗುರುವಿಲಾಸಮುದ್ರಾಲಯಾಧಿಕಾರಿಗಳಿಗೆ ನಾವು ಬಹುಕೃತಜ್ಞರಾಗಿರುತ್ತೇವೆ.

ಇತಿ

ಪ್ರಚಾರಕರು

೧೮-೫-೧೯೨೩.

ಗ್ರಂಥಕರ್ತರ ಅವತಾರಿಕೆ

ಫ್ರೆಂಚ್ ಗ್ರಂಥಕರ್ತರಲ್ಲಿ ಅಲೆಗ್ಸಾಂಡರ್ ಡೂಮಾ ಎಂಬ ಮಹನೀಯನು ಬಹು ಪ್ರಸಿದ್ಧನು. ಅವನು ಬರೆದಿರತಕ್ಕ ನವನ್ಯಾಸಗಳನ್ನೂ ನಾಟಕಗಳನ್ನೂ ಇನ್ನೂ ಇತರ ಗ್ರಂಥಗಳನ್ನೂ ಇಪ್ಪೆಂದು ಹೇಳಲಾಗದು. ಅವುಗಳಲ್ಲೆಲ್ಲಾ ನೀತಿಬೋಧಕವಾಗಿಯೂ ಲೋಕಾನುಭವರಮ್ಯವಾಗಿಯೂ ಆಶ್ಚರ್ಯಕರವಾದ ಕಥಾಸಂದರ್ಭವುಳ್ಳದಾಗಿಯೂ, ಪಂಡಿತಪಾಮರರಂಜಕವಾಗಿಯೂ ಇರುವ "ದಿ ಕೌಂಟ್ ಆಫ್ ಮಾಂಟ್ ಕ್ರಿಸ್ಟೋ" ಎಂಬ ನವನ್ಯಾಸವು ಜಗತ್ಪ್ರಸಿದ್ಧವಾಗಿದೆ. ಅದನ್ನು ಯೂರೋಪ್ ಖಂಡದ ಸಕಲ ದೇಶೀಯರೂ ತಮ್ಮ ತಮ್ಮ ದೇಶಭಾಷೆಗಳಲ್ಲಿ ಬರೆದುಕೊಂಡಿದ್ದಾರೆ. ನಮ್ಮ ಕರ್ನಾಟಕ ದೇಶೀಯರಿಗೂ ಆ ಪ್ರಸಿದ್ಧಗ್ರಂಥದ ಸ್ವಾರಸ್ಯವನ್ನು ತೋರಿಸಬೇಕೆಂಬ ಬುದ್ಧಿಯಿಂದ ನಾನು ಈ ಮಹಾಕಾರ್ಯವನ್ನು ಕೈಕೊಂಡು ಇಂಗ್ಲೀಷು ಭಾಷೆಯ ಪುಸ್ತಕದಿಂದ ಕನ್ನಡಕ್ಕೆ ಪರಿವರ್ತನೆ ಮಾಡಿದೆನು.

ಮೂಲಗ್ರಂಥದಲ್ಲಿ ಸಹಜವಾಗಿ ಫ್ರೆಂಚರ ಆಚಾರವ್ಯವಹಾರಗಳೂ ಯೂರೋಪ್ ಖಂಡದ ಹಲವು ಕಡೆಗಳ ವರ್ಣನೆಗಳೂ ವಿಶೇಷವಾಗಿ ತುಂಬಿಹೋಗಿವೆ. ನಮ್ಮ ದೇಶ ಬಾಂಧವರಿಗೆ ಅವುಗಳೆಲ್ಲಾ ಮನಸ್ಸಿಗೆ ಪ್ರಾಯಃ ಹಿಡಿಯಲಾರವೆಂದು ಭಾವಿಸಿ ಕಥಾಸ್ವಾರಸ್ಯಕ್ಕೆ ಸ್ವಲ್ಪವೂ ಲೋಪಬಾರದಂತೆ ನಮ್ಮ ದೇಶೀಯರ ನಡೆವಳಿಗೆ ಅನುಗುಣವಾಗುವಂತೆ ಸ್ಥಳಗಳನ್ನೂ ಪಾತ್ರಗಳನ್ನೂ ಯೋಜಿಸಿಕೊಂಡು "ರಾಜಾಮಲಯಸಿಂಹ" ಎಂಬ ಹೆಸರನ್ನಿಟ್ಟು ಈ ಗ್ರಂಥವನ್ನು ರಚಿಸಿದ್ದೇನೆ.

ಮೂಲ ಗ್ರಂಥದಲ್ಲಿ ಇಲ್ಲದಿರುವ ಕಥೋಪಸಂಹಾರವೆಂಬ ಒಂದು ಹೊಸ ಅಧ್ಯಾಯವನ್ನು ಬರೆದು ಸೇರಿಸಿರುತ್ತೇನೆ. ಇದರಲ್ಲಿ ಆರ್ಯರ ಸಂಪ್ರದಾಯಾನುಸಾರವಾಗಿ ಕಥೆಯು ಮಂಗಳಾಂತವಾಗಿರಬೇಕೆಂದು ಬಯಸಿ ಆದಕ್ಕೆ ತಕ್ಕಂತೆ ಸಂವಿಧಾನವನ್ನು ಏರ್ಪಡಿಸಿ ಮೂಲಗ್ರಂಥಕಾರನ ಆಶಯಕ್ಕೆ ಲೇಶವೂ ಕುಂದು ಬಾರದಂತೆ ಕಥೆಯನ್ನು ಮುಗಿಸಿರುತ್ತೇನೆ. ಇದು ಸಹೃದಯರಾದ ಪಾಠಕಮಹಾಶಯರಿಗೆ ಚಿತ್ತರಂಜಕವಾಗದಿರದೆಂದು ಭಾವಿಸಿದ್ದೇನೆ.

ಈ ಗ್ರಂಥವನ್ನು ಬರೆಯುವ ಕಾಲದಲ್ಲಿ ತಕ್ಕ ಪ್ರೋತ್ಸಾಹವನ್ನು ಕೊಟ್ಟು, ಆಮೇಲೆ ಅದನ್ನು ಆಮೂಲಾಗ್ರವಾಗಿ ಓದಿ, ತಪ್ಪುಗಳನ್ನು ತಿದ್ದಿ, ಅಲ್ಲಲ್ಲಿ ಕೆಲವು ಪದ್ಯಗಳನ್ನು ಸೇರಿಸಿಕೊಟ್ಟ ಮಹೋಪಕಾರಕ್ಕಾಗಿ 'ಪ್ರಿಂರೋಜವಿಜಯ' 'ತಾಮಸಪ್ರಭುಚರಿತೆ' ವೊದಲಾದ ಅನೇಕಗ್ರಂಥಕರ್ತರಾದ ಶ್ರೀಮಾನ್ ಎಸ್. ಜಿ. ಗೋವಿಂದರಾಜ್ಯೆಯಂಗಾರ್ಯರವರಿಗೆ ನಾನು ಬಹಳ ಕೃತಜ್ಞನಾಗಿದೇನೆ.

ಇದು ನನ್ನ ಪ್ರಥಮಪ್ರಯತ್ನವಾದುದರಿಂದ ಇದರಲ್ಲಿ ಹಲವು ತಪ್ಪುಗಳಿರಬಹುದು. ಉದಾರಹೃದಯರಾದ ಕನ್ನಡನಾಡಿನ ಪಾಠಕರೆಲ್ಲರೂ ಇದನ್ನು ಓದಿ ತಪ್ಪುಗಳನ್ನು ಗಣಿಸದೆ ಮೂಲಗ್ರಂಥದ ಆಶಯವನ್ನು ಲೇಶಮಾತ್ರವಾದರೂ ಗ್ರಹಿಸಿದರೆ ಇದಕ್ಕಾಗಿ ನಾನು ಪಟ್ಟ ಶ್ರಮವು ವ್ಯರ್ಥವಾಗಲಿಲ್ಲವೆಂದು ಭಾವಿಸುವೆನು.

೨೨–೪–೧೯೧೫.

ಎಂ. ಎ. ಶ್ರೀನಿವಾಸಾಚಾರ್ಯ.

ಮೊದಲನೆಯ ಭಾಗದ ಸೂಚೀಪತ್ರ

ಅಧ್ಯಾಯ.			ಪುಟ.
1	ಆಗಮನ	....	೧
2	ತಂದೆಯೂ ಮಗನೂ	....	೧೦
3	ಊರ ಹೊರಗಣ ಪಾಳೆಯ	....	೨೦
4.	ಒಳಸಂಚು	....	೩೦
5.	ಮದುವೆಯ ಔತಣ	....	೩೭
6.	ನ್ಯಾಯಾಧಿಪತಿಯು	....	೪೭
7	ವಿಚಾರಣೆಯು	....	೫೪
8.	ಚಾಲದುರ್ಗ	....	೬೨
9.	ರಾಜನ ಅಂತರ್ಗೃಹ	....	೭೫
10.	ಏಲಾದ್ವೀಪದ ರಾಕ್ಷಸನು	....	೮೫
11.	ತಂದೆಯೂ ಮಗನೂ	....	೯೧
12.	ನೂರು ದಿನದ ಬಾಳು	....	೯೭
13.	ಇಬ್ಬರು ಬಂದಿವಾನರು	....	೧೦೩
14.	ಇಂದ್ರಪ್ರಸ್ಥದ ಘನವಿಧ್ವಾಂಸ	....	೧೧೪
15.	ಸನ್ಯಾಸಿಯ ಕತ್ತಲೆಯ ಜಲ	....	೧೨೮
16	ಸಿಕ್ಕೋಪ	....	೧೪೩
17.	ಚಾಲದುರ್ಗದ ಸ್ಮಶಾನವೂ ಕಡಲು ಕಳ್ಳರ ಹಡಗೂ		೧೫೮
18.	ಮಲಯದ್ವೀಪ	....	೧೬೯
19	ಅಜ್ಞಾತನಾಮಕನು	....	೧೮೦
20.	ಮನೋರಂಜಿನೀ	....	೧೯೩
21.	ಧನಕೋಟಿಯ ವ್ಯಾಪಾರ	....	೨೦೯
22.	ಮಾರ್ಗಶಿರ ಶುದ್ಧ ಪಂಚಮೀ	....	೨೨೧

ಅಧ್ಯಾಯ			ಪುಟ.
23.	ನಾವಿಕ ಸೈಂಧವ	....	೨೩೦
24.	ಪ್ರಬೋಧನ	....	೨೪೯
25.	ಉತ್ಸವ	....	೨೬೪
26.	ಕಳ್ಳರ ಗುಂಪು	....	೨೭೭
27.	ಒಪ್ಪಂದ	....	೨೯೦
28.	ಫಲಾಹಾರ	....	೩೦೪
29.	ಸಂದರ್ಶನ	....	೩೧೪
30.	ಮುಯ್ಯಿಗೆ ಮುಯ್ಯಿ	....	೩೨೩
31.	ದುರಾಶೆಯ ಫಲ	....	೩೪೭
32.	ಹುಂಡಿಯ ಬೆರಗು	....	೩೫೦
33.	ಅರಬ್ಬಿಯ ಕುದುರೆಗಳು	....	೩೫೮
34.	ದಾರ್ಶನಿಕ ಶಾಸ್ತ್ರ	....	೩೬೯
35.	ಅಪೂರ್ವಸಂತೋಷ	....	೩೭೮
36.	ಪ್ರೇಮಭಾವ	....	೩೮೫
37.	ಔಷವೈದ್ಯ	....	೩೯೪
38.	ನಾಟಕಶಾಲೆ	....	೪೦೩

॥ ಶ್ರೀಃ ॥

ರಾಜಾಮಲಯಸಿಂಹ

ಒಂದನೆಯ ಅಧ್ಯಾಯ

ಆಗಮನ

ಸುಮಾರು ಮುನ್ನೂರು ವರ್ಷಗಳ ಹಿಂದೆ ಅಮರದೇಶವೆಂದೊಂದು ದೊಡ್ಡ ದೇಶ ವಿದ್ದಿತು. ಅದರ ಮುಖ್ಯ ಪಟ್ಟಣವಾದ ಅಮರಪುರವೆಂಬುದು ಅತಿಸುಂದರವಾಗಿಯೂ ರಮಣೀಯವಾಗಿಯೂ ಇದ್ದಿತು. ಆ ದೇಶದಲ್ಲಿ ಮಲಯಪಟ್ಟಣವೆಂಬುದು ಬಂದರು ದೊಡ್ಡ ವ್ಯಾಪಾರಸ್ಥಳವು; ಅದು ಸಮುದ್ರತೀರದಲ್ಲಿದ್ದುದರಿಂದ ಅಲ್ಲಿಯ ವ್ಯಾಪಾರವು ವಿಶೇಷವಾಗಿತ್ತು. ಒಂದು ದಿನ ಜಯಲಕ್ಷ್ಮಿಯೆಂಬೊಂದು ಹಡಗು ಆ ಪಟ್ಟಣದ ರೇವಿಗೆ ಬಂದು ನಿಂತಿತು. ಹಡಗು ಆ ರೇವಿಗೆ ಬರುವುದೆಂದರೆ ಯಾವಾಗಲೂ ಆ ಊರಿನವರಿಗೆ ಬಹು ಸಂಭ್ರಮ; ಅದರಲ್ಲಿಯೂ ಆ ಊರಿನಲ್ಲಿಯೇ ಕಟ್ಟಲ್ಪಟ್ಟಿದ್ದ ಈ ಜಯಲಕ್ಷ್ಮಿಯ ಆಗಮನವೆಂದರೆ ಅವರಿಗೆ ಮತ್ತಷ್ಟು ಸಂಭ್ರಮ. ರೇವಿನ ಸುತ್ತಲೂ ನಿಮಿಷಮಾತ್ರದಲ್ಲಿ ಜನಗಳು ಗುಂಪುಸೇರಿ, ಹೋ! ಜಯಲಕ್ಷ್ಮಿ ಬಂದಿತು, ಜಯಲಕ್ಷ್ಮಿಯು ಬಂದಿತು, ಎಂದು ಕೋಲಾಹಲ ಮಾಡುತ್ತಿದ್ದರು. ಆ ಗುಂಪಿನಲ್ಲಿ ಒಬ್ಬನು ದಡವನ್ನು ಸೇರಬೇಕೆಂದು ಅತ್ಯಾತುರದಿಂದ ಜನಗಳ ಮಧ್ಯೆ ನುಗ್ಗುತ್ತಿದ್ದನು. ಅವನನ್ನು ಕಂಡೊಡನೆಯೆ ಜನಗಳು ಯಜಮಾನ ಧನಕೋಟಿ, ಯಜಮಾನ ಧನಕೋಟಿ, ಎಂದು ಮರ್ಯಾದೆಯಿಂದ ದಾರಿಯನ್ನು ಬಿಟ್ಟರು. ಅವನು ದಡವನ್ನು ಸೇರಿ ಅಲ್ಲಿದ್ದ ಹರಿಗೋಲುಗಳಲ್ಲಿ ಒಂದನ್ನು ಹತ್ತಿ ಹಡಗು ಸ್ವಸ್ಥಾನವನ್ನು ಸೇರುವುದಕ್ಕೆ ಸರಿಯಾಗಿ ತಾನೂ ಅದರ ಪಕ್ಕವನ್ನು ಸೇರಿದನು. ಅವನನ್ನು ಕಂಡೊಡನೆಯೇ ಹಡಗಿನಲ್ಲಿ ಮುಖ್ಯಾಧಿಪತಿಯಾಗಿದ್ದ ಒಬ್ಬ ತರುಣನು ಇದಿರುಗೊಂಡು ಮರ್ಯಾದೆಮಾಡಲೋಸುಗ ಹಡಗಿನ ಮುಂದುಗಡೆಗೆ ಒಂದನು.

ಆ ತರುಣನು ಬಹುಸುಂದರನಾಗಿಯೂ ಆಜಾನುಬಾಹುವಾಗಿಯೂ ಇದ್ದನು. ಅವನಿಗೆ ಸುಮಾರು ಹತ್ತೊಂಭತ್ತು ವಯಸ್ಸು. ಅವನ ಮುಖದ ಶಾಂತಿಯನ್ನು

ಅದ್ಭುತಶಕ್ತಿಯನ್ನೂ ಸೂಚಿಸುತ್ತಲಿದ್ದಿತು. ಅವನನ್ನು ನೋಡಿದರೆ ಸಮುದ್ರದಲ್ಲಿ ಹುಟ್ಟಿ ಬಳೆದು ಸಮುದ್ರವೆಂದರೆ ಲಕ್ಷ್ಯವಿಲ್ಲದವನಂತೆ ತೋರುತಲಿದ್ದಿತು. ಅವನನ್ನು ನೋಡಿದ ಕೂಡಲೇ ಹರಿಗೋಲಿನಲ್ಲಿದ್ದ ಯಜಮಾನನು, ಏನಯ್ಯ ಧರ್ಮದೇವ! ನೀನು ಸೌಖ್ಯವಾಗಿದ್ದೀಯಾ? ಇದೇನು ಹಡಗು ವ್ಯಸನದ ಚಿಹ್ನೆಗಳನ್ನು ಸೂಚಿಸುತ್ತಿದೆ? ಎಂದು ಕೇಳಿದನು. ಅದಕ್ಕೆ ಸ್ವಾಮಿಾ, ದಾರಿಯಲ್ಲಿ ನಮಗೆ ಒಂದು ದೊಡ್ಡ ವಿಪತ್ತು ಉಂಟಾಯಿತು; ನಮ್ಮ ನೌಕಾಧಿಪತಿಯು ಕಾಲನಾದನು; ಆದರೆ ಹಡಗಿನ ಸರಕುಗಳೆಲ್ಲವೂ ಭದ್ರವಾಗಿವೆ ಎಂದು ಹೇಳಿ ಜಯಲಕ್ಷ್ಮಿಯ ಪಟಗಳನ್ನು ಇಳಿಸಿರಿ, ಲಂಗರನ್ನು ಕೆಳಕ್ಕೆ ಬಿಡಿರಿ ಎಂದು ನಾವಿಕರಿಗೆ ಅಪ್ಪಣೆ ಮಾಡಿದನು.

ಈ ವಿಪತ್ತು ಹೇಗೆ ಸಂಭವಿಸಿತೆಂದು ಯಜಮಾನನು ಕೇಳಲು, ತರುಣನು ಸ್ವಾಮಿಾ, ಇದು ಬಹುಆಕಸ್ಮಿಕವು. ಮಾತನಾಡುತ್ತಿದ್ದ ಹಾಗೆಯೇ ನೌಕಾಧಿಪನಿಗೆ ಜ್ವರಬಂದು ಪ್ರಜ್ಞೆತಪ್ಪಿತು. ಔಷಧಿಗಳನ್ನು ಕೊಡಲು, ಮೂರು ದಿವಸಗಳ ಮೇಲೆ ಸ್ವಲ್ಪ ಜ್ಞಾನವು ಬಂದಿತು; ಆಗವನು ತಾನು ಹೇಳಬೇಕಾದುದನ್ನೆಲ್ಲಾ ಹೇಳಿ ಪ್ರಾಣವನ್ನು ಬಿಟ್ಟನು. ಅವನ ಉತ್ತರಕ್ರಿಯೆಗಳನ್ನೆಲ್ಲಾ ಕ್ರಮವಾಗಿ ನಡಿಸಿಬಿಟ್ಟೆವು. ಅವನ ಸ್ವಂತ ಸರಕುಗಳನ್ನೆಲ್ಲಾ ಅವನ ಕುಟುಂಬಕ್ಕೆ ಕೊಡಬೇಕೆಂದು ಜೋಪಾನವಾಗಿ ತಂದಿದೇನೆ. ನಮ್ಮ ಶತ್ರುಗಳ ಸಂಗಡ ಹತ್ತು ವರುಷಗಳು ಯುದ್ಧಮಾಡಿ ಹೆಸರ ಪಡೆದು ಕೊನೆಗೆ ನೆಮ್ಮದಿಯಾಗಿ ಪ್ರಾಣವನ್ನು ಬಿಡುವುದು ಪುಣ್ಯವೇ ಸರಿ ಎಂದು ಹೇಳಿ ಧರ್ಮದೇವನು ಕಣ್ಣಿನಲ್ಲಿ ನೀರ ತುಂಬಿಕೊಂಡನ..

ಅದನ್ನು ನೋಡಿ ಧನಕೋಟಿಯು ಅಪ್ಪಾ! ನಾವೆಲ್ಲರೂ ಮರ್ತ್ಯರು, ಎಂದಿದ್ದರೂ ಸಾಯಲೇಬೇಕು; ಮುದುಕರು ಸಾಯದಿದ್ದರೆ ಚಿಕ್ಕವರು ಅಭಿವೃದ್ಧಿಗೆ ಬರುವುದು ಹೇಗೆ? ಹಡಗಿನ ಸರಕುಗಳೆಲ್ಲವೂ ಸರಿಯಾಗಿವೆ ಎಂದು ಕೇಳಿ ಬಹಳ ಸಂತೋಷ. ನಿನ್ನ ವಿಷಯದಲ್ಲಿ—

ಸ್ವಾಮಿ! ಎಲ್ಲವೂ ಸರಿಯಾಗಿದೆ; ಮೇಲಕ್ಕೆ ಬಿಜಯಮಾಡಿಸಿ ಪರಾಂಬರಿಸಬೇಕು ಎಂದು ಹಡಗಿನಿಂದ ಒಂದು ಹಗ್ಗವನ್ನು ಬಿಡಲು ತತ್ಕ್ಷಣವೇ ಧನಕೋಟಿಯು ಆ ಹಗ್ಗವನ್ನು ಹಿಡಿದು ಮೇಲಕ್ಕೆ ಹೋದನು. ಅವನು ಹತ್ತಿಹೋದ ರೀತಿಯನ್ನು ನೋಡಿದರೆ ಹೀಗೆ ಹತ್ತುವುದು ಅವನಿಗೆ ವಾಡಿಕೆಯಾಗಿದ್ದಿತೆಂದು ತೋರುತ್ತಲಿದ್ದಿತು.

ಧನಕೋಟಿಯು ಹಡಗಿನ ಮೇಲಕ್ಕೆ ಬಂದೊಡನೆಯೇ ಧರ್ಮದೇವನು ಅವನನ್ನು ನೋಡಿ ಸ್ವಾಮಿಾ! ಅಗೋ ನಿಮ್ಮ ಗುಮಾಸ್ತ ದುರ್ಮತಿಯು ತನ್ನ ಕೊಟ್ಟಡಿಯಿಂದ ಬರುತ್ತಿದಾನೆ; ತಮಗೆ ಬೇಕಾದ ಅಂಶಗಳನ್ನು ಅವನು ಸಮರ್ಪಕವಾಗಿ ತಿಳಿಸುವನು ಎಂದು ಹೇಳಿ ಮುಂದೆ ತಾನು ಮಾಡಬೇಕಾದ ಕೆಲಸವನ್ನು ಮಾಡಲು ಹೊರಟನು.

ದುರ್ಮತಿಗೆ ಸುಮಾರು ಇಪ್ಪತ್ತಾರು ವಯಸ್ಸು. ಅವನು ಯಜಮಾನನೊಡನೆ ಇಚ್ಛಕವನ್ನು ಹಾಡುತ್ತ ಜತೆಗಾರರಲ್ಲಿ ದುರಹಂಕಾರಿಯಾಗಿಯೂ ಭೃತ್ಯರಲ್ಲಿ ನಿರ್ದಯನಾಗಿಯೂ ದುಃಖದಾಯಕನಾಗಿಯೂ ಇರುತ್ತಿದ್ದುದರಿಂದ ದುರ್ಮತಿಯೆಂಬ ತನ್ನ ಹೆಸರನ್ನು ಸಾರ್ಥಕಮಾಡಿಕೊಂಡನು. ನಾವಿಕರೆಲ್ಲರೂ ಅವನ ಗುಣಗಳನ್ನು ಚೆನ್ನಾಗಿ ಬಲ್ಲರು. ಅವರು ಧರ್ಮದೇವನನ್ನು ಎಷ್ಟುಮಟ್ಟಿಗೆ ಪ್ರೀತಿಸುತ್ತಲಿದ್ದರೋ ಅಷ್ಟು ಮಟ್ಟಿಗೆ ದುರ್ಮತಿಯನ್ನು ದ್ವೇಷಿಸುತ್ತಲಿದ್ದರು.

ಗುಮಾಸ್ತನಾದ ದುರ್ಮತಿಯು ಯಜಮಾನನ ಸಮೀಪಕ್ಕೆ ಬಂದು ಬಹು ನಮ್ರತೆಯಿಂದ ಸ್ವಾಮಿಾ! ನಮಗೆ ಒದಗಿದ ವಿಷಯ ತಮಗೆ ತಿಳಿದಿರಬಹುದು ಎನ್ನಲು, ಯಜಮಾನನು ಅಹುದು; ಆ ಸಮಾಚಾರವನ್ನು ಕೇಳಿ ಮನಸ್ಸಿಗೆ ಬಹಳ ವ್ಯಸನವುಂಟಾಯಿತು, ಆದರೆ ದೈವಯತ್ನಕ್ಕೆ ನಾನೇನು ಮಾಡಲಾದೀತು ಎಂದನು.

ಸ್ವಾಮಿಾ! ಮೃತಪಟ್ಟ ನೌಕಾಧಿಪತಿಯು ಧೈರ್ಯಶಾಲಿಯಾಗಿಯೂ ಅನುಭವ ಶಾಲಿಯಾಗಿಯೂ ಇದ್ದನು; ವಯಸ್ಸಾಗಿದ್ದುದರಿಂದ ಅವನ ಬುದ್ಧಿಯೂ ಅನುಭವವೂ ಹೆಚ್ಚಾಗಿದ್ದುವು.

ಬುದ್ಧಿಗೂ ಅನುಭವಕ್ಕೂ ವಯಸ್ಸೇ ಕಾರಣವಲ್ಲ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದಾಗಿರಬಹುದು. ನಮ್ಮ ಧರ್ಮದೇವನನ್ನು ನೋಡು ಎಂದು ಯಜಮಾನನು ಹೇಳಿದೊಡನೆಯೇ ದುರ್ಮತಿಯ ಮೋರೆಯು ಕಪ್ಪಾಗಿ ಮನದಲ್ಲಿ ಅಡಗಿದ್ದ ದ್ವೇಷವೂ ಅಸೂಯೆಯೂ ಹೊರಹೊಮ್ಮಿ ತೋರುತಿದ್ದುವು. ಆದರೆ ಅಲ್ಲಿದ್ದವರು ಆರೂ ಅವನ ಮುಖವನ್ನು ನೋಡಲಿಲ್ಲ. ಧರ್ಮದೇವನು ಚಟುವಟಿಕೆಯಿಂದ ಮಾಡಿಸುತ್ತಲಿರುವ ಕಾರ್ಯಗಳನ್ನು ಧನಕೋಟಿಯು ನೋಡುತ್ತಲಿದ್ದನು; ನಾವಿಕರೆಲ್ಲರೂ ತಮ್ಮ ತಮ್ಮ ಕೆಲಸಗಳಲ್ಲಿದ್ದರು; ಆ ಕೆಲಸಗಳನ್ನು ನಾವಿಕರು ಸರಿಯಾಗಿ ಮಾಡುವರೋ ಇಲ್ಲವೋ ಎಂದು ಧರ್ಮದೇವನು ನೋಡುತ್ತಲಿದ್ದನು. ದುರ್ಮತಿಯು ಕ್ಷಣ

ಮಾತ್ರದಲ್ಲಿಯೇ ತನ್ನ ದ್ವೇಷಾಸೂಯೆಗಳನ್ನು ಅಡಗಿಸಿಕೊಂಡು, ಅಹುದು ಮಹಾ ಸ್ವಾಮಿ! ಧರ್ಮದೇವನು ಬುದ್ಧಿಶಾಲಿ, ತುಂಬ ಅನುಭವವುಳ್ಳವನು, ಆದರೆ ಅವನು ಇನ್ನೂ ಸಣ್ಣವನು, ಜಂಭಗಾರ. ನೌಕಾಧಿಪನು ಸಾಯುವುದನ್ನೇ ಕಾದಿದ್ದು ಅವನು ಸತ್ತಕೂಡಲೇ ಇತರರೊಡನೆ ಆಲೋಚನೆಯನ್ನು ಕೂಡ ಮಾಡದೆ ತಾನೇ ಯಾಜಮಾನ್ಯವನ್ನು ವಹಿಸಿದುದಲ್ಲದೆ ಮಲಯಪಟ್ಟಣದ ದಾರಿಯನ್ನು ಬಿಟ್ಟು ಏಲಾದ್ವೀಪದ ಕಡೆಗೆ ತಿರುಗಿ ಆ ದ್ವೀಪದಲ್ಲಿ ಎರಡು ದಿನಸಗಳು ವ್ಯರ್ಥ ಕಾಲಕ್ಷೇಪಮಾಡಿದನು.

ಧರ್ಮದೇವನು ಹಡಗಿನ ಸಹಾಯಕಾಧಿಪತಿಯಾಗಿದ್ದುದರಿಂದ ನೌಕಾಧಿಪತಿಯು ಸತ್ತುಹೋದ ಮೇಲೆ ತಾನು ಹಡಗಿನ ಯಾಜಮಾನ್ಯವನ್ನು ವಹಿಸಿದುದೇನೋ ಸರಿ; ಆದರೆ ಅವನು ಏಲಾದ್ವೀಪಕ್ಕೆ ಏತಕ್ಕೆ ಹೋದನು? ಹಡಗು ತಿಫಿಲವಾಗಿದ್ದುದರಿಂದ ಅದನ್ನು ಸರಿಮಾಡಿಸಲು ಅಲ್ಲಿಗೆ ಹೋದನೋ? ಕಾರಣವಿಲ್ಲದೆ ಸುಮ್ಮನೆ ಅಲ್ಲಿಗೆ ಹೋಗಿದ್ದ ಪಕ್ಷದಲ್ಲಿ ಅವನು ಹಾಗೆ ಮಾಡಿದುದು ತಪ್ಪು.

ಸ್ವಾಮಿಾ, ಹಡಗು ಅವ ವಿಧದಲ್ಲಿಯೂ ಶೈಥಿಲ್ಯವನ್ನು ಹೊದ್ದಿರಲಿಲ್ಲ. ಆದರೂ ಏಲಾದ್ವೀಪಕ್ಕೆ ಹೋಗಿದ್ದನು.

ದುರ್ಮತಿಯು ಹೀಗೆಂದ ವೇಳೆಗೆ ಸರಿಯಾಗಿ ಧರ್ಮದೇವನು ತನ್ನ ಕೆಲಸಗಳನ್ನೆಲ್ಲಾ ಮುಗಿಸಿಕೊಂಡು ಇವರ ಸಮೀಪಕ್ಕೆ ಬರಲು, ದುರ್ಮತಿಯು ದೂರಕ್ಕೆ ಹೋದನು. ಧರ್ಮದೇವನನ್ನು ನೋಡಿ ಧನಕೋಟಿಯು ಅಯ್ಯಾ! ಇಲ್ಲಿ ಸ್ವಲ್ಪ ಬಾ, ನಿನ್ನೊಡನೆ ಒಂದು ಮಾತನಾಡಬೇಕು ಎನ್ನಲು, ಇಗೋ ಬಂದೆ ಎಂದು ಮರೆತಿದ್ದ ಅವುದೋ ಒಂದು ಕೆಲಸವನ್ನು ಮಾಡಲು ಬೇರೆಕಡೆಗೆ ಓಡಿಹೋದನು. ಅದನ್ನು ನೋಡುತಿದ್ದ ದುರ್ಮತಿಯು ಪುನಃ ಯಜಮಾನನ ಸಮೀಪಕ್ಕೆ ಬಂದು ಸ್ವಾಮಿ! ನಾನು ಅರಿಕೆ ಮಾಡಿದುದು ತಮಗೆ ಈಗ ಗೊತ್ತಾಯಿತಷ್ಟೆ! ತಾನು ಆವಾಗಲೇ ನೌಕಾಧಿಪನಾದೆನೆಂಬ ಅಹಂಕಾರವು ಇದರಿಂದಲೇ ಗೊತ್ತಾಗುವುದಿಲ್ಲವೆ ಎಂದನು. ಅದಕ್ಕಾಧನಕೋಟಿಯು ಅವನು ಏಕೆ ಜಯಲಕ್ಷ್ಮಿಯ ನೌಕಾಧಿಪತಿಯಾಗಬಾರದು ಎಂದು ಕೇಳಲು, ದುರ್ಮತಿಯು ಸ್ವಾಮಿಾ! ತಾವೂ ತಮ್ಮ ಪಾಲುದಾರರೂ ಸಮ್ಮತಿಸಿದರೆ ಅವಶ್ಯವಾಗಿ ಆಗಬಹುದು. ಅಲ್ಲಿಯವರೆಗೆ

ಅಲ್ಲಿಯವರೆಗೆ ತಾನೇ ಅವನೇಕೆ ಯಜಮಾನನಾಗಕೂಡದು? ಅವನು ಚಿಕ್ಕವ

ನಾಗಿದ್ದರೂ ಬುದ್ಧಿಶಾಲಿಯಾಗಿಯೂ ಸಮರ್ಥನಾಗಿಯೂ ಇದಾನೆ; ಅಂಥವನು ನೌಕಾಧಿಪತ್ಯಕ್ಕೆ ತಕ್ಕವನು ಎಂದು ಧನಕೋಟಿಯೆನ್ನಲು, ದುರ್ಮತಿಯ ಅಂತಃಕ್ಲೇಶವು ಹೆಚ್ಚಾಯಿತು. ಅಷ್ಟು ಹೊತ್ತಿಗೆ ಧರ್ಮದೇವನು ಕೆಲಸವನ್ನು ಮುಗಿಸಿಕೊಂಡು ಧನಕೋಟಿಯ ಬಳಿಗೆ ಓಡಿಬಂದು ಸ್ವಾಮಿ, ಏನು ಆಜ್ಞೆ ಎಂದನು. ದುರ್ಮತಿಯು ಮರಳಿ ಯಜಮಾನನ್ನು ಬಿಟ್ಟು ದೂರವಾಗಿ ಹೋಗಿ ನಿಂತನು.

ಧರ್ಮದೇವ, ನೀನು ಏಲಾದ್ವೀಪಕ್ಕೆ ಏತಕ್ಕೆ ಹೋದೆ? ಅಲ್ಲಿ ಏಕೆ ಎರಡು ದಿವಸಗಳು ನಿಂತೆ? ಎಂದು ಕೇಳಲು, ಅದಕ್ಕವನು ಮಹಾಸ್ವಾಮಿ, ನಮ್ಮ ನೌಕಾಧಿಪತಿಯು ನಾಯುವ ಕಾಲದಲ್ಲಿ ಬಂದು ಕಾಗದದ ಕಟ್ಟನ್ನು ನನ್ನ ಕೈಯಲ್ಲಿ ಕೊಟ್ಟು ಇದನ್ನು ಏಲಾದ್ವೀಪದಲ್ಲಿರುವ ಚಕ್ರವರ್ತಿಯ ಮಂತ್ರಿಯವರಿಗೆ ಕೊಟ್ಟು ಮಲಯ ಪಟ್ಟಣವನ್ನು ಸೇರೆಂದು ಹೇಳಿದ್ದನು; ಅವನು ಮರಣಕಾಲದಲ್ಲಿ ಹೇಳಿದ್ದ ಮಾತನ್ನು ನಡೆಸುವುದು ನನ್ನ ಕೃತ್ಯವೆಂದು ತಿಳಿದು ನಾನು ಅಲ್ಲಿಗೆ ಹೋದೆನು. ಅಲ್ಲಿಯ ಕೆಲಸ ಮುಗಿಯುವುದು ಎರಡು ದಿವಸಗಳಾದುವು ಎಂದನು.

ಮಂತ್ರಿಶ್ರೇಷ್ಠನಾದ ನೃಪಸಿಂಹನನ್ನು ನೋಡಿದೆಯೋ? — ನೋಡಿದೆ.

ಯಜಮಾನನು ಅಕ್ಕಪಕ್ಕನನ್ನು ನೋಡಿ ಸನ್ನಿಧಾನದಲ್ಲಿ ಆರೂ ಇಲ್ಲವೆಂದು ತಿಳಿದು ಚಕ್ರವರ್ತಿಯವರು ಸುಖವಾಗಿದ್ದರೋ! ಎಂದನು. ಅದಕ್ಕೆ ಧರ್ಮದೇವನು ಅಹುದು ಎಂದನು.

ಅವರು ನಿನ್ನ ಸಂಗಡ ಏನ ಹೇಳಿದರು ಎನ್ನಲು, ಜಯಲಕ್ಷ್ಮಿಯು ಎಲ್ಲಿಗೆ ಹೋಗಿದ್ದಿತು? ಆರಿಗೆ ಸೇರಿದುದು ಎಂದು ಕೇಳಿದರು. ಈ ಪ್ರಶ್ನೆಗೆ ಉತ್ತರವನ್ನು ಕೊಟ್ಟ ಮೇಲೆ ಧನಕೋಟಿಯು ವಂಶದವರನ್ನು ನಾನು ಬಲ್ಲೆ. ಅವರು ವಂಶಪಾರಂಪರ್ಯವಾಗಿ ಸ್ವತಂತ್ರವಾಗಿ ಹಡಗುಗಳನ್ನಿಟ್ಟು ವ್ಯಾಪಾರವನ್ನು ಮಾಡುತ್ತಲಿರುವರು. ಅವರಲ್ಲಿ ಒಬ್ಬನು ನನ್ನ ಸಂಗಡ ಸೈನ್ಯದಲ್ಲಿ ಸೇರಿದ್ದನು ಎಂದು ಹೇಳಿದರು ಎಂದನು.

ಅದು ನಿಜ; ಅವರೊಡನೆ ಸೈನ್ಯದಲ್ಲಿದ್ದವರು ನನ್ನ ಚಿಕ್ಕಪ್ಪಂದಿರು, ಈಗಲೂ ಅವರು ಬದುಕಿದ್ದಾರೆ. ಅವರ ಸಂಗಡ ಈ ಮಾತನ್ನು ಹೇಳಿನೋಡು, ಎಷ್ಟು ಸಂತೋಷಪಡುತ್ತಾರೆ. ನೀನು ಏಲಾದ್ವೀಪಕ್ಕೆ ಹೋಗಿ ಕಾಗದದ ಕಟ್ಟನ್ನು ಮಂತ್ರಿಗೆ ಕೊಟ್ಟು

ದನ್ನು ಆರಿಗೂ ಹೇಳಬೇಡ. ಈ ಸಮಾಚಾರವು ಈ ದೇಶದ ಈಗಣ ಅಧಿಕಾರಿಗಳಿಗೆ ತಿಳಿದರೆ ನಿನಗೆ ತುಂಬ ತೊಂದರೆಯುಂಟಾದೀತು ಎಂದನು.

ಅದು ಹೇಗೆ? ಆ ಕಟ್ಟಲ್ಲಿ ಏನಿದ್ದಿತೋ ಅದೇ ನನಗೆ ಗೊತ್ತಿಲ್ಲ.

ಈ ರಾಜ್ಯದ ಈಗಣ ದೊರೆಯೂ ಇನ್ನೂ ಇತರ ದೊರೆಗಳೂ ಸೇರಿ, ಚಕ್ರವರ್ತಿಯನ್ನು ಯುದ್ಧದಲ್ಲಿ ಸೋಲಿಸಿ ಹಿಡಿದು ಏಲಾದ್ವೀಪದಲ್ಲಿ ಸೆರೆಯಿಟ್ಟು ಇರುವುದರಿಂದ, ಅಲ್ಲಿಗೆ ಹೋಗಿಬರುವುದೇ ಅನುಮಾನಕ್ಕೆ ಕಾರಣ; ಅಲ್ಲಿಗೆ ವರ್ತಮಾನವನ್ನು ಕೊಡುವುದು, ಅಲ್ಲಿಂದ ಸಮಾಚಾರಗಳನ್ನು ತರುವುದು, ಮುಂತಾದ ಕಾರ್ಯಗಳು ರಾಜದ್ರೋಹವೆಂದೇ ಭಾವಿಸಲ್ಪಡುವವು.

ಸ್ವಾಮಿಾ, ಇಲ್ಲಿಯ ರಾಜ್ಯಸಂಬಂಧವಾದ ಮಾತುಗಳನ್ನು ನಾನು ಚಕ್ರವರ್ತಿಯೊಡನೆ ಹೇಳಲಿಲ್ಲ. ಅವರೂ ನನ್ನೊಡನೆ ಅಲ್ಲಿಯ ವಿಷಯವಾವುದನ್ನೂ ಹೇಳಲಿಲ್ಲ. ನನಗೆ ಈ ಸಮಾಚಾರಗಳೇ ಗೊತ್ತಿಲ್ಲ. ಇಗೋ ಆರೋಗ್ಯಾಧಿಕಾರಿಗಳೂ, ಸುಂಕದ ಅಧಿಕಾರಿಗಳೂ ಬರುತಲಿದ್ದಾರೆ. ಅವರನ್ನು ನೋಡಿ ಅವರು ಕೇಳುವ ಪ್ರಶ್ನೆಗಳಿಗೆ ಬದಲನ್ನು ಹೇಳಿ ಬಿಟ್ಟು ಬರುತ್ತೇನೆ ಎಂದು ಹೇಳಿ ಧರ್ಮದೇವನು ಹೊರಟು ಹೋದನು.

ಅವನು ಅತ್ತ ಹೋದ ಕೂಡಲೇ ದುರ್ಮತಿಯು ಯಜಮಾನನ ಸಮೀಪಕ್ಕೆ ಬಂದು ಸ್ವಾಮಿಾ, ಉಪನೌಕಾಧಿಪತಿಯು ಏಲಾದ್ವೀಪಕ್ಕೆ ಹೋಗಿದ್ದುದರ ಕಾರಣವನ್ನು ತಮಗೆ ಸಮರ್ಪಕವಾಗುವ ಹಾಗೆ ತಿಳಿಸಿರುವಂತೆ ತೋರುತ್ತಲಿದೆ ಎನ್ನಲು, ಧನಕೋಟಿಯು ಅಹುದು ಎಂದನು.

ಹಡಗು ಏಲಾದ್ವೀಪಕ್ಕೆ ಹೋಗಿದ್ದ ಕಾರಣವು ತಮಗೆ ಒಪ್ಪಿಗೆಯಾಯಿತೆಂದು ಕೇಳಿ ಸಂತೋಷವಾಯಿತು. ನನ್ನ ಜತೆಗಾರರಲ್ಲಿ ಆರಾದರೂ ತಪ್ಪಿ ನಡೆದರೆ ನನಗೆ ಮಹಾ ಸಂಕಟ.

ಧರ್ಮದೇವನು ಆ ಕೆಲಸವನ್ನು ತಾನೇ ಸ್ವತಂತ್ರಿಸಿ ಮಾಡಲಿಲ್ಲ; ನೌಕಾಧಿಪತಿಯು ಸಾಯುವಾಗ ಹೇಳಿದ ಮಾತಿನಂತೆ ನಡೆಸಿದನು.

ನೌಕಾಧಿಪತಿ ಎನ್ನುತ್ತಲೇ ನನಗೊಂದು ಸಂಗತಿ ಜ್ಞಾಪಕಕ್ಕೆ ಬರುತ್ತದೆ. ಧರ್ಮದೇವನು ತಮಗಾವ ಪತ್ರವನ್ನಾದರೂ ಕೊಟ್ಟನೋ? ಇಲ್ಲ.

"ನೌಕಾಧಿಪತಿಯು ಸಾಯುವ ಕಾಲದಲ್ಲಿ ಒಂದು ಕಾಗದದ ಕಟ್ಟನ್ನು ಅವನ ಕೈಯಲ್ಲಿ ಕೊಟ್ಟಹಾಗೆ ಇತ್ತು" "ಆವಕಟ್ಟು?" "ಧರ್ಮದೇವನು ಏಲಾದ್ವೀಪದಲ್ಲಿ ಬಿಟ್ಟ ಕಟ್ಟು." "ಅದು ನಿನಗೆ ಹೇಗೆ ಗೊತ್ತಾಯಿತು?"

ಧನಕೋಟಿಯು ಹೀಗೆ ಹೇಳುತ್ತಲೇ ದುರ್ಮತಿಗೆ ಭೀತಿಯು ತಲೆದೋರಿತು. ತಾನು ಹೇಳಿದುದು ಹೆಚ್ಚಾಯಿತೆಂದುಕೊಂಡು ಸ್ವಾಮಿ, ನೌಕಾಧಿಪತಿಯ ಕೊಟ್ಟಡಿಯ ಮಾರ್ಗವಾಗಿ ನಾನು ಹೋಗುತ್ತಿದ್ದಾಗ ಆತನು ಧರ್ಮದೇವನ ಕೈಯಲ್ಲಿ ಒಂದು ಕಾಗದದ ಕಟ್ಟು ಕೊಟ್ಟಿದ್ದುದನ್ನು ನೋಡಿದೆನು ಎಂದನು.

ಪತ್ರವಿದ್ದಿದ್ದರೆ ಧರ್ಮದೇವನು ನನಗೆ ಕೊಡುವನು ಎಂದು ಯಜಮಾನನು ಹೇಳಲು, ದುರ್ಮತಿಯು ಹಾಗೆಯೇ ಆಲೋಚಿಸಿ ಸ್ವಾಮಿ, ಒಂದು ವೇಳೆ ನನ್ನ ತಿಳುವಳಿಕೆಯು ತಪ್ಪಾಗಿರಬಹುದು; ತಮ್ಮ ಸಂಗಡ ನಾನು ಈ ಪ್ರಸ್ತಾಪವನ್ನು ಮಾಡಿದೆನೆಂದು ಧರ್ಮದೇವನಿಗೆ ತಿಳಿಸಬೇಡಿರಿ ಎಂದನು.

ಆ ವೇಳೆಗೆ ಧರ್ಮದೇವನು ಯಜಮಾನನ ಬಳಿಗೆ ಬಂದು ಸ್ವಾಮಿಗಾ, ಅಧಿಕಾರಿಗಳನ್ನು ಸಮಾಧಾನಪಡಿಸಿ ಬಂದೆನು; ಇನ್ನು ನನ್ನ ಕೆಲಸವು ತೀರಿತು ಎಂದನು.

ಇನ್ನೇನೂ ಇಲ್ಲವೋ? ಇಲ್ಲ.

ನೌಕಾಧಿಪತಿಯು ನನಗೆ ಕೊಡುವಂತೆ ಹೇಳಿ ನಿನ್ನಲ್ಲಿ ಆವುದಾದರೂ ಪತ್ರವನ್ನು ಕೊಟ್ಟಿರುವನೋ?

ಇಲ್ಲ; ಹಾಗೆ ಕೊಟ್ಟಿದ್ದರೆ ತಮಗೆ ಒಡನೆಯೇ ಕೊಡುತ್ತಲಿದ್ದೆನು.

ಹಾಗಾದರೆ ಸರಿ. ಈ ದಿವಸ ನೀನು ನಮ್ಮ ಮನೆಗೇ ಭೋಜನಕ್ಕೆ ಬಾ.

ಕ್ಷಮಿಸಬೇಕು. ವೃದ್ಧರಾದ ನನ್ನ ತಂದೆಯನ್ನು ನೋಡಬೇಕೆಂದು ತುಂಬ ಆತುರವಾಗಿದ್ದೇನೆ.

ಆಮೇಲೆಯಾದರೂ ಬರುವೆಯೋ? ಇಲ್ಲ, ಕ್ಷಮಿಸಬೇಕು. ತಂದೆಯನ್ನು ನೋಡಿದ ಮೇಲೆ ಇನ್ನೊಬ್ಬರನ್ನು ನೋಡಬೇಕಾಗಿದೆ.

ದಿಟ, ಮರೆತೆ; ಲಲಿತಾಂಗಿಯನ್ನಲ್ಲನೆ, ಹೀಗೆಂದು ಕೇಳುತ್ತಲೆ ಧರ್ಮದೇವನು ಲಜ್ಜೆಯಿಂದ ತಲೆಯನ್ನು ಬಾಗಿಸಿ ಸುಮ್ಮನಿದ್ದನು.

ಆಕೆಯು ಮೂರು ನಾಲ್ಕಾವೃತ್ತಿ ಜಯಲಕ್ಷ್ಮಿಯ ಆಗಮನವನ್ನು ತಿಳಿದುಕೊಳ್ಳಲು ನನ್ನಲ್ಲಿಗೆ ಬಂದಿದ್ದಳು. ಧರ್ಮದೇವ! ನೀನು ಒಳ್ಳೆಯ ಹುಡುಗಿಯನ್ನು ಸಂಪಾದಿಸಿದೆ.

ಸ್ವಾಮಿ, ಅವಳು ನನ್ನನ್ನು ಪತಿಯೆಂದೂ ನಾನು ಅವಳನ್ನು ಪತ್ನಿಯೆಂದೂ ಪರಸ್ಪರವಾಗಿ ವರಿಸಿದ್ದೇವೆ.

ಸಂತೋಷ; ಇನ್ನು ನಿನ್ನನ್ನು ನಿಲ್ಲಿಸಿಕೊಳ್ಳುವುದಿಲ್ಲ. ಕೆಲಸವನ್ನೆಲ್ಲಾ ತೃಪ್ತಿಕರವಾಗಿ ಮಾಡಿದ್ದೀಯೆ, ಆದುದರಿಂದ ನಿನ್ನ ಕೆಲಸಗಳನ್ನು ತೀರಿಸಿಕ್ಕೊಂಡು ಬಾ. ನಿನಗೆ ಹಣವೇನಾದರೂ ಬೇಕೋ?

ಮೂರು ತಿಂಗಳ ಸಂಬಳ ಬಾಕಿ ಇದೆ; ಅದನ್ನು ಕೊಟ್ಟರೆ ಸಾಕು.

ಅಷ್ಟೇಸಾಕೋ, ಇನ್ನೂ ಬೇಕೋ? ಅಷ್ಟೇ ಸಾಕು.

ನೀನು ಮಿತವ್ಯಯ ಮಾಡತಕ್ಕವನು.

ನನಗೆ ವೃದ್ಧರಾದ ತಂದೆಯು ಇದ್ದಾರೆ. ಮದುವೆಯನ್ನು ಬೇರೆ ಮಾಡಿಕೊಳ್ಳಬೇಕೆಂದಿದ್ದೇನೆ.

ಅದು ಸರಿ, ಹಾಗೆಯೇ ಇರಬೇಕು. ನೀನು ಹೋಗಿ ಬಾ, ನನಗೂ ಒಬ್ಬ ಮಗನಿರುವನು. ದೂರದೇಶಪ್ರಯಾಣಮಾಡಿ ಊರಿಗೆ ಹಿಂದಿರುಗಿ ಬಂದು ಮನೆಯನ್ನು ಸೇರುವಲ್ಲಿ ಅವನನ್ನು ಆರಾದರೂ ನಿಲ್ಲಿಸಿಕೊಂಡಲ್ಲಿ ಅಂಧವರಲ್ಲಿ ನನಗೂ ಕೋಪವುಂಟಾಗುವುದು. ನೀನು ಹೋಗಿ ಬಾ.

ಸ್ವಾಮಿ, ನನ್ನ ತಂದೆಯು ಯೋಗಕ್ಷೇಮ ತಮಗೇನಾದರೂ ತಿಳಿದು ಇದೆಯೋ?

ಆತನನ್ನು ನಾನು ನೋಡಲಿಲ್ಲ: ಆದರೆ ಸೌಖ್ಯವಾಗಿದಾನೆಂದು ಕೇಳಿಬಲ್ಲೆ.

ಅವರು ಮನೆಯನ್ನು ಬಿಟ್ಟು ಹೊರಗೆ ಹೊರಡುವುದೇ ಇಲ್ಲ.

ಆದುದರಿಂದಲೇ ಆತನಿಗೆ ಆವ ಕೊರತೆಯೂ ಇಲ್ಲವೆಂದು ಊಹಿಸಬಹುದು.

ಅವರ ಸ್ವಭಾವವು ತಮಗಾರಿಗೂ ಗೊತ್ತಿಲ್ಲ. ದೇವರಿಂದ ನಿನಾ ಮತ್ತಾರಿಂದಲೂ ಆವುದನ್ನೂ ಅವರು ಅಪೇಕ್ಷಿಸತಕ್ಕವರಲ್ಲ.

ನೀನು ಕೆಲಸಕ್ಕೆ ಆವಾಗ ಬರುವೆ?

ಜಾಗ್ರತೆ ಮದುವೆಯನ್ನು ಮಾಡುತ್ತೇನೆ. ಅದಕ್ಕೆ ಮೊದಲು ಅಮರಪುರಕ್ಕೆ ಬಂದು ಸಾರಿ ಹೋಗಿ ಬರಬೇಕಾಗಿದೆ ಇವುಗಳೆಲ್ಲ ತೀರಿದ ಮೇಲೆ ಕೆಲಸಕ್ಕೆ ಬರಲು ಸಿದ್ಧನಾಗಿರುವೆನು.

ಈಗ ತಂದಿರುವ ಸರಕುಗಳನ್ನು ಹಡಗಿನಿಂದ ಇಳಿಸಿ, ಪುನಃ ಬೇರೆ ಸರಕುಗಳನ್ನು ತುಂಬಲು ಸುಮಾರು ಮೂರು ತಿಂಗಳುಗಳು ಆಗುವುವು; ಅಷ್ಟರ ವೇಳೆಗೆ ನೀನು ಬಂದರೆ ಸಾಕು. ಜಯಲಕ್ಷ್ಮಿಯು ನೌಕಾಧಿಪತಿಯಿಲ್ಲದೆ ಪ್ರಯಾಣಮಾಡಲಾಗದು.

ನೌಕಾಧಿಪತಿಯಿಲ್ಲದೆ ಜಯಲಕ್ಷ್ಮಿಯು ಪ್ರಯಾಣಮಾಡಲಾಗದು ಎಂಬ ಮಾತುಗಳು ಧರ್ಮದೇವನ ಕಿವಿಗೆ ಬೀಳುತ್ತಲೆ, ಅವನು ಆನಂದಭರಿತನಾಗಿ ಸ್ವಾಮಿ, ತಾವು ಈಗ ಅಪ್ಪಣೆ ಕೊಡಿಸಿದುದು ನಿಜವಾದರೆ ನನ್ನ ಮನೋಭೀಷ್ಟವು ಪರಿಪೂರ್ತಿಯಾಗುವುದು. ತಮಗೆ ಆ ಅಭಿಪ್ರಾಯವಿದ್ದಲ್ಲಿ ನನಗೆ ಆ ಪದವಿಯನ್ನು ಕೊಡುವೆನೆಂದು ಅಭಯಪ್ರದಾನವನ್ನು ಮಾಡಬೇಕು ಎಂದನು.

ನಾನು ಒಬ್ಬನೇ ಯಜಮಾನನಾಗಿದ್ದಲ್ಲಿ ಈ ಕ್ಷಣವೇ ಹಡಗಿನ ಯಾಜಮಾನ್ಯಕ್ಕೆ ನಿನ್ನನ್ನು ನೇಮಿಸುತ್ತಲಿದ್ದೆನು: ಆದರೆ ನನಗೆ ಒಬ್ಬ ಪಾಲುದಾರನುಂಟು. ಆವನಿಗೆ ಪಾಲುದಾರನುಂಟೋ ಅವನಿಗೆ ಯಜಮಾನನುಂಟು ಎಂಬ ಮಾತನ್ನು ಕೇಳಿರುವೆಯಷ್ಟೆ. ಆದರೂ ಚಿಂತೆಯಿಲ್ಲ. ಅದಕ್ಕೆ ತಕ್ಕ ವ್ಯವಸಾಯವನ್ನು ನಾನು ಮಾಡುವೆನು; ನೀನು ಧೈರ್ಯವಾಗಿರು.

ಧರ್ಮದೇವನು ಆನಂದಬಾಷ್ಪಗಳನ್ನು ಸುರಿಸುತ್ತ ನಾನೂ ನನ್ನ ತಂದೆಯೂ ಲಲಿತಾಂಗಿಯೂ ಎಲ್ಲರೂ ತಮಗೆ ಬಹು ಕೃತಜ್ಞರಾಗಿರುವೆವು ಎಂದನು.

ತರುವಾಯ ಧನಕೋಟಿಯು ದುರ್ಮತಿಯ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ಎಂದು ಕೇಳಲು, ತಮ್ಮ ಪ್ರಶ್ನೆಯು ನನಗೆ ಸರಿಯಾಗಿ ಗೊತ್ತಾಗಲಿಲ್ಲ. ದುರ್ಮತಿಯು ಸಹವಾಸಕ್ಕೆ ಯೋಗ್ಯನೇ ಎಂದು ಕೇಳುವ ಪಕ್ಷದಲ್ಲಿ ನಾನು ಒಳ್ಳೆಯ ಅಭಿಪ್ರಾಯವನ್ನು ಕೊಡಲಾರೆ; ಕೆಲಸದಲ್ಲಿ ಹೇಗೆ ಎಂದು ಕೇಳುವಿರಾದರೆ ಅವನು ಕೆಲಸವನ್ನು ಸರಿಯಾಗಿ ಮಾಡುತ್ತಾನೆಂದು ಹೇಳಬಲ್ಲೆನು ಎಂದನು.

ನೀನು ನೌಕಾಧಿಪತಿಯಾದರೆ ಅವನು ಜಯಲಕ್ಷ್ಮಿಯಲ್ಲಿರಲು ನಿನಗಿಷ್ಟವೋ? ಯಜಮಾನರಿಗೆ ಅರು ಅನುಕೂಲರೋ ಅವರು ನನಗೂ ಅನುಕೂಲರೇ.

ನೀನು ಗುಣವಂತ. ಇನ್ನು ಹೋಗಿ ಬಾ ; ನಾನು ಹೇಳಿದ ಕಾಲದೊಳಗಾಗಿ ಪುನಃ ಕೆಲಸಕ್ಕೆ ಬಂದು ಬಿಡು.

ಎರಡನೆಯ ಅಧ್ಯಾಯವು

ತಂದೆಯೂ ಮಗನೂ

ಪಾತಕರೇ ! ದ್ವೇಷವೆಂಬ ಪಿಶಾಚನಿಂದ ಗ್ರಸ್ತನಾಗಿ ನಿರಪರಾಧಿಯಾದ ತನ್ನ ಜತೆಗಾರನನ್ನು ಯಜಮಾನನ ಸಂಗಡ ದೂಷಿಸುತ್ತಲಿರುವ ದುರ್ಮತಿಯನ್ನು ಹಡಗಿನಲ್ಲಿ ಬಿಟ್ಟು ಧರ್ಮದೇವನೊಡನೆ ಸ್ವಲ್ಪ ಹೊತ್ತು ಹೋಗಿ ನೋಡೋಣ.

ಧರ್ಮದೇವನು ಆ ಪಟ್ಟಣದ ಮೂಡಣ ಹೆಬ್ಬಾಗಿಲಿನಿಂದ ರಾಜಬೀದಿಯಲ್ಲಿ ಹೊರಟು ಮಧ್ಯಮಾರ್ಗದಲ್ಲಿ ಕಾಳಿಕಾಗುಡಿಯ ಅಡ್ಡ ಹಾದಿಗೆ ತಿರುಗಿ ಅಲ್ಲಿದ್ದ ಒಂದು ದೊಡ್ಡ ಮನೆಯನ್ನು ಹೊಕ್ಕನು. ಅದು ನಾಲ್ಕು ಅಂತಸ್ತಿನ ಮನೆ. ಅತ್ಯಾತುರನಾಗಿ ನಾಲ್ಕನೆಯ ಮಾಳಿಗೆಗೆ ಹೋಗಲು ಉದ್ಯುಕ್ತನಾದನು. ಮೆಟ್ಟಲಿನ ಹಾದಿಯು ಕತ್ತಲೆಯಾಗಿದ್ದುದರಿಂದ ಒಂದು ಕೈಯಿಂದ ಕೈಪಿಡಿಯ ಕಂಬಿಯನ್ನು ಹಿಡಿದು ಮೇಲಕ್ಕೆ ದಡದಡನೆ ಹತ್ತುತ್ತಲಿದ್ದನು. ನಾಲ್ಕನೆಯ ಅಂತಸ್ತು ಸಮೀಪಿಸಿದ ಹಾಗೆಲ್ಲಾ ಅತನ ಎದೆಯು ಬಡಿದುಕೊಳ್ಳುತ್ತಾ ಇದ್ದಿತು ಇದನ್ನು ತಡೆಯಲು ಮತ್ತೊಂದು ಕೈಯಿಂದ ಎದೆಯನ್ನು ಒತ್ತುತ್ತ ಹಂತವನ್ನು ಹತ್ತಿದನು. ಮೇಲಿನ ಅಂತಸ್ತಿನಲ್ಲಿದ್ದುದು ಒಂದೇ ಕೊಟ್ಟಡಿ ; ಅದರಲ್ಲಿ ಅವನ ತಂದೆ ಭುಜಂಗಭೂಷಣನು ವಾಸವಾಗಿದ್ದನು.

ಜಯಲಕ್ಷ್ಮಿಯ ಆಗಮನವು ಭುಜಂಗಭೂಷಣನಿಗೆ ತಿಳಿದಿರಲಿಲ್ಲ. ಅತನು ಎಂದಿನಂತೆ ಬಾಗಿಲ ಇದಿರಿಗೆ ಇರುವ ಕಿಟಕಿಯ ಮುಖವಾಗಿ ಕುರ್ಚಿಯಲ್ಲಿ ಕೂಳಿತು ಕಿಟಕಿಯಲ್ಲಿಟ್ಟಿದ್ದ ಹೂವಿನ ಗಿಡಗಳನ್ನು ಸರಿಮಾಡುತ್ತ ಹೂವುಗಳ ಬಣ್ಣ ವಾಸನೆಗಳನ್ನು ನೋಡಿ ಅನುಭವಿಸಿ ಸಂತೋಷಪಡುತ್ತಲಿದ್ದನು. ಕೋಣೆಯು ಬಾಗಿಲು ಅರ್ಧ ತೆರೆದಿದ್ದಿತು. ಧರ್ಮದೇವನು ಕ್ಷಣಮಾತ್ರ ಬಾಗಿಲಲ್ಲಿ ನಿಂತು ಒಳಗಿನ ಸನ್ನಿವೇಶವನ್ನು ತಿಳಿದು, ಸದ್ದಿಲ್ಲದೆ ಭುಜಂಗಭೂಷಣನ ಹಿಂಭಾಗವನ್ನು ಸೇರಿ ಅವನ

ಕೊರಲನ್ನು ತನ್ನ ಎರಡು ಕೈಗಳಿಂದಲೂ ತಬ್ಬಿಕ್ಕೊಂಡು ಅಪ್ಪಾ, ನಾನು ಬಂದೆ ಎಂದನು. ಭುಜಂಗಭೂಷಣನು ಹಿಂತಿರುಗಿ ಮಗನನ್ನು ಕಂಡು ಮೂರ್ಛಿತನಾದನು.

ಧರ್ಮದೇವನು ಗಾಬರಿಬಿದ್ದು ಅಪ್ಪಾ ಇದೇನು! ನಿನಗೆ ಮೆಯ್ ಸ್ವಸ್ಥವಿಲ್ಲದಿರುವಂತೆ ತೋರುತ್ತಲಿದೆ ಎಂದು ಕೂಗುತ್ತ, ತಂದೆಯ ಮುಖಕ್ಕೆ ತಣ್ಣೀರನ್ನು ಎರಚಿದ ಕೂಡಲೆ ಅವನು ಎಚ್ಚತ್ತನು.

ಅಪ್ಪಾ ಏತಕ್ಕೆ ಮೂರ್ಛಿತನಾದೆ? ಎಂದು ಧರ್ಮದೇವನು ಕೇಳಲು "ಮಗನೇ, ನೀನು ಇಷ್ಟು ಜಾಗ್ರತೆಯಾಗಿ ಬರುವೆ ಎಂದು ನಾನು ಯೋಚಿಸಿರಲಿಲ್ಲ. ನೀನು ಹಠಾತ್ತಾಗಿ ಬಂದ ಸಂತೋಷದಿಂದ ನಾನು ಮೂರ್ಛಿತನಾದೆನು" ಎಂದನು.

ಸಂತೋಷದಿಂದ ಮನುಷ್ಯರಿಗೆ ಹಾನಿಯುಂಟಾಗುವುದಿಲ್ಲವೆಂದು ನಾನು ಕೇಳಿದ್ದೆನು; ಆದುದರಿಂದ ನಾನು ಬಂದಿರುವುದನ್ನು ನಿನಗೆ ಮೊದಲು ತಿಳಿಸದೆ ನಿನ್ನನ್ನು ಆಲಿಂಗನಮಾಡಿದೆ. ಏಳು, ಇನ್ನು ಮುಂದೆ ನಾವು ಸುಖವಾಗಿರೋಣ.

ಮಗನೇ! ಸುಖವಾಗಿರೋಣ. ನೀನು ನನ್ನನ್ನು ಬಿಟ್ಟು ಪುನಃ ಎಲ್ಲಿಯೂ ಹೋಗುವುದಿಲ್ಲವೋ ಎಂದು ಕೇಳಿ, ಹಾಗೆಯೇ ಸ್ವಲ್ಪ ಆಲೋಚಿಸಿ ಅಯ್ಯಾ, ನಾನು ಎಂಥ ಮೂಢ; ಸ್ವಾರ್ಥಪರ; ನೀನು ನನ್ನನ್ನು ಬಿಟ್ಟು ಹೋಗದೆ ಇದ್ದರೆ ನಮ್ಮ ಜೀವನವು ಹೇಗೆ ಆಗುವುದು? ಒಳ್ಳೆಯದು, ಮಗನೇ, ನಿನ್ನ ಯೋಗಕ್ಷೇಮವನ್ನು ನನಗೆ ಸ್ವಲ್ಪ ತಿಳಿಸು.

ಅಪ್ಪಾ, ನಿನ್ನ ಆಶೀರ್ವಾದದ ಬಲದಿಂದ ನಾನು ಸುಖವಾಗಿದ್ದೇನೆ, ಜಯಲಕ್ಷ್ಮಿಯ ಅಧಿಪತಿಯು ಮೃತಪಟ್ಟನು; ಅದು ನನಗೆ ಬಹುಸಂಕಟಕರವಾಗಿದೆ. ಅವನ ಕೆಲಸವನ್ನು ನನಗೆ ಮಾಡಿಕೊಡುವುದಾಗಿ ನಮ್ಮ ಯಜಮಾನನು ಹೇಳಿರುವನು. ಇಪ್ಪತ್ತು ವಯಸ್ಸಿನೊಳಗೆ ನೌಕಾಧಿಪತಿಯಾಗುವುದು ಅದೃಷ್ಟವಲ್ಲವೇ? ಆ ಕೆಲಸವಾದರೆ ನೂರು ವರಹಗಳ ಸಂಬಳವೂ ವ್ಯಾಪಾರದಿಂದ ಬರುವ ಲಾಭದಲ್ಲಿ ಒಂದು ಪಾಲೂ ಸಿಕ್ಕುವುದು. ಇದಕ್ಕಿಂತ ಭಾಗ್ಯ ಮತ್ತಾವುದು ಬೇಕು. ನನಗೆ ನೌಕಾಧಿಪತ್ಯವು ಸಿಕ್ಕಿತೆಂದು ಸಂತೋಷವಿದ್ದರೂ ಆತನ ಮರಣಕ್ಕಾಗಿ ಸಂಕಟವಾಗುತ್ತದೆ.

ಮಗನೇ, ದೈವಗತಿಯು ತಪ್ಪಲಾರದು. ಈ ಲೋಕದಲ್ಲಿ ಸುಖದುಃಖಗಳೆರಡೂ ಮಿಶ್ರವಾಗಿಯೇ ಇವೆ. ಪ್ರಾಪ್ತವಾದುದನ್ನು ಅನುಭವಿಸಲೇಬೇಕು.

ಅಪ್ಪಾ, ನೌಕಾಧಿಪತ್ಯವು ಸಿಕ್ಕಿದರೆ ಮೊದಲು ಒಂದು ಸ್ವಂತ ಮನೆಯನ್ನು ಮಾಡಿ, ಆ ಮನೆಯ ವರಾಂಡದಲ್ಲಿ ಹೂವಿನ ತೋಟವೊಂದನ್ನು ಏರ್ಪಡಿಸಿ ಅದರಲ್ಲಿ ನಿನಗೆ ಇಷ್ಟವಾದ ಹೂವಿನ ಗಿಡಗಳನ್ನು ಹಾಕಿಸುತ್ತೇನೆ ಎಂದು ತಂದೆಯ ಮುಖವನ್ನು ನೋಡಿ ಹೇಳುತ್ತಲಿರುವಾಗ, ಭುಜಂಗಭೂಷಣನು ಪುನಃ ಮೂರ್ಛಿತನಾಗಿ ಕುರ್ಚಿಯ ಮೇಲೆ ಹಾಗೆಯೇ ಒರಗಿಕೊಂಡನು.

ಅಯ್ಯೋ ಅಪ್ಪಾ ಇದೇನು! ನಿನಗೆ ಮೈಯ್ ಸ್ವಸ್ಥವಿಲ್ಲ; ಸ್ವಲ್ಪ ಹಾಲನ್ನಾದರೂ ಕುಡಿ ಎಂದು ಧರ್ಮದೇವನು ಕೂಗಿಕೊಂಡನು. ಅಷ್ಟರಲ್ಲಿಯೇ ವೃದ್ಧನು ಎಚ್ಚತ್ತು ನನಗೆ ಹಾಲು ಬೇಕಿಲ್ಲ; ನೀನು ಅದನ್ನು ಹುಡುಕಲೂ ಬೇಡ ಎಂದನು.

ಸ್ವಲ್ಪ ಹಾಲು ತೆಗೆದುಕೊಂಡರೆ ಆಯಾಸಪರಿಹಾರವಾಗುವುದಲ್ಲದೆ ಬಲವೂ ಬರುವುದು. ಹಾಲು ಎಲ್ಲಿ ಇದೆ ಎಂದು ಆ ಕೊಟ್ಟಡಿಯ ಅಲಮಾರುಗಳನ್ನು ಹುಡುಕಲು ಹೊರಟನು.

ಅಪ್ಪಾ ಮಗೂ! ನೀನು ಹುಡುಕಿ ಪ್ರಯೋಜನವಿಲ್ಲ. ಮನೆಯಲ್ಲಿ ಹಾಲಿಲ್ಲ. ದ್ರಾಕ್ಷಾರಸವೋ? — ಅದು ಮೊದಲೇ ಇಲ್ಲ.

ಏನು! ಅವುದೂ ಇಲ್ಲವೇ? ಎಂದುಕೊಂಡು ಧರ್ಮದೇವನು ಕಳೆಗುಂದಿ ನಿಂತನು.

ಅಪ್ಪಾ ಮಗನೇ, ಹಗಲೂ ಇರುಳೂ ನಿನ್ನ ಯೋಚನೆಯಲ್ಲಿಯೇ ಇದ್ದುದರಿಂದ ನನಗೆ ಹಸಿವೇ ತೋರುತ್ತಿರಲಿಲ್ಲ. ನೀನು ಊರಿಗೆ ಸುಖವಾಗಿ ಬಂದು ಸೇರಿದ ಸಂತೋಷದಿಂದ ಈಗ ನನಗೆ ಹಸಿವು ತೋರುತ್ತಲಿದೆ.

ನೀನು ಹೇಳುವ ಮಾತುಗಳನ್ನು ಕೇಳಿದರೆ ಕಯ್ಯುಲ್ಲಿ ದುಡ್ಡಿಲ್ಲದೆ ಆಹಾರಾದಿಗಳನ್ನು ಬಿಟ್ಟಂತೆ ತೋರುತ್ತಲಿದೆ. ನಾನು ಪ್ರಯಾಣಮಾಡುವುದಕ್ಕೆ ಮೊದಲು ನಿನ್ನಲ್ಲಿ ವೆಚ್ಚಕ್ಕಾಗಿ ಇನ್ನೂರು ವರಹಗಳನ್ನು ಕೊಟ್ಟಿದ್ದೆನಲ್ಲಾ ಅದೇನಾಯಿತು? ಏತಕ್ಕೆ ಹೀಗೆ ಆಹಾರಾದಿಗಳನ್ನು ಬಿಟ್ಟಿರುವೆ?

ಮಗೂ, ನಮ್ಮ ಕೆಳಗಣ ಮಾಳಿಗೆಯಲ್ಲಿರುವ ಕದರ್ಥಕನಿಗೆ ಕೊಡತಕ್ಕ

ಸಾಲವನ್ನು ನಾವು ಮರೆತಿದ್ದೆವು. ಆತನು ಅದನ್ನು ಜ್ಞಾಪಿಸಿ, ಕೂಡಲೇ ತೀರಿಸದಿದ್ದರೆ ಧನಕೋಟಿಗೆ ತಿಳಿಸಿ ಅವನಿಂದ ಹಣವನ್ನು ತೆಗೆದುಕೊಳ್ಳುವುದಾಗಿ ಹೇಳಿದನು. ಧನಕೋಟಿಗೆ ಈ ಸಂಗತಿಯು ತಿಳಿದರೆ ನಿನಗೇನಾದರೂ ತೊಂದರೆಯಾದೀತೋ ಎಂದು ಯೋಚಿಸಿ, ನೀನು ಕೊಟ್ಟಿದ್ದ ಹಣದಲ್ಲಿ ಆ ಸಾಲವನ್ನು ತೀರಿಸಿಬಿಟ್ಟೆನು.

ಅವನು ಕೊಟ್ಟಿದ್ದ ಸಾಲವು ನೂರ ತೊಂಬತ್ತು ವರಹಗಳಲ್ಲವೆ?— ಅಹುದು. ಅಷ್ಟನ್ನೂ ತೀರಿಸಿದೆಯಾ? ಭುಜಂಗಭೂಷಣನು ಅಹುದೆಂದು ತಲೆಯನ್ನು ಅಲುಗಿಸಿದನು.

ಅಯ್ಯೋ ದೇವರೇ, ಎಂದು ಧರ್ಮದೇವನು ನೆಲಕ್ಕೆ ಬಿದ್ದು ತಂದೆಯ ಪಾದಗಳನ್ನು ಹಿಡಿದುಕೊಂಡು ಕ್ಷಮಿಸು, ಕ್ಷಮಿಸು ಎಂದೆದ್ದು ತನ್ನ ಕವಚದಲ್ಲಿದ್ದ ಚಿನ್ನ, ಬೆಳ್ಳಿ, ತಾಮ್ರದ ನಾಣ್ಯಗಳನ್ನು ಪಕ್ಕದಲ್ಲಿದ್ದ ಮೇಜಿನ ಮೇಲೆ ಸುರಿದು ಅವ್ವಾ, ಏಳು. ಈ ಹಣವನ್ನು ತೆಗೆದುಕೊಂಡು ನಿನಗೆ ಬೇಕಾದ ಪದಾರ್ಥಗಳನ್ನೆಲ್ಲಾ ತರಿಸು. ನಾಳೆ ನನ್ನ ಸಂಬಳವು ಬರುವುದು; ಅದನ್ನೂ ನಿನಗೆ ತಂದು ಕೊಡುವೆನು.

ಮಗೂ! ಈ ಹಣವಾರದು? ಚಿನ್ನದ ನಾಣ್ಯಗಳೇ ಹೆಚ್ಚಾಗಿವೆ.

ಇದು ನನ್ನದು, ನಿನ್ನದು, ನಮ್ಮಿಬ್ಬರದು. ನನ್ನ ಪೆಟ್ಟಿಗೆಗೆ ಕೊಟ್ಟಿದ್ದ ಹಣವನ್ನು ಮಿತವಾಗಿ ವೆಚ್ಚಮಾಡಿ ಇದನ್ನು ಪಿಗಿಸಿಕೊಂಡೆನು. ಅಯ್ಯೋ ಪಾಪ, ನೀನು, ದುಡ್ಡಿಲ್ಲದೆ ಎಷ್ಟು ಕಷ್ಟಪಟ್ಟಿಯೋ! ಏಳು, ಪದಾರ್ಥಗಳನ್ನು ತರಿಸು.

ಈಗ ನಾನು ಹೆಚ್ಚಾಗಿ ಪದಾರ್ಥಗಳನ್ನು ತರಿಸಿದರೆ 'ಇದುವರೆಗೆ ದುಡ್ಡಿಲ್ಲದೆ ಕಷ್ಟಪಡುತ್ತಿದ್ದನು, ಈಗ ಮಗನು ಊರಿಗೆ ಬಂದಮೇಲೆ ತನ್ನ ಕೈಗೆ ಎರಡು ಕಾಸು ಸಿಕ್ಕಿದೆ; ಅದರಿಂದ ಹೀಗೆ ಹೇರಳವಾಗಿ ಪದಾರ್ಥಗಳನ್ನು ತರಿಸಿಕೊಳ್ಳುತ್ತಿದ್ದಾನೆ' ಎಂದು ಜನಗಳು ಅಡಿಕೊಳ್ಳುವರು.

ಅವ್ವಾ, ಹಾಗಾದರೆ ನಿನ್ನ ಇಷ್ಟವಿದ್ದಂತೆ ಮಾಡು. ಮೊದಲು ನಿನ್ನ ಉಪಚಾರಕ್ಕಾಗಿ ಒಬ್ಬ ಸೇವಕನನ್ನು ನೇಮಕಮಾಡಿಕೋ; ನೀನು ಒಬ್ಬನೇ ಇರುವುದು ಸರಿಯಲ್ಲ. ಕೆಲವು ಅಪೂರ್ವವಾದ ಪದಾರ್ಥಗಳನ್ನು ಸುಂಕದವರ ಕಣ್ಣಿಗೆ ಬೀಳದ ಹಾಗೆ ಹಡಗಿನಲ್ಲಿಟ್ಟಿದ್ದೇನೆ. ಅವುಗಳನ್ನು ನಾಳೆಯ ದಿನ ನಿನಗೆ ತಂದು ಕೊಡುವೆನು ಎಂದು ಹೇಳುತ್ತಿರುವಾಗ ಯಾರೋ ಮೇಲಕ್ಕೆ ಹತ್ತಿಬರುವಂತೆ ಮೆಟ್ಟಲು ಸದ್ದಾಗು

ವುದು ಕೇಳಿಸಿತು. ಆಗ ಧರ್ಮದೇವನು ಆರೋ ಬರುವಂತಿದೆ; ಸುಮಾರು ಹಜ್ಜೆಯ ಸದ್ದನ್ನು ನೋಡಿದರೆ ಕದರ್ಥಕನು ಬರುತ್ತಿರಬಹುದು. ಇವನಿಗೆ ಮನಸ್ಸಿನಲ್ಲೊಂದು, ಬಾಯಲ್ಲೊಂದು; ಆದರೂ ಚಿಂತೆ ಇಲ್ಲ. ನಮಗೆ ಒಂದು ಸಮಯದಲ್ಲಿ ಈತನು ಉಪಕಾರಮಾಡಿದಾನೆ; ಆದುದರಿಂದ ಇವನನ್ನು ನಾವು ಆದರದಿಂದ ಕಾಣೋಣ ಎಂದನು.

ಹೀಗೆಂದ ಭುಜಂಗಭೂಷಣನ ಮಾತನ್ನು ಧರ್ಮದೇವನು ಕೇಳಿ ಬಾಗಿಲಕಡೆಗೆ ತಿರುಗುವಷ್ಟರಲ್ಲಿಯೇ ಕದರ್ಥಕನು ಕೊಟ್ಟಡಿಯೊಳಗೆ ತಲೆಯನ್ನು ಹಾಕಿದನು. ಇವನಿಗೆ ಸುಮಾರು ಇಪ್ಪತ್ತಾರು ಇಪ್ಪತ್ತೇಳು ವಯಸ್ಸು. ಕೈಯಲ್ಲಿ ಇದ್ದ ಬಟ್ಟೆಯ ಚೂರನ್ನೂ ವೇಷವನ್ನೂ ನೋಡಿದರೆ ಇವನು ಚಿಪ್ಪಿಗನ ಕೆಲಸವನ್ನು ಮಾಡಿ ಜೀವನ ಮಾಡುತ್ತಿರುವಂತೆ ತೋರುತ್ತಲಿದ್ದಿತು.

ಇವನು ಧರ್ಮದೇವನನ್ನು ನೋಡುತ್ತಲೆ ಹುಸಿನಗೆಯನ್ನು ಬೀರುತ್ತ ಓಹೋ, ಏನು ಧರ್ಮದೇವ! ಸುಖವಾಗಿ ಊರಿಗೆ ಬಂದು ಸೇರಿದೆಯಾ? ಎಂದು ಕುಶಲಪ್ರಶ್ನೆಯನ್ನು ಮಾಡಿದನು.

ನಮ್ಮ ನೆರೆಹೊರೆಯವರಿಗೂ ಸ್ನೇಹಿತರಿಗೂ ಅವ ವಿಧದಲ್ಲಾದರೂ ಈ ಚೇತನ ಸಿಂದ ಅನುಕೂಲವಾಗಲಿ ಎಂಬ ಅಭಿಲಾಷೆಯಿಂದ ಈಗತಾನೇ ಊರಿಗೆ ಬಂದು ಸೇರಿದೆ. ನೀನು ಕ್ಷೇಮವಾಗಿದ್ದೀಯಾ?

ನಿನ್ನ ಕೃಪೆಯಿಂದ ನನಗೇನೋ ದೇವರು ಕೊರತೆ ಮಾಡಿಲ್ಲ; ನೀನು ಅನುಕೂಲಸ್ಥಿತಿಯಲ್ಲಿರುವೆ ಎಂದು ಕೇಳಿ ನನಗೆ ಬಹುಸಂತೋಷವಾಯಿತು. ನನ್ನಿಂದ ಉಪಕಾರವನ್ನು ಹೊದ್ದುವ ಸ್ಥಿತಿಯಲ್ಲಿ ಬೇರೆ ಜನರು ಇದ್ದಾರೆಂಬುದು ನಿನಗೆ ಗೊತ್ತಿದೆಯಷ್ಟೆ?

ಧರ್ಮದೇವನು ಈ ಮಾತನ್ನು ಕೇಳಿ ಖಿನ್ನನಾದನು. ಭುಜಂಗಭೂಷಣನು ತಲೆಯನ್ನು ತಗ್ಗಿಸಿಕೊಂಡನು. ಇದನ್ನು ನೋಡಿ ಕದರ್ಥಕನು ಇದು ನಿಮ್ಮನ್ನು ನಿರ್ದೇಶಿಸಿ ಹೇಳಿದ ಮಾತಲ್ಲ. ಕೊಟ್ಟ ಸಾಲವನ್ನು ಆಗಲೆ ತೀರಿಸಿದ್ದೀರಿ. ಅದರ ಹಂಗು ಆಗಲೆ ಹರಿಯಿತು ಎಂದನು.

ಹಾಗೆ ಹೇಳಬೇಡ. ಸಾಲವು ತೀರಿದರೂ ಸಮಯದಲ್ಲಿ ನೀನು ನಮಗೆ ಮಾಡಿದ ಉಪಕಾರವು ಎಲ್ಲಿಹೋದೀತು. ಅದನ್ನು ಮರೆಯಲು ಆಗುವುದಿಲ್ಲ.

ಅದು ಹಾಗಿರಲಿ. ಅಂಗಡಿಯಿಂದ ಈ ಬಟ್ಟೆಯನ್ನು ನಾನು ತರುತ್ತಿರುವಾಗ ಹಾದಿಯಲ್ಲಿ ದುರ್ಮತಿಯು ಸಿಕ್ಕಿದನು. ನೀನು ಊರಿಗೆ ಬಂದ ವರ್ತಮಾನವನ್ನು ಹೇಳಿಗುದರಿಂದ ನಿನ್ನನ್ನು ನೋಡಿಕೊಂಡು ಹೋಗೋಣವೆಂದು ಇಲ್ಲಿಗೆ ಬಂದೆನು.

ನಮ್ಮನ್ನು ಕಂಡರೆ ನಿನಗೆ ಬಹುಅಭಿಮಾನ.

ಈ ಕಾಲದಲ್ಲಿ ಸಜ್ಜನರು ಸಿಕ್ಕುವುದು ಅಪೂರ್ವ ; ಇದಲ್ಲದೆ ನೆರೆಹೊರೆಯವರಲ್ಲಿ ಬಬ್ಬರಿಗೊಬರು ಅಭಿಮಾನವಾಗಿರುವುದು ಏನು ವಿಶೇಷ, ಎಂದು ಮೇಜಿನ ಕಡೆ ತಿರುಗಿ ನೀನು ಪುಣ್ಯವಂತನಾದಂತೆ ತೋರುತ್ತಲಿದೆ ಎಂದು ಕೃಪಣದೃಷ್ಟಿಯಿಂದ ಹಣವನ್ನು ನೋಡಿದುದನ್ನು ಧರ್ಮದೇವನು ತಿಳಿದು ಈ ಹಣವು ನನ್ನದಲ್ಲ, ನಮ್ಮಪ್ಪನದು ; ನಾನೂರಲ್ಲಿ ಇಲ್ಲದಿದ್ದಾಗ ದುಡ್ಡಿಲ್ಲದೆ ತೊಂದರೆ ಪಟ್ಟೆಯೋ ಎಂದು ನನ್ನ ತಂದೆಯನ್ನು ಕೇಳಿದುದಕೆ ಆಂಧಾ ಸಂದರ್ಭವೇನೂ ಇಲ್ಲವೆಂದು ನನಗೆ ನಂಬಿಕೆಯನ್ನುಂಟುಮಾಡುವುದಕ್ಕಾಗಿ ತನ್ನ ಚೀಲದಲ್ಲಿದ್ದ ದುಡ್ಡನ್ನು ಮೇಜಿನ ಮೇಲೆ ಸುರಿದರು. ಎಂದು ತನ್ನ ತಂದೆಯ ಕಡೆಗೆ ತಿರುಗಿ ಅಪ್ಪಾ ! ಈ ದುಡ್ಡಿನಲ್ಲಿ ಕದರ್ಧಕಸಿಗೇನಾದರೂ ಬೇಕಾಗಿದ್ದಲ್ಲಿ ಕೊಟ್ಟು ಮಿಕ್ಕುದನ್ನು ಪುನಃ ಚೀಲದಲ್ಲಿ ಹಾಕು ಎಂದನು.

ನನಗೆ ದುಡ್ಡು ಈಗೇನೂ ಅವಶ್ಯಕವಿಲ್ಲ ; ಬೇಕಾದಾಗ ಕೇಳುತ್ತೇನೆ. ದೇವರೇನೋ ನನಗೆ ಬೇಕಾದಷ್ಟನ್ನು ಕೊಟ್ಟಿದ್ದಾನೆ. ನಿನ್ನ ವಿಷಯದಲ್ಲಿ ಧನಕೋಟಿಗೆ ಬಲು ಒಳ್ಳೆಯ ಅಭಿಪ್ರಾಯವಿರುವುದಂತೆ, ಅದು ನಿಜವೇ.

ನನ್ನ ಯಜಮಾನನು ಆವಾಗಲೂ ನನ್ನಲ್ಲಿ ವಿಶ್ವಾಸವುಳ್ಳವನಾಗಿದ್ದಾನೆ.

ಹಾಗಿರುವಲ್ಲಿ ಅವನು ನಿನ್ನನ್ನು ಭೋಜನಕ್ಕೆ ಕರೆದರೆ ನೀನು ಏತಕ್ಕೆ ಹೋಗಲಿಲ್ಲ ?

ಏನು ಮಗೂ! ಧನಕೋಟಿಯು ಭೋಜನಕ್ಕೆ ಕರೆದರೆ ನೀನು ಹೋಗಲಿಲ್ಲವೇ ? ಎಂದು ಭುಜಂಗಭೂಷಣನು ಕೇಳಿದುದಕ್ಕೆ, ಧರ್ಮದೇವನು ಅಪ್ಪಾ, ನಿನ್ನನ್ನು ನೋಡುವ ಆತುರದಿಂದ ಹೋಗಲಿಲ್ಲ ಎಂದನು.

ಅದನ್ನು ಕೇಳಿ ಕದರ್ಥಕನು ಆತನು ನಿನಗೆ ನೌಕಾಧಿಪತ್ಯವನ್ನು ಕೊಡಲು ಉದ್ದೇಶಿಸಿರುವಾಗ ನೀನು ಭೋಜನಕ್ಕೆ ಹೋಗದೆ ಇದ್ದುದು ತಪ್ಪು ಎಂದನು.

ಇದರಿಂದಾತನು ಅಸಮಾಧಾನಗೊಳ್ಳಲಾರನು.

ಆದರೂ ನಮಗೆ ಆರಿಂದ ಅನುಕೂಲವಾಗಬೇಕೋ ಅಂಧವರನ್ನು ಆಶ್ರಯಿಸಿ ಅವರು ಹೇಳಿದಂತೆ ಕೇಳಬೇಕು.

ಹಾಗೆ ಮಾಡದೆಯೇ ನಾನು ನೌಕಾಧಿಪತಿಯಾಗಬಲ್ಲೆನೆಂದು ನನಗೆ ಭರವಸೆ ಯುಂಟು, ಎಂದು ಧರ್ಮದೇವನು ಹೇಳುತ್ತಲೆ, ಕದರ್ಥಕನು ಹಾಗಾದರೆ ಸರಿ. ಈ ವರ್ತಮಾನವನ್ನು ಪಾಳೆಯದಲ್ಲಿರುವ ಯುವತಿಯು ಕೇಳಿದರೆ ಬಹು ಸಂತೋಷಪಡು ವಳು ಎಂದನು.

ಏನು ಲಲಿತಾಂಗಿಯೇ, ಎಂದು ಭುಜಂಗಭೂಷಣನು ಕೇಳಲು ಅಹುದಪ್ಪಾ, ಅಹುದು. ನಿನ್ನ ದರ್ಶನವನ್ನು ಮಾಡಿ ಯೋಗಕ್ಷೇಮವನ್ನು ತಿಳಿದು ಸಂತೋಷ ಪಟ್ಟಿನು. ಇನ್ನು ನೀನು ಅಪ್ಪಣೆಕೊಟ್ಟರೆ ಪಾಳೆಯಕ್ಕೆ ಹೋಗಿ ಲಲಿತಾಂಗಿಯ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಬರುತ್ತೇನೆ ಎಂದು ಧರ್ಮದೇವನು ಹೇಳಿದನು.

ಮಗನೇ! ಹೋಗಿ ಬಾ. ನಿನ್ನಂಥ ಸತ್ಪುತ್ರನನ್ನು ದೇವರು ನನಗೆ ಕೊಟ್ಟುದ ಕ್ಕಾಗಿ ನಾನು ಎಷ್ಟು ಸಂತೋಷಪಡುತ್ತೇನೋ? ನೀನೂ ಸತ್ಪುತ್ರನನ್ನು ಪಡೆದು ಸಂತೋಷವಾಗಿರಬೇಕೆಂದು ದೇವರನ್ನು ಸರ್ವದಾ ಪ್ರಾರ್ಥಿಸುತಲಿರುವೆನು. ನಿನಗೂ ನಿನ್ನ ಹೆಂಡತಿಗೂ ದೇವರು ಸುಖವನ್ನು ಕೊಡಲಿ.

ಓಹೋ ವೃದ್ಧರೇ, ಇದೇನು! ಇನ್ನೂ ಮದುವೆಯಾಗುವುದಕ್ಕೇ ಮಾರ್ಗವಿಲ್ಲ, ಆಗಲೆ ಹೆಂಡತಿ ಎನ್ನುತ್ತೀರಿ. ಮದುವೆಯಾಗಲಾಶೆಯುಳ್ಳ ಧರ್ಮದೇವನಿಗಿಂತಲೂ ನಿಮಗೆ ಆತುರ ಹೆಚ್ಚೆಂದು ತೋರುತ್ತದೆ ಎಂದು ಕದರ್ಥಕನೆಂದನು.

ನಮ್ಮ ಮದುನೆಯು ಜಾಗ್ರತೆಯಾಗಿಯೇ ಆಗುವುದರಿಂದ ನಮ್ಮಪ್ಪ ಈ ರೀತಿ ಹೇಳಿದರು.

ಹಾಗಾದರೆ ಶೀಘ್ರವಾಗಿ ನೀನು ಊರಿಗೆ ಬಂದುದು ಅನುಕೂಲವಾಯಿತು. ಇಲ್ಲವಾದರೆ ತೊಂದರೆಯಾಗುತ್ತಲಿದ್ದಿತು. ಅದು ಏಕೆ?

ಲಲಿತಾಂಗಿಯು ಬಹುಸುಂದರಿ : ಸುಂದರಸ್ತ್ರೀಯರಿಗೆ ಅನೇಕವರಗಳು. ಅದರಲ್ಲಿ ಲಲಿತಾಂಗಿಯಂಥ ಗುಣವತಿಯಾದ ಸುಂದರಿಯನ್ನು ವರಿಸುವವರನ್ನು ಎಷ್ಟೆಂದು ಹೇಳಲಾದೀತು ?

ಇದು ನಿಶ್ಚಯವೋ ? — ನಿಶ್ಚಯ.

ಸಾಧಾರಣವಾಗಿ ಹೆಂಗುಸರ, ಅದರಲ್ಲೂ ಲಲಿತಾಂಗಿಯು, ವಿಷಯದಲ್ಲಿ ನನ್ನ ಅಭಿಪ್ರಾಯವು ಬೇರೆ.

ಓಹೋ ! ಮರೆತೆ. ನೀನು ನೌಕಾಧಿಪತಿಯಾಗುವೆ : ಆದುದರಿಂದ ನಿನ್ನನ್ನೇ ಅವಳು ವರಿಸುವಳು.

ನೌಕಾಧಿಪತಿಯಾಗಲಿ ಆಗದೆ ಇರಲಿ ಅವಳು ನನ್ನನ್ನು ಬಿಟ್ಟು ಮತ್ತೊಬ್ಬರನ್ನೂ ವರಿಸಳು.

ಯೌವನಸ್ಥರು ಈ ಅಭಿಪ್ರಾಯದಿಂದಿರುವುದೇ ಒಳ್ಳೆಯದು. ಹೋಗಿ ಬಾ ಎಂದು ಕದರ್ಥಕನು ಹೇಳಿದ ಒಡನೆಯೇ ಧರ್ಮದೇವನು ಇಗೋ ಹೊರಟೆ ಎಂದು ಲಲಿತಾಂಗಿಯು ಇರುವ ಪಾಳೆಯಕ್ಕೆ ಹೊರಟನು. ಕೂಡಲೇ ಕದರ್ಥಕನು ಭುಜಂಗ ಭೂಷಣನ ಅಪ್ಪಣೆಯನ್ನು ಪಡೆದು ಅದೇ ಬೀದಿಯ ಕೊನೆಯಲ್ಲಿ ತಲೆಗೆ ಮುಸುಕು ಹಾಕಿಕೊಂಡು ಮರೆಯಾಗಿ ಕಾದಿದ್ದ ದುರ್ಮತಿಯ ಬಳಿಗೆ ಪುನಃ ಹೋದನು.

ಕದರ್ಥಕನನ್ನು ನೋಡಿದೊಡನೇ ದುರ್ಮತಿಯು ಧರ್ಮದೇವನನ್ನು ನೀನು ನೋಡಿದ್ದೆಯಾ ? ಅವನೊಡನೆ ಏನ ಮಾತನಾಡಿದೆ ? ನೌಕಾಧಿಪತಿಯಾಗುತ್ತೇನೆಂದು ಅವನೇನಾದರೂ ಹೇಳಿಕೊಂಡನೋ ?

ಈಗಲೇ ಆಗಿಬಿಟ್ಟಂತೆ ಹೇಳಿದನು.

ಅತ್ಯಾಶೆ, ಅತ್ಯಾತುರವಿರುವಂತೆ ತೋರುತ್ತಲಿದೆ.

ಧನಕೋಟಿಯು ನೌಕಾಧಿಪತ್ಯವನ್ನು ಕೊಡುವುದಾಗಿ ವಾಗ್ದಾನಮಾಡಿದ್ದಾನೆಂದು ಹೇಳಿದನು.

ಆದರೂ ಬಲು ಜಂಭಗಾರ; ಅಹಂಕಾರದಿಂದ ಅವನಿಗೆ ತಲೆ ತಿರುಗಿ ಹೋಗಿರುವಂತೆ ತೋರುತ್ತಲಿದೆ

ಅಹುದಹುದು, ತಾನು ಒಬ್ಬ ದೊಡ್ಡ ಮನುಷ್ಯನಂತೆಯೂ ಸಾಹುಕಾರನಂತೆಯೂ ಭಾವಿಸಿಕೊಂಡು ನನಗೆ ಸಹಾಯವನ್ನು ಮಾಡುವುದಾಗಿ ಹೇಳಿದನು.

ನೀನು ಅದನ್ನು ಒಪ್ಪಿಕೊಳ್ಳಲಿಲ್ಲವಷ್ಟೆ?

ನಾನು ಒಪ್ಪಿಕೊಳ್ಳಲಿಲ್ಲ. ನನ್ನಿಂದಲೇ ಒಂದು ಸಮಯದಲ್ಲಿ ಉಪಕಾರವನ್ನು ಹೊದ್ದಿದ್ದು ಈಗ ನನಗೇ ಉಪಕಾರಮಾಡುತ್ತೇನೆಂದು ಹೇಳುತ್ತಾನೆ. ಈಗಲೇ ಅವನಿಗೆ ಇಷ್ಟು ಜಂಭವಾದರೆ ಮುಂದೆ ನೌಕಾಧಿಪನಾದ ಮೇಲೆ ಕೇಳಬೇಕೇ.

ಇನ್ನೂ ನೌಕಾಧಿಪತಿಯಾಗಿಲ್ಲ, ದೇವರ ದಯವಿದ್ದರೆ ಆಗುವುದೂ ಇಲ್ಲ — ಆಗದೆ ಇದ್ದರೆ ಒಳ್ಳೆಯದಲ್ಲವೇ?

ಅಹುದು. — ಹಾಗಾದರೆ ಅವನಿಗೆ ಆ ಕೆಲಸವನ್ನು ತಪ್ಪಿಸಿ, ಅವನನ್ನು ಹೀನ ಸ್ಥಿತಿಗೆ ತರಬಹುದು. ಹಾ! ಏನೆಂದೆ?

ಏನೂ ಇಲ್ಲ; ನನಗೇನೋ ತೋರಿತು. ಅದೇನು?

ಅವನು ಲಲಿತಾಂಗಿಯನ್ನು ಇನ್ನೂ ಪ್ರೀತಿಸುತ್ತಲಿದ್ದಾನೆಯೋ?

ತನ್ನ ಪ್ರಾಣವನ್ನೇ ಅವಳಲ್ಲಿಟ್ಟಿರುವನು; ಆದರೆ ಇವನು ಅವಳನ್ನು ಮದುವೆಯಾಗುವುದು ಕಷ್ಟವೆಂದು ತೋರುತ್ತದೆ.

ಕಷ್ಟವೇನು? — ನಾನು ಏತಕ್ಕೆ ಹೇಳಲಿ ಎಂದು ಕದರ್ಥಕನೆಂದುದಕ್ಕೆ, ದುರ್ಮತಿಯು ಅದರಿಂದ ತುಂಬ ಕೆಲಸವಿದೆ, ಹೇಳು. ಧರ್ಮದೇವನನ್ನು ನೀನು ಪ್ರೀತಿಸುವೆಯೋ?

ಈ ನಡುವೆ ಸ್ವಲ್ಪ ಗರಿಗಟ್ಟಿಕೊಂಡು ದುರಹಂಕಾರದಿಂದ ಮೆರೆಯುವ ಅವನನ್ನು ಆರು ತಾನೇ ಪ್ರೀತಿಸುವರು?

ಹಾಗಾದರೆ ನಿನಗೆ ತಿಳಿದ ಸಂಗತಿಯನ್ನು ಹೇಳು.

ಲಲಿತಾಂಗಿಯಲ್ಲಿ ಅವಳ ಬಂಧುವಾದ ತರುಣನೊಬ್ಬನಿಗೆ ಅನುರಾಗವಿರುವುದು. ಅವರಿಬ್ಬರೂ ಆಗಾಗಲೂ ಒಟ್ಟಿಗಿರುತ್ತಲಿದ್ದಾರೆ. ಅವಳು ಧರ್ಮದೇವನನ್ನು ವರಿಸಿದರೆ ಅತನು ಸುಮ್ಮನಿದ್ದಾನೆಯೇ?

ಅತನಿಗೆ ಅವಳನ್ನು ಮದುವೆಯಾಗುವುದು ಇಷ್ಟವೋ?

ಇಷ್ಟವಿಲ್ಲದಿದ್ದರೆ ಅವನೇಕೆ ಆವಾಗಲೂ ಅವಳನ್ನು ಎಡೆಬಿಡದೆ ಅನುಸರಿಸುತ್ತಿದ್ದಾನು?

ಧರ್ಮದೇವನು ಲಲಿತಾಂಗಿಯ ಮನೆಯ ಕಡೆಗೆ ಹೋದನೋ?

ನಾನು ಅವನ ಮನೆಯಿಂದ ಹೊರಡುವುದಕ್ಕೆ ಮೊದಲೇ ಅವನು ಅಲ್ಲಿಗೆ ಹೊರಟನು.

ಸರಿ, ಹಾಗಾದರೆ ಅವನು ಹೊರಟ ದಾರಿಯಲ್ಲಿಯೇ ನಾವೂ ಹೋಗೋಣ. ಪಾಳೆಯದ ಹತ್ತಿರದಲ್ಲಿ ಒಂದು ಸತ್ರವಿದೆ; ಅಲ್ಲಿ ಬೇಕಾದ ತಿಂಡಿ ತೀರ್ಥಗಳು ಸಿಕ್ಕುತ್ತವೆ. ಅದರ ಮುಂದೆ ಒಂದು ಸಣ್ಣ ತೋಟವಿದೆ. ನಾವಿಬ್ಬರೂ ಆ ತೋಟದಲ್ಲಿ ಕುಳಿತು ಪಾಳೆಯದಲ್ಲಿ ನಡೆಯುವ ಸಂಗತಿಗಳನ್ನು ನೋಡೋಣ.

ಸತ್ರಗಳಲ್ಲಿ ದುಡ್ಡಿಲ್ಲದೆ ತಿಂಡಿ ತೀರ್ಥಗಳನ್ನು ಕೊಡುವುದಿಲ್ಲ; ನನ್ನಲ್ಲಿ ದುಡ್ಡಿಲ್ಲ. ನನ್ನ ತಿಂಡಿಯ ವೆಚ್ಚವನ್ನೂ ನೀನೇ ಸಲ್ಲಿಸುವುದಾದರೆ ಬರುತ್ತೇನೆ.

ಹಾಗೆಯೇ ಆಗಲಿ; ಬಾ, ಹೋಗೋಣ.

ಕೂಡಲೇ ಅವರಿಬ್ಬರೂ ಸತ್ರದ ಬಳಿಗೆ ಹೊರಟರು. ಹೋಗಿ ಸತ್ರದ ಯಜಮಾನನನ್ನು ಕಂಡು "ನಮ್ಮ ಊಟದ ಸಾಮಗ್ರಿಗಳನ್ನು ಈ ತೋಪಿನಲ್ಲಿರುವ ಮೇಜಿನ ಮೇಲೆ ಇರಿಸು" ಎಂದು ಹೇಳಿ, ತೋಪಿಗೆ ಬಂದು ಅಲ್ಲಿದ್ದ ಕುರ್ಚಿಗಳ ಮೇಲೆ ಕುಳಿತುಕೊಂಡರು. ಪರಿಚಾರಕರು ತಿಂಡಿ ತೀರ್ಥಗಳನ್ನು ಅಲ್ಲಿಗೇ ತೆಗೆದುಕೊಂಡು ಬಂದು ಮೇಜಿನ ಮೇಲೆ ಇರಿಸುತ್ತಲಿದ್ದರು. ಆಗ ದುರ್ಮತಿಯು ಕದರ್ಥಕನನ್ನು ನೋಡಿ "ಇಗೋ ನೋಡು, ಈ ಪ್ರದೇಶವು ಎಷ್ಟು ರಮಣೀಯವಾಗಿದೆ; ಬಿಸಿಲು ಚುರುಕಾಗಿದ್ದರೂ ದಟ್ಟವಾದ ಮರಗಳಿಂದ ಅದರ ವೇಗವು ತೋರುವುದಿಲ್ಲ. ಈ ಬೀದಿಯೂ ಸಮುದ್ರವೂ ಎಷ್ಟು ಚೆನ್ನಾಗಿ ಕಾಣಬರುವುದು; ಇಲ್ಲಿಯ ಹೂಗಿಡುಗಳೂ, ಸುವಾಸನೆಯೊಡನೆ ಬೀಸುವ ತಂಗಾಳಿಯೂ, ಪಕ್ಷಿಗಳ ಗಾನವೂ ಮನಸ್ಸಿಗೆ ತುಂಬ ಆಹ್ಲಾದವನ್ನುಂಟುಮಾಡುತ್ತಲಿವೆ" ಎಂದನು.

ತಿಂಡಿಯನ್ನು ತಿಂದರೆ ಉಂಟಾಗುವ ಆನಂದಕ್ಕಿಂತ ಇದರಲ್ಲಿ ಏನು ಹೆಚ್ಚು ಆನಂದವಾಗುತ್ತದೆ?

ಅದಕ್ಕಾಗಿಯೇ ನಾನು ನಿನ್ನನ್ನು ಇಲ್ಲಿಗೆ ಕರೆದುಕೊಂಡು ಬಂದೆನು.

ಹಾಗಾದರೆ ಕಬಳಿಸೋಣ ಎಂದು ಹೇಳುತ್ತ ಕದರ್ಥಕನು ತಿನ್ನುವುದಕ್ಕೆ ಮೊದಲು ಮಾಡಿದನು.

ಮೂರನೆಯ ಅಧ್ಯಾಯ

ಊರ ಹೊರಗಣ ಪಾಳೆಯ

ಕದರ್ಥಕನೂ ದುರ್ಮತಿಯೂ ಕುಳಿತಿದ್ದ ಸ್ಥಳಕ್ಕೆ ಸುಮಾರು ನೂರು ಗಜಗಳ ದೂರದಲ್ಲಿ ಪಾಳೆಯವೊಂದಿದ್ದಿತು. ಅದು ಹಿಂದೆ ಜನಭರಿತವಾಗಿದ್ದು ಈಗ ಹೆಚ್ಚು ಕಡಮೆ ಅರವಾಸಿ ಸಾಳುಬಿದ್ದಿದೆ.

ಇಲ್ಲಿ ವಾಸಮಾಡುವವರೆಲ್ಲರೂ ಪರದೇಶದವರು. ಅವರು ಒಂದಾನೊಂದು ಕಾಲದಲ್ಲಿ ಸಮುದ್ರಮಾರ್ಗವಾಗಿ ಇಲ್ಲಿಗೆ ಬಂದು ಈ ದೇಶದ ರಾಜನ ಅಪ್ಪಣೆಯನ್ನು ಪಡೆದು ಇಲ್ಲಿಯೇ ನೆಲಸಿ, ಪ್ರತ್ಯೇಕವಾದ ಒಂದು ಪಾಳೆಯವನ್ನು ಕಟ್ಟಿಕೊಂಡು ವಾಸಮಾಡಿಕೊಂಡಿದ್ದರು. ಒಹು ದಿವಸಗಳಿಂದ ಅವರು ಇಲ್ಲಿಯೇ ನೆಲೆಗೊಂಡಿದ್ದುದರಿಂದ ಈ ದೇಶೀಯರೊಡನೆ ಕಲೆತು ಬಂಧುತ್ವವನ್ನು ಬೆಳಸಿಕೊಂಡಿದ್ದರು. ಅವರು ಅಂಬಿಗರ ವೃತ್ತಿಯಿಂದ ಜೀವನವನ್ನು ಮಾಡುತ್ತಿದ್ದರು. ಅವರು ಧೈರ್ಯಶಾಲಿಗಳು; ಸಾಧುಪ್ರಕೃತಿಗಳು, ದ್ವೇಷವಿಟ್ಟರೆ ಹಗೆಗಳನ್ನು ಹೇಗಾದರೂ ಮಾಡಿ ಕೊಲ್ಲದೆ ಬಿಡುತ್ತಿರಲಿಲ್ಲ. ಪ್ರತಿಯೊಬ್ಬನೂ ತನ್ನ ನಡುಕಟ್ಟಿನಲ್ಲಿ ಅವಾಗಲೂ ಒಂದು ಚೂರಿಯನ್ನೋ ಕರವಾರಿಯನ್ನೋ ಇಟ್ಟೇ ಇರುತ್ತಿದ್ದನು.

ಈ ಪಾಳೆಯದಲ್ಲಿ ಒಂದೇ ಬೀದಿ; ಅದರ ಇಕ್ಕೆಲಗಳಲ್ಲಿಯೂ ಎರಡು ಸಾಲು ಮನೆಗಳಿರುವುವು. ಬಿದ್ದುಹೋದ ಮನೆಗಳು ಹೊರತು ನಿಕ್ಕುವೆಲ್ಲವೂ ಹುಲ್ಲಿನವು. ಅವುಗಳಲ್ಲಿ ಒಂದು ಶುಭ್ರವಾಗಿಯೂ ಶುಚಿಯಾಗಿಯೂ ಇದ್ದಿತು. ಅದರ ತಲೆಬಾಗಿಲು ಹಾಕಿದ್ದಿತು; ಒಳಗೆ ಆರೋ ಇಬ್ಬರು ಮಾತನಾಡುತ್ತಿರುವಂತೆ ಸದ್ದು ಕೇಳಿಸುತ್ತಲಿದ್ದಿತು. ನಡುಮನೆಯಲ್ಲಿ ಒಂದು ಮೇಜೂ ಕೆಲವು ಕುರ್ಚಿಗಳೂ ಇದ್ದುವು. ಒಂದು ಕುರ್ಚಿಯನ್ನು ಒರಗಿಕೊಂಡು ಯುವತಿಯೊಬ್ಬಳು ನಿಂತಿದ್ದಳು. ಅವಳು ಎಡಗೈಯಲ್ಲಿ ದಪ್ಪನಾದ ಹೂವಿನ ಗೊಂಚಲನ್ನು ಹಿಡಿದುಕೊಂಡು ಬಲಗೆ

ಯಿಂದ ಒಂದೊಂದಾಗಿ ಹೂವನ್ನೆಲ್ಲ ಕಿತ್ತು ಬಿಸುಡುತ್ತಲಿದ್ದಳು. ಅವಳಿಗೆ ಸುಮಾರು ಹದಿನೆಂಟು ವಯಸ್ಸು ; ಅವಳ ರೂಪಲಾವಣ್ಯಗಳನ್ನು ನೋಡಿ ಅಪ್ಸರಸ್ತ್ರೀಯರೂ ಸೋಲುತ್ತಲಿದ್ದರು. ಕೋಮಲವಾದ ಪಾದಗಳಿಂದ ಅವಳು ಅಡಿಗಡಿಗೆ ನೆಲವನ್ನು ತಾಡನಮಾಡುತ್ತಿದ್ದಳು. ಆಕೆಯಿದ್ದ ಸ್ಥಳಕ್ಕೆ ಮೂರು ನಾಲ್ಕು ಮಾರು ದೂರದಲ್ಲಿ ಒಂದು ಕುರ್ಚಿಯ ಮೇಲೆ ಒಬ್ಬ ಯುವಕನು ಕುಳಿತುಕೊಂಡು ಅವಳ ಮುಖವನ್ನೇ ನೋಡುತ್ತ ಅವಳ ಮಾತುಗಳಿಂದ ತನಗೆ ಉಂಟಾದ ಅಸಮಾಧಾನವನ್ನು ಸೂಚಿಸುತ್ತ ಲಿದ್ದನು.

ಲಲಿತಾಂಗೀ, ಚೈತ್ರನೈಶಾಖವೂ ಬಂದಿತು. ಇದು ಲಗ್ನಕಾಲವಲ್ಲವೇ ?

ನಿನಗೆ ಎಷ್ಟು ಸಾರಿ ಹೇಳಲಿ .

ತಿರಿಗಿ ಹೇಳು ; ಮತ್ತೊಮ್ಮೆ ಹೇಳು ; ಪುನಃ ಹೇಳು ; ನೀನು ಎಷ್ಟು ಸಲ ಹೇಳಿದರೂ ನನಗೆ ನಂಬುಗೆಯುಂಟಾಗುವುದಿಲ್ಲ ನನ್ನ ಪ್ರಾಣವು ನಿನ್ನ ಕೈಯಲ್ಲಿದೆ. ನಿನಗೆ ನನ್ನ ಮೇಲೆ ಇನ್ನೂ ಕರುಣೆ ಬಾರದೇ ? ನನ್ನ ಆಸೆಯನ್ನು ಏಕೆ ಭಂಗ ಪಡಿಸುತ್ತೀಯೆ ? ಹತ್ತು ವರ್ಷಗಳಿಂದಲೂ, ನೀನುಂಟಾದರೆ ಲೋಕವುಂಟೆಂದು ನಂಬಿ ಕೊಂಡಿದ್ದ ನಾನು ಈಗ ನಿನ್ನಿಂದ ತಿರಸ್ಕೃತನಾದರೆ ಬದುಕುವುದು ಹೇಗೆ !

ವಿಷಯಲಂಪಟ, ನಾನು ಆವಾಗಲೂ ನಿನಗೆ ಇತರವಿಧವಾದ ಆಸೆಯನ್ನು ತೋರಿ ಸಲಿಲ್ಲ. ನೀನು ನನಗೆ ಒಡಹುಟ್ಟಿದವನು ಎಂದು ಎಷ್ಟೋ ಸಾರಿ ಹೇಳಿದ್ದೇನೆ. ಒಡ ಹುಟ್ಟಿದವಳು ಎಷ್ಟು ಮಟ್ಟಿಗೆ ಪ್ರೀತಿಯನ್ನು ತೋರಿಸಬಹುದೋ ಅಷ್ಟು ಮಟ್ಟಿಗೆ ನಾನು ತೋರಿಸಿರುತ್ತೇನೆ. ನೀನು ನನ್ನನ್ನು ಮದುವೆಯಾಗಬೇಕೆಂದು ಬಯಸುವುದು ಸರಿಯಲ್ಲ.

ಅಹುದು, ಆದರೆ ನಿನ್ನ ಮೃದುವಾದ ಮುಖದಿಂದ ಇಂಥ ಕಠಿಣವಾದ ಮಾತು ಗಳು ಹೊರಡುವುವೆಂದು ನಾನು ತಿಳಿದಿರಲಿಲ್ಲ. ನಾವಿಬ್ಬರೂ ಒಂದೇ ದೇಶದವರು. ಈ ದೇಶದವರನ್ನು ನಾವು ಮದುವೆಯಾಗಬಾರದೆಂಬ ಕಟ್ಟಳೆಯು ನಿನಗೆ ಗೊತ್ತಿ ದೆಯೋ ಇಲ್ಲವೋ ?

ಇದು ಶಾಸ್ತ್ರವಲ್ಲ ; ಬರೆಯ ಆಚಾರ. ಈ ಆಚಾರವೂ ಹಿಂದಿನಿಂದಲೇ ಮಲಿನ ವಾಗುತ್ತ ಬಂದಿದೆ. ಈ ಮಾತು ಪ್ರಯೋಜನವಿಲ್ಲ ಇದಲ್ಲದೆ ನಾನು ನಿನ್ನನ್ನು ಮದುವೆಯಾಗುವುದರಲ್ಲಿ ಹಲವು ತೊಂದರೆಗಳುಂಟು. ಸರ್ಕಾರದವರು ನಿನ್ನನ್ನು ಸೈನ್ಯಕ್ಕೆ

ಸೇರಿಸಿಕೊಂಡಿದಾರೆ ಆವ ನಿಮಿಷದಲ್ಲಿ ಅವರು ನಿನ್ನನ್ನು ಕರೆದರೂ ನೀನು ಯುದ್ಧಕ್ಕೆ ಹೊರಡಬೇಕು. ನೀನು ಯುದ್ಧಕ್ಕೆ ಹೊರಟು ಹೋದರೆ ನನ್ನ ಗತಿ ಏನಾಗ ಬೇಕು? ಬಾಲ್ಯದಲ್ಲಿಯೇ ತಂದೆತಾಯಿಗಳನ್ನು ಕಳೆದುಕೊಂಡು ತಿರುಪೆಮಾಡಿ ಜೀವಿ ಸುತ್ತಲಿದ್ದು ಮದುವೆಯಾದ ಗಂಡನೂ ದೇಶಾಂತರಕ್ಕೆ ಹೊರಟು ಹೋದರೆ, ಏನ ಮಾಡಲಾಪೆನು? ಈಗ ನೀನು ಮಾನುಗಳನ್ನು ಹಿಡಿದು ಸೋದರಿಯೆಂಬ ಅಭಿಪ್ರಾಯ ದಿಂದ ನನಗೆ ತಂದುಕೊಡುತ್ತಿದ್ದೀಯೆಂದು ತೆಗೆದುಕೊಳ್ಳುತ್ತಿದ್ದೇನೆ ಹಾಗಲ್ಲದೆ ಬೇರೆ ಅಭಿಪ್ರಾಯದಿಂದ ಕೊಡುವೆಯಾದರೆ ತೆಗೆದುಕೊಳ್ಳಲು ನನಗೆ ಸ್ವಲ್ಪವೂ ಇಷ್ಟವಿಲ್ಲ.

ನಾವಿಬ್ಬರೂ ತಬ್ಬಲಿಗಳು, ಬಡವರು. ನೀನು ನನ್ನನ್ನು ಮದುವೆಯಾದರೆ ನಾವು ಅನ್ಯೋನ್ಯವಾಗಿದ್ದುಕೊಂಡು ಸುಖವಾಗಿರಬಹುದು. ದೇವರು ನನಗೆ ಶಕ್ತಿ ಯನ್ನೂ ಬುದ್ಧಿಯನ್ನೂ ಕೊಟ್ಟಿದ್ದಾನೆ. ಆವ ಕಷ್ಟವಾದರೂ ದ್ರವ್ಯವನ್ನು ಸಂಪಾದಿಸಿ ನಿನ್ನನ್ನು ಸುಖವಾಗಿಡಬಲ್ಲೆನೆಂಬ ಧೈರ್ಯವು ನನಗೆ ಉಂಟು. ಹೆಂಗುಸಿಗೆ ಗಂಡನಲ್ಲಿ ವಿಧೇಯತೆಯೂ ಸಂಸಾರವನ್ನು ನಡೆಸುವ ಶಕ್ತಿಯೂ ಇರಬೇಕು. ಇವೆರಡೂ ನಿನ್ನಲ್ಲಿ ಪೂರ್ಣವಾಗಿದೆ

ಒಬ್ಬನನ್ನು ಪ್ರೀತಿಸುತ್ತಲಿದ್ದವಳು ಮತ್ತೊಬ್ಬನನ್ನು ಮದುವೆಯಾದರೆ ಅವಳಿಗೆ ಅವನಲ್ಲಿ ಹೇಗೆ ತಾನೇ ಅನುರಾಗವಿದೀತು? ಅವಳು ಹೇಗೆ ತಾನೇ ಸಂಸಾರವನ್ನು ಸರಿಯಾಗಿ ನಡೆಸುವಳು? ನೀನು ದ್ರವ್ಯವನ್ನು ಸಂಪಾದಿಸಿ ನಾನು ಸುಖಪಡುವೆನೆಂಬ ನಂಬುಗೆಯು ನನಗಿಲ್ಲ.

ನೀನು ನನ್ನನ್ನು ವರಿಸುವುದಕ್ಕೆ ನನ್ನ ಬಡತನವೇ ಅಡ್ಡಿಯಾಗಿರುವಂತಿದೆ. ನಾನು ನಿನ್ನನ್ನು ನನ್ನ ಭಾಗ್ಯಲಕ್ಷ್ಮಿಯೆಂದು ಎಣಿಸಿದ್ದೇನೆ. ನೀನು ನನ್ನ ಕೈ ಹಿಡಿದರೆ ಎಲ್ಲವೂ ಕೈಗೂಡಿ ನಾನು ಭಾಗ್ಯವಂತನಾಗುವುದರಲ್ಲಿ ಸಂದೇಹವಿಲ್ಲ.

ಸದ್ಯದಲ್ಲಿ ಯುದ್ಧವಿಲ್ಲದಿರುವುದರಿಂದ ನೀನು ಇಲ್ಲಿ ಇರುತ್ತಿದ್ದೀಯೆ. ಯುದ್ಧ ಪ್ರಾರಂಭವಾದರೆ ನೀನೆಲ್ಲೋ, ನಾನೆಲ್ಲೋ? ಆದುದರಿಂದ ಮದುವೆಯ ಯೋಚನೆ ಯನ್ನು ಬಿಟ್ಟುಬಿಡು. ನಾನುನಿನ್ನನ್ನು ಮದುವೆಯಾಗುವಳಲ್ಲ.

ನಾನು ನಾವಿಕನ ವೇಷದಿಂದ ಬಂದರೆ ನನ್ನನ್ನು ಮದುವೆಯಾಗುತ್ತೀಯೇನೋ ಎಂದು ವಿಷಯಲಂಪಟನು ಹೇಳಲು, ಲಲಿತಾಂಗಿಗೆ ಕೋಪಬಂದು ಏನೆಂದೆ? ಎಂದಳು.

ನೀನು ನಾವಿಕನನ್ನು ವರಿಸಿರುವುದರಿಂದಲ್ಲವೇ ನನ್ನನ್ನು ಹೀಗೆ ತಿರಸ್ಕರಿಸುತ ಲಿದ್ದೀಯೆ. ನಾವಿಕರು ಸಮುದ್ರದಂತೆ ಚಂಚಲಬುದ್ಧಿಯುಳ್ಳವರು. ಇದಲ್ಲದೆ ಸಮು ದ್ರಯಾನವು ತುಂಬ ಅಪಾಯಕರ.

ವಿಷಯಲಂಪಟನೇ, ನೀನು ಹೆರರಿಗೆ ಕೇಡನ್ನು ಬಯಸಿ ಸುಖಪಡಬೇಕೆಂಬ ದುರ್ಬುದ್ಧಿಯುಳ್ಳವನು. ಇದುವರೆಗೂ ಇದು ನನಗೆ ತಿಳಿದಿರಲಿಲ್ಲ. ನಾನು ಧರ್ಮ ದೇವನನ್ನು ವರಿಸಿರುವುದೇನೋ ನಿಜ: ಅವನನ್ನೇ ಮದುವೆಯಾಗುತೇನೆ. ಆತನು ಯೋಗ್ಯನು; ಸುಶೀಲನು; ದೇವರು ಅಂಧವನನ್ನು ಎಂದಿಗೂ ಕೈಬಿಡುವುದಿಲ್ಲ. ಒಂದು ವೇಳೆ ಗ್ರಹಚಾರಕಡಿಮೆಯಾಗಿ ಅವನು ಸಮುದ್ರದಲ್ಲಿ ಸತ್ತರೂ ನನ್ನನ್ನೇ ಸ್ಮರಿಸಿ ಕೊಂಡು ಸಾಯುವನು ಎಂದು ಹೇಳಿ ಲಲಿತಾಂಗಿಯು ಕೋಪದಿಂದ ವಿಷಯಲಂಪ ಟನ ಮುಖವನ್ನು ದುರದುರನೆ ನೋಡುತ್ತ ಕಯ್ಯಲ್ಲಿದ್ದ ಹೂವಿನ ಗೊಂಚಲನ್ನು ನೆಲದ ಮೇಲೆ ಬಿಸುಟು ನಿನ್ನನ್ನು ನೋಡಿದರೆ ಅವುದೋ ಒಂದು ಕಾರಣದಿಂದ ಧರ್ಮದೇವ ನನ್ನು ಕೆಣಕಿ ಅವನ ಸಂಗಡ ಯುದ್ಧವನ್ನು ಮಾಡಿ ಅವನನ್ನು ಕೊಲ್ಲುವ ಪ್ರಯತ್ನ ವನ್ನು ಮಾಡುವೆಯೆಂದು ತೋರುತ್ತಲಿದೆ. ಹಾಗೇನಾದರೂ ಯುದ್ಧ ನಡೆದು ನೀನು ಪರಾಜಿತನಾದರೆ ಅನ್ಯಾಯವಾಗಿ ನನ್ನ ಸ್ನೇಹವನ್ನು ಕಳೆದುಕೊಳ್ಳುತ್ತೀಯೆ; ಅವನು ಪರಾಜಿತನಾದರೆ ನನ್ನ ದ್ವೇಷವನ್ನು ಸಂಪಾದಿಸಿಕೊಳ್ಳುತ್ತೀಯೆ. ಯುದ್ಧದಲ್ಲಿ ಅವನು ಮೃತಪಟ್ಟರೆ ನಾನು ಜೀವದೊಂದಿಗೆ ಇರತಕ್ಕವಳಲ್ಲ: ಇದು ನಿಶ್ಚಯ. ನಾನು ಪ್ರೀತಿಸುತ್ತಲಿರುವ ಧರ್ಮದೇವನೊಡನೆ ನೀನು ಜಗಳವಾಡುವುದರಿಂದ ನಿನಗೆ ಏನೂ ಪ್ರಯೋಜನವಾಗಲಾರದು. ನಿನಗೆ ಬುದ್ಧಿಯಿದ್ದರೆ ನನ್ನ ಸ್ನೇಹವನ್ನು ಉಳಿಸಿಕೋ ಎಂದು ಹೇಳುತ್ತ, ಅಷ್ಟರಲ್ಲಿಯೇ ಧರ್ಮದೇವನನ್ನು ಸ್ಮರಿಸಿಕೊಂಡು, ಅಹಹಾ! ನನ್ನ ಮನೋವಲ್ಲಭನು ಇಲ್ಲಿಂದ ಪ್ರಯಾಣಮಾಡಿ ಮೂರು ತಿಂಗಳಿಗೆ ಮೇಲಾಯಿತು; ಇನ್ನೂ ಊರಿಗೆ ಬರಲಿಲ್ಲವಲ್ಲ! ಬಿರುಗಾಳಿ ಮಳೆಗಳ ದೆಸೆಯಿಂದ ಸಮುದ್ರದಲ್ಲಿ ಅನೇಕ ಅನಾಹುತಗಳಾದುವೆಂದು ತಿಳಿಯಬರುತ್ತಿದೆ. ದೇವಾಧಿದೇವನೇ! ಧರ್ಮದೇವನನ್ನು ಕಾಪಿಟ್ಟು ನನ್ನೊಡನೆ ಕೂಡಿಸು ಎಂದು ಮನಸ್ಸಿನಲ್ಲಿ ದೇವರನ್ನು ಪ್ರಾರ್ಥಿಸುತ್ತ ಕಣ್ಣು ಗಳಲ್ಲಿ ನೀರನ್ನು ತಂದುಕೊಂಡಳು.

ಲಲಿತಾಂಗಿಯು ತನಗಾಗಿ ಕಂಬನಿಗರೆದಿದ್ದ ಪಕ್ಷದಲ್ಲಿ ವಿಷಯಲಂಪಟನು ಮನ

ಗರಗಿ ಅವಳನ್ನು ಸಮಾಧಾನಗೊಳಿಸಲು ಪ್ರಯತ್ನಪಡುತ್ತ ಅವಳಿಗಾಗಿ ತನ್ನ ಪ್ರಾಣವನ್ನು ಅರ್ಪಿಸುವುದಕ್ಕೂ ಸಿದ್ಧನಾಗುತ್ತಿದ್ದನು. ಈಗ ಅವಳು ಮತ್ತೊಬ್ಬನನ್ನು ಕುರಿತು ಹಂಬಲಿಸುತಿದ್ದುದರಿಂದ ಅವನ ಮನಸ್ಸು ಕರಗದೆ ಕೋಪವು ಉಕ್ಕಿಬಂದು ಕಣ್ಣುಗಳು ಕೆಂಪೇರಿದುವು. ಕುರ್ಚಿಯಿಂದ ಅವನು ಎದ್ದು ತಲೆಯನ್ನು ತಗ್ಗಿಸಿಕೊಂಡು ಸ್ವಲ್ಪಕಾಲ ಶತಪಥವಂ ಮಾಡುತ್ತ ತಟ್ಟನೆ ಲಲಿತಾಂಗಿಯ ಇದಿರಿನಲ್ಲಿ ನಿಂತು, ಅವಳ ಮುಖವಂ ನೋಡಿ ಕಡೆಗೆ ನಿನ್ನ ಅಭಿಪ್ರಾಯವೇನು, ಹೇಳಿಬಿಡು ಎಂದನು.

ಧರ್ಮದೇವನೇ ನನ್ನ ಪತಿಯು; ಉಳಿದವರು ಸೋದರರು.

ನಿನಗೆ ಅವನಲ್ಲಿಯೇ ಅನುರಾಗವೋ?—ಅಹುದು.

ಆ ಮಾತನ್ನು ಕೇಳುತ್ತಲೇ ವಿಷಯಲಂಪಟನು ತಲೆಯನ್ನು ಬಾಗಿಸಿ ನಿಟ್ಟುಸಿರಂ ಬಿಟ್ಟು ಹಲ್ಲನ್ನು ಕಡಿಯುತ್ತ, ಒಂದು ವೇಳೆ ಅವನು ಸತ್ತಿದ್ದರೋ? ಎಂದು ಕೇಳಲು, ಅವನು ಸತ್ತ ಸುದ್ದಿಯನ್ನು ಕೇಳಿದ ಕೂಡಲೇ ಈ ಸಮುದ್ರತೀರದಲ್ಲಿರುವ ಉನ್ನತವಾದ ಶಿಲೆಯ ಮೇಗಣಿಂದ ಸಮುದ್ರಕ್ಕೆ ದುಮ್ಮಿಕ್ಕಿ ಪ್ರಾಣವನ್ನು ಬಿಡುವೆನು ಎಂದಳು.

"ಅವನು ನಿನ್ನನ್ನು ಮರೆತು ಮತ್ತಾವಳನ್ನಾದರೂ— "

ಈ ಮಾತು ಮುಗಿವುದರೊಳಗಾಗಿಯೇ ಲಲಿತಾಂಗಿ! ಲಲಿತಾಂಗಿ! ಬಾಗಿಲ ತೆಗೆ, ನಾನು ನಾನು, ಎಂದು ಯಾರೋ ಬಾಗಿಲನ್ನು ತಟ್ಟಿದರು. ಆ ಸದ್ದನ್ನು ಕೇಳಿದ ಕೂಡಲೇ ಅವಳ ಮೈಯೆಲ್ಲವೂ ರೋಮಾಂಚಿತವಾಯಿತು. ನಗೆಮೊಗದಿಂದ ಆಕೆಯು ವಿಷಯಲಂಪಟನನ್ನು ನೋಡಿ ಇಗೋ, ಅವನು ನನ್ನನ್ನು ಮರೆತಿಲ್ಲ ಕಂಡೆಯಾ ಎಂದು ಹೇಳಿ, ಬಾಗಿಲನ್ನು ತೆಗೆದಳು. ಕಾಳಸರ್ಪನ ಶಬ್ದವಂ ಕೇಳಿದ ಮನುಷ್ಯನು ಹೇಗೆ ದೂರಕ್ಕೆ ಓಡುವನೋ ಆರೀತಿ ಧರ್ಮದೇವನ ಧ್ವನಿಯಂ ಕೇಳಿ ವಿಷಯಲಂಪಟನು ಕುಳಿತಿದ್ದ ಕುರ್ಚಿಯಿಂದೆದ್ದು ಕತ್ತಲಾಗಿದ್ದ ಮೂಲೆಯ ಮಂಚದ ಮೇಲೆ ಬಿದ್ದು ಕೊಂಡನು.

ಧರ್ಮದೇವನೂ ಲಲಿತಾಂಗಿಯೂ ಒಬ್ಬರನ್ನೊಬ್ಬರು ನೋಡಿದರು. ಸಂತೋಷಾತಿಶಯದಿಂದ ಮಾತು ಹೊರಡದೆ ಇಬ್ಬರೂ ಕೆಲವು ಕಾಲ ಸ್ತಂಭೀಭೂತರಾಗಿದ್ದು, ಅನಂತರ ಗದ್ಗದಸ್ವರದಿಂದ ಕೂಡಿ ಮಾತುಗಳನ್ನು ಆಡಿದರು. ಅವುಗಳ ಅಭಿಪ್ರಾಯವು ಅವರಿಗೇ ಗೊತ್ತು. ಸ್ವಲ್ಪ ಹೊತ್ತಾದ ಮೇಲೆ ಧರ್ಮದೇವನು ವಿಷಯಲಂಪಟನನ್ನು

ಹರಾತ್ತಾಗಿ ನೋಡಿದನು ದುಃಖಸಮುದ್ರದಲ್ಲಿ ದ್ವೇಷಾಸೂಯೆಗಳೆಂಬ ಅಲೆಗಳಿಂದ ಸುತ್ತಲ್ಪಟ್ಟು ಮೂಲೆಯ ಮಂಚದ ಮೇಲೆ ಬಿದ್ದಿದ್ದ ವಿಷಯಲಂಪಟನು ಧರ್ಮದೇವನ ಮುಖವಂ ನೋಡುತ್ತ ತನ್ನ ನಡುಕಟ್ಟಿನ ಕರಾರಿಗೆ ಕೈಯಿಕ್ಕಿದನು

ಓಹೋ! ಇಲ್ಲಿ ನಾವಿಬ್ಬರೇ ಇರುವೆವೆಂದಿದ್ದೆ. ಮತ್ತೊಬ್ಬರು ಇರುವರೆಂದು ತಿಳಿದಿರಲಿಲ್ಲ. ಆ ಮೂಲೆಯಲ್ಲಿರುವವರಾರು? ಎಂದು ಕೇಳಲು, ಅತನು ನನ್ನ ಸ್ನೇಹಿತನು, ಸಹೋದರನು: ನಿಮಗೂ ಆಪ್ತನಾದನನು. ಈ ಲೋಕದಲ್ಲಿ ನನಗೆ ನೀವೊಬ್ಬ ಆಪ್ತರು: ನಿಮ್ಮನ್ನು ಬಿಟ್ಟರೆ ಇವನೊಬ್ಬ. ಇವನ ಹೆಸರು ವಿಷಯಲಂಪಟನು ಎಂದು ಲಲಿತಾಂಗಿಯು ಉತ್ತರವನ್ನಿತ್ತಳು

ಹಾಗೋ! ಎಂದು ಧರ್ಮದೇವನು ಲಲಿತಾಂಗಿಯ ಕೈಯನ್ನು ಹಿಡಿದುಕೊಂಡು ಅವನಿದ್ದೆಡೆಗೆ ಹೋಗಿ ಅಭಿವಂದಿಸಿದನು. ವಿಷಯಲಂಪಟನು ಆ ಆದರವನ್ನಂಗೀಕರಿಸದೆ ಕೋಪಾವೇಶದಿಂದ ದುರುದುರನೆ ಧರ್ಮದೇವನ ಮುಖವನ್ನು ನೋಡುತ್ತಲಿದ್ದನು. ಅದನ್ನು ನೋಡಿ ಲಲಿತಾಂಗಿಯು ಕಳವಳಗೊಂಡಳು. ಈ ಅವಸ್ಥೆಯಂ ಕಂಡು ಧರ್ಮದೇವನು ಲಲಿತಾಂಗಿಯನ್ನು ನೋಡಿ, ನಾನು ನಿನ್ನನ್ನು ನೋಡುವುದಕ್ಕೆ ಬರುವಾಗ ಇಲ್ಲಿ ನನಗೆ ಒಬ್ಬ ಹಗೆಯಿರುವನೆಂದು ಅರಿತಿರಲಿಲ್ಲವೆಂದನು.

ನನ್ನ ಮನೆಯಲ್ಲಿಯೂ ನಿನಗೆ ಹಗೆಯೊಬ್ಬನುಂಟೆ? ನಿನ್ನ ಸಂಗಡಲೇ ಬರುತ್ತೇನೆ ನಡೆಯಿರೆಂದು ಹೇಳಿ ವಿಷಯಲಂಪಟನ ಕೋಪಾತೋಪವನ್ನು ಕಂಡು ತನ್ನ ಪ್ರಾಣ ಕಾಂತನಿಗೆ ಏನಾದರೂ ಅಪಾಯವು ಉಂಟಾದೀತೆಂಬ ಭೀತಿಯಿಂದ ಧರ್ಮದೇವನನ್ನು ಕುರಿತು, ನಾಥ ನಿಮಗೇನಾದರೂ ಅಪಾಯವುಂಟಾದರೆ ನಾನು ಸಮುದ್ರದಲ್ಲಿ ಬಿದ್ದು ಪ್ರಾಣವಂ ಕಳೆದುಕೊಳ್ಳುವೆನು ಎಂದಳು. ಆ ಮಾತನ್ನು ಕೇಳಿ ವಿಷಯಲಂಪಟನ ಮುಖವು ಕಳೆಗುಂದಿತು. ಬಳಿಕ ಲಲಿತಾಂಗಿಯು ಇಲ್ಲಿ ನಿನಗಾರೂ ಹಗೆಗಳಿಲ್ಲ; ಈತನು ಗೆಳೆಯನು: ನನ್ನ ಸೋದರನು. ನೀವು ಆದರದಿಂದ ಅಭಿವಂದಿಸಿದುದನ್ನು ಇವನು ಆನಂದದಿಂದ ಸ್ವೀಕರಿಸುವನು ಎಂದು ವಿಷಯಲಂಪಟನ ಮೇಲೆ ತನ್ನ ಸೋಟವನ್ನು ಸುಳಿಸಲು ಒಡನೆಯೇ ಧರ್ಮದೇವನ ಮೇಲೆ ಅವನಿಗೆ ಉಂಟಾಗಿದ್ದ ಕೋಪವು ತಿಲೆಯು ನೀರಿನ ಮೇಲೆ ಬಿದ್ದ ತಿಲೆಯು ಛಿನ್ನಭಿನ್ನವಾಗಿ ಹೋಗುವಂತೆ ಛಿನ್ನಭಿನ್ನವಾಗಿ ಹೋಯಿತು ಬಳಿಕವನು ನುಂಗಲುಂಡೆದ್ದು ಧರ್ಮದೇವನಿಗೆ ಪ್ರತಿಯಾಗಿ ಪಂಡಿನೆ

ಮಾಡುವುದಕ್ಕಾಗಿ ಬಂದು ಸರ್ವದಷ್ಟನಾದವನಂತೆ ಕೂಡಲೆ ಆ ಸ್ಥಳವಂ ಬಿಟ್ಟು ಬೀದಿಗೆ ಬಂದು, ಅಯ್ಯೋ! ಅಯ್ಯೋ! ಈತನಿಂದ ನನ್ನನ್ನು ಉದ್ಧರಿಸುವರಾರೂ ಇಲ್ಲವೇ? ಎಂದು ಕೂಗಿಕೊಂಡು ಓಡಿಹೋಗುತ್ತ ಸತ್ರದ ತೋಪಿನಲ್ಲಿದ್ದ ಕದರ್ಥಕನನ್ನೂ ದುರ್ಮತಿಯನ್ನೂ ಕಂಡು ನಿಂತನು. ಅವನು ಹಾಗೆ ನಿಂತುದನ್ನು ಕಂಡು ಕದರ್ಥನು ಏನಯ್ಯಾ, ನಿನಗೇಕೆ ಇಷ್ಟು ಆತುರ? ಗೆಳೆಯರನ್ನು ಕಂಡು ಅವರೊಡನೆ ಮಾತನಾಡದಿರಬಹುದೋ! ಹೀಗೆ ಹುಚ್ಚನಂತೆ ಓಡಿಹೋಗಬಹುದೇ? ಇಲ್ಲಿ ಬಂದು ಸ್ವಲ್ಪ ಕುಳಿತುಕೋ ಎಂದು ಕೂಗಿದನು.

ವಿಷಯಲಂಪಟನು ಪಿತ್ತಹತ್ತಿದವನಂತೆ ಅವರಿಬ್ಬರ ಮುಖವಂ ನೋಡುತ್ತ ನಿಂತುಕೊಂಡನು. ಆಗ ದುರ್ಮತಿಯು ಕದರ್ಥಕನನ್ನು ಚುಚ್ಚಿ ಈತನಿಗೆ ಅಮಲು ಏರಿದಂತಿದೆ. ನಮ್ಮ ಪೌರ್ಭಾಗ್ಯಕ್ಕೆ ಸರಿಯಾಗಿ ಧರ್ಮದೇವನಿಗೆ ಎಲ್ಲಾ ಕಡೆಯಲ್ಲಿಯೂ ಅನುಕೂಲವಾಗುವ ಹಾಗೆ ಕಾಣಬರುತ್ತದೆ. ಇವನು ಹೀಗೆ ಹುಚ್ಚನಂತೆ ಆಡುವುದಕ್ಕೆ ಕಾರಣವೇನು, ವಿಚಾರಿಸಿ ತಿಳಿದುಕೊಳ್ಳೋಣವೆಂದನು.

ಕದರ್ಥಕನು ವಿಷಯಲಂಪಟನನ್ನು ನೋಡಿ ಏನಯ್ಯಾ! ಇಲ್ಲಿಗೆ ಬಂದು ಕುಳಿತುಕೊಳ್ಳುವುದಕ್ಕೆ ಇನ್ನೂ ನಿನಗೆ ಮನಸ್ಸು ಬಾರದೋ ಎನ್ನಲು, ಅವನು ತನ್ನ ಮುಖದಿಂದ ಸುರಿಯುತ್ತಲಿದ್ದ ಬೆವರನ್ನೊರಸಿಕೊಂಡು ಮೆಲ್ಲನೆ ಆ ತೋಪಿಗೆ ಬಂದು ಒಂದು ಕುರ್ಚಿಯಲ್ಲಿ ಕುಳಿತನು. ಅವನ ಕೋಪವು ಬೀಸುತಲಿದ್ದ ತಂಗಾಳಿಯಿಂದ ಸ್ವಲ್ಪ ತಗ್ಗಿತು. ಅನಂತರ ಅವನು ಇವರಿಬ್ಬರನ್ನು ನೋಡಿ ನೀವು ನನ್ನನ್ನು ಏಕೆ ಕೂಗಿದಿರಿ ಎಂದು ಕೇಳುತ್ತಾ ಮುಂಗಡೆಯಿದ್ದ ಮೇಜಿನಮೇಲೆ ಮೊಳಕೈಗಳನ್ನೂರಿ ಎರಡು ಕೈಗಳನ್ನೂ ತಲೆಯಮೇಲೆ ಇಟ್ಟುಕೊಂಡನು.

ನೀನು ಹುಚ್ಚನ ಹಾಗೆ ಕಣ್ಣುಕಾಣದೆ ಓಡಿಹೋಗಿ ಸಮುದ್ರದಲ್ಲಿ ಬಿದ್ದು ಪ್ರಾಣ ಬಿಡುವುದಕ್ಕಿಂತ ಇಲ್ಲಿಗೆ ಬಂದು ಉಲ್ಲಾಸಕರವಾದ ಈ ಮಧುವನ್ನು ಪಾನಮಾಡಿ ನೆಮ್ಮದಿಯಾಗಿರಲೆಂದು ಕರೆದೆವು ಎಂದು ದುರ್ಮತಿಯು ಹೇಳಿದನು. ಆಗ ಕದರ್ಥಕನು ನಿನ್ನ ಸ್ಥಿತಿಯನ್ನು ನೋಡಿದರೆ ಆವಳೋ ಯುವತಿಯಿಂದ ಧಿಕ್ಕೃತನಾದವನಂತೆ ತೋರುತ್ತದೆ ಎಂದನು. ಇದಕ್ಕೆ ದುರ್ಮತಿಯು, ಅವನನ್ನು ಏಕೆ ಹಾಸ್ಯಮಾಡುತ್ತೀಯೆ! ವೇಶ್ಯಾ ಅವನಿಗೆ ಅತರುಣಿಯಲ್ಲಿ ಅವ್ಯಾಜ ಪ್ರೀತಿಯಿರಲಾರದು. ಹಾಗಿದ್ದಿದ್ದರೆ

ಅವನು ನಿಮಿಷಮಾತ್ರದಲ್ಲಿ ಹಗೆಯನ್ನು ಕೊಂದು ಅವಳನ್ನು ತನ್ನ ಕೈವಶಮಾಡಿ ಕೊಳ್ಳುತ್ತಿದ್ದನು ಎನಲು, ಕದರ್ಥಕನು ವಿನಯ್ಯಾ ವಿಷಯಲಂಪಟನೆ, ನಾವು ನಿನ್ನ ಯೋಗಕ್ಷೇಮವನ್ನು ಕುರಿತು ಮಾತನಾಡುತ್ತಲಿರುವಾಗ ನೀನು ತಲೆಯೆತ್ತಿಕೂಡ ನೋಡದಿರುವೆಯಲ್ಲ! ಸ್ವಸ್ಥವಾಗಿರುವೆಯೋ ಇಲ್ಲವೋ? ಎಂದು ಕೇಳಿದನು.

ನನಗೇನೂ ದೇಹದಲ್ಲಿ ಆಲಸ್ಯವಿಲ್ಲ, ಮನಸ್ಸಿನಲ್ಲಿ ದಾರುಣವಾದ ತಾಪವೊಂ ದುಂಟಾಗಿದೆ ಎಂದು ವಿಷಯಲಂಪಟನು ಹೇಳಿದನು. ಕೂಡಲೇ ಕದರ್ಥಕನು ಎಲಾ ದುರ್ಮತಿ, ಇವನ ಸಮಾಚಾರವು ಈಗ ನನಗೆ ಗೊತ್ತಾಯಿತು. ಇವನು ಲಲಿತಾಂಗಿಯನ್ನು ಪ್ರೀತಿಸುತ್ತಲಿದ್ದನು: ಜಯಲಕ್ಷ್ಮಿಯೆಂಬ ನಾಕವು ಇಲ್ಲಿಗೆ ಬಂದುದ ರಿಂದ ಅವಳು ಇವನನ್ನು ತಿರಸ್ಕರಿಸಿಬಿಟ್ಟಳು ಎಂದನು.

ತನ್ನ ಕೋಪವನ್ನು ಹೇಗೆ ತೀರಿಸಿಕೊಳ್ಳೋಣವೆಂದಿದ್ದ ವಿಷಯಲಂಪಟನು ಕದರ್ಥಕನನ್ನು ದುರದುರನೆ ನೋಡಿ ಲಲಿತಾಂಗಿಯು ಸ್ವತಂತ್ರಳು, ಇಷ್ಟಬಂದವ ರನ್ನು ಮದುವೆಯಾಗುತ್ತಾಳೆ; ಅದರ ಚಿಂತೆ ನಿನಗೇಕೆ ಎಂದನು. ದುರ್ಮ ತಿಯು ಎಲಾ ಕದರ್ಥಕ! ನಾನು ಆಗಲೇ ಹೇಳಲಿಲ್ಲವೇ? ಈತನಿಗೆ ಅವಳಲ್ಲಿ ಪ್ರೀತಿ ಯಿಲ್ಲ; ಅವಳನ್ನು ಮದುವೆಯಾಗುವ ಅಭಿಪ್ರಾಯವೂ ಇಲ್ಲ. ಈ ಜನರು ತಮ್ಮ ಆಸೆಗಳನ್ನು ಭಂಗಪಡಿಸಲು ಆರಾದರೂ ಉದ್ಯುಕ್ತರಾದರೆ ಅವರನ್ನು ಜೀವಸಹಿತ ಬಿಡುವರಲ್ಲ; ಇವನು ಅಂಧವನಲ್ಲವೆಂದು ತೋರುತ್ತದೆಯೆಂದನು. ಅದನ್ನು ಕೇಳಿ ಕದರ್ಥಕನು ಅದು ಸರಿ. ನಮಗೇಕೆ ಈ ಚಿಂತೆ. ಲಲಿತಾಂಗಿಯು ಧರ್ಮದೇವನನ್ನು ಮದುವೆಯಾಗುತ್ತಾಳೆಂದು ಕೇಳಿದ್ದೆನು. ವಿಷಯಲಂಪಟ, ಮದುವೆಯೆಂದಾಗುವುದು ಬಲ್ಲೆಯೋ ಎಂದು ಕೇಳಿದನು. ಅದಕ್ಕೆ ವಿಷಯಲಂಪಟನು ಇವರ ಮೇಲೆ ತನ್ನ ಕೋಪವನ್ನು ತೋರಿಸಿ ಪ್ರಯೋಜನವಿಲ್ಲವೆಂದು ತಿಳಿದು ಇನ್ನೂ ಗೊತ್ತಾಗಿಲ್ಲವೆಂದನು.

ಇಷ್ಟು ಹೊತ್ತಿಗೆ ಕದರ್ಥಕನು ಮಧುವಾನದ ದೆಸೆಯಿಂದ ಸ್ವಲ್ಪ ಮತ್ತನಾದನು. ಆಗ ಅವನ ಅಸೂಯಾಗುಣವು ತಗ್ಗಿ ಸಾತ್ವಿಕಗುಣವು ತಲೆಯೆತ್ತಿತು. ದುರ್ಮತಿ ಯನ್ನು ನೋಡಿ, ಧರ್ಮದೇವನು ಜಯಲಕ್ಷ್ಮಿಯ ಅಧಿಪತಿಯಾದರೆ ಕೆಲವರಿಗೆ ಮನಃ ಕ್ಲೇಶವಾಗುವುದಿಲ್ಲವೇ ಎಂದನು.

ಆ ಮಾತನ್ನು ಕೇಳಿ ದುರ್ಮತಿಯು ಇವನಿಗೆ ಬುದ್ಧಿವಿಕಾರವಾಗಿದೆ ; ಇದು ಅಪಾಯಕರವೆಂದು ಯೋಚಿಸಿ ಅವನಿಗೆ ಮತ್ತಷ್ಟು ಮದ್ಯಪಾನವನ್ನು ಮಾಡಿಸಿದನು. ಪಾನವಂ ಮಾಡುತ್ತ ಮಾಡುತ್ತ ಕದರ್ಥಕನಿಗೆ ಸತ್ವಗುಣವು ಹೆಚ್ಚಾಗಿ ತಲೆಯೆತ್ತುತ್ತ ಧರ್ಮದೇವನು ನೌಕಾಧಿಪತಿಯೂ ಆಗುವನು, ಲಲಿತಾಂಗಿಯನ್ನು ಮದುವೆಯೂ ಆಗುವನು ಎಂದು ಗಟ್ಟಿಯಾಗಿ ಕೂಗಿಕೊಂಡನು.

ಅದನ್ನು ಕೇಳುತ್ತ ದುರ್ಮತಿಯು ಕದರ್ಥಕನಿಗೆ ಮತ್ತೊಂದು ಸಾರಿ ಪಾನವನ್ನು ಮಾಡಿಸಿದನು

ಈ ಸಮಯಕ್ಕೆ ಸರಿಯಾಗಿ ಧರ್ಮದೇವನೂ ಲಲಿತಾಂಗಿಯೂ ಒಬ್ಬರ ಕೈಯನ್ನು ಒಬ್ಬರು ಪಿಡಿದುಕೊಂಡು ಆ ಹಾದಿಯಲ್ಲಿ ಬರುತಲಿದ್ದರು ಅವರು ಸಮೀಪಕ್ಕೆ ಬಂದ ಕೂಡಲೆ ಕದರ್ಥಕನು ಏಲ್ಯೆ ವಿಷಯಲಂಪಟ! ಅಗೋ ನೋಡು, ನನ್ನ ಕಣ್ಣುಗಳು ಮಂಕಾಗಿವೆ : ಅದರೂ ನಾಯಕನಾಯಿಕೆಯರಿಬ್ಬರೂ ಕೈ ಪಿಡಿದುಕೊಂಡು ಇತ್ತ ಕಡೆ ಬರುತ್ತಿದ್ದಾರೆಯೆಂದನು ಅದನ್ನು ಕೇಳುತ್ತಲೆ ವಿಷಯಲಂಪಟನ ಎದೆಯಲ್ಲಿ ಶೂಲವನ್ನು ನಟ್ಟಂತಾಯಿತು. ಆಗ ದುರ್ಮತಿಯು ವಿಷಯಲಂಪಟನನ್ನು ನೋಡಿ ಇವರಾರು ಬಲ್ಲೆಯೋ? ಎಂದನು. ಅದಕ್ಕೆ ಅವನು ಸಂಕಟದೊಂದಿಗೆ ಬಲ್ಲೆನೆಂದು ಬದಲು ಹೇಳಿದನು.

ಈ ವೇಳೆಗೆ ಲಲಿತಾಂಗಿಯೂ ಧರ್ಮದೇವನೂ ಇವರಿದ್ದೆಡೆಗೆ ಬಂದರು ಕದರ್ಥಕನು ಧರ್ಮದೇವ, ನಿನಗೆ ಶುಭವಾಗಲಿ. ನೀನು ಕೈ ಪಿಡಿದಿರುವ ಯುವತಿಯು ಬಹು ಸುಂದರಿ. ನಿನ್ನಿಬ್ಬರಿಗೂ ಮದುವೆ ಯಾವಾಗ? ವಿಷಯಲಂಪಟನನ್ನು ಕೇಳಿದರೆ ಅವನು ಹೇಳುವುದಿಲ್ಲ ಇತ್ತ ಬನ್ನಿರಿ ಎಂದು ಅವರ ಇದಿರಿಗೆ ಹೊರಟನು. ಆಗ ದುರ್ಮತಿಯು ಅವನನ್ನು ಎಳೆದು ಕುರ್ಚಿಯಲ್ಲಿ ಕುಳ್ಳಿರಿಸಿ ಎಲಾ, ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ. ಅವರಿಬ್ಬರೂ ಅತ್ಯನಂದದಲ್ಲಿರುವರು, ಅವರನ್ನು ನೀನು ಏತಕ್ಕೆ ತೊಂದರೆ ಮಾಡುತ್ತೀಯೆ, ವಿಷಯಲಂಪಟನು ಗಂಭೀರವಾಗಿಲ್ಲವೇ? ನೀನೂ ಏಕೆ ಇರಬಾರದು ಎಂದನು.

ವಿಷಯಲಂಪಟನು ಕೋಪದಿಂದ ಪೂರ್ಣನಾಗಿ ದುರ್ಮತಿಯ ಮಾತುಗಳೆಂಬ ಶಲಾಕೆಗಳಿಂದ ತುಚ್ಛೀಕರಿಸಲ್ಪಟ್ಟು ತನ್ನ ಹಗೆಯಾದ ಧರ್ಮದೇವನನ್ನು ಕೊಲ್ಲಬೇಕೆಂದು

ಎದ್ದನು. ಅಷ್ಟರಲ್ಲಿಯೇ ಲಲಿತಾಂಗಿಯ ಮಾತನ್ನು ಚ್ಲಾಪಿಸಿಕೊಂಡು ಮರಳಿ ಕುರ್ಚಿಯಲ್ಲಿ ಕುಳಿತನು.

ಇದನ್ನು ನೋಡುತ್ತಲಿದ್ದ ದುರ್ಮತಿಯು ಕದರ್ಥಕನು ! ಕುಡುಕನು; ವಿಷಯಲಂಪಟನು ಹೇಡಿ. ಈ ಇಬ್ಬರು ಮುಟ್ಠಾಳರಿಂದಲೂ ನನ್ನ ಕೆಲಸವಾಗದು. ಧರ್ಮದೇವನ ಅದೃಷ್ಟವು ಬಲವಾಗಿರುವಂತೆ ತೋರುತ್ತಲಿದೆ. ಇದಕ್ಕೆ ಬೇರೆ ಉಪಾಯವನ್ನು ಮಾಡಬೇಕೆಂದು ತನ್ನೊಳು ತಾನೇ ಹೇಳಿಕೊಂಡನು.

ಅಷ್ಟು ಹೊತ್ತಿಗೆ ಲಲಿತಾಂಗಿಯೂ ಧರ್ಮದೇವನೂ ಸತ್ರದ ಮುಂಗಡೆಗೆ ಒಂದರು ಕದರ್ಥಕನು ಸ್ವಲ್ಪ ಎಚ್ಚತ್ತು ಧರ್ಮದೇವ ! ನಿನಗೆ ಶುಭವಾಗಲಿ, ಮದುವೆಯಾವಾಗ ? ನನ್ನನ್ನು ಮರೆಯುಬೇಡವಸ್ಟೆ ಎಂದನು

ನಾಳೆ ಮದುವೆಯು ನಡೆಯುವುದು. ಈದಿನ ಅದಕ್ಕೆ ಬೇಕಾದ ಪದಾರ್ಥಗಳನ್ನು ಸೇರಿಸಿಕೊಳ್ಳುತ್ತೇನೆ. ನೀನೆಲ್ಲರೂ ಮದುವೆಗೆ ಅಗತ್ಯವಾಗಿ ಬರಬೇಕು ಎಂದನು. ಇದನ್ನು ಕೇಳಿ ಕದರ್ಥಕನು, ವಿಷಯಲಂಪಟ, ಧರ್ಮದೇವನು ನಿನ್ನನ್ನು ಮದುವೆಗೆ ಕರೆಯುತ್ತಾನೆ ಎಂದು ಹೇಳಿದನು.

ನನ್ನ ಹೆಂಡತಿಯು ಸಹೋದರನು ನನಗೂ ಸಹೋದರನೇ , ಅವನನ್ನು ಮುಖ್ಯವಾಗಿ ಕರೆಯಬೇಕಲ್ಲವೆ ? ಎಂದು ಧರ್ಮದೇವನೆನ್ನಲು ವಿಷಯಲಂಪಟನು ಬದಲು ಹೇಳಬೇಕೆಂದು ಬಾಯಿ ತೆರೆದನು ಮಾತೇ ಹೊರಡಲಿಲ್ಲ.

ದುರ್ಮತಿಯು ಧರ್ಮದೇವನನ್ನು ನೋಡಿ ಇದೇನು ಇಷ್ಟು ಅತುರ ? ಈದಿನ ಏರ್ಪಾಡು, ನಾಳೆ ಮದುವೆ ; ಜಯಲಕ್ಷ್ಮಿಯು ಪ್ರಯಾಣ ಹೊರಡುವುದಕ್ಕೆ ಇನ್ನೂ ಮೂರು ತಿಂಗಳು ಬೇಕಲ್ಲವೆ ಎನ್ನಲು, 'ಶುಭಸ್ಯ ಶೀಘ್ರಂ' ಎಂಬಂತೆ ಶುಭಕಾರ್ಯಗಳು ಬೇಗ ನಡೆದರೆ ಅನುಕೂಲ ; ಇದೂ ಅಲ್ಲದೆ ಮದುವೆಯಾದ ಮೇಲೆ ನಾನು ಅಮರಪುರಕ್ಕೆ ಬೇಗ ಹೋಗಬೇಕಾಗಿದೆ

ಅಮರಪುರಕ್ಕೋ ?—ಹೂಂ.

ಏತಕ್ಕೆ ?—ನೌಕಾಧಿಪನು ಹೇಳಿದ್ದ ಕೆಲಸಕ್ಕೆ.

ಗೊತ್ತಾಯಿತು ಎಂದು ಗಟ್ಟಿಯಾಗಿ ಹೇಳಿ, ಆ ಪತ್ರವನ್ನು ಕೊಡುವುದಕ್ಕೆ ಹೋಗುತ್ತಾನೆ ಒಳಗೆ ಸುಳಿವು ಸಿಕ್ಕಿತು. ಇನ್ನು ಇವನು ನೌಕಾಧಿಪತಿಯಾಗುವು

ದನ್ನು ನಾನು ನೋಡುತ್ತೇನೆ ಎಂದುಕೊಂಡು ದುರ್ಮತಿಯೂ ಆಗಬಹುದು, ಸಂತೋಷ ಎಂದನು.

ಲಲಿತಾಂಗಿಯೂ ಧರ್ಮದೇವನೂ ಅಲ್ಲಿಂದ ಮುಂದೆ ಪಟ್ಟಣದ ಕಡೆಗೆ ಹೊರಟು ಹೋದರು.

ನಾಲ್ಕನೆಯ ಅಧ್ಯಾಯ

ಒಳಸಂಚು

ನಾಯಕನಾಯಿಕೆಯರು ಅತ್ಯಾನಂದದಿಂದ ಪಟ್ಟಣದ ದಾರಿಯಂ ಹಿಡಿದು ಹೋಗುತ್ತಿರಲು, ಇತ್ತ ದುರ್ಮತಿಯು ಕದರ್ಥಕನು ಜ್ಞಾನಶೂನ್ಯನಾಗಿ ಬಿದ್ದಿರುವು ದನ್ನು ಕಂಡು, ಈ ಮದುವೆಯ ವಿಚಾರದಲ್ಲಿ ವಿಷಯಲಂಪಟನ ಅಭಿಪ್ರಾಯವು ಏನಿರ ಬಹುದು ಅದನ್ನು ತಿಳಿದುಕೊಳ್ಳಬೇಕೆಂದು ಯೋಚಿಸಿ, ಎಲೈ ವಿಷಯಲಂಪಟನೆ! ಈ ಮದುವೆಯು ಅನೇಕರ ದುಃಖಕ್ಕೆ ಕಾರಣವೆಂದು ತೋರುತ್ತದೆಯೆಂದನು.

ಅದು ನನ್ನ ಆಶಾಭಂಗವಂ ಮಾಡಿ ನನಗೆ ಸಂಪೂರ್ಣವಾದ ದುಃಖವನ್ನುಂಟು ಮಾಡುತ್ತಲಿದೆ.

ನೀನು ಲಲಿತಾಂಗಿಯನ್ನು ಪ್ರೀತಿಸುವೆಯೋ?—ನನ್ನ ಪ್ರಾಣವೇ ಅವಳು.

ಹಾಗಾದರೆ ನೀನೇಕೆ ಹೀಗೆ ತಲೆಯ ಮೇಲೆ ಕೈಯಿಟ್ಟುಕೊಂಡು ಸುಮ್ಮ ನಿರುವೆ?—ಮತ್ತೇನ ಮಾಡಲಿ?

ನಾನೇನ ಬಲ್ಲೆ. ನಾನು ಅವಳನ್ನು ಪ್ರೀತಿಸುತಲಿಲ್ಲವಲ್ಲಾ? ಹುಡುಕಿದರೆ ಮಾರ್ಗವು ದೊರಕುವುದಿಲ್ಲವೇ?

ನನಗೊಂದು ಮಾರ್ಗ ಅವಾಗಲೆ ಸಿಕ್ಕಿದೆ — ಅದು ಅವುದು?

ಅವನ ಪ್ರಾಣವನ್ನು ತೆಗೆಯುವುದು. ಆದರೆ ಲಲಿತಾಂಗಿಯು ತನ್ನ ಪ್ರಿಯನಿ ಗೇನಾದರೂ ಅಪಾಯ ಸಂಭವಿಸಿದಲ್ಲಿ ತನ್ನ ಪ್ರಾಣವನ್ನು ಬಿಡುವುದಾಗಿ ಹೇಳಿದ್ದಾಳೆ.

ಹೆಂಗುಸರ ಗುಣವನ್ನು ನೀನರಿಯೆ. ಅವರು ಬಾಯಲ್ಲಿ ಹಾಗೆ ಹೇಳುವರೇ ಹೊರತು ನಿಜವಾಗಿಯೂ ಎಂದಿಗೂ ಪ್ರಾಣವಂ ಬಿಡರು.

ಸಾಮಾನ್ಯವಾದ ಹೆಂಗುಸರು ಹಾಗಿರಬಹುದು; ಆದರೆ ಲಲಿತಾಂಗಿಯ ರೀತಿ ಬೇರೆ; ಅವಳು ಆಡಿದಂತೆ ನಡೆಯುವಳು. ಅವಳು ಪ್ರಾಣವನ್ನು ಬಿಡುವುದಾದರೆ ಅವಳಿಗಿಂತ ಮುಂಚೆ ನಾನು ಪ್ರಾಣವನ್ನು ಬಿಡುವೆನು.

ಇವನು ಜಾತಮೂರ್ಖ. ಅವಳಿದ್ದರೇನು ಸತ್ತರೇನು? ಧರ್ಮದೇವನಿಗೆ ನ್ಯಾಕಾಧಿಪತ್ಯವಾಗದೆ ಇದ್ದರೆ ಸಾಕು ಎಂದು ದುರ್ಮತಿಯು ಮನದೊಳಾಲೋಚಿಸಿಕೊಂಡನು.

ಅನುರಾಗವೆಂದರೆ ಹೀಗಿರಬೇಕು ಎಂದು ಕದರ್ಥಕನು ತೊದಲುತಿದ್ದನು.

ದುರ್ಮತಿಯು ವಿಷಯಲಂಪಟನನ್ನು ನೋಡಿ ನೀನು ಯೋಗ್ಯನಂತೆ ತೋರುತ್ತಿದೆ ಆದುದರಿಂದ ನಿನಗೆ ನಾನು ಸಹಾಯವಂ ಮಾಡಲಿಚ್ಛೆಯುಳ್ಳವನಾಗಿದೇನೆ. ಆದರೆ

ಆದರೆ—ಏನು ಹೇಳು ಎಂದು ಕದರ್ಥಕನೆಂದನು.

ಎಲೈ ಕದರ್ಥಕ! ಈಗ ನಿನಗೆ ಮುಕ್ಕಾಲುಪಾಲು ಜ್ಞಾನ ತಪ್ಪಿ ಹೋಗಿದೆ. ಉಳಿದಿರುವ ಮದ್ಯವನ್ನು ಕುಡಿದು ಮುಗಿಸಿ ಬಿಡು; ಆ ಮೇಲೆ ಸರಿಹೋಗುತ್ತದೆ. ನಾವು ಚರ್ಚಿಸುವ ವಿಷಯದಲ್ಲಿ ಮಧ್ಯೆ ಮಧ್ಯೆ ನೀನು ಬಾಯಿ ಹಾಕುತ್ತಿರಬೇಡ ಎಂದ್ದು ದುರ್ಮತಿಯೆಂದನು.

ನಾನೇನೋ ಜ್ಞಾನವಿಲ್ಲದವನು; ಈಗ ಇರುವ ಪಾತ್ರೆ ಸಣ್ಣದು; ಇಂಥಾದು ನಾಲ್ಕಾದರೂ ಕುಡಿದು ಬಿಡುವ ಶಕ್ತಿಯು ನನಗುಂಟು. ಕೊಡಿಸಿ ನೋಡು.

ದುರ್ಮತಿಯು ಮತ್ತೊಂದು ಪಾತ್ರೆ ಮದ್ಯವನ್ನು ತರಿಸಿಕೊಡಲು ಕದರ್ಥಕನು ಅದರಲ್ಲಿ ಸ್ವಲ್ಪ ಪಾನಮಾಡಿ ಮತ್ತನಾದನು. ದುರ್ಮತಿಯು ಪ್ರಾರಂಭಮಾಡಿದ ಪ್ರಸ್ತಾಪವನ್ನು ಕೇಳಿ ತಿಳಿಯಲು ಅತ್ಯಾಸಕ್ತನಾಗಿ ವಿಷಯಲಂಪಟನು ಅವನನ್ನು ನೋಡಿ ನೀನು ಅವುದನ್ನೋ ಹೇಳುತ್ತಿದ್ದೆಯಲ್ಲಾ! ಎಂದು ಕೇಳಿದನು.

ನಾನು ಅವುದನ್ನು ಹೇಳುತ್ತಲಿದ್ದೆ? ಈ ಕುಡುಕನ ಅವಾಂತರದಲ್ಲಿ ಆ ಮಾತು ಅಲ್ಲಿಗೇ ನಿಂತು ಹೋಯಿತು. ಇವನಿಗೆ ಇನ್ನೂ ಚೆನ್ನಾಗಿ ಅಮಲು ಏರಿಲ್ಲ.

ನನಗೆ ಅಮಲೇರಿತೋ? ಅಹುದಹುದು; ಅಮಲೇರಿತು. ಮದ್ಯಪಾಯಿಗೆ ಅಮಲೇರಿ ಮನಸ್ಸಿನಲ್ಲಿರುವುದು ಬಾಯಿನಲ್ಲಿ ಬರುವುದು. ಆದುದರಿಂದಲೇ ದುರಾಲೋಚನಾಪರರು ಮದ್ಯವೆಂದರೆ ಹೆದರುವರು. ನನಗೆ ಅಂಥಾ ಭಯವಿಲ್ಲ; ಮತ್ತಷ್ಟು

ಕುಡಿಯುತ್ತೇನೆ ನೋಡು ಎಂದು ಕದರ್ಥಕನು ಗಟ್ಟಿಯಾಗಿ ಕೂಗುತ್ತ ಪಾತ್ರೆಯನ್ನು ಬಾಯೊಳಿಟ್ಟು ಅರ್ಧಭಾಗವನು ಕುಡಿದು ಪುನಃ ಮತ್ತನಾಗಿ ಬಿದ್ದನು.

ಬಳಿಕ ವಿಷಯಲಂಪಟನು ದುರ್ಮತಿಯನ್ನು ನೋಡಿ ನೀನು ನನಗೆ ಸಹಾಯವನು ಮಾಡುವುದಾಗಿ ಹೇಳುತಲಿದ್ದೆ. ಅದನ್ನು ಮಾಡುವೆಯೋ ಎಂದು ಕೇಳಿದನು.

ಅವಶ್ಯಕವಾಗಿ ಮಾಡುವೆನು. ಧರ್ಮದೇವನನ್ನು ಕೊಲ್ಲದೆಯೇ ಲಲಿತಾಂಗಿಗೂ ಅವನಿಗೂ ಆಗುವ ಮದುವೆಯನ್ನು ತಪ್ಪಿಸಬಹುದು.

ಅಪ್ಪಾದರೆ ಸಾಕು. ಆದರೆ ಅವರಿಬ್ಬರೂ ಜೀವಿತರಾಗಿರುವವರೆಗೂ ಅವರ ಮದುವೆಯು ತಪ್ಪುವುದಲ್ಲ

ಈ ಮಾತನ್ನು ಕದರ್ಥಕನು ಕೇಳಿ ವಿಷಯಲಂಪಟನೆಲ್ಲೋ ಹುಚ್ಚಪ್ಪ; ದುರ್ಮತಿಯು ಬಹು ಬುದ್ಧಿಮಂತ, ಅಗಾಧವಾದ ಆಲೋಚನೆಯಂ ಮಾಡಬಲ್ಲನು. ಅನ್ಯಾಯವಾಗಿ ಧರ್ಮದೇವನನ್ನು ಏಕೆ ಕೊಲ್ಲುವೆ. ನಾನು ಅದಕ್ಕೆ ಸಮ್ಮತಿಸೆನು ಅವನು ಸಂಪನ್ನನು. ಅವನನ್ನು ನಾನು ಪ್ರೀತಿಸುತ್ತೇನೆ. ದುರ್ಮತೀ! ಇನಸಿಗೆ ಸ್ವಲ್ಪ ಬುದ್ಧಿಹೇಳು ಎಂದು ತಿರಿಗಿ ತೊದಲಿದನು.

ಅದನ್ನು ಕೇಳಿ ವಿಷಯಲಂಪಟನು ಅಲ್ಲಿಂದ ಹೊರಡಲು ಪ್ರಯತ್ನನಾದನು. ಆಗ ದುರ್ಮತಿಯು ಅವನನ್ನು ತಡೆದು ಕದರ್ಥಕನು ಪೂರ್ತಿಯಾಗಿ ಕುಡಿದಿದ್ದರೂ ಅವನಿಗೆ ಇನ್ನೂ ಸ್ವಲ್ಪ ಜ್ಞಾನವಿದೆ ಅವನು ಹೇಳುವುದು ನ್ಯಾಯ ಧರ್ಮದೇವನನ್ನು ಕೊಲ್ಲುವ ಅವಶ್ಯಕವಿಲ್ಲ. ಕಾರಾಗೃಹವೂ ಸ್ಮಶಾನದಂತೆ ಅಲ್ಲಿಗೆ ಹೋದವರನ್ನು ಹಿಂತಿರುಗಿಸದು: ಆದುದರಿಂದ ಅದೂ ನಮ್ಮ ಕೆಲಸಕ್ಕೆ ಅನುಕೂಲವಾಗುವುದು ಎಂದನು.

ಕಾರಾಗೃಹದಿಂದ ಹೊರಗೆ ಬಂದವರನೇಕರನ್ನು ಕಂಡಿರುವೆವು: ಸ್ಮಶಾನದಿಂದ ಹೊರಗೆ ಬಂದವರಾರನ್ನೂ ಕಾಣೆವು ಎಂದು ವಿಷಯಲಂಪಟನು ಹೇಳಲು, ದುರ್ಮತಿಯು ಲಲಿತಾಂಗಿಯು ಮಾತನ್ನು ಮರೆತೆಯೋ ಎಂದನು ಅದನ್ನು ಕೇಳಿ ವಿಷಯಲಂಪಟನು ಕಾರಾಗೃಹವೇ ಸರಿ ಎಂದು ಒಪ್ಪಿಕೊಂಡನು

ಧರ್ಮದೇವನು ಕಳವು, ಕೊಲೆ ಮುಂತಾದ ಅನೇಕ ಕೆಟ್ಟಕೆಲಸಗಳನ್ನೂ ಮಾಡಿದವನಲ್ಲ, ಅವನನ್ನು ಏಕೆ ಸೆರೆಯಲ್ಲಿಡಿಸಬೇಕು? ನೀವು ಅವನನ್ನು ಅನ್ಯಾಯವಾಗಿ

ಇಡಿಸಿದರೆ, ಅವನು ಸೆರೆಯಂ ಬಿಡಿಸಿಕೊಂಡು ಬಂದು ನಿಮಗೆ ಪ್ರತಿಕ್ರಿಯೆಯನ್ನು ಮಾಡ ಹಿಡನು ಎಂದು ಕದರ್ಥಕನು ತನಗಿದ್ದ ಅಲ್ಪಸ್ವಲ್ಪ ಜ್ಞಾನದಿಂದ ಕೂಗಿಕೊಂಡನು. ಆಗ ದುರ್ಮತಿಯು ಏಲೋ, ನೀನು ಬಾಯಿ ಮುಚ್ಚು ಎಂದು ಗದ್ದರಿಸಿಕೊಂಡನು.

ನಾನೇಕೆ ಬಾಯಿ ಮುಚ್ಚಲಿ? ಧರ್ಮದೇವನು ಕಟ್ಟಕೆಲಸವಾವುದನ್ನೂ ಮಾಡುಲ್ಲ ಅವನನ್ನು ಏತಕ್ಕೆ ನಮ್ಮನೆ ಸೆರೆಯಿಲ್ಲಡಬೇಕು. " ಧರ್ಮದೇವ! ನಿನಗೆ ಶುಭವಾಗಲಿ; ಮತ್ತೊಂದು ಸಾರಿ ಮದ್ಯವನ್ನು ಕುಡಿದು ಆನಂದವಡುಸೆನು " ಎಂದು ತೋಳ್ಬಲ್ಲ ತಿರಿಗಿ ಪಾತ್ರೆಯನ್ನು ಕೆಗೆದು ಬಾಯೊಳಟ್ಟಿ ಕುಡಿದನು.

ಕದರ್ಥಕನ ದೃಷ್ಟಿಯು ಶುಂಕಾದುದನ್ನು ಕಂಡು ದುರ್ಮತಿಯು ಇವನಿಗೆ ಪೂರಾ ಏಮಲು ಸಿರಿತೆಂದು ತಿಳಿದು, ನಿಷ್ಪಯೋಜಂಪಟೆ, ಧರ್ಮದೇವನನ್ನು ಕೊಲ್ಲುವ ಅವಶ್ಯಕತೆಯಿಲ್ಲ ನಿನಗೆ ಗೊತ್ತಾಯಿತೋ? ಎಂದನು.

ಕಾರ್ಯಸಾಧನೆಗೆ ದೇರೆ ಯಾವುದಾದರೂ ಉಪಾಯವಿದ್ದರೆ ಅವನನ್ನು ಕೊಲ್ಲ ಬೇಕಾದುದಿಲ್ಲ

ಹುದುಂದರೆ ಉಪಾಯವ ನಿಕ್ಕುದಿರದು. ಈ ಕೆಲಸಕ್ಕೂ ನನಗೂ ಏನು ಸಂಬಂಧ? ನಾನು ಏತಕೆ ಅದಕ್ಕೆ ಕೈಹಾಕಲಿ?

ಈ ಕಾರ್ಯದಲ್ಲಿ ನಿನಗೇನು ಸಂಬಂಧವೋ ನಾನರಿಯೆ; ಆದರೆ ಧರ್ಮದೇವ ನನ್ನು ನೀನು ಒಲುಮೆಯಿಂದ ದ್ವೇಷಿಸುವಂತೆ ತೋರುತ್ತಿದೆ.

ತೋಗೆ?

ಹಗೆಗನು ಹಗೆಗಳ ಮನಸ್ಸನ್ನರಿಯುವುದು ಸುಲಭ. ನಾನು ಧರ್ಮದೇವನನ್ನು ದ್ವೇಷಿಸುತ್ತೇನೆ ಅದಸಲ್ಲಿ ನಿನಗೆ ದ್ವೇಷವಿರುವುದೆಂಬುದು ನನಗೆ ಚೆನ್ನಾಗಿ ಕಂಡು ಬರುವುದು

ಅದನ ನಿಮಯದಲ್ಲಿ ನಿನ್ನಾಗೆ ನನಗೆ ದ್ವೇಷವಿಲ್ಲ ನಿನ್ನ ಸಂಕಟವನ್ನು ಕಂಡು ನಿನಗೆ ಸಹಾಯಮಾಡಲು ಪ್ರಯತ್ನಮಾಡಿದೆ. ನೀನು ಅನ್ಯಥಾ ಭಾವಿಸುವುದಾದರೆ, ಇಗೋ ನಾನು ಹೊರಟೆ ಎಂದೆದ್ದನು.

ಸಿಲ್ಲು ಸಿಲ್ಲು. ನಿನ್ನ ಹಗೆಗೆ ಕಾರಣವಾವುದಾದರೂ ಆಗಲಿ; ನಾನೇನೋ ಅವ ನನ್ನು ಪೂರ್ಣವಾಗಿ ದ್ವೇಷಿಸುತ್ತೇನೆ. ನೀನು ಮಾರ್ಗವನ್ನು ತೋರಿಸಿದರೆ ನಾನು ಕೆಲಸವನ್ನು ಮಾಡಿ ಮುಗಿಸುವೆನು.

ಅವಃಲೇರಿ ಮೇಜಿನ ಮೇಲೆ ತಲೆಹಾಕಿದ್ದ ಕದರ್ಥಕನು ಸ್ವಲ್ಪ ತಲೆಯನ್ನೆತ್ತಿ ಧರ್ಮದೇವನ ಮರಣವನ್ನು ಬಯಸುವವರಾರು? ಅವನು ನನಗೆ ಆಪ್ತನು ಎಂದನು.

ಅವನನ್ನು ಕೊಲ್ಲಬೇಕೆಂದವರಾರು? ಇದು ಹಾಸ್ಯದ ಮಾತು. ಅವನ ಸ್ವಾಸ್ಥ್ಯಕ್ಕೆ ನಾವೆಲ್ಲರೂ ಪಾನಮಾಡಿ ಸಂತೋಷವಾಗಿರೋಣ ಎಂದು ದುರ್ಮತಿಯು ಕದರ್ಥಕನಿಗೆ ಮತ್ತಷ್ಟು ಮದ್ಯವನ್ನು ತರಿಸಿ ಕುಡಿಸಿದನು.

ನೀನು ಇನ್ನೂ ಆವ ಉಪಾಯವನ್ನೂ ಹೇಳಲಿಲ್ಲವಲ್ಲಾ ಎಂದು ವಿಷಯಲಂಪಟನು ದುರ್ಮತಿಯನ್ನು ಕೇಳಿದನು.

ನಿನಗಾವುದೂ ತೋಚುವುದಿಲ್ಲವೋ?

ಇಲ್ಲ. ನೀನು ಉಪಾಯವನ್ನು ಹೇಳುವುದಾಗಿ ಒಪ್ಪಿಕೊಂಡೆಯಲ್ಲವೆ?

ಅಹುದು. ಅನ್ಯದೇಶದವರಿಗಿಂತ ಈ ದೇಶೀಯರೇ ಬುದ್ಧಿವಂತರು. ಅವರು ಯೋಚನೆ ಮಾಡುತ್ತಿರುವಾಗಲೇ, ಇವರು ಕೆಲಸವನ್ನು ಮಾಡಿಬಿಡುವರು. ನನ್ನ ಆಯುಧಗಳು ಕಡ್ಡಿ, ಮಸಿ, ಕಾಗದ. ಅವುಗಳನ್ನು ಬೇಗ ತರಿಸು. ಎಂದು ದುರ್ಮತಿಯು ಹೇಳಲು ಕೂಡಲೇ ವಿಷಯಲಂಪಟನು ಕಾಗದ, ಮಸಿ, ಕಡ್ಡಿಗಳನ್ನು ತೆಗೆದುಕೊಂಡು ಬಾ ಎಂದು ಸತ್ರದ ಆಳಿಗೆ ಹೇಳಿದನು.

ಆಗ, ತಲೆಯೆತ್ತದೆ ಬಿದ್ದಿದ್ದರೂ ಸ್ವಲ್ಪ ಜ್ಞಾನವಿದ್ದುದರಿಂದ ಕದರ್ಥಕನು "ಮನುಷ್ಯರು ದುಷ್ಕರ್ಮಗಳನ್ನು ಮಾಡುವ ಪ್ರಯತ್ನ ಪಟ್ಟರೆ ಎಷ್ಟು ಮನೆಗಳನ್ನು ತಾನೇ ಹಾಳುಮಾಡಲಾರರು? ಕತ್ತಿ, ಕರವಾರಿ, ಈಟಿಗಳಿಗಿಂತಲೂ ಕಾಗದ, ಕಡ್ಡಿ, ಮಸಿಗಳು ಭಯಂಕರವಾದುವು" ಎಂದನು.

ಅದನ್ನು ಕೇಳಿ ದುರ್ಮತಿಯು ಇವನಿಗೆ ಅಮಲು ಇನ್ನೂ ಚೆನ್ನಾಗಿ ಏರಿಲ್ಲ; ಮತ್ತಷ್ಟು ಮದ್ಯವಂ ಕುಡಿಸು ಎಂದು ವಿಷಯಲಂಪಟನಿಗೆ ಹೇಳಲು, ಅವನು ಹಾಗೆಯೇ ಮಾಡಿದನು. ಆಗ ದುರ್ಮತಿಯು ಇನ್ನು ನಾವು ನಮ್ಮ ಕೆಲಸವನ್ನು ನಿರಾತಂಕವಾಗಿ ಮಾಡಬಹುದು ಎಂದನು.

ವಿಷಯಲಂಪಟನೇ ಕೇಳು. ಧರ್ಮದೇವನು ಏಲಾದ್ವೀಪಕ್ಕೆ ಹೋಗಿ ಅಲ್ಲಿರುವ ಚಕ್ರವರ್ತಿಗೆ ಇಲ್ಲಿಯ ರಾಜತಂತ್ರದ ವರ್ತಮಾನಗಳನ್ನು ತಿಳಿಸಿ, ಇಲ್ಲಿರುವ ಚಕ್ರವರ್ತಿಯ ಪಕ್ಷದವನೊಬ್ಬನಿಗೆ ಚಕ್ರವರ್ತಿಯಿಂದ ಒಂದು ಲೇಖನವನ್ನು ತಂದಿರುವನು.

ಇದು ರಾಜದ್ರೋಹಕಾರ್ಯ. ಇದನ್ನು ಸರ್ಕಾರಕ್ಕೆ ತಿಳಿಸಿದರೆ ಅವನನ್ನು ಯಾವಜ್ಜೀವವೂ ಸೆರೆಯಲ್ಲಿಡುವರು. ಸರ್ಕಾರಕ್ಕೆ ಇದನ್ನು ತಿಳಿಸುವವರಾರು?

ಯಾವಜ್ಜೀವವೂ ಇಡುವರೇ? ಹಾಗಾದರೆ ನಾನೇ ಅದನ್ನು ಸರ್ಕಾರಕ್ಕೆ ತಿಳಿಸುತ್ತೇನೆ.

ಅದು ಪ್ರಯೋಜನವಿಲ್ಲ. ನೀನು ತಿಳಿಸಿದೆಯಾಗಲಿ ನಿನ್ನನ್ನೂ ಅವನನ್ನೂ ಎದುರಿಗೆ ನಿಲ್ಲಿಸಿ ವಿಚಾರಣೆ ಮಾಡುವರು. ಅವನ ಮೇಲೆ ಅಪರಾಧವನ್ನು ಹೊರಿಸುವುದಕ್ಕೆ ಸಾಕಾದಷ್ಟು ಸಾಮಗ್ರಿಗಳಿದ್ದರೂ, ನ್ಯಾಯಾಧಿಪನೇನು ಮಾಡುವನೋ? ಒಂದುವೇಳೆ ಧರ್ಮದೇವನನ್ನು ಬಿಟ್ಟು ಬಿಟ್ಟರೂ ಅಥವಾ ಅವನು ಶೀಘ್ರವಾಗಿಯೇ ಸೆರೆಯನ್ನು ಬಿಟ್ಟು ಬಂದರೂ ನಿನ್ನನ್ನು ಹತಮಾಡದೇ ಬಿಡನು.

ಆಗ ನನ್ನ ಕರಾರಿ ಇರುವುದಷ್ಟೆ.

ಲಲಿತಾಂಗಿಯು ಆಮೇಲೆ ನಿನ್ನನ್ನು ಪ್ರೀತಿಸುವಳೋ?

ನಿಜ. ಅದನ್ನು ಮರೆತೆ.

ದುರ್ಮತಿಯು ಆದಕ್ಕೆ ತಕ್ಕ ಉಪಾಯವು ಇದೇ ಎಂದು ತನ್ನ ಎಡಗೈಯಲ್ಲಿ ಲೇಖನಿಯನ್ನು ಪಿಡಿದು ತನ್ನ ಅಕ್ಷರಗಳನ್ನು ಮರೆಸಿ ಈ ತೆರದಿಂ ಬರೆದನು:—

ಮಹಾಸ್ವಾಮಿಯವರ ವಕೀಲರ ಸಮಕ್ಷಮಕ್ಕೆ—

ಸರ್ಕಾರದ ಅಭಿಮಾನಿಯಾದವನೊಬ್ಬನು ವಿನಯಪೂರ್ವಕವಾಗಿ ತಿಳಿಯಪಡಿಸುವುದೇನೆಂದರೆ — ಈ ದಿನ ರಾತ್ರಿಗೆ ಬಂದ ಜಯಲಕ್ಷ್ಮಿಯೆಂಬ ನಾವೆಯಲ್ಲಿ ನೌಕಾಧಿಪತಿಯು ಸಹಾಯಕನಾದ ಧರ್ಮದೇವನೆಂಬುವನು ಏಲಾದ್ವೀಪಕ್ಕೆ ಹೋಗಿ ಆಲ್ಲಿಯ ರಾಕ್ಷಸನಿಗೆ ಒಂದು ಲೇಖನವನ್ನು ಕೊಟ್ಟು, ಮಲಯಪುರದಲ್ಲಿರುವ ಆ ರಾಕ್ಷಸನ ಗೂಢಚಾರನೊಬ್ಬನಿಗೆ ಮತ್ತೊಂದು ಲೇಖನವನ್ನು ತಂದಿರುವನು. ಈ ಲೇಖನವು ಅವನಲ್ಲಿಯೋ, ಅವನ ಮನೆಯಲ್ಲಿಯೋ, ಅಥವ ನಾವೆಯಲ್ಲಿಯೋ ಇರುವುದು. ಆ ಧರ್ಮದೇವನನ್ನು ಸೆರೆ ಹಿಡಿದು ಹುಡುಕಿದರೆ ಲೇಖನವು ಸಿಕ್ಕುವುದು.

ಈ ರೀತಿ ಬರೆದ ಪತ್ರಿಕೆಯನ್ನು ದುರ್ಮತಿಯು ವಿಷಯಲಂಪಟನಿಗೆ ಮೆಲ್ಲಗೆ ಓದಿ " ಹೇಳಿ ಹೀಗೆ ಬರೆದಿರುವುದು ಸರಿಯಲ್ಲವೇ? ಇದರಲ್ಲಿ ಆರೂ ಸಿಕ್ಕಿಬೀಳುವುದಿಲ್ಲ. ಇದನ್ನು ಈ ರೀತಿಯಾಗಿ ಮಡಿಸಿ ಹೀಗೆ ಮೇಲುವಿಳಾಸವನ್ನು ಬರೆದು ಟಪಾಲಿನಲ್ಲಿ

ಹಾಕಿದರೆ ಮುಂದೆ ಅದರ ಕೆಲಸವನ್ನು ಅದೇ ಮಾಡಿಕೊಳ್ಳುವುದು" ಎಂದು ಆ ಕಾಗದವನ್ನು ಕ್ರಮವಾಗಿ ಮಡಿಸಿ ವಕೀಲನ ಹೆಸರಿಗೆ ವಿಲಾಸವನ್ನು ಬರೆದು ವಿಷಯಲಂಪಟನ ಕೈಯಲ್ಲಿ ಕೊಟ್ಟನು.

ಕದರ್ಥಕನು ಸ್ವಲ್ಪ ತಲೆಯನ್ನೆತ್ತಿ ನಿರಪರಾಧಿಯಾದ ಧರ್ಮದೇವನ ವಿಷಯದಲ್ಲಿ ನೀವು ಹೀಗೆ ಮಾಡುವುದು ಸರಿಯೆ? ಎಂದನು. ಅದನ್ನು ಕೇಳಿ ದುರ್ಮತಿಯು ಸ್ವಲ್ಪ ಭಯಪಟ್ಟು ಧರ್ಮದೇವನ ವಿಷಯದಲ್ಲಿ ಆರು ಏನು ಮಾಡಿದರು. ಬಗ್ಗೋ ನೋಡು ಹಾಸ್ಯಕ್ಕಾಗಿ ಒರೆದ ಲೇಖನವನ್ನು ಮುದುಡಿ ಬಿಸುಡುವೆನು ಎಂದು ವಿಷಯಲಂಪಟನ ಕೈಯಿಂದ ಆ ಲೇಖನವನ್ನು ಕಿತ್ತುಕೊಂಡು ಪಿಂಡಾಕಾರವಂ ಮಾಡಿ ಬಿಸುಟನು. ಆಗ ಕದರ್ಥಕನು ಅದು ಸರಿ. ನನ್ನ ಆಪ್ತನಾದ ಧರ್ಮದೇವನಿಗೆ ನೀವು ಕೆಡುಕು ಮಾಡುವುದು ಸರಿಯಲ್ಲ ಎಂದನು.

ಬಳಿಕ ದುರ್ಮತಿಯು ಊರಿಗೆ ಹೋಗೋಣ ಬಾ ಎಂದು ಕದರ್ಥಕನನ್ನು ಕರೆಯಲು ಅವನು ಅಲುಗಾಡುತ್ತ ಎದ್ದು ನಿಂತು, ವಿಷಯಲಂಪಟನನ್ನು ನೋಡಿ ನೀನು ಪಟ್ಟಣಕ್ಕೆ ಬರುವುದಿಲ್ಲವೋ? ಎಂದು ಕೇಳಲು, ಅವನು ನಾನು ಊರಿಗೆ ಬರುವುದಿಲ್ಲ. ಪಾಳೆಯಕ್ಕೆ ಹೋಗುತ್ತೇನೆ ಎಂದು ಹೇಳಿ ಅಲ್ಲಿಯೇ ಕುಳಿತಿದ್ದನು.

ದುರ್ಮತಿಯೂ ಕದರ್ಥಕನೂ ಪಟ್ಟಣದ ಹಾದಿಯನ್ನು ಹಿಡಿದು ಹೊರಟರು. ಅವರು ಸ್ವಲ್ಪ ದೂರ ಹೋದ ಮೇಲೆ ವಿಷಯಲಂಪಟನು ನೆಲದಲ್ಲಿ ಮುದುಡಿ ಬಿಸುಟಿದ್ದ ಆ ಲೇಖನವನ್ನು ತೆಗೆದು ಪೂರ್ವದಂತೆಯೇ ಮಡಿಸಿ ಸರಿಮಾಡಿ ಅದನ್ನು ತನ್ನ ಕವಚದಲ್ಲಿ ಸೇರಿಸಿ ಮತ್ತೊಂದು ಮಾರ್ಗವಾಗಿ ಪಟ್ಟಣದ ಕಡೆಗೆ ನಡೆ ಹೋಗುತ್ತಲಿದ್ದನು. ದುರ್ಮತಿಯು ಇದನ್ನೆಲ್ಲಾ ಚೆನ್ನಾಗಿ ನೋಡುತಲಿದ್ದನು ಅದರೆ ಕದರ್ಥಕನು ದುರ್ಮತಿಯನ್ನು ನೋಡಿ ಅವನು ಪಾಳೆಯಕ್ಕೆ ಹೋಗುತ್ತೇನೆಂದು ನನ್ನೊಂದಿಗೆ ಸುಳ್ಳು ಹೇಳಿ ಈಗ ಊರಿಗೆ ಹೋಗುತ್ತಾನೆ ನೋಡು ಎಂದನು.

ನಿನಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ. ಅವನು ಪಾಳೆಯದ ಕಡೆಗೇಗ ನಡೆ ಹೋದನು.

ಹಾಗೋ? ಮದ್ಯವು ಜ್ಞಾನವನ್ನು ತಲೆಕೆಳಗುಮಾಡುತ್ತದ

ಆಯಿತು; ಎಂದು ದುರ್ಮತಿಯು ಹೇಳುತ್ತಾ "ಆ ಲೇಖನವು ನನ್ನ ಇಷ್ಟದಂತೆ ವಕೀಲನನ್ನು ಸೇರುವುದು ಧರ್ಮದೇವ! ನೀನು ಜಯಲಕ್ಷ್ಮಿಯ ಅಧಿಪತಿಯಾಗುವುದು ಹೇಗೋ ನೋಡೋಣ" ಎಂದು ತನ್ನೊಳು ತಾನೇ ಹೇಳಿಕೊಳ್ಳುತ್ತ ಮಾಡಿದ ಕೆಲಸದಲ್ಲಿ ತೃಪ್ತನಾಗಿ ಊರನ್ನು ಪ್ರವೇಶಿಸಿದನು.

ಐದನೆಯ ಅಧ್ಯಾಯ

ಮದುವೆಯ ಔತಣ.

ಮಲಯಪ್ರದೇಶದಲ್ಲಿ ಮದುವೆಗೆ ಮೊದಲು ಔತಣವನ್ನು ಮಾಡಿಸುವ ಪದ್ಧತಿ. ಧರ್ಮದೇವನ ಮದುವೆಯೂಟವು ಮರುದಿನ ಪ್ರಾತಃಕಾಲ ಹತ್ತು ಗಂಟೆಗೆ ಆಗಬೇಕೆಂದು ಏರ್ಪಾಡಾಗಿದ್ದಿತು. ಭುಜಂಗಭೂಷಣನಿಗೆ ಒಬ್ಬನೇ ಮಗನಾದುದರಿಂದ ಇವನ ಮದುವೆಯನ್ನು ಸಾಲಮಾಡಿಯಾದರೂ ಸಂಭ್ರಮವಾಗಿ ನಡೆಸಬೇಕೆಂಬ ಕುತೂಹಲವಿದ್ದಿತು. ಅದಕ್ಕಾಗಿ ಅವನು ಹಿಂದೆ ನಾವು ವಿವರಿಸಿದ್ದ ಸತ್ರದ ವಿಸ್ತಾರವಾದ ಸಾಲೆಗೆಯಲ್ಲಿ ಊಟಕ್ಕೆ ಸ್ಥಳವನ್ನು ಮಾಡಿದ್ದನು. ಗೊತ್ತಾದಕಾಲಕ್ಕೆ ಮೊದಲೇ ಅಲ್ಲಿಗೆ ಅನೇಕರು ಅತಿಥಿಗಳು ಬಂದು ಸೇರಿದ್ದರು. ಜಯಲಕ್ಷ್ಮಿಯ ಅಧಿಕಾರಿಗಳೂ, ನಾಯಿಕರೂ, ಸೈನಿಕರೂ ಬಂದು ಸೇರಿದರು. ಧರ್ಮದೇವನಿಗೆ ಮರ್ಯಾದೆ ಮಾಡಲೋಸುಗ ಧನಕೋಟಿಯೂ ಅಲ್ಲಿಗೆ ಬರುತ್ತಾನೆಂದು ವರ್ತಮಾನವಿದ್ದಿತು; ಆದರೆ ಆ ವರ್ತಮಾನವನ್ನು ಸ್ವಲ್ಪಜನರೆಂದು ತಿಳಿದಿರಲಿಲ್ಲವಾದುದರಿಂದ ಅವನು ಊಟಕ್ಕೆ ಬರುವನೋ ಇಲ್ಲವೋ ಎಂದು ಜನರು ಒಬ್ಬರನ್ನೊಬ್ಬರು ಕೇಳುತ್ತಲಿರುವ ಸಮಯಕ್ಕೆ ಸರಿಯಾಗಿ ದುರ್ಮತಿಯೂ ಕದಳೀಕನೂ ಒಂದು ಧನಕೋಟಿಯು ಒರುವುದಾಗಿ ಹೇಳಿದನೆಂದು ತಿಳುಹಿದರು. ಅಲ್ಲಿನವರೆಲ್ಲರೂ ಧರ್ಮದೇವನಲ್ಲಿ ವಿಶ್ವಾಸವುಳ್ಳವರಾಗಿದ್ದುದರಿಂದ, ಈ ವರ್ತಮಾನವನ್ನು ಕೇಳುತಲೆ ಧನಕೋಟಿಯು ಆಗಮನವು ಧರ್ಮದೇವನ ನಿಕಾಧಿಪತ್ಯಕ್ಕೆ ಸೂಚನೆಯೆಂದು ಸಂತೋಷಪಡುತ್ತಲಿದ್ದರು. ಆ ವೇಳೆಗೆ ಧನಕೋಟಿಯೂ ಅಲ್ಲಿಗೆ ಬಂದನು. ಹದಗಿನ ಅಧಿಕಾರಿಗಳೆಲ್ಲರೂ ತಮ್ಮ ಇಷ್ಟದಂತೆ ಧರ್ಮದೇವನೇ ನಿಕಾಧಿಪನಾಗುವನೆಂದು ಚಪ್ಪಾಳೆಯನ್ನು ತಟ್ಟಿ ಕೋಲಾಹಲ ಧ್ವನಿಯನ್ನು ಮಾಡಿದರು.

ಧನಕೋಟಿಯು ಅಲ್ಲಿಗೆ ಬಂದೊಡನೆ, ಅವನ ಬಳಿಗೆ ವಧೂವರರನ್ನು ಕರೆತರುವುದಕ್ಕಾಗಿ ದುರ್ಮತಿಯೂ ಕದರ್ಥಕನೂ ಹೊರಟರು. ಇವರಿಬ್ಬರೂ ಹಂತವನ್ನಿಳಿದು ಸತ್ರದ ಬಾಗಿಲನ್ನು ಸೇರುತಲೆ, ವಧೂವರರೂ ಭುಜಂಗಭೂಷಣನೂ ಪರಿಜನರೊಡನೆ ಬರುತಲಿರುವುದನ್ನು ಕಂಡರು. ಇವರ ಹಿಂದೆ ವಿಷಯಲಂಪಟನು, ಲಲಿತಾಂಗಿಯು ಧರ್ಮದೇವನನ್ನು ಮದುವೆಯಾಗುವಳಲ್ಲಾ ಎಂಬ ಸಂಕಟದಿಂದ ಕೂಡಿ, ಆಗಾಗ್ಗೆ ಹಿಂದಿರುಗಿ ಯಾರನ್ನೋ ನಿರೀಕ್ಷಿಸುತ್ತ ತಾನು ಬಂದ ದಾರಿಯನ್ನು ನೋಡುತ್ತ ಬರುತ್ತಲಿದ್ದನು.

ಕದರ್ಥಕನಿಗೆ ಅವಾಗಲೂ ಊಟವೆಂದರೆ ಆಸೆ. ಅದರಲ್ಲಿ ಮದುವೆಯೂಟವೆಂದರೆ ಕೇಳಬೇಕೇ! ಇವನು ಮದುವೆಯೂಟಕ್ಕೆ ಅನುಕೂಲಪಡಿಸಿಕೊಳ್ಳುವುದಕ್ಕಾಗಿ ಭುಜಂಗಭೂಷಣನ ಸಮೀಪವನ್ನು ಸೇರಿ ಇಚ್ಛಕವಾಡತೊಡಗಿದನು. ಭುಜಂಗಭೂಷಣನೂ ವಧೂವರರೂ ಆನಂದವೆಂಬ ಸಮುದ್ರದಲ್ಲಿ ಮುಳುಗಿದ್ದರು. ಅಲ್ಲಿ ಸೇರಿದ್ದ ಮಿಕ್ಕವರು ಊಟಮಾಡಲು ಆತುರರಾಗಿದ್ದರು. ವಿಷಯಲಂಪಟನ ಮುಖದಲ್ಲಿ ತೋರುತ್ತಲಿದ್ದ ಭಯವೂ ಸಂಕಟವೂ ಅವನ ಮುಖವನ್ನು ದೃಷ್ಟಿಸಿ ನೋಡುತ್ತಲಿದ್ದ ದುರ್ಮತಿಗೆ ವಿನಾ ಮತ್ತಾರಿಗೂ ಗೊತ್ತಾಗಲಿಲ್ಲ.

ವಧೂವರರಿಬ್ಬರೂ ಸತ್ರದ ಬಾಗಿಲಿಗೆ ಬರಲು, ಧನಕೋಟಿಯು ಅವರನ್ನು ಮಾಳಿಗೆಗೆ ಕರೆದುಕೊಂಡು ಹೋಗಲೋಸುಗ ಇದಿರುಗೊಂಡು ಬಂದನು. ವಧೂವರರು ಮರ್ಯಾದೆಯೊಡನೆ ಅವನಿಗೆ ನಮಸ್ಕಾರ ಮಾಡಿ ಅವನನ್ನು ಮುಂದಿಟ್ಟುಕೊಂಡು ಮಾಳಿಗೆಯನ್ನು ಸೇರಿದರು. ಇವರನ್ನು ಹಿಂಬಾಲಿಸಿ ಎಲ್ಲರೂ ಹೋದರು. ಆಗ ಭುಜಂಗಭೂಷಣನು ಅವರವರ ಯೋಗ್ಯತೆಗೆ ತಕ್ಕ ಸ್ಥಾನಗಳಲ್ಲಿ ಎಲ್ಲರನ್ನೂ ಕೂಳ್ಳಿರಿಸಿ, ಎಲೆಗಳನ್ನು ಹಾಕಿ ಬಡ್ಡಿಸುವಂತೆ ಪರಿಚಾರಕರಿಗೆ ಅಪ್ಪಣೆಯನ್ನು ಮಾಡಿದನು. ಬಡ್ಡಿಸಿದ ಕೂಡಲೆ ಭೋಜನವು ಪ್ರಾರಂಭವಾಯಿತು.

ಊಟವು ಆಗುತ್ತ ಆಗುತ್ತ ಜನಗಳ ಸಂತೋಷವು ಹೆಚ್ಚಾಗುತಲಿದ್ದಿತು. ಆಗ ಭುಜಂಗಭೂಷಣನು ಈ ದಿವಸ ಇಲ್ಲಿ ಇಷ್ಟು ಜನಗಳು ಸೇರಿ ಈ ಶುಭ ಪ್ರಸ್ತವನ್ನು ನಡೆಸುವೆವೆಂದು ಅರಿಗಾದರೂ ತಿಳಿದು ಇದ್ದಿತೇ? ದೈವಕೃಪೆ ಎಂದನು.

ಅದನ್ನು ಹೇಳುತ್ತಲೆ ಕದರ್ಧಕನು ಮದುವೆಯಾಗುವುದಕ್ಕೆ ಮೊದಲೇ ಅದು ಸುಖಕರವೆಂದು ಭಾವಿಸಲು ಆಗುವುದಿಲ್ಲ. ಎಂದು ಹೇಳಿ, ಧರ್ಮದೇವನ ಮುಖವನ್ನು ನೋಡಲು, ಅವನು ಕದರ್ಧಕನ ಅಭಿಪ್ರಾಯ ನನಗೆ ಗೊತ್ತಾಗಲಿಲ್ಲ. ಈಗ ನನ್ನ ಆನಂದವು ಅಪರಿಮಿತವಾಗಿರುವುದರಿಂದ ಸುಖವಾವುದೋ ದುಃಖವಾವುದೋ ಹೇಳಲಾಗುವುದಿಲ್ಲ; ಆದರೆ, ಕೆಲವು ವೇಳೆಗಳಲ್ಲಿ ಸಂತೋಷವು ಕೂಡ ದುಃಖದಂತೆ ! ಮನುಷ್ಯನನ್ನು ಪೀಡಿಸುವುದು, ಎಂದನು.

ಆಗ ದುರ್ಮತಿಯು ಧರ್ಮದೇವನನ್ನು ನೋಡಿ, ಅಯ್ಯಾ ! ನೀನು ಈಗ ಆಡಿದ ಮಾತಿನಿಂದ ಅವುದೋ ಬಂದು ಅಶುಭವು ಸನ್ನಿಹಿತವಾಗಿ ನೀನು ಭಯಪಡುವಂತೆ ತೋರುತ್ತಿದೆ. ಅಂಥಾ ಸಂದರ್ಭವಾವುದೂ ಇಲ್ಲವಲ್ಲಾ ? ಎಂದುದಕ್ಕೆ. ಧರ್ಮದೇವನು ನನಗೇನೋ ಆ ಭಯವುಂಟು. ಲೋಕದಲ್ಲಿ ಸುಖದುಃಖಗಳು ಕಲತೇ ಇರುವುವು. ದುಃಖಮಿಶ್ರವಾಗದ ಸುಖವು ಮನುಷ್ಯನಿಗೆ ಸಿಕ್ಕದು. ಈ ಸುಂದರಿಯಾದ ಲಲಿತಾಂಗಿಯು ನನ್ನ ಪತ್ನಿಯಾಗುವ ಭಾಗ್ಯವು ಎಲ್ಲಿ ತಪ್ಪಿಹೋಗುವುದೋ ಎಂದು ಭಯಪಡುತಲಿದ್ದೇನೆ, ಎಂದು ಹೇಳಿದನು.

ಧರ್ಮದೇವನಾಡಿದ ಮಾತನು ಕೇಳಿ ಕದರ್ಧಕನು, ಏನಯ್ಯಾ ಧರ್ಮದೇವ ! ಲಲಿತಾಂಗಿಯು ಇನ್ನೂ ನಿನ್ನ ಪತ್ನಿಯಾಗಲಿಲ್ಲ; ಆಗಲೇ ' ಪತ್ನಿ ' ಎಂದು ಹೇಳುತ್ತಲಿದ್ದೀಯೆ ? ಅವಳನ್ನು ನೋಡಿ ' ಪತ್ನಿ ' ಎಂದು ಕೂಗು, ಎಷ್ಟು ಸಿಟ್ಟುಬರುವುದು, ಎಂದು ಹಾಸ್ಯಮಾಡಲು, ಲಲಿತಾಂಗಿಯು ನಸುನಗುತ ನಾಚಿಕೆಯಿಂದ ತಲೆಯನ್ನು ತಗ್ಗಿಸಿಕೊಂಡಳು.

ಈ ಮಾತುಗಳನ್ನು ಕೇಳುತ್ತಲಿದ್ದ ವಿಷಯಲಂಪಟನ ಮುಖದಿಂದ ಬೆವರು ಸುರಿಯುವುದಕ್ಕೆ ಆರಂಭವಾಯಿತು.

ಅಯ್ಯಾ ! ಕದರ್ಧಕನೇ ! ನೀನು ಹೇಳುವುದು ಸರಿ; ಲಲಿತಾಂಗಿಯು ಇನ್ನೂ ನನ್ನ ಪತ್ನಿಯಾಗಿಲ್ಲ; ಇನ್ನೊಂದು ಘಂಟೆಯೊಳಗೆ ವಿವಾಹವು ನಡೆಯುವುದು. ಎಂದು ಧರ್ಮದೇವನು ಹೇಳಲು, ದುರ್ಮತಿಯ ಮುಖವು ಬೆಳ್ಳಗಾಯಿತು; ವಿಷಯಲಂಪಟನಿಗೆ ಹೊಟ್ಟೆಯಲ್ಲಿ ಕೆಂಡವನ್ನು ಸುರಿದಂತಾಯಿತು. ಇಬ್ಬರೂ ಒಬ್ಬರ ಮುಖವನ್ನೊಬ್ಬರು ನೋಡಿ ನರಳಿದರು.

ಕದರ್ಥಕನು ಧರ್ಮದೇವನನ್ನು ನೋಡಿ ನಮಗೆ ಈ ಊಟವಲ್ಲದೆ ಮದುವೆ ಯೂಟ ಬೇರೆ ಸಿಕ್ಕುವುದೆಂದು ಯೋಚಿಸಿಕೊಂಡಿದ್ದೆವು; ನೀನು ಇದನ್ನೇ ಮದುವೆ ಯೂಟವನ್ನಾಗಿ ಮಾಡುವಂತೆ ತೋರುತಲಿದೆ ಎಂದನು.

ನಾನು ಹಾಗೇನೂ ಅನ್ಯಾಯ ಮಾಡುವುದಿಲ್ಲ; ಮದುವೆಯಾದ ಕೂಡಲೆ ಬಂದು ವಾರ ಅಮರಪುರಕ್ಕೆ ಹೋಗಿ ಬಂದು, ಒಳಿಕ ಮದುವೆಯೂಟಕ್ಕೆ ಏರ್ಪಾಡು ಮಾಡು ವೆನು, ಎಂದ ಧರ್ಮದೇವನ ಮಾತಕೇಳಿ ಅಲ್ಲಿ ನೆರೆದ್ದವರೆಲ್ಲರೂ ಸಂತೋಷಪಟ್ಟರು.

ಕದರ್ಥಕನ ಸಂತೋಷವು ಎಲ್ಲರ ಸಂತೋಷಕ್ಕಿಂತ ಹೆಚ್ಚಾಗಿದ್ದಿತು. ಆಗ ದುರ್ಮತಿಯು ಸಮಾಧಾನಕ್ಕೆ ಒರಲು, ಅವನನ್ನು ನೋಡಿ ಅಯ್ಯಾ ದುರ್ಮತಿ! ಧರ್ಮ ದೇವನು ಬಹಳ ಒಳ್ಳೆಯವನು, ಧಾರಾಳಿ, ಲಲಿತಾಂಗಿಗೆ ತಕ್ಕ ವರನು. ಹೀಗಿರಲು ನೀವು ಅವನ ವಿಷಯದಲ್ಲಿ ನೆನ್ನೆಯ ದಿನ ಮಾಡಿದ ಕೃತ್ರಿಮವು ಸರಿಯೇ? ಎನ್ನಲು, ದುರ್ಮತಿಯು ಅಯ್ಯಾ ಕದರ್ಥಕ! ಅದು ದುರಾಲೋಚನೆಯಿಂದ ಮಾಡಿದುದಲ್ಲ. ವಿಷಯಲಂಪಟನು ನೆನ್ನೆಯ ದಿನ ನಮ್ಮೊಡನೆ ಇದ್ದುದನ್ನು ನೋಡಿ ಅವನು ಧರ್ಮ ದೇವನಿಗೇನು ತೊಂದರೆ ಮಾಡುವನೋ ಎಂಬ ಭಯವಿದ್ದಿತು: ಅದಕ್ಕೋಸ್ಕರ ನಾನು ಅವನೊಡನೆ ಆ ರೀತಿಯಾಗಿ ಸಿನೋದವಾದ ಮಾತುಗಳನ್ನು ಆಡಿದೆನು. ನಾನು ಅವನಿಗೆ ಹಾಗೆ ಹೇಳಿದುದರಿಂದಲೇ ವಿಷಯಲಂಪಟನು ತನ್ನ ಮನಃಕ್ಲೇಶವನ್ನು ತಾಳಿ ಈ ಮದುವೆಯ ಊಟಕ್ಕೆ ಬರುವಂತಾದನು. ಎಂದನು.

ಕದರ್ಥಕನಿಗೆ ಈ ಮಾತುಗಳಲ್ಲಿ ಪೂರ್ತಿ ನಂಬುಗೆಯು ಹುಟ್ಟಲಿಲ್ಲ, ವಿಷಯ ಲಂಪಟನ ಮುಖವನ್ನೇ ನೋಡುತಲಿದ್ದನು ಈ ವೇಳೆಗೆ ಭೋಜನವು ಮುಗಿಯಿತು.

ಬಳಿಕ ಭುಜಂಗಸೂಷಣನು ಎದ್ದು ಲಗ್ನಕಾಲವು ಸಮೀಪಿಸಿತು; ಎಲ್ಲರೂ ಮದು ವೆಯ ಮಂಟಪಕ್ಕೆ ವಿಜಯಮಾಡಬೇಕು ಎಂದು ಪ್ರಾರ್ಥಿಸಿದ ಒಡನೆಯೇ ಎಲ್ಲರೂ ಹೊರಡಲು ಯತ್ನಿಸಿದರು

ಇಷ್ಟರಲ್ಲಿ ಮಾಳಿಗೆಯು ಒಂದು ದೊಡ್ಡ ಗವಾಕ್ಷದ ಬಳಿ ನಿಂತು ಪಟ್ಟಣದ ದಾರಿ ಯನ್ನೇ ನೋಡುತ್ತಲಿದ್ದ ವಿಷಯಲಂಪಟನು ಅದುರು ಬೋಬಂದವನಂತೆ ಕೈ ಕಾಲು ಗಳನ್ನು ಬಡಿಯುತ್ತ ಅತ್ತಿರದಲ್ಲಿದ್ದ ಕುರ್ಚಿಯ ಮೇಲೆ ಧೊಪ್ಪೆಂದು ಬಿದ್ದನು. ಇದನ್ನು ದುರ್ಮತಿ ಮಾತ್ರ ನೋಡಿದನು. ಆ ಕ್ಷಣವೇ ಪೋಲೀಸಿನವರ ಕತ್ತಿಗಳ ಖಣಿ ಖಣಿ

ಶಬ್ದವೂ ಹಂತಗಳನ್ನು ಹತ್ತುತಲಿರುವ ಹಜ್ಜೆಗಳ ಶಬ್ದವೂ ದುರ್ಮತಿಯ ಕಿವಿಗೆ ಬಿದ್ದವು; ಒಡನೆಯೇ ಅವನು ಇದನ್ನು ಕೇಳಿದುದರಿಂದಲೇ ನಿಷಯಲಂಪಟನು ಈ ರೀತಿ ಅಂಗ ವಿಕಾರಗಳನ್ನು ಮಾಡಿ ಕುರ್ಚಿಯ ಮೇಲೆ ಬಿದ್ದನೆಂದು ತಿಳಿದನು.

ಪೋಲೀಸಿನವರ ಹಜ್ಜೆಯ ಸದ್ದೂ ಕತ್ತಿಗಳ ಖಣಿಖಣಿಧ್ವನಿಯೂ ಪ್ರತಿ ಕ್ಷಣದಲ್ಲಿಯೂ ಸಮೀಪಿಸುತಲಿದ್ದವು. ಕೊನೆಗೆ ಐದು ಜನ ಪೋಲಿಸಿನವರೊಡನೆ ಆ ಪಟ್ಟಣದ ನ್ಯಾಯಾಧ್ಯಕ್ಷನು ಒಳಗೆ ಒಂದು, ಇಲ್ಲಿ ಧರ್ಮದೇವನೆಂಬವನು ಆರು? ಎಂದು ಕೇಳಲು, ನಾನೇ ಎಂದು ಧರ್ಮದೇವನು ಇದಿರಿಗೆ ಬಂದು ನಿಂತು, ನನ್ನಿಂದ ಏನಾಗಬೇಕು ಎಂದು ಕೇಳಿದನು. ಅದಕ್ಕೆ ಆ ನ್ಯಾಯಾಧ್ಯಕ್ಷನು ಅವುದೋ ಒಂದು ತಪ್ಪಿಗಾಗಿ ನಿನ್ನನ್ನು ಸೆರೆಗೆ ಪಿಡಿದುಕೊಂಡು ಬರುವಂತೆ ಸರ್ಕಾರದವರು ಅಪ್ಪಣೆಯನ್ನು ಮಾಡಿದ್ದಾರೆ ಎಂದನು.

ಅದನ್ನು ಕೇಳಿ ಧನಕೋಟಿಯೂ ಧರ್ಮದೇವನೂ ಏಕಕಾಲದಲ್ಲಿಯೇ ಅವ ತಪ್ಪು ಎಂದು ಕೇಳಲು, ನ್ಯಾಯಾಧ್ಯಕ್ಷನು ನನಗೆ ಅದೇನೂ ತಿಳಿಯದು; ವಿಚಾರಣೆಯ ಕಾಲದಲ್ಲಿ ನ್ಯಾಯಾಧಿಪತಿಯು ತಪ್ಪು ಇಂಥದೆಂಬುದನ್ನು ತಿಳಿಸುವನು ಎಂದು ಹೇಳಿ ಧರ್ಮದೇವನನ್ನು ನೋಡಿ ಹೊರಡು ಎಂದನು.

ಆಗ ಭುಜಂಗಭೂಷಣನು ಅಯ್ಯಾ ನ್ಯಾಯಾಧ್ಯಕ್ಷರೇ! ಮದುವೆಗೆ ಏರ್ಪಾಡು ಮಾಡಿಕೊಂಡು ಇನ್ನೊಂದು ಘಂಟೆಯೊಳಗೆ ಮದುವೆಯಾಗುತಲಿರುವ ನನ್ನ ಮಗನನ್ನು ಏತಕ್ಕೆ ಸೆರೆ ಪಿಡಿಯುವಿರಿ? ಎಂದು ಕಣ್ಣೀರನ್ನು ಸುರಿಸುತ ಬಹುವಿಧವಾಗಿ ಗೋಳಾಡಲು, ಅವನಿಗೆ ಕರುಣೆಯುಂಟಾಗಿ ಅಯ್ಯಾ ವೃದ್ಧನೇ! ಸ್ವಲ್ಪ ಸಮಾಧಾನವನ್ನು ತಾಳು; ನಿನ್ನ ಮಗನು ಹಡಗಿನ ಸರಕುಗಳ ಸಮಾಚಾರ ಅಥವಾ ಹಡಗಿನಲ್ಲಿದ್ದವರ ಆರೋಗ್ಯದ ವಿಷಯದಲ್ಲಿ ಅವುದನ್ನೋ ಸರ್ಕಾರಕ್ಕೆ ತಿಳಿಸಲು ಮರೆತಿರಬಹುದು; ಅದನ್ನು ತಿಳಿಸಿದ ಕೂಡಲೆ ಅವನನ್ನು ಬಿಟ್ಟು ಬಿಡುವರು. ನೀನು ಭಯಪಡಬೇಡ ಎಂದನು.

ಈ ಮಾತನ್ನು ಕೇಳಿ ಧರ್ಮದೇವನು ಸ್ವಾಮಿ' ನ್ಯಾಯಾಧ್ಯಕ್ಷರೇ! ಸರ್ಕಾರಕ್ಕೆ ನಾನು ತಿಳಿಸಬೇಕಾದುದನ್ನೆಲ್ಲಾ ಮೊದಲೇ ತಿಳಿಸಿದ್ದೇನೆ; ಅವುದನ್ನೂ ಬಿಡಲಿಲ್ಲ ಎಂದು ಹೇಳಲು, ನ್ಯಾಯಾಧ್ಯಕ್ಷನು ನಿನ್ನ ತಪ್ಪು ನನಗೆ ತಿಳಿಯದು ಎಂದು ಮೊದಲೇ

ಹೇಳಿದ್ದೆನು. ನಿನ್ನನ್ನು ಸೆರೆ ಹಿಡಿದು ನ್ಯಾಯಾಧಿಪತಿಯಲ್ಲಿ ಬಿಡುವುದು ಮಾತ್ರ ನನ್ನ ಕೆಲಸ ಎಂದನು.

ಈ ಮಧ್ಯೆ ಕದರ್ಥಕನು ದುರ್ಮತಿಯನ್ನು ನೋಡಿ ಈ ಕಾರ್ಯದ ಅರ್ಥವೇನು? ಎಂದು ಕೇಳಲು ಅದಕ್ಕವನು ನಾನೇನ ಬಲ್ಲೆ? ನಿನ್ನ ಹಾಗೇ ನಾನೂ ಎಂದು ಉತ್ತರವಂ ಕೊಟ್ಟನು.

ನೀನೂ ವಿಷಯಲಂಪಟನೂ ಸೇರಿ ಮಾಡಿದ ಕೆಲಸದ ಫಲವಿದು; ಇಂಥ ಕೆಟ್ಟ ಕೆಲಸಗಳನ್ನು ಮಾಡುವವರಿಗೆ ದೇವರು ಶಿಕ್ಷೆಯನ್ನು ಇಮ್ಮಡಿ ಮಾಡುವನು.

ನಾನೇನ ಮಾಡಿದೆ? ನಿನಗೆ ತಿಳಿದ ಹಾಗೆಯೇ ನಿನ್ನೆ ನಾನು ವಿನೋದಕ್ಕಾಗಿ ಬರೆದ ಕಾಗದವನ್ನು ಅಲ್ಲಿ ಹರಿದು ಬಿಸುಟಿನಲ್ಲಾ

ನೀನು ಕಾಗದವನ್ನು ಹರಿಯಲಿಲ್ಲ; ಸುಮ್ಮನೆ ಮುದುಡಿ ಬಿಸುಟೆ.

ಅಯ್ಯೋ ಹುಚ್ಚಪ್ಪ! ಬಾಯಿ ಮುಚ್ಚಿಕೊಂಡಿರು.

ಅದು ಏತಕ್ಕೆ?

ನೀನು ಆ ಕಾಲದಲ್ಲಿ ಕುಡಿದು ಇದ್ದೆ, ನಿನಗೆ ಜ್ಞಾನವು ಸರಿಯಾಗಿರಲಿಲ್ಲ; ಆದುದರಿಂದ ಅಲ್ಲಿ ನಡೆದಿದ್ದುದೇ ಒಂದು, ನೀನು ತಿಳಿದುಕೊಂಡುದೇ ಒಂದು. ಕುಡುಕನಿಗೆ ಜ್ಞಾನವು ತಲೆಕೆಳಗಾಗುವುದು ಎಂದು ನೀನೇ ನೆನ್ನೆಯ ದಿನ ಹೇಳಲಿಲ್ಲವೇ?

ವಿಷಯಲಂಪಟನೆಲ್ಲಿ? ಅವನನ್ನು ಕೇಳೋಣ.

ಬುದ್ಧಿಮಂತರಂತೆ ತನ್ನ ಕೆಲಸವನ್ನು ನೋಡಿಕೊಳ್ಳಲು ಅವನು ಹೊರಟು ಹೋದನು.

ಅವನನ್ನು ಹುಡುಕಿಕೊಂಡು ಬರೋಣ, ಬಾ.

ಅದು ಏನು ಪ್ರಯೋಜನ? ಅದಕ್ಕಿಂತ ನಮ್ಮ ಆಪ್ತಸ್ನೇಹಿತನಾದ ಧರ್ಮದೇವನಿಗೆ ಸಹಾಯವನ್ನು ಮಾಡಿದರೆ ಉಪಯೋಗವುಂಟು

ನಾವು ಏನು ಸಹಾಯವನ್ನು ಮಾಡಬಲ್ಲೆವು?

ನಿಮ್ಮ ಕೈಯಲ್ಲಾಗುವ ಸಹಾಯ.

ಇವರಿಬ್ಬರೂ ಈ ರೀತಿ ಮಾತನಾಡುತ್ತಿರುವಲ್ಲಿ, ಧರ್ಮದೇವನು ಅಲ್ಲಿ ಸೇರಿದ್ದ ಜನಗಳಿಗೆಲ್ಲಾ ನಮಸ್ಕಾರವನ್ನು ಮಾಡಿ ನಾನು ಹೋಗಿ ಜಾಗ್ರತೆಯಾಗಿ ಬರುವೆನು;

ಅಲ್ಲಿಯ ವರೆಗೆ ನೀವೆಲ್ಲರೂ ದಯಮಾಡಿ ಇಲ್ಲಿಯೇ ಇರಬೇಕು ಎಂದು ಹೇಳಿ ನ್ಯಾಯಾಧ್ಯಕ್ಷನ ಹಿಂದೆ ಹೊರಟನು. ಆಗ ದುರ್ಮತಿಯು ಅವನ ಇದಿರಿಗೆ ಬಂದು ಏನೋ ಅಲ್ಪ ಸಮಾಚಾರಕ್ಕಾಗಿ ಸರ್ಕಾರದವರು ಇಷ್ಟು ಅವಾಂತರವನ್ನು ಮಾಡಿರುವರು. ನೀನು ಆವ ತಪ್ಪನ್ನೂ ಮಾಡಿಲ್ಲವೆಂಬುದನ್ನು ನಾನು ಚೆನ್ನಾಗಿ ಬಲ್ಲೆ; ಆದರೂ ಸರಕಾರದವರ ಅಪ್ಪಣೆಯನ್ನು ನಡೆಸಲು ಹೋಗಿ ಜಾಗ್ರತೆಯಾಗಿ ಬಾ ಎಂದನು.

ನ್ಯಾಯಾಧ್ಯಕ್ಷನು ಧರ್ಮದೇವನನ್ನೂ ಅವನ ಜತೆಯಲ್ಲಿ ಮೂವರು ಪೋಲಿಸಿನವರನ್ನೂ ತಾನು ತಂದಿದ್ದ ಬಂಡಿಯೊಳಗೆ ಕೂಳ್ಳಿರಿಸಿ, ಬಂಡಿಯ ಹಿಂದೆ ಒಬ್ಬನನ್ನೂ ಮುಂದೆ ಒಬ್ಬನನ್ನೂ ನಿಲ್ಲಿಸಿ, ಪೋಲೀಸಿನವರಿಗೆ ಮಾಡಬೇಕಾದ ಅಪ್ಪಣೆಯನ್ನು ಮಾಡುತ್ತಿರಲು, ಲಲಿತಾಂಗಿಯು ಅಳುತ್ತ ಬಂಡಿಯ ಸಮೀಪದಲ್ಲಿ ಬಂದು ನಿಂತಳು. ಆಗ ಧರ್ಮದೇವನು ಎಲೌ ಪ್ರಿಯೇ! ಏತಕ್ಕೆ ಅಳುತ್ತೀಯೆ? ನಾನು ಜಾಗ್ರತೆಯಾಗಿಯೇ ಬಂದು ಬಿಡುವೆನು ಎಂದ ಕೂಡಲೆ ಬಂಡಿಯು ಹೊರಟಿತು. ಅಲ್ಲಿದ್ದವರೆಲ್ಲರೂ ವಿಸ್ಮಿತರಾಗಿ ಒಬ್ಬರ ಮುಖವನ್ನು ಒಬ್ಬರು ನೋಡುತ್ತ ನಿಂತಿದ್ದರು. ಬಂಡಿಯು ಕಣ್ಣು ಮರೆಯಾಗುವ ವರೆಗೂ ಲಲಿತಾಂಗಿಯು ಅಲ್ಲಿಯೇ ನಿಂತಿದ್ದು, ಸತ್ರದ ಒಳಕ್ಕೆ ಬರಲು ಮುಖವು ಕಳೆಗುಂದಿ ಕಣ್ಣಿನ ಹೊಳಪು ಮಂಕಾಗಿ ಮೂರ್ಛಿತಳಾಗಿ ನೆಲದ ಮೇಲೆ ಬಿದ್ದಳು. ದೈವಾನುಗ್ರಹದಿಂದ ಆಗ ಧನಕೋಟಿಯು ಅವಳ ಪಕ್ಕದಲ್ಲಿದ್ದುದರಿಂದ ಅವಳನ್ನೆತ್ತಿ ಅಲ್ಲಿದ್ದ ಒಂದು ಮಂಚದ ಮೇಲೆ ಮಲಗಿಸಿ, ತನ್ನ ಕಡೆಯವರಿಬ್ಬರನ್ನು ನೋಡಿ ನೀವು ಇವಳಿಗೆ ಪ್ರಜ್ಞೆ ಬರುವ ವರೆಗೆ ಇವಳ ಸಮೀಪದಲ್ಲಿಯೇ ಇರಿ ಎಂದು ನೇಮಿಸಿದನು.

ಅದುವರೆಗೆ ತಲೆತಪ್ಪಿಸಿಕೊಂಡು ಹೋಗಿದ್ದ ವಿಷಯಲಂಪಟನು ಆ ಕಾಲಕ್ಕೆ ಸರಿಯಾಗಿ ಸತ್ರವನ್ನು ಸೇರಿ ಲಲಿತಾಂಗಿಯು ಎಲ್ಲಿರುವಳೆಂದು ಹುಡುಕಿ ಅವಳಿದ್ದ ಮಂಚದ ಸಮೀಪದಲ್ಲಿ ಬಂದು ಕುರ್ಚಿಯನ್ನು ಹಾಕಿಕೊಂಡು ಕುಳಿತನು.

ಧನಕೋಟಿಯು ನೀವೆಲ್ಲರೂ ಇಲ್ಲಿಯೇ ಇರಿ, ನಾನು ಹೋಗಿ ಏನು ಸಮಾಚಾರವೆಂಬುದನ್ನು ವಿಚಾರಿಸಿಕೊಂಡು ಒರುತ್ತೇನೆ ಎಂದು ಅಲ್ಲಿದ್ದವರೆಲ್ಲರಿಗೂ ಹೇಳಿ, ನ್ಯಾಯಸ್ಥಾನಕ್ಕೆ ಹೊರಟನು.

ಆಗ ಕಪರ್ದಕನು ದುರ್ಮತಿಗೆ ವಿಷಯಲಂಪಟನನ್ನು ತೋರಿಸಿ ಈ ವಿಪತ್ತಿಗೆ

ಆ ದುರಾತ್ಮನೇ ಕಾರಣ ಎನ್ನಲು ದುರ್ಮತಿಯು ವಿಷಯಲಂಪಟನಿಗೆ ಅಷ್ಟು ಕೆಟ್ಟ ಬುದ್ಧಿ ಇರುವಂತೆ ತೋರುವುದಿಲ್ಲವೆಂದನು.

ಆದರೆ ಅವನಿಗೆ ಬುದ್ಧಿಮಂತನಾದವನು ಒಬ್ಬನೂ ಸಹಾಯಕ್ಕೆ ಇರಲಿಲ್ಲವೇ? ಅದನ್ನು ನೀನು ಮರೆತೆಯೋ?

ನಾನು ಹಾಸ್ಯಕ್ಕಾಗಿ ಹೇಳಿದ ಸಂಗತಿಯು ನಿಜವಾಗಿರುವಂತೆ ತೋರುತಲಿದೆ. ನೀನು ಆ ಸಂಗತಿಗೂ ಧರ್ಮದೇವನಿಗೂ ಗಂಟು ಹಾಕಿದುದು ತಪ್ಪು.

ನೀನು ಆ ದುರ್ವ್ಯಾವಾರವನ್ನು ಮಾಡದೆ ಇದ್ದಿದ್ದಿರೆ ಅವನಿಗೆ ಈ ಗತಿ ಒರುತ್ತಿರಲಿಲ್ಲ.

ಇಷ್ಟರಲ್ಲಿಯೇ ಧನಕೋಟಿಯು ನ್ಯಾಯಸ್ಥಾನದಿಂದ ಹಿಂತಿರಿಗಿ ಬಂದನು. ಧರ್ಮದೇವನ ಸಮಾಚಾರವನ್ನು ಕೇಳಲು ಎಲ್ಲರೂ ಅತ್ಯಾತುರರಾಗಿದ್ದುದರಿಂದ ಧನಕೋಟಿಯನ್ನು ಕಂಡ ಕೂಡಲೆ ಎಲ್ಲರೂ ಏಕಕಾಲದಲ್ಲಿಯೇ ಸ್ವಾಮೀ! ವತ್ತ ಮಾನವೇನು? ಅಪ್ಪಣೆ ಕೊಡಬೇಕು ಎಂದು ಕೇಳಿದರು. ಅದಕ್ಕೆ ಅವನು ನಾವೇನೋ ಅವನ ತಪ್ಪು ಅಲ್ಪವಾದುದೆಂದು ಇದ್ದೆವು; ಅಲ್ಲಿ ವಿಚಾರಿಸಿದುದರಲ್ಲಿ ಅವನು ಮಹತ್ತಾದ ರಾಜದ್ರೋಹಕಾರ್ಯವನ್ನು ಮಾಡಿದ್ದಾನೆಂದು ತಿಳಿಯಬಂದಿತು ಎಂದನು.

ಲಲಿತಾಂಗಿಯು ಅಷ್ಟು ಹೊತ್ತಿಗೆ ಎಚ್ಚತ್ತಿದ್ದಳು. ಭುಜಂಗಭೂಷಣನು ಅವಳ ಯೋಗಕ್ಷೇಮವನ್ನು ವಿಚಾರಿಸಲು ಅವಳ ಸಮೀಪಕ್ಕೆ ಬಂದಾಗ ವಿಷಯಲಂಪಟನು ಎದ್ದು ದೂರದಲ್ಲಿ ನಿಂತನು. ಧನಕೋಟಿಯು ಹೇಳಿದ ಮಾತು ಭುಜಂಗಭೂಷಣ ಲಲಿತಾಂಗಿಯವರ ಕಿವಿಗಳಿಗೆ ಬೀಳಲು ಅವರ ದುಃಖವನ್ನು ಇಷ್ಟಿಷ್ಟೆಂದು ಹೇಳಲು ಅಸಾಧ್ಯವಾಯಿತು.

ಕದರ್ಥಕನು ಅವರ ದುಃಖವನ್ನು ನೋಡಿ ಸಹಿಸಲಾರದೆ ದುರ್ಮತಿಯನ್ನು ಕುರಿತು ಎಲೋ ದುರ್ಮತೀ! ನೀನೂ ವಿಷಯಲಂಪಟನೂ ನೆನ್ನೆಯ ದಿನ ಮಾಡಿದ ಕೃತ್ಯವನ್ನು ನಾನು ಭುಜಂಗಭೂಷಣನಿಗೂ ಲಲಿತಾಂಗಿಗೂ ತಿಳಿಸುವೆನು ಎಂದು ಅವರಿಬ್ಬರೂ ಇರುವ ಸ್ಥಳಕ್ಕೆ ಹೊರಡಲು, ದುರ್ಮತಿಯು ಅವನ ಕೈಯನ್ನು ಹಿಡಿದು ನಿಲ್ಲಿಸಿಕೊಂಡು ನೀನು ತಿಳಿಗೇಡಿ; ಧರ್ಮದೇವನು ರಾಜದ್ರೋಹವನ್ನು ಮಾಡಿಲ್ಲವೆಂದು ನೀನು ಬಲ್ಲೆಯೋ? ಒಂದು ವೇಳೆ ಆ ತಪ್ಪನ್ನು ಅವನು ಮಾಡಿದ್ದರೆ ನೀನು

ಈಗ ಯತ್ನಿಸಿರುವ ಕೆಲಸದಿಂದ ನೀನಾಗಿಯೇ ನಿನ್ನನ್ನು ಸಿಕ್ಕುಹಾಕಿಕೊಳ್ಳುವೆ. ಆ ಮೇಲೆ ನಿನ್ನನ್ನು ಬಿಡಿಸಿಕೊಳ್ಳುವರಾರು? ನೀನು ಬುದ್ಧಿಮಂತನಾದರೆ ಸುಮ್ಮನೆ ಇರು ಎಂದನು.

ಈ ಮಾತನ್ನು ಕೇಳಿದ ಕೂಡಲೆ ಕದರ್ಥಕನಿಗೆ ಉದಾರತ್ವವು ಅಡಗಿ ಸ್ವಾರ್ಥ ಪರತೆಯು ತಲೆಯೆತ್ತಿ ದುರ್ಮತೀ! ನೀನು ಹೇಳುವುದು ನಿಜ; ಈ ಗೋಜು ನಮಗೇತಕ್ಕೆ ಎಂದು ಸುಮ್ಮನಿದ್ದನು.

ಲಲಿತಾಂಗಿಯು ತನ್ನ ವಿಪತ್ತನ್ನು ನೆನಸಿಕೊಂಡು ಇಂತಹ ಆಪತ್ಕಾಲದಲ್ಲಿ ತನ್ನಂತೆ ದುಃಖಸಮುದ್ರದಲ್ಲಿ ಮುಳುಗಿ ತನ್ನ ಸಮೀಪದಲ್ಲಿರುವ ಭುಜಂಗಭೂಷಣನನ್ನು ನೋಡಿ ಸ್ವಾಮೀ, ನಮಗೆ ಇಲ್ಲಿನ್ನೇನು ಕೆಲಸ? ಏಳಿ, ಮನೆಗೆ ಹೋಗೋಣ ಎಂದು ಆ ವೃದ್ಧನ ಕೈಯನ್ನು ಹಿಡಿದು ಅವನ ಮನೆಯಲ್ಲಿ ಅವನನ್ನು ಬಿಟ್ಟು ತಾನು ತನ್ನ ಮನೆಗೆ ಹೋದಳು. ವಿಷಯಲಂಪಟನು ಅವಳ ಹಿಂದೆಯೇ ಹೊರಟನು. ಮಿಕ್ಕವರೆಲ್ಲರೂ ತಮ್ಮತಮ್ಮ ಮನೆಗಳನ್ನು ಸೇರಿದರು.

ದುರ್ಮತಿಯೂ ಕದರ್ಥಕನೂ ಜತೆಯಲ್ಲಿ ಹೊರಟರು. ಧನಕೋಟಿಯು ಮುಂದೆ ಹೋಗುತ್ತಲಿರುವುದನ್ನು ಕಂಡು ದುರ್ಮತಿಯು ಸ್ವಲ್ಪ ಜಾಗ್ರತೆಯಾಗಿ ಹೋಗಿ ಮಹಾಸ್ವಾಮಿ! ಧರ್ಮದೇವನಿಗೆ ಇಂತಹ ವಿಪತ್ತು ಬರುವುದೆಂದು ಅರು ತಾನೇ ಯೋಚಿಸಿದ್ದರು ಎಂದನು.

ದುರ್ಮತಿ! ನೀನು ನನಗೆ ಹಡಗಿನಲ್ಲಿ ಈ ವಿಷಯವಾಗಿ ಸ್ವಲ್ಪ ಸೂಚಿಸಿದ್ದೆ; ಆ ಸಮಾಚಾರವನ್ನು ಮತ್ತಾರಿಗಾದರೂ ತಿಳಿಸಿದೆಯೋ?

ಮಹಾಸ್ವಾಮಿ! ತಮ್ಮ ಚಿಕ್ಕಪ್ಪನವರು ಏಲಾದ್ವೀಪದಲ್ಲಿರುವ ಚಕ್ರವರ್ತಿಯವರ ಜತೆಯಲ್ಲಿ ಸೈನ್ಯದಲ್ಲಿದ್ದುದರಿಂದ ಈಗಿನ ಸರ್ಕಾರಕ್ಕೆ ತಮ್ಮಮೇಲೆ ಕೂಡ ಸ್ವಲ್ಪ ಅನುಮಾನವಿದೆಯೆಂಬುದನ್ನು ನಾನು ಬಲ್ಲೆ. ಹೀಗಿರುವಲ್ಲಿ ಆ ಸಮಾಚಾರವನ್ನು ಮತ್ತಾರಿಗಾದರೂ ತಿಳಿಸಿದರೆ ತಮಗೆ ತೊಂದರೆಬಂದೀತೆಂಬ ಜ್ಞಾನವು ನನಗಿಲ್ಲವೇ?

ನೀನು ಬಲು ಜಾಣ. ಧರ್ಮದೇವನನ್ನು ನೌಕಾಧಿಪತಿಯನ್ನಾಗಿ ಮಾಡಲು ನಿಶ್ಚಯಿಸಿದ್ದಾಗ ಅವನ ಕೆಲಸವನ್ನು ನಿನಗೆ ಕೊಡಬೇಕೆಂದು ಯೋಚಿಸಿ ನಿನ್ನ ವಿಷಯದಲ್ಲಿ ಅವನಿಗೆ ಇರತಕ್ಕ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡಿದ್ದೆ.

ಅವನು ನನ್ನ ವಿಷಯದಲ್ಲಿ ಆವ ಅಭಿಪ್ರಾಯವನ್ನು ಕೊಟ್ಟನು?

ತನಗೂ ನಿನಗೂ ಮನಸ್ತಾಪವಿದ್ದರೂ ಯಜಮಾನರಿಗೆ ಇಷ್ಟವಾದವರು ತನಗೂ ಇಷ್ಟರೆಂದು ಹೇಳಿದನು.

ಆಹಾ! ಎಂಥ ಕಪಟಿಯೆಂದು ದುರ್ಮತಿಯು ತನ್ನೊಳು ತಾನೆಂದುಕೊಂಡನು.

ಹಿಂದೆ ಬರುತ್ತಲಿದ್ದು ಈ ಸಂವಾದವನ್ನು ಕೇಳಿದ ಕದರ್ಥಕನು ಧರ್ಮದೇವನು ಉತ್ಕೃಷ್ಟಹೃದಯನು. ಮನಸ್ತಾಪವಿದ್ದರೂ ದುರ್ಮತಿಯ ಅಭಿವೃದ್ಧಿಗೆ ಕಲ್ಲು ಹಾಕಲಿಲ್ಲವೆಂದುದಕ್ಕೆ ಧನಕೋಟಿಯು ಹಿಂತಿರುಗಿ ನೋಡಿ ಅದು ಸರಿ ಎಂದನು.

ದುರ್ಮತಿಯು ಈ ಮಾತು ಕಿವಿಗೆ ಬೀಳದವನಂತೆ ಧನಕೋಟಿಯನ್ನು ನೋಡಿ ಮಹಾನ್ಸ್ವಾಮೀ! ನಮ್ಮ ಜಯಲಕ್ಷ್ಮಿಯ ಪ್ರಯಾಣವು ಇನ್ನೂ ಮೂರು ತಿಂಗಳು ಸಾವಕಾಶವಾಗುವುದು. ಅಷ್ಟರೊಳಗೆ ಧರ್ಮದೇವನು ಸೆರೆಯಿಂದ ಬಿಡುಗಡೆಯಾಗಿ ಬರುವನೆಂದು ಕೋರುತ್ತೇನೆ ಏನಲು, ಧನಕೋಟಿಯು ಅದಕ್ಕೇನು ಸಂದೇಹ? ಅವನು ಆವಾಗ ಬಂದರೂ ನೌಕಾಧಿಪತ್ಯವು ಸಿದ್ಧವಾಗಿರುವುದು. ಅಲ್ಲಿಯವರೆಗೆ ಏನಮಾಡೋಣವೆಂದು ಯೋಚಿಸುತಲಿದ್ದೇನೆ ಎಂದನು

ತಮ್ಮ ಸೇವಕನು ನೌಕಾಧಿಪತ್ಯಕ್ಕೆ ಬೇಕಾದ ಯೋಗ್ಯತೆಯನ್ನು ಸಂಪಾದಿಸಿದ್ದಾನೆ. ಮತ್ತೊಬ್ಬನಿಗೆ ಆ ಕೆಲಸವನ್ನು ಕೊಡುವುದಕ್ಕಿಂತ ತಮ್ಮ ಸೇವಕನಿಗೆ ಕೊಟ್ಟರೆ ಒಂದು ಅನುಕೂಲವುಂಟು. ನಾವು ಕೋರುವಂತೆ ಧರ್ಮದೇವನು ಜಾಗ್ರತೆಯಾಗಿ ಸೆರೆಯಿಂದ ಬಂದನೆ ಒಡನೆ ಆವ ಪರಿವರ್ತನವೂ ಇಲ್ಲದೆ ಅವನು ನೌಕಾಧಿಪನಾಗಬಹುದು; ನಾನೂ ನನ್ನ ಕೆಲಸವನ್ನು ನೋಡಿಕೊಳ್ಳಬಹುದು.

ನೀನು ಹೇಳಿದುದು ಬಹು ಅನುಕೂಲವಾದ ಏರ್ಪಾಡು. ಈ ದಿವಸದ ದುರದೃಷ್ಟಕ್ಕಾಗಿ ನಮ್ಮ ವ್ಯಾಪಾರಕ್ಕೆ ತೊಂದರೆಯನ್ನು ಮಾಡಿಕೊಳ್ಳುವುದು ಸರಿಯಲ್ಲ. ಆದುದರಿಂದ ನೀನು ಈಕ್ಷಣ ಹೋಗಿ ಜಯಲಕ್ಷ್ಮಿಯ ನೌಕಾಧಿಪತ್ಯವನ್ನು ವಹಿಸು.

ಸ್ವಾಮಿ! ನನಗೆ ಧರ್ಮದೇವನನ್ನು ನೋಡಲು ಆಸೆಯಿದೆ.

ಅವನನ್ನು ನೋಡಬೇಕಾಗಿದ್ದರೆ ನ್ಯಾಯಾಧಿಪನ ಅಪ್ಪಣೆಯಾಗಬೇಕು. ವಲ್ಲಭದೇವನನ್ನು ವಿಚಾರಿಸಿ, ಧರ್ಮದೇವನನ್ನು ನೋಡುವುದಕ್ಕೆ ಅನುಕೂಲವಾಗುವುದೆಂದು ಹೇಳಿದರೆ ನಿನಗೆ ತಿಳಿಸುತ್ತೇನೆ.

ಸ್ವಾಮಿ! ನ್ಯಾಯಾಧಿಪತಿಯಾದ ವಲ್ಲಭದೇವನು ಈಗಿನ ರಾಜನ ಆಶ್ರಯವನ್ನು ಬಲವಾಗಿ ಮಾಡುತ್ತಲಿದಾನೆ. ಆತನಿಂದ ನನಗೆ ಆವ ಸಹಾಯವೂ ಆಗಲಾರದೆಂದು ತೋರುತ್ತಲಿದೆ.

ಆವನು ರಾಜಾನುವರ್ತಿಯಾದರೂ ಒಳ್ಳೆಯವನೆಂದು ಕೇಳಿದೇನೆ. ಆದುದರಿಂದ ಆವನು ನಮಗೆ ಅನುಕೂಲವನ್ನು ಮಾಡಿಕೊಡದೆ ಇರನು.

ಸ್ವಾಮಿ! ಆವನು ಮಹತ್ಸಾಕಾಂಕ್ಷೆಯುಳ್ಳವನು. ಅಂಧವರು ಆವಾಗಲೂ ತಮ್ಮ ಅಭಿವೃದ್ಧಿಯನ್ನೇ ಬಯಸಿ ನ್ಯಾಯಾನ್ಯಾಯಗಳನ್ನು ನೋಡದೆ ಕೆಲಸಮಾಡುವರು.

ಪ್ರಯತ್ನಮಾಡಿ ನೋಡೋಣ. ನೀನು ರೇಪಿಗೆ ಹೋಗು; ನಾನು ವಲ್ಲಭ ದೇವನನ್ನು ನೋಡಿ ಬರುವೆನು ಎಂದು ಧನಕೋಟಿಯು ನ್ಯಾಯಾಸ್ಥಾನದ ಕಡೆಗೆ ಹೊರಟನು.

ಆವನು ಅತ್ತಕಡೆ ಹೊರಟುಹೋದ ಮೇಲೆ ದುರ್ಮತಿಯು ಕದರ್ಥಕನನ್ನು ನೋಡಿ ಎಲೋ! ಧರ್ಮದೇವ! ತಪ್ಪು ಎಷ್ಟುಪ್ರಬಲವಾದುದು ನೋಡಿದೆಯೋ? ಆವನಿಗೆ ಸಹಾಯಮಾಡಬೇಕೆಂಬ ಆಸೆಯು ನಿನಗಿನ್ನೂ ಇರುವುದೋ ಎಂದನು.

ನನಗೆ ಆ ಯೋಚನೆಯು ಖಂಡಿತವಾಗಿಯೂ ಇಲ್ಲ.

ನಾವಿಬ್ಬರೂ ನೆಮ್ಮದಿಯಾಗಿರಬೇಕಾದರೆ ಈ ವಿಷಯವಾವುದೂ ತಿಳಿಯದವರಂತೆ ಇರಬೇಕು -ಪಾಗೆಬೇಗೆ ಆಗಲಿ ಎಂದು ಕದರ್ಥಕನು ತನ್ನಮನೆಗೆ ಹೋದನು. ದುರ್ಮತಿಯು ರೇಪಿನ ದಾರಿಯನ್ನು ಹಿಡಿದು ಅತ್ಯುತ್ಸಾಹದಿಂದ ಹೋಗುತ್ತ ಇದು ವರೆಗೂ ನನ್ನ ಯೋಚನೆಯಂತೆ ಕೆಲಸಗಳು ಕೈಗೂಡಿದುವು. ಈ ಮೂಢನಾದ ಕದರ್ಥಕನು ಬಾಯಿ ಮುಚ್ಚಿಕೊಂಡಿದ್ದರೆ ನಿಷ್ಕಾಧಿಪತ್ಯವು ನನಗೇ ಆಗುವುದು ಎಂದು ಯೋಚಿಸುತ್ತ ರೇಪಿಗೆ ಹೋಗಿ ದೋಣಿಯಲ್ಲಿ ಕುಳಿತು ಜಯಲಕ್ಷ್ಮಿಯನ್ನು ಸೇರಿದನು.

ಎರಡನೆಯ ಅಧ್ಯಾಯ

ನ್ಯಾಯಾಧಿಪತಿಯು.

ಇತ್ತ ಸತ್ರದಲ್ಲಿ ಧರ್ಮದೇವನ ಮದುವೆಯೂಟವು ನಡೆಯುತ್ತಲಿದ್ದಾಗ ಅತ್ತ ಒಬ್ಬ ದೊಡ್ಡಮನುಷ್ಯನ ಮನೆಯಲ್ಲಿ ಮತ್ತೊಂದು ಮದುವೆಯೂಟವು ನಡೆಯುತ್ತ

ಲಿದ್ದಿತು. ಧರ್ಮದೇವನ ಮದುವೆಯೂಟಕ್ಕೆ ವಿಶೇಷವಾಗಿ ಸೈನಿಕರೂ ನಾವಿಕರೂ ಸೇರಿದ್ದರು. ಶ್ರೀಮಂತನ ಮನೆಯ ಮದುವೆಗೆ ಬಂದಿದ್ದವರೆಲ್ಲರೂ ಶ್ರೀಮಂತರೇ. ರಾಜ್ಯಭ್ರಷ್ಟನಾದ ಚಕ್ರವರ್ತಿಯ ಹತ್ತಿರ ಅಧಿಕಾರದಲ್ಲಿದ್ದು ಮನಸ್ಸೊಡಂಬಡದೆ ಅದನ್ನು ಬಿಟ್ಟುಹೋದ ನ್ಯಾಯಾಧಿಪತಿಗಳೂ, ಅವನ ಸೈನ್ಯವನ್ನು ಬಿಟ್ಟು ಈಗಿನ ರಾಜನ ಸೈನ್ಯದಲ್ಲಿ ದೊಡ್ಡ ದೊಡ್ಡ ಅಧಿಕಾರಗಳನ್ನು ಹೊಂದಿದ್ದ ಸೇನಾಪತಿಗಳೂ, ಅವನನ್ನು ದ್ವೇಷಿಸುವುದರಲ್ಲಿ ಬದ್ಧಕಂಕಣರಾದವರ ಮನೆಗಳಲ್ಲಿ ಹುಟ್ಟಿ ಶಿಕ್ಷಿತರಾದ ತರುಣ ತರುಣಿಯರೂ ಅಲ್ಲಿ ನೆರೆದಿದ್ದರು. ಭೋಜನಕಾಲದಲ್ಲಿ ರಾಜಕೀಯವಿಷಯವಾದ ಮಾತುಗಳೇ ವಿಶೇಷವಾಗಿ ನಡೆಯುತ್ತಲಿದ್ದುವು. ಅವರದೇಶದಂತೆ ಅರೇಳು ದೇಶಗಳನ್ನು ಜಯಿಸಿ, ಏಕಚ್ಛತ್ರಾಧಿಪತ್ಯವನ್ನು ಮಾಡುತಲಿದ್ದು ಈಗ ಏಲಾದ್ವೀಪದಲ್ಲಿ ಸೆರೆಯಲ್ಲಿರುವಂತೆ ಚಕ್ರವರ್ತಿಯು ವಸಿಸುತ್ತಿರುವನು, ಅವನಿಗೆ ಸ್ವರ್ಗಸಮಾನವಾದ ದೇಶವು ಸಿಕ್ಕಲಾರದು ಎಂದು ಕೆಲವರು ಮಾತನಾಡುತಲಿದ್ದರು; ಕೆಲವರು ಚಕ್ರವರ್ತಿಯನ್ನು ದೂಷಿಸುತ್ತಲೂ ದೊರೆಯಾದ ಜಯಸಿಂಹನನ್ನು ಭೂಷಿಸುತ್ತಲೂ ಇದ್ದರು; ಮತ್ತೆ ಕೆಲವರು ಚಕ್ರವರ್ತಿಯ ಕಾಲದಲ್ಲಿ ನಡೆಯುತ್ತಲಿದ್ದ ಅನ್ಯಾಯಗಳನ್ನೂ ಈಗ ನಡೆಯುತ್ತಲಿರುವ ನ್ಯಾಯಗಳನ್ನೂ ಚರ್ಚಿಸುತ ಸಂತೋಷಪಡುತ್ತಲಿದ್ದರು.

ಈ ಸಮುದಾಯದಲ್ಲಿ ರಾಜಪೂಜ್ಯನಾಗಿ ಅನೇಕಮರ್ಯಾದೆಗಳನ್ನೂ ಪಡೆದ ಹೊದ್ದಿ ಹೆಸರುಗೊಂಡಿದ್ದ ಶಾಂತವೀರನೆಂಬ ಒಬ್ಬ ದೊಡ್ಡಮನುಷ್ಯನು ತನ್ನ ಮಗಳಾದ ರೇಣುಕೆಯೆಂಬವಳನ್ನು ಅದೇ ಊರಿನಲ್ಲಿ ನ್ಯಾಯಾಧಿಪನಾಗಿದ್ದ ವಲ್ಲಭದೇವಸಿಗೆ ಕೊಟ್ಟು ಮದುವೆಮಾಡಬೇಕೆಂದಿದ್ದನು. ಈಗ ಇಲ್ಲಿ ನಡೆಯುತ್ತಲಿರುವುದೇ ರೇಣುಕೆಯ ಮದುವೆಯ ಊಟವು. ಊಟವು ಸಂಭ್ರಮವಾಗಿ ನಡೆಯಿತು. ಎಲ್ಲರೂ ತಾಂಬೂಲಕ್ಕೆ ಸೇರುತ್ತಲೆ, ಶಾಂತವೀರನೆದ್ದು ರಾಜಸನ್ಮಾನಾರ್ಥವಾಗಿ ಬಂದು ತಾಂಬೂಲವನ್ನೆತ್ತಿ ಹಿಂದೆ ನಡೆದ ರಾಜ್ಯಪರಿವರ್ತನೆಗಳು ನಮ್ಮನ್ನು ಬಲುಮಟ್ಟಿಗೆ ಪೀಡಿಸಿದುವು. ಕ್ಷುದ್ರ ದೇವತೆಗಳೆಲ್ಲವೂ ಕೆಲವುಕಾಲ ಶಕ್ತಿಯುಳ್ಳವುಗಳಾಗಿದ್ದು ಕಡೆಗೆ ಜಗದೀಶನ ಮುಂದೆ ಹೇಗೆ ಅಪಜಯವನ್ನು ಹೊದ್ದಿ ಓಡುವುವೋ ಹಾಗೆಯೇ ಚಕ್ರವರ್ತಿಯು ನಮ್ಮ ರಾಜನ ಮುಂದೆ ಶಕ್ತಿರಹಿತನಾಗಿ ರಾಜ್ಯವಂ ಕಳೆದುಕೊಂಡು, ಏಲಾದ್ವೀಪವೆಂಬ ಮೂಲೆಯನ್ನು ಸೇರಿದನು. ಇಂಥಾ ಕ್ಷುದ್ರದೇವತೆಯನ್ನು ಭಜಿಸುವರು ಅಧೋಪತಿಯು

ಗತಿಯನ್ನೇ ಹೊದ್ದುವರು. ನಮ್ಮ ರಾಜನಾದರೋ! ಸೂರ್ಯನಂತೆ ತನ್ನ ರಾಜ್ಯ ದಲ್ಲಿರತಕ್ಕವರನ್ನೆಲ್ಲಾ ತನ್ನ ಪ್ರತಾಪದಿಂದ ರಕ್ಷಿಸುತ್ತಿರುವನಲ್ಲದೆ ಅವರವರ ಯೋಗ್ಯ ತಾನುಸಾರವಾಗಿ ಪ್ರಜೆಗಳಿಗೆ ಐಶ್ವರ್ಯಾದಿ ಬಹುಮಾನಗಳನ್ನು ಕೊಟ್ಟು ಆನಂದ ಪಡಿ ಸುತ್ತಲಿದಾನೆ. ಇಂಥವನಿಗೆ ಮಂಗಳವಾಗಲಿ ಎಂದನು. ಎಲ್ಲರೂ "ತಥಾಸ್ತು" ಎಂದರು.

ಎಲ್ಲರಿಗೂ ತಾಂಬೂಲವನ್ನು ಕೊಡುತ್ತಲಿರುವಾಗ ಅಲ್ಲಿದ್ದ ಸಾಲ್ವನೆಂಬ ಮತ್ತೊಬ್ಬ 'ದೊಡ್ಡಮನುಷ್ಯನು ಸ್ವಾಮೀ! ಶಾಂತವೀರರೇ! ತಾವು ತಮ್ಮ ಮಗಳಿಗೆ ಗಂಡನನ್ನಾಗಿ ವರಿಸಿರುವ ವಲ್ಲಭದೇವನ ತಂದೆಯಾದ ದೀನನಾಥನೂ ಕ್ಷುದ್ರದೇವತೆ ಯನ್ನು ಭಜಿಸುತ್ತಲಿದ್ದವನಲ್ಲವೇ? ವಲ್ಲಭದೇವನ ಮುಂದೆ ತಾವು ಹೀಗೆ ಹೇಳ ಬಹುದೇ? ಎನ್ನಲು, ಅದಕ್ಕೆ ವಲ್ಲಭದೇವನು ಸ್ವಾಮೀ! ಸಾಲ್ವರೆ! ಕ್ಷುದ್ರದೇವತೆ ಗಳಿಂದಲೂ ಲೋಕಕ್ಕೆ ಉಪಕಾರವುಂಟು ಎಂದನು.

ಏನಯ್ಯಾ ವಲ್ಲಭದೇವ! ರಾಜ್ಯಪರಿವರ್ತನದ ಮಾತುಗಳನ್ನಾಡುತ್ತಲಿದ್ದೀಯೆ? ಕ್ಷುದ್ರದೇವತೆಯು ಎಂದಿದ್ದರೂ ಕ್ಷುದ್ರವನ್ನೇ ಮಾಡುವುದು. ಅದನ್ನು ಭಜಿಸಿದರೆ ಅನರ್ಥಕ್ಕೆ ಕಾರಣವಾಗುವುದೆಂದು ನೀನು ಅರಿಯೆಯಾ?

ಸ್ವಾಮೀ! ಕ್ಷುದ್ರದೇವತೆಯು ಒಳ್ಳೆಯದನ್ನು ಮಾಡುವುದೆಂದು ನಾನು ಹೇಳ ಲಿಲ್ಲ. ರಾಜ್ಯವಿಚ್ಯುತನಾದ ಚಕ್ರವರ್ತಿಯೆಂಬ ಕ್ಷುದ್ರದೇವತೆಯನ್ನು ಸೇವೆಮಾಡಿ ದುದರಿಂದ ನನ್ನ ತಂದೆಯು ಬಹು ಕಷ್ಟಗಳನ್ನು ಅನುಭವಿಸಿರುವನು. ಈ ಅನುಭವವು ಆ ಕ್ಷುದ್ರದೇವತೆಯ ಸೇವೆಯಿಲ್ಲದೆ ಬರುತಿರಲಿಲ್ಲ. ನನ್ನ ತಂದೆಯು ಈಗ ಅದರ ಹಂಬಲನ್ನು ಬಿಟ್ಟಿರುವನೋ ಇಲ್ಲವೋ ತಿಳಿಯದು. ನಾನೇನೋ ಆವಾಗಲೂ ಅವ ವಿಧದಲ್ಲೂ ಅವನ ವ್ಯಾವಹಾರಗಳನ್ನು ಕಂಡವನಲ್ಲ. ಆ ಮುದಿಮರವನ್ನು ಮರೆತು ಬಿಡಿರಿ; ಅದರ ಜೀವರಸವು ಒಣಗುತ್ತ ಬಂದಿತು. ಇನ್ನು ಸ್ವಲ್ಪ ಕಾಲದಲ್ಲಿಯೇ ಆ ಮರವು ಅಗ್ನಿದಗ್ಧವಾಗಿ ಹೋಗುವುದು. ಆ ಮರದಿಂದ ಹೊರಟಿದ್ದರೂ ಈ ಕೊಂಬೆಯು ಪ್ರತ್ಯೇಕವಾದ ಮರವೆಂದೇ ತಿಳಿಯಿರಿ. ಜಯಸಿಂಹರಾಜನಲ್ಲಿ ಆವಾ ಗಲೂ ಸ್ಥಿರಭಕ್ತಿಯುಳ್ಳವನಾಗಿರುವುದರಿಂದ ಈ ಶಾಖೆಯು ನಿಮ್ಮ ಅಭಿವ್ಯಾಯಕ್ಕೆ ವಿರೋಧವಾಗಿ ಎಂದಿಗೂ ನಡೆಯದು.

ಸಾಧು, ಸಾಧು ಎಂದು ಎಲ್ಲರೂ ಏಕಕಂಠವಾಗಿ ಘೋಷಿಸಿದರು.

ಹಿಂದೆ ನಡೆದುವುಗಳನ್ನೆಲ್ಲ ನಾವು ಮರೆತು, ವಲ್ಲಭದೇವನು ಮುಂದೆ ದೃಢ ಸಂಕಲ್ಪನಾಗಿರುವನೆಂದು ಅತಿಸೋಣ ; ನಾವೆಲ್ಲರೂ ವಲ್ಲಭದೇವನು ದೃಢವಾದ ರಾಜ ಭಕ್ತಿಯುಳ್ಳವನೆಂದು ಜಯಸಿಂಹರಾಜನಿಗೆ ನಂಬುಗೆಗೊಟ್ಟಿರುವೆವಾದುದರಿಂದ ಇವನು ನಮ್ಮ ಮಾತನ್ನುಳಿಸುವುದಕ್ಕಾಗಿ ತನ್ನ ನಡತೆಯನ್ನು ಸರಿಯಾಗಿ ನೋಡಿಕೊಳ್ಳಬೇಕು. ಎಂದು ಸಾಲ್ವನು ಹೇಳಿದನು. ಅದಕ್ಕೆ ವಲ್ಲಭದೇವನು ಸ್ವಾಮೀ ! ಹಿಂದಿನ ನ್ಯೂನತೆ ಗಳಿಗಾಗಿ ಈಗ ನನ್ನ ತಂದೆಯು ವ್ಯಸನಪಡುತ್ತಲಿರುವಂತೆ ತೋರುತ್ತಲಿದೆ. ಆದುದ ರಿಂದಲೇ ಅವನು ನಮ್ಮ ಜಯಸಿಂಹರಾಜನಲ್ಲಿ ಭಕ್ತಿವಿಶ್ವಾಸವನ್ನು ಇತರರಿಗಿಂತ ಅಧಿಕ ವಾಗಿ ಇಟ್ಟಿರಬೇಕು ಎಂದು ಹೇಳಿ ತನ್ನ ಮಾತಿನಿಂದ ಆರಾರಿಗೆ ಆವಾವ ಅಭಿಪ್ರಾಯ ಗಳು ಉಂಟಾದುವು ಎಂಬುದನ್ನು ಅರಿಯಲೋಸುಗ ಎಲ್ಲರ ಮುಖವನ್ನೂ ನೋಡಿ ದನು. ಎಲ್ಲರೂ " ಭಲೆ ಭಲೆ " ಎಂದು ಅವನನ್ನು ಶ್ಲಾಘಿಸಿದರು.

ಆಗ ಸಾಲ್ವನು ವಲ್ಲಭದೇವನನ್ನು ನೋಡಿ ಕೆಲವು ದಿವಸಗಳ ಹಿಂದೆ ರಾಜ ಸಮ್ಮುಖದಲ್ಲಿ ನಮ್ಮ ಶಾಂತವೀರನ ಮಗಳ ಮದುವೆಯ ಪ್ರಸ್ತಾಪವು ಬಂದಿದ್ದಿತು. ಆಗ ಅವರು ವಲ್ಲಭದೇವನಾರು ? ದೀನನಾಥನ ಮಗನಲ್ಲವೇ ಎಂದು ಕೇಳಲು ಮಹಾ ಪ್ರಭೋ ! ಅವನು ತಂದೆಯಂತಲ್ಲ, ಯೋಗ್ಯನು. ಈಗ ಈ ರಾಜ್ಯದಲ್ಲಿರುವ ಎರಡು ಪಂಗಡದವರನ್ನು ಸೇರಿಸಿ ಸಮಾಧಾನಪಡಿಸುವುದು ಯುಕ್ತವೆಂದು ಕಾಣುತ್ತದೆ ಎನ್ನಲು ರಾಜರು ವಲ್ಲಭದೇವ, ವಲ್ಲಭದೇವ ಎಂದು ಎರಡು ಮೂರಾವೃತ್ತಿ ಹೇಳಿ ಅವನು ಇನ್ನೂ ಚಿಕ್ಕವಯಸ್ಸಿನವನು ; ಮುಂದೆ ಅಭಿವೃದ್ಧಿಗೆ ಬರತಕ್ಕವನು ; ಬುದ್ಧಿ ಶಾಲಿಯಾಗಿ ನಮ್ಮಲ್ಲಿ ಪೂರ್ಣಭಕ್ತಿಯುಳ್ಳವನಾಗಿದ್ದರೆ ಅವನ ಯೋಗಕ್ಷೇಮವನ್ನು ನಾವು ನೋಡಿಕೊಳ್ಳುವೆವು ಎಂದುದಕ್ಕೆ, ನಾನು ಮಹಾಸ್ವಾಮೀ ! ಅವನಿಗೆ ತಮ್ಮಲ್ಲಿ ಪರಿಪೂರ್ಣವಾದ ಭಕ್ತಿಯಿದೆ, ಎಂದು ಹೇಳಿದ ಮೇಲೆ ಈ ಮದುವೆಗೆ ಸಮ್ಮತಿಸಿದರು.

ಸ್ವಾಮೀ ಸಾಲ್ವರೆ ! ಅಲ್ಪನಾದ ನನ್ನನ್ನು ರಾಜರು ಅಷ್ಟುಮಟ್ಟಿಗೆ ವಿಚಾರಿ ಸಿದರೋ ?

ಅವರು ಹೇಳಿದ ಮಾತನ್ನೇ ಈಗ ನಾನು ಹೇಳಿದ್ದೆನು ಎಂದು ಸಾಲ್ವನು ಹೇಳು ತ್ತಲೆ ಅದು ನಿಜವೆಂದು ಶಾಂತವೀರನು ಒಪ್ಪಿಕೊಂಡನು. ಆಗ ವಲ್ಲಭದೇವನು ಇಷ್ಟು

ಮಟ್ಟಿಗೆ ರಾಜರ ಕೃಪೆ ನನ್ನ ಮೇಲೆ ಇರುವಾಗ ನಾನು ಅವರಿಗೋಸ್ಕರ ಅವುದನ್ನು ತಾನೇ ಮಾಡಲಾರೆನು, ಎಂದನು.

ಅದನ್ನು ಶಾಂತವೀರನು ಕೇಳಿ ಸಂತೋಷಪಟ್ಟು ಈಗ ನಿನಗೆ ಇರುವ ಅಭಿಪ್ರಾಯವು ಸರಿಯಾದುದು; ಈಗ ರಾಜದ್ರೋಹಿಗಳಾರಾದರೂ ಸಿಕ್ಕಿದರೆ ಅವರನ್ನು ಸರಿಯಾಗಿ ದಂಡಿಸಿ ಮುಂದೆ ಅಂಥಾ ದ್ರೋಹಗಳು ನಡೆಯದಂತೆ ಮಾಡುತ್ತೀಯೆ ಎಂಬ ನಂಬುಗೆಯು ನನಗುಂಟಾಯಿತು ಎಂದು ಹೇಳಿ ತನ್ನ ಮಗಳು ರೇಣುಕೆಯ ಮುಖವನ್ನು ನೋಡಿದನು.

ಆಗ ಅವಳು ಅಪ್ಪಾ ನಿನ್ನ ಕೋರಿಕೆಯು ಎಂದಿಗೂ ನೆರವೇರಬೇಡವೆಂದು ನಾನು ದೇವರನ್ನು ಪ್ರಾರ್ಥಿಸುವೆನು. ರಾಜದ್ರೋಹಿಗಳಿಗೆ ಮಾಡುವ ದಂಡನೆಗಳನ್ನು ಕೇಳಿದರೆ ನನಗೆ ಸಂಕಟವಾಗುವುದು. ನ್ಯಾಯಾಧಿಪತಿಗಳ ಕೈಗೆ ಅಲ್ಪಾಪರಾಧಿಗಳು ಮಾತ್ರ ಸಿಕ್ಕಲಿ ಎಂದಳು.

ಅಮ್ಮಾ ಮಗುವೇ! ಮನುಷ್ಯರಿಗುಂಟಾಗುವ ಬುದ್ಧಿರೋಗಕ್ಕೆ ನ್ಯಾಯಾಧಿಪತಿಗಳು ವೈದ್ಯರು. ವೈದ್ಯರು ಮನುಷ್ಯರ ಶಾರೀರಕ ರೋಗಗಳಿಗೆ ಔಷಧವಂ ಕೊಟುವಾಸಿಮಾಡುವರು. ಅವರನ್ನು ಅಲ್ಪರೋಗಗಳಿಗೆ ಮಾತ್ರ ಚಿಕಿತ್ಸೆಮಾಡಿ, ಪ್ರಬಲವಾದ ರೋಗಗಳಿಗೆ ಚಿಕಿತ್ಸೆ ಮಾಡುವ ಅವಶ್ಯಕವಿಲ್ಲವೆಂದು ಹೇಳಿದಂತಾಯಿತು. ಪ್ರಬಲ ರೋಗಗಳನ್ನು ವಾಸಿಮಾಡಿದರಲ್ಲವೇ ಜನಗಳಿಗೆ ಉಪಕಾರವೂ ವೈದ್ಯರಿಗೆ ಖ್ಯಾತಿಯೂ ಲಾಭವೂ ಬರುವುವು.

ಶಾಂತವೀರನು ಈರೀತಿ ಹೇಳುತ್ತಲಿರುವ ವೇಳೆಗೆ ಸರಿಯಾಗಿ ಒಬ್ಬ ಭೃತ್ಯನು ವಲ್ಲಭದೇವನ ಸಮೀಪಕ್ಕೆ ಬಂದು ಅವನ ಕಿವಿಯಲ್ಲಿ ಏನನ್ನೋ ಹೇಳಿದನು. ಒಡನೆಯೇ ವಲ್ಲಭದೇವನು ಎದ್ದು ತನ್ನ ಮಾವನ ಅಪೇಕ್ಷೆಯು ನೆರವೇರುವ ಸಮಯವೊದಗಿತೆಂಬ ಅಭಿಪ್ರಾಯವನ್ನು ಮುಖಭಾವದಿಂದ ಸೂಚಿಸುತ್ತ ನನಗೆ ಸ್ವಲ್ಪ ಅವಸರದ ಕೆಲಸವಿದೆ; ಹೊರಗೆ ಹೋಗಿ ಬರುವೆನು ಎಂದು ಹೊರಗೆ ಹೋಗಿ ನಿಮಿಷ ಮಾತ್ರದಲ್ಲಿ ಹಿಂದಿರುಗಿ ಬಂದು ನೀವೆಲ್ಲರೂ ಪ್ರಬಲಜಾಡ್ಯಕ್ಕೆ ಚಿಕಿತ್ಸೆ ಮಾಡಿದರೆ ಖ್ಯಾತಿಯೂ ಲಾಭವೂ ಬರುವುದೆಂದು ಈಗತಾನೇ ಹೇಳುತಲಿದ್ದಿರಿ. ಅಂಥಾ ಜಾಡ್ಯವು ಈಗ ಒಂದು ಅನುಕೂಲವಾಗಿ ದೊರೆತಿದೆ. ಖ್ಯಾತಿಯನ್ನೂ ಲಾಭವನ್ನೂ

ನಾನು ಕೋರುವನಲ್ಲ; ಆದರೂ ಈ ಜಾಡ್ಯಕ್ಕೆ ತಕ್ಕ ಚಿಕಿತ್ಸೆಯನ್ನು ಮಾಡುವೆನು ಎಂದು ಹಸನ್ಮುಖನಾಗಿ ಹೇಳಿದನು.

ಆಗ ರೇಣುಕೆಯು ವಲ್ಲಭದೇವನನ್ನು ನೋಡಿ ತಮ್ಮ ಮಾತು ನನಗೆ ಚೆನ್ನಾಗಿ ತಿಳಿಯಲಿಲ್ಲ ಎನ್ನಲು, ನಾವು ಪರಿಹಾಸ್ಯವಾಗಿ ಹೇಳುತಲಿದ್ದುದು ನಿಜವಾಗಿ ಪರಿಣಮಿಸಿತು; ರಾಜದ್ರೋಹಕಾರ್ಯವೊಂದು ನಡೆದಿದೆ ಎಂದನು.

ಅಯ್ಯೋ! ಕಷ್ಟ, ಕಷ್ಟ, ಎಂದು ಅವಳು ಹೇಳಿದಳು. ಕೂಡಲೇ ಅವಳ ಮುಖವು ಬಿಳುಪಾಯಿತು; ಹಾಗೆಯೇ ಸ್ವಲ್ಪ ಸಮಾಧಾನವನ್ನು ತಾಳಿ ಆಕೆಯು ಅದು ನಿಜವೋ? ಎಂದಳು.

ಇಗೋ ನನಗೆ ಬಂದಿರುವ ಕಾಗದವನ್ನು ಓದಿ ನೋಡು ಎಂದು ವಲ್ಲಭದೇವನು ತನ್ನಲ್ಲಿದ್ದ ಕಾಗದವನ್ನು ರೇಣುಕೆಯ ಕೈಗೆ ಕೊಟ್ಟನು.

ಆ ಕಾಗದದಲ್ಲಿ ಈ ತೆರದಿಂದ ಬರೆದಿದ್ದಿತು:—

ವಕೀಲ ಮಹಾಶಯರ ಸಮಕ್ಷಮಕ್ಕೆ. ಸರ್ಕಾರದ ಅಭಿಮಾನಿಯಾದವನೊಬ್ಬನು ವಿನಯಪೂರ್ವಕವಾಗಿ ತಿಳಿಯಪಡಿಸುವುದೇನೆಂದರೆ—ಈ ದಿನ ರೇವಿಗೆ ಬಂದ ಜಯಲಕ್ಷ್ಮಿಯೆಂಬ ನಾವೆಯಲ್ಲಿ ನೌಕಾಧಿಪತಿಯ ಸಹಾಯಕನಾದ ಧರ್ಮದೇವನೆಂಬುವನು ಏಲಾದ್ವೀಪಕ್ಕೆ ಹೋಗಿ, ಅಲ್ಲಿಯ ರಾಕ್ಷಸನಿಗೆ ಒಂದು ಲೇಖನವನ್ನು ಕೊಟ್ಟು ಅಮರದೇಶದಲ್ಲಿರುವ ಆ ರಾಕ್ಷಸನ ಗೂಢಚಾರನೊಬ್ಬನಿಗೆ ಮತ್ತೊಂದು ಲೇಖನವನ್ನು ತಂದಿರುವನು. ಆ ಲೇಖನವು ಅವನಲ್ಲಿಯೋ, ಅವನ ಮನೆಯಲ್ಲಿಯೋ, ನಾವೆಯಲ್ಲಿಯೋ ಇರುವುದು. ಧರ್ಮದೇವನನ್ನು ಸೆರೆ ಹಿಡಿದು ಹುಡುಕಿದರೆ ಅದು ಸಿಕ್ಕುವುದು.

ಅದನ್ನು ಓದಿ ರೇಣುಕೆಯು ಇದು ಮೂಕಅರ್ಜಿ, ಊರಿಲ್ಲ; ಬರೆದವರ ಹೆಸರಿಲ್ಲ; ನಿಮ್ಮ ಹೆಸರಿಗೆ ಬರೆದಿಲ್ಲ ಎಂದು ಹೇಳಿ ಅದನ್ನು ವಲ್ಲಭದೇವನ ಕೈಯಲ್ಲಿ ಕೊಟ್ಟಳು.

ಅದರೇನು? ಸರ್ಕಾರದ ವಕೀಲನು ಊರಲ್ಲಿ ಇಲ್ಲವಾದುದರಿಂದ ನಾನೇ ಅವನ ಕೆಲಸವನ್ನು ನೋಡುತ್ತಲಿದ್ದೇನೆ.

ಅಪರಾಧಿಯು ಎಲ್ಲಿ?

ಸೆರೆಯಲ್ಲಿ. ಈ ಅರ್ಜಿಯಲ್ಲಿ ಹೇಳಿರುವ ಕಾಗದವು ಸಿಕ್ಕಿದರೆ ಅಪರಾಧಿಯು ಯಮಲೋಕದಲ್ಲಿ ಇರುವನು.

ಆ ಮಾತನ್ನು ಕೇಳಿ ರೇಣುಕೆಯು ಕೈಮುಗಿದುಕೊಂಡು ಸ್ವಾಮೀ! ಈ ದಿವಸ ನಮ್ಮ ಮದುವೆಯು ಊಟವು. ಇಂದು ಅನಿರ್ಭಾಗ್ಯನಾದ ಅಪರಾಧಿಯ ವಿಷಯದಲ್ಲಿ ನನಗೋಸುಗ ತಾವು ಪರಿಪೂರ್ಣಕೃಪೆಯನ್ನು ತೋರಿಸಬೇಕು ಎಂದು ಅಂಗಲಾಚಿಕೊಂಡಳು.

ನಿನ್ನ ಸಂತೋಷಕ್ಕಾಗಿ ಈ ಅಪರಾಧಿಯಲ್ಲಿ ಸಾಧ್ಯವಾದ ಮಟ್ಟಗೂ ಕರುಣೆಯನ್ನು ತೋರಿಸುತ್ತೇನೆ. ಅಪರಾಧವು ಪ್ರಬಲವಾಗಿದ್ದರೆ ಬಂದಿಯ ಶಿರಚ್ಛೇದನವನ್ನು ಮಾಡಿಸುವೆನು ಎಂದನು.

ಆ ಮಾತನ್ನು ಕೇಳಿ ರೇಣುಕೆಯ ಸರ್ವಾಂಗವೂ ನಡುಗಿ ಬೆವರಿತು. ಸ್ವಾಮೀ! ನನಗಾಗಿ ಅಪರಾಧಿಯನ್ನು ಕ್ಷಮಿಸಬೇಕು ಎಂದು ಅವಳು ಪುನಃ ವಲ್ಲಭದೇವನನ್ನು ಬೇಡಿದುದಕ್ಕೆ, ಅವನು ನೋಡೋಣ ಎಂದನು.

ಅಷ್ಟರಲ್ಲಿಯೇ ಶಾಂತವೀರನು ಅಯ್ಯಾ ವಲ್ಲಭದೇವ! ಹೆಂಗುಸರ ಮಾತನ್ನು ನೀನು ಕೇಳಬೇಡ ಸರ್ಕಾರದ ಕೆಲಸವನ್ನು ಸರಿಯಾಗಿ ಮಾಡು, ಹೋಗು ಎನ್ನಲು ವಲ್ಲಭದೇವನು ನ್ಯಾಯಸ್ಥಾನಕ್ಕೆ ಹೊರಟನು.

ವಲ್ಲಭದೇವನು ಹೊರಗೆ ಬರುವಾಗ ಪ್ರಾಣಗಳನ್ನು ಉಳಿಸುವ ತೆಗೆಯಿಸುವ ಅಧಿಕಾರಿಯ ಗಾಂಭೀರ್ಯವನ್ನು ತಾಳಿ, ನಾನು ಶಾಂತವೀರನ ಮಗಳನ್ನು ಮದುವೆಯಾಗಿ ಮುಂದೆ ಅಭಿವೃದ್ಧಿಗೆ ಬರಬೇಕೆಂದಿರುವಾಗ ನನ್ನ ತಂದೆಯ ರಾಜಕೀಯ ವ್ಯಾಪಾರದಿಂದ ಎಲ್ಲಿ ನನ್ನ ಅಭಿವೃದ್ಧಿಗೆ ಕುಂದಕವುಂಟಾಗುವುದೋ, ಉಂಟಾದರೆ ಪರಿಹಾರವಾವುದು? ಒಂದು ವೇಳೆ ನನ್ನ ತಂದೆಯು ಸಿಕ್ಕಿಬಿದ್ದರೆ ಅವನನ್ನು ಬಿಡಿಸಿಕೊಳ್ಳುವುದು ಹೇಗೆ, ಎಂದು ಯೋಚಿಸುತ್ತ, ಮಾಡುವ ಕೆಲಸಗಳನ್ನು ಉಪಾಯವಾಗಿಯೂ ಅನುಮಾನಕ್ಕೆ ಅಸ್ಪದವಿಲ್ಲದಂತೆಯೂ ಮಾಡಿದರೆ ನನ್ನ ಏಳಿಗೆಗೂ ಕುಂದುಕವಿಲ್ಲದೆ ತಂದೆಯನ್ನೂ ಉಳಿಸಿಕೊಳ್ಳಬಹುದು ಎಂದು ಧೈರ್ಯಗೊಂಡು, ತನ್ನಂಥಾ ಬುದ್ಧಿಮಂತನೂ ಸುಖಿಯೂ ಆರೂ ಇಲ್ಲವೆಂದು ಹಿಗ್ಗುತ್ತ ನ್ಯಾಯಸ್ಥಾನದ ಬಾಗಿಲನ್ನು ಸೇರಿದನು.

ವಲ್ಲಭದೇವನು ಮೊದಲೇ ಧನಿಕನು. ದೀನನಾಥನಿಗೆ ಒಬನೇ ಮಗನು.

ಪಿತ್ರಾರ್ಜಿತದ ಸ್ವತ್ತು ಹೇರಳವಾಗಿದ್ದಿತು. ಅವನಿಗೆ ವಯಸ್ಸು ಇಪ್ಪತ್ತೇಳು; ಆದರೂ ದೊಡ್ಡ ಅಧಿಕಾರದಲ್ಲಿದ್ದನು. ಸುಂದರಿಯಾದ ರೇಣುಕೆಯನ್ನು ಮದುವೆಯಾಗಿ ಅವಳ ಸ್ತ್ರೀಧನವಾದ ಲಕ್ಷವರಹಗಳೂ ತನಗೇ ಸೇರುವಂತೆ ಏರ್ಪಾಡಾಗಿದ್ದಿತು. ಮತ್ತು ಶಾಂತನೀರನು ರಾಜನ ಅಭಿಮಾನಕ್ಕೆ ಪಾತ್ರವಾಗಿರುವುದರಿಂದ ತನ್ನ ಅಧಿಕಾರವು ಇನ್ನಷ್ಟು ಹೆಚ್ಚಾಗುವುದು ಎಂದೂ ನಂಬಿಕೊಂಡಿದ್ದನು. ಇದನ್ನೆಲ್ಲ ಯೋಚಿಸುತ್ತ ಅವನಿಗೆ ಮನಸ್ಸಿನಲ್ಲಿ ಉಂಟಾದ ಸಂತೋಷವು ಮುಖದಲ್ಲಿ ಹೊಮ್ಮುತಿದ್ದಿತು. ಆದರೆ ಅವನ ಗಂಭೀರಮುದ್ರೆಯಿಂದ ಅದು ಮುದ್ರಿಸಲ್ಪಟ್ಟಿದ್ದಿತು.

ಏಳನೆಯ ಅಧ್ಯಾಯ

ವಿಚಾರಣೆಯು.

ಶಾಂತನೀರನ ಮನೆಗೆ ಸಮೀಪದಲ್ಲಿಯೇ ನ್ಯಾಯಸ್ಥಾನವು ಇದ್ದಿತು. ವಲ್ಲಭದೇವನು ಅಲ್ಲಿಗೆ ಬಂದಾಗ ಬಾಗಿಲಿನಲ್ಲಿ ಒಬ್ಬ ಪೋಲೀಸು ಅಧಿಕಾರಿಯು ನಿಂತಿದ್ದನು. ಅವನನ್ನು ನೋಡುತ್ತಲೇ ವಲ್ಲಭದೇವನ ಮನಸ್ಸಿನ ಸುಖಾನುಭವವು ಮರೆತು, ಸದ್ಯದ ಕಾರ್ಯವು ನೆನಪಿಗೆ ಒಂದಿತು. ಆಗ ಅವನು ಮತ್ತಷ್ಟು ಗಾಂಭೀರ್ಯವನ್ನು ವಹಿಸಿ ನೀನು ಕಳುಹಿಸಿದ ಲೇಖನವನ್ನು ನಾನು ನೋಡಿದೆನು. ಅಪರಾಧಿಯನ್ನು ಸೆರೆಯಲ್ಲಿಟ್ಟಿರುವುದು ಸರಿ; ಹೊಸ ಸುದ್ದಿಯೇನಾದರೂ ಉಂಟೋ? ಎಂದನು.

ಏವುದೂ ಇಲ್ಲ

ಅಪರಾಧಿಗೆ ಎಷ್ಟು ವಯಸ್ಸು ?

ಹತ್ತೊಂಭತ್ತು.

ಈ ವೇಳೆಗೆ ಈ ಮನೆಯ ಸಮೀಪದಲ್ಲಿ ಮರೆಯಾಗಿ ನಿಂತಿದ್ದ ಒಬ್ಬನು ವಲ್ಲಭದೇವನ ಬಳಿಗೆ ಬಂದು ಸ್ವಾಮೀ, ವಲ್ಲಭದೇವರೇ ನಿಮ್ಮನ್ನು ನೋಡಿ ಬಹು ದಿವಸಗಳಾಯಿತು; ಸೌಖ್ಯವೇ? ಎಂದನು.

ತನ್ನ ಪದವಿಗೆ ಗೌರವವನ್ನು ಕೊಟ್ಟು ಮಾತನಾಡಲಿಲ್ಲವೆಂಬ ಅಸಮಾಧಾನದಿಂದ ವಲ್ಲಭದೇವನು ಬಂದ ಕೆಲಸವೇನು ಎನ್ನಲು, ಪೋಲೀಸಿನವರು ನಮ್ಮ ಹಡಗಿನ

ನೌಕಾಧಿಪತಿಯು ಸಹಾಯಕನಾಗಿದ್ದ ಧರ್ಮದೇವನೆಂಬುವನನ್ನು ರಾಜದ್ರೋಹಿಯೆಂಬ ತಪ್ಪು ತಿಳುವಳಿಕೆಯಿಂದ ಸೆರೆಯಲ್ಲಿಟ್ಟಿರುವರು, ಎಂದನು.

ಅದನ್ನು ನಾನು ಬಲ್ಲೆ; ಅವನ ವಿಚಾರಣೆಗೋಸ್ಕರವೇ ಈಗ ನಾನು ಇಲ್ಲಿಗೆ ಬಂದುದು.

ಧನಕೋಟಿಯು ಸ್ನೇಹಭಾವದಿಂದ ವಲ್ಲಭದೇವನನ್ನು ನೋಡಿ, ಧರ್ಮದೇವನನ್ನು ನೀವರಿಯಿರಿ; ಅವನು ಬಹು ಯೋಗ್ಯನು; ಸಾಧು; ಅವನನ್ನು ಬಂಧನದಿಂದ ಬಿಡಿಸಿ ನಮ್ಮ ಬಳಿಗೆ ಬೇಗನೆ ಕಳುಹಿಸಿಕೊಡಬೇಕು, ಎಂದು ಕೇಳಿಕೊಂಡನು.

ವಲ್ಲಭದೇವನು ಕುಲೀನನು; ಧನಕೋಟಿಯು ಸಾಮಾನ್ಯನು. ಅವನು ಈಗಿನ ರಾಜನಲ್ಲಿ ಭಕ್ತಿಯುಳ್ಳವನು; ಇವನು ಚಕ್ರವರ್ತಿಯ ಕಡೆಯವನು. ಅವನು ಉದ್ಯೋಗಸ್ಥನು; ಇವನು ವ್ಯಾಪಾರಿ, ಆದುದರಿಂದ ದೃಢಪರಿಚರ್ಯದಿಂದ ಧನಕೋಟಿಯು ಆಡಿದ ಮಾತನ್ನು ವಲ್ಲಭದೇವನು ತಿರಸ್ಕರಿಸಿ ನಿನ್ನ ಅಭಿಪ್ರಾಯದಲ್ಲಿ ಧರ್ಮದೇವನು ಯೋಗ್ಯನಾಗಿರಬಹುದು; ಸರ್ಕಾರದವರ ಅಭಿಪ್ರಾಯದಲ್ಲಿ ಅವನು ರಾಜದ್ರೋಹಿಯಾಗಿ ಏಕೆ ಇರಬಾರದು ಎಂದು ದುರಗುರನೆ ಧನಕೋಟಿಯ ಮುಖವನ್ನು ನೋಡಿದನು.

ಅದನ್ನು ಕೇಳಿ ಧನಕೋಟಿಯು ಗಾಬರಿಬಿದ್ದು ಸ್ವಾಮೀ? ತಾವು ದಯಾಳುಗಳು; ನ್ಯಾಯವನ್ನು ಬಿಟ್ಟು ಹೋಗತಕ್ಕವರಲ್ಲ; ಆದುದರಿಂದ ಧರ್ಮದೇವನನ್ನು ಜಾಗ್ರತೆಯಾಗಿ ಬಿಟ್ಟುಕೊಡಬೇಕೆಂದು ಬೇಡಿಕೊಳ್ಳುತ್ತೇನೆ ಎಂದನು.

ಆತನು ಅಪರಾಧಿಯಲ್ಲದೆ ಇದ್ದರೆ ನಿನ್ನ ಪ್ರಾರ್ಥನೆಯು ವ್ಯರ್ಥವಾಗಲಾರದು. ಎಂದು ವಲ್ಲಭದೇವನು ಹೇಳಿ ನ್ಯಾಯಸ್ಥಾನವನ್ನು ಪ್ರವೇಶಿಸಿದನು.

ಒಳಗೆ ನಾಲ್ಕಾರು ಕೋಲೆಸಿನವರು ತಮ್ಮ ನಡುವೆ ಧರ್ಮದೇವನನ್ನು ನಿಲ್ಲಿಸಿಕೊಂಡಿದ್ದರು. ವಲ್ಲಭದೇವನು ಧರ್ಮದೇವನನ್ನು ಕ್ಷಣಮಾತ್ರ ದೃಷ್ಟಿಸಿನೋಡಿ ಮುಂದೆ ಹೊರಟು ಅಧಿಕಾರದ ಪೀಠವನ್ನು ಸೇರಿದನು. ಧರ್ಮದೇವನ ಆಗಲವಾದ ಹಣೆಯನ್ನೂ, ಕಣ್ಣಿನ ಹೊಳಪನ್ನೂ, ಮುಖದ ವರ್ಚಸ್ಸನ್ನೂ ನೋಡಿದವನಾಗಿ ಇವನು ಬುದ್ಧಿಮಂತನು, ಧೈರ್ಯಶಾಲಿ, ಕಪಟವರಿಯದವನು ಎಂದು ತಿಳಿದು, ವಲ್ಲಭದೇವನ ಮನದಲ್ಲಿ ದಯೆಯುಂಟಾಯಿತು. ಆದರೆ ಪ್ರಥಮಾಭಿಪ್ರಾಯವು ಒಹುಶಃ ಕೊನೆಗೆ

ತವ್ವಾಗಬಹುದೆಂಬ ಶಂಕೆಯಿಂದ, ಅಪರಾಧಿಯನ್ನು ಕರೆದುಕೊಂಡು ಬನ್ನಿರಿ ಎಂದು ಪೋಲೀಸಿನವರಿಗೆ ಗಟ್ಟಿಯಾಗಿ ಹೇಳಿದನು. ಉತ್ತರಕ್ಷಣದಲ್ಲಿಯೇ ಧರ್ಮದೇವನನ್ನು ಒಳಕ್ಕೆ ಕರೆತಂದರು. ಅವನ ಮುಖವು ವಿವರ್ಣವಾಗಿದ್ದರೂ ಶಾಂತವಾಗಿದ್ದಿತು. ಅವನು ಒಳಗೆ ಬಂದು ನ್ಯಾಯಾಧಿಪತಿಗೆ ತಲೆಬಾಗಿ ಅಪರಾಧಿಯ ಸ್ಥಾನದಲ್ಲಿ ನಿಂತುಕೊಂಡನು.

ದುರ್ವೃತ್ತಿಯಲ್ಲಿ ಪೋಲೀಸಿನವರು ಅಗ್ರಗಣ್ಯರು; ಅಪರಾಧಿಯೆಂದು ಅವನಾದರೂ ಸಿಕ್ಕಿದರೆ ಸರಿ; ಬೇಕಾಗುವ ಕಾಗದಗಳನ್ನು ನಿಮಿಷಮಾತ್ರದಲ್ಲಿ ಸಂಪಾದಿಸಿ ಬಿಡುವರು. ಧರ್ಮದೇವನ ವಿಷಯದಲ್ಲಿ ಕಾಗದಗಳು ಹೇರಳವಾಗಿ ಸೇರಿದ್ದಿತೆಂದರೆ ಆಶ್ಚರ್ಯವೇನು? ಅವು ವಲ್ಲಭದೇವನ ಮೇಜಿನಮೇಲೆ ಸಿದ್ಧವಾಗಿದ್ದುವು; ಅವನು ಅವುಗಳನ್ನು ಒಂದೊಂದಾಗಿ ಬಿಚ್ಚಿನೋಡುತ್ತ, ನೀನು ಆರು, ಏನು ಕೆಲಸ ಎಂದು ಅಪರಾಧಿಯನ್ನು ಕೇಳಿದನು.

ಮಹಾಸ್ವಾಮೀ! ನನ್ನ ಹೆಸರು ಧರ್ಮದೇವ; ನಾನು ಜಯಲಕ್ಷ್ಮಿಯ ಸಹಾಯಕ ನೌಕಾಧಿಪನು.

ನಿನ್ನ ವಯಸ್ಸೆಷ್ಟು? ಹತ್ತೊಂಭತ್ತು.

ನಿನ್ನನ್ನು ಸೆರೆಹಿಡಿಯುವಾಗ ಏನ ಮಾಡುತ್ತಲಿದ್ದೆ?

ನನ್ನ ಮದುವೆಯೂಟದಲ್ಲಿದ್ದೆ.

ಆ ಮಾತನ್ನು ಕೇಳಿ ವಲ್ಲಭದೇವನು ಮನಗರಗಿದವನಾಗಿ ಮದುವೆಯೂಟದಲ್ಲಿದ್ದೆಯಾ? ಎಂದು ಪುನಃ ಕೇಳಿದನು.

ಸ್ವಾಮೀ! ಅಹುದು. ಮೂರು ವರ್ಷಗಳಿಂದ ನಾನು ಪ್ರೀತಿಸುತ್ತಲಿದ್ದ ಸುಂದರಿಯಾದ ಲಲಿತಾಂಗಿಯನ್ನು ಮದುವೆಯಾಗುವ ಸಂದರ್ಭದಲ್ಲಿ ನನ್ನನ್ನು ಸೆರೆಹಿಡಿದರು ಎಂದು ಬಹು ದೀನಸ್ವರದಿಂದ ಹೇಳಿದನು. ಆ ಸ್ವರವು ವಲ್ಲಭದೇವನ ಹೃದಯವನ್ನು ಭೇದಿಸಿತು. ನಾನು ಇದೇ ಸನ್ನಿವೇಶದಲ್ಲಿದ್ದು ಪ್ರಿಯಳಾದ ಸುಂದರಾಂಗಿಯನ್ನೂ ಮದುವೆಯೂಟವನ್ನೂ, ಇವುಗಳಿಂದುಂಟಾಗಿದ್ದ ಸುಖವನ್ನೂ ಬಿಟ್ಟು, ನನ್ನಂತೆಯೇ ಮದುವೆಯಾಗುವುದರಲ್ಲಿರುವ ಮತ್ತೊಬ್ಬನ ಸುಖವನ್ನು ಕೆಡಿಸುವುದಕ್ಕೆ ಬಂದಹಾಗಾಯಿತು ಎಂದು ಯೋಚಿಸಿಕೊಳ್ಳುತ್ತ, ಆಮೇಲೆ ಎಂದನು.

ಆಮೇಲೆ ಏನು ಹೇಳಲಿ?

ತಿಳಿದುದನ್ನೆಲ್ಲಾ ಹೇಳು.

ಸ್ವಾಮೀ! ನನಗೆ ಅವುದೂ ತಿಳಿಯದು. ಅವನಿಷಯದಲ್ಲಾಗಲಿ ಅನ್ಯ ವಿಷಯದಲ್ಲಾಗಲಿ ಕೇಳಿದ್ದನ್ನು ಬೇಕೋ ಅಪ್ಪಣೆಯಾದರೆ ತಿಳಿದುದನ್ನು ಅರಿಕೆಮಾಡುತ್ತೇನೆ.

ನೀನು ರಾಜ್ಯಭ್ರಷ್ಟನಾದ ಚಕ್ರವರ್ತಿಯ ಸೈನ್ಯದಲ್ಲಿದ್ದುಕೊಂಡು ಬಹಳ ದಿನ ಕೆಲಸ ಮಾಡಿದ್ದೆ. ಅವರು ನನ್ನನ್ನು ಸೈನ್ಯಕ್ಕೆ ಸೇರಿಸಬೇಕೆಂದು ಇದ್ದಕ್ಕಿದ್ದಂತೆ ಕಾಡಿಗೆ ಬಂದು ಅವರ ಕೈಬಿಟ್ಟು ಹೋಗಿರುವುದು ಸರಿಯಲ್ಲವೆಂದು ಹೇಳಿದಂತೆ ಆಯಿತು. ಅವರಿಗೆ ಸಹಾಯ ಮಾಡಬೇಕೆಂಬ ಆಸೆಯಿಂದಲೇ ಅವರ ಸೈನ್ಯಕ್ಕೆ ಸೇರಿಸಬೇಕೆಂದು ಕಾಣುತ್ತದೆ. ಅವರಿಗೆ ಸಹಾಯ ಮಾಡಲು ಬಂದಿದ್ದರೆ ಅವರಿಗೆ ಸಹಾಯ ಮಾಡಲಾರದೆ ಹೋದೆನಲ್ಲಾ ಎಂಬ ಪಶ್ಚಾತ್ತಾಪವಾಗಿರಬೇಕು. ಆದರೆ ಸ್ವಾಮಿಭಕ್ತಿ ಸ್ವಜನಪಕ್ಷಪಾತ ಇವೆರಡರಲ್ಲಿ ಯಾವುದು ಹೆಚ್ಚಿನದು ಎಂಬುದನ್ನು ನಿಶ್ಚಯಿಸಲಾರದೆ ಚಿಕ್ಕನು; ವೃಥಾ ಸಂಶಯಪಡುವುದು ಬೇಡವೆಂದು ಸುಂದರಿಯಿಂದ ಸ್ವಲ್ಪ ತಾಂಬೂಲವನ್ನು ಪಡೆದು ಅಗಿಯುವುದಕ್ಕೆ ಆರಂಭಿಸಿದನು. ಈ ಮೂರರಲ್ಲಿ ನನ್ನ ಯಾವುದಾದರೂ ಒಂದು ವ್ಯಾಪಾರವೂ ಅಡಚಣೆಯಿಲ್ಲದೆ ನಡೆಯಲಿ ಎಂದು ಅವಳು ಹೇಳಿದ್ದಕ್ಕೆ ಅವನು ಸಂತೋಷಪಟ್ಟನು. ಸ್ತ್ರೀಯರ ಸಹಾಯವಿಲ್ಲದೆ ಯಾವ ಕಾರ್ಯವೂ ಸಿದ್ಧಿಸುವುದಿಲ್ಲವೆಂದು ಹಿರಿಯರು ನಿಶ್ಚಯಿಸಿರುವುದು ಈ ಘಟ್ಟಗಳಲ್ಲಿ ಕೇಳಿಬರುವುದೇನು? ಮುಸಲ್ಮಾನ್ ಚಕ್ರವರ್ತಿಯ ಸೈನ್ಯದಲ್ಲಿ ಸೇರಿಕೊಂಡಿದ್ದ ಚಿಕ್ಕನು ಸಂಗೀತಶಾಸ್ತ್ರದಲ್ಲಿ ಪರಿಣತನಾಗಿದ್ದನು. ಅವನು ತನ್ನ ತಂಬೂರಿಯನ್ನು ಸ್ವರಸಂಪನ್ನವಾಗಿ ಮಾಡಿಕೊಂಡು ಸುಂದರಿಯ ಮುಂದೆ ಕುಳಿತು ಸಂಗೀತಪ್ರಾರಂಭಕ್ಕೆ ಮುಂಚೆ ಸುಂದರಿಯನ್ನು ಕುರಿತು "ಸುಂದರಿ! ನಿನಗೆ ಯಾವ ಹಾಡು ಬೇಕು?" ಎಂದು ಪ್ರಶ್ನೆ ಮಾಡಿದನು. ಸುಂದರಿ ಸಂತೋಷದಿಂದ ಹಾಡಲು ಪ್ರಾರಂಭಿಸಿದಳು. ಚಿಕ್ಕನು ಅವಳ ಹಾಡಿಗೆ ತಕ್ಕಂತೆ ತಂಬೂರಿಯನ್ನು ಮೀಟಿದನು. ಸುಂದರಿಯ ಹಾಡು ಮುಗಿದ ಮೇಲೆ ಚಿಕ್ಕನು ಅವಳನ್ನು ಕುರಿತು "ಸುಂದರಿ! ನಿನಗೆ ಹಾಡಲು ಬರುವುದಿಲ್ಲವೆಂದು ಹೇಳಿದ್ದೆಯಲ್ಲಾ? ಚೆನ್ನಾಗಿ ಹಾಡಿದೆಯಲ್ಲಾ?" ಎಂದು ಪ್ರಶ್ನೆ ಮಾಡಿದನು. ಸುಂದರಿ ಸಂತೋಷದಿಂದ ನಕ್ಕು "ಸ್ವಾಮೀ, ತಾವು ಸಂಗೀತಶಾಸ್ತ್ರದಲ್ಲಿ ಪರಿಣತರಾಗಿರುವುದರಿಂದ ನಿಮ್ಮ ಮುಂದೆ ಹಾಡಲು ಭಯವಾಗಿತ್ತು. ಆದರೆ ಹಾಡಿದ ಮೇಲೆ ನನ್ನ ಹಾಡು ಚೆನ್ನಾಗಿತ್ತೆಂದು ತಿಳಿದು ಸಂತೋಷವಾಯಿತು" ಎಂದು ಹೇಳಿದಳು. ಚಿಕ್ಕನು ಅವಳ ಹಾಡಿನ ಸ್ವರಸಂಪತ್ತನ್ನು ಸ್ತುತಿಸಿ ಅವಳಿಗೆ ಹಾಡಲು ಬರುವುದಿಲ್ಲವೆಂದು ಹೇಳಿದ್ದು ಸುಳ್ಳೆಂದು ಹೇಳಿದನು. ಸುಂದರಿ ಸಂತೋಷದಿಂದ ಅವನಿಗೆ ಕೃತಜ್ಞತೆಯನ್ನು ಸಲ್ಲಿಸಿದಳು.

ಸ್ವಾಮೀ, ತಾವು ಮಹಾರಾಜರು. ತಾವು ಚಿಕ್ಕವರಿಗೆ ಮಾಡಿದ ಉಪಕಾರವನ್ನು ಮರೆಯಬಾರದು. ನಾನು ಚಿಕ್ಕವಳಿದ್ದಾಗ ಅಪ್ಪ ಅಮ್ಮ ಇಲ್ಲದೆ ಅನಾಥೆಯಾಗಿದ್ದೆನು. ಆಗ ನನ್ನ ಚಿಕ್ಕಪ್ಪನು ನನ್ನನ್ನು ಸಾಕಿ ಸಲಹಿದನು. ಅವನು ಸಂಗೀತಶಾಸ್ತ್ರದಲ್ಲಿ ಪರಿಣತನಾಗಿದ್ದನು. ಅವನು ನನಗೆ ಸಂಗೀತವನ್ನು ಕಲಿಸಿದನು. ಅವನಿಂದಲೇ ನಾನು ಹಾಡಲು ಕಲಿತೆನು. ಅವನು ಸತ್ತ ಮೇಲೆ ನಾನು ಹಾಡಿ ಜೀವನ ಮಾಡುತ್ತಿದ್ದೆನು. ಅವನು ಸತ್ತಾಗ ನನಗೆ ಹದಿನಾರು ವರ್ಷ ವಯಸ್ಸ

ವೆಲ್ಲಾ ತನ್ನ ಶತ್ರುವೆಂದು ಭಾವಿಸಿ ಬಹು ಜಾಗರೂಕತೆಯಿಂದ ಕೆಲಸಗಳನ್ನು ಮಾಡ ಬೇಕು ; ಹಾಗೆ ಮಾಡದಿದ್ದರೆ ಮೋಸಹೋಗುವನು. ಇಲ್ಲಿ ನೋಡು, ಸಾಧಾರಣ ವಾಗಿ ನ್ಯಾಯಾಧಿಕಾರಿಗಳು ಅಪರಾಧಿಗೆ ಅಪರಾಧಪತ್ರವನ್ನು ತೋರಿಸುವುದಿಲ್ಲ ; ಆದರೂ ನಾನು ನಿನ್ನ ಯೋಗ್ಯತೆಗೆ ಮೆಚ್ಚಿ ಅಪರಾಧಪತ್ರವನ್ನು ನಿನಗೆ ತೋರಿಸು ತ್ತೇನೆ ಎಂದು ಧರ್ಮದೇವನ ಕೈಯಲ್ಲಿ ಆ ಕಾಗದವನ್ನು ಕೊಟ್ಟು ಇದು ಆರ ಬರಹ ಬಲ್ಲೆಯಾ, ಎಂದು ಕೇಳಿದನು.

ಸ್ವಾಮೀ ! ಇದು ಇಂಥವನ ಬರೆಹವೆಂದು ಹೇಳಲಾರೆನು ; ಆದರೂ ಇದನ್ನು ಬರೆದವನು ನನಗೆ ನಿಜವಾದ ಶತ್ರುವೆಂದು ಊಹಿಸುವೆನು. ತಮ್ಮಂಥ ದಯಾಳುಗಳು ನನ್ನನ್ನು ವಿಚಾರಣೆಮಾಡುವಿರಾದುದರಿಂದ ನಾನು ನಿರಾತಂಕನಾಗಿರುವೆನು.

ಈಗ ನನ್ನನ್ನು ನ್ಯಾಯಾಧಿಕಾರಿಯಾಗಿ ಭಾವಿಸದೆ, ನಿನ್ನಲ್ಲಿ ಪೂರ್ಣವಿಶ್ವಾಸವ ನ್ನಿಟ್ಟಿರುವ ಆಪ್ತಸ್ನೇಹಿತನೆಂದು ಭಾವಿಸಿ, ನಾನು ಕೇಳುವ ಪ್ರಶ್ನೆಗೆ ಸರಿಯಾದ ಉತ್ತರ ವನ್ನು ಕೊಡು, ಎಂದು ಹೇಳಿ ಹೆಸರಿಲ್ಲದ ಈ ಬರಹದಲ್ಲಿ ಹೇಳಿರುವುದು ಎಷ್ಟರ ಮಟ್ಟಿಗೆ ನಿಜವೋ ತಿಳುಹು ಎಂದನು.

ಸ್ವಾಮೀ ! ನಾನು ಸತ್ಯವಾಗಿ ಹೇಳುತ್ತೇನೆ ; ಜಯಲಕ್ಷ್ಮಿಯ ನೌಕಾಧಿಪನು ಸಾಯುವಕಾಲದಲ್ಲಿ ಒಂದು ಕಾಗದದ ಕಟ್ಟನ್ನು ನನ್ನಲ್ಲಿ ಕೊಟ್ಟು, ಇದನ್ನು ಏಲಾ ದ್ವೀಪದಲ್ಲಿರುವ ಚಕ್ರವರ್ತಿಯ ಮಂತ್ರಿಯ ಕೈಯಲ್ಲಿ ಕೊಡು ; ಅವನು ಅಮರದೇಶ ದಲ್ಲಿ ಆರಿಗಾದರೂ ಕೊಡಹೇಳಿ ನಿನ್ನಲ್ಲಿ ಆವುದಾದರೂ ಕಾಗದವನ್ನು ಕೊಟ್ಟರೆ ಅದನ್ನು ಅವರಿಗೆ ತಲಪಿಸು, ಎಂದು ಹೇಳಿದ್ದನು. ಮರಣಕಾಲದಲ್ಲಿ ಹೇಳಿದ ಆ ಮಾತನ್ನು ಆರಾದರೂ ಮೀರಬಹುದೇ ? ಅದರಲ್ಲಿಯೂ ನೌಕಾಧಿಪತಿಯು ಹೇಳಿದಂತೆ ಮಾಡದಿರುವುದು ಅವನ ಕೈ ಕೆಳಗಿನವನಾದ ನನಗೆ ಧರ್ಮವಲ್ಲ. ಅತನ ಮಾತಿನಂತೆ ನಡೆದೆನಲ್ಲದೆ ಮತ್ತೇನೂ ಇಲ್ಲ. ಈ ದಿನ ನನ್ನನ್ನು ಸೆರೆ ಹಿಡಿಯದಿದ್ದರೆ ನಾಳೇ ಅಮರ ದೇಶಕ್ಕೆ ಪಯಣಮಾಡಬೇಕೆಂದು ಇದ್ದೆನು.

ಈ ಮಾತುಗಳನ್ನು ಕೇಳುತಲೇ ವಲ್ಲಭದೇವನು ಇದು ನಿಜವೆಂದು ಕಾಣುತ್ತದೆ; ಇವನು ಮಾಡಿದುದು ಬರಿಯ ಅವಿವೇಕದ ಕೆಲಸವೇ ಹೊರತು ರಾಜದ್ರೋಹವಲ್ಲ. ಆ ಅವಿವೇಕದ ಕೆಲಸವನ್ನು ನೌಕಾಧಿಪತಿಯ ಅಪ್ಪಣೆಯಂತೆ ಮಾಡಿದ್ದಾನೆ ' ಎಂದು

ಯೋಚಿಸಿ, ನೀನು ಏಲಾದ್ವೀಪದಿಂದ ತಂದಿರುವ ಕಾಗದವನ್ನು ನನ್ನಲ್ಲಿ ಕೊಟ್ಟು ನಾನು ಕರೆದಾಗ ಬರುವೆನೆಂದು ಮಾತುಕೊಟ್ಟು ಹೋಗು ಎಂದು ಹೇಳಿದನು.

ಸ್ವಾಮೀ ! ಹಾಗಾದರೆ ನನಗೆ ಹೋಗಲು ಅಪ್ಪಣೆಯೋ?

ಮೊದಲು ಆ ಕಾಗದವನ್ನು ಕೊಡು.

ಅದನ್ನು ಆವಾಗಲೇ ಪೋಲೀಸಿನವರು ನನ್ನಿಂದ ತೆಗೆದುಕೊಂಡರು. ತಮ್ಮಲ್ಲಿರುವ ಕಾಗದಗಳಲ್ಲಿರಬಹುದೆಂದು ತೋರುವುದು.

ಅದು ಆರ ಹೆಸರಿಗೆ ಬರೆದು ಇದೆ ?

ಅಮರಪುರದ ರಾಜಬೀದಿಯಲ್ಲಿರುವ ದೀನನಾಥರ ಹೆಸರಿಗೆ ಬರೆದು ಇದೆ.

ದೀನನಾಥನ ಹೆಸರನ್ನು ಕೇಳಿದೊಡನೆಯೇ ವಲ್ಲಭದೇವನು ತಲೆಯ ಮೇಲೆ ಸಿಡಿಲು ಬಿದ್ದವನಂತೆ ಸ್ವಲ್ಪ ಹೊತ್ತು ಸ್ತಬ್ಧನಾಗಿದ್ದು, ಬಳಿಕ ಕಾಗದದ ಕಟ್ಟನ್ನು ಹುಡುಕಿ, ಆ ಹೆಸರಿಗಿದ್ದ ಪತ್ರವನ್ನು ತೆಗೆದು, ಮೂರುನಾಲ್ಕಾವೃತ್ತಿ ಅದರ ವಿಲಾಸವನ್ನು ಓದಿ, ಅನಂತರ ಅದನ್ನು ಬಿಚ್ಚಿ ಒಳಗಿರುವ ಸಂಗತಿಯನ್ನು ಓದಿಕೊಂಡು ನೀನು ದೀನನಾಥನನ್ನು ಬಲ್ಲೆಯೋ ? ಎಂದು ಕೇಳಿದನು.

ಸ್ವಾಮಿ ! ನಾನು ಕಾಣೆ.

ಅದರ ಮೇಲು ವಿಲಾಸವು ನನಗೆ ಗೊತ್ತಿದೆ.

ಅದು ತಿಳಿಯದೆ ಇದ್ದರೆ ನಾನು ಹೇಗೆ ಕಾಗದವನ್ನು ತಲಪಿಸುವುದು ?

ವಲ್ಲಭದೇವನ ಮುಖವು ಬೆವ್ವಾಗಿ ಮನಸ್ಸಿನ ಗಾಬರಿಯನ್ನು ಹಾಗೆಯೇ ಅಡಗಿಸಿಕೊಂಡು ಧರ್ಮದೇವನನ್ನು ನೋಡಿ ಈ ಕಾಗದವನ್ನು ಆರಿಗಾದರೂ ತೋರಿಸಿದ್ದೀಯಾ ? ಎಂದನು.

ನಾನು ಇನ್ನು ಆರಿಗೂ ತೋರಿಸಿಲ್ಲ.

ವಲ್ಲಭದೇವನು ಹುಬ್ಬುಗಳನ್ನು ಗಂಟುಹಾಕಿಕೊಂಡು, ಹಲ್ಲುಗಳನ್ನು ಕಡಿಯುತ್ತ, ಎರಡು ಕೈಗಳಿಂದಲೂ ಮುಖವನ್ನು ಮುಚ್ಚಿಕೊಂಡು ಅಯ್ಯೋ ! ಮಿತಿಮೀರಿತು ಎಂದು ಗೊಣಗುಟ್ಟಿಕೊಳ್ಳುತಲಿದ್ದನು. ವಲ್ಲಭದೇವನ ಅವಸ್ಥೆಯನ್ನು ನೋಡಿ ಧರ್ಮದೇವನು ಸ್ವಾಮೀ! ತಮಗೆ ಮೈಯ್ ಸರಿಯಾಗಿಲ್ಲವೆಂದು ತೋರುತ್ತಲಿದೆ. ಒಬ್ಬ ಸೇವಕನನ್ನು ಕೂಗಲೇ, ಎಂದು ಹೊರಗಿದ್ದ ಪೋಲೀಸಿನವರಲ್ಲಿ ಒಬನನು

ಮಹಾಮಂತ್ರಿಯಾಗಿರುವ ಸುಮತಿಯು ಹಜ್ಜೆಗಳನ್ನಿಟ್ಟನು. ಅದನ್ನು ವಲ್ಲಭದೇವನು ನೋಡಿ ಇಲ್ಲಿ ಸೇವಕನಿಗೆ ತಕ್ಕ ಕೆಲಸವನ್ನು ಮಾಡುವುದು ನನ್ನ ಕೆಲಸವೇ ಹೊರತು ನಿನ್ನದಲ್ಲ. ನೀನಿದ್ದ ಕಡೆ ಇದ್ದು ನಾನು ಕೊಟ್ಟಿರುವ ಪ್ರಶ್ನೆಗೆ ಉತ್ತರವನ್ನು ಕೊಡು ಎಂದು, ಪುನಃ ಆ ಕಾಗದ ವನ್ನು ಓದಿ ಈ ಕಾಗದದಲ್ಲಿ ಒಳಗಿರುವುದು ನಿನಗೆ ಗೊತ್ತೋ ಎಂದನು.

ಪ್ರಶ್ನೆಯ ಸ್ವಾರಸ್ಯವನ್ನು ತಿಳಿದುಕೊಳ್ಳಲಾರದೆ ಏನು ಬಂಧುವಿದೆಯೋ ನನಗೆ ತಿಳಿಯದು.

ಅಯ್ಯೋ! ಈ ಕಾಗದದಲ್ಲಿ ಒಳಗಿರುವ ಸಮಾಚಾರವೂ, ದೀನನಾಥನು ನನ್ನ ತಂದೆ ಎಂಬುದೂ ಇವನಿಗೆ ಗೊತ್ತಿದ್ದರೆ ನನ್ನ ಪರಿಣಾಮವು ಹೊರೈಸುವುದು ಎಂದು ಮನದಲ್ಲಿ ಯೋಚಿಸಿಕೊಂಡು ಕಾಗದದಲ್ಲಿರುವ ವಿಷಯವೂ ನಿನಗೆ ತಿಳಿಯುದೋ? ಎಂದು ಕೇಳಿದನು.

ಪ್ರಶ್ನೆಯಲ್ಲಿ ಮರ್ಮವಾಗಿರುವ ವಿಷಯವನ್ನು ತಿಳಿಯದೆ ಸುಮತಿಯು ಕಾಗದದಲ್ಲಿರುವ ವಿಷಯವನ್ನು ತಿಳಿಯದು.

ಪ್ರಶ್ನೆಯ ಮರ್ಮವನ್ನು ತಿಳಿದುಕೊಳ್ಳಲಾರದೆ ಮಹಾಮಂತ್ರಿಯಾದವನಿಗೆ ನನ್ನ ತಂದೆಯ ಹೆಸರು ಗೊತ್ತಿದೆ ಸಾಮಾನ್ಯವಾಗಿ ಯಾವನನ್ನು ಹುಡುಕಿಕೊಂಡು ಬರಬೇಕಾಗಿದೆಯೋ ಅವನ ಹೆಸರೂ ಈ ಸಮಾಚಾರವು ಇತರರಿಗೆ ತಿಳಿದು ಬಹಳ ಕೆಟ್ಟ ವೈದ್ಯನಾಗಿರುವುದರಿಂದ ಅವನು ಯಾರಾದರೂ ಕಂಡು ಪುನಃ ಯೋಚಿಸಿ ತಟ್ಟನೆ ಅದನ್ನು ಸಂದೇಹಿಸದಿರುವುದಕ್ಕೆ ಆಗಲಿ ಎಂಬುದಾಗಿ ಸಂತೋಷದಿಂದ ಹೇಳಿದನು.

ಆಗ ಧರ್ಮದೇವನು ಸ್ವಾಮೀ! ನಾನು ಹೇಳುವುದರಲ್ಲಿ ಆವ ಸಂದೇಹವೂ ಇಲ್ಲ. ತಮಗೇನಾದರೂ ಅನುಮಾನವಿದ್ದರೆ ಹೊಸ ಬೇಕಾದ ಪ್ರಶ್ನೆಯನ್ನು ಮಾಡ ಬಹುದು ಎಂದು ಹೇಳಲು ಅವನಿಗೆ ಸಂತೋಷವಾಗಿ ಸರಿಯಾದ ಉತ್ತರಗಳನ್ನು ಕೊಡು ವನೆಂದು ಭರವಸೆಯಾಯಿತು. ಪ್ರಧಾನಿಯವರು ಧರ್ಮದೇವನ ಗ್ರಹಿಕೆ

ಪರೀಕ್ಷೆಯಲ್ಲಿ ಉತ್ತೀರ್ಣನಾದನು ಮೆಚ್ಚಿದ್ದರಿಂದ ಹೊಸ ಯುವಕ ತನಗಿದ್ದ ಸಂಕಟವನ್ನು ಅಡಗಿಸಿ ಕೊಂಡು ನಿಧಾನವನ್ನು ತಾಳಿ, ದಯಾರಸವನ್ನು ಉಕ್ಕಿಸುತ, ಧರ್ಮದೇವನನ್ನು ನೋಡಿ ಅಪ್ಪಾ! ನಾನು ನಿನ್ನನ್ನು ಬಿಟ್ಟುಬಿಡಬೇಕಲ್ಲದೆ ಬೇರೆ ದಾರಿಯಿಲ್ಲ. ಆಗಿರುವ ಈ ಕಾಗದವನು ನೀನೇ ಇಟ್ಟುಕೊಂಡು ನನ್ನ ಹೆಂಡತಿಯ ಬಳಿಗೆ ಹೋಗಿ ತೋರಿಸಬೇಕಾಗಿದೆ. ನಿನ್ನ ವಿಷಯ ದಲ್ಲಿ ಸಹಾಯಕ್ಕೆ ಬೇಕಾದ ಸಾಮಾನ್ಯ ಸೈನಿಕರನ್ನು ತೆಗೆದುಕೊಂಡು ಹೋಗು. ಎಂದು

ಮಂತ್ರಿಯು ಸ್ವಲ್ಪ ಹೊತ್ತು ಯೋಚಿಸಿ ಅವನಿಗೆ ಬೇಕಾದವರನ್ನು ಕರೆಯಿಸಿಕೊಂಡು ಹೋಗಲು ಅಪ್ಪಣೆ ಕೊಟ್ಟನು. ಧರ್ಮದೇವನು ಮೇಲಕ್ಕೆ ಎದ್ದು ಮಂತ್ರಿಗೆ ನಮಸ್ಕಾರವನ್ನು ಮಾಡಿ ಹೊರಟು ಹೋದನು. ಪ್ರಧಾನಿಯವರು ಮಹಾರಾಜರ ಬಳಿಗೆ ಹೋಗಿ ಅವರಿಗೆ ಜಯಘೋಷವನ್ನು ಮಾಡಿದನು. ಧರ್ಮದೇವನು ಕೊಟ್ಟಿದ್ದ ಕಾಗದವನ್ನು ಅವರಿಗೆ ಒಪ್ಪಿಸಿ ನಡೆದ ಸಮಾಚಾರವನ್ನೆಲ್ಲಾ ತಿಳಿಸಿದನು.

ಧರ್ಮದೇವ! ಕೇಳು. ನಿನ್ನ ಮೇಲೆ ಇರತಕ್ಕ ಮುಖ್ಯವಾದ ತಪ್ಪು ಈ ಕಾಗದ. ಎಂದು ಧರ್ಮದೇವನು ಏಲಾದ್ವೀಪದಿಂದ ತಂದಿದ್ದ ಕಾಗದವನ್ನು ತೋರಿಸಿ, ಇಗೋ ನಿನಗೆ ಅನುಕೂಲವಾಗುವುದಕ್ಕಾಗಿ ಈ ಕಾಗದವನ್ನು ಸುಟ್ಟುಬಿಡುವೆನು ಎಂದು ಹೇಳಿ ಧರ್ಮದೇವನ ಇದಿರಿಗೆ ಅದನ್ನು ಸುಟ್ಟುಬಿಟ್ಟನು.

ಅಯ್ಯಾ! ತಾವು ಪರಮ ದಯಾಳುಗಳು. ತಮ್ಮ ಈ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ.

ಈಗ ನಾನು ಮಾಡಿದ ಕೃತ್ಯದಿಂದ ನಿನಗೆ ನನ್ನಲ್ಲಿ ಪೂರ್ಣವಾದ ನಂಬುಗೆಯುಂಟಾಗಿರಬಹುದು. ನಾನು ನಿನ್ನ ಹಿತಕ್ಕಾಗಿ ಹೇಳುವ ಮಾತನ್ನು ಕೇಳು.

ಅಪ್ಪಣೆಯಾದರೆ ಶಿರಸಾವಹಿಸುವೆನು.

ಇದು ಅಪ್ಪಣೆಯಲ್ಲ; ನನ್ನ ಪ್ರಾರ್ಥನೆ. ಈ ಕಾಗದದ ಸಮಾಚಾರ ನಮ್ಮಿಬರ ಹೊರತು ಮತ್ತಾರಿಗೂ ತಿಳಿಯದು. ನಿನ್ನನ್ನು ಸೆರೆಯಿಂದ ಬಿಟ್ಟುಬಿಡುವುದೇನೋ ನಿಶ್ಚಯ; ಆದರೆ ಈ ರಾತ್ರಿಯು ವರೆಗೆ ನೀನು ಸೆರೆಯಲ್ಲಿರಬೇಕು; ಆಶ್ಚರ್ಯಪಟ್ಟರೂ ಈ ಕಾಗದದ ವಿಷಯವಾಗಿ ಪ್ರಶ್ನೆಮಾಡಿದರೆ ನನಗೇನೂ ತಿಳಿಯದು ಎಂದು ಹೇಳಿಬಿಡು. ಹಾಗೆ ಹೇಳದಿದ್ದರೆ ನಿನಗೆ ಕ್ಷೇಮವಾಗುವುದಿಲ್ಲ. ಈ ವಿಷಯವನ್ನು ಒಬ್ಬರಿಗೂ ಹೇಳುವುದಿಲ್ಲವೆಂದು ನೀನು ನನಗೆ ಪ್ರಮಾಣಮಾಡಿ ಕೊಡು, ಎಂದನು. ಸ್ವಾಮೀ! ಹಾಗೆಯೇ ಆಗಲಿ ಎಂದು ಹೇಳಿ ಧರ್ಮದೇವನು ಪ್ರಮಾಣಮಾಡಿದನು.

ಈ ಕಾಗದವಲ್ಲದೆ ಮತ್ತಾವುದಾದರೂ ನಿನ್ನಲ್ಲಿದೆಯೋ?

ಅವುದೂ ಇಲ್ಲ. ಪ್ರಮಾಣವಾಗಿ ಹೇಳು.

ಸ್ವಾಮೀ! ಪ್ರಮಾಣವಾಗಿ ಮತ್ತಾವುದೂ ನನ್ನಲ್ಲಿಲ್ಲ.

ಅನಂತರ ವಲ್ಲಭದೇವನು ಒಬ್ಬ ಪೋಲೀಸು ಅಧಿಕಾರಿಯನ್ನು ಕರೆದು ಅವನ ಕಿವಿಯಲ್ಲಿ ಏನನ್ನೋ ಹೇಳಿ, ಧರ್ಮದೇವನನ್ನು ನೋಡಿ ನೀನು ಇವನ ಸಂಗಡ ಹೋಗು ಎಂದು ನಗುನಗುತ ಹೇಳಿದನು.

ಅವರಿಬ್ಬರೂ ಹೊರಟ ಬಳಿಕ ವಲ್ಲಭದೇವನು ಅಯ್ಯೋ ತಂದೆಯೇ! ನೀನು ಮಾಡುವ ಕಾರ್ಯಗಳು ಆವಾಗಲೂ ನನ್ನ ಅಭಿವೃದ್ಧಿಗೆ ಕುಂದಕವನ್ನುಂಟುಮಾಡುವುವು. ಈಗ ನಾನು ಮಾಡಿದ ವಿಚಾರಣೆಯು ನನ್ನ ಮೇಲಣ ಅಧಿಕಾರಿಯು ಕೆಲಸ. ಅವನು

ಊರಲ್ಲಿಲ್ಲದೆ ಇದ್ದುದರಿಂದ ನಾನು ವಿಚಾರಣೆ ಮಾಡಬೇಕಾಯಿತು. ಅವನ ಕೈಗೆ ಈಗ ನಾನು ಸುಟ್ಟಕಾಗದವು ಸಿಕ್ಕಿದ್ದರೆ ನನ್ನ ಗತಿಯೇನಾಗುತ್ತಿದ್ದಿತು, ಎಂದು ಬಹು ಸಂಕಟದೊಡನೆ ಮಾತನಾಡಿಕೊಳ್ಳುತ್ತ ನನ್ನ ನಾಶಕ್ಕೆ ಕಾರಣವಾಗುತಲಿದ್ದ ಈ ಕಾಗದದಲ್ಲಿದ್ದ ಸಮಾಚಾರವನ್ನೇ ನನ್ನ ಅಭವೃದ್ಧಿಗೆ ಸಹಕಾರಿಯಾದುದನ್ನಾಗಿ ಮಾಡಿಕೊಳ್ಳುವೆನು ಎಂದು ಯೋಚಿಸಿಕೊಂಡು ವಲ್ಲಭದೇವನು ಕಳೆಗುಂದಿದವನಾಗಿ ಅಲ್ಲಿಂದ ಎದ್ದು ರೇಣುಕೆಯ ಮನೆಗೆ ಹೋದನು.

ಎಂಟನೆಯ ಅಧ್ಯಾಯ

ಜಾಲದುರ್ಗ.

ಪೋಲೀಸು ಅಧಿಕಾರಿಯು ಧರ್ಮದೇವನನ್ನು ಕಾರಾಗೃಹಕ್ಕೆ ಕರೆದುಕೊಂಡು ಹೋಗಿ ಬಂದು ದೊಡ್ಡ ಕೊಟ್ಟಡಿಯಲ್ಲಿ ಬಿಟ್ಟು, ಬಾಗಿಲಿಗೆ ಬೀಗವನ್ನು ಹಾಕಿಸಿ ಹೊರಟುಹೋದನು. ಆ ಕೊಟ್ಟಡಿಗೆ ಕಬ್ಬಿಣದ ಬಾಗಿಲು; ಕಿಟಿಕಿಗಳಿಗೆ ಕಬ್ಬಿಣದ ದಪ್ಪ ಸಲಾಕಿಗಳು; ಅವುಗಳನ್ನು ನೋಡುತಲೆ ಧರ್ಮದೇವನಿಗೆ ತಾನಿರುವುದು ಕಾರಾಗೃಹವೆಂದು ಮೊತ್ತಮೊದಲು ಅನುಮಾನವು ಹುಟ್ಟಿ, ಬಳಿಕ ಕೊಟ್ಟಡಿಯ ಅಂದವನ್ನೂ ವಿಸ್ತಾರವನ್ನೂ ನೋಡಿ ಅವನು ತನ್ನ ಮನಸ್ಸಿನ ಅನುಮಾನವನ್ನು ದೂರಮಾಡಿ ಇದೂ ಅಲ್ಲದೆ ವಲ್ಲಭದೇವನು ಭರವಸೆಕೊಟ್ಟಿದ್ದಂತೆ ತನ್ನನ್ನು ಜಾಗ್ರತೆಯಾಗಿಯೇ ಬಿಟ್ಟುಬಿಡುವನೆಂದು ದೃಢವಾಗಿ ನಂಬಿಕೊಂಡಿದ್ದನ,.

ಧರ್ಮದೇವನನ್ನು ಇಲ್ಲಿಗೆ ಕರೆದುಕೊಂಡು ಬಂದಾಗ ಸಾಯಂಕಾಲವಾಗಿದ್ದಿತು; ಆಗ ದಕ್ಷಿಣಾಯನದ ಕೊನೆಯಾದುದರಿಂದ ಜಾಗ್ರತೆಯಾಗಿಯೇ ಕತ್ತಲು ಕವಿಯುತ್ತ ಬಂದಿತು. ಕತ್ತಲೆಯು ಹೆಚ್ಚಿದ ಹಾಗೆಲ್ಲಾ ಧರ್ಮದೇವನ ಕಿವಿಗಳು ಪಟುವಾಗಿ ಎಲ್ಲಿ ಹಜ್ಜಿಗಳ ಸದ್ದಾದರೂ ತನ್ನನ್ನು ಬಿಡಿಸಲು ಬಂದ ಜನಗಳ ಹಜ್ಜೆಸದ್ದು ಎಂದು ಒಡನೆಯೇ ಕುಳಿತಿದ್ದ ಸ್ಥಳವನ್ನು ಬಿಟ್ಟು ಬಾಗಿಲ ಬಳಿಗೆ ಬಂದು ನಿಲ್ಲುವನು; ಉತ್ತರಕ್ಷಣದಲ್ಲಿಯೇ ಹಜ್ಜೆಯ ಶಬ್ದವು ದೂರವಾಗಲು ನಿರಾಶನಾಗಿ ತನ್ನ ಸ್ಥಳಕ್ಕೆ ಪುನಃ ಹೋಗುತಲಿದ್ದನು.

ಬಲು ಹೊತ್ತು ಆರೂ ಬಾರದೆ ಇದ್ದುದನ್ನು ನೋಡಿ, ವಲ್ಲಭದೇವನು ಬೇಕೆಂದು ವಿಶೇಷವಿಶ್ವಾಸವನ್ನು ತೋರಿಸಿ ನನ್ನನ್ನು ಮೋಸಗೊಳಿಸಿದನೋ ಎಂದು ಯೋಚಿಸಿ, ಛೇ, ಛೇ, ಇದೇನು ನನಗೆ ಇಂತಹ ದುರಾಲೋಚನೆಯು ಹುಟ್ಟಿತು? ಮನುಷ್ಯರು ಕೆಡುಕರಲ್ಲ; ವಲ್ಲಭದೇವನು ಏಕೆ ಮೋಸಗೊಳಿಸುವನು? ಮೇಲಿನ ಅಧಿಕಾರಿಯು ಸಿಕ್ಕದೆ ಸಾವಕಾಶವಾಗಿದ್ದರೆ ಇರಬಹುದು, ಎಂದು ಆಲೋಚಿಸುತ್ತಲಿರುವಾಗ ತನ್ನ ಕೊಟ್ಟಡಿಯ ಬಳಿಗೆ ಯಾರೋ ಜನರು ಬರುವ ಸದ್ದಾಯಿತು. ಕೂಡಲೇ ಧರ್ಮದೇವನು ಎದ್ದು ಬಾಗಿಲಹತ್ತಿರ ಬಂದನು. ಬಾಗಿಲು ತೆರೆಯಲ್ಪಟ್ಟಿತು. ಜನರು ತಂದಿದ್ದ ದೀವಟಿಗೆಗಳಿಂದ ಕೊಟ್ಟಡಿಯೆಲ್ಲಾ ಬೆಳಕಾಯಿತು; ಧರ್ಮದೇವನು ಕೂಡಲೆ ಹೊರಗೆ ಹೊರಡುವ ಪ್ರಯತ್ನಮಾಡಿ ಬಾಗಿಲಲ್ಲಿ ನಿಂತಿದ್ದ ನಾಲ್ಕುಜನ ಪೋಲೀಸಿನವರನ್ನೂ ನಾಲ್ಕುಜನ ಬಿಚ್ಚುಕತ್ತಿಯ ಸಿಪಾಯಿಗಳನ್ನೂ ನೋಡಿ ಹಿಂಜರಿದವನಾಗಿ ನೀವು ನನ್ನನ್ನು ಕರೆದುಕೊಂಡು ಹೋಗುವುದಕ್ಕೆ ಬಂದಿರುವಿರೋ? ಎಂದು ಅವರನ್ನು ಕೇಳಲು ಅವರು ಅಹುದು ಎಂದರು. ನ್ಯಾಯಾಧಿಪತಿಯ ಅಪ್ಪಣೆಯಂತೆ ಬಂದಿರುವಿರೋ, ಎಂದು ಪುನಃ ಕೇಳಲು, ಇರಬಹುದು ಎಂದರು.

ತನ್ನನ್ನು ಸೆರೆಯಿಂದ ಬಿಡಿಸಲು ಇವರು ವಲ್ಲಭದೇವನಿಂದ ಕಳುಹಿಸಲ್ಪಟ್ಟವರೆಂದು ಯೋಚಿಸಿ, ಧರ್ಮದೇವನು ಬಂದಿದ್ದ ಜನಗಳ ನಡುವೆ ಧಾರಾಳವಾಗಿ ನಿಂತನು. ಬೀದಿಯು ಬಾಗಿಲಿಗೆ ಬರುತ್ತಲೆ ಅಲ್ಲಿ ನಿಂತಿದ್ದ ಕುದುರೆಯ ಬಂಡಿಯನ್ನು ನೋಡಿ ನನಗಾಗಿ ಇದನ್ನು ತಂದಿದ್ದೀರಾ ಎನ್ನಲು, ಅಹುದು, ಇದು ನಿನಗೋಸ್ಕರವೇ ಬಂದಿರುವುದು ಎಂದರು.

ಧರ್ಮದೇವನು ಮತ್ತಾವುದನ್ನೋ ಕೇಳಲು ಪ್ರಯತ್ನಪಟ್ಟನು; ಅಷ್ಟರಲ್ಲಿಯೇ ಪೋಲೀಸು ಅಧಿಕಾರಿಯು ಇವನನ್ನು ಮೆಲ್ಲಮೆಲ್ಲಗೆ ಬಂಡಿಗೆ ತಳ್ಳಿ ಮೂವರು ಬಿಚ್ಚುಕತ್ತಿಯವರನ್ನು ಜತೆಯಲ್ಲಿ ಒಳಗೂ, ಮತ್ತೊಬ್ಬನನ್ನು ಹಿಂದೆಯೂ, ಕೂರಿಸಿ ತಾನು ಮುಂದುಗಡೆಯಲ್ಲಿ ಕುಳಿತನು. ಬಂಡಿಯು ಒಡನೆಯೇ ಹೊರಟಿತು. ಅದರ ಕಿಟಕಿಗಳಿಗೆ ಕಬ್ಬಿಣದ ಸಲಾಕಿಗಳು ಹಾಕಿದ್ದುವು. ಧರ್ಮದೇವನು ಆ ಕಿಟಕಿಗಳನ್ನು ನೋಡಿದೊಡನೇ ಸ್ಥಿರವಾದ ಕಾರಾಗೃಹವನ್ನು ಬಿಟ್ಟು ಸಂಚರಿಸುವ ಬಂಧನಾಲಯಕ್ಕೆ ಬಂದಂತಾಯಿತೆಂದು ತಿಳಿದುಕೊಂಡನು. ಅಷ್ಟರಲ್ಲಿಯೇ ಯಾನವು ಸಮುದ್ರತೀರವನ್ನು

ಸೇರಿತು. ಪೋಲೀಸು ಅಧಿಕಾರಿಯು ಬಂಡಿಯಿಂದ ಕೆಳಗೆ ಇಳಿದು, ಅಲ್ಲಿಯು ಅಧಿಕಾರಿಯು ಬಿಡಾರಕ್ಕೆ ಬಂದು ಕೂಗಿದ ಕೂಡಲೇ ಹತ್ತು ಹನ್ನೆರಡುಮಂದಿ ಸೈನಿಕರು ಆಯುಧಪಾಣಿಗಳಾಗಿ ಬಂದು ನಿಂತರು.

ತನಗಾಗಿಯೇ ಇವರೆಲ್ಲರೂ ಹೀಗೆ ಬಂದಿರಬಹುದೇ! ಎಂದು ಧರ್ಮದೇವನು ಯೋಚಿಸುವಷ್ಟರಲ್ಲಿಯೇ ಸಾಮಾನ್ಯವಾದ ಪೋಲೀಸಿನವರೂ ಬಿಚ್ಚುಕತ್ತಿಯವರೂ ಒಂದುಗೂಡಿ ಧರ್ಮದೇವನನ್ನು ತಮ್ಮ ನಡುವೆ ಬಿಟ್ಟುಕೊಂಡು ಅಲ್ಲಿ ಸಿದವಾಗಿದ್ದ ದೋಣಿಯನ್ನು ಏರಿದರು.

ಸಮುದ್ರದ ಗಾಳಿಯು ತನ್ನನ್ನೇಲೆ ಬಿದ್ದಕೂಡಲೇ ಧರ್ಮದೇವನ ಮನಸ್ಸಿಗೆ ಆಪ್ಯಾಯನವಾಯಿತು. ದೋಣಿಯು ಮುಂದಕ್ಕೆ ಹೊರಡಲು ಆದಿನ ಬೆಳಿಗ್ಗೆ ತಾನೂ ಲಲಿತಾಂಗಿಯೂ ಒಟ್ಟಾಗಿ ವಿಹರಿಸುತ್ತಿದ್ದ ಪ್ರದೇಶವು ಕಾಣಿಸಿತು. ಅದನ್ನು ನೋಡಿ ಧರ್ಮದೇವನು ಕೈಗಳನ್ನು ಕಟ್ಟಿಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ಏನನ್ನೋ ಯೋಚನೆಮಾಡುತ್ತಲಿದ್ದನು.

ದೋಣಿಯು ಮುಂದೆ ಹೋಗುತ ಹೋಗುತ ಧರ್ಮದೇವನು ತನ್ನ ಪಕ್ಕದಲ್ಲಿ ಕುಳಿತಿದ್ದ ಕಾವಲುಗಾರನನ್ನು ಕುರಿತು ಈಗ ನಾವು ಎಲ್ಲಿಗೆ ಹೋಗುತ್ತಿರುವೆವು? ಎಂದು ಕೇಳಲು, ಅವನು ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಗೊತ್ತಾಗುವುದು ಎಂದನು.

ಆದರೂ — ನಾನು ಅದನ್ನು ತಿಳಿಸಲಾರೆನು.

ಸೈನಿಕರ ನಡತೆಗಳನ್ನು ನೋಡಿದಾಗ ಬಲ್ಲಹನಾದುದರಿಂದ ಅವರನ್ನು ಕೇಳಿ ಪ್ರಯೋಜನವಿಲ್ಲವೆಂದು ತಿಳಿದು ಧರ್ಮದೇವನು ಸುಮ್ಮನಾದನು. ಮುಂದಿನಲ್ಲಿ ಏನೇನೋ ಅಲೋಚನೆಗಳು ಹುಟ್ಟಿದುವು. ದೋಣಿಯು ಸಣ್ಣದಾದುದರಿಂದಲೂ, ಸಮುದ್ರದಲ್ಲಿ ಜನ ಹಡಗೂ ಇಲ್ಲದಿದ್ದುದರಿಂದಲೂ, ಎಲ್ಲೋ ಹತ್ತಿರದಲ್ಲಿರುವ ಕಳೆಗೆ ಹೋಗುತ್ತಿರಬಹುದೆಂದು ಊಹಿಸಿದನು. ಕೈಗಳಿಗೆ ಕೋಳವನ್ನು ಹಾಕದೆ ಇರುವುದು ಮೇಲಾಯಿತು ಎಂದು ಭಾವಿಸಿ, ದೀನಬಾಧನ ಹೆಸರನ್ನು ಅವರಿಗೂ ಹೇಳದಿದ್ದರೆ ನಿನಗೆ ಆಪತ್ತು ಬಾರದು. ನಿನ್ನ ಸ್ವಾತಂತ್ರ್ಯವೂ ಜೀವರಕ್ಷಣೆಯೂ ಆ ದೇಗನೆ ಬಿಟ್ಟು ಬಿಡುವುದು ಎಲ್ಲವೂ ದೇವರು ಹೇಳಿದ ಮಾತು ನಿನ್ನ ಆಪತ್ತಿನಲ್ಲಿ ಕೈಬಿಟ್ಟು ತನ್ನ ಏಳಿಗೆಗೆ ಸಹಾಯಕನಾದುದಾಗಿಯೂ ಇದ್ದ ಆ ಲೇಖನು

ವನ್ನು ವಲ್ಲಭದೇವನು ಸುಟ್ಟುಬಿಡಲಿಲ್ಲವೇ ತಾನು ಮಾಡಿದ ಈ ಕೆಲಸವನ್ನು ಳಿರೊಡನಾದರೂ ಹೇಳಿಬಿಡುವೆನೋ ಎಂಬ ದಿಗಿಲಿನಿಂದ ನನ್ನನ್ನು ಎಲ್ಲಿಯೋ ದೂರ ದೇಶದಲ್ಲಿ ಬಿಟ್ಟುಬರುವಂತೆ ಇವರಿಗೆ ಅಪ್ಪಣೆಮಾಡಿರಬಹುದೆಂದು ಊಹಿಸುತ ಸುಮ್ಮನೆ ಕುಳಿತಿದ್ದನು. ಅಷ್ಟುಹೊತ್ತಿಗೆ ಕತ್ತಲೆಯು ದಟ್ಟವಾಗಿ ಕವಿಯಿತು.

ಸುಮಾರು ಆವ ಕಡೆಗೆ ಹೋಗುತ್ತಿರುವೆವೋ ನೋಡೋಣವೆಂದು ಧರ್ಮ ದೇವನು ಆ ಗಾಢಾಂಧಕಾರದಲ್ಲಿ ನಾಲ್ಕುದಿಕ್ಕುಗಳನ್ನೂ ಚೆನ್ನಾಗಿ ನೋಡಲು, ಪಾಳೆ ಯದ ಒಂದು ಮನೆಯಲ್ಲಿ ದೀಪದ ಬೆಳಕು ಅವನಿಗೆ ಕಂಡಿತು. ಆ ಮನೆಗೆ ಇದಿರಾಗಿ ಸಮುದ್ರತೀರದಲ್ಲಿ ಒಬ್ಬ ಹೆಂಗಸು ನಿಂತಿರುವಂತೆ ತೋರಿತು. ಆ ಹೆಂಗಸೇ ಲಲಿತಾಂಗಿ ಯೆಂದೂ ಆ ಮನೆಯೇ ಅವಳ ಮನೆಯೆಂದೂ ನಿಶ್ಚಯಿಸಿದನು. ಅವಳ ಮನೆಗೂ ದೋಣಿಯು ಆಗ ಹೋಗುತ್ತಲಿದ್ದ ಸ್ಥಳಕ್ಕೂ ಸುಮಾರು ಮುನ್ನೂರು ಗಜಗಳು ದೂರ ವಿರಬಹುದು. ತನ್ನ ಪ್ರಿಯನು ಇಷ್ಟು ಸಮೀಪದಲ್ಲಿರುವನೆಂದು ಲಲಿತಾಂಗಿಗೆ ಎಳ್ಳಷ್ಟೂ ತಿಳಿದಿರಲಿಲ್ಲ. ಅಷ್ಟುಹೊತ್ತಿನಲ್ಲಿ ಅವಳೊಬ್ಬಳೇ ಆ ಪಾಳೆಯದಲ್ಲಿ ಮಲಗದೆ ಇದ್ದಳು. ಧರ್ಮದೇವನು ಆಗ ಗಟ್ಟಿಯಾಗಿ ಕೂಗಿದ್ದರೆ ಅವಳಿಗೆ ಕೇಳಿಬರುತ್ತಲಿದ್ದಿತು. ಆದರೆ ಸ್ವಾಭಿಮಾನವು ಅವನನ್ನು ಕೂಗಗೊಡಿಸಲಿಲ್ಲ. ಅವನು ಆಗ ಕೂಗಿದ್ದರೆ ಕಾವಲು ಗಾರರೆಲ್ಲರೂ ಅವನಿಗೆ ಹುಚ್ಚು ಹಿಡಿದಿತೆಂದು ನಿಸ್ಸಂದೇಹವಾಗಿ ತಿಳಿದುಕೊಳ್ಳುತ್ತಿದ್ದರು.

ಧರ್ಮದೇವನ ಮನಸ್ಸು ಲಲಿತಾಂಗಿಯಲ್ಲಿಯೇ ಮಗ್ನವಾಗಿದ್ದುದರಿಂದ ಅವನು ಆಮನೆಯ ದೀಪವನ್ನೇ ನೋಡುತಲಿದ್ದನು. ಕೊನೆಗೆ ಅವನ ದೃಷ್ಟಿಗೂ ಆದೀಪದ ಬೆಳಕಿಗೂ ನಡುವೆ ಒಂದು ದಿಣ್ಣೆಯು ಅಡ್ಡಲಾಗಿ ಬಂದುದರಿಂದ ಧರ್ಮದೇವನು ಬೇರೆ ಕಡೆಗೆ ತಿರುಗಿದನು ಅಷ್ಟುಹೊತ್ತಿಗೆ ದೋಣಿಯು ಸಮುದ್ರಮಧ್ಯವನ್ನು ಸೇರಿ ಗಾಳಿಯ ಸಹಾಯದಿಂದ ಬಹು ವೇಗವಾಗಿ ಹೋಗುತಲಿದ್ದಿತು.

ಕಾವಲುಗಾರರನ್ನು ಕುರಿತು ಆವವಿಧವಾದ ಪ್ರಶ್ನೆಯನ್ನೂ ಮಾಡಬಾರದೆಂದಿದ್ದರೂ ಮನಸ್ಸು ನಿಲ್ಲದೆ, ಧರ್ಮದೇವನು ತನ್ನ ಪಕ್ಕದಲ್ಲಿದ್ದವನನ್ನು ನೋಡಿ, ಅಯ್ಯಾ ಸ್ನೇಹಿತನೇ! ನಾನು ನೌಕಾಧಿಪತಿಯ ಸಹಾಯಕನಾದ ಧರ್ಮದೇವನು. ನಿವಾರಣವಾಗಿ ರಾಜ ದ್ರೋಹಿ ಎಂದು ನನ್ನನ್ನು ನ್ಯಾಯಾಧಿಪತಿಯ ಬಳಿಗೆ ಕರೆದುಕೊಂಡು ಹೋದಾಗ, ನಾನು ತಪ್ಪುಮಾಡಿದವನಲ್ಲವೆಂದೂ, ನನ್ನನ್ನು ಜಾಗ್ರತೆಯಾಗಿಯೇ ಬಿಟ್ಟುಬಿಡುವರೆಂದೂ,

ಅವನು ಹೇಳಿರುವನು. ಈಗ ನೀವು ನನ್ನನ್ನು ಎಲ್ಲಿಗೆ ಕರೆದುಕೊಂಡು ಹೋಗಬೇಕೆಂದಿರುವಿರಿ ಎಂದು ಕೇಳಿದನು.

ಅದಕ್ಕಾಕಾವಲುಗಾರನು ಹಿಂದು ಮುಂದು ನೋಡುತ ತನ್ನ ಪಕ್ಕದಲ್ಲಿದ್ದ ಮತ್ತೊಬ್ಬನನ್ನು ನೋಡಿದನು; ಅತನು ಅದಕ್ಕೇನು, ಹೇಳಬಹುದೆಂದು ಸೈಗ್ಞೆಮಾಡಲು, ಅವನು ಧರ್ಮದೇವನನ್ನು ನೋಡಿ ನೀನು ಮಲಯಪುರದ ನಿವಾಸಿಯಾಗಿಯೂ ನೌಕಾಧಿಪನಾಗಿಯೂ ಇದ್ದು ನಾವು ಈಗ ಎಲ್ಲಿಗೆ ಹೋಗುತ್ತಿರುವೆವೆಂಬುದನ್ನು ಊಹಿಸಲಾರೆಯೋ ಎಂದನು

ನಾನು ಊಹಿಸಲಾರೆ. ಅದು ಸುಳ್ಳು.

ಸತ್ಯವಾಗಿಯೂ ಊಹಿಸಲಾರೆ; ಆದುದರಿಂದ ಅದನ್ನು ನೀನು ನನಗೆ ತಿಳಿಸು.

ತಿಳಿಸಲಿಕ್ಕೆ ಅಪ್ಪಣೆಯಿಲ್ಲವಲ್ಲಾ.

ಇನ್ನು ಹತ್ತುನಿಮಿಷ, ಅಥವಾ ಅರ್ಧಘಂಟೆ. ಅಥವಾ ಒಂದು ಘಂಟೆಯೊಳಗೆ ಗೊತ್ತಾಗುವ ವಿಷಯವನ್ನು ನನಗೆ ಈಗ ತಿಳುಹಿದರೆ ಅಪ್ಪಣೆಯನ್ನು ಮೀರಿದಂತಾಗುವುದಿಲ್ಲ. ಇದೂ ಅಲ್ಲದೆ ನಾನು ತಪ್ಪಿಸಿಕೊಂಡು ಹೋಗಲಾರೆನೆಂಬುದನ್ನು ನೀನು ಬಲ್ಲೆ.

ಹಾಗಾದರೆ ನಿಂತುಕೊಂಡು ಆಕಡೆ ನೋಡು.

ಧರ್ಮದೇವನು ಎದ್ದುನಿಂತು ಕಾವಲುಗಾರನು ತೋರಿಸಿದ ಕಡೆ ನೋಡಲು, ಸುಮಾರು ಮುನ್ನೂರು ಗಜಗಳ ದೂರದಲ್ಲಿ ಜ್ವಾಲದುರ್ಗದ ಬೆಟ್ಟವು ಭೂಮಿಗೂ ಆಕಾಶಕ್ಕೂ ಕೀಲುಕೊಟ್ಟಂತೆ ನಿಂತಿರುವ ಕಾಳರಾಕ್ಷಸನಂತೆ ಕಾಣಿಸಿತು. ಆ ದ್ವೀಪವು ಒಂದ ದೊಡ್ಡ ಬಂಡೆ. ಒಂದು ಪಕ್ಕದಲ್ಲಿ ದೊಡ್ಡ ಬೆಟ್ಟ; ಇನ್ನೊಂದು ಕಡೆ ಸುಮಾರು ಮುನ್ನೂರು ವರ್ಷಗಳ ಹಿಂದೆ ಕಟ್ಟಿದ ಒಂದು ಕೋಟೆ. ಅದರಲ್ಲಿ ಬಹು ಬಲವಾದ ಕಾರಾಗೃಹವು ಇದ್ದಿತು. ಅಂದಿನಿಂದ ಇಲ್ಲಿ ಅನೇಕಭಯಂಕರವಾದ ಕೃತ್ಯಗಳು ನಡೆದಿದ್ದುವು. ಧರ್ಮದೇವನು ಜಯಲಕ್ಷ್ಮಿಯ ನಾವೆಯಲ್ಲಿ ಓಡಾಡುವಾಗಲೆಲ್ಲಾ ವಿಶೇಷವಾಗಿ ಆ ಕೃತ್ಯಗಳನ್ನೆಲ್ಲಾ ಕೇಳಿದ್ದನು. ಆದುದರಿಂದ ತನ್ನನ್ನು ಕೊಲ್ಲುವುದಕ್ಕಾಗಿಯೇ ಅಲ್ಲಿಗೆ ಕರೆದುಕೊಂಡು ಹೋಗುತ್ತಿರುವರೆಂದು ಭಾವಿಸಿ ಅಲ್ಲಿಗೆ ನಾವು ಏತಕ್ಕೆ ಹೋಗುವುದು? ಅದು ರಾಜದ್ರೋಹಿಗಳ ಸೆರೆಮನೆಯಲ್ಲವೆ? ಆವ ತಪ್ಪನ್ನೂ ಮಾಡದ ನನ್ನನ್ನು

ಅಲ್ಲಿ ಇಡುವರೋ? ಅಲ್ಲಿ ನ್ಯಾಯಾಧಿಪರಾರಾದರೂ ಉಂಟೋ? ಎಂದು ತನಗೆ ತೋರಿದ ಪ್ರಶ್ನೆಗಳನ್ನೆಲ್ಲಾ ಕಾವಲುಗಾರನಿಗೆ ಹಾಕಿದನು.

ಅದಕ್ಕಾಕಾವಲುಗಾರನು ಅಲ್ಲಿ ಬಂದಿಶಾಲಾಧಿಕಾರಿಯೂ, ಬಂದಿವಾನರೂ, ಕಾವಲುಗಾರರೂ, ಬಂದಿವಾನರಿಗೆ ಆಹಾರಾದಿಗಳನ್ನು ಕೊಡಲು ಆಳುಗಳೂ, ದಪ್ಪವಾದ ಗೋಡೆಗಳುಳ್ಳ ಬಂದಿ ಮನೆಯೂ ವಿನಾ ಮತ್ತಾವುದೂ ಇಲ್ಲ.

ಹಾಗಾದರೆ ನನ್ನನ್ನು ಆ ಬಂದಿಶಾಲೆಯಲ್ಲಿ ಸೇರಿಸುವರೋ?

ಇರಬಹುದು. ವಿಚಾರಣೆಯೇ ಆಗಲಿಲ್ಲವಲ್ಲಾ?

ಎಲ್ಲವೂ ಆಗಲೇ ಆಗಿರಬೇಕು.

ವಲ್ಲಭದೇವನು ನನಗೆ ಮಾಡಿದ ವಾಗ್ದಾನವೇನಾಯಿತು?

ಅವನು ನಿನಗೆ ಏನು ವಾಗ್ದಾನಮಾಡಿದ್ದನೋ ನಾವರಿಯೆವು. ನಾವೇನೋ ನಿನ್ನನ್ನು ಜಾಲದುರ್ಗದಲ್ಲಿ ಬಿಟ್ಟು ಬರುವೆವು ಎಂದಕೂಡಲೇ ಧರ್ಮದೇವನು ಸಮುದ್ರದಲ್ಲಿ ದುಮ್ಮಿಕ್ಕಲು ಪ್ರಯತ್ನಮಾಡಿ ಮೇಲಕ್ಕೆ ಹಾರಿದನು. ಓಹೋ! ಧರ್ಮದೇವ! ಏನಮಾಡುತ್ತಲಿದೀಯೆ? ಎಲ್ಲರೂ ಸಹಾಯಕ್ಕೆ ಬನ್ನಿ, ಬನ್ನಿ, ಬನ್ನಿ ಎಂದು ಕೂಗಿದ ಕಾವಲುಗಾರನ ಕೊರಲನ್ನು ಕೇಳಿ ಇಬ್ಬರು ಕಾವಲುಗಾರರು ಓಡಿ ಬಂದು ಮೇಲಕ್ಕೆ ಹಾರಿದ್ದ ಧರ್ಮದೇವನ ಎರಡು ಕಾಲುಗಳನ್ನೂ ಗಟ್ಟಿಯಾಗಿ ಹಿಡಿದು ಅವನನ್ನು ದೋಣಿಯೊಳಕ್ಕೆ ಸೆಳೆಯಲು ಅವನು ದೋಣಿಯೊಳಗೆ ಬಿದ್ದನು. ಒಡನೆಯೇ ಅವನ ಸಂಗಡ ಮಾತನಾಡುತಲಿದ್ದ ಕಾವಲುಗಾರನು ಅವನ ಎದೆಯ ಮೇಲೆ ತನ್ನ ಮಂಡಿಯನ್ನು ಊರಿ, ಏನೋ! ನಿನ್ನ ಯೋಗ್ಯತೆಯು ಕಂಡುಬಂದಿತು; ಇನ್ನು ಮೇಲೆ ಮೃದುವಾದ ಮಾತುಗಳನ್ನು ಆಡುವ ನಿನ್ನಂಥಾ ದೊಡ್ಡ ಮನುಷ್ಯನನ್ನು ನಾನು ಎಂದಿಗೂ ನಂಬುವುದಿಲ್ಲ. ನನಗೆ ಕೊಟ್ಟಿದ್ದ ಅಪ್ಪಣೆಗಳಲ್ಲಿ ಮೊದಲ ಅಪ್ಪಣೆಯನ್ನು ಮೀರಿದೆನು. ತಪ್ಪಿಸಿಕೊಂಡು ಹೋಗುವ ಯತ್ನವನ್ನು ನೀನು ಪುನಃ ಮಾಡಿದೆಯೆಂದರೆ ನಿನ್ನನ್ನು ಈ ಕತ್ತಿಯಿಂದ ತಿವಿದು ಕೊಲ್ಲುವ ಎರಡನೆಯ ಅಪ್ಪಣೆಯನ್ನು ಎಂದಿಗೂ ಮೀರಲಾರೆ ಎಂದು ಧರ್ಮದೇವನ ಎದೆಯ ಮೇಲೆ ತನ್ನ ಕೈಯಲ್ಲಿದ್ದ ಕತ್ತಿಯ ಕೊನೆಯನ್ನು ಮುಟ್ಟಿಸಿದನು.

ಆಗ ಧರ್ಮದೇವನಿಗೆ ಮೊದಲು ಹೇಗಾದರೂ ಪ್ರಯತ್ನಮಾಡಿ ತಪ್ಪಿಸಿಕೊಂಡು

ಹೋಗಬೇಕು ; ಒಂದುವೇಳೆ ಆ ಪ್ರಯತ್ನದಲ್ಲಿ ತನ್ನನ್ನು ಅವರು ಕೊಂದರೆ ಕಷ್ಟವೇ ತೀರಿಹೋಗುವುದೆಂದು ಯೋಚನೆಯುಂಟಾಯಿತು ; ಉತ್ತರಕ್ಷಣದಲ್ಲಿಯೇ ವಲ್ಲಭ ದೇವನ ವಾಗ್ದಾನವು ನೆನಪಿಗೆ ಬಂದಿತು. ಆದೂ ಅಲ್ಲದೆ ಕಾವಲುಗಾರರಿಂದ ದೋಣಿ ಯಲ್ಲಿ ಮರಣವನ್ನು ಹೊದ್ದುವುದು ಅವಮಾನವೆಂದು ತೋರಿ ಅವನು ಹಲ್ಲುಗಳನ್ನು ಕಡಿಯುತ್ತ ಕೈಗಳನ್ನು ಹಿಸಿಕಿಕೊಳ್ಳುತ್ತ ಕೋಪಾವೇಶದಿಂದ ಪ್ರಜ್ಞೆತಪ್ಪಿದವನಾಗಿ ಸುಮ್ಮನೆ ಬಿದ್ದಿದ್ದನು.

ಈ ವೇಳೆಗೆ ದೋಣಿಯು ಜಾಲದುರ್ಗದ ದಡವನ್ನು ಸೇರಿತು. ನಾವಿಕನೊ ಬ್ಬನು ನೀರಿಗೆ ದುಮ್ಮಿಕ್ಕಿ ದೋಣಿಯನ್ನು ಗಟ್ಟಕ್ಕೆ ಎಳೆದು ತಂದನು. ಕಾವಲುಗಾರರು ಮೂವರು ಎರಡು ಕೈಗಳನ್ನೂ ಅಂಗಿಯನ್ನೂ ಹಿಡಿದು ಧರ್ಮದೇವನನ್ನು ಮೇಲಕ್ಕೆ ಎತ್ತಿ ದಡಕ್ಕೆ ಸಾಗಿಸಿದರು. ಮಿಕ್ಕವರು ಹಿಂದೆ ಹೋದರು. ಧರ್ಮದೇವನಿಗೆ ಆಗ ಇನ್ನೂ ಪ್ರಜ್ಞೆ ಸರಿಯಾಗಿ ಬಂದಿರಲಿಲ್ಲವಾದುದರಿಂದ ಕೆಲವು ಮೆಟ್ಟಿಲುಗಳು ಇದ್ದ ಹಾಗೂ, ಅವುಗಳನ್ನು ತಾನು ಹತ್ತಿದ ಹಾಗೂ ಆ ಹಂತಗಳ ಎರಡು ಪಕ್ಕದಲ್ಲಿಯೂ ಸಿಪಾಯಿಗಳು ನಿಂತಿದ್ದ ಹಾಗೂ, ಅನಂತರ ಒಂದು ಬಾಗಿಲನ್ನು ದಾಟಿ ತಾನು ಅಂಗಳ ದೊಳಗೆ ಹೋದ ಹಾಗೂ, ಒಳಗೆ ಪ್ರವೇಶವನ್ನು ಮಾಡುತಲೆ ಜನರು ಬಾಗಿಲನ್ನು ಮುಚ್ಚಿದ ಹಾಗೂ, ಆ ಅಂಗಳದಲ್ಲಿ ಹತ್ತುನಿಮಿಷ ನಿಂತಿದ್ದ ಹಾಗೂ, ಅವನಿಗೆ ತೋರಿ ಇವೆಲ್ಲಾ ಕನಸೆಂದು ತಿಳಿದುಕೊಂಡಿದ್ದನು. ಅಷ್ಟುಹೊತ್ತಿಗೆ ಅವನಿಗೆ ಎಚ್ಚರಿಕೆಯಾ ಯಿತು. ಆಗ ಬಂದಿಯೆಲ್ಲಿ ಎಂದು ಕೇಳಿದ ಮಾತೂ, ಅದಕ್ಕೆ ಇಲ್ಲಿದಾನೆ ಎಂದು ಹೇಳಿದ ಬದಲೂ, ಧರ್ಮದೇವನಿಗೆ ಕೇಳಿಸಿತು. ಅವನು ನನ್ನ ಹಿಂದೆ ಬರಲಿ ಎಂದು ಹೇಳಲು, ಕಾವಲುಗಾರರು ಅವನನ್ನು ಆ ಆಳಿನ ಬಳಿಗೆ ನೂಕಿದರು. ಧರ್ಮದೇವನು ಅವನ ಹಿಂದೆ ಹೋದನು. ಆಳು ಕೈಯಲ್ಲಿ ಒಂದು ಸಣ್ಣ ದೀಪವನ್ನು ಹಿಡಿದುಕೊಂಡು ಮತ್ತೊಂದು ಕೈಯಲ್ಲಿ ಜೀಗದ ಕೈಗಳ ಗೊಂಚಲನ್ನು ಇಟ್ಟುಕೊಂಡು ಒಂದು ಸಣ್ಣ ಕೋಣೆಗೆ ಕರೆದುಕೊಂಡು ಹೋಗಿ ಅದರ ಜೀಗವನ್ನು ಜಿಟ್ಟಿ ಧರ್ಮದೇವನನ್ನು ಬಳಗೆ ನೂಕಿ, ಈಗ ಹೊತ್ತಾಯಿತು ; ಬಂಧನಾಲಯದ ಅಧಿಕಾರಿಯು ಮಲಗಿದ್ದಾನೆ ; ಈದಿನ ಇಲ್ಲಿಯೇ ಇರು. ಇಗೋ ! ತಿಂಡಿ, ನೀರು, ಮಲಗುವುದಕ್ಕೆ ಸ್ವಲ್ಪ ಒಣ ಹುಲ್ಲು ಎಂದು ಹೇಳಿ ದೀಪವನ್ನು ತೆಗೆದುಕೊಂಡು ಬಾಗಿಲನ್ನು ಎಳೆದು ಜೀಗವಂ

ಹಾಕಿಕೊಂಡು ಹೊರಟುಹೋದನು. ತಿಂಡಿ ಆವುದು ನೀರೆಲ್ಲಿ, ಹುಲ್ಲು ಆವ ಮೂಲೆಯಲ್ಲಿರುವುದು ಎಂದು ನೋಡಿಕೊಳ್ಳಲು ಕೂಡ ಅವನಿಗೆ ಸಾವಕಾಶವಿರಲಿಲ್ಲ.

ಕೋಣೆಯು ಅಂಧಕಾರಮಯವಾಗಿದ್ದಿತು. ಬಂದಿಯುವನು ತನ್ನನ್ನು ಕೋಣೆಗೆ ತಳ್ಳಿದಾಗ ಅವ ಸ್ಥಳದಲ್ಲಿ ನಿಂತಿದ್ದನೋ ಅದೇ ಸ್ಥಳದಲ್ಲಿ ರಾತ್ರಿಯೆಲ್ಲಾ ಧರ್ಮದೇವನು ನಿಂತಿದ್ದನು. ಆಹಾರದ ಯೋಚನೆಯಾಗಲಿ ಮಲಗುವ ಯೋಚನೆಯಾಗಲಿ ಅವನಿಗೆ ಸ್ವಲ್ಪವೂ ಇರಲಿಲ್ಲ ಬೆಳಗಾಗುತಲೇ ಬಂದಿಯುವನು ಧರ್ಮದೇವನ ಕೊಟ್ಟಡಿಯ ಬಾಗಿಲನ್ನು ತೆಗೆದು ನೋಡಲು ಅವನು ಗೂಟನೆಟ್ಟಂತೆ ನಿಂತಿದ್ದನು; ಕಣ್ಣುಗಳು ಕೆಂಪಾಗಿದ್ದುವು; ಕಣ್ಣುಗಳಿಂದ ನೀರಿನ ಧಾರೆಗಳು ಹರಿಯುತಲಿದ್ದವು. ಬಾಗಿಲನ್ನು ತೆಗೆದು ಆಳು ಒಳಗೆ ಬಂದುದನ್ನು ಧರ್ಮದೇವನು ಕಾಣನು. ಸ್ತಂಭೀಭೂತವಾಗಿ ನಿಂತಿದ್ದ ಅವನ ಭುಜದ ಮೇಲೆ ಆಳು ಕೈಯಿಡಲು ಧರ್ಮದೇವನಿಗೆ ಎಚ್ಚರಿಕೆಯಾಯಿತು.

ಆಗ ಆಳು ಅವನನ್ನು ನೋಡಿ ನೀನು ರಾತ್ರಿಯೆಲ್ಲಾ ಮಲಗಲೇ ಇಲ್ಲವೋ ಎನ್ನಲು, ನನಗೆ ತಿಳಿಯದು ಎಂದು ಹೇಳಿದನು.

ನಿನಗೆ ಹಸಿವು ಆಗುವುದೋ? ನಾನು ಕಾಣೆನು.

ಆಗ ಆಳು ಧರ್ಮದೇವನನ್ನು ದೃಷ್ಟಿಸಿ ನೋಡಿ ನಿನಗೇನಾದರೂ ಬೇಕೋ ಎಂದು ಕೇಳಲು, ನಾನು ಬಂಧನಾಲಯದ ಯಜಮಾನನನ್ನು ನೋಡಬೇಕು ಎಂದನು. ಅದಕ್ಕೆ ಆಳು ಅವ ಬದಲನ್ನೂ ಹೇಳದೆ ಬಾಗಿಲನ್ನು ಬೇಗಹಾಕುವ ಪ್ರಯತ್ನಮಾಡಲು ಧರ್ಮದೇವನು ಕೈನೀಡಿ ಅವುದೋ ಒಂದು ಮಾತನ್ನಾಡಲು ಯತ್ನಿಸಿದನು. ಅಷ್ಟರಲ್ಲಿಯೇ ಆಳು ಬೇಗವನ್ನು ಹಾಕಿಕೊಂಡು ಹೊರಟುಹೋದನು.

ಅದುವರೆಗೆ ತಡೆದಿದ್ದ ಧರ್ಮದೇವನ ಸಂಕಟಗಳೆಲ್ಲವೂ ಆಗ ಉಕ್ಕಿಬಂದು, ಅವ ತಪ್ಪನ್ನೂ ಮಾಡದ ನನಗೆ ಇಂಥ ಅನ್ಯಾಯದ ದಂಡನೆಯುಂಟಾಯಿತಲ್ಲಾ ಎಂದು ನೆಲದ ಮೇಲೆ ಬಿದ್ದು ಅಳುತ್ತಾ ಉರುಳಾಡಿದನು. ಆಮೇಲೆ ಎದ್ದು ಆಹಾರವನ್ನು ಸ್ವಲ್ಪವಾದರೂ ಮುಟ್ಟದೆ ಕಾಡುವೃಗಗಳು ಬೋನಿನಲ್ಲಿದ್ದರೆ ಹೇಗೆ ಸುಮ್ಮನೆ ಸುತ್ತು ತ್ತಿರುವುವೋ ಹಾಗೆಯೇ ಧರ್ಮದೇವನು ಆ ಸಣ್ಣ ಕೊಟ್ಟಡಿಯಲ್ಲಿ ಸುತ್ತುತ್ತಲಿದ್ದನು. ಆಗ ಅವನಿಗೆ ಒಂದು ಆಲೋಚನೆ ವಿನಾ ಮತ್ತಾವುದೂ ಇರಲಿಲ್ಲ. ದೋಣಿಯಲ್ಲಿ

ದ್ದಾಗ ಸಮುದ್ರಕ್ಕೆ ಸುಲಭವಾಗಿ ದುಮ್ಮಿಕ್ಕಿ ನೀರಿನಲ್ಲಿ ಮುಳುಗಿ ಬಹು ದೂರದವರೆಗೂ ಈಸಿಕೊಂಡು ಹೋಗಿ, ಆ ಮೇಲೆ ಆವುದಾದರೂ ಅನ್ಯದೇಶದ ಹಡಗನ್ನು ಸೇರಿ ದೂರದೇಶಕ್ಕೆ ಹೋಗಿ ಅಲ್ಲಿಗೆ ತನ್ನ ತಂದೆಯನ್ನೂ ಲಲಿತಾಂಗಿಯನ್ನೂ ಕರೆಸಿಕೊಂಡು ಸುಖವಾಗಿರಬಹುದಾಗಿದ್ದಿತು. ಆ ಕೆಲಸವನ್ನು ಮಾಡದೆ ಬಿಟ್ಟುದು ಬಹುಳ ಅವಿವೇಕವಾಯಿತೆಂದು ಸಂಕಟಪಡುತ್ತಾ ಇದ್ದನು. ಕೊನೆಗೆ ಕೈಕಾಲು ಸೋತುಹೋಗಿ ಆ ಕೊಟಡಿಯಲ್ಲಿ ಒಂದು ಮೂಲೆಯಲ್ಲಿ ಹಾಕಿದ್ದ ಹುಲ್ಲಿನ ಮೇಲೆ ಬಿದ್ದುಕೊಂಡನು.

ಮಾರನೇದಿನ ಕ್ಲೃಪ್ತಕಾಲಕ್ಕೆ ಸರಿಯಾಗಿ ಆಳು ಬಂದು ಧರ್ಮದೇವನನ್ನು ನೋಡಿ ಈದಿನ ಸ್ವಲ್ಪ ಸುಟ್ಟಿಯಾಗಿದ್ದೀಯೆ; ಹೀಗೆ ಧೈರ್ಯವನ್ನು ತಾಳು. ನನ್ನಿಂದೇನಾದರೂ ಆಗಬೇಕಾಗಿದ್ದರೆ ಹೇಳು, ಎಂದನು.

ನಾನು ಬಂದಿವಾಲನನ್ನು ನೋಡಬೇಕು. ಅದು ಅಸಾಧ್ಯ.

ಏಕೆ? ಅದು ಇಲ್ಲಿಯ ಕಟ್ಟಲೆಗಳಿಗೆ ವಿರೋಧವಾದ ಕೆಲಸ; ಆದುದರಿಂದ ಅದನ್ನು ಕೇಳಬಾರದು.

ಮತ್ತಾವುದನ್ನು ಕೇಳಬಹುದು?

ತಿನ್ನುವುದಕ್ಕೆ ಒಳ್ಳೆ ಆಹಾರಗಳನ್ನೂ, ಓದಲಿಕ್ಕೆ ಪುಸ್ತಕಗಳನ್ನೂ ದುಡ್ಡು ಕೊಟ್ಟು ಕೇಳಲುಬಹುದು. ಇದಲ್ಲದೆ ದಿನಕ್ಕೊಂದು ಸಾರಿ ಅಂಗಳದಲ್ಲಿ ತಿರುಗಾಡಲು ಅಪ್ಪಣೆಯನ್ನು ಕೇಳಲುಬಹುದು.

ನನಗೆ ಇವುಗಳಾವುದೂ ಬೇಡ. ಬಂಧನಾಲಯದ ಪಾಲಕನನ್ನು ನೋಡಬೇಕು.

ಆಗದ ಕೆಲಸವನ್ನು ಹೇಳಿ ನನ್ನನ್ನು ಪೀಡಿಸಿದರೆ ನಾನು ಇನ್ನು ಮೇಲೆ ಆಹಾರವನ್ನೇ ತರುವುದಿಲ್ಲ.

ನೀನು ಆಹಾರವನ್ನು ತಂದು ಕೊಡದಿದ್ದರೆ ನನಗೆ ಮತ್ತೂ ಅನುಕೂಲವಾಯಿತು. ಅದು ಹೇಗೆ?

ಆಹಾರವಿಲ್ಲದಿದ್ದರೆ ಜಾಗ್ರತೆಯಾಗಿ ಸಾಯುವೆನು. ಎಷ್ಟು ಬೇಗನೆ ಸತ್ತರೆ ಅಷ್ಟುಬೇಗನೆ ನನ್ನ ಕಷ್ಟವು ಪರಿಹಾರವಾಗುವುದು.

ಹೀಗೆ ಮಾತನ್ನಾಡುವ ಇವನು ತನಗೆ ಮರಣವೇ ಸುಖವೆಂದು ಭಾವಿಸಿರುವನು

ಎಂದು ಬಂದಿಯ ಆಳು ತಿಳಿದುಕೊಂಡನು. ಈ ಕಾರಾಗೃಹದಲ್ಲಿ ಆಳುಗಳಿಗೆ ಸಂಬಳ ವಲ್ಲದೆ ಬಂದಿಯವರ ತಲೆ ಒಂದಕ್ಕೆ ಇಷ್ಟೆಂದು ಸರಕಾರದವರು ಕೊಡುತ್ತಲಿದ್ದರು. ಧರ್ಮದೇವನು ಸತ್ತರೆ ಅವನಿಗಾಗಿ ಸಿಕ್ಕುತಲಿದ್ದ ಆದಾಯಕ್ಕೆ ಲೋಪವುಂಟಾಗುವು ದೆಂಬ ಭೀತಿಯಿಂದ, ಆ ಆಳು ವಿನಯದೊಡನೆ ಅಯ್ಯಾ ಧರ್ಮದೇವ, ಅಸಾಧ್ಯವಾದು ದನ್ನು ಕೇಳಿ ಏನು ಪ್ರಯೋಜನ? ನಿನ್ನ ನಡತೆಯು ಸರಿಯಾಗಿದ್ದರೆ ನಿನ್ನನ್ನು ಅಡಿಗಡಿಗೆ ಅಂಗಳದಲ್ಲಿ ತಿರುಗಾಡಲು ಬಿಡುವರು. ಆಗ ಇಲ್ಲಿಯ ಅಧಿಕಾರಿಯನ್ನು ನೋಡಿ ಮಾತನಾಡಿಸಲು ಅನುಕೂಲವಾಗುವುದು, ಎಂದನು.

ಹಾಗೆ ಅನುಕೂಲವಾಗಲು ಸುಮಾರು ಎಷ್ಟು ದಿವಸಗಳು ಹಿಡಿಯುವುವು?

ದಿವಸಗಳೋ, ಮಾಸಗಳೋ, ವರ್ಷಗಳೋ, ಹೇಗೆ ಹೇಳುವುದು.

ಅಷ್ಟು ದಿವಸಗಳು ನನ್ನಿಂದ ಕಾದಿರುವುದಕ್ಕಾಗುವುದಿಲ್ಲ. ನಾನು ಅವನನ್ನು ಈಗಲೇ ನೋಡಬೇಕು.

ಆಗದ ಹೋಗದ ಕೆಲಸಕ್ಕೆ ಸುಮ್ಮನೆ ಯೋಚನೆಮಾಡುತ್ತಿದ್ದರೆ ನಿನಗೆ ಜಾಗ್ರತೆ ಯಾಗಿಯೇ ಹುಚ್ಚು ಹಿಡಿದುಹೋಗುತ್ತದೆ.

ಅದು ನಿಜವೋ? ಎಂದು ಧರ್ಮದೇವನು ಆಳನ್ನು ಕೇಳಿದನು.

ಅದಕ್ಕೆ ಸಂದೇಹವೇ ಇಲ್ಲ. ಈ ಕೊಟ್ಟಡಿಯಲ್ಲಿ ನಿನಗೆ ಮೊದಲು ಒಬ್ಬ ಸನ್ಯಾಸಿಯು ಇದ್ದನು. ತನ್ನನ್ನು ಸೆರೆಯಿಂದ ಬಿಟ್ಟರೆ ಕಾರಾಲಯದ ಅಧಿಪತಿಗೆ ಒಂದು ಲಕ್ಷ ವರಹಗಳನ್ನು ಕೊಡುವೆನೆಂದೂ ಅವನನ್ನು ನೋಡಿಸೆಂದೂ ಅವನೂ ನಿನ್ನಂತೆಯೇ ನನ್ನನ್ನು ಪೀಡಿಸುತಲಿದ್ದನು. ಕೊನೆಗೆ ಅವನಿಗೆ ಹುಚ್ಚು ಹಿಡಿಯಿತು.

ಅವನು ಈ ಕೋಣೆಯನ್ನು ಬಿಟ್ಟು ಎಷ್ಟು ದಿವಸಗಳಾದುವು?

ನಾಲ್ಕು ವರ್ಷಗಳು. ಅವನಿಗೆ ಬಿಡುಗಡೆಯಾಯಿತೋ?

ಇಲ್ಲ. ಇದರ ಕೆಳಗಣ ಅಂಧಕೂಪವೆಂಬ ನೆಲಮಾಳಿಗೆಯಲ್ಲಿ ಹಾಕಿದ್ದಾರೆ.

ಅಯ್ಯಾ! ನನ್ನ ಪಾಲಿಗೆ ನೀನೇ ಇಲ್ಲಿಯ ಯಜಮಾನನು. ನಾನು ಸನ್ಯಾ ಸಿಯೂ ಅಲ್ಲ; ಹುಚ್ಚನೂ ಅಲ್ಲ. ಮುಂದೆ ಏನಾದರೂ ಈ ಕಾರಾಗೃಹದ ಪ್ರಭಾವ ದಿಂದ ಹುಚ್ಚು ಹಿಡಿಯುವುದೋ ಏನೋ ಗೊತ್ತಿಲ್ಲ. ಇದಲ್ಲದೆ ನನ್ನಲ್ಲಿ ಅಷ್ಟು ದುಡ್ಡೂ

ಇಲ್ಲ. ನಾನು ಒಂದು ಕೆಲಸವನ್ನು ಹೇಳುತ್ತೇನೆ; ಅದನ್ನು ನೀನು ಮಾಡಿಕೊಟ್ಟೆ ಯಾದರೆ ನನ್ನಲ್ಲಿರುವ ಐದುನೂರು ವರಹಗಳನ್ನು ನಿನಗೆ ಕೊಡುವೆನು.

ಅದೇನು ಕೆಲಸ?

ಮಲಯಪಟ್ಟಣದಲ್ಲಿ ಭುಜಂಗಭೂಷಣನೆಂಬ ಒಬ್ಬ ಮುದುಕನೂ, ಲಲಿತಾಂಗಿ ಯೆಂಬೊಬ್ಬ ಯುವತಿಯೂ ಇರುವರು. ಅವರಿಬ್ಬರಿಗೂ ನಾನು ಕೊಡುವ ಕಾಗದ ವನ್ನು ಕೊಟ್ಟು ಅವರಿಂದ ಉತ್ತರವನ್ನು ತರಬೇಕು.

ಒಳ್ಳೆಯ ಮಾತನಾಡಿದೆ. ನೀನು ಹೇಳಿದಂತೆ ನಾನು ಮಾಡಿದರೆ ನನ್ನ ಕೆಲ ಸವೂ ಹೋಗುವುದಲ್ಲದೆ ದಂಡನೆಯೂ ಆಗುವುದು. ಈಗ ನನಗೆ ವರ್ಷಕ್ಕೆ ಐನೂರು ವರಹಗಳ ವರಮಾನವಿದೆ: ಅದನ್ನು ಕಳೆದುಕೊಳ್ಳುವುದಕ್ಕೆ ನನಗೆ ಬುದ್ಧಿಯಿಲ್ಲವೇ?

ಹಾಗಾದರೆ ನಾನು ಹೇಳಿದಂತೆ ಮಾಡಲೊಲ್ಲೆಯೋ?

ಒಲ್ಲೆನು.

ಇಗೋ ನೋಡು. ನಾನು ಹೇಳಿದ ಹಾಗೆ ನೀನು ಮಾಡದಿದ್ದರೆ ಒಂದುದಿನ ವಲ್ಲ ಒಂದುದಿನ ಬಾಗಿಲಹಿಂದೆ ಅವಿತುಕೊಂಡಿದ್ದು ನಿನ್ನ ತಲೆಯನ್ನು ಒಡೆದುಬಿಡು ವೆನು ಎಂದು ಹೇಳಿ ಧರ್ಮದೇವನು ಆ ಕೋಣೆಯಲ್ಲಿ ಹಾಕಿದ್ದ ಕಾಲುಮಣೆಯ ನ್ನೆತ್ತಿ ತಿರುಗಿಸಿ ಅವನ ಮೇಲೆ ಎಸೆಯಲು ಯತ್ನಮಾಡಿದನು.

ಅಷ್ಟರಲ್ಲಿಯೇ ಆಳು ಓಹೋ! ನನ್ನನ್ನು ಹೀಗೆಲ್ಲಾ ಹೆದರಿಸುವೆಯೋ? ಆ ಸನ್ಯಾಸಿಯು ನಿನ್ನಂತೆಯೇ ಆಡಿ ಕೊನೆಗೆ ಹುಚ್ಚನಾದನು. ಆಗಲಿ, ನಾನು ಹೋಗಿ ಹೇಗಾದರೂ ಮಾಡಿ ಯಜಮಾನನನ್ನು ಕರೆದುತರುವೆನು. ಎಂದು ಹೇಳಿ ಬಾಗಿಲ ನ್ನೆಳೆದು ಜೀಗವನ್ನು ಹಾಕಿಕೊಂಡು ಹೊರಟುಹೋದನು.

ಸ್ವಲ್ಪಹೊತ್ತಿನಲ್ಲಿಯೇ ನಾಲ್ಕುಜನ ಸೈನಿಕರೊಡನೆ ಆಳು ಧರ್ಮದೇವನ ಕೊಟ್ಟ ಡಿಗೆ ಬಂದು, ಆ ಸೈನಿಕರ ನಾಯಕನಿಗೆ ಅವನನ್ನು ತೋರಿಸಿ ಇವನನ್ನು ಕೆಳಗಿನ ಅಂಧ ಕೂಪಕ್ಕೆ ಕರೆದುಕೊಂಡು ಹೋಗಿ ಬಿಡುವ ಹಾಗೆ ಯಜಮಾನನು ಅಪ್ಪಣೆ ಮಾಡಿರು ವನು ಎಂದು ಹೇಳಿದನು.

ಬಳಿಕ ಸೈನಿಕರು ಹುಚ್ಚನ ಮಗ್ಗುಲಿಗೆ ಹುಚ್ಚನನ್ನು ಸೇರಿಸುವುದು ನ್ಯಾಯವೇ ಸರಿ ಎಂದು ಧರ್ಮದೇವನನ್ನು ಒಲಾತ್ಕಾರದಿಂದ ಅಂಧಕೂಪಕ್ಕೆ ಎಳೆದುಕೊಂಡು

ಹೋಗಿ ಒಳಗೆ ತಳ್ಳಿ ನೀನು ಮಾಡಿದ ಅಪರಾಧಕ್ಕೆ ಇದೇ ಶಿಕ್ಷೆಯೆಂದು ಹೇಳಿ, ಬಾಗಿಲಿಗೆ ಬೀಗಹಾಕಿಕೊಂಡು ಹೊರಟುಹೋದರು.

ಈ ಕೂಪದಲ್ಲಿ ಕಗ್ಗತ್ತಲೆಯು ಕವಿದುಕೊಂಡಿದ್ದಿತು. ಧರ್ಮದೇವನಿಗೆ ಕಣ್ಣು ಕಾಣದೆ ಕೈಗಳನ್ನು ನೀಡಿ ಆ ಕೊಟ್ಟಡಿಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ಮೆಲ್ಲಮೆಲ್ಲಗೆ ತಿರುಗಿ ನೋಡಲು ಒಂದು ಕಡೆ ಗೋಡೆಯು ಸಿಕ್ಕಿತು. ಅದೆಲ್ಲಾ ಪಾಸಿ ಹಿಡಿದುಹೋಗಿದ್ದಿತು. ಗೋಡೆಯನ್ನು ಹಿಡಿದು ಆ ಕೋಣೆಯ ಸುತ್ತಲೂ ತಿರುಗಿದನು. ಅಷ್ಟು ಹೊತ್ತಿಗೆ ಕಣ್ಣಿಗೆ ಕತ್ತಲೆಯು ಸ್ವಲ್ಪ ಅಭ್ಯಾಸವಾಯಿತು. ಆಗ ಆ ಕೊಟ್ಟಡಿಯ ಮೇಲು ಭಾಗದಲ್ಲಿದ್ದ ಒಂದು ಕಿಟಕಿಯಿಂದ ಕಷ್ಟಪಟ್ಟು ಒಳಗೆ ನುಗ್ಗುತ್ತಲಿರುವ ಬೆಳಕನ್ನು ಒಳಗಿನ ಕಗ್ಗತ್ತಲೆಯು ಬೆದರಟ್ಟುತ್ತಲಿರುವಂತೆ ಅವನಿಗೆ ತೋರಿತು. ಆಗ ಧರ್ಮದೇವನು ಸ್ವಲ್ಪ ಯೋಚಿಸಿ " ಬಂದಿಯಾಳು ಹೇಳಿದುದು ಸರಿ ; ನಾನು ಈಗಲೇ ಸ್ವಲ್ಪ ಹೆಚ್ಚು ಕಡಿಮೆ ಹುಚ್ಚ ; ಸ್ವಲ್ಪ ದಿವಸಗಳು ಇಲ್ಲಿಯೇ ಇದ್ದರೆ ಪೂರಾ ಹುಚ್ಚನಾಗುತ್ತೇನೆ " ಎಂದುಕೊಂಡನು.

ಒಂಬತ್ತನೆಯ ಅಧ್ಯಾಯ

ರಾಜನ ಅಂತರ್ಗೃಹ.

ವಲ್ಲಭದೇವನು ಧರ್ಮದೇವನನ್ನು ಯಾವಜ್ಜೀವವೂ ಕಾರಾಗೃಹದಲ್ಲಿಡುವಂತೆ ಅಪ್ಪಣೆಯಂ ಮಾಡಿ ನ್ಯಾಯಸ್ಥಾನವನ್ನು ಬಿಟ್ಟು ಅತ್ಯಾತುರದಿಂದ ರೇಣುಕೆಯ ಮನೆಗೆ ಹೋಗಿ ಸೇರಿದನು. ಊಟಕ್ಕೆ ಬಂದಿದ್ದವರೆಲ್ಲರೂ ಇನ್ನೂ ಅಲ್ಲಿಯೇ ಇದ್ದರು. ಇವನನ್ನು ಕಾಣುತ್ತಲೇ ಅವರೆಲ್ಲರೂ " ಎಲೈ ಧರ್ಮಮೂರ್ತಿಯೇ ! ಶಿರಚ್ಛೇದನಾಧಿಕಾರಿಯೇ ! ರಾಜ್ಯಸುರಕ್ಷಕನೇ ! ಏನು ವಿಶೇಷ ? ರಾಜದ್ರೋಹದ ಒಳಸಂಚು ಆವುದಾದರೂ ಹೊರಪಟ್ಟಿತೋ ? ಏಲಾದ್ವೀಪದ ರಾಕ್ಷಸನು ಆ ದ್ವೀಪವಂ ಬಿಟ್ಟು ಅಮರದೇಶವನ್ನು ಸೇರಿದನೋ ? ನಿನ್ನ ಮುಖವನ್ನು ನೋಡಿದರೆ ರಾಜ್ಯಕ್ಕೆ ಆವುದೋ ಒಂದು ದೊಡ್ಡ ವಿಪತ್ತು ಸಂಭವಿಸಿರುವಂತೆ ತೋರುತ್ತಲಿದೆ " ಎಂದು ಒಂದೇ ತಡವೆ ಕೇಳಿದರು.

ಅವರು ಮಾಡಿದ ಪ್ರಶ್ನೆಗೆ ಉತ್ತರವನ್ನು ಕೊಡದೆ ವಲ್ಲಭದೇವನು: ಶಾಂತವೀರ ನನ್ನು ನೋಡಿ ತಮ್ಮ ಸಂಗಡ ಒಂದು ಗುಟ್ಟಾದ ಮಾತನ್ನು ಹೇಳಬೇಕಾಗಿದೆ ಎನ್ನಲು, ಆತನು ಅದೇನು ಅಷ್ಟು ಗುರುವಾದ ಸಂಗತಿಯೋ ಎಂದನು.

ಅಹುದು. ಅದುದರಿಂದಲೇ ಇಲ್ಲಿಗೆ ನಾನು ಇಷ್ಟು ಆತುರವಾಗಿ ಬಂದುದು; ಕೆಲವು ದಿವಸಗಳು ಊರನ್ನು ಬಿಟ್ಟು ಹೋಗಬೇಕಾಗಿದೆ ಎಂದು ಹೇಳಿ ರೇಣುಕೆಯ ಮುಖವನ್ನು ನೋಡಿದನು. ಆ ಮಾತನ್ನು ಕೇಳಿ ಆ ಯುವತಿಯು ಖಿನ್ನಳಾಗಿ ತನ್ನ ಮನಃಕ್ಲೇಶವಂ ಸಹಿಸಲಾರದೆ, ಪ್ರಿಯರೇ, ಈಗ ತಾವು ನನ್ನನ್ನು ಬಿಟ್ಟು ಹೋಗಿ ಬರುವಿರಾ ಎಂದು ಕೇಳಲು, ಅವನು ಎಲೌ ಪ್ರಿಯಳೇ! ನಿನ್ನನ್ನು ಅಗಲಲಾರೆನು; ಆದರೂ ಕೆಲವು ದಿವಸಗಳ ಮಟ್ಟಿಗೆ ಊರನ್ನು ಬಿಡಬೇಕಾಗಿದೆ ಎಂದನು. ಆಗ ರೇಣುಕೆಯು ಎಲ್ಲಿಗೆ ಹೋಗಬೇಕು ಎನ್ನಲು, ಅದು ರಾಜಕಾರ್ಯ; ಅದನ್ನು ಎಲ್ಲರಿಗೂ ಹೇಳಲಾಗದು ಎಂದು ಹೇಳಿ ಶಾಂತವೀರನ ಸಮೀಪಕ್ಕೆ ಹೋಗಿ ಸ್ವಾಮೀ! ಬಿಜಯ ಮಾಡಿರಿ ಎಂದು ಒಂದು ಏಕಾಂತಸ್ಥಳಕ್ಕೆ ಕರೆದುಕೊಂಡುಹೋದನು.

ವಲ್ಲಭದೇವ! ಏನು ವರ್ತಮಾನ?

ಸ್ವಾಮೀ! ಗುರುತರವಾದ ಕಂಟಕ ಒಂದು ನಮ್ಮ ರಾಜ್ಯಕ್ಕೆ ಸಂಭವಿಸುವಂತಿದೆ. ನಾನು ಈಕ್ಷಣ ಅಮರಪುರಕ್ಕೆ ಹೋಗಿ ಮಹಾರಾಜರನ್ನು ಕಂಡು ಮಾತನಾಡಿ ಒಂದರೆ ನಮಗೆಲ್ಲರಿಗೂ ಅನುಕೂಲವಾಗುವುದೆಂದು ತೋರುತ್ತದೆ. ಆದುದರಿಂದ ತಾವು ಮಹಾರಾಜರಿಗೆ ಒಂದು ಲೇಖನವನ್ನು ಕೊಡಬೇಕು.

ನಾನು ಮಹಾರಾಜರಿಗೆ ಬರೆಯುವ ಪದ್ಧತಿಯಿಲ್ಲವಲ್ಲಾ?

ತಾವು ಬರೆಯದಿದ್ದರೆ ಮತ್ತಾರಿಂದಲಾದರೂ ಬರೆಸಿಕೊಡಬೇಕು.

ಸಾಲ್ವರಿಗೂ ರಾಜರಿಗೂ ಬಹು ಅನ್ಯೋನ್ಯ; ಅವರಿಂದ ಒಂದು ಕಾಗದವನ್ನು ಬರೆಸಿಕೊಡುವೆನು. ಏನನ್ನು ಬರೆಸಲಿ?

ರಾಜರನ್ನು ಕಾಣಬೇಕಾದರೆ ನಿಯಮಗಳುಂಟು. ಅವುಗಳನ್ನೆಲ್ಲಾ ಅನುಸರಿಸಲು ಸಾವಕಾಶವಿಲ್ಲ. ನಾನು ಅಮರಪುರಕ್ಕೆ ಹೋಗಿ ಸೇರಿದ ಒಡನೆಯೇ ಮಹಾರಾಜರನ್ನು ಕಂಡು ಅವರೊಡನೆ ಕೆಲವು ಮಾತುಗಳನ್ನಾಡಲು ಅನುಕೂಲವಾಗಬೇಕು.

ಅದಕ್ಕೆ ರಾಜರಿಗೆ ಪತ್ರವನ್ನು ಬರೆಯಬೇಕೆ? ಪ್ರಧಾನನನ್ನು ಕಂಡರೆ ಸಾಕು. ಅವನಿಗೆ ಬೇಕಾದರೆ ನಾನು ಒಂದು ಲೇಖನವನ್ನು ಬರೆದುಕೊಡುವೆನು.

ನಾನು ಪ್ರಧಾನನನ್ನು ಮೊದಲು ಕಂಡೆನಾದರೆ ಅವನು ಎಲ್ಲ ಸಮಾಚಾರವನ್ನು ನನ್ನಿಂದ ತಿಳಿದುಕೊಂಡು ರಾಜರ ಸಮ್ಮುಖದಲ್ಲಿ ಹೇಳಿಬಿಡುವನು. ಅದರಿಂದುಂಟಾಗುವ ಗೌರವವು ಅವನಿಗಾಗುವುದು; ಆದುದರಿಂದ ನಾನು ಮೊದಲು ಪ್ರಧಾನನ್ನು ನೋಡಕೂಡದು.

ಹಾಗಾದರೆ ಮಹಾರಾಜರಿಗೆ ಸಾಲ್ವರಿಂದ ಪತ್ರವನ್ನು ಬರೆಸಿಕೊಡುವೆನು. ನೀನು ಆವಾಗ ಹೊರಡುತ್ತೀಯೆ?

ಇಗೋ, ಈಗಲೆ ಹೊರಟೆ.

ಬಂಡಿಯು ಸಿದ್ಧವಾಗಿದೆಯೋ?

ಅದೆಷ್ಟು ಹೊತ್ತು. ಇಗೋ ಮನೆಗೆ ಹೋಗಿ ಕಟ್ಟಿಸಿಕೊಂಡು ಬಂದೆ.

ನೀನು ಮನೆಗೆ ಹೋಗಿಬಾ. ಅಷ್ಟರಲ್ಲಿ ನಾನು ಕಾಗದವನ್ನು ಬರೆಸಿಡುವೆನು.

ವಲ್ಲಭದೇವನು ಮನೆಗೆ ಬೇಗಬೇಗನೆ ಹೋಗಬೇಕೆಂದಿದ್ದನು; ಆದರೆ ಜನರು ತನ್ನ ಅತುರವನ್ನು ಕಂಡರೆ ಏನೆಂದುಕೊಳ್ಳುವರೋ ಎಂದು ಯೋಚಿಸಿ ಮೆಲ್ಲಮೆಲ್ಲಗೆ ತನ್ನ ಮನೆಯನ್ನು ಸೇರಲು, ಅಲ್ಲಿ ಅರೋ ಒಬ್ಬ ಹೆಂಗಸು ಕತ್ತಲೆಯಲ್ಲಿ ನಿಂತಿರುವಂತೆ ಕಂಡಿತು. ಅವಳಾರಾಗಿರಬಹುದೆಂದು ತಿಳಿಯಲು ನಮ್ಮ ಪಾಠಕರು ಕುತೂಹಲವುಳ್ಳವರಾಗಿರಬಹುದು. ಅವಳೇ ಲಲಿತಾಂಗಿಯು; ತನ್ನ ಪ್ರಿಯನ ವರ್ತಮಾನ ಏನಾದರೂ ತಿಳಿಯಬಹುದಲ್ಲವೆ ಎಂದು ವಲ್ಲಭದೇವನನ್ನಾದರೂ ಕೇಳಿನೋಡೋಣವೆಂದು ಅಲ್ಲಿಗೆ ಬಂದಿದ್ದಳು.

ವಲ್ಲಭದೇವನು ಮನೆಯ ಬಾಗಿಲಿಗೆ ಬರುತ್ತಲೆ ಅವಳು ಅವನ ಇದಿರಿಗೆ ಬಂದು ನಿಂತು ನನ್ನ ಪ್ರಿಯ ಧರ್ಮದೇವನ ಗತಿ ಏನಾಯಿತು, ಮಹಾಸ್ವಾಮೀ! ಎಂದು ಬಹು ದೈನ್ಯದಿಂದ ಕೇಳಿದಳು. ಆಕೆಯನ್ನು ನೋಡುತಲೆ ವಿಚಾರಣೆಯ ಕಾಲದಲ್ಲಿ ಧರ್ಮದೇವನು ತನ್ನೊಡನೆ ಹೇಳಿದ್ದುದೆಲ್ಲವೂ ವಲ್ಲಭದೇವನಿಗೆ ಜ್ಞಾಪಕಕ್ಕೆ ಬಂದು, ತಾನೇ ಅಪರಾಧಿ, ಅವಳೇ ನ್ಯಾಯಾಧಿಪತಿ ಎಂದು ತಿಳಿದುಕೊಂಡನು. ಆದರೇನು? ತಮ್ಮ ಪುರೋಭಿವೃದ್ಧಿಯೇ ಹೆಚ್ಚೆಂದು ಎಣಿಸಿರುವವರು ನ್ಯಾಯಾನ್ಯಾಯಗಳನ್ನೂ ಇತರರ ಸುಖದುಃಖಗಳನ್ನೂ ಹೇಗೆ ತಾನೇ ಗಣನೆಗೆ ತರುವರು; ಒಂದು ವೇಳೆ

ತಂದರೂ ಅವುಗಳು ಅವರ ಬುದ್ಧಿಯಿಂದ ಉತ್ತರಕ್ಷಣದಲ್ಲಿಯೇ ಜಾರಿ ಹೋಗುವುವು.

ಲಲಿತಾಂಗಿಯ ಪ್ರಶ್ನೆಗೆ ವಲ್ಲಭದೇವನು ಅಮ್ಮಾ! ನೀನು ಹೇಳುವ ಯುವಕನು ಗುರುತರವಾದ ರಾಜದ್ರೋಹವನ್ನು ಮಾಡಿರುವನಾದುದರಿಂದ ಅವನನ್ನು ಬಿಡಲು ಸಾಧ್ಯವಾಗಲಿಲ್ಲ ಎಂದನು. ಅದನ್ನು ಕೇಳಿ ಲಲಿತಾಂಗಿಯು ಕಂಬನಿಗಳನ್ನು ಸುರಿಸುತ್ತ ನಿಂತಳು. ಇವಳಿಗೆ ಹೆಚ್ಚು ಮಾತನಾಡಲು ಆಸ್ಪದಕೊಟ್ಟರೆ ಕೆಲಸವು ಕೆಟ್ಟು ಹೋಗುವುದೆಂಬ ಭೀತಿಯಿಂದ ವಲ್ಲಭದೇವನು ಮನೆಯನ್ನು ಪ್ರವೇಶಿಸಲು ಯತ್ನಿಸಿದನು; ಆದರೆ ಲಲಿತಾಂಗಿಯು ಅವನಿಗೆ ಅಡ್ಡಲಾಗಿ ಬಂದು ಸ್ವಾಮೀ! ನನ್ನ ಪ್ರಿಯನು ಎಲ್ಲಿರುವನೋ ಅದನ್ನಾದರೂ ದಯೆಯಿಟ್ಟು ತಿಳಿಸಿದರೆ ಸಾಕು; ನಾನು ಅವನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವೆನು ಎಂದಳು. ನನಗೆ ಅದು ತಿಳಿಯದು ಎಂದು ಹೇಳಿ ಲಲಿತಾಂಗಿಯ ಸ್ಥಿತಿಯನ್ನು ನೋಡಿ ತನಗೆ ಉಂಟಾದ ಸಂಕಟವನ್ನು ಅಡಗಿಸಿಕೊಂಡು ವಲ್ಲಭದೇವನು ಮನೆಯನ್ನು ಹೊಕ್ಕು, ಬಾಗಿಲನ್ನು ಮುಚ್ಚಿಕೊಂಡನು. ಆದರೆ ಮನಸ್ಸಿನ ಪಶ್ಚಾತ್ತಾಪವನ್ನು ಹೊರಗೆ ನೂಕಲು ಸಾಧ್ಯವೇ? ಅವನು ಒಳಗೆ ಹೋಗುತಲೆ ತನ್ನ ತಂದೆಯ ತಪ್ಪನ್ನು ಮರೆಯಿಸಿ ತನ್ನ ಮಹತ್ಕಾಂಕ್ಷೆಯನ್ನು ಪೂರೈಸಿಕೊಳ್ಳುವುದಕ್ಕಾಗಿ ತನ್ನಿಂದ ಬಲಿಯಾಗಿ ಕೊಡಲ್ಪಟ್ಟ ಧರ್ಮದೇವನು ಇದುರಿಗೆ ಬಂದು ನಿಂತು "ನನ್ನನ್ನು ಕಾಪಿಡುವೆನು ಎಂದು ಮಾತುಕೊಟ್ಟು ನಿರಪರಾಧಿಯಾದವನನ್ನು ಅನ್ಯಾಯವಾಗಿ ಅಂಧಕೂಪದಲ್ಲಿ ಹಾಕಿಸುವಂತೆ ಮಾಡಿದೆ. ಈ ಅಕೃತ್ಯವು ಯಾವಜ್ಜೀವವೂ ನಿನ್ನನ್ನು ಯಾತನೆ ಪಡಿಸದಿರಲಾರದು" ಎಂದು ವಲ್ಲಭದೇವನಿಗೆ ಹೇಳಿದಂತಾಯಿತು. ಆಗ ಅವನ ಹೃದಯದಲ್ಲಿ ಒಂದು ದೊಡ್ಡ ವ್ರಣವುಂಟಾಗಿ ಅದನ್ನು ಚುಚ್ಚಲು ಆವಾಗಲೂ ಯಾರೋ ಒಬ್ಬ ಬೆರಲನ್ನು ನೀಡಿಕೊಂಡಿರುವಂತೆ ತೋರಿತು.

ಆ ಸಮಯದಲ್ಲಿ ರೇಣುಕೆಯಾಗಲಿ ಲಲಿತಾಂಗಿಯಾಗಲಿ ಬಂದು ಮುಂದೆ ನಿಂತು ಆ ನಿರಪರಾಧಿಯನ್ನು ದಯಮಾಡಿ ಬಿಟ್ಟುಕೊಡು ಎಂದು ಕೇಳಿದ್ದರೆ ವಲ್ಲಭದೇವನು ಒಡನೆಯೇ ಧರ್ಮದೇವನನ್ನು ಬಿಡುಗಡೆ ಮಾಡುತಲಿದ್ದನು. ಆದರೆ ರೇಣುಕೆಯು ಪ್ರಿಯನನ್ನು ಅಗಲಿದ ಸಂಕಟದಿಂದ ತನ್ನ ಮನೆಯಲ್ಲಿ ಮರುಗುತ್ತಲಿದ್ದಳು. ಲಲಿತಾಂಗಿ

ಯಾದರೋ, ದುಃಖಸಮುದ್ರದಲ್ಲಿ ಮುಳುಗಿ ತನ್ನ ಮನೆಯ ದಾರಿಯನ್ನು ಹಿಡಿದು ಹೋಗುತ್ತಿದ್ದಳು.

ವಲ್ಲಭದೇವನು ಸ್ವಲ್ಪಹೊತ್ತು ಹಾಗೆಯೇ ಯೋಚಿಸಿ, ಛೀ! ಇದೇನು? ನನ್ನ ಹೃದಯವು ಇಷ್ಟು ಮೃದುವಾಗುತ್ತಾ ಬಂದಿತು? ಹಾಗಾದರೆ ನಾನು ಮುಂದೆ ಹೇಗೆ ಬದುಕುವುದು? ಎಂದು ಪಕ್ಕನೆ ಎದ್ದು ಕುದುರೆಯ ಬಂಡಿಯನ್ನು ಕಟ್ಟಿಸಿ ಕೊಂಡು, ರಾಜನ ಬಳಿಗೆ ಹೋಗುವನಾದುದರಿಂದ ತಕ್ಕ ಉಡುಪುಗಳನ್ನು ತೆಗೆದುಟು ಕೊಂಡು, ಶಾಂತವೀರನ ಮನೆಗೆ ಹೋಗಿ ಅವನು ಕೊಟ್ಟ ಲೇಖನವನ್ನು ತೆಗೆದು ಕೊಂಡು, ಅಮರಪುರದ ಮಾರ್ಗವನ್ನು ಸೇರಿ ಬೇಗ ಬೇಗನೆ ಹೊಡಿ ಎಂದು ಸಾರಥಿಗೆ ಅಪ್ಪಣೆಯನ್ನು ಮಾಡಿದನು.

ಇತ್ತ ಲಲಿತಾಂಗಿಯು ವಲ್ಲಭದೇವನ ಮನೆಯನ್ನು ಬಿಟ್ಟು ತನ್ನ ಮನೆಯ ಕಡೆಗೆ ತಿರುಗಿ ನಡು ಹಾದಿಯಲ್ಲಿ ತನಗಾಗಿ ಕಾದಿದ್ದ ವಿಷಯಲಂಪಟನನ್ನೂ ಕಾಣದೆ ಬೇಗ ಬೇಗನೆ ಮನೆಯನ್ನು ಸೇರಿದಳು. ಅವಳಿಗೆ ಧರ್ಮದೇವನ ಮೇಲೆ ವಿನಾ ಮತ್ತಾವು ದರ ಮೇಲೂ ಜ್ಞಾನವಿರಲಿಲ್ಲ. ಮನೆಯನ್ನು ಸೇರಿದ ಮೇಲೆ ಅವಳು ಏನನ್ನು ಮಾಡಿ ದಳೋ ಅವಳಿಗೇ ತಿಳಿಯದು.

ಇಷ್ಟುಹೊತ್ತಿಗೆ, ಧರ್ಮದೇವನು ಮಹತ್ತಾದ ರಾಜದ್ರೋಹವಂ ಮಾಡಿದವ ನೆಂದು ವಲ್ಲಭದೇವನು ಹುಟ್ಟಿಸಿದ ವರ್ತಮಾನವು ಊರೆಲ್ಲಾ ಹರಡಿತು. ಅವನನ್ನು ಬಿಡಿಸಲು ಧನಕೋಟಿಯು ಮಾಡಿದ ಸಾಹಸಗಳೆಲ್ಲವೂ ನಿಷ್ಫಲಗಳಾದುವು. ರಾಜ ದ್ರೋಹಿಗಳಿಗೆ ಸಹಾಯಮಾಡುವವರೂ ರಾಜಾಪರಾಧಿಗಳಲ್ಲಿ ಗಣನೆಯಾಗುವರಲ್ಲದೆ ಮತ್ತಾವ ಫಲವೂ ಆಗುವುದಿಲ್ಲವೆಂದು ತಿಳಿದು ಧನಕೋಟಿಯು ನಿರಾಶೆಯಂ ಮಾಡಿ ಕೊಂಡು ಸಂಕಟಪಡುತ್ತ ತನ್ನ ಮನೆಯನ್ನು ಸೇರಿದನು.

ಇತ್ತ ಕದರ್ಥಕನು ಧರ್ಮದೇವನ ವಿಷಯದಲ್ಲಿ ಬೇರೊಂದು ಬಗೆಯಾಗಿ ಸೋಚಾಡಿದನು. ಅವನಿಗೆ ಬಂದ ವಿಪತ್ತನ್ನು ನೋಡಿ ಸಹಿಸಲಾರದೆ ತನ್ನ ಸಂಕಟ ವನ್ನು ಮರೆತು ಬಿಡಲು ಯಥೇಚ್ಛೆಯಾಗಿ ಸುರಾಪಾನವಂ ಮಾಡಿ ಮನೆಯಲ್ಲಿ ಬಿದ್ದಿ ದ್ದನು. ಅತಿಯಾದ ಪಾನದಿಂದ ಮರಳಿ ಕುಡಿಯಲು ಅವನಿಗೆ ಚೈತನ್ಯವು ತಪ್ಪಿ ದ್ದಿತೇ ವಿನಾ ಅವನ ಸಂಕಟವು ತಪ್ಪಲಿಲ್ಲ.

ನೌಕಾಧಿಪತ್ಯವು ಧರ್ಮದೇವನಿಗೆ ತಪ್ಪಿ, ತನಗಾದುದೆಂದು ದುರ್ಮತಿಯು ಸಂತೋಷವಾಗಿದ್ದನು. ಲೋಕದಲ್ಲಿ ಕೆಲವರಿಗೆ ಅವರ ಬುದ್ಧಿಯೇ ಲೇಖನಿಯಾಗಿಯೂ, ಹೃದಯವೇ ಮಸಿ ಕುಡಿಕೆಯಾಗಿಯೂ, ಇರುವುವು. ಅಂಥವರಿಗೆ ದುಷ್ಟಿನ ಗುಣಾಕಾರ ಭಾವಾಕಾರಗಳೇ ಸುಖದುಃಖಗಳು. ತಮ್ಮ ಪುರೋವೃದ್ಧಿಗಾಗಿ ಸ್ವಲ್ಪವೂ ಕರುಣೆಯಿಲ್ಲದೆ ನೂರಾರು ಜನಗಳನ್ನಾದರೂ ಬಲಿ ಕೊಡುವರು. ಇಂತಹ ಮಹಾತ್ಮರು ಲೋಕದಲ್ಲಿ ಹೇರಳವಾಗಿರುವರು. ನಮ್ಮ ದುರ್ಮತಿಯು ಈ ಮಹಾತ್ಮರಲ್ಲಿ ಒಬ್ಬನಾಗಿದ್ದನು.

ವೃದ್ಧನಾದ ಭುಜಂಗಭೂಷಣನು ಲಲಿತಾಂಗಿಯ ಸಾಹಾಯ್ಯದಿಂದ ತನ್ನ ಮನೆಯನ್ನು ಸೇರಿ, ಕೈಸೇರಿದ್ದ ಮಗನ ಗತಿ ಏನಾಯಿತೋ ತಿಳಿಯದೆ ಸಂಕಟ ಪಡುತ್ತ ಹೊರಗೆ ಹೋಗಿ ವಿಚಾರಿಸಲು ತ್ರಾಣವಿಲ್ಲದೆ ಸುಮ್ಮನೆ ಕೊರಗುತ್ತಿದ್ದನು. ಧರ್ಮದೇವನ ವಿಷಯವಾಗಿ ನಮ್ಮ ಪಾಠಕರಿಗೆ ತಿಳಿದಿದ್ದ ವರ್ತಮಾನವು ಅವನಿಗೆ ತಿಳಿದಿರಲಿಲ್ಲ.

ಇತ್ತ ವಲ್ಲಭದೇವನು ಅಮರಪುರವನ್ನು ಎಷ್ಟು ಜಾಗ್ರತೆಯಾಗಿ ಸೇರಿದರೆ ಅಷ್ಟು ಅನುಕೂಲವೆಂದು ತಿಳಿದು, ದಾರಿಯ ಉದ್ದಕ್ಕೂ ಟಪಾಲು ಕುದುರೆಯವರಿಗೆ ಬಹು ಮಾನಗಳನ್ನು ಕೊಟ್ಟು ತ್ವರೆಪಡಿಸುತ್ತ, ನನಗೆ ತಿಳಿದ ವರ್ತಮಾನವನ್ನು ಆವ ರೀತಿಯಲ್ಲಿ ಮಹಾರಾಜರಿಗೆ ತಿಳಿಸಿದರೆ ನನ್ನ ಇಷ್ಟಾರ್ಥವು ಕೈಗೂಡುವುದು ಎಂದು ಯೋಚನೆ ಮಾಡುತ್ತ ಬಂಡಿಯಲ್ಲಿ ಹೋಗುತ್ತಿದ್ದನು.

ಹೀಗೆ ಯೋಚನೆ ಮಾಡುತ್ತಿರುವ ಅವನನ್ನು ನಾವು ದಾರಿಯಲ್ಲಿ ಬಿಟ್ಟು, ಅಮರಪುರದ ಅರಮನೆಯಲ್ಲಿ ಸುಖಾಸೀನನಾಗಿರುವ ಮಹಾರಾಜ ಜಯಸಿಂಹರಾಜನ ಸಂದರ್ಶನವನ್ನು ನಮ್ಮ ಪಾಠಕರಿಗೆ ಮಾಡಿಸೋಣ. ರಾಜನು ಅಂತರ್ಗೃಹದಲ್ಲಿ ಕಾದಂಬರೀ ಗ್ರಂಥವನ್ನು ಓದುತ್ತ, ಮಧ್ಯೆ ಮಧ್ಯೆ ಪಕ್ಕದಲ್ಲಿ ಕುಳಿತಿದ್ದ ತನ್ನ ಆಪ್ತ ಸ್ನೇಹಿತನಾದ ವಿದ್ಯಾಸಾಗರನೆಂಬ ಪಂಡಿತನನ್ನು ವಿಚಾರಿಸುತ್ತ ಆ ಗ್ರಂಥದ ರಸಾನುಭವವನ್ನು ಮಾಡುತ್ತ, ಪಂಡಿತನನ್ನು ಕೇಳಿ ಕ್ಲಿಷ್ಟಪದಗಳ ಅರ್ಥಗಳನ್ನು ಆ ಪುಸ್ತಕದಲ್ಲಿಯೇ ಬರೆದುಕೊಳ್ಳುತಿದ್ದನು. ಪಂಡಿತನು ಎಂದಿನಂತೆ ಚಟುವಟಿಕೆಯಾಗಿಲ್ಲದೆ

ಏನೋ ಯೋಚಿಸುತಲಿದ್ದಾನೆಂದು ತಿಳಿದು, ರಾಜನು ಏನು ಪಂಡಿತರೇ, ಈ ದಿವಸ ಎಂದೂ ಇಲ್ಲದ ಯೋಚನೆಯನ್ನು ಮಾಡುತಲಿದೀರಿ ಎಂದನು.

ಮಹಾಸ್ವಾಮೀ! ಏಲಾ ದ್ವೀಪದ ರಾಕ್ಷಸನ ಭಯವು ನನಗೆ ಇನ್ನೂ ತಪ್ಪಿಲ್ಲ.

ನಿಮ್ಮ ಭಯಕ್ಕೆ ಕಾರಣವೇ ಇಲ್ಲ. ರಾಜ್ಯಭ್ರಷ್ಟನಾದ ಆ ಚಕ್ರವರ್ತಿಯೆಂಬ ರಾಕ್ಷಸನು ಸಕಲವಿಧದಲ್ಲಿಯೂ ಆಶಾಭಗ್ನನಾಗಿ ಅಮರರಾಜ್ಯದ ಯೋಜನೆಯನ್ನೇ ಬಿಟ್ಟು ಬೇರೆ ವ್ಯಾಸಂಗಗಳನ್ನು ಇಟ್ಟುಕೊಂಡಿರುವನೆಂದು ನಮ್ಮ ಬೇಹಿನವರಿಂದ ಪ್ರತಿ ದಿನವೂ ವರ್ತಮಾನವು ಬರುತಲಿದೆ.

ಮಹಾಸ್ವಾಮಿ! ಗೂಢಚಾರರು ತಮ್ಮ ಸಂಬಳಕ್ಕಾಗಿ ಅವುದನ್ನಾದರೂ ಬರೆಯುವರು. ಗ್ರಹಗತಿಗಳನ್ನು ನೋಡಿದರೆ ನನ್ನ ಭಯಕ್ಕೆ ಕಾರಣ ಸಂಪೂರ್ಣವಾಗಿದೆ.

ನಮ್ಮ ಬೇಹಿನವರೆಲ್ಲರೂ ಸುಶೀಲರು; ಎಂದಿಗೂ ಸುಳ್ಳು ಹೇಳಲಾರರು. ಒಂದುವೇಳೆ ಅವರೇ ಮೋಸಹೋಗಿದ್ದರೆ?

ಅವರು ಮೋಸಹೋಗುವರೆಂದು ನಾನು ನಂಬಲಾರೆ. ಇಗೋ, ನಮ್ಮ ಪೋಲೀಸು ಮಂತ್ರಿಯು ಬಂದರು. ಅವರು ಈ ದಿನದ ವರ್ತಮಾನವನ್ನು ತಂದಿರುವರು; ಅದನ್ನು ಕೇಳೋಣ.

ಪೋಲೀಸು ಮಂತ್ರಿಯು ಒಂಗು ರಾಜನಿಗೆ ವಂದನೆಯನ್ನು ಮಾಡಿ ಮರ್ಯಾದೆಯಿಂದ ದೂರದಲ್ಲಿ ನಿಂತನು. ಅವನನ್ನು ರಾಜನು ನೋಡಿ ಮಂತ್ರಿಗಳೇ, ಈ ದಿವಸದ ವರ್ತಮಾನವೇನು ಎಂದು ಕೇಳಲು, ಮಂತ್ರಿಯು ಮಹಾಸ್ವಾಮೀ! ಈ ದಿನದ ವರ್ತಮಾನವಿನ್ನೂ ಬರಲಿಲ್ಲ. ಈಗ ಬರಬಹುದು, ಆಗ ಬರಬಹುದು ಎಂದು ಪ್ರತಿ ಕ್ಷಣದಲ್ಲಿಯೂ ಅದನ್ನು ಇದಿರು ನೋಡುತ್ತಿದ್ದೇನೆ ಎಂದನು.

ನಮ್ಮ ಪಂಡಿತರಿಗೆ ಗ್ರಹಗಳು ವಕ್ರವಾಗಿರುವುದರಿಂದ ಏಲಾ ದ್ವೀಪದ ರಕ್ಕಸನ ಭಯವು ಹೆಚ್ಚಾಗಿದೆಯಂತೆ; ಅದಕ್ಕೇನೋ ನಿಮಿತ್ತವಿಲ್ಲವೆಂದು ನಾನು ಎಷ್ಟು ಹೇಳಿದರೂ ಅವರು ನಂಬುವುದಿಲ್ಲ. ನೀವಾದರೂ ಹೇಳಿ ಅವರ ಮನಸ್ಸಿನ ಭೀತಿಯನ್ನು ಬಿಡಿಸಿರಿ.

ಮಹಾಸ್ವಾಮಿ, ಅಪ್ಪಣೆ ಎಂದು ಪೋಲೀಸು ಮಂತ್ರಿಯು ಪಂಡಿತನನ್ನು ನೋಡಿ ಸ್ವಾಮೀ! ಪಂಡಿತರೇ, ನೆನ್ನೆಯವರೆಗೆ ತಿಳಿದ ವರ್ತಮಾನದಲ್ಲಿ ಆ ರಕ್ಕಸನು ರಾಜ್ಯ ಪಲ್ಲಟದ ಯೋಚನೆಯನ್ನು ಬಿಟ್ಟು ಹೊತ್ತು ಕಳೆಯಲು ಬೇರೆ ವ್ಯಾಸಂಗವನ್ನಿಟ್ಟು ಕೊಂಡಿದ್ದಾನಂತೆ. ಹೀಗಿರುವಲ್ಲಿ ತಮಗೆ ಆವ ಭಯಕ್ಕೂ ಕಾರಣವಿಲ್ಲ.

ಮಂತ್ರಿಗಳೇ, ತಮಗೆ ತಿಳಿದ ವರ್ತಮಾನವನ್ನು ತಿಳಿಸುತ್ತೀರಿ. ಆದರೂ ನನಗೇನೋ ಭೀತಿ ತಪ್ಪುವುದಿಲ್ಲ. ನಾವು ಜಾಗರೂಕರಾಗಿರುವುದು ಉತ್ತಮ ಎಂದು ಪಂಡಿತನು ಹೇಳಿದನು. ಆಗ ರಾಜನು ಮಂತ್ರಿಯನ್ನು ನೋಡಿ ಅಯ್ಯಾ, ನೀವು ಹೋಗಿ. ಈ ದಿನದ ವರ್ತಮಾನವು ಬಂದಕೂಡಲೆ ನಮಗೆ ತಿಳಿಸಿ ಎನ್ನಲು ಅಪ್ಪಣೆ ಎಂದು ಮಂತ್ರಿಯು ಹೊರಟನು.

ಆ ಕಡೆ ಮಂತ್ರಿಯು ಹೊರಡಲು, ಈ ಕಡೆ ರಾಜನು ಪುನಃ ಕಾದಂಬರಿಯನ್ನು ಓದಲು ಆರಂಭಿಸಿ ಪಂಡಿತರೇ! ಈ ವನವರ್ಣನೆಯನ್ನು ನೋಡಿ; ಕವಿಯು ಎಷ್ಟು ಚಮತ್ಕಾರವಾಗಿ ವರ್ಣಿಸಿರುವನು ಎಂದನು. ಆ ವೇಳೆಗೆ ಸರಿಯಾಗಿ ರಾಜಭಟನೊಬನು ಬಂದು ರಾಜನಿಗೆ ಒಂದು ಲೇಖನವನ್ನು ತಂದುಕೊಟ್ಟನು. ಅದನ್ನು ರಾಜನು ಓದಿನೋಡಿ ಸ್ವಲ್ಪ ಹೊತ್ತು ಯೋಚಿಸಿ ವಲ್ಲಭದೇವ! ವಲ್ಲಭದೇವ! ಎಂದು ಹೇಳಿ ಪಂಡಿತನ ಕಡೆಗೆ ತಿರುಗಿ ಪಂಡಿತರೇ! ಮಲಯಪಟ್ಟಣದಲ್ಲಿರುವ ವಲ್ಲಭದೇವನನ್ನು ನೀವು ಬಲ್ಲಿರೋ? ಎಂದು ಕೇಳಿದನು.

ನಾನು ಅವನ ಹೆಸರನ್ನು ಕೇಳಿದೇನೆ; ಅವನನ್ನು ನೋಡಿಲ್ಲ.

ಅವನಾರು ತಿಳಿಯುವುದೋ?

ಅವನು ಮಲಯಪಟ್ಟಣದ ನ್ಯಾಯಾಧಿಪತಿಯಲ್ಲವೇ?

ಅವನಾರ ಮಗ ಬಲ್ಲಿರೋ? "ಅದು ನನಗೆ ತಿಳಿಯದು."

ಈ ವಲ್ಲಭದೇವನು ನಮ್ಮ ರಕ್ಕಸನ ಮುಖ್ಯಶಿಷ್ಯನಾದ ದೀನನಾಥನ ಮಗ.

ದೀನನಾಥನ ಮಗನೇ! ದೀನನಾಥನು ರಾಜ್ಯ ಪರಿವರ್ತನದಲ್ಲಿ ಬದ್ಧಕಂಕಣನಲ್ಲವೇ? ಅವನ ಮಗನನ್ನು ತಾವು ಹೇಗೆ ಕೆಲಸದಲ್ಲಿಟ್ಟಿರುವಿರಿ?

ರಾಜನು ನಸುನಗುತ ಮನುಷ್ಯರ ಸ್ವಭಾವವು ತಮಗೆ ಇನ್ನೂ ಗೊತ್ತಿಲ್ಲ. ಮಹತ್ವಾಂಕ್ಷೆಯುಳ್ಳವರು ತಮ್ಮ ಅಭಿವೃದ್ಧಿಯ ಸಲುವಾಗಿ ತಾಯಿ ತಂದೆಗಳನ್ನಾದರೂ

ಬಲಿಗೊಡುವರು. ಅಂಥವರಲ್ಲಿ ವಲ್ಲಭದೇವನು ಒಬ್ಬನು. ಅವನನ್ನು ಕರೆಸುವೆನು, ನೀವು ನೋಡಿ ಎಂದು ಹೇಳಿ, ವಲ್ಲಭದೇವನನ್ನು ಕರೆದುಕೊಂಡು ಬಾ ಎಂದು ಭಟನಿಗೆ ಆಜ್ಞಾಪಿಸಿದನು. ವಲ್ಲಭದೇವನು ಆತುರದಿಂದ ಗಾಡಿಯಲ್ಲಿಯೇ ತನ್ನ ಉಡುಪುಗಳನ್ನು ಬದಲಾಯಿಸಿಕೊಂಡು, ಬಂದಿದ್ದ ಭಟನ ಹಿಂದೆಯೇ ಹೋಗಿ ರಾಜನ ಸಮೀಪವಂ ಸೇರಿ ನಮಸ್ಕಾರಮಾಡಿ ಮರ್ಯಾದೆಯಿಂದ ದೂರದಲ್ಲಿ ನಿಂತಿರಲು, ರಾಜನು ಅವನನ್ನು ನೋಡಿ ಏನಯ್ಯಾ! ವಲ್ಲಭದೇವ! ಈಗ ನೀನು ಕಳುಹಿದ ಕಾಗದದಲ್ಲಿ ಚಿತ್ತರಂಜಕವಾದ ಅವುದೋ ಒಂದು ಸಂಗತಿಯನ್ನು ತಿಳಿಸುವುದಾಗಿ ಬರೆದು ಇದೆ. ಅದಾವುದು?

ಮಹಾಸ್ವಾಮಿ! ಅದು ಅದ್ಭುತವಾದ ಸಂಗತಿ. ಸಾವಕಾಶವಾದರೆ ಕಾರ್ಯವು ಕಿಡುವುದೆಂದು ಒಡನೆಯೇ ಸನ್ನಿಧಾನದಲ್ಲಿ ತಿಳಿಸಬೇಕೆಂದು ಆಹಾರನಿದ್ರೆಗಳೊಂದೂ ಇಲ್ಲದೆ ಮಲಯಪಟ್ಟಣದಿಂದ ಹೊರಟು ಬಂದು ಸೇರಿದನು.

ಅದೇನು ಸಂಗತಿ? ಅದನ್ನು ನಮಗೆ ಸರಿಯಾಗಿ ತಿಳಿಸು.

ಮಹಾಸ್ವಾಮಿ, ನನಗೆ ತಿಳಿದ ಮಟ್ಟಿಗೆ ಅರಿಕೆಮಾಡುವೆನು ನಾನು ಮಹಾಸ್ವಾಮಿಯವರ ಸನ್ನಿಧಾನದಲ್ಲಿ ಓಡಾಡಿ ಬಳಕೆಯಿಲ್ಲದವನಾದುದರಿಂದ ಜಿನ್ನಹ ಮಾಡುವುದರಲ್ಲಿ ಪ್ರಮಾದಪಶಾತ್ ಮರ್ಯಾದೆಗಳಿಗೇನಾದರೂ ಕುಂದಕವುಂಟಾದರೆ ಕ್ಷಮಿಸಬೇಕು ಎಂದು ಬೇಡುತ್ತೇನೆ ಎಂದು ಹೇಳಿ, ತನ್ನ ಮಾತನ್ನು ಕೇಳಿ ರಾಜನು ಏನನ್ನು ತಿಳಿದುಕೊಂಡನೆಂಬುದನ್ನು ತಿಳಿಯಲು ಅವನ ಮುಖವನ್ನು ನೋಡಿದನು. ಅವನ ಮುಖಭಾವದಿಂದ ತಾನಾಡಿದ ಮಾತು ರಾಜನಿಗೆ ಹಿತವಾಯಿತೆಂದು ಕಂಡು ಬಂದುದರಿಂದ ವಲ್ಲಭದೇವನು ಈ ರೀತಿಯಿಂದ ಅರಿಕೆಯಂ ಮಾಡಿದನು:—

ತಮ್ಮ ಸೇವಕನಾದ ನಾನು ಎಂದಿನಂತೆ ತಮ್ಮ ಕೆಲಸವನ್ನು ಶ್ರದ್ಧೆಯಿಂದಲೂ ಜಾಗರೂಕತೆಯಿಂದಲೂ ಮಾಡುತಲಿರುವಲ್ಲಿ, ರಾಜ್ಯಪಲ್ಲಟದ ವಿಷಯದ ಬಳಸಂಚು ಬಂದು ವ್ಯಕ್ತವಾಯಿತು. ಅದನ್ನು ಬಹುಸೂಕ್ಷ್ಮದಿಂದ ವಿಚಾರಿಸಲು ಏಲಾ ದ್ವೀಪದ ರಕ್ಕಸನು ತನ್ನ ಸೈನ್ಯದೊಡನೆ ಅಮರದೇಶದಲ್ಲಿಯೋ ಅಕ್ಕಪಕ್ಕದ ದೇಶಗಳಲ್ಲಿಯೋ ಜಾಗ್ರತೆಯಾಗಿ ಬಂದು ಇಳಿಯುವಷ್ಟರೊಳಗೆ, ಅಮರ ದೇಶದ ಜನಗಳನ್ನು ಸಾಧ್ಯವಾದ ಮಟ್ಟಿಗೆ ಪ್ರೋತ್ಸಾಹಪಡಿಸಿ ತನ್ನ ಪಕ್ಷವನ್ನು ವಹಿಸುವಂತೆ ಮಾಡಬೇಕೆಂತಲೂ,

ಅಮರಪುರದಲ್ಲಿ ತನಗೆ ಆಪ್ತನಾದವನೊಬ್ಬನಿಗೆ ವರ್ತಮಾನವನ್ನು ಕಳುಹಿದ್ದನು. ಅದನ್ನು ಏಲಾದ್ವೀಪದಿಂದ ಒಬ್ಬನು ತಂದಿದ್ದನು. ತಂದವನು ಮಲಯ ಪಟ್ಟಣದ ನಾವಿಕನು. ಅವನು ಆಡಿಗಡಿಗೆ ಏಲಾ ದ್ವೀಪಕ್ಕೆ ಹೋಗುತ್ತ ಬರುತ್ತಲಿದ್ದುದರಿಂದ ಅವನ ಮೇಲೆ ನನಗೆ ಕಣ್ಣಿದ್ದಿತು. ಈಚೆಗೆ ಅವನ ಚರ್ಯೆಗಳನ್ನು ನೋಡಿ ಅನುಮಾನದಿಂದ ನಾಲ್ಕು ದಿವಸಗಳ ಹಿಂದೆ ಅವನನ್ನು ಹಿಡಿದು ವಿಚಾರಿಸಲು ಮೇಲೆ ಹೇಳಿದ ವರ್ತಮಾನವು ಗೊತ್ತಾಯಿತು. ಆದರೆ ಅಮರಪುರದಲ್ಲಿ ಆರಿಗೆ ಈ ವರ್ತಮಾನವನ್ನು ತಂದನೆಂಬುದು ತಿಳಿಯಲಿಲ್ಲ. ಆ ವಿಷಯದಲ್ಲಿ ಅವನು ಬಾಯನ್ನೇ ಬಿಡಲಿಲ್ಲ.

ಆ ನಾವಿಕನು ಈಗೆಲ್ಲಿರುವನು? ಸೆರೆಯಲ್ಲಿರುವನು.

ಆದರೆ ನೀನು ಹೇಳಿದ ವರ್ತಮಾನವು ಗುರುತರವಾದುದೇ!

ಅಹುದು ಮಹಾಸ್ವಾಮೀ! ಆದುದರಿಂದಲೇ ನಾನು ಏರ್ಪಾಡುಮಾಡಿಕೊಂಡಿದ್ದ ಮದುವೆಯೂಟವನ್ನು ಕೂಡ ಬಿಟ್ಟು ಸ್ವಕಾರ್ಯಕ್ಕಿಂತಲೂ ಸ್ವಾಮಿಕಾರ್ಯವು ದೊಡ್ಡದೆಂದು ತಿಳಿದು ಅದನ್ನು ತಮ್ಮ ಸನ್ನಿಧಾನದಲ್ಲಿ ಅರಿಕೆಮಾಡಲು ಬಂದೆನು.

ಅಹುದಹುದು. ನಿನ್ನ ಮದುವೆಯು ನಡೆಯುವುದೆಂದು ಕೇಳಿದ್ದೆನು. ಹೆಣ್ಣು ಆರೆಂಬುದನ್ನು ಮರೆತೆ.

ತಮಗೆ ಆಪ್ತರಾಗಿಯೂ ವಿಧೇಯರಾಗಿಯೂ ಇರುವ ಶಾಂತಪೀರರ ಮಗಳು.

ಅದು ಸರಿ. ಈ ಬಳಸಂಚಿನ ವರ್ತಮಾನವೇನು?

ಸ್ವಾಮೀ! ಇದು ಸಾಧಾರಣವಾದುದಲ್ಲ; ರಾಜ್ಯಪರಿವರ್ತನದ ಏರ್ಪಾಡು. ಇಷ್ಟುದಿನಕ್ಕೆ ಒಹುಶಃ ಆ ರಕ್ಕಸನು ತನ್ನ ಸೈನ್ಯದೊಡನೆ ಅಮರದೇಶದಲ್ಲಿ ಒಂದಿಳಿದಿರಬಹುದು.

ವಲ್ಲಭದೇವ! ನಮ್ಮ ಹಿತವನ್ನು ಬಯಸಿ ಮಲಯಪಟ್ಟಣದಿಂದ ಇಲ್ಲಿಗೆ ಅತ್ಯಾತುರದಿಂದ ಬಂದು ಈ ಸಂಗತಿಯನ್ನು ತಿಳಿಸಿದುದಕ್ಕಾಗಿ ನಾವು ಬಹುಳ ಕೃತಜ್ಞರಾಗಿರುವೆವು. ಈ ಕಾಲದಲ್ಲಿ ರಾಜ್ಯಪರಿವರ್ತನೆಯು ಬಹು ಕಷ್ಟಸಾಧ್ಯ. ಒಂದು ಕಡೆ ನಮ್ಮ ಸೈನಿಕರು. ಮತ್ತೊಂದು ಕಡೆ ನಮ್ಮ ಪೋಲೀಸಿನವರು ಅವಾಗಲೂ ಕಣ್ಣೇ ಕಾವಲಾಗಿರುವರು. ಅಕ್ಕ ಪಕ್ಕದ ರಾಜರು ನಮಗೆ ಹಿತರು; ಹೀಗಿರುವಲ್ಲಿ ಆ ರಾಕ್ಷಸನು ಅವಾಗ ಎಲ್ಲಿಗೆ ಬಂದರೂ ಅಕ್ಷಣವೇ ನಮಗೆ ಸುದ್ದಿಯು ಬರುವುದಲ್ಲದೆ

ಪ್ರಜೆಗಳು ಒಂದು ನಿಮಿಷದಲ್ಲಿ ಸೈನ್ಯಸಮೇತನಾದ ಅವನನ್ನು ಧ್ವಂಸಮಾಡಿ ಬಿಡುವರು.

ಈ ಮಾತನ್ನು ಕೇಳುತ್ತಲೆ ವಲ್ಲಭದೇವನ ಮುಖವು ಬಾಡಿಹೋಯಿತು. ಅಲ್ಲಿಯೇ ಇರಬೇಕೋ ಹೋಗಬೇಕೋ ಅವುದೂ ಅವನಿಗೆ ತಿಳಿಯಲಿಲ್ಲ. ಹೀಗಿರುವ ವೇಳೆಯಲ್ಲಿ ಪೋಲೀಸು ಮಂತ್ರಿಯು ಅಲ್ಲಿಗೆ ಮರಳಿ ಬಂದನು.

ಪತ್ತನೆಯ ಅಧ್ಯಾಯ

ಏಲಾದ್ವೀಪದ ರಾಕ್ಷಸನು.

ಆ ದಿನದ ಸುದ್ದಿಯನ್ನು ತಿಳಿದುಕೊಂಡು ಬರಲು ಹೋಗಿದ್ದ ಪೋಲೀಸು ಮಂತ್ರಿಯು ಪುನಃ ರಾಜನ ಅಂತರ್ಗೃಹಕ್ಕೆ ಗಡ ಗಡನೆ ನಡುಗುತ್ತ ಮೂರ್ಛಿತನಾಗಿ ನೆಲದ ಮೇಲೆ ಜೋಳುವಂತೆ ಬಂದನು. ಅವನ ಸ್ಥಿತಿಯನ್ನು ನೋಡಿದ ಕೂಡಲೆ ಮನಸ್ಸಿಗೆ ಅನುಮಾನ ಹುಟ್ಟಿ, ಕೋಪಾಕ್ರಾಂತನಾಗಿ ರಾಜನು ಏನಯ್ಯಾ ಮಂತ್ರೀ! ಹೀಗೆ ಏಕೆ ಪಿಶಾಚಿ ಹಿಡಿದಂತೆ ಆಡುತಲಿದ್ದೀಯೆ? ಈ ನಮ್ಮ ಪಂಡಿತರಿಗೆ ತೋರಿದ ಭಯವು ಸತ್ಯವಲ್ಲವೆಂದು ಈಗತಾನೇ ವಲ್ಲಭದೇವನು ನನ್ನೊಡನೆ ಹೇಳುತಲಿದ್ದನು; ನಿನ್ನ ಈ ಅವಸ್ಥೆಯನ್ನು ನೋಡಿದರೆ ಅದು ನಿಜವೆಂದೇ ತೋರುತ್ತಲಿದೆ ಎನ್ನಲು, ಅದಕ್ಕೆ ಮಂತ್ರಿಯು ಆವ ಉತ್ತರವನ್ನೂ ಕೊಡದೆ ಪಂಡಿತನ ಮುಖವನ್ನು ನೋಡಲು, ಅವನು ಪೋಲೀಸು ಮಂತ್ರಿಗೆ ಅವಮಾನವನ್ನು ಮಾಡಿ ವಿರೋಧಕಟ್ಟಿಕೊಳ್ಳುವುದಕ್ಕಿಂತಲೂ ಸಹಾಯವನ್ನು ಮಾಡಿ ಅವನ ಸ್ನೇಹವನ್ನು ನಿಲ್ಲಿಸಿಕೊಳ್ಳುವುದು ಮೇಲೆಂದು ತಿಳಿದು ಸ್ವಲ್ಪತಾಳು, ನಿನ್ನ ಇಷ್ಟ್ಪದಂತೆ ಸಹಾಯವನ್ನು ಮಾಡುವೆನು ಎಂದು ಸಂಜ್ಞೆಯನ್ನು ಮಾಡಿದನು.

ಅದನ್ನು ಕಂಡು ಸ್ವಲ್ಪ ಧೈರ್ಯಗೊಂಡು ಪೋಲೀಸು ಮಂತ್ರಿಯು ರಾಜನನ್ನು ನೋಡಿ "ಮಹಾಸ್ವಾಮೀ! ಮಹಾಸ್ವಾಮೀ!" ಎಂದು ಏನನ್ನೋ ಹೇಳಲು ಪ್ರಾರಂಭಿಸಿದನು; ಆದರೆ ಮುಂದೆ ಆವ ಮಾತೂ ಹೊರಡದೆ ಸುಮ್ಮನೆ ನಿಂತನು. ಆಗ ರಾಜನು ಏನು ಹೇಳು ಎಂದು ಕೇಳಿದನು. ಪೋಲೀಸು ಮಂತ್ರಿಯು ದೊಡ್ಡಯ

ಕಾಲುಗಳ ಮೇಲೆ ಬೀಳಲು, ರಾಜನು ಅಷ್ಟರಲ್ಲಿಯೇ ಹಿಂಜರಿದು ಹುಬ್ಬುಗಳನ್ನು ಗಂಟು ಹಾಕಿಕೊಂಡು ನೀನು ಮಾತನಾಡುವೆಯೋ ಇಲ್ಲವೋ ಹೇಳು ಎಂದು ಗರ್ಜಿಸಿದನು.

ಮಹಾಸ್ವಾಮೀ! ನನ್ನ ದೌರ್ಭಾಗ್ಯವನ್ನು ಏನೆಂತ ಹೇಳಲಿ? ತಮ್ಮ ಕರುಣಾ ಕಟಾಕ್ಷಕ್ಕೆ ನನ್ನನ್ನು ಪಾತ್ರವನ್ನಾಗಿ ಮಾಡಬೇಕೆಂದು ಬೇಡಿಕೊಳ್ಳುವೆನು.

ಏನು ಸಮಾಚಾರ ಹೇಳು. ನನ್ನ ಅಪ್ಪಣೆಯೆಂದರೆ ನೀನು ಲಕ್ಷ್ಯಮಾಡದಂತೆ ತೋರುತ್ತಲಿದೆ.

ಮಹಾಸ್ವಾಮೀ! ತಮ್ಮ ಆಜ್ಞೆಯನ್ನು ನಾನು ಅವಾಗಲೂ ಶಿರಸಾ ವಹಿಸಿರುವೆನು. ರಾಜ್ಯಭ್ರಷ್ಟನು ಈಗ ಬಂದು ವಾರದ ಹಿಂದೆ ಏಲಾದ್ವೀಪವನ್ನು ಬಿಟ್ಟು ಸೇನಾಸಮೇತನಾಗಿ ಬಂದು ಐದು ದಿವಸಗಳ ಕೆಳಗೆ ಅಮರದೇಶವನ್ನು ಸೇರಿದನು.

ರಾಜ್ಯಭ್ರಷ್ಟನು ಐದು ದಿವಸಗಳ ಹಿಂದೆ ಸೇನಾಸಮೇತನಾಗಿ ನಮ್ಮ ದೇಶಕ್ಕೆ ಬಂದ ವರ್ತಮಾನವನ್ನು ಈ ದಿನ ನೀನು ನಮಗೆ ಹೇಳುವೆಯೋ? ನಿನಗೆ ತಿಳಿದ ಸುದ್ದಿಯೇ ಸಟೆಯೋ? ಅಥವಾ ನಿನಗೆ ಹುಚ್ಚು ಹಿಡಿದಿದೆಯೋ?

ಮಹಾಸ್ವಾಮೀ! ನಾನು ತಂದ ವರ್ತಮಾನವು ಸುಳ್ಳಲ್ಲ ಎಂದು ಮಂತ್ರಿಯು ಹೇಳಲು ರಾಜನ ಕೋಪವು ಮತ್ತಷ್ಟು ಹೆಚ್ಚಿತು ಅಷ್ಟರಲ್ಲಿಯೇ ಸಮಾಧಾನವನ್ನು ಮಾಡಿಕೊಂಡು ಆ ಸೇನಾಸಮೇತನಾಗಿ ಬಂದು ಅಮರದೇಶದಲ್ಲಿ ಇಳಿದುದು ನಿಜವಾಗಿದ್ದಲ್ಲಿ ನಮ್ಮ ಅಧಿಕಾರಿಗಳೆಲ್ಲರೂ ಅವನಿಗೆ ಒತ್ತಾಸೆಮಾಡಿರಬೇಕು. ನಮ್ಮ ಉಪ್ಪನ್ನು ತಿಂದು ನಮಗೇ ದ್ರೋಹವನ್ನು ಮಾಡಿದುದಕ್ಕಾಗಿ ನಾನು ವ್ಯಥೆಪಡುವೆನು ಎಂದನು.

ಆಗ ಪಂಡಿತನು ರಾಜನನ್ನು ನೋಡಿ ಮಹಾಸ್ವಾಮೀ! ಇದು ಗ್ರಹಗತಿಗಳ ಕೆಲಸವೇ ಹೊರತು ಮನುಷ್ಯರ ಕೆಲಸವಲ್ಲ. ನಮ್ಮ ಪೋಲೀಸು ಮಂತ್ರಿಯು ಉಂಡ ಮನೆಗೆರಡನ್ನು ಬಗೆವಾತನಲ್ಲ. ಈ ವಿಷಯದಲ್ಲಿ ನಾವೆಲ್ಲರೂ ಅಂಧರಂತೆ ಇದ್ದೆವು; ನಮ್ಮ ಪೋಲೀಸು ಮಂತ್ರಿಯೂ ನಮ್ಮಂತೆಯೇ ಇದ್ದನು ಎಂದನು.

ಆಗ ವಲ್ಲಭದೇವನು ಅದರೆ — ಎಂದು ಅವುದನ್ನೋ ಹೇಳಲು ಆರಂಭಿಸಿ ಆ ಮಾತನ್ನಾಡಿದರೆ ತನ್ನ ಏಳಿಗೆಗೆ ಆರಿಂದ ಆವ ವಿಧವಾದ ಕುಂದಕವು ಬರುವುದೋ

ಎಂಮ ಭಯಪಟ್ಟು, ರಾಜನ ಕಡೆಗೆ ತಿರುಗಿ ಮಹಾಸ್ವಾಮಿಯವರ ಕೆಲಸದಲ್ಲಿ ನನಗೆ ಇರತಕ್ಕ ಶ್ರದ್ಧೆಯಿಂದ ಮಾತನಾಡಲುಪಕ್ರಮಿಸಿದೆನು. ಇದು ನಡೆವಳಿಗೆ ವಿರೋಧ ವಾದುದರಿಂದ ಕ್ಷಮಿಸಬೇಕು ಎಂದನು.

ಅಯ್ಯಾ ವಲ್ಲಭದೇವ! ಈಗ ನೀನೇ ನಮಗೆ ಆಪ್ತನು. ಹೆದರಬೇಡ, ಧೈರ್ಯ ವಾಗಿ ಮಾತನಾಡು. ಆ ರಕ್ಕಸನ ಸಮಾಚಾರವನ್ನು ಮುಂದಾಗಿ ನಮಗೆ ತಿಳಿಸಿ ದವನು ನೀನೇ ಆದುದರಿಂದ ಅದಕ್ಕೆ ಏನು ಮಾಡಬೇಕೋ ಅದನ್ನು ನೀನೇ ಹೇಳಬೇಕು.

ತನ್ನ ಅದೃಷ್ಟವು ಉಚ್ಚಸ್ಥಿತಿಗೆ ಬಂದಿತೆಂದು ವಲ್ಲಭದೇವನು ಸಂತಸದಿಂದ ಅಮರದೇಶದ ದಕ್ಷಿಣಭಾಗದಲ್ಲಿ ಇರತಕ್ಕವರೆಲ್ಲರೂ ನಮಗೆ ಅನುಕೂಲರು; ರಾಜ್ಯ ಭ್ರಷ್ಟನು ಆ ಭಾಗದಲ್ಲಿ ಇಳಿದಿದ್ದರೆ ನಮಗೆ ಅನುಕೂಲವಾಗುತಲಿದ್ದಿತು ಎಂದನು.

ಅದಕ್ಕೆ ಪೋಲೀಸು ಮಂತ್ರಿಯು ಅವನು ದಕ್ಷಿಣಭಾಗದಲ್ಲಿ ಇಳಿಯದೆ ಉತ್ತರ ದಲ್ಲಿಳಿದು ಅಲ್ಲಿಂದ ಮುಂದೆ ಬರುತಲಿದಾನೆ ಎನ್ನಲು, ಏನ ಹೇಳಿದೆ? ಮುಂದೆ ಬರುತ ಲಿದ್ದಾನೆಯೇ? ನೀವೆಲ್ಲರೂ ಏನ ಮಾಡುತಲಿದ್ದಿರಿ? ಎಂದು ಅತಿ ಕೋಪದಿಂದ ರಾಜನು ಕೇಳಿದನು. ಪೋಲೀಸು ಮಂತ್ರಿಯು ಸುಮ್ಮನಿದ್ದರೆ ಒಪ್ಪಿದಂತೆ ಎಂಬ ನಾಣ್ಣುಡಿಯಂತೆ ಸುಮ್ಮನಿದ್ದನು.

ಆಗ ರಾಜನು ವಲ್ಲಭದೇವನನ್ನು ನೋಡಿ ಉತ್ತರದ ಕಡೆಯವರು ನಮಗನು ಕೂಲರೋ ಎನ್ನಲು, ವಲ್ಲಭದೇವನು ಮಹಾಸ್ವಾಮೀ! ವಾಸ್ತವಾಂಶವು ಆವಾಗಲೂ ಹಿತವಲ್ಲ; ಆದರೂ ಅರಿಕೆ ಮಾಡುವೆನು. ಉತ್ತರಪ್ರಾಂತ್ಯದವರು ರಾಜ್ಯಭ್ರಷ್ಟನಿಗೆ ಅನುಕೂಲರು ಎಂದನು.

ವಲ್ಲಭದೇವನಿಗೆ ತಿಳಿದ ಸಮಾಚಾರಗಳು ನಮ್ಮ ಪೋಲೀಸು ಮಂತ್ರಿಗೆ ತಿಳಿ ಯದೆ ಹೋಯಿತು ಎಂದು ರಾಜನು ಪೋಲೀಸು ಮಂತ್ರಿಯನ್ನು ಕುರಿತು ರಾಜ್ಯ ಭ್ರಷ್ಟನು ಎಷ್ಟು ಸೈನ್ಯವನ್ನು ತಂದಿರುವನು ಎಂದು ಕೇಳಿದುದಕೆ, ಅವನು "ಅದು ನನಗೆ ತಿಳಿಯದು" ಎಂದನು.

ಆ ಮಾತು ರಾಜನ ಕೋಪಾಗ್ನಿಗೆ ತುಪ್ಪವಾದಂತಾಯಿತು. ತಿಳಿಯದು, ತಿಳಿ ಯದು, ಏಕೆ ತಿಳಿಯದು? ಈಗ ನೀನು ಹೇಳಿದುದೆಲ್ಲವೂ ಹೇಗೆ ತಿಳಿಯಿತು ಎಂದು

ರಾಜನು ಕೇಳಿದುದಕೆ, ಪೋಲೀಸುಮಂತ್ರಿಯು ಗಡಗಡ ನಡುಗಿ ಅವ್ವ ವಿದ್ಯುದ್ಯಂತ್ರ ದಿಂದ ಬಂದವು ಎಂದು ಹೇಳಲು, ರಾಜನು ಈ ವರ್ತಮಾನವನ್ನೂ ಆ ಮೂಲಕ ವಾಗಿಯೇ ತಿಳಿಯಲು ಏನಾಗಿದ್ದಿತು? ಎಂದು ಕಣ್ಣುಗಳಿಂದ ಬೆಂಕಿಯನ್ನು ಸುರಿಸುತ್ತ ಇನ್ನು ಮುಂದೆ ಮಾಡತಕ್ಕುದು ಸೇನಾಪತಿಯ ಕೆಲಸ; ನೀನು ಹೋಗು ಎಂದರೂ ಪೋಲೀಸು ಮಂತ್ರಿಯು ಹೋಗದೇ ಅಲ್ಲಿಯೇ ನಿಂತಿದ್ದನು.

ಆಗ ರಾಜನು ಅಯ್ಯೋ ದೇವರೇ! ಇಪ್ಪತ್ತೈದು ವರ್ಷಗಳವರೆಗೆ ರಾಜ್ಯ ಭ್ರಷ್ಟನಾಗಿ ಅಲೆದು ಕೊನೆಗೆ ಅರುಜನ ರಾಜರ ಸಹಾಯದಿಂದ ರಾಜ್ಯಾಪಹಾರಿ ಯಾಗಿದ್ದ ರಾಕ್ಷಸನನ್ನು ಸೋಲಿಸಿ ನಮ್ಮ ಹಿರಿಯರ ಸಿಂಹಾಸನದ ಮೇಲೆ ಕುಳಿತೆನು. ಅಂದಿನಿಂದ ಇದುವರೆಗೆ ಅಮರದೇಶದವರ ಸೌಖ್ಯವನ್ನೇ ವಿಚಾರಮಾಡಿ ಅವರನ್ನು ಸಂತೋಷಗೊಳಿಸುವುದರೊಳಗೆ ನಾನೇ ಪಲಾಯನಸೂಕ್ತವನ್ನು ಹೇಳುವ ಸಂದರ್ಭವು ಮರಳಿ ಬಂದೊದಗಿತು ಎಂದು ಸಂಕಟಪಟ್ಟನು.

ಆಗ ಪೋಲೀಸು ಮಂತ್ರಿಯು ಮಹಾನ್ವಯಿ! ಇದು ನಮ್ಮ ಅದೃಷ್ಟ ಎಂದು ದನ್ನು ಕೇಳಿ, ರಾಜನು ಅದೃಷ್ಟ, ಅದೃಷ್ಟ, ನಾನಿಲ್ಲದಿದ್ದರೆ ನಿಮ್ಮ ಅದೃಷ್ಟವೇನಾ ಗುತಲಿದ್ದಿತು? ಆ ರಾಕ್ಷಸನಂತೆ ಮೋಸಗಾರರಿಂದ ಕೈಬಿಡಲ್ಪಟ್ಟಿದ್ದರೆ ನನಗೇನೂ ಯೋಚನೆ ಇರುತಿರಲಿಲ್ಲ; ನನ್ನಿಂದ ದೊಡ್ಡ ಪದವಿಗಳನ್ನೂ ಮರ್ಯಾದೆಗಳನ್ನೂ ಹೊದ್ದಿ ನನಗೆ ಪರಮ ಆಪ್ತರೆಂದು ಹೇಳಿಕೊಳ್ಳುತಲಿದ್ದ ಜನಗಳು ಇಷ್ಟು ಅಜಾಗ ರೂಕರಾಗಿದ್ದುದು ದುರದೃಷ್ಟವೇ ಸರಿ. ಇವರೆಲ್ಲರೂ ಅನಾಮಧೇಯರಾಗಿಯೂ ಬಡವರಾಗಿಯೂ ಇದ್ದರು; ನನ್ನ ಕಾಲಾನಂತರ ಮರಳಿ ಅದೇ ಸ್ಥಿತಿಗೆ ಬರುವರು. ಇಂಥವರನ್ನು ಹತ್ತಿರ ಸೇರಿಸಿಕೊಂಡುದು ನನ್ನ ದುರದೃಷ್ಟವೇ ಸರಿ ಎಂದು ಪೋಲೀಸು ಮಂತ್ರಿಯನ್ನು ನೋಡಿದನು. ಅದನ್ನು ಕೇಳುತಲೆ ಅವನ ಸರ್ವಾಂಗವೂ ನಡುಗಿ ಬೆವರಿತು. ಪಂಡಿತನು ತನ್ನ ಮುಖದಲ್ಲಿ ಸುರಿಯುತಲಿರುವ ಬೆವರನ್ನು ಒರಸಿ ಕೊಂಡನು. ವಲ್ಲಭದೇವನು ಮಾತ್ರ ರಾಜನಿಗೆ ತನ್ನಲ್ಲಿ ಗೌರವವು ಹೆಚ್ಚಿತೆಂದು ಮನ ದಲ್ಲಿ ಹಿಗ್ಗುತ್ತಲಿದ್ದನು.

ರಾಜನು ಪುನಃ ತಂತಿಯ ಮೂಲಕ ನನ್ನ ದುರ್ದೆಶೆಯನ್ನು ತಿಳಿಯುವುದು ನಾಚಿಕೆಗೇಡು; ಅದಕ್ಕಿಂತ ಸಾಯುವುದೇ ಲೇಸು ಎಂದು ಗೋಳಾಡುತ್ತ ಮಂತ್ರಿ

ಯನ್ನು ನೋಡಿ ನಿನ್ನಷ್ಟು ಅಧಿಕಾರವೂ, ಆಳುಗಳೂ, ಬೇಹಿನವರೂ, ದ್ರವ್ಯ ಸಹಾಯವೂ ಇಲ್ಲದಿರುವ ನಮ್ಮ ವಲ್ಲಭದೇವನಿಗೆ ತಿಳಿದ ಸುದ್ದಿಯು ನಿನಗೆ ತಿಳಿಯಲಿಲ್ಲವಲ್ಲಾ? ನಿನ್ನ ಯೋಗ್ಯತೆಯು ಇಷ್ಟೇ ಸರಿ ಎಂದು ಈಗ ನನಗೆ ಗೊತ್ತಾಯಿತು. ಮುಂದೆ ನೋಡೋಣ ಎಂದನು. ಆಗ ಪೋಲೀಸು ಮಂತ್ರಿಯು ತನ್ನ ಮತ್ಸರದ ದೃಷ್ಟಿಯಿಂದ ವಲ್ಲಭದೇವನನ್ನು ನೋಡಲು, ರಾಜನು ತನ್ನನ್ನು ಸ್ತುತಿಸಿದ್ದುದಕ್ಕಾಗಿ ಅವನು ಸಂತೋಷಪಟ್ಟು, ಮನದಲ್ಲಿ "ಮಂತ್ರಿಯ ಪರಿಣಾಮವು ಮುಗಿಯಿತು, ಇನ್ನು ಇವನು ರಾಜನ ಮುಂದೆ ತಲೆಯೆತ್ತಲಾರನು, ಈ ವೇಳೆಯಲ್ಲಿ ಇವನಿಗೆ ನಾನು ಸಹಾಯ ಮಾಡದಿದ್ದರೆ ಇವನು ನನಗೆ ಈ ವರ್ತಮಾನವು ಹೇಗೆ ತಿಳಿಯಿತೆಂಬುದನ್ನು ವಿಚಾರಿಸಿ ಧರ್ಮದೇವನಿಂದ ಗುಟ್ಟನ್ನು ತಿಳಿದು ರಾಜನಿಗೆ ಹೇಳಬಹುದು" ಎಂಬ ಭೀತಿಯಿಂದ, ರಾಜನನ್ನು ಕುರಿತು ಮಹಾಸ್ವಾಮೀ! ಈ ಸಂಗತಿಯು ಹರಾತ್ತಾಗಿ ಅದೃಷ್ಟವಶಾತ್ ನನಗೆ ಗೊತ್ತಾದುದರಿಂದ ತಾವು ನನಗೆ ಅಷ್ಟು ಗೌರವವನ್ನು ಕೊಡಬೇಕಾದುದಿಲ್ಲ. ಇದೇ ಸಮಾಚಾರವು ಮಂತ್ರಿಯವರಿಗೆ ತಿಳಿದಿದ್ದರೆ ಅವರು ಮೊದಲೇ ತಕ್ಕ ಏರ್ಪಾಡನ್ನು ಮಾಡುತಲಿದ್ದರು. ತಮಗೆ ನನ್ನಲ್ಲಿ ಉಂಟಾದ ಪ್ರಥಮಾಭಿವ್ರಾಯವನ್ನು ಕೊನೆಯವರೆಗೂ ಒದಲಾಯಿಸದಿರಬೇಕೆಂಬ ಅಭಿವ್ರಾಯದಿಂದ ಮಹಾಸ್ವಾಮಿಯಲ್ಲಿ ಅರಿಕೆ ಮಾಡಿದೇನೆ, ಕ್ಷಮಿಸಬೇಕು, ಎಂದು ಹೇಳಿ ಮಂತ್ರಿಯನ್ನು ನೋಡಲು, ಅವನು ತನಗೆ ಮಾಡಿದ ಸಹಾಯಕ್ಕಾಗಿ ವಲ್ಲಭದೇವನನ್ನು ಕಣ್ಣಿನಿಂದಲೇ ವಂದಿಸಿದನು.

ಪ್ರಕೃತ ನಿನ್ನಿಂದ ಇನ್ನೇನು ಕೆಲಸವಿಲ್ಲ, ನೀನು ಹೋಗಿ ಬರಬಹುದೆಂದು ರಾಜನು ಮಂತ್ರಿಗೆ ಅಪ್ಪಣೆಯಂ ಮಾಡಲು, ಪಂಡಿತನು ಮಹಾಸ್ವಾಮೀ! ನಾವು ನಮ್ಮ ಸೈನ್ಯವನ್ನು ನಚ್ಚಬಹುದು, ಅವರ ರಾಜಭಕ್ತಿಯೂ, ವಿಶ್ವಾಸವೂ ನಮಗೆ ಬರುತಲಿರುವ ಪ್ರತಿಯೊಂದು ವರ್ತಮಾನದಿಂದಲೂ ಜೆನ್ನಾಗಿ ತಿಳಿದು ಬರುತ್ತಲಿವೆ ಎಂದನು.

ನಮಗೆ ಬರುತಲಿರುವ ವರ್ತಮಾನಗಳನ್ನು ನಾವು ಎಷ್ಟುಮಟ್ಟಿಗೆ ನಂಬಬಹುದೋ ಅದು ಈಗ ಗೊತ್ತಾಯಿತು. ವರ್ತಮಾನವೆನ್ನುತಲೆ ನದಿಯ ದಡದ ಮೈದಾನದಲ್ಲಿ ಆದ ಕೊಲೆಯು ನೆನಪಿಗೆ ಬಂದಿತು. ಆ ವಿಚಾರವೇನಾಯಿತು ಎಂದು ರಾಜನು ಮಂತ್ರಿಯನ್ನು ಕೇಳಿದ ಕೂಡಲೆ ವಲ್ಲಭದೇವನು ಬೆಚ್ಚಿಬಿದ್ದನು.

ಆಗ ಪೋಲೀಸು ಮಂತ್ರಿಯು ರಾಜನನ್ನು ಕುರಿತು, ಮಹಾಸ್ವಾಮೀ! ಆ ವಿಚಾರದಲ್ಲಿ ನನಗೆ ತಿಳಿದು ಬಂದಿರುವ ಹೊಸ ಸಮಾಚಾರವೊಂದನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಬೇಕೆಂದೇ ಇಲ್ಲಿಗೆ ಬಂದೆನು. ಆದರೆ ಇನ್ನೂ ಪ್ರಬಲತರವಾದ ವಿಷಯ ಗಳು ಚರ್ಚಿಸಲ್ಪಡುತ್ತಿದ್ದುದರಿಂದ ಅದನ್ನು ಹೇಳದೆ ಸುಮ್ಮನಿದ್ದೆನು ಎಂದನು.

ಆ ಕೊಲೆಯೂ, ರಾಜ್ಯಾಪಹಾರಿಯು ಪಕ್ಷವಾಗಿ ನಡೆದ ಒಳಸಂಚೂ, ಒಂದಕ್ಕೊಂದು ಹೊಂದಿಕೊಂಡಿರುವುದು. ನಮ್ಮ ಸೇನಾನಾಯಕ ವೀರಪ್ರಚಂಡನ ವಧೆಯೇ ಈ ಒಳಸಂಚಿನ ಮಾರ್ಗದರ್ಶಕವಾಗಿರುವುದು ಎಂದು ರಾಜನು ಮಂತ್ರಿಗೆ ಹೇಳಲು ವಲ್ಲಭದೇವನಿಗೆ ಗಾಬರಿಯಾಯಿತು.

ಮಹಾಸ್ವಾಮೀ! ಜನಗಳು ಹುಟ್ಟಿಸಿರುವ ಸುದ್ದಿಯಂತೆ ಸೇನಾನಾಯಕನು ಆತ್ಮಹತ್ಯವನ್ನು ಮಾಡಿಕೊಳ್ಳಲಿಲ್ಲವೆಂದು ನನಗೆ ತಿಳಿಯಬಂದಿರುತ್ತದೆ ಎಂದ ಮಂತ್ರಿಯ ಮಾತನು ಕೇಳಿ ರಾಜನು ವಲ್ಲಭದೇವನ ಕಡೆಗೆ ತಿರುಗಿ, ಅಯ್ಯಾ ವಲ್ಲಭ ದೇವ, ಈ ವಿಚಾರದಲ್ಲಿ ನಿನ್ನ ಅಭಿಪ್ರಾಯವೇನು? ಎನ್ನಲು, ವಲ್ಲಭದೇವನು ಆ ಸೇನಾನಾಯಕನು ಅವಿಳಿ ನ್ನ ರಾಜಭಕ್ತನಾಗಿದ್ದುದರಿಂದ ಅವನನ್ನು ರಾಜ್ಯಚ್ಯುತ ನಾದ ಆ ರಾಕ್ಷಸನ ಕಡೆಯವರಾರೋ ಕೊಂದಿರಬೇಕು ಎಂದು ತೋರುತ್ತದೆ ಎಂದನು.

ಬಳಿಕ ಪೋಲೀಸು ಮಂತ್ರಿಯು ಮಹಾಸ್ವಾಮೀ, ಆ ದಿನ ಸೇನಾನಾಯಕನ ಮನೆಗೆ ಹೋಗಿದ್ದ ಮನುಷ್ಯನ ಜಾಡೆಯನ್ನು ಹಿಡಿದು ಹೋಗುತಲಿದೇವೆ ಎಂದು ರಾಜನಲ್ಲಿ ಅರಿಕೆಯಂ ಮಾಡಲು ಆ ಮನುಷ್ಯನನ್ನು ಗುರುತಿಸಲು ಸಾಧ್ಯವೋ ಎಂದು ವಲ್ಲಭದೇವನು ಕೇಳಿದನು. ಅದಕ್ಕೆ ಪೋಲೀಸು ಮಂತ್ರಿಯು ಆತನಿಗೆ ಸುಮಾರು ಐವತ್ತು ಅಥವಾ ಐವತ್ತೆರಡು ವಯಸ್ಸು; ನಿನ್ನಷ್ಟೇ ಎತ್ತರ; ಮುಖವು ಕಂದು ಬಣ್ಣ, ಕಣ್ಣು ಗುಡ್ಡೆ ಕಪ್ಪು? ಹುಬ್ಬು ಕೂದಲುಗಳು ಕೆದರಿಕೊಂಡಿವೆ, ಮೀಸೆಯು ದಪ್ಪವಾಗಿರುವುದು, ಗಿರಲುಮೀಸೆಯೂ ಉಂಟು; ತೊಟ್ಟಿರುವುದು ನೀಲಿಯ ಅಂಗಿ, ಅದಕ್ಕೆ ಹಳದಿಯ ಕಶೆಗಳಿರುವುವು ಎಂದು ತಿಳಿದುಬಂದಿದೆ. ಈ ಚಹರೆಗೆ ತಕ್ಕಂಥವನೊಬ್ಬನು ನೆನ್ನೆ ಸಿಕ್ಕಿದ್ದವನು ರಾಜಬೀದಿಯ ಜನರ ಸಂದಣಿ ಯಲ್ಲಿ ಎಲ್ಲೋ ತಪ್ಪಿಸಿಕೊಂಡು ಹೋದನು ಎಂದುತ್ತರವಂ ಕೊಟ್ಟನು.

ಈ ವರ್ಣನೆಯನ್ನು ಕೇಳುತ್ತಲೇ ಮೊದಲೇ ಗಾಬರಿಬಿದ್ದಿದ್ದ ವಲ್ಲಭದೇವನಿಗೆ ಒಂದು ವಿಧವಾದ ಸಂಕಟವುಂಟಾಗಿ ಕಾಲುಗಳು ನಡುಗಿ ಉಚ್ಛಾ್ವಸನಿಶ್ವಾಸಗಳು ನಿಂತುಹೋಗಿದ್ದು, ಆ ಮುದುಕನು ತಪ್ಪಿಸಿಕೊಂಡು ಹೋದನೆಂದು ಕೇಳಿ ಮೆಲ್ಲಗೆ ಉಸಿರಾಡತೊಡಗಿತು.

ರಾಜನು ಈ ಮಾತ ಕೇಳುತಲೆ " ನನ್ನು ವೀರಪ್ರಚಂಡನು ಈಗ ಬದುಕಿದ್ದರೆ ನಮಗೆ ಎಷ್ಟೋ ಅನುಕೂಲವಾಗುತ್ತಿದ್ದಿತು. ಅವನನ್ನು ಕೊಂದವನನ್ನು ನಾವು ಅತಿ ಕ್ರೂರವಾದ ಶಿಕ್ಷೆಗೆ ಗುರಿಮಾಡುವೆವು. ಮಂತ್ರಿಯೇ! ಅವನನ್ನು ಹೇಗಾದರೂ ಹಿಡಿಯುವ ಪ್ರಯತ್ನಮಾಡಬೇಕು " ಎಂದನು.

ದೊರೆಯ ಆಪ್ಪಣೆಯನ್ನು ಕೇಳಿ ದಿಗಿಲಿನಿಂದ ವಲ್ಲಭದೇವನು ನೆಲಕ್ಕೆ ಕುಗ್ಗಿ ಬೀಳುವಂತಾದನು; ಮುಖವು ಬೆವರಿ ಪಕ್ಕದಲ್ಲಿದ್ದ ಕುರ್ಚಿಯನ್ನು ಒರಗಿಕೊಂಡು ತನ್ನ ಭಯವನ್ನು ಇತರರು ಕಾಣದೆ ಇರಬೇಕೆಂದು ಎಷ್ಟೋ ಸಾಹಸವನ್ನು ಮಾಡಿದನು. ದೈವಾಧೀನದಿಂದ ಯಾರೂ ಅವನನ್ನು ನೋಡಲಿಲ್ಲ.

ಇನ್ನು ಇಲ್ಲಿದ್ದರೆ ಸ್ವಾರಸ್ಯವಿಲ್ಲವೆಂದು ಯೋಚಿಸಿ, ವಲ್ಲಭದೇವನು " ಮಹಾಸ್ವಾಮಿ, ಅಪ್ಪಣೆಯಾದರೆ ಹೋಗಿ ಬರುತ್ತೇನೆ, " ಎಂದು ಕೇಳಿಕೊಂಡನು. " ಒಳ್ಳೆಯದು, ಹೋಗಿ ಬಾ. ಎಲ್ಲಿ ಇಳಿದು ಇದ್ದೀಯೆ? ತಂದೆಯ ಮನೆಯಲ್ಲಿ ತಾನೇ, ಎಂದು ರಾಜನು ಕೇಳಿದುದಕ್ಕೆ, " ಮಹಾಸ್ವಾಮೀ! ನಾನು ಅಷ್ಟು ದೂರ ಹೋಗಲಿಲ್ಲ; ಬಂಡಿಯಿಂದ ಇಲ್ಲಿಗೆ ನೆಟ್ಟಗೆ ಬಂದೆನು."

ನಿನ್ನ ತಂದೆಯನ್ನು ನೋಡಿದ್ದೆಯೋ?

ಇಲ್ಲ, ಮಹಾಸ್ವಾಮೀ! ಬಹುಶಃ ಅವನನ್ನು ನೋಡಲಾರೆ.

ಓಹೋ! ನಿನ್ನ ತಂದೆಯು ರಾಜ್ಯಾಪಹಾರಿಯ ಕಡೆಯವನಾದುದರಿಂದ ನಮಗೋಸುಗ ನೀನು ತಂದೆಯನ್ನು ಬಿಟ್ಟಿರುವೆ ಎಂಬುವುದನ್ನು ಮರೆತೆನು. ಇದಕ್ಕಾಗಿ ಬೇರೆ ಉಪಕಾರವನ್ನು ನಾನು ನಿನಗೆ ಮಾಡಬೇಕಾಗಿದೆ.

ಮಹಾಸ್ವಾಮೀ! ಸೇವಕನ ಮೇಲೆ ತಮ್ಮ ವಿಶ್ವಾಸವೊಂದಿದ್ದರೆ ಸಾಕು. ಆಗ ರಾಜನು ತನ್ನ ಕೊರಲಲ್ಲಿದ್ದ ಅಮೌಲ್ಯವಾದ ಒಂದು ಹಾರವನ್ನು ತೆಗೆದು ವಲ್ಲಭದೇವನ ಕೊರಳಲ್ಲಿ ಹಾಕಿ ಅಯ್ಯಾ! ನೀನು ಹೋಗಿ ಬಾ. ರಾಜ್ಯವು ನಮಗೆ ಉಳಿದರೆ

ನಿನಗೆ ಇನ್ನೂ ಹೆಚ್ಚು ಬಹುಮಾನಗಳನ್ನು ಮಾಡುವೆವು ಎಂದನು. ವಲ್ಲಭದೇವನು ಸಂತೋಷದಿಂದ ಮೈಯ್ಯುಬ್ಬಿ ಆನಂದಬಾಷ್ಪಗಳನ್ನು ಸುರಿಸುತ ರಾಜನಿಂದ ಅಪ್ಪಣೆಯನ್ನು ಪಡೆದು, ತನ್ನ ಬೀಡಾರಕ್ಕೆ ಹೊರಟನು. ಅವನ ಸಂಗಡಲೇ ಪೋಲೀಸು ಮಂತ್ರಿಯೂ ಹೊರಟನು.

ಅರಮನೆಯನ್ನು ಬಿಟ್ಟು ಹೊರಗೆ ಹೋಗುತ್ತಲೇ ಮಂತ್ರಿಯು ವಲ್ಲಭದೇವನನ್ನು ನೋಡಿ ನಿನ್ನ ಅದೃಷ್ಟವು ತಲೆಯೆತ್ತಿತು; ಇನ್ನು ಮುಂದೆ ನಿನ್ನ ಭಾಗ್ಯಕ್ಕೆ ಅವ ಕೊರತೆಯೂ ಇಲ್ಲ ಎಂದುದಕ್ಕೆ, ವಲ್ಲಭದೇವನು ಎಷ್ಟು ದಿವಸಗಳು ಹೀಗಿರುವುದು ಎಂದು ಹೇಳಿ ಬಂಡಿಯಲ್ಲಿ ಕುಳಿತು ಅರಮನೆಯ ಸಮೀಪದಲ್ಲಿರುವ ಸತ್ರವನ್ನು ಸೇರಿದನು.

ಅವನು ಅಲ್ಲಿಗೆ ಬಂದ ಹತ್ತು ನಿಮಿಷದೊಳಗಾಗಿಯೇ ಯಾರೋ ತನ್ನ ಹೆಸರನ್ನು ಹಿಡಿದು ಕೂಗಿದಂತೆ ಕೇಳಿಸಲು, ಆಳನ್ನು ಕರೆದು ನನ್ನನ್ನು ಕೂಗಿದವರು ಆರೆಂದು ವಿಚಾರಿಸು, ಎಂದನು. ಆಳು ವಿಚಾರಿಸಿ, ಸ್ವಾಮೀ! ಅವನೋ ಒಬ್ಬ ಮುದುಕನ ತಮ್ಮನ್ನು ನೋಡುವುದಕ್ಕಾಗಿ ಬಂದಿದ್ದಾನೆ. ಹೆಸರೇನೆಂದು ಎಷ್ಟು ಕೇಳಿದರೂ ಅವನು ಹೇಳಲೊಲ್ಲನು ಎಂದನು.

ಅವನು ಹೇಗಿದ್ದಾನೆ.

ಬುದ್ಧೀ! ಅವರು ಸುಮಾರು ಐವತ್ತೈರಡು ವಯಸ್ಸುಳ್ಳವರು; ತಮ್ಮಷ್ಟೇ ಉದ್ದ.

ಅವನ ಮುಖವು ಹೇಗೆ ಇದೆ? ಕಂದು ಬಣ್ಣ.

ಕಣ್ಣುಗಳೋ? ಕಪ್ಪು.

ಮೀಸೆ ಇಟ್ಟಿರುವನೋ? ಅಹುದು, ಗಿರಲುಮೀಸೆ.

ಅವನೇ ಇರಬಹುದೆಂದು ಯೋಚಿಸುತ್ತಿರುವುದರೊಳಗೆ ಆ ಮುದುಕನು ಅಲ್ಲಿಗೆ ಬಂದು ನಿಂತು, ಮಗೂ! ನಿನ್ನನ್ನು ನೋಡೋಣವೆಂದು ಬಂದೆ ಇಷ್ಟು ತಡವೇಕೆ ಎಂದನು.

ನಾನು ನ್ಯಾಯಾಧಿಪತಿಯಾಗಿರುವುದರಿಂದ ನನಗೆ ಅನೇಕಶತ್ರುಗಳುಂಟು. ಅವರಾರಾದರೂ ಬಂದಿರುವರೋ ಎಂದು, ಈ ಆಳನ್ನು ಬಂದವನ ವರ್ಣನೆಯನ್ನು ಕೇಳುತ್ತಲಿದ್ದೆ. ಅವನು ಹೇಳಿದ ಚಹರೆಯಿಂದ ತಾವೇ ಇರಬೇಕೆಂದು ನಿಶ್ಚೈಸಿದೆ.

ನಾನೇ ಎಂದು ತಿಳಿದೂ ಇಷ್ಟು ಹೊತ್ತು ನನ್ನನ್ನು ಬಾಗಿಲಿನಲ್ಲಿ ನಿಲ್ಲಿಸಿದ್ದೆಯೋ?

ಹಾಗಾದರೆ ನೀನು ಹಿರಿಯರಿಗೆ ಒಳ್ಳೆಯ ಮರ್ಯಾದೆಯನ್ನು ತೋರಿಸುತ್ತೀಯೆ ಎಂದನು.

ಮುದುಕನು ಮಾತಾಡುತಿದ್ದುದನ್ನು ಕೇಳುತ್ತಲಿದ್ದ ಅಳನ್ನು ನೋಡಿ ವಲ್ಲಭದೇವನು, ಎಲೋ! ನೀನು ಹೊರಗೆ ಇರು ಎಂದು ಅಪ್ಪಣೆಯ ಮಾಡಿ, ಅವನು ಹೊರಗೆ ಹೋಗುತ್ತಲೇ ಬಾಗಿಲನ್ನು ಮುಚ್ಚಿಕೊಂಡನು.

ಈಗ ಒಳಕ್ಕೆ ಬಂದವನೇ ವಲ್ಲಭದೇವನ ತಂದೆ ದೀನನಾಥ.

ಹನ್ನೊಂದನೆಯ ಅಧ್ಯಾಯ

ತಂದೆಯೂ ಮಗನೂ

ದೀನನಾಥನು ಅವನ ಮಗನ ಸಮೀಪದಲ್ಲಿದ್ದ ಕುರ್ಚಿಯ ಮೇಲೆ ಕುಳಿತು, ಏನೋ ಮಗೂ! ನಿನ್ನನ್ನು ನಾನು ನೋಡುವುದು ನಿನಗೆ ಇಷ್ಟವಿಲ್ಲದಂತೆ ಇದೆ ಎಂದನು. ಆಗ ವಲ್ಲಭದೇವನು ಎದ್ದು ಬಾಗಿಲನ್ನು ತೆರೆದು, ಅಳು ಬಾಗಿಲ ಸಮೀಪದಲ್ಲಿಯೇ ನಿಂತಿದ್ದುದನ್ನು ಕಂಡು, ಹೊರಗೆ ಹೋಗಿ ಕುಳಿತುಕೊಳ್ಳುವಂತೆ ಹೇಳಿ, ಹೊರಬಾಗಿಲನ್ನು ಮುಚ್ಚಿಕೊಂಡು ತಂದೆಯ ಬಳಿ ಕುಳಿತು, ಅಪ್ಪಾ! ನಿನ್ನನ್ನು ನೋಡಬೇಕೆಂದೇ ನಾನು ಇಲ್ಲಿಗೆ ಬಂದೆನು. ಹೀಗಿರುವಲ್ಲಿ ನೀನು ಹೀಗೆ ಹೇಳುವುದು ನ್ಯಾಯವೇ ಎಂದು ಕೇಳಿದನು.

ಮಲಯಪಟ್ಟಣದಲ್ಲಿ ನಿನ್ನ ಮದುವೆಯು ನಡೆಯುತಲಿದೆ ಎಂದು ಇದ್ದೆ; ಅದನ್ನು ಬಿಟ್ಟು ನೀನು ನನ್ನನ್ನು ನೋಡಲು ಬಂದೆಯೋ?

ಅಪ್ಪಾ! ಅಹುದು. ನಿನಗೆ ಒಂದು ದೊಡ್ಡ ಆಪತ್ತು ಬಂದಿದ್ದಿತು. ಅದನ್ನು ತಪ್ಪಿಸುವುದಕ್ಕಾಗಿ ನಾನು ಬಂದೆನು.

ಅದೇನು ಅಂಥ ಆಪತ್ತು?

ಚಕ್ರವರ್ತಿಯನ್ನು ಪುನಃ ಈ ರಾಜ್ಯಕ್ಕೆ ಕರೆತರಲು ಒಂದು ಸಮಾಜವು ಏರ್ಪಾಡಾಗಿ ಒಳಸಂಚು ನಡೆಯುತಲಿದೆ ಎಂದು ನಿನಗೆ ತಿಳಿದೇ ಇದೆಯಷ್ಟೆ.

ಅಹುದು, ಆ ಸಮಾಜಕ್ಕೆ ನಾನೇ ಅಧಿಪತಿ. "ಅಪ್ಪಾ! ನೀನು ಹೀಗೆ ನಿರ್ಭಯವಾಗಿ ಹೇಳುವುದನ್ನು ನೋಡಿದರೆ ನನ್ನ ಮೆಯ್ ನಡುಗುತ್ತದೆ."

ನನಗೆ ರಾಜಾಜ್ಞೆಯಾಗಿರುವುದೆಂದು ನೀನು ಬಲ್ಲೆ. ನನ್ನನ್ನು ಹಿಡಿಯಬೇಕೆಂದು ಪೋಲೀಸಿನವರು ಬೇಟೆನಾಯಿಗಳಂತೆ ಅಲ್ಲಿ ಇಲ್ಲಿ ಅಲೆದು ಎಷ್ಟೋ ಸಾಹಸಪಟ್ಟರು. ನಾನೇನು ಅವರ ಕೈಗೆ ಸಿಕ್ಕಿದೆನೇ! ನನಗೇನು ಭಯ! ಒಳ್ಳೆಯದು; ಒಳಸಂಚಿನ ಸಮಾಚಾರವೇನು ಹೇಳು.

ಆ ಸಮಾಜಕ್ಕೆ ಸೇರಿದವರಲ್ಲಿ ಒಬ್ಬನು ಸೇನಾನಾಯಕವೀರಪ್ರಚಂಡನ ಮನೆಗೆ ಹೋಗಿ ಅವನನ್ನು ಎಲ್ಲಿಗೋ ಕರೆದುಕೊಂಡು ಹೋದನಂತೆ; ಪುನಃ ವೀರಪ್ರಚಂಡನು ಮನೆಯನ್ನು ಸೇರದೆ ಹತನಾದನಂತೆ; ಅವನ ಶವವು ನದಿಯ ದಡದಲ್ಲಿ ಮಾರನೆದಿನ ಸಿಕ್ಕಿತಂತೆ.

ನಿನಗೆ ಈ ವರ್ತಮಾನವು ಹೇಗೆ ತಿಳಿಯಿತು?

ಅರಮನೆಗೆ ನಾನು ಹೋಗಿದ್ದಾಗ ರಾಜನೇ ಹೇಳಿದನು.

ಅದು ಹಾಗಿರಲಿ. ನಾನು ಹೇಳುವುದನ್ನು ಸ್ವಲ್ಪ ಕೇಳು.

ಅಪ್ಪಾ! ನೀನು ಹೇಳುವ ಸಂಗತಿಯು ನನಗೆ ಮೊದಲೇ ಗೊತ್ತಿದೆ.

ಚಕ್ರವರ್ತಿಯು ಅಮರದೇಶವನ್ನು ಸೈನ್ಯಸಮೇತನಾಗಿ ಸೇರಿದ ವರ್ತಮಾನವು ನಿನಗೆ ಗೊತ್ತಿದೆಯೋ?

ಅಪ್ಪಾ! ಸ್ವಲ್ಪ ಮೆಲ್ಲಗೆ ಮಾತನಾಡು. ನಿನಗೆ ತಿಳಿಯುವುದಕ್ಕೆ ಒಂದುವಾರ ಹಿಂದೆಯೇ ಈ ವರ್ತಮಾನವು ನನಗೆ ತಿಳಿಯಿತು. ಅದುದರಿಂದಲೇ ನಾನು ಮಲಯಪಟ್ಟಣವನ್ನು ಬಿಟ್ಟು ಬಹುವೇಗವಾಗಿ ಪ್ರಯಾಣಮಾಡಿ ಇಲ್ಲಿಗೆ ಬಂದೆನು.

ಮಗೂ ನಿನಗೇನು ಹುಚ್ಚು ಹಿಡಿಯಿತೋ? ಆರು ದಿವಸಗಳ ಹಿಂದೆ ಚಕ್ರವರ್ತಿಯು ಈ ದೇಶಕ್ಕೆ ಬಂದೇ ಇರಲಿಲ್ಲವಲ್ಲಾ?

ಅವನು ಬಂದಿರದಿದ್ದರೂ ಬರುವನೆಂಬುದು ಗೊತ್ತಿದ್ದಿತು.

ಅದು ಹೇಗೆ?

ನಿನ್ನ ಹೆಸರಿಗೆ ಏಲಾದ್ವೀಪದಿಂದ ಒಂದು ಪತ್ರ ಬಂದಿದ್ದಿತು. ಅದನ್ನು ಓದಿದುದರಿಂದ ನನಗೆ ಆ ಸಮಾಚಾರವು ತಿಳಿಯಿತು.

ನನ್ನ ಹೆಸರಿಗೆ ಕಾಗದ ಬಂದಿದ್ದಿತೋ? ಅಹುದು. ಅದು ದೈವಾಧೀನದಿಂದ

ನನ್ನ ಕೈಗೆ ಸಿಕ್ಕಿತು. ಇನ್ನಾರ ಕೈಗಾದರೂ ಸಿಕ್ಕಿದ್ದರೆ ನಿನ್ನನ್ನು ಗುಂಡಿನ ಬಾಯಿಗೆ ಕಟ್ಟಿಸಿಬಿಡುತ್ತಿದ್ದರು.

ಈ ಮಾತನ್ನು ಕೇಳಿ ದೀನನಾಥನು ನಕ್ಕು, ಮಗೂ! ನನ್ನನ್ನು ಗುಂಡಿನಿಂದ ಸುಡಿಸುವುದು ಬಾಯ ಮಾತಾಯಿತೋ? ಆ ಲೇಖನವೆಲ್ಲಿ? ನೀನು ಬುದ್ಧಿಮಂತ, ಅದು ನಿನ್ನ ಕೈ ಬಿಟ್ಟು ಹೊರಗೆ ಎಲ್ಲಿಗೂ ಹೋಗಿರಲಾರದು, ಎಂದನು.

ಅದು ಇತರರ ಕೈಗೆ ಸಿಕ್ಕಿದ್ದರೆ ನಿನ್ನ ಪರಿಣಾಮವು ಏನಾಗುವುದೋ ಎಂದು ದಿಗಿಲುಪಟ್ಟು, ಒಡನೆಯೇ ಅದನ್ನು ಸುಟ್ಟುಬಿಟ್ಟಿನು.

ನನ್ನ ಪರಿಣಾಮವು ಪೂರೈಸುವುದರೊಳಗಾಗಿ ನಿನ್ನ ಪರಿಣಾಮವೂ ಪೂರೈಸುವುದು. ಇದನ್ನು ನಾನು ಹೇಗೆ ಬಲ್ಲೆನೋ ನೀನೂ ಹಾಗೆಯೇ ಬಲ್ಲೆ; ಆದುದರಿಂದಲೇ ನೀನು ಅಷ್ಟು ಜಾಗರೂಕನಾಗಿದ್ದೆ. ನೀನು ಹೀಗಿರುವಲ್ಲಿ ನನಗೇನು ಭಯ?

ಅಪ್ಪಾ! ಆ ಸಮಾಜದ ವರ್ತಮಾನವನ್ನು ಕೇಳು.

ಆ ಸಮಾಜವೆಂದರೆ ಪೋಲೀಸಿನವರಿಗೆ ತಲೆನೋವು ಉಂಟಾಗುತ್ತದೆ.

ಅದು ನಿಜ. ಅವರು ಅದನ್ನು ಇನ್ನೂ ಹುಡುಕುವ ಪ್ರಯತ್ನದಲ್ಲಿದಾರೆಯೇ ವಿನಾ ಪತ್ತೆಮಾಡಲಿಲ್ಲ.

ಸರಿಯಾಗಿ ಹುಡುಕಿದ್ದರೆ ಸಿಕ್ಕುತಲಿದ್ದಿತು. "ಅವರು ಏಕೆ ಸರಿಯಾಗಿ ಹುಡುಕಲಿಲ್ಲ?"

ವೀರಪ್ರಚಂಡನನ್ನು ಕರೆದುಕೊಂಡು ಹೋದ ಮನುಷ್ಯನನ್ನು ಅವರು ಗುರ್ತಿಸಿ ಇದಾರೆ. ಅವನು ಒಂದು ದಿನ ಸಿಕ್ಕಿಬಿದ್ದಿದ್ದು ಹೇಗೋ ಮೆಲ್ಲಗೆ ತಪ್ಪಿಸಿಕೊಂಡು ಹೋದನಂತೆ.

ಪೋಲೀಸಿನವರು ಆವಾಗಲೂ ಹೀಗೆಯೇ ಹೇಳುವರು. ಒಂದು ವೇಳೆ ತಾವು ಹುಡುಕುತ್ತಿರುವ ಮನುಷ್ಯನು ಹಠಾತ್ತಾಗಿ ಸಿಕ್ಕಿದರೆ ನಾವು ಬಲು ಕಷ್ಟಪಟ್ಟೆವೆಂದು ತಮ್ಮ ಸಾಹಸವನ್ನು ಹೊಗಳಿಕೊಳ್ಳುವರು. ಸಿಕ್ಕದಿದ್ದರೆ ಇನ್ನೂ ಪತ್ತೆಮಾಡುವುದರಲ್ಲಿದ್ದೇವೆ ಎಂದು ಹೇಳುವರು.

ಸೇನಾಪತಿಯನ್ನು ಯಾರೋ ಕೊಂದಿದ್ದಾರೆಂದು ಪೋಲೀಸಿನವರು ಹೇಳುತ್ತಾರೆ. ಪ್ರತಿನಿತ್ಯವೂ ನದಿಯಲ್ಲಿ ಬಿದ್ದು ಎಷ್ಟೋ ಜನಗಳು ಸಾಯುವರು. ಅದರಂತೆ

ವೀರಪ್ರಚಂಡನೂ ಏಕೆ ಬಿದ್ದು ಸತ್ತಿರಬಾರದು? ನೀನು ಹೇಗೆ ಅದನ್ನು ಕೊಲೆಯು ಪಾತಕವೆಂದು ಹೇಳುವೆ?

ಆ ಸೇನಾನಾಯಕನಿಗೆ ಅವ ವಿಧವಾದ ಚಿಂತೆಯೂ ಇರಲಿಲ್ಲ.

ಅವನು ನದಿಯಲ್ಲಿ ಈಸುವುದಕ್ಕೆ ಹೋಗಿ ಸತ್ತಿರಬಹುದು.

ಈ ಚಳಿಗಾಲದಲ್ಲಿ ನದಿಗೆ ಸ್ನಾನಕ್ಕೆ ಹೋಗುವುದೇ ಕಷ್ಟ; ಅದರಲ್ಲಿ ಈ ಸಲು ಆರಾದರೂ ಹೋಗುವರೋ? ಆರೋ ಅವನನ್ನು ಕೊಂದಿರಬೇಕು. ಇದಲ್ಲದೆ ನೀರಿನಲ್ಲಿ ಬಿದ್ದು ಸತ್ತವನಿಗೆ ಮೈಯಲ್ಲಿ ಗಾಯವು ಇರುವುದುಂಟೇ?

ಅದು ಕೊಲೆಯೆಂದು ಆರು ನಿರ್ಧರಿಸಿದರು?

ರಾಜನು. ಮಗೂ! ನಾನು ಹೇಳುವುದನ್ನು ಸ್ವಲ್ಪ ಕೇಳು. ರಾಜಕಾರ್ಯಗಳಲ್ಲಿ ಕಾರ್ಯವು ಮುಖ್ಯವೇ ಹೊರತು ಜನರು ಮುಖ್ಯವಲ್ಲ; ಆದುದರಿಂದ ಆದರಲ್ಲಿ ಕೊಲೆಯೆಂಬುವುದಿಲ್ಲ. ಕಾರ್ಯಕ್ಕೆ ಅಡ್ಡಲಾಗಿ ಬರುವವರನ್ನು ತಳೆದಲ್ಲದೆ ಅದನು ಸಾಧಿಸುವುದಕ್ಕೆ ಆಗುವುದಿಲ್ಲ. ವೀರಪ್ರಚಂಡನು ನಂಬುಗೆಗೆ ಅರ್ಹನೆಂದು ಏಲಾದ್ವೀಪದಿಂದ ಲೇಖನವು ಬಂದಿದ್ದಿತು. ಅದರಂತೆ ನಮ್ಮಲ್ಲಿ ಒಬ್ಬರು ಅವನ ಮನೆಗೆ ಹೋಗಿ ನಮಗೆ ಬಂದಿದ್ದ ಲೇಖನದ ಸಮಾಚಾರವನ್ನು ಹೇಳಲು ಅವನು ಒಪ್ಪಿ ನಮ್ಮ ಸಮಾಜಕ್ಕೆ ಬಂದನು. ಅಲ್ಲಿ ಬಂದು ನಮ್ಮಿಂದ ಎಲ್ಲಾ ಸಮಾಚಾರವನ್ನು ತಿಳಿದುಕೊಂಡು ಕೊನೆಗೆ ನಾನು ಜಯಸಿಂಹರಾಜನ ಕಡೆ; ನಿಮ್ಮ ಸಮಾಜಕ್ಕೆ ಸೇರುವುದಕ್ಕೆ ಆಗುವುದಿಲ್ಲ ಎಂದು ಹೇಳಿದನು. ಈ ಮಾತನ್ನು ಕೇಳುತಲೇ ಸಾಮಾಜಿಕರೆಲ್ಲರೂ ಭ್ರಾಂತರಾಗಿ ಒಬ್ಬರ ಮುಖವನ್ನೊಬ್ಬರು ನೋಡುತ್ತಿದ್ದರು. ಆಗ ನಾನು ಎದ್ದು ಅಲ್ಲಿ ಆಗ ನಡೆದ ಸಮಾಚಾರಗಳೊಂದನ್ನೂ ಮತ್ತೊಬ್ಬರೊಡನೆ ಉಸಿರುವುದಿಲ್ಲವೆಂದು ಅವನಿಂದ ಪ್ರಮಾಣಮಾಡಿಸಿದೆನು. ಆದರೆ ಆತನು ಆಗ ಮಾಡಿದ ಪ್ರಮಾಣದ ರೀತಿಯನ್ನು ನೋಡಿ ಸಾಮಾಜಿಕರಾರಿಗೂ ಅವನ ಮಾತಿನಲ್ಲಿ ನಂಬುಗೆ ಹುಟ್ಟಲಿಲ್ಲ. ಬಳಿಕ ನಾನು ಪುನಃ ಎದ್ದು ನಿಂತು ಆತನು ನಿರಾತಂಕವಾಗಿ ಹೋಗಲಿ ಎಂದು ಹೇಳಲು, ಎಲ್ಲರೂ ಸುಮ್ಮನಿದ್ದರು. ಅವನು ಅಲ್ಲಿಂದ ಹೊರಟು ಮನೆಗೆ ಹೋಗದೆ ಬೀರೆಕಡೆಗೆ ತಪ್ಪಿಹೋದಂತಿದೆ. ಇದರಲ್ಲಿ ಕೊಲೆಯಾವುದು? ನೀನು ನ್ಯಾಯಾಧಿಪತಿಯಾಗಿ ಪ್ರತಿದಿನವೂ ಎಷ್ಟೋ ಜನಗಳನ್ನು ಗಲ್ಲಿಗೆ ಹಾಕಿಸುತ್ತೀಯೆ. ಅದು ಕೊಲೆಯೋ? ನಿಮಗೆ

ಅಧಿಕಾರವಿರುವುದರಿಂದ ನೀವು ಮಾಡುವುದೆಲ್ಲವೂ ನ್ಯಾಯ. ನಾಳೆ ನಮಗೆ ಅಧಿಕಾರವು ಬಂದರೆ ನಾವು ಮಾಡುವುದೆಲ್ಲವೂ ಆಗ ನ್ಯಾಯವಾಗುವುದು.

ಅಪ್ಪಾ! ನೀನು ಹೇಳುವುದೇನೋ ಸರಿಯೇ; ಆದರೆ ಈಗಿನ ಅಧಿಕಾರ ನಮ್ಮ ರಾಜನದು. ವೀರಪ್ರಚಂಡನನ್ನು ಕೊಂದ ಮನುಷ್ಯನ ಚಹರೆಪಟ್ಟಿಯು ಪೋಲೀಸಿನವರ ಹತ್ತಿರ ಇದೆ. ಹೇಗಾದರೂ ಮಾಡಿ ಆ ಘಾತುಕನನ್ನು ಹಿಡಿದು ಶಿಕ್ಷಿಸಬೇಕೆಂದು ರಾಜನು ಪೋಲೀಸು ಅಧಿಕಾರಿಗೆ ಆಜ್ಞೆ ಮಾಡಿರುವನು.

ಚಹರೆಪಟ್ಟಿ ಯಾವುದು?

ಮುಖರಾಗವು ಸ್ವಲ್ಪ ಕಂದು ಬಣ್ಣ; ಕಣ್ಣು ಕಪ್ಪು; ಹುಬ್ಬುಗಳ ಕೂದಲು ಕೆದರಿಕೊಂಡಿದೆ; ಗಿರಲು ಮೀಸೆ, ಹಳದಿ ಕಲೆಗಳು ಹಾಕಿದ ನೀಲಿಯ ಅಂಗಿ, ಸುಮಾರು ಐವತ್ತು ಐವತ್ತೆರಡು ವಯಸ್ಸು, ನಿನ್ನಷ್ಟೇ ಉದ್ದ.

ಹಾಗಾದರೆ ಆ ಮನುಷ್ಯನನ್ನು ಅವರು ಏತಕ್ಕೆ ಹಿಡಿಯಲಿಲ್ಲ?

ಅವನು ರಾಜಬೀದಿಯ ಗುಂಪಿನಲ್ಲಿ ತಪ್ಪಿಸಿಕೊಂಡು ಹೋದನಂತೆ.

ದೀನನಾಥನು ಸ್ವಲ್ಪ ನಕ್ಕು, ತಟ್ಟನೆ ಎದ್ದು ವಲ್ಲಭದೇವನು ಉಡುಪಿಟ್ಟಿದ್ದ ಪೆಟ್ಟಿಗೆಯ ಬಳಿಗೆ ಹೋಗಿ ತನ್ನ ಬಟ್ಟೆಗಳನ್ನೆಲ್ಲಾ ಕಳೆದು ಆ ಪೆಟ್ಟಿಗೆಯಲ್ಲಿದ್ದ ಉಡುಪುಗಳಲ್ಲಿ ತನಗೆ ಬೇಕಾದುವುಗಳನ್ನು ತೆಗೆದು ತೊಟ್ಟು, ತನ್ನ ಗಿರಲುಮೀಸೆಯನ್ನು ಬೋಳಿಸಿಕೊಂಡು ಕನ್ನಡಿಯನ್ನು ನೋಡಿಕೊಂಡು ತೃಪ್ತನಾಗಿ, ಮಗನನ್ನು ನೋಡಿ ಮಗೂ, ಈಗ ನಿನ್ನ ಪೋಲೀಸಿನವರು ಆ ಮನುಷ್ಯನ ಗುರುತು ಹಿಡಿಯಬಲ್ಲರೋ? ನಾನು ಇಲ್ಲಿ ಬಿಟ್ಟಿರುವ ಬಟ್ಟೆಗಳನ್ನು ಎಲ್ಲಿಗಾದರೂ ಜಾಗ್ರತೆಯಾಗಿ ಸಾಗಿಸು. ನಮ್ಮ ಚಕ್ರವರ್ತಿಯು ಇನ್ನು ಸ್ವಲ್ಪ ದಿವಸಗಳಲ್ಲಿಯೇ ದೊರೆತನಕ್ಕೆ ಬರುವನು. ಆಗ ನಾನು ನಿನಗೆ ಪ್ರತ್ಯುಪಕಾರವನ್ನು ಮಾಡುವೆನು. ನಾನು ಹೋಗಿ ಬರುವೆನು ಎಂದು ಹೇಳಿ ಹೊರಟು ಹೋದನು.

ದೀನನಾಥನು ಬೀದಿಯಲ್ಲಿ ಹೋಗುತ್ತಲಿರುವುದನ್ನು ಕಿಟಕಿಯಿಂದ ನೋಡುತ್ತಲಿದ್ದ ವಲ್ಲಭದೇವನ ಮನಸ್ಸು ಕಳವಳಗೊಂಡು, ಎದೆಯು ಡಬಡಬನೆ ಹಾರಲಾರಂಭಿಸಿತು. ವೃದ್ಧನು ಆವ ತೊಂದರೆಯೂ ಇಲ್ಲದೆ ಬೇರೆ ಬೀದಿಗೆ ತಿರುಗಿದ ಕೂಡಲೆ ಮಗನ ಮನಸ್ಸು ಸಮಾಧಾನ ಸ್ಥಿತಿಗೆ ಬಂದು ಅವನು ನಿಟ್ಟುಸಿರನ್ನು ಬಿಟ್ಟು, ಒಡನೆ

ತಂದೆಯು ಉಟ್ಟು ಕಳೆದಿದ್ದ ಉಡುವುಗಳನ್ನೆಲ್ಲಾ ತನ್ನ ಪೆಟ್ಟಿಗೆಯಲ್ಲಿಟ್ಟು ಬೇಗವನ್ನು ಹಾಕಿ ಮಲಯಪಟ್ಟಣಕ್ಕೆ ಪ್ರಯಾಣವನ್ನು ಮಾಡಿದನು.

ದೀನನಾಥನು ದೀರ್ಘದರ್ಶಿ ಎಂದು ಹೇಳಲು ಅವ ಸಂದೇಹವೂ ಇಲ್ಲ. ಅವನು ಹೇಳಿದಂತೆಯೇ ಚಕ್ರವರ್ತಿಯು ನಿಮಿಷಮಾತ್ರದಲ್ಲಿ ರಾಜ್ಯವನ್ನು ಸ್ವಾಧೀನ ಮಾಡಿಕೊಂಡನು. ಅವನು ಸೈನ್ಯಸಮೇತನಾಗಿ ಅಮರಪುರವನ್ನು ಸೇರುವುದರೊಳಗಾಗಿಯೇ ಜಯಸಿಂಹನು ರಾಜ್ಯವನ್ನು ಬಿಟ್ಟು ಓಡಿಹೋದನು. ಪ್ರಜೆಗಳಲ್ಲಿ ಅನೇಕರು ಚಕ್ರವರ್ತಿಯ ಆಗಮನವನ್ನೇ ನಿರೀಕ್ಷಿಸುತಲಿದ್ದರಾದಕಾರಣ ರಾಜ್ಯವು ಬಹು ಸುಲಭವಾಗಿ ಅವನ ವಶವಾಯಿತು. ಇಷ್ಟು ಸುಲಭವಾಗಿ ರಾಜ್ಯವು ಕೈಸೇರಿದುದನ್ನು ನಾವು ಹಿಂದೆ ಯಾವಾಗಲೂ ನೋಡಿದಲಿಲ್ಲ; ಮುಂದೆ ಯಾವಾಗಲೂ ವ್ಯಾಯಶಃ ನೋಡಲಾರೆವು.

ವಲ್ಲಭದೇವನಿಗೆ ಅಮರಪುರದ ಪ್ರಯಾಣದಿಂದ ರಾಜನು ಕೊಟ್ಟ ಹಾರವೊಂದೇ ಲಾಭ; ಆದರೆ ಅವನಿಗೆ ಅದನ್ನು ಅನುಭವಿಸುವ ವ್ಯಾಪ್ತಿಯಿರಲಿಲ್ಲ. ಅವನು ಕಾಲವನ್ನು ಬಲ್ಲವನಾದುದರಿಂದ ಅದನ್ನು ಒಳಗೆ ಮುಚ್ಚಿಟ್ಟಿದ್ದನು.

ಚಕ್ರವರ್ತಿಯು ವಲ್ಲಭದೇವನನ್ನು ತೆಗೆದು ಜಿಡಲು ಉದ್ಯುಕ್ತನಾಗಿದ್ದರೂ ದೀನನಾಥನ ದಾಕ್ಷಿಣ್ಯಕ್ಕಾಗಿ ಹಾಗೆ ಮಾಡದೆ ಅವನನ್ನು ಮುಖ್ಯನ್ಯಾಯಾಧಿಪತಿಯನ್ನಾಗಿ ಮಾಡಿ ಮಲಯಪಟ್ಟಣದಲ್ಲೇ ಇಟ್ಟಿದ್ದನು.

ಈ ಸಂದರ್ಭದಲ್ಲಿ ತಾನು ರೇಣುಕೆಯನ್ನು ಮದುವೆ ಮಾಡಿಕೊಂಡರೆ ಚಕ್ರವರ್ತಿಗೆ ಅಸಮಾಧಾನವುಂಟಾಗಿ ಅದರಿಂದ ತನ್ನ ಅಭಿವೃದ್ಧಿಗೆ ಕುಂದಕವಾಗುವುದು; ಜಯಸಿಂಹನು ಪುನಃ ರಾಜ್ಯಕ್ಕೆ ಬರಬಹುದು, ಆಗ ಈ ಮದುವೆಯು ಸಮ; ಇಲ್ಲವಾದರೆ ಚಕ್ರವರ್ತಿಗೆ ಹಿತವಾದವರ ಸಂಬಂಧವನ್ನು ಮಾಡಿಕೊಳ್ಳುವುದು ಉಚಿತವೆಂದು ಯೋಚಿಸಿ, ವಲ್ಲಭದೇವನು ಗೊತ್ತಾಗಿದ್ದ ತನ್ನ ಮದುವೆಯನ್ನು ಆಗ ನಿಲ್ಲಿಸಿಬಿಟ್ಟನ.

ಹನ್ನೆರಡನೆಯ ಅಧ್ಯಾಯ.

ನೂರುದಿನದ ಬಾಳು.

ಧನಕೋಟಿಯು ವಿವೇಕಶಾಲಿಯಾಗಿದ್ದರೂ ಸ್ವಲ್ಪ ಪುಕ್ಕಲನು ಚಕ್ರವರ್ತಿಯು ರಾಜ್ಯಕ್ಕೆ ಬಂದಬಳಿಕ ಧೈರ್ಯವು ಹುಟ್ಟಿ ಧರ್ಮದೇವನನ್ನು ಬಿಡಿಸುವ ಪ್ರಯತ್ನಮಾಡಿ, ಒಂದು ದಿನ ವಲ್ಲಭದೇವನ ಮನೆಗೆ ಹೋದನು. ಮತ್ತಾರಾದರೂ ಆಗಿದ್ದರೆ ಧನಕೋಟಿಯನ್ನು ಕಾಯಿಸದೆ ನೋಡಿ ಮಾತನಾಡುತಲಿದ್ದರು. ವಲ್ಲಭದೇವನು ಶಕ್ತನೂ ಉಪಾಯಗಾರನೂ ಆಗಿದ್ದುದರಿಂದ ಜನರು ತನ್ನೆಡೆಗೆ ಬಂದ ಒಡನೆ ಮಾತನಾಡಿಸುವುದು ತರವಲ್ಲವೆಂದು ಅಭಿಪ್ರಾಯಪಟ್ಟು, ಅವುದೋ ಒಂದು ವೃತ್ತಾಂತಪತ್ರಿಕೆಯನ್ನು ಓದುತ್ತ ಧನಕೋಟಿಯನ್ನು ಅರ್ಧಘಂಟೆಯು ವರೆಗೂ ನಿಲ್ಲಿಸಿದ್ದು, ಅನಂತರ ಹೊರಗೆ ಬಂದು ಅವನಿಗೆ ದರ್ಶನಲಾಭವನ್ನು ಕೊಟ್ಟನು.

ಜಯಸಿಂಹರಾಜನು ರಾಜ್ಯವನ್ನು ಬಿಟ್ಟುಹೋಗಿ ಚಕ್ರವರ್ತಿಯು ಬಂದಿದ್ದುದರಿಂದ ವಲ್ಲಭದೇವನು ಬಿನ್ನನಾಗಿರಬಹುದೆಂದು ಧನಕೋಟಿಯು ಯೋಚಿಸಿದ್ದನು. ವಲ್ಲಭದೇವನಿಗೆ ಮನಸ್ಸಿನಲ್ಲಿ ಬೆನ್ನತೆಯಿದ್ದರೂ ಹೊರಪಡಿಸದೆ ಎಂದಿನಂತೆಯೇ ಶಾಂತನಾಗಿಯೂ, ಸ್ಥಿರನಾಗಿಯೂ, ಕಪಟಮರ್ಯಾದೆಯನ್ನು ತೋರಿಸುವನಾಗಿಯೂ ಇದ್ದನು. "ನಾನು ಈಗ ವಲ್ಲಭದೇವನನ್ನು ನೋಡಿ ನಿನ್ನಿಂದ ಈ ಕೆಲಸವು ಆಗಬೇಕು" ಎಂದು ತಿಳಿಸಿದ ಕೂಡಲೆ, ಅವನು ಅದನ್ನು ಮಾಡಿಕೊಡದೆ ಇರಲಾರನೆಂದು ಧನಕೋಟಿಯು ನಂಬಿದ್ದನು. ಅಯ್ಯೋ ಪಾಪ! ವಲ್ಲಭದೇವನ ಗುಣವನ್ನು ಅವನೇನು ಬಲ್ಲನು?

ವಲ್ಲಭದೇವನು ಧನಕೋಟಿಯನ್ನು ನೋಡಿ, ಓಹೋ! ತಾವು ಧನಕೋಟಿ ಎಂಬುವರಲ್ಲವೇ ಎಂದನು. ಅಹುದು ಸ್ವಾಮೀ!

ಏನುಕಾರಣ ಇಷ್ಟುದೂರ ವಿಜಯಮಾಡಿಸೋಣವಾಯಿತು?

ಸರ್ವಜ್ಞರಾದ ತಮಗೆ ಆ ಕಾರಣವು ತಿಳಿದೇ ಇದೆ.

ನಾನು ಅದನ್ನು ಅರಿಯೆನು. ನನ್ನಿಂದ ಅವುದಾದರೂ ಕೆಲಸವಾಗಬೇಕಾಗಿದ್ದರೆ ಅದನ್ನು ಅಗತ್ಯವಾಗಿ ಸಂತೋಷದಿಂದ ಮಾಡಿಕೊಡುವೆನು.

ಅದಕ್ಕಾಗಿಯೇ ಈಗ ನಾನು ತಮ್ಮ ಬಳಿಗೆ ಬಂದಿರುವೆನು.

ಅದು ಏನು ಕೆಲಸ?

ಚಕ್ರವರ್ತಿಯು ನಮ್ಮ ರಾಜ್ಯಕ್ಕೆ ಬರುವುದಕ್ಕೆ ಸ್ವಲ್ಪ ದಿವಸಗಳ ಹಿಂದೆ, ನಮ್ಮ ನೌಕಾಧಿಪನ ಸಹಾಯಕನಾಗಿದ್ದ ಒಬ್ಬ ಯುವಕನ ಸಲುವಾಗಿ, ನಾನು ತಮ್ಮಲ್ಲಿ ಬಂದು ಮಾತನಾಡಿದುದು ತಮಗೆ ಜ್ಞಾಪಕವಿರಬಹುದು. ಅವನು ಮಾಡಿದ ಕಾರ್ಯವು ಆಗ ರಾಜದ್ರೋಹವೆನಿಸಿಕೊಂಡಿದ್ದಿತು; ಈಗ ಅದೇ ರಾಜಭಕ್ತಿಯೆನಿಸಿಕೊಳ್ಳುವುದು. ಆಗ ಜಯಸಿಂಹನು ದೊರೆಯಾಗಿದ್ದುದರಿಂದ ತಾವು ಆ ಯುವಕನಿಗೆ ಅವ ವಿಧವಾದ ಸಾಹಾಯ್ಯವನ್ನೂ ಮಾಡಲು ಸಾಧ್ಯವಾಗಲಿಲ್ಲ. ಈಗ ಚಕ್ರವರ್ತಿಯ ರಾಜ್ಯವಾಗಿರುವುದರಿಂದ ಅವನನ್ನು ಸೆರೆಯಿಂದ ಬಿಡಿಸಿ ಕಾಪಿಡಬೇಕು. ಈ ಸಂತತಿಯನ್ನು ತಮಗೆ ಜ್ಞಾಪಿಸಬೇಕೆಂದು ಬಂದೆನು.

ಧನಕೋಟಿಯು ಮಾತುಗಳನ್ನು ಕೇಳಿ ವಲ್ಲಭದೇವನು ಕಳೆಗುಂದಿ ಕಳವಳಗೊಂಡು, ಮೆಲ್ಲಗೆ ಆ ಯುವಕನ ಹೆಸರೇನು ಎಂದನು. ಅವನ ಹೆಸರು ಧರ್ಮದೇವನೆಂದು ಧನಕೋಟಿಯು ಹೇಳಿದ ಕೂಡಲೆ, ವಲ್ಲಭದೇವನಿಗೆ ಗುಂಡಿನಬಾಯಿಗೆ ಕಟ್ಟಿದಂತಾಯಿತು. ಆದರೂ, ಸಮಾಧಾನವನ್ನು ತಾಳಿ ಧರ್ಮದೇವ, ಧರ್ಮದೇವ, ಎಂದು ಎರಡುಸಾರಿ ಹೇಳಿ ಮೇಜಿನ ಮೇಲೆ ತನ್ನ ಇದಿರಿಗೆ ಇದ್ದ ಒಂದು ದೊಡ್ಡ ಸಂಪುಟವನ್ನು ಬಿಚ್ಚಿ, ಇದರಲ್ಲಿ ಅವನ ಹೆಸರು ಇದೆಯೋ ಎಂದನು.

ಇರಬೇಕು. ಹೋ! ತಾಳು ಸಿಕ್ಕಿತು. ನಾವಿಕಯುವಕನು—ಮದುವೆಯೂಟದಲ್ಲಿದ್ದನು. ಅವನೇ ಅಲ್ಲವೇ?

ಅವನೇ ಮಹಾಸ್ವಾಮೀ!

ಅವನು ಪ್ರಬಲವಾದ ರಾಜದ್ರೋಹಮಾಡಿದ್ದುದರಿಂದ ನಾನು ಮಾಡಬೇಕಾದ ವಿಚಾರಣೆಯನ್ನು ಮಾಡಿ ಮೇಲಕ್ಕೆ ಬರೆದೆನು. ತರುವಾಯ ಅವನ ಗತಿಯೇನಾಯಿತೋ ನನಗೆ ತಿಳಿಯದು.

ತಮಗೆ ತಿಳಿಯದೇ ಇದೆಯೆಂಬುದು ಆಶ್ಚರ್ಯವೇ ಸರಿ. ಈಗ ಅವನೆಲ್ಲಿರುವನು?

ನಾನೇನ ಬಲ್ಲೆ; ಈ ರಾಜ್ಯದಲ್ಲಿರುವ ಅನೇಕ ಕಾರಾಗೃಹಗಳೊಂದರಲ್ಲಿ ಇದ್ದರೂ ಇರಬಹುದು. ಅವ್ವದಾದರೂ ಒಂದು ದಿನ ಅವನು ಪಡುಗಡೆಯಾಗಿ ನಿಮ್ಮ ಹಡಗಿನ ಆಧಿಪತ್ಯವನ್ನು ವಹಿಸಲು ಬರುವನು; ಭಯಪಡಲೇಕೆ?

ಅವನು ಆವಾಗ ಬಂದರೂ ನೌಕಾಧಿಪತ್ಯವು ಸಿದ್ಧವಾಗಿರುವುದು. ಚಕ್ರ

ವರ್ತಿಯ ಕಾರ್ಯಕ್ಕಾಗಿ ಕಾರಾಗೃಹವನ್ನು ಸೇರಿದವರನ್ನು ಬಿಡಿಸುವುದು ಅವನ ಅಧಿಕಾರವಲ್ಲವೇ ?

ಅಹುದು ; ಆದರೆ ಆವ ಅಧಿಕಾರಿಯು ಅವನನ್ನು ಕಾರಾಗೃಹಕ್ಕೆ ಕಳುಹಿಸಿದನೋ ಆ ಅಧಿಕಾರಿಯೇ ಅವನನ್ನು ಬಿಡುಗಡೆ ಮಾಡಬೇಕು. ಚಕ್ರವರ್ತಿಯು ಈಗತಾನೆ ಬಂದಿರುವನಾದಕಾರಣ ತನಗಾಗಿ ಸೆರೆಮನೆಯನ್ನು ಸೇರಿರುವವರನ್ನೆಲ್ಲಾ ಬಿಡುಗಡೆ ಮಾಡಿಸುವುದಕ್ಕೆ ಸ್ವಲ್ಪ ಸಾವಕಾಶವಾಗಬಹುದು. ಧರ್ಮದೇವನನ್ನು ಜಾಗ್ರತೆಯಾಗಿ ಬಿಡಿಸಲು ಉಪಾಯವಿಲ್ಲವೋ ?

ಉಂಟು ; ನಾನು ಹೇಳುವಂತೆ ಮಾಡಿದರೆ ಆಗುವುದು.

ಅಪ್ಪಣೆಯಾಗಲಿ.

ಪ್ರಧಾನನಿಗೆ ಒಂದು ಬಿನ್ನಹವನ್ನು ಬರೆಯಿರಿ.

ಪ್ರಧಾನನಿಗೆ ಪ್ರತಿದಿನವೂ ನೂರಾರು ಮನವಿಗಳು ಬರುವುವು. ಅವುಗಳಲ್ಲಿ ಒಂದನ್ನಾದರೂ ಕೂಡ ಅವನು ಓದುವನೋ ಇಲ್ಲವೋ ?

ಸಾಧಾರಣವಾದ ಬಿನ್ನಹಗಳನ್ನು ಅವನು ಓದದೆ ಬಿಸುಡಬಹುದು. ನನ್ನ ಮೂಲಕ ಮನವಿಯನ್ನು ಕಳುಹಿಸಿದರೆ ಅದನ್ನು ಅವನು ಅಗತ್ಯನೋಡುವನು.

ತಾವು ನನಗೋಸ್ಕರ ಅಷ್ಟುಮಟ್ಟಿಗೆ ಶ್ರಮೆ ತೆಗೆದುಕೊಳ್ಳುವಿರೋ ?

ಅಗತ್ಯವಾಗಿ ನಿಮ್ಮ ಮನವಿಯನ್ನು ಪ್ರಧಾನನಿಗೆ ಕಳುಹಿಸುವೆನು. ಧರ್ಮದೇವನು ಆಗ ತಪ್ಪಿತಸ್ಥನಾಗಿದ್ದನು ; ಈಗ ಅವನು ನಿರಪರಾಧಿ ; ಆಗ ಅವನನ್ನು ಶಿಕ್ಷಿಸುವುದು ಹೇಗೆ ನನ್ನ ಕರ್ತವ್ಯವಾಗಿದ್ದಿತೋ ಈಗ ಅವನನ್ನು ಬಿಡಿಸುವುದೂ ನನ್ನ ಕರ್ತವ್ಯವಾಗಿದೆ.

ಧನಕೋಟಿಯು ಗುಣವಂತನಾಗಿದ್ದರೂ ಅಷ್ಟು ಚುರುಕುಬುದ್ಧಿಯಿಲ್ಲದವನಾಗಿದ್ದುದರಿಂದ, ವಲ್ಲಭದೇವನು ನಯವಾದ ಮಾತುಗಳಿಂದ ತನ್ನನ್ನು ಮೋಸಗೊಳಿಸುವನೆಂದು ತಿಳಿಯಲಾರದೆ ಹೋದನು. ತಾನು ಹೀಗೆ ಧನಕೋಟಿಯೊಡನೆ ಹೇಳದಿದ್ದಲ್ಲಿ ಅವನೆಲ್ಲಿ ಮೇಲಿನ ಅಧಿಕಾರಿಗಳಿಗೆ ಬರೆದು ತಾನು ಧರ್ಮದೇವನ ವಿಷಯದಲ್ಲಿ ಮಾಡಿದ ಅನ್ಯಾಯವು ತಿಳಿದು ರಚ್ಚೆಯಾಗುವುದೋ ಎಂಬ ಭಯದಿಂದ, ವಲ್ಲಭದೇವನು ಲೋಕಾಭಿರಾಮವಾದ ಮಾತುಗಳನ್ನು ಆಡಿದನು. ಈ ಕೃತ್ರಿಮವೊಂದನ್ನೂ ಕಾಣದ

ಧನಕೋಟಿಯು ವಲ್ಲಭದೇವನ ಹೇಳಿಕೆಯಂತೆ ಧರ್ಮದೇವನು ಚಕ್ರವರ್ತಿಯ ಆಗ ಮನಕ್ಕೆ ಮಾಡಿದ ಸಾಹಾಯ್ಯಗಳನ್ನೆಲ್ಲಾ ವಿಸ್ತರಿಸಿ ಅವುಗಳನ್ನು ಹೆಚ್ಚಾಗಿ ಶ್ಲಾಘಿಸಿ, ಒಂದು ವಿಜ್ಞಾಪನಾಪತ್ರವೊಂದನ್ನು ಒರೆದನು. ಅದನ್ನು ವಲ್ಲಭದೇವನು ಓದಿನೋಡಿ ಇದು ಸಾಕು, ಎಂದನು.

ಇದನ್ನು ಈ ದಿವಸವೇ ಪ್ರಧಾನನಿಗೆ ಕಳುಹಿಸುವಿರೋ ?

ಅಡ್ಡಿಯಿಲ್ಲದೆ ಕಳುಹಿಸುವೆನು. ಇಗೋ ನೀವು ಬರೆದಿರುವುದನ್ನು ನಾನೂ ದೃಢೀಕರಿಸಿ ಒಲೆಯುವೆನೆಂದು, ಮೇಲೆ ಹೇಳಿರುವುವೆಲ್ಲವೂ ಬಹಳ ಸರಿಯಾಗಿವೆ ಎಂದು ಆ ಬಿನ್ನಹದ ಕೆಳಗೆ ಬರೆದನು.

ನಾನು ಇದಕ್ಕೆ ಇನ್ನೇನಾದರೂ ಮಾಡಬೇಕೋ ?

ನೀವು ಮಾಡಬೇಕಾದುದು ಅವುದೂ ಇಲ್ಲ. ತಾವು ಹೋಗಿಬರಬಹುದು. ಮುಂದಿನ ಕೆಲಸವನ್ನು ನಾನು ನೋಡಿಕೊಳ್ಳುವೆನು.

ವಲ್ಲಭದೇವನು ತನ್ನಿಂದಾಗುವ ಸಾಹಾಯ್ಯವನ್ನೆಲ್ಲಾ ಮಾಡಿಕೊಟ್ಟನೆಂದೂ, ಇನ್ನು ಧರ್ಮದೇವನಿಗೆ ಜಾಗ್ರತೆಯಾಗಿ ಬಿಡುಗಡೆಯಾಗುವುದೆಂದೂ ನಂಬಿ, ಧನಕೋಟಿಯು ಸಂತೋಷದಿಂದ ಭುಜಂಗಭೂಷಣನ ಮನೆಗೆ ಹೋಗಿ ಅವನಿಗೆ ಈ ಸಮಾಚಾರವನ್ನು ತಿಳಿಸಿದನು.

ಚಕ್ರವರ್ತಿಯು ರಾಜ್ಯದಲ್ಲಿ ಬಹಳ ದಿವಸಗಳು ಇರಲಾರನು; ಪುನಃ ಜಯಸಿಂಹನೇ ಬರಬಹುದು, ಎಂದು ಯೋಚಿಸಿ ವಲ್ಲಭದೇವನು ಧನಕೋಟಿಯು ಬಿನ್ನಹವನ್ನು ಮೇಲಕ್ಕೆ ಕಳುಹಿಸದೆ ಸುಮ್ಮನಿದ್ದು ಬಿಟ್ಟನು. ಇತ್ತ ಧರ್ಮದೇವನು ಯಥಾಪ್ರಕಾರ ಬಂದಿಶಾಲೆಯಲ್ಲಿಯೇ ಇರುತ್ತಿದ್ದನು. ಅವನಿಗೆ ಈ ರಾಜ್ಯದಲ್ಲಿ ನಡೆದ ವ್ಯತ್ಯಾಸಗಳಾವುವೂ ತಿಳಿಯುಲೇ ಇಲ್ಲ.

ಚಕ್ರವರ್ತಿಯ ನೂರು ದಿವಸದ ಅರಸುತನದಲ್ಲಿ ಧನಕೋಟಿಯು ವಲ್ಲಭದೇವನ ಬಳಿಗೆ ಎರಡಾವೃತ್ತಿ ಹೋಗಿದ್ದನು. ಎರಡಾವೃತ್ತಿಯೂ ವಲ್ಲಭದೇವನು ನಯವಾಗಿ ಮಾತನಾಡಿ ಧರ್ಮದೇವನನ್ನು ಜಾಗ್ರತೆಯಾಗಿ ಬಿಡಿಸುವುದಾಗಿ ಹೇಳಿ ಕಳುಹಿಸಿದನು.

ಹೀಗಿರುವಲ್ಲಿ ಹಿಂದೆ ಚಕ್ರವರ್ತಿಯಿಂದ ಬಾಧೆಪಟ್ಟಿದ್ದ ರಾಜರುಗಳೆಲ್ಲರೂ ಸೇರಿ ಚಕ್ರವರ್ತಿಯು ಪುನಃ ಅಮರರಾಜ್ಯಕ್ಕೆ ಬಂದನು ; ನಾವೆಲ್ಲರೂ ಸುಮ್ಮನಿದ್ದರೆ ಅವನು

ನಮ್ಮನ್ನು ಪೂರ್ವದಂತೆಯೇ ಪೀಡಿಸಿ ನಮ್ಮ ರಾಜ್ಯಗಳನ್ನೆಲ್ಲಾ ಕಸುಕೊಳ್ಳುವನು ಎಂದು ಯೋಚಿಸಿ ಚಕ್ರವರ್ತಿಯ ಮೇಲೆ ದಂಡೆತ್ತಿ ಬಂದು ಅವನನ್ನು ಯುದ್ಧದಲ್ಲಿ ಸೋಲಿಸಿ ಏಲಾದ್ವೀಪದಲ್ಲಿಡದೆ ಬಹು ದೂರದಲ್ಲಿದ್ದ ಒಂದು ದ್ವೀಪದಲ್ಲಿ ಸೆರೆಯಿಟು ಜಯಸಿಂಹನಿಗೆ ಪುನಃ ಅಮರರಾಜ್ಯವನ್ನು ಕೊಟ್ಟರು. ಇನ್ನು ವಲ್ಲಭದೇವನನ್ನು ನೋಡುವುದು ಸರಿಯಲ್ಲವೆಂದು ಧನಕೋಟಿಯು ಸುಮ್ಮನಾದನು. ಧರ್ಮದೇವನು ಸೆರೆಯಿಂದ ಬಂದು ತನ್ನನ್ನೇನು ಮಾಡುವನೋ ಎಂಬ ಭಯವು ವಲ್ಲಭದೇವನಿಗೆ ತಪ್ಪಿತು.

ವಲ್ಲಭದೇವನು ಮಲಯಪಟ್ಟಣದಲ್ಲಿ ಬಹು ದಿವಸಗಳು ಇದ್ದು ಅನೇಕರಿಗೆ ಅನ್ಯಾಯವನ್ನು ಮಾಡಿ ಅದರಿಂದ ಉಂಟಾದ ಅನುತಾಪವನ್ನು ಸಹಸಲಾರದೆ, ಅನೇಕ ಶತ್ರುಗಳು ಇರುವ ಕಡೆ ತಾನಿದ್ದರೆ ಅರೇನಮಾಡಿಬಿಡುವರೋ ಎಂದು ಭಯಪಟ್ಟು, ಆ ಊರನ್ನು ಬಿಟ್ಟು ಬೇರೆ ಕಡೆಗೆ ಹೋದರೆ ತನ್ನ ಮನಸ್ಸು ನೆಮ್ಮದಿಯಾಗಿ ಇರುವುದೆಂದು ಯೋಚಿಸಿ, ಜಯಸಿಂಹರಾಜನು ರಾಜ್ಯಕ್ಕೆ ಬಂದ ಸ್ವಲ್ಪದಿವಸಗಳಲ್ಲಿಯೇ ದೂರದಲ್ಲಿದ್ದ ತುಲಸೀಪಟ್ಟಣಕ್ಕೆ ಬದಲಾಯಿಸಿಕೊಂಡು ಹೋಗಿ, ಕಾಂತವೀರನು ಜಯಸಿಂಹನಲ್ಲಿ ಪ್ರಬಲನಾಗಿದ್ದುದರಿಂದ ಅವನ ಮಗಳನ್ನು ಮದುವೆಯಾಗುವುದು ಲೇಸೆಂದು ತಿಳಿದು ಅವಳನ್ನು ಮದುವೆಯಾದನು.

ಚಕ್ರವರ್ತಿಯು ರಾಜ್ಯಕ್ಕೆ ಬರುತಲೆ ದುರ್ಮತಿಗೆ ಧರ್ಮದೇವನ ಭಯವು ಹೆಚ್ಚಾಗಿ, ಅವನಿಗೆ ಬಿಡುಗಡೆಯಾಗಿ ಬಂದರೆ ತನ್ನನ್ನು ಏನ ಮಾಡಿಬಿಡುವನೋ ಎಂದು ಹೆದರಿ, ಧನಕೋಟಿಯನ್ನು ಆಶ್ರಯಿಸಿ ಸಮುದ್ರಪ್ರಯಾಣ ಮಾಡುವುದು ತನ್ನಿಂದ ಆಗುವುದಿಲ್ಲವೆಂದು ಹೇಳಿ, ಅವನಿಗೆ ವಿಶೇಷಪರಿಚಯವಿದ್ದ ಅನ್ಯದೇಶದ ವರ್ತಕನೊಬ್ಬನಿಗೆ ಸಿಫಾರಸ್ಸು ಕಾಗದವನ್ನು ತೆಗೆದುಕೊಂಡು ಹೋಗಿ ಅವನಲ್ಲಿ ಕೆಲಸಕ್ಕೆ ಸೇರಿ ಅಮರದೇಶವನ್ನು ಬಿಟ್ಟು ಹೊರಟುಹೋದನು.

ವಿಷಯಲಂಪಟನಿಗೆ ಧರ್ಮದೇವನೇನಾದನೋ ಎಂಬ ಯೋಚನೆಯೇ ಹುಟ್ಟಲಿಲ್ಲ; ಅವನು ಊರಲ್ಲಿಲ್ಲವೆಂಬುದು ವಿನಾ ಮತ್ತಾವುದೂ ತಿಳಿಯದು. ತಾನು ಲಲಿತಾಂಗಿಯನ್ನು ಮದುವೆಮಾಡಿಕೊಂಡು ಅವ ದೇಶಕ್ಕಾದರೂ ಹೊರಡಬೇಕೆಂದೂ ಈ ಮಧ್ಯೆ ಧರ್ಮದೇವನು ಒಂದು ವೇಳೆ ತಿರುಗಿ ಬಂದರೆ ಅವನನ್ನು ಕೊಂದು ತಾನೂ

ಪ್ರಾಣ ಬಿಡಬೇಕೆಂದೂ ನಿಶ್ಚಯಿಸಿದ್ದನು. ವಿಷಯಾಸಕ್ತರು ನಿಜವಾಗಿಯೂ ಪ್ರಾಣ ತ್ಯಾಗ ಮಾಡುವರೇ? ತಮ್ಮ ದುರಾಶೆಗಳನ್ನು ಪೂರ್ತಿಮಾಡಿಕೊಳ್ಳುವರೇ ಹೊರತು ಪ್ರಾಣತ್ಯಾಗವನ್ನು ಅವರು ಎಂದಿಗೂ ಮಾಡರು.

ವಿಷಯಲಂಪಟನ ಯೋಚನೆಯು ಹೀಗಿರುವಲ್ಲಿ, ಚಕ್ರವರ್ತಿಯು ತನ್ನ ನೂರು ದಿನಗಳ ಬಾಳಿನಲ್ಲಿ ದಂಡನ್ನು ಹೆಚ್ಚಿಸಬೇಕೆಂದು ಯೋಚಿಸಿ ರಾಜ್ಯದಲ್ಲಿರತಕ್ಕ ಯುವಕರನ್ನೆಲ್ಲಾ ಸೈನ್ಯಕ್ಕೆ ಸೇರಿಸುವಂತೆ ಆಜ್ಞೆಯನ್ನು ಮಾಡಿದನು. ಅದರಿಂದ ವಿಷಯಲಂಪಟನು ಲಲಿತಾಂಗಿಯನ್ನು ಬಿಟ್ಟು ಹೊರಡಬೇಕಾಯಿತು. ತಾನು ಊರಲ್ಲಿಲ್ಲದ ಕಾಲದಲ್ಲಿ ಎಲ್ಲಿ ಧರ್ಮದೇವನು ಬಂದು ಅವಳನ್ನು ಮದುವೆಯಾಗುವನೋ ಎಂಬ ಭಯವೊಂದು ವಿಷಯಲಂಪಟನಿಗೆ ಹೆಚ್ಚಾಗಿದ್ದಿತು. ಅವನು ಪ್ರಾಣತ್ಯಾಗವನ್ನು ಮಾಡಬೇಕಾಗಿದ್ದರೆ ಇದು ಸಕಾಲವಾಗಿದ್ದಿತು. ಆದರೆ ದುರಾತ್ಮರು ದುರಾಶಾಪೂರ್ತಿಯಲ್ಲಿಯೇ ಆಸಕ್ತರಾಗಿರುವವರಾದಕಾರಣ ಅವರು ಎಂದಿಗೂ ಆತ್ಮಹತ್ಯವನ್ನು ಮಾಡಿಕೊಳ್ಳರು.

ಲಲಿತಾಂಗಿಯು ಗುಣಗ್ರಾಹಿಯಾದುದರಿಂದ ತನ್ನ ಕಷ್ಟಕಾಲದಲ್ಲಿ ವಿಷಯಲಂಪಟನು ಮಾಡಿದ ಸಾಹಾಯ್ಯಕ್ಕಾಗಿ ಕೃತಜ್ಞಳಾಗಿದ್ದಳು. ಅವನ ಕೃತ್ರಿಮದ ಕಾರ್ಯವು ಇವಳಿಗೆ ತಿಳಿಯದಾದುದರಿಂದ ಲಲಿತಾಂಗಿಗೆ ಅವನಲ್ಲಿ ಎಂದಿನಂತೆ ಭ್ರಾತೃವಾತ್ಸಲ್ಯವಿದ್ದಿತು. ಆದುದರಿಂದಲೇ ಅವನು ಸೈನ್ಯವನ್ನು ಸೇರಲು ಹೊರಟಾಗ ಅವಳು ಅಣ್ಣಾ, ನಿನ್ನ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೋ. ನಿನಗೇನಾದರೂ ಆಪತ್ತು ಸಂಭವಿಸಿದರೆ ಈ ಲೋಕದಲ್ಲಿ ನನಗಿನ್ನಾರು ದಿಕ್ಕು? ಎಂದು ಮೃದುವಾದ ಮಾತುಗಳಿಂದ ಅವನನ್ನು ಸಂತೈಸಿ ಕಳುಹಿದಳು. ಅದರಿಂದ ವಿಷಯಲಂಪಟನ ಮನಸ್ಸಿನಲ್ಲಿ ಧರ್ಮದೇವನು ಪುನಃ ಬಾರದೆ ಇದ್ದರೆ ಇವಳು ತನ್ನನ್ನೇ ಮದುವೆಯಾಗುವಳೆಂಬ ನಂಬುಗೆಯು ಉಂಟಾಗಿ, ಅವನು ನಿಶ್ಚಿಂತನಾಗಿ ಪ್ರಯಾಣಮಾಡಿದನು.

ಈಗ ಲಲಿತಾಂಗಿಗೆ ಜತೆಯಿಲ್ಲದೆ ಆವಾಗಲೂ ಕಣ್ಣೀರನ್ನು ಸುರಿಸುತ್ತ ಹುಚ್ಚಿಯಂತೆ ಪಾಳೆಯವನ್ನು ಸುತ್ತುತ್ತಲೂ, ಕೆಲವು ವೇಳೆ ಸ್ತಂಭೀಭೂತಳಾಗಿ ಧರ್ಮದೇವನ. ಬರುವನೋ ಎಂಬ ಆಸೆಯಿಂದ ಮಲಯಪಟ್ಟಣದ ಮಾರ್ಗವನ್ನೇ ನೋಡುತ್ತಲೂ ಇರುತಿದ್ದಳು. ಕೆಲವು ವೇಳೆ ಸಮುದ್ರವನ್ನು ನೋಡಿ ಇದರಲ್ಲಿ ನಾನು ಬಿದ್ದು

ಸತ್ತರೆ ನನ್ನ ಕಷ್ಟವೆಲ್ಲವೂ ಪರಿಹಾರವಾಗುವುದೆಂದು ಯೋಚಿಸುತ್ತಲಿದ್ದಳು; ಆದರೆ ಪ್ರಾಣವನ್ನು ಬಿಡಲು ಭಯವಿಲ್ಲದಿದ್ದರೂ ಹಾಗೆ ಮಾಡುವುದು ಸರಿಯಲ್ಲವೆಂದು ಅವಳು ಸುಮ್ಮನಿದ್ದಳು.

ಕದರ್ಥಕನೂ ಕೂಡ ಸೈನ್ಯದಲ್ಲಿ ಸೇರಬೇಕಾಗಿ ಬಂದಿತು; ಆದರೆ ಅವನಿಗೆ ಈ ಮಧ್ಯೆ ವಿವಾಹವಾಗಿದ್ದುದರಿಂದ, ಅವನನ್ನು ಅನ್ಯದೇಶಕ್ಕೆ ಯುದ್ಧಕ್ಕೆ ಕಳುಹಿಸದೆ ಅಮರದೇಶದಲ್ಲಿಯೇ ಇಟ್ಟಿದ್ದರು.

ಧನಕೋಟಿಯು ಹೇಳಿದಂತೆ ಮಗನು ಬಿಡುಗಡೆಯಾಗಿ ಬರುವನೆಂದು ಬಹಳ ಆಸೆಯಿಂದ ಇದ್ದು, ಭುಜಂಗಭೂಷಣನು ಚಕ್ರವರ್ತಿಯು ಸೋತು ಜಯಸಿಂಹನು ರಾಜ್ಯಕ್ಕೆ ಬಂದನೆಂಬ ಸುದ್ದಿಯನ್ನು ಕೇಳಿ ಹತಾಶನಾಗಿ, ಕೆಲವುಕಾಲ ಜಡದಲ್ಲಿದ್ದು ಕೊನೆಗೆ ಲಲಿತಾಂಗಿಯ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ಪ್ರಾಣವನ್ನು ಬಿಟ್ಟನು. ಅವನು ರುಗ್ಣಶಯ್ಯಾಗತನಾದನೆಂದು ಕೇಳಿದ ದಿನದಿಂದ ಲಲಿತಾಂಗಿಯು ಅವನಿಗೆ ಉಪಚಾರಮಾಡುತ್ತ ಅವನು ಸಾಯುವವರೆಗೂ ಅಲ್ಲಿನ ಮನೆಯಲ್ಲಿಯೇ ಇದ್ದಳು. ಧನಕೋಟಿಯು ಭುಜಂಗಭೂಷಣನು ಜೀವಿಸಿರುವಲ್ಲಿ ಅವನಿಗೆ ವೆಚ್ಚಕ್ಕೆ ಬೇಕಾದುದನ್ನು ಕೊಟ್ಟು ಅವನು ಸತ್ತಮೇಲೆ ಅವನ ಉತ್ತರಕ್ರಿಯೆಗಳನ್ನು ಮಾಡಿಸಿ ಅವನಿಗಿದ್ದ ಅಲ್ಪಸ್ವಲ್ಪ ಸಾಲವನ್ನೂ ತೀರಿಸಿದನು.

ತೊಬ್ಬತ್ತಾರನೆಯ ಅಧ್ಯಾಯ.

ಇಬ್ಬರು ಬಂದಿವಾನರು.

ಜಯಸಿಂಹನು ಪುನಃ ತನ್ನ ರಾಜ್ಯಕ್ಕೆ ಬಂದು ಸೇರಿದ ಅನಂತರ ಕಾರಾಗೃಹಗಳ ಮೇಲುವಿಚಾರಕ ಭಾಸ್ಕರನೆಂಬವನು ಪಾಲದುರ್ಗದ ಕಾರಾಗೃಹವನ್ನು ನೋಡಲು ಹೊರಟನು. ಇವನು ಬರುವನೆಂಬ ಸುದ್ದಿಯು ತಿಳಿದು ಆ ಕಾರಾಗೃಹದ ಅಧಿಪತಿಯು ನಡೆಸುತ್ತಲಿದ್ದ ಕೆಲಸಗಳ ಗಲಭೆಯು ಪಾತಾಳದಲ್ಲಿದ್ದ ಧರ್ಮದೇವನ ನೆಲಮಾಳಿಗೆಗೂ ಕೇಳಿಸಿದ್ದುದರಿಂದ, ಮನುಷ್ಯಲೋಕದಲ್ಲಿ ಅವುದೋ ಒಂದು ಅಸಾಧಾರಣವಾದ ಕಾರ್ಯವು ನಡೆಯುತ್ತಲಿರುವುದೆಂದು ಅವನಿಗೆ ಬೋಧೆಯಾಯಿತು.

ಕೆಲವುದಿವಸಗಳಾದ ಮೇಲೆ ಭಾಸ್ಕರನು ಜಾಲದುರ್ಗಕ್ಕೆ ಬಂದನು. ಅವನೂ ಅಲ್ಲಿನ ಅಧಿಕಾರಿಯೂ ಅಲ್ಲಿಯ ಪ್ರತಿಯೊಂದು ಕೊಟ್ಟಡಿಯನ್ನೂ ಪ್ರವೇಶಿಸಿ ಅಲ್ಲಿಯ ನಿವಾಸಿಯನ್ನು ನಿನಗೆ ಒಳ್ಳೆಯ ಆಹಾರ ದೊರಕುವುದೋ? ನೀನು ಹೇಳಿಕೊಳ್ಳ ತಕ್ಕುದು ಏನಾದರೂ ಉಂಟೋ ಎಂದು ಕೇಳುತ್ತ ಬಂದನು. ಸಾಧಾರಣವಾಗಿ ಎಲ್ಲರೂ ಆಹಾರ ಸರಿಯಾಗಿಲ್ಲ; ಬಿಡುಗಡೆಮಾಡಿಸಬೇಕು ಎಂದು ಉತ್ತರವಂ ಕೊಟ್ಟರು. ಭಾಸ್ಕರನು ಅಧಿಕಾರಿಯನ್ನು ನೋಡಿ ವರ್ಷವರ್ಷ ಬಂದಿವಾನರನ್ನು ನೋಡಿ ಅವರನ್ನು ವಿಚಾರಿಸಬೇಕೆಂದು ಸರ್ಕಾರದವರು ಆವ ಅಭಿಪ್ರಾಯದಿಂದ ಕಟ್ಟಳೆಮಾಡಿರುವರೋ ತಿಳಿಯದು. ಒಬ್ಬನನ್ನು ವಿಚಾರಿಸಿದರೆ ಎಲ್ಲರನ್ನೂ ವಿಚಾರಿಸಿ ದಂತೆಯೇ ಆಗುವುದು. ಮೇಲೂ, ಬಂದಿವಾನರು ಕೇಳಿಕೊಳ್ಳುವಂತೆ ಸರ್ಕಾರದವರು ಬೇರೆ ನಡಿಸಿಕೊಡುವುದಿಲ್ಲ. ಇನ್ನಾರನ್ನಾದರೂ ನೋಡತಕ್ಕುದು ಉಂಟೋ ಎಂದು ಕೇಳಿದನು.

ಕೆಳಗಣ ಎರಡು ನೆಲಮಾಳಿಗೆಗಳಲ್ಲಿ ಭಯಂಕರವಾದ ಹಟವಾದಿಯೊಬ್ಬನು, ಹುಚ್ಚು ಸನ್ಯಾಸಿಯೊಬ್ಬನು ಇರುವರು. ಬೇಕಾದರೆ ಅವರಿಬ್ಬರನ್ನೂ ಪರಾಂಬರಿಸ ಬಹುದು.

ಅವರನ್ನೂ ನೋಡಿದಂತೆ ಮಾಡಿ ನಮ್ಮ ಕೆಲಸವನ್ನು ಮುಗಿಸೋಣ.

ಆಗಬಹುದು. ಹಾಗಾದರೆ ಇಬ್ಬರು ಸೈನಿಕರನ್ನು ಮೊದಲು ಕರೆಸುವೆನು. ಏತಕ್ಕೆ?

ಕೆಲವು ವೇಳೆ ಬಂದಿವಾನರು ತಮಗೆ ಉಂಟಾಗುವ ಕಷ್ಟದಿಂದ ಬೇಸರವನ್ನು ಹೊದ್ದಿ ಜಾಗ್ರತೆಯಾಗಿ ಸಾಯಲಾಶಿಸಿ ತಮ್ಮ ಬಳಿಗೆ ಬಂದವರನ್ನು ಕೊಲ್ಲುವರು.

ಅವಶ್ಯಕವಿದ್ದರೆ ಸೈನಿಕರು ಬರಲಿ.

ಇಬ್ಬರು ಸೈನಿಕರಿಗೆ ಹೇಳಿ ಕಳುಹಿಸಿ ಅವರು ಬಂದ ಅನಂತರ ಅವರನ್ನು ಮುಂದಿಟ್ಟುಕೊಂಡು ಭಾಸ್ಕರನೂ ಅಧಿಕಾರಿಯೂ ಕತ್ತಲೆ, ಶೀತ, ನಾತಗಳಿಂದ ತುಂಬಿದ ನೆಲಮಾಳಿಗೆ ಮೆಟ್ಟಲುಗಳನ್ನು ಇಳಿವಾಗ ಇದರಲ್ಲಿ ಆರಿರುವರು ಎಂದು ವಿಚಾರಕನು ಕೇಳಿದನು.

ಹಟವಾದಿಯಾಗಿಯೂ ಭಯಂಕರನಾಗಿಯೂ ಇರುವ ರಾಜದ್ರೋಹಿಯೊಬ್ಬನಿರುವನು.

ಅವನೊಬ್ಬನೇ ಇರುವನೋ? ''ಹೂಂ.''

ಎಷ್ಟು ದಿವಸಗಳಿಂದ ಇರುವನು? ''ಒಂದು ವರ್ಷದಿಂದ.''

ಅವನು ಇಲ್ಲಿಗೆ ಬಂದಂದಿನಿಂದ ಇದರಲ್ಲಿಯೇ ಇರುತ್ತಲಿದ್ದಾನೆಯೋ?

ಇಲ್ಲ; ಮೊದಲು ಇಲ್ಲಿರಲಿಲ್ಲ. ಒಂದು ದಿನ ತನಗೆ ಆಹಾರವನ್ನು ಕೊಡುತ್ತಲಿದ್ದ ಆಳನ್ನು ಅವನು ಕೊಲ್ಲಲು ಯತ್ನಪಟ್ಟನು. ಅಂದಿನಿಂದ ಅವನನ್ನು ಇಲ್ಲಿಗೆ ಸೇರಿಸಿದೆವು.

ಹಾಗಾದರೆ ಅವನು ಹುಚ್ಚನಾಗಿರಬೇಕು.

ಅವನು ಹುಚ್ಚನಲ್ಲ; ಪಿಶಾಚಿ

ಹಾಗಾದರೆ ಮೇಲಕ್ಕೆ ಬರೆಯಬೇಕೋ?

ಅನವಶ್ಯಕ. ಈಗಲೇ ಅವನಿಗೆ ಪೂರಾ ಹುಚ್ಚು ಹಿಡಿದಿರಬೇಕು. ಹಾಗೆ ಇಲ್ಲದಿದ್ದರೆ ಇನ್ನೊಂದು ವರ್ಷದಲ್ಲಿ ಹಿಡಿಯುವುದು.

ಹುಚ್ಚು ಹಿಡಿದರೆ ಬಂದಿಗೆ ಅನುಕೂಲವೇ ಸರಿ; ಅವನಿಗೆ ಕಷ್ಟಾನುಭವವು ಗೊತ್ತಾಗುವುದಿಲ್ಲ.

ತಾವು ಹೇಳಿದುದು ಬಹಳ ಅನುಭವಸಿದ್ಧವಾದ ಮಾತು. ಈ ಬಲದ ಪಕ್ಕದಲ್ಲಿ ಇನ್ನೊಂದು ಬಿಲವಿರುವುದು; ಅದರಲ್ಲಿ ಒಬ್ಬ ಸನ್ಯಾಸಿಯು ಇರುವನು. ಅವನು ಇಂದ್ರಪ್ರಸ್ಥದೇಶದಲ್ಲಿ ರಾಜ್ಯಪರಿವರ್ತನೆಗೆ ಪ್ರಯತ್ನಮಾಡಿದುದರಿಂದ ಅಲ್ಲಿಯ ದೊರೆಯು ಅವನನ್ನು ಹಿಡಿದು ಕೆಲವು ಕಾಲ ಅಲ್ಲಿಯೇ ಸೆರೆಯಲ್ಲಿಟ್ಟಿದ್ದು, ಅನಂತರ ಆ ದೇಶದಲ್ಲಿ ಅವನಿದ್ದರೆ ಅವನ ಪಿತೂರಿಯು ತಪ್ಪದೆಂದು ಯೋಚಿಸಿ, ನಮ್ಮ ರಾಜರ ಒಪ್ಪಿಗೆಯನ್ನು ಪಡೆದು ಈ ಸೆರೆಮನೆಯಲ್ಲಿಟ್ಟಿರುವನು. ಅವನು ಇಲ್ಲಿಗೆ ಬಂದ ಒಂದೆರಡು ವರ್ಷಗಳವರೆಗೆ ಸರ್ವದಾ ಅಳುತ್ತ ಕೃಶನಾಗಿದ್ದು ಈಗ ಯಾವಾಗಲೂ ನಗುತ್ತಲಿದ್ದಾನೆ; ಅವನ ಶರೀರವೂ ಪುಷ್ಟಿಯಾಗುತ್ತಲಿದೆ. ಈ ಪಿಶಾಚಿಗಿಂತ ಅವನನ್ನು ನೋಡುವುದು ಒಂದು ವಿನೋದ.

ವಿಚಾರಕ ಭಾಸ್ಕರನು ಇಲ್ಲಿಗೆ ಬಂದುದು ಇದೇ ಮೊದಲು ಸಾರಿಯಾದುದರಿಂದ ತನ್ನ ಅಧಿಕಾರವನ್ನು ತೋರಿಸಲು ಆಸಕ್ತನಾಗಿ, ಬಂಧನಾಲಯದ ಅಧಿಕಾರಿಯನ್ನು ನೋಡಿ, ನಾನು ಮಾಡುವ ಕೆಲಸವು ನನ್ನ ಮನಸ್ಸಿಗೆ ಒಪ್ಪಿಗೆಯಾಗಬೇಕು. ಆದುದರಿಂದ ಇವನನ್ನು ನೋಡಿದ ಬಳಿಕ ಅವನನ್ನು ನೋಡುವೆನು ಎಂದನು.

ಧರ್ಮದೇವನಿದ್ದ ಬಿಲದ ಬಾಗಿಲನ್ನು ತೆಗೆಸಿ ಸೈನಿಕರು ಮುಂದಾಗಿ ಈ ಇಬ್ಬರು ಅಧಿಕಾರಿಗಳೂ ಒಳಗೆ ಪ್ರವೇಶಿಸಿದರು. ಆಗ ಮೂಲೆಯಲ್ಲಿ ಅಡಗಿಕೊಂಡಿದ್ದು ಬೆಳಕನ್ನು ನಿರೀಕ್ಷಿಸುತಲಿದ್ದ ಧರ್ಮದೇವನು ಇವರ ಜತೆಯಲ್ಲಿ ಬಂದಿದ್ದ ದೀವಟಿಗೆಯ ಬೆಳಕನ್ನು ನೋಡಿ ತಟ್ಟನೆದ್ದು, ತನ್ನ ಕೂಪಕ್ಕೆ ಬಂದವನು ಆರೋ ಒಬ್ಬ ದೊಡ್ಡ ಅಧಿಕಾರಿಯಾಗಿರಬೇಕೆಂದು ಯೋಚಿಸಿ, ಎರಡು ಕೈಗಳನ್ನೂ ಜೋಡಿಸಿಕ್ಕೊಂಡು ಒಂದೇ ನೆಗೆತದಲ್ಲಿ ಬಂದು ಅವನ ಮುಂದೆ ನಿಂತನು. ಅಷ್ಟರಲ್ಲಿಯೇ ಸೈನಿಕರು ಭಾಸ್ಕರನಿಗೆ ಅವುದಾದರೂ ಅಪಾಯ ಸಂಭವಿಸೀತು ಎಂದು, ಧರ್ಮದೇವನು ಇನ್ನು ಮುಂದೆ ಬಾರದಂತೆ ತಮ್ಮ ಕತ್ತಿಯನ್ನು ಚಾಚಲು ಅದನ್ನು ನೋಡಿ ಧರ್ಮದೇವನು ಹೆದರಿ ಸ್ವಲ್ಪ ಹಿಂಜರಿದು, ನಮ್ರತೆಯಿಂದ ಮೇಲುವಿಚಾರಕನನ್ನು ಕುರಿತು ಕೆಲವು ಮಾತುಗಳನ್ನಾಡಿದನು. ಅವುಗಳನ್ನು ಕೇಳಿದುದರಿಂದ ವಿಚಾರಕನಲ್ಲಿ ಅಂತರ್ಗತವಾಗಿದ್ದ ಕರುಣೆಯು ಹೊರಪಟ್ಟಂತೆ ಧರ್ಮದೇವನಿಗೆ ತೋರಿತು.

ಆಗ ವಿಚಾರಕನು ಅಧಿಕಾರಿಯನ್ನು ನೋಡಿ, ಕತ್ತಿಗಳನ್ನು ಕಂಡು ಹೆದರುವುದರಿಂದ ಈಚಿಗೆ ಇವನಿಗೆ ಹುಚ್ಚು ಬಿಟ್ಟಿರುವಂತೆ ತೋರುತ್ತದೆ. ಹೀಗೆಯೇ ಇದ್ದರೆ ಇವನಿಗೆ ಮುಂದೆ ಭಕ್ತಿಯು ಉಂಟಾಗುವುದು ಎಂದು ಹೇಳಿ, ಧರ್ಮದೇವನನ್ನು ನೋಡಿ ನಿನಗೇನು ಬೇಕೆಂದು ಹೇಳಿದೆ? ಎಂದು ಕೇಳಿದನು.

ಮಹಾಸ್ವಾಮೀ! ನನ್ನ ತಪ್ಪು ಇಂತಹುದೆಂದು ಹೇಳದೆ ವಿಚಾರಣೆಯನ್ನೂ ಮಾಡದೆ ನನ್ನನ್ನು ಇಲ್ಲಿಟ್ಟಿರುವರು. ಈಗ ನಾನು ತಮ್ಮನ್ನು ಬೇಡಿಕೊಳ್ಳುವುದೇನೆಂದರೆ— ನನ್ನನ್ನು ವಿಚಾರಣೆ ಮಾಡಿ ನನ್ನ ಮೇಲೆ ತಪ್ಪು ಆಪಾದನೆಯಾದರೆ ನನ್ನನ್ನು ಗುಂಡಿನಿಂದ ಸುಡಿಸಬಹುದು. ನಾನು ತಪ್ಪಿತಸ್ಥನಲ್ಲವೆಂದು ತಿಳಿಯಬಂದರೆ ನನ್ನ ಬಿಡುಗಡೆಗೆ ಅಪ್ಪಣೆಯಾಗಬೇಕು.

ನಿನಗೆ ಕೊಡುತ್ತಲಿರುವ ಆಹಾರವು ಸರಿಯಾಗಿದೆಯೋ?

ಇರಬಹುದು ; ಆದರೆ ಅದು ನನಗೆ ಮುಖ್ಯವಾದುದಲ್ಲ. ನಿರಪರಾಧಿಯಾಗಿರುವವನನ್ನು ಈ ಬಿಲದಲ್ಲಿ ಹಾಕಿ ಕೊಲ್ಲುವುದು ಯಾವ ನ್ಯಾಯ ?

ಅಧಿಕಾರಿಯು ಧರ್ಮದೇವನನ್ನು ನೋಡಿ ಈ ದಿನ ನೀನು ಬಹಳ ನಮ್ರತೆಯನ್ನು ತೋರಿಸುತ್ತಿದ್ದೀಯೆ. ಆಳನ್ನು ಕೊಲ್ಲಲು ಯತ್ನಪಟ್ಟ ದಿನ ನೀನು ಹೀಗಿರಲಿಲ್ಲ ಎಂದನು.

ಸ್ವಾಮೀ ! ಅದು ನಿಶ್ಚಯ. ಆ ದಿನ ನನಗೆ ಹುಚ್ಚು ಹಿಡಿದಂತೆ ಇದ್ದಿತು. ನಾನು ಮಾಡಿದುದು ಅನ್ಯಾಯ ; ನನ್ನನ್ನು ಮನ್ನಿಸಬೇಕು.

ಈಗ ನಿನಗೆ ಹುಚ್ಚಿಲ್ಲವೋ ? ಎಂದು ವಿಚಾರಕನು ಕೇಳಲು ಸ್ವಾಮೀ ! ಕಾರಾಗೃಹದ ದೀರ್ಘವಾಸವು ಕೋಪ, ತಾಪ, ಹುಚ್ಚು ಎಲ್ಲವನ್ನೂ ಬಿಡಿಸುವುದು ಎಂದನು. ದೀರ್ಘವಾಸವೇ ? ನಿನು ಇಲ್ಲಿಗೆ ಬಂದು ಎಷ್ಟು ದಿವಸಗಳಾದವು ?

ನನಗೆ ಗೊತ್ತಿಲ್ಲ — ನಿನ್ನನ್ನು ಆವಾಗ ಸೆರೆ ಹಿಡಿದರು ?

ಪರೀಧಾವಿ ಸಂವತ್ಸರದ ಚೈತ್ರ ಶುಕ್ಲ ದಶಮಿಯ ದಿನ.

ಇದು ಪ್ರಮಾದೀಚ ಸಂವತ್ಸರದ ಭಾದ್ರಪದ ಶುದ್ಧ ಚತುರ್ಥ ; ಆದುದರಿಂದ ನೀನಿಲ್ಲಿಗೆ ಬಂದು ಹದಿನೇಳು ತಿಂಗಳುಗಳಾದವು. ಇದೇನು ಅಂತಹ ದೀರ್ಘಕಾಲ ?

ಸ್ವಾಮೀ ! ಕಾರಾಗೃಹದ ವಾಸವು ತಮಗೆ ಅನುಭವವಿಲ್ಲವೆಂದು ತೋರುತ್ತದೆ; ಅದರಿಂದ ಹೀಗೆ ಹೇಳುತ್ತೀರಿ. ದೈವಕೃಪೆಯಿಂದ ಕೈಸೇರಿದ ನೌಕಾಧಿಪತ್ಯವನ್ನು ಹೊಂದಿ, ನಾನು ಪ್ರೀತಿಸುತ್ತಲಿದ್ದ ಸುಂದರಿಯನ್ನು ವರಿಸಿ ಅವಳೊಡನೆ ಸುಖವಾಗಿದ್ದು, ಅಶಕ್ತನಾಗಿಯೂ ಅಸಹಾಯನಾಗಿಯೂ ಇರುವ ತಂದೆಯನ್ನು ಉಪಚರಿಸುವ ಯೋಗ್ಯತೆಯುಂಟಾದ ಕಾಲಕ್ಕೆ ಸರಿಯಾಗಿ ' ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು ' ಎಂಬಂತೆ ನನ್ನ ಆಶಾಭಂಗವಂ ಮಾಡಿ ನನ್ನನ್ನು ಇಲ್ಲಿ ತಂದು ಹಾಕಿದರೆ ನನಗೆ ಪ್ರತಿಯೊಂದು ನಿಮಿಷವೂ ಒಂದೊಂದು ಯುಗದಂತೆ ಕಾಣುವುದಿಲ್ಲವೇ ? ತಾವೇ ಯೋಚಿಸಿ.

ಈ ಮಾತನ್ನು ಕೇಳುತಲೆ ಮೇಲುವಿಚಾರಕನಿಗೆ ಕನಿಕರ ಹುಟ್ಟಿ ಬಂದಿಶಾಲೆಯ ಅಧಿಕಾರಿಯನ್ನು ನೋಡಿ ಇವನ ವಿಷಯವಾದ ಪತ್ರಗಳನ್ನು ನಾನು ನೋಡಬೇಕು. ಸ್ವಲ್ಪ ತೋರಿಸಿರಿ ಎಂದನು.

ಆಗಬಹುದು. ಇವನ ತಪ್ಪು ಬಲವತ್ತರವಾದುದೆಂದು ಅವುಗಳಲ್ಲಿ ಬರೆದಿದೆ.

ಇವರು ಇಲ್ಲಿಂದ ಮುಂದೆ ಹೊರಡುವುದನ್ನು ಕಂಡು, ಧರ್ಮದೇವನು ವಿಚಾರಕನನ್ನು ಕುರಿತು ಸ್ವಾಮೀ! ನನ್ನನ್ನು ವಿಚಾರಣೆ ಮಾಡದೆ ನನಗೆ ಜಿಡುಗಡೆಯಾಗಬೇಕೆಂದು ಕೇಳುವುದಿಲ್ಲ. ತಾವು ಕೂಲಂಕಷವಾಗಿ ನನ್ನ ಅಹವಾಲನ್ನು ವಿಚಾರಣೆ ಮಾಡಿದರೆ ಸಾಕು ಎಂದನು.

ಒಳ್ಳೆಯದು, ನೋಡೋಣ.

ಸ್ವಾಮೀ! ತಾವು ಹೀಗೆ ಅಪ್ಪಣೆ ಕೊಡಿಸುವುದರಿಂದ ತಮಗೆ ನನ್ನಲ್ಲಿ ಕುತುಕವುಂಟಾದಂತೆ ತೋರುತ್ತಿದೆ. ನನ್ನ ಕೋರಿಕೆಯನ್ನು ತಾವು ನಡೆಸಿ ಕೊಡಬೇಕು.

ನಾನು ಈಗ ಅವುದನ್ನೂ ಹೇಳಲಾರೆ. ನಿನ್ನ ವಿಷಯವಾದ ಪತ್ರಗಳನ್ನು ನೋಡಿ ಸಾಧ್ಯವಾದರೆ ನಿನಗೆ ಸಾಹಾಯ್ಯವಂ ಮಾಡುವೆನು. ನಿನ್ನನ್ನು ಸೆರೆಯಲ್ಲಿಡಿಸಿದವರಾರು?

ವಲ್ಲಭದೇವನು. ಆತನನ್ನು ಕಂಡು ತಾವು ಮಾತನಾಡಿದರೆ ನನ್ನ ಸಂಗತಿಯೆಲ್ಲಾ ತಮಗೆ ಗೊತ್ತಾಗುವುದು.

ಆತನು ಈಗ ಮಲಯಪಟ್ಟಣದಲ್ಲಿಲ್ಲ.

ನನಗೆ ರಕ್ಷಕನಾಗಿದ್ದವನು ಅಲ್ಲಿಲ್ಲದುದರಿಂದಲೇ ನನಗೆ ಈಗತಿಯಾಗಿದೆ.

ನಿನ್ನ ಮೇಲೆ ವಲ್ಲಭದೇವನಿಗೇನಾದರೂ ದ್ವೇಷವಿದ್ದಿತೋ?

ಇಲ್ಲ, ಇಲ್ಲ; ಆತನು ನನ್ನನ್ನು ವಿಶೇಷ ಕರುಣೆಯಿಂದ ಕಾಣುತ್ತಿದ್ದನು.

ಹಾಗಾದರೆ ಆತನು ನಿನ್ನ ವಿಷಯದಲ್ಲಿ ಬರೆದಿರುವುದೆಲ್ಲಾ ಸರಿಯಿಷ್ಟೇ.

ಎಲ್ಲವೂ ಸರಿ, ಮಹಾಸ್ವಾಮಿ.

ಒಳ್ಳೆಯದು, ಹಾಗಾದರೆ ನಾನು ಅದನ್ನೆಲ್ಲಾ ನೋಡುತ್ತೇನೆ. ಅದುವರೆಗೆ ಆತುರಪಡದೆ ಸುಮ್ಮನಿರು.

ಅಪ್ಪಣೆ. ಎಂದು ಧರ್ಮದೇವನು ಭಾಸ್ಕರನಿಗೆ ನಮಸ್ಕಾರ ಮಾಡಿದನು. ಕೂಡಲೆ ಬಿಲದ ಬಾಗಿಲು ಮುಚ್ಚಲ್ಪಟ್ಟಿತು. ಇಷ್ಟು ದಿವಸಗಳು ಬಾಗಿಲು ಮುಚ್ಚಿದಾಗಲೆಲ್ಲ ಧರ್ಮದೇವನು ಒಬ್ಬನೇ ಇರುತ್ತಿದ್ದನು; ಈ ದಿನ "ಆಸೆ" ಎಂಬುದು ಅವನಿಗೆ ಜತೆಯಾಗಿ ಬಂದು ಸೇರಿತು

ಬಳಿಕಲಾ ಅಧಿಕಾರಿಗಳು ಸನ್ಯಾಸಿಯ ಬಿಲದ ಕಡೆಗೆ ಹೊರಟರು. ದಾರಿಯಲ್ಲಿ ಕಾರಾಗೃಹದ ಅಧಿಕಾರಿಯು ವಿಚಾರಕನನ್ನು ನೋಡಿ ಇದರಲ್ಲಿರುವ ಸನ್ಯಾಸಿಯ ಹುಚ್ಚು ಬಹು ವಿನೋದಕರವಾದುದು ಎಂದನು. ಅದೇನು?

ತನಗೆ ಅಪಾರವಾದ ಧನವಿರುವುದೆಂದೂ ತನಗೆ ಬಿಡುಗಡೆ ಮಾಡಿಕೊಟ್ಟರೆ ಒಂದು ಕೋಟಿ ವರಹಗಳನ್ನು ಕೊಡುವೆನೆಂದೂ ಮೊದಲನೆಯ ವರ್ಷ ಹೇಳಿದನು; ಆ ಮೇಲೆ ವರ್ಷಗಳು ಹೆಚ್ಚಿದ ಹಾಗೆಲ್ಲಾ ಒಂದೊಂದು ಹೆಚ್ಚು ವರ್ಷಕ್ಕೂ ಒಂದೊಂದು ಕೋಟಿ ವರಹಗಳನ್ನು ಹೆಚ್ಚಾಗಿ ಕೊಡುವೆನೆಂದು ಹೇಳುತ್ತಾ ಇದ್ದಾನೆ. ಇದು ಐದನೆಯ ವರ್ಷವಾದುದರಿಂದ ಐದುಕೋಟಿ ವರಹಗಳನ್ನು ಕೊಡುತ್ತೇನೆಂದು ಹೇಳುತ್ತಾನೆ

ಅವನ ಹೆಸರೇನು? ಯೋಗಾನಂದ.

ಹುಚ್ಚರು ಯಾವಾಗಲೂ ಆನಂದರೇ; ಆದುದರಿಂದ ಆನಂದನೆಂಬುದು ಅವನಿಗೆ ತಕ್ಕ ಹೆಸರು. ಅವನಿಗೆ ಯೋಗವಾವುದು?

ಇಲ್ಲಿ ನರಳುತ್ತಿರುವುದೇ.

ಈರೀತಿಯಾಗಿ ಇವರು ಸರಸವಾಡುತ್ತ ನಗುತ್ತಿದ್ದ ವೇಳೆಗೆ ಸರಿಯಾಗಿ ಸನ್ಯಾಸಿಯಿದ್ದ ಬಿಲದ ಬಾಗಿಲು ತೆಗೆದರು. ಒಳಗೆ ಹೋಗಿ ನೋಡಲು ಯೋಗಾನಂದನು ಬಿಲದ ನಡುವೆ ಕುಳಿತು ಗೋಡೆಯ ಗಾರೆ ಚೂರಿನಿಂದ ನೆಲದ ಮೇಲೆ ಲೆಖ್ಖಗಳನ್ನು ಬರೆಯುತ್ತ ಕುಳಿತಿದ್ದನು. ಬಾಗಿಲನ್ನು ತೆರೆದುದೂ ಜನರು ಒಳಗೆ ಬಂದುದೂ ಯಾವುದೂ ಅವನಿಗೆ ಗೊತ್ತಾಗಲಿಲ್ಲ. ದೀಪಿಟಿಗೆಯ ಬೆಳಕನ್ನು ಕಂಡು ತಲೆಯೆತ್ತಿ ನೋಡಿ, ತನ್ನ ಮೈಮೇಲಿದ್ದ ಹರಕು ಒಟ್ಟಿಯನ್ನು ಸರಿಮಾಡಿಕೊಂಡು ಮೇಲುವಿಚಾರಕನ ಮುಖವನ್ನು ನೋಡುತ ಕುಳಿತಿದ್ದ ಹಾಗೆ ಇದ್ದನು.

ನೀನು ಏನು ಮಾಡುತ್ತಲಿದೀಯೆ? ಎಂದು ವಿಚಾರಕನು ಕೇಳಲು, ಆನಂದನು ಜ್ಯೋತಿಶ್ಶಾಸ್ತ್ರದಲ್ಲಿ ಅನೇಕ ಸಂಗತಿಗಳು ಗೂಢವಾಗಿರುವುವು; ಅವುಗಳನ್ನು ಪ್ರಕಟಿಸುವುದಕ್ಕಾಗಿ ಒಂದು ಶಾಸ್ತ್ರವನ್ನು ಬರೆಯುತ್ತಲಿದೇನೆ.

ನಿನಗೇನು ಬೇಕು? ನನಗೇನೂ ಬೇಡ.

ನಿನಗೇನು ಬೇಕೆಂಬುದನ್ನು ತಿಳಿದುಕೊಂಡು ಬರುವುದಕ್ಕಾಗಿ ಸರ್ಕಾರದವರು ನನ್ನನ್ನು ಇಲ್ಲಿಗೆ ಕಳುಹಿಸಿರುವರು.

ಹಾಗಿದ್ದಪಕ್ಷದಲ್ಲಿ ತಮ್ಮಲ್ಲಿ ಗುಟ್ಟಾಗಿ ಹೇಳಬೇಕಾದುದು ಒಂದು ಮಾತಿದೆ.

ಆಗ ಕಾರಾಗೃಹಾಧಿಪತಿಯು ಭಾಸ್ಕರನನ್ನು ನೋಡಿ ಸ್ವಾಮೀ! ತಮಗೆ ಮೊದಲೇ ನಾನು ಹೇಳಿರಲಿಲ್ಲವೇ ಎಂದನು.

ಯೋಗಾನಂದನು ವಿಚಾರಕನನ್ನು ನೋಡಿ ಸ್ವಾಮೀ! ನಾನು ಇಂದ್ರಪ್ರಸ್ಥದ ರಾಜ್ಯದಲ್ಲಿ ಹುಟ್ಟಿ ಪ್ರಸಿದ್ಧರಾದ ಬ್ರಹ್ಮಾನಂದರಲ್ಲಿ ಇಪ್ಪತ್ತು ಸಂವತ್ಸರಗಳು ಶಿಷ್ಯವೃತ್ತಿಯಂ ಮಾಡಿ ಅವರಿಂದ ಉಪದೇಶವಂ ಹೊದ್ದಿ ಯಾತ್ರಾರ್ಥವಾಗಿ ಹೊರಟಾಗ ನನ್ನನ್ನು ಹಿಡಿದು ಇಲ್ಲಿ ಹಾಕಿದಾರೆ. ಏತಕ್ಕೊ ಗೊತ್ತಾಗಲಿಲ್ಲ ಎಂದನು.

ನಿನ್ನ ಆಹಾರವು ಸರಿಯಾಗಿದೆಯೋ?

ಈ ಅನಾರೋಗ್ಯವಾದ ಅಂಧಕೂಪಕ್ಕೆ ತಕ್ಕಂತೆಯೇ ಇದೆ.

ನೀನು ಹೇಳಿಕೊಳ್ಳುವುದು ಏವುದಾದರೂ ಉಂಟೋ?

ರಹಸ್ಯವಾದ ಒಂದು ಮಾತುಂಟು.

ಅದನ್ನು ನಾನು ಬಲ್ಲೆ; ಅದು ಅಸಾಧ್ಯ.

ಸ್ವಾಮೀ! ಗುಟ್ಟು ಏತಕ್ಕೆ? ನನ್ನಲ್ಲಿ ವಿಶೇಷ ಧನವಿರುವುದು. ನನ್ನನ್ನು ಬಿಡುಗಡೆ ಮಾಡಿದರೆ ಸರ್ಕಾರಕ್ಕೆ ಐದುಕೋಟಿ ವರಹಗಳನ್ನು ಕೊಡುವೆನು.

ಅಷ್ಟು ಧನವು ನಿನಗೆಲ್ಲಿರುವುದು!

ಅದು ಇಲ್ಲಿಗೆ ಸುಮಾರು ಇನ್ನೂರು ಮೈಲಿಗಳ ದೂರದಲ್ಲಿ ಒಂದು ಕಡೆ ಇರುವುದು. ತಾವು ಅಲ್ಲಿಗೆ ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೋದರೆ ಅದರಲ್ಲಿ ಐದು ಕೋಟಿ ವರಹಗಳನ್ನು ತೆಗೆದು ಕೊಡುವೆನು.

ಸನ್ಯಾಸಿಗಳು ಬಹಳ ಯುಕ್ತಿವಂತರೆಂದು ಕೇಳಿದ್ದನು; ಇಲ್ಲಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಇದೊಂದು ಒಳ್ಳೆಯ ಉಪಾಯವನ್ನು ತೆಗೆದೆಯೋ?

ನನ್ನ ಮಾತಿನಲ್ಲಿ ತಮಗೆ ಅಷ್ಟು ಅನುಮಾನವಿದ್ದರೆ ಒಂದು ಕೆಲಸ ಮಾಡೋಣವಾಗಲಿ. ನಾನು ಇಲ್ಲಿಯೇ ಇರುವೆನು; ನಾನು ಹೇಳುವ ಕಡೆಗೆ ತಾವು ಹೋಗಿ ಅಲ್ಲಿರುವ ಧನದಲ್ಲಿ ಐದುಕೋಟಿ ವರಹಗಳನ್ನು ತೆಗೆದುಕೊಂಡು ಮಿಕ್ಕಾದುದನ್ನು ನನಗೆ ಕೊಟ್ಟು ನನ್ನನ್ನು ಸ್ವೇಚ್ಛೆಯಾಗಿ ಬಿಡುವುದಾಗಿ ತಾವು ನನಗೆ ಮಾತುಕೊಟ್ಟರೆ ನಾನು ಆ ಸ್ಥಳವನ್ನು ಈಗಲೇ ತಿಳಿಸುವೆನು.

ನನ್ನ ಮಾತಿಗೆ ನೀನು ಪ್ರತ್ಯುತ್ತರ ಕೊಡಲೇ ಇಲ್ಲ.

ನನ್ನ ಮಾತಿಗೂ ತಾವು ಪ್ರತ್ಯುತ್ತರ ಕೊಡಲಿಲ್ಲ. ನನ್ನ ದ್ರವ್ಯವು ನಿಮಗೆ ಪ್ರಾಪ್ತಿಯಿಲ್ಲ ; ನಿಮ್ಮಿಂದ ನನ್ನ ವಿಮೋಚನೆಯೂ ಆಗಲಾರದು.

ಹೀಗೆಂದು ಮಾತುಕತೆಗಳು ನಡೆದ ಮೇಲೆ ಕೂಪದ ಬಾಗಿಲ ಬೀಗವಂ ಹಾಕಿಸಿ ಎಲ್ಲರೂ ಮೇಲಕ್ಕೆ ಹೊರಟರು. ಆಗ ವಿಚಾರಕನು ಅಧಿಕಾರಿಯ ಕಡೆಗೆ ತಿರುಗಿ ಇವನು ಇಷ್ಟು ಹಣಗಾರನಾಗಿದ್ದರೆ ಅಧಿಕಾರಿಗಳನ್ನೆಲ್ಲಾ ತನ್ನ ವಶಮಾಡಿಕೊಂಡು ಸುಖವಾಗಿಯೂ ಗೌರವವಾಗಿಯೂ ಇರುತ್ತಿದ್ದನು ಎಂದನು.

ಅವನು ಹೇಳುವ ದ್ರವ್ಯವು ಕನಸಿನ ಗಂಟು. ಹುಚ್ಚನಾದುದರಿಂದ ಅದು ನಿಜವೆಂದು ನಂಬಿರುವನು.

ಭಾಸ್ಕರನು ಧರ್ಮದೇವನಿಗೆ ಮಾತುಕೊಟ್ಟಿದ್ದಂತೆ ಅವನ ಸಂಬಂಧವಾದ ಪತ್ರಗಳನ್ನು ತರಿಸಿ ನೋಡಲು ಅವುಗಳಲ್ಲಿ ಈರೀತಿ ಇದ್ದಿತು:—

"ಧರ್ಮದೇವ—ಇವನು ಏಲಾದ್ವೀಪದ ರಾಕ್ಷಸನ ಆಗಮನಕ್ಕೆ ವಿಶೇಷ ಸಾಹಸ ಮಾಡಿದವನು. ಇವನನ್ನು ಯಾವಜ್ಜೀವವೂ ಸೆರೆಯಲ್ಲಿಟ್ಟು ಬಲು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು."

ಇದನ್ನು ನೋಡಿ ವಿಚಾರಕನು ಆವ ಸಹಾಯವನ್ನೂ ಮಾಡಲಾಗುವುದಿಲ್ಲ ಎಂದು ಅದರ ಕೆಳಗೆ ಬರೆದಿಟ್ಟನು.

ಚಾಲದುರ್ಗಕ್ಕೆ ಬಂದ ಕೆಲವು ದಿವಸಗಳ ಮೇಲೆ ಧರ್ಮದೇವನಿಗೆ ತಿಥಿವಾರಗಳೇ ಗೊತ್ತಾಗುತ್ತಿರಲಿಲ್ಲ. ವಿಚಾರಕನು ಬಂದು ಹೋದ ಮೇಲೆ ಪ್ರತಿಯೊಂದು ದಿನದ ತಿಥಿಯನ್ನು ಗೋಡೆಯ ಮೇಲೆ ಗುರುತು ಹಚ್ಚುತ ಬಂದನು. ದಿವಸಗಳು ಒಂದೊಂದಾಗಿ ಕಳೆಯುತ್ತ ಬಂದುವು; ವಾರಗಳೂ ಕಳೆದುವು; ತಿಂಗಳುಗಳೂ ಆದುವು; ತನ್ನ ವಿಮೋಚನೆಯ ಪ್ರಸ್ತಾಪವೇ ಕಾಣಲಿಲ್ಲ. ಇದಕ್ಕೆ ಕಾರಣವೇನೆಂದು ಯೋಚಿಸಿ, ವಿಚಾರಕನು ವಲ್ಲಭದೇವನನ್ನು ಬಹುಶಃ ಇನ್ನೂ ನೋಡಿರಲಾರನು ; ಒಂದು ವೇಳೆ ನೋಡಿದ್ದರೂ ಇದು ರಾಜನಿಗೆ ತಿಳಿಸಿ ಮಾಡತಕ್ಕಕಾರ್ಯವಾದುದರಿಂದ ಸಾವಕಾಶವಾಗ ಬಹುದೆಂದು ಧರ್ಮದೇವನು ಸುಮ್ಮನಾದನು. ಕೊನೆಗೆ ವರ್ಷವೂ ಕಳೆಯಿತು ;

ಆದರೂ ಏನೂ ಆಗದೆ ಆ ವಿಚಾರಕನು ಅಲ್ಲಿಗೆ ಬಂದಿದ್ದುದೂ ಅವನು ಹೇಳಿದ ಮಾತು ಗಳೂ ಅವನಿಗೆ ಕನಸು ಕಂಡಂತಾಗಿ ಹೋಯಿತು.

ಈ ಮಧ್ಯೆ ಚಾಲದುರ್ಗದ ಅಧಿಕಾರಿಗೆ ಬೇರೆ ಕಡೆಗೆ ವರ್ಗವಾದುದರಿಂದ ಅಲ್ಲಿಗೆ ಬಂದ ಹೊಸ ಅಧಿಕಾರಿಗೆ ಬಂದಿವಾನರ ಹೆಸರುಗಳನ್ನು ಜ್ಞಾಪಕದಲ್ಲಿಡುವುದು ಅತಿ ಕಷ್ಟವಾಗಿ ತೋರಿತು. ಅವನು ಪ್ರತಿಯೊಂದು ಕೊಟ್ಟಡಿಗೂ ಒಂದು ಸಂಖ್ಯೆಯನ್ನು ಹಾಕಿಸಿ ಆಯಾಯ ಕೊಟ್ಟಡಿಯಲ್ಲಿರುವನಿಗೆ ಆಯಾಯ ಸಂಖ್ಯೆಯೇ ಸಂಕೇತನಾಮ ವಾಗಿರಬೇಕೆಂದು ಅಪ್ಪಣೆಯಂ ಮಾಡಿದನು. ಅದು ಮೊದಲು ಧರ್ಮದೇವನೆಂಬ ಹೆಸರೂ ಕೂಡ ಅಳಸಿಹೋಗಿ ೩೪ ಎಂಬ ಸಂಖ್ಯೆಯೇ ಅವನ ಸಂಕೇತನಾಮವಾ ಯಿತು. ದೈವವಿಲಾಸವನ್ನು ಏನೆಂದು ಹೇಳೋಣ !

ಧರ್ಮದೇವನು ಕಾರಾಗೃಹದಲ್ಲಿ ಅನುಭವಿಸಬೇಕಾದ ಎಲ್ಲಾ ಯಾತನೆಗಳನ್ನು ಅನುಭವಿಸಿದನು. ನಾನು ನಿರಪರಾಧಿ, ನನ್ನನ್ನು ಜಾಗ್ರತೆಯಾಗಿ ಇಲ್ಲಿಂದ ಬಿಟ್ಟೇ ಬಿಡಬೇಕು. ಎಂದು ಮೊದಲು ಮೊದಲು ಅವನಿಗೆ ಸ್ವಲ್ಪ ಕೆಚ್ಚಿದ್ದಿತು; ಆ ಮೇಲೆ ಅಹಂಕಾರವು ಉಡಿಗಿ ಹೋಗಿ ಮನುಷ್ಯರನ್ನು ನಮ್ರೀಭಾವದಿಂದ ಪ್ರಾರ್ಥಿಸತೊಡಗಿ ದನು; ಅದರಿಂದಲೂ ಆಶಾಪೂರ್ತಿಯಾಗದಿದ್ದುದರಿಂದ ಕೊನೆಗೆ " ಸಂಕಟ ಬಂದರೆ ವೆಂಕಟರಮಣ " ಎಂಬಂತೆ ಭಗವಂತನಲ್ಲಿ ಮೊರೆಯಿಡಲಾರಂಭಿಸಿದನು.

ಲೋಕದಲ್ಲಿ ದೈವಸಹಾಯವಿಲ್ಲದೆ ಕಾರ್ಯಸಾಧನೆಯಾಗದೆಂಬ ಜ್ಞಾನವು ಪ್ರಾಯಶಃ ಜನಗಳಲ್ಲಿ ಇರುವುದಿಲ್ಲ; ನಮ್ಮ ಬುದ್ಧಿಚಾತುರ್ಯದಿಂದ ಅವ ಕೆಲಸವನ್ನಾ ದರೂ ಮಾಡಿಕೊಳ್ಳಬಲ್ಲೆವೆಂಬ ದುರಭಿಮಾನವು ಇರುವುದು. ಕೆಲಸವು ಕೈಗೂಡಿದರೆ ಆಹಾ ! ನಾನೆಷ್ಟು ಬುದ್ಧಿವಂತನೆಂದು ತಮ್ಮನ್ನು ತಾವೇ ಕೊಂಡಾಡಿಕೊಂಡು ಇತರ ರಲ್ಲಿ ಬಡಾಯಿಯನ್ನು ಕೊಚ್ಚಿಕೊಳ್ಳುವರು. ಕೆಲಸವಾಗದಿದ್ದರೆ ಅವರಿವರ ಮೇಲೆ ತಪ್ಪುಹಾಕಿ ಬಯ್ಯುವರು. ತಮ್ಮ ಬುದ್ಧಿಯಿಂದಲೇ ಕಾರ್ಯವು ಕೈಗೂಡದೆಂದು ತಿಳಿದ ಬಳಿಕ ಇಂಥವರನ್ನು ಆಶ್ರಯಿಸಿದರೆ ತಮ್ಮ ಕೆಲಸವಾದೀತೆಂದು ನಂಬಿ ಅಂಥವರನ್ನೂ ಅವರ ಪರಿವಾರವನ್ನೂ ಆಶ್ರಯಿಸಿ ಅವರ ಒಳ ನಿಹೀನವಾದ ಸೇವಾವೃತ್ತಿಯನ್ನು ಮಾಡುವರು. ಅದರಿಂದಲೂ ಕೆಲಸವಾಗದಿದ್ದರೆ ಕೊನೆಗೆ ದೇವರಲ್ಲಿ ಮೊರೆಯಿಡು ವರು. ಆವ ಉಪಾಯದಿಂದಲೂ ತನ್ನ ಕಾರ್ಯವಾಗದೆ ಇದ್ದುದರಿಂದ ಧರ್ಮದೇವನು

ಕೊನೆಕೊನೆಗೆ ದೇವರೇ ಗತಿಯೆಂದು ನಂಬಿ, ತಾನು ಚಿಕ್ಕವಯಸ್ಸಿನಲ್ಲಿ ಕಲಿತುಕೊಂಡಿದ್ದ ಸ್ತೋತ್ರಗಳನ್ನು ಜ್ಞಾಪಿಸಿಕೊಂಡು ಅವುಗಳನ್ನು ಪ್ರತಿನಿತ್ಯವೂ ಭಕ್ತಿಯುಕ್ತನಾಗಿ ಹೇಳುತ್ತ ಬಂದನು. ಒಳ್ಳೆಯ ಸ್ಥಿತಿಯಲ್ಲಿ ತಾನಿರುವಾಗ ಇವುಗಳನ್ನೇ ಎಷ್ಟೋಸಾರಿ ಹೇಳುತ್ತಲಿದ್ದನು; ಆದರೂ ಅರ್ಥ ಚೆನ್ನಾಗಿ ತೋರುತ್ತಿರಲಿಲ್ಲ. ಈಗ ಅವನಿಗೆ ಸ್ತೋತ್ರಾರ್ಥಗಳು ಸ್ಪಷ್ಟವಾಗಿ ತೋರಿಬರುತ್ತಲಿದ್ದುವು.

ಲೋಕದಲ್ಲಿ ಅರಿಗಾದರೂ ಸರಿಯೆ ವಿದ್ದೆ ಬುದ್ಧಿಗಳು ಎಷ್ಟಿದ್ದರೂ, ವಿವೇಕವಿಲ್ಲದಿದ್ದರೆ ಭಗೆವದ್ಭಾಗವತರಲ್ಲಿ ಶ್ರದ್ಧಾಭಕ್ತಿಗಳು ಇರುವುದಿಲ್ಲ. ಧರ್ಮದೇವನು ಬುದ್ಧಿಮಂತನು; ಆದರೆ ವಿದ್ವೆಬಾರದು. ಆದುದರಿಂದಲೇ ತನಗೆ ಬೇಕಾದ ವೇಳೆಯಲ್ಲಿ ದೈವಸಹಾಯವು ದೊರೆಯಲಿಲ್ಲವೆಂದು ಅವನಿಗೆ ಕೋಪವು ಹುಟ್ಟಿತು. ವಿಚಾರಣೆಯ ಕಾಲದಲ್ಲಿ ವಲ್ಲಭದೇವನು ತೋರಿಸಿದ ಕಾಗದದಲ್ಲಿ ಪ್ರತಿಯೊಂದು ಮಾತನ್ನೂ ಜ್ಞಾಪಿಸಿಕೊಂಡು ತನ್ನ ಈ ವಿಪತ್ತಿಗೆ ಕಾರಣಭೂತರಾದ ದುರಾತ್ಮರನ್ನೆಲ್ಲಾ ಅತಿಕ್ರೂರವಾಗಿ ಹಿಂಸಿಸದೆ ಬಿಡೆನೆಂದು ಶಪಥಮಾಡಿಕೊಂಡನು.

ದಿನಗಳು ಕಳೆದ ಹಾಗೆಲ್ಲಾ ಧರ್ಮದೇವನ ಮನೋವ್ಯಥೆಯು ಹೆಚ್ಚುತ್ತ ಬಂದಿತು. ಈ ಕಾರಾಗೃಹದಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಮನುಷ್ಯಯತ್ನದಿಂದ ಬೇರೆ ಆಗುವುದಿಲ್ಲ, ನನ್ನ ಸಂಕಟಕ್ಕೆ ಮರಣವೇ ಪರಿಹಾರ ಎಂದು ನಿಶ್ಚಯಿಸಿದನು. ಆತ್ಮಹತ್ಯವನ್ನು ಮಾಡಿಕೊಳ್ಳಲು ತನಗೆ ತಿಳಿದಿದ್ದ ಮೂರು ಉಪಾಯಗಳನ್ನೂ ವಿಮರ್ಶಿಸಿ, ಅದರಲ್ಲಿ ನೇಣು ಹಾಕಿಕೊಂಡು ಪ್ರಾಣಬಿಡುವುದು ಹೆಂಗುಸರ ಕೆಲಸ; ಮತ್ತೊಬ್ಬನನ್ನು ಕೊಂದು ಪ್ರಾಣಬಿಡುವುದು ಕ್ರೂರಕೃತ್ಯ; ಆಹಾರವನ್ನು ತ್ಯಜಿಸಿ ಪ್ರಾಣಬಿಡುವುದೇ ಸುಖವಾದುದೆಂದು ನಿಶ್ಚಯಿಸಿಕೊಂಡು, ಅದು ಮೊದಲು ಪ್ರತಿನಿತ್ಯವೂ ಆಹಾರವು ಬಂದ ಕೂಡಲೇ, ಹತ್ತಿರದಲ್ಲಿದ್ದರೆ ಆಸೆಯು ಬಾಧಿಸುವುದೆಂದು ಅದನ್ನು ತೆಗದು ತನ್ನ ಬಿಲದಲ್ಲಿದ್ದ ಕಿಟಕಿಯಿಂದ ಕೈಗೆ ಸಿಕ್ಕದಂತೆ ಬಿಸುಡುತ್ತ ಬಂದನು. ಮೊದಲನೆಯ ದಿನವೇನೂ ತೋರಲಿಲ್ಲ. ಎರಡನೆಯ ದಿವಸ ಹಸಿವಿನಿಂದ ಬಳಲಿದನು. ಮೂರನೆಯ ದಿನ ಕೈಕಾಲುಗಳನ್ನು ಅಲ್ಲಾಡಿಸಲಿಕ್ಕೂ ಶಕ್ತಿಸಾಲದೆ ಹೋಯಿತು. ನಾಲ್ಕನೆಯ ದಿನ ಹೊಟ್ಟೆಯಲ್ಲಿ ಒಂದು ವಿಧವಾದ ನೋವುಂಟಾಯಿತು. ಐದನೆಯ ದಿನ ಅವನಿಗೆ ಅವುದೂ ತೋರದೆ ಅಮಲು ಬಂದಂತೆ ಆಗಿ ಕಣ್ಣು ಮುಚ್ಚಿದರೆ ಸಾವಿರಾರು

ದೀಪಗಳು ಇರುವಂತೆ ತೋರುತ್ತಲಿದ್ದವು. ಆಗ ಮರಣಕಾಲವು ಸಮೀಪಿಸಿತೆಂದು ಅವನು ಸಂತೋಷಪಟ್ಟನು.

ಆ ದಿನ ರಾತ್ರಿ ಸುಮಾರು ಒಂಭತ್ತು ಘಂಟೆಯ ಸಮಯದಲ್ಲಿ ಇವನು ಮಲಗಿದ್ದ ಕಡೆಯ ಗೋಡೆಯ ಒಳಗೆ ಬಂದು ವಿಧವಾದ ಸದ್ದು ಕೇಳಿಸಿತು. ಇವನಿದ್ದ ಬಿಲದಲ್ಲಿ ಎಷ್ಟೋ ಹುಳಹೊಪ್ಪಟ್ಟಿಗಳು ಸದ್ದು ಮಾಡುತ್ತಲಿದ್ದರೂ ಅದರಿಂದ ಇವನಿಗೆ ಒಂದು ದಿನವಾದರೂ ಎಚ್ಚರವಾಗುತ್ತಿರಲಿಲ್ಲ. ಈಗ ಕೇಳಿದ ಶಬ್ದವು ಹಾಗಿರಲಿಲ್ಲ. ಇದು ಬಹುಶಃ ತನ್ನ ವಿಮೋಚನೆಗೆ ಸಹಾಯಕವಾಗಿರಬಹುದೆಂದು ಯೋಚಿಸಿ, ಕೊನೆಗೆ ದೇವರು ತನ್ನ ಪ್ರಾರ್ಥನೆಯನ್ನು ಅಂಗೀಕರಿಸಿದನೆಂದು ಆನಂದಪಟ್ಟನು.

ಸುಮಾರು ಮೂರು ಘಂಟೆಗಳ ಕಾಲ ಹೀಗೆ ಸದ್ದು ಕೇಳುತ್ತಲಿದ್ದಿತು. ಆಮೇಲೆ ಅವುದೋ ಒಂದು ಭಾರವಾದ ಪದಾರ್ಥವು ಧೊಪ್ಪನೆ ಕೆಳಗೆ ಬಿದ್ದ ಸದ್ದೂ ಕೇಳಿಸಿತು. ಬಳಿಕ ಸದ್ದೇ ಆಗಲಿಲ್ಲ. ಧರ್ಮದೇವನಿಗೆ ರಾತ್ರಿಯೆಲ್ಲಾ ನಿದ್ದೆ ಬಾರಲಿಲ್ಲ. ಇದೇ ನಿರಬಹುದು? ತನ್ನಂಥ ದುರದೃಷ್ಟದ ಬಂದಿಯೇನಾದರೂ ಗೋಡೆಯನ್ನು ಕೊರೆಯುವನೋ? ಇಲ್ಲವೇ ಸರ್ಕಾರದವರು ಶಿಥಿಲವಾದ ಗೋಡೆಗಳನ್ನು ಸರಿಮಾಡಿಸುವರೋ? ಸರ್ಕಾರದವರು ಈ ನಿಶೆಯಲ್ಲಿ ಏತಕ್ಕೆ ಕೆಲಸ ಮಾಡಿಸುವರು? ಇದು ಅವರ ಕೆಲಸವಾಗಿರಲಾರದು ಎಂದು ಆಲೋಚನೆ ಮಾಡುತ್ತಾ ಇದ್ದನು. ಅಷ್ಟರಲ್ಲಿಯೇ ಬೆಳಗಾಯಿತು.

---

೮ ದಿನಾಲ್ಕನೆಯ ಅಧ್ಯಾಯ

ಇಂದ್ರಪ್ರಸ್ಥದ ಘನವಿದ್ವಾಂಸ.

ಧರ್ಮದೇವನು ವ್ಯಾಯೋಪವೇಶಮಾಡಿ ಸಾಯಬೇಕೆಂದು ನಿಶ್ಚಯಿಸಿದ್ದುದರಿಂದ ತನ್ನ ಕೂಪಕ್ಕೆ ಬರುತ್ತಲಿದ್ದ ಆಳಿನ ಸಂಗಡ ಒಂದು ಮಾತನ್ನೂ ಆಡುತ್ತಿರಲಿಲ್ಲ; ಅವನು ಕೇಳಿದ ಪ್ರಶ್ನೆಯೊಂದಕ್ಕಾದರೂ ಉತ್ತರವನ್ನು ಕೊಡುತ್ತಿರಲಿಲ್ಲ. ಅವನ ಕಡೆಗೇ ತಿರುಗುತ್ತಿರಲಿಲ್ಲ. ಒಂದೆರಡು ವೇಳೆ ಇವನಿಗೆ ಮೈಯ್ಯು ಸ್ವಸ್ಥವಿಲ್ಲದಿರಬಹುದೆಂದು ಆಳು ಹತ್ತಿರ ಬಂದು ಮಾತನಾಡಿಸಿದಾಗ ಇವನು ತನ್ನ ಪೋರೆಯನ್ನು ಗೋಡೆಯ ಕಡೆಗೆ ತಿರುಗಿಸಿಕೊಳ್ಳುತ್ತಿದ್ದನು.

ಈ ದಿನ ಅಳು ಆಹಾರವನ್ನು ತಂದ ಒಡನೆಯೇ ಧರ್ಮದೇವನು ಅವನ ಸಂಗಡ ವಿಪರೀತವಾಗಿ ಮಾತನಾಡಲು ಆರಂಭಿಸಿದನು. ಇವನು ಇಷ್ಟು ಮಾತನ್ನಾಡುವುದನ್ನು ಕಂಡು, ಅಳು "ಇವನಿಗೆ ಏನಾದರೂ ಸಂದು ಆಗಿರಬಹುದೇನೋ" ಎಂದುಕೊಂಡು ಮಾತನ್ನೂ ಆಡದೆ ತನ್ನ ಕೆಲಸ ಮಾಡಿಕೊಂಡು ಹೊರಟು ಹೋದನು. ನೆನ್ನೆಯ ಒಂದು ರಾತ್ರಿ ಕೇಳುತ್ತಿದ್ದ ಶಬ್ದವು ಒಂದು ವೇಳೆ ಪುನಃ ಪ್ರಾರಂಭವಾಗಿ ಅದು ಎಲ್ಲಿ ಅಳಿನ ಕಿವಿಗೆ ಬಿದ್ದು ಅಧಿಕಾರಿಗಳಿಗೆ ಗೊತ್ತಾಗಿ, ತನ್ನಂತೆ ಅವನೋ ಒಬ್ಬ ಅದೃಷ್ಟ ಹೀನನು ಮಾಡುತಲಿರುವ ಪ್ರಯತ್ನಕ್ಕೆ ಭಂಗವುಂಟಾದೀತೋ ಎಂಬ ಭಯದಿಂದ ಧರ್ಮದೇವನು ಅವನ ಸಂಗಡ ಅಷ್ಟು ಗಟ್ಟಿಯಾಗಿ ಮಾತನಾಡಿದನು. ಅಳಿಗೆ ಇದಾವುದೂ ಗೊತ್ತಾಗಲಿಲ್ಲ.

ನನ್ನಂತೆ ಮತ್ತೊಬ್ಬನು ಮಾಡುತ್ತಲಿರುವ ಪ್ರಯತ್ನವನ್ನು ನಾನೂ ಏತಕ್ಕೆ ಮಾಡ ಬಾರದು? ಸಾಧ್ಯವಾದರೆ ಇಬ್ಬರೂ ಕಲೆತು ಏತಕ್ಕೆ ಒಬ್ಬರಿಗೊಬ್ಬರು ಒತ್ತಾಸೆಮಾಡ ಬಾರದು? ಪ್ರಾಣವೊಂದಿದ್ದರೆ ಅವುದಾದರೂ ಒಂದು ದಿನ ಈ ಕಾರಾಗೃಹವನ್ನು ಬಿಟ್ಟು ಹೊರಗೆ ಹೋಗಬಹುದು. ಪ್ರಾಣವನ್ನು ಕಳೆದುಕೊಂಡರೆ ದೈವಸಹಾ ಯವೂ ತಪ್ಪಿ ಹೋಗುವುದು. "ಏತಿ ಜೀವಂತಮಾನಂದೋ ನರಂ ವರ್ಷಶತಾದಪಿ" ಎಂದು ಹಿರಿಯರು ಹೇಳುವರಲ್ಲವೇ? ಆದುದರಿಂದ ಪ್ರಾಣವನ್ನು ಹೇಗಾದರೂ ಕಾಪಿ ಟ್ಟುಕೊಳ್ಳಬೇಕು ಎಂದು ಯೋಚಿಸಿ, ಧರ್ಮದೇವನು ಆ ದಿನ ತಂದಿಟ್ಟಿದ್ದ ಆಹಾರವನ್ನು ಒಂದೇ ತುತ್ತಾಗಿ ಬಾಯಿಗೆ ಹಾಕಿಕೊಳ್ಳುವುದರಲ್ಲಿದ್ದು, ಅಷ್ಟರಲ್ಲಿಯೇ ಸಮುದ್ರದಲ್ಲಿ ಅನೇಕದಿನ ಆಹಾರ ಸಿಕ್ಕದಿದ್ದು, ಸಿಕ್ಕಿದ ವೇಳೆಯಲ್ಲಿ ಅತ್ಯಾತುರದಿಂದ ಮಿತಮೀರಿ ತಿಂದು ಸತ್ತ ನಾವಿಕರ ವಿಷಯಗಳನ್ನು ಜ್ಞಾಪಕಕ್ಕೆ ತಂದುಕೊಂಡು, ಸ್ವಲ್ಪಸ್ವಲ್ಪವಾಗಿ ತಿನ್ನುತ್ತ ಮೆಲ್ಲಮೆಲ್ಲಗೆ ತಿರುಗಾಡುತ್ತ ಆ ದಿನವನ್ನು ಕಳೆದನು.

ಇವನಿಗೆ ಆ ರಾತ್ರಿ ಮಲಗಿದ ಕೂಡಲೆ ನಿದ್ದೆಯು ಬಂದಿತು. ಹಿಂದಿನ ರಾತ್ರಿ ತನ್ನ ಮಂಚದ ಪಕ್ಕದ ಗೋಡೆಯಲ್ಲಿ ಕೇಳಿಸಿದ ಶಬ್ದವು ಪುನಃ ಯಾವಾಗ ಪ್ರಾರಂಭ ವಾಗುವುದೋ ಎಂದು ಯೋಚಿಸುತ್ತ ಮಲಗಿದನಾದಕಾರಣ ರಾತ್ರಿ ಸುಮಾರು ಹನ್ನೊಂದು ಗಂಟೆಯ ಹೊತ್ತಿನಲ್ಲಿ ಗೋಡೆಯಬಳಿ ಸದ್ದಾದ. ಕೂಡಲೇ ಇವನಿಗೆ ಎಚ್ಚರ ವಾಯಿತು. ಆಗ ಎದ್ದು ಕಿವಿಗೊಟ್ಟು ಕೇಳಲು, ಕಲ್ಲುಗಳು ಸಡಿಲ ಮೆಲ್ಲಗೆ ಬೀಳು

ವಂತೆಯೂ ತನ್ನ ಕೂಪದ ಹತ್ತಿರದಲ್ಲಿಯೇ ಸದ್ದಾಗುವಂತೆಯೂ ತೋರಿದುದರಿಂದ, ಈ ಕಡೆಯಿಂದ ನಾನೂ ಗೋಡೆಯನ್ನು ಕೊರೆಯುತ್ತ ಹೋದರೆ ಇಬ್ಬರೂ ಸೇರಿ ತಪ್ಪಿಸಿಕೊಂಡು ಹೋಗುವ ಉಪಾಯಗಳನ್ನು ಮಾಡಬಹುದು. ಅಂದರೆ ಆವ ಆಯುಧವೂ ಇಲ್ಲದೆ ಕೆಲಸವನ್ನು ಹೇಗೆ ಮಾಡುವುದು ಎಂದು ರಾತ್ರಿಯೆಲ್ಲಾ ಯೋಚಿಸುತ್ತಾ ಅವುದೂ ಒಗೆಹರಿಯದಿದ್ದನು.

ಮುಂಜಾನೆ ಎದ್ದು ಗೋಡೆಯನ್ನು ಸವರಿನೋಡಿ ಸಂದುಗಾರೆಯು ತೇವವಾಗಿರುವುದನ್ನು ಕಂಡು ತನ್ನ ಉಗುರುಗಳಿಂದ ಕೆರೆಯಲು ಯತ್ನಪಟ್ಟನು; ಅದು ಸಾಧ್ಯವಾಗಲಿಲ್ಲ. ಮಂಚದಲ್ಲಿ ಕಬ್ಬಿಣದ ಕಂಬಿಗಳಿದ್ದರೆ ಅವುಗಳಲ್ಲಿ ಒಂದನ್ನು ಕಿತ್ತು ಉಪಯೋಗಿಸೋಣವೆಂದು ನೋಡಿದನು; ಮಂಚಕ್ಕೆ ಕಬ್ಬಿಣದ ಕಂಬಿಯನ್ನೇ ಹಾಕಿರಲಿಲ್ಲ. ಬಾಗಿಲ ಕಿಂಡಿಗೆ ಹಾಕಿದ್ದ ಸಲಾಕಿಗಳನ್ನು ಕೀಳಲು ನೋಡಿ ಅದು ಸಾಧ್ಯವಾಗದೆ ಬಿಟ್ಟುಬಿಟ್ಟನು. ತನ್ನ ಪ್ರಯತ್ನವು ಆವ ವಿಧದಲ್ಲೂ ಫಲಿಸಲಿಲ್ಲವಲ್ಲಾ ಎಂದು ಖಿನ್ನನಾಗಿ, ಅಯ್ಯೋ ದೇವರೇ! ನಾನೇನ ಮಾಡಲಿ, ನನಗೇನು ಗತಿ? ಎಂದು ಕೂಗಿಕೊಂಡು ತಾನು ಆಹಾರಗಳನ್ನು ಇಟ್ಟುಕೊಳ್ಳುವ ದಪ್ಪ ಗಾಜಿನ ತಟ್ಟೆಯು ಈ ಕೆಲಸಕ್ಕೆ ಉಪಯೋಗವಾಗಬಹುದೆಂದು ನೆನೆದು ಅದನ್ನು ಒಡೆದು ಹಾಕಿ ತನಗನುಕೂಲವಾದ ಕೆಲವು ಚೂರುಗಳನ್ನು ಒಂದು ಮೂಲೆಯಲ್ಲಿ ಬಚ್ಚಿಟ್ಟನು.

ತನಗೆ ಆಹಾರವು ಬರುವ ವೇಳೆಗೆ ಸರಿಯಾಗಿ ಧರ್ಮದೇವನು ಮಂಚದ ಮೇಲೆ ಮಲಗಿದ್ದನು. ಆಹಾರವನ್ನು ತಂದ ಆಳು ತಟ್ಟೆಯು ಚೂರುಚೂರಾಗಿರುವುದನ್ನು ಕಂಡು ಏತಕ್ಕೆ ಇದನ್ನು ಒಡೆದೆ ಎಂದು ಕೇಳಲು, ಧರ್ಮದೇವನು ಅಯ್ಯಾ, ಕೈತಪ್ಪಿ ಬಿದ್ದು ಒಡೆದು ಹೋಯಿತು ಎಂದನು. ಇನ್ನೊಂದು ತಟ್ಟೆಯನ್ನು ತಂದಿಟ್ಟರೆ ಅದನ್ನೂ ಹೀಗೆಯೇ ಮಾಡುತ್ತೀಯೋ ಏನೋ? ನಿನಗೆ ಈ ಮರದ ತಟ್ಟೆಯೇ ಸರಿ ಎಂದು ತಾನು ಆಹಾರವನ್ನು ತಂದಿದ್ದ ಕಬ್ಬಿಣದ ಕೈಪಿಡಿ ಹಾಕಿದ್ದ ಮರದ ತಟ್ಟೆಯನ್ನು ಆಹಾರ ಸಮೇತ ಅಲ್ಲಿಟ್ಟು ಬಾಗಿಲನ್ನು ಮುಚ್ಚಿಕೊಂಡು ಹೊರಟುಹೋದನು.

ಅದನ್ನು ಕಂಡು ನಾನು ಒಂದು ಆಯುಧಕ್ಕಾಗಿ ಪ್ರಯತ್ನ ಮಾಡಿದೆನು, ಎರಡು ಆಯುಧಗಳು ದೊರಕಿದವು. ಸಂದು ಗಾರೆಯನ್ನು ಗೀರುವುದಕ್ಕೆ ತಟ್ಟೆಯ ಚೂರುಗಳೂ, ಕಲ್ಲುಗಳನ್ನು ಮೀಟುವುದಕ್ಕೆ ಕಬ್ಬಿಣದ ಕಂಬಿಯೂ ಆಯಿತು. ಇದು ದೈವ

ಕೃಪೆಯಲ್ಲದೆ ಬೇರೆ ಆಲ್ಲವೆಂದು ಭಾವಿಸಿ ಸಂತೋಷದಿಂದ ದೇವರನ್ನು ಬಹುವಿಧವಾಗಿ ಸ್ತುತಿಸಿದನು.

ಊಟವಾದ ಮೇಲೆ ತಾನು ಇಂಧ ಕಡೆಯಲ್ಲಿ ಕೊರೆದಿರುವೆನೆಂದು ಒಬ್ಬರಿಗೂ ಕಾಣದೆ ಇರುವ ಸ್ಥಳವನ್ನು ಹುಡುಕಿ, ಕೊನೆಗೆ ತನ್ನ ಮಂಚದ ಕೆಳಗಡೆಯೇ ಸರಿಯಾದ ಕಡೆ ಎಂದು ನಿಶ್ಚಯಿಸಿ, ಒಡನೆಯೇ ಕೆಲಸ ಮಾಡಲು ಪ್ರಾರಂಭಿಸಿ ಸಂಜೆಯ ವೇಳೆಗೆ ಸುಮಾರು ಹತ್ತು ಬೊಗಸೆಯಷ್ಟು ಗಾರೆಯನ್ನು ತೆಗೆದು ಗೋಡೆಯ ಒಂದು ಕಲ್ಲನ್ನು ಕದಲಿಸಿ, ಆಳು ಬರುವುದರೊಳಗಾಗಿ ಅದೆಲ್ಲವನ್ನೂ ತನ್ನ ಕೂಪದ ಮೂಲೆಯಲ್ಲಿದ್ದ ಒಂದು ಹಳ್ಳದಲ್ಲಿ ಹಾಕಿ, ಅದರ ಮೇಲೆ ಅಷ್ಟು ಮಣ್ಣನ್ನು ಎರಚಿ, ಗೋಡೆಯಲ್ಲಿ ರಂಧ್ರವು ಕಾಣದಂತೆ ಆ ಕಲ್ಲನ್ನು ಅದರ ಸ್ಥಾನದಲ್ಲಿಯೇ ಇಟ್ಟನು.

ಇವನು ಇತ್ತ ಕೆಲಸವನ್ನು ಪ್ರಾರಂಭಿಸಿದೊಡನೆಯೇ ಆ ಕಡೆಯವನು ತನ್ನ ಕೆಲಸವನ್ನು ನಿಲ್ಲಿಸಿರಬೇಕೆಂದು ಯೋಚಿಸಿ, ಅವನು ನನ್ನಲ್ಲಿಗೆ ಬರಲು ಅನುಮಾನ ಪಟ್ಟರೆ ನಾನು ಅವನಲ್ಲಿಗೆ ಹೋಗುವುದೇ ಸರಿ ಎಂದು ನಿಶ್ಚಯಿಸಿದನು.

ಆಳು ರಾತ್ರಿಯು ತಿಂಡಿಯನ್ನು ತಂದಿಟ್ಟು ಹೋದಬಳಿಕ ಧರ್ಮದೇವನು ಜಾಗ್ರತೆಯಾಗಿ ತಿಂದು ಪುನಃ ಕೆಲಸವನ್ನು ಪ್ರಾರಂಭಮಾಡಿ ನಾಲ್ಕೈದು ಕಲ್ಲುಗಳನ್ನು ಕಿತ್ತು ನೋಡಲು, ದೊಡ್ಡ ಮರದ ದೂಲವೊಂದು ಅಡ್ಡಲಾಗಿ ಸಿಕ್ಕಿತು. ಅದನ್ನು ಕಂಡು ಧರ್ಮದೇವನು ಧೈರ್ಯಗೆಟ್ಟು, ಅಯ್ಯೋ ದೇವರೇ! ನಾನು ಇದುವರೆಗೂ ಕಷ್ಟಪಟ್ಟು ಮಾಡಿದ ಕೆಲಸವು ವ್ಯರ್ಥವಾಯಿತಲ್ಲಾ! ನನ್ನ ವಿಮೋಚನೆಯನ್ನು ತಪ್ಪಿಸಿ, ನಾನು ಪ್ರಾಣಬಿಡಬೇಕೆಂದಿದ್ದುನ್ನೂ ತಪ್ಪಿಸಿ, ಜೀವವನ್ನು ಕಾಪಿಟ್ಟುಕೊಳ್ಳಬೇಕೆಂಬ ಬುದ್ಧಿಯನ್ನು ಹುಟ್ಟಿಸಿ, ಕೊನೆಗೆ ಈ ಕೂಪದಲ್ಲಿ ಸಾಯುವಂತೆ ನನ್ನನ್ನು ಕೈಬಿಟ್ಟೆಯಾ ಎಂದು ಗಟ್ಟಿಯಾಗಿ ಅತ್ತನು. ಆಗ ದೇವರನ್ನು ನಂಬಿ ನಿರಾಶನಾದವನಾರು ಎಂದು ಪಾತಾಳದಿಂದ ಆರೋ ಹೇಳಿದಂತೆ ಕೇಳಿ, ಧರ್ಮದೇವನಿಗೆ ಮೆಯ್ಯೆಲ್ಲ ಜುಮ್ಮೆಂದಿತು.

ಇದೇನು? ಇಲ್ಲಿ ಯಾರೋ ಮಾತನಾಡುವಂತಿದೆಯೆಂದು ಅವನಿಗೆ ಬಹು ಆಶ್ಚರ್ಯವಾಯಿತು. ಬಂದಿಶಾಲೆಯ ಆಳಿನ ಸಂಗಡ ಅವನು ಆಗಾಗ್ಗೆ ಮಾತನಾಡುತ್ತಲಿದ್ದರೂ,

ಬಂದಿಗಳು ಅಳುಗಳನ್ನು ಅಸ್ಥಿಮಾಂಸ ಚರ್ಮಗಳಿಂದ ಮೂಡಿದ ಬಲವಾದ ಬಾಗಿಲುಗಳೆಂದು ಎಣಿಸುವರೇ ಹೊರತು ಮನುಷ್ಯರೆಂದು ಎಣಿಸುವುದಿಲ್ಲ.

ಪಾತಾಳದಿಂದ ಮಾತನಾಡುವ ಈ ಧ್ವನಿಯನ್ನು ಕೇಳಿದರೆ ನನಗೆ ಹೆದರಿಕೆಯಾಗುವುದು; ಆದರೂ ಚಿಂತೆಯಿಲ್ಲ, ಮಾತನಾಡಿ ನೋಡೋಣ ಎಂದು ಯೋಚಿಸಿ, ಧರ್ಮದೇವನು ಅಯ್ಯಾ, ನೀನಾರು ಎಂದು ಕೇಳಿದನು.

ನೀನಾರು ಎಂದು ಅವನೂ ಕೇಳಿದನು.

ನಾನು ಒಬ್ಬ ಅದೃಷ್ಟಹೀನನಾದ ಬಂದಿ.

ನಿನ್ನದು ಆವ ದೇಶ? "ಅಮರದೇಶ."

ನಿನ್ನ ವೃತ್ತಿಯೇನು? "ನಾವಿಕನು."

ನೀನಿಲ್ಲಿಗೆ ಬಂದು ಎಷ್ಟು ದಿವಸಗಳಾದುವು?

ನಾನು ಪರೀಧಾವಿಸಂವತ್ಸರದ ಚೈತ್ರಶುಕ್ಲದಶಮಿಯ ದಿನ ಬಂದೆನು.

ನೀನಾವ ತಪ್ಪನ್ನು ಮಾಡಿದೆ?

ನಾನು ಆವ ತಪ್ಪನ್ನೂ ಮಾಡಲಿಲ್ಲ.

ಸರ್ಕಾರದವರು ಹೇಳುವುದೇನು?

ಚಕ್ರವರ್ತಿಯು ಅಮರದೇಶಕ್ಕೆ ಮರಳಿ ಬರುವುದಕ್ಕೆ ಸಹಾಯಮಾಡಿದೆನೆಂದು.

ಹಾಗಾದರೆ ಚಕ್ರವರ್ತಿಯು ಅಮರದೇಶದಲ್ಲಿಲ್ಲವೋ?

ಇಲ್ಲ; ಅವನನ್ನು ಏಲಾದ್ವೀಪದಲ್ಲಿಟ್ಟಿರುವರು. ಇದು ನಿನಗೆ ತಿಳಿಯದೆ ಇರುವುದನ್ನು ನೋಡಿದರೆ ನೀನು ಬಹಳ ದಿವಸಗಳಿಂದ ಇಲ್ಲಿರುವಂತೆ ತೋರುತ್ತದೆ.

ನಾನು ಇಲ್ಲಿಗೆ ಬಂದು ಹದಿನಾರು ವರ್ಷಗಳಾದವು.

ಇವನು ತನಗಿಂತಲೂ ಹೆಚ್ಚಾಗಿ ನಾಲ್ಕು ವರ್ಷಗಳು ಇಲ್ಲಿ ಇದ್ದಾನಲ್ಲಾ ಎಂದು ಧರ್ಮದೇವನು ಗಡಗಡನೆ ನಡುಗಿದನು.

ನಿನ್ನ ಕೊಟ್ಟಡಿಗೆ ಎಷ್ಟು ಎತ್ತರದಲ್ಲಿ ರಂಧ್ರವನ್ನು ಮಾಡಿರುವೆ ಎಂದು ಕೆಳಗಿನ ಕೂಪದವನು ಕೇಳಲು, ಧರ್ಮದೇವನು ನೆಲಮಟ್ಟಕ್ಕೆ ಸರಿಯಾಗಿ ಮಾಡಿರುವೆನು ಎಂದನು.

ರಂಧ್ರವನ್ನು ಹೇಗೆ ಮುಚ್ಚಿರುವೆ?

ಅದರ ಬಾಯಿಗೆ ಮೊದಲಿದ್ದ ಕಲ್ಲನ್ನೇ ಮುಚ್ಚಿ ಮಲಗುವ ಮಂಚವನ್ನು ಮರೆಯಾಗಿಟ್ಟಿರುವೆನು.

ಅದು ಸರಿ. ನಿನ್ನ ಕೂಪಕ್ಕೆ ಅಕಡೆ ಏನಿರುವುದು?

"ಗೂಢಪಥ." ಅದರ ಆಚೆಗೆ? "ಅಂಗಳ."

ಅಯ್ಯೋ! ಎಂದು ಕೆಳಗಿನ ಕೂಪದವನು ಹೇಳಲು ಇವನು ಏತಕ್ಕೆ ಸಂಕಟ? ವೆಂದು ಕೇಳಿದನು.

ತಪ್ಪುತಿಳುವಳಿಕೆಯಿಂದ ಕೆಲಸವೆಲ್ಲಾ ಕೆಟ್ಟು ಹೋಯಿತು. ನಿನ್ನ ಕೂಪದ ಗೋಡೆಯನ್ನೇ ಈ ಬಂದಿಶಾಲೆಗೆ ಸಮುದ್ರದ ಒತ್ತಿನ ಹೊರಗೋಡೆಯೆಂದು ತಿಳಿದಿದ್ದೆ. ನನ್ನ ಪ್ರಯತ್ನವೆಲ್ಲಾ ಅಸಾರ್ಥಕವಾಯಿತು.

ಒಂದು ವೇಳೆ ಇದೇ ಸಮುದ್ರದ ಒತ್ತಿನ ಹೊರಗೋಡೆಯಾಗಿದ್ದಿದ್ದರೆ ಏನು ಮಾಡುತ್ತಲಿದ್ದೆ?

ಸಮುದ್ರದಲ್ಲಿ ದುಮ್ಮಿಕ್ಕಿ ಈಸುತ್ತ, ಸಮೀಪದಲ್ಲಿರುವ ಅವುದೋ ಒಂದು ದ್ವೀಪವನ್ನು ಸೇರಿ, ಮುಂದೆ ಹೇಗಾದರೂ ಅವ ದೇಶವನ್ನಾದರೂ ಸೇರಿ ಜೀವಿಸಬೇಕೆಂದಿದೆ

ಅಷ್ಟು ದೂರ ಈಸಲು ಸಾಧ್ಯವೋ?

ದೈವಸಹಾಯವಿದ್ದರೆ ಏಕೆ ಆಗಬಾರದು? ಈಗ ನನ್ನ ಆಸೆಯೆಲ್ಲವೂ ಭಂಗವಾಯಿತು.

ಆಸೆಯೆಲ್ಲಾ ಭಂಗವಾಯಿತೋ?

ಅಹುದು. ಆದರೂ ನೋಡೋಣ. ಮುಂದೆ ನಾನು ಹೇಳುವ ವರೆಗೂ ನೀನು ರಂಧ್ರವನ್ನು ಕೊರೆಯ ಬೇಡ.

ಇಲ್ಲ. ನಿನ್ನ ಹೆಸರೇನು?

ನನ್ನ ಸಂಕೇತನಾಮ ಇಪ್ಪತ್ತೇಳು ಎಂದು ಅವನು ನಕ್ಕ ಶಬ್ದವಾಯಿತು. ಈ ರೀತಿ ತನ್ನ ಹೆಸರನ್ನು ಹೇಳಲು ಅನುಮಾನಪಟ್ಟುದನ್ನು ನೋಡಿ, ಅವನು ಮಾಡುವ ಪ್ರಯತ್ನದಲ್ಲಿ ತನ್ನನ್ನು ಸೇರಿಸಿಕೊಳ್ಳಲು ಅವನಿಗೆ ಇಷ್ಟವಿಲ್ಲವೋ ಏನೋ ಎಂದು 'ಧರ್ಮದೇವನಿಗೆ ತೋರಿ, ಅಯ್ಯಾ, ಇದುವರೆಗೆ ನನ್ನ ಸಾಮರ್ಥ್ಯವನ್ನೆಲ್ಲಾ ವೆಚ್ಚಮಾಡಿದೆನು; ಇನ್ನು ಮುಂದೆ ನನ್ನಿಂದಾವುದೂ ಸಾಧ್ಯವಿಲ್ಲ. ನನ್ನನ್ನು ನೀನು

ಕೈಬಿಡುವುದಾದರೆ ನಾನು ತಲೆಯನ್ನು ಚಚ್ಚಿಕೊಂಡು ಪ್ರಾಣವನ್ನು ಬಿಡುವೆನು. ಆ ಪಾಪವು ನಿನ್ನನ್ನೇ ಸೇರುವುದು.

ನಿನ್ನ ಧ್ವನಿಯಿಂದ ನೀನು ಚಿಕ್ಕ ವಯಸ್ಸಿನವನಂತೆ ತೋರುತ್ತಲಿದೆ.

ನನಗೆ ಸುಮಾರು ಮೂವತ್ತು ವಯಸ್ಸಾಗಿರಬಹುದು.

ಇಷ್ಟು ಚಿಕ್ಕ ವಯಸ್ಸಿನಲ್ಲಿ ವಿಶ್ವಾಸಘಾತಕತನವು ಇರುವುದಿಲ್ಲ.

ಅಯ್ಯಾ! ನಾನು ಅರಿಗೂ ಎಂದೂ ಕೆಟ್ಟುದನ್ನು ಯೋಚಿಸಿದವನಲ್ಲ. ನನ್ನನ್ನು ಛಿನ್ನಭಿನ್ನವಾಗಿ ಕತ್ತರಿಸಿದರೂ ನಾನು ವಿಶ್ವಾಸಘಾತುಕನಾಗುವುದಿಲ್ಲ. ಏನು ಪ್ರಮಾಣಬೇಕಾದರೂ ಮಾಡುವೆನು. ನನ್ನನ್ನು ಮಾತ್ರ ನೀನು ಕೈಬಿಡಬೇಡ.

ಈಗ ನೀನು ಈ ಮಾತನ್ನಾಡಿದುದು ಒಳ್ಳೆಯದಾಯಿತು. ಹಾಗಿಲ್ಲದಿದ್ದರೆ ನಾನು ಬೇರೆ ಏರ್ಪಾಡನ್ನು ಮಾಡಬೇಕೆಂದಿದ್ದೆನು. ನೀನು ಹೆದರಬೇಡ.

ಅಯ್ಯಾ! ಸಾಧ್ಯವಾದರೆ ನಾವಿಬ್ಬರೂ ಯತ್ನಪಟ್ಟು ಇಲ್ಲಿಂದ ತಪ್ಪಿಸಿಕೊಂಡು ಹೋಗೋಣ. ಅದು ಆಗದಿದ್ದರೆ ಇಬ್ಬರೂ ಸೇರಿ ಕಾಲಕಳೆಯೋಣ. ನೀನು ದೊಡ್ಡವನಾಗಿದ್ದರೆ ನನ್ನ ತಂದೆಯಂತೆ ಭಾವಿಸುವೆನು; ಇಲ್ಲವಾದರೆ ಸಹೋದರನಂತೆ ಕಾಣುವೆನು.

ಒಳ್ಳೆಯದು; ನಾಳೆಯವರೆಗೂ ಸುಮ್ಮನಿರು.

ಇದುವರೆಗೆ ಒಬ್ಬನೇ ಇದ್ದು ಧರ್ಮದೇವನು ಬೇಸತ್ತಿದ್ದನು. ಈಗ ಮತ್ತೊಬ್ಬನು ಜತೆಗೆ ಸಿಕ್ಕಿದನಲ್ಲಾ ಎಂದು ಸಂತೋಷಪಟ್ಟು, ದೇವರನ್ನು ಸ್ತೋತ್ರಮಾಡಿ, ತಾನು ಅಗೆದಿದ್ದ ಕಲ್ಲುಗಾರೆಗಳನ್ನು ಎತ್ತಿಹಾಕಿ ಮಂಚವನ್ನು ಸರಿಮಾಡಿಕೊಂಡು ಸುಖವಾಗಿ ಮಲಗಿದನು.

ಮರುದಿನ ಬೆಳಿಗ್ಗೆ ಎಂದಿನಂತೆ ಅಳು ತನ್ನ ಕೂಪಕ್ಕೆ ಬಂದಾಗ, ಧರ್ಮದೇವನು ಮಲಗಿದ್ದನು; ಅದನ್ನು ಕಂಡು ಅಳು ಮಾತನ್ನಾಡದೆ ತಿಂಡಿಯನ್ನು ಇಟ್ಟು ಹೋದನು. ಆಮೇಲೆ ಇವನು ಎದ್ದು, ತಿಂಡಿಯನ್ನು ತಿಂದು, ನಿಂತ ಕಡೆ ಉಪವನ್ನು ಸುತ್ತುತ್ತಲಿದ್ದು ನೆರೆಯವನು ಯಾವಾಗ ಮಾತನಾಡುವನೋ ಎಂದು ನಿರೀಕ್ಷಿಸುತ್ತಲಿದ್ದನು. ಆವ ಶಬ್ದವೂ ಕೇಳಿಬರಲಿಲ್ಲ. ಸಾಯಂ ಅಳು ಆಹಾರವನ್ನು ತಂದಿಟ್ಟ ಕಾಲದಲ್ಲಿ ಧರ್ಮದೇವನು ಮಂಚದ

ಮೇಲೆ ಕುಳಿತಿದ್ದನು. ಅವನ ಮುಖವಿಕಾಸವನ್ನೂ ಕಣ್ಣುಗಳ ವಿಶೇಷಕಾಂತಿಯನ್ನೂ ನೋಡಿ ಆಳು ನಿನಗೆ ಪುನಃ ಹುಚ್ಚು ಪಿಡಿಯುವಂತೆ ತೋರುತ್ತದೆ ಎಂದು ಹೇಳಿ ಹೊರಟು ಹೋದನು.

ರಾತ್ರಿಯೆಲ್ಲಾ ನೆರೆಯವನ ಸೊಲ್ಲು ಕೇಳಿಸಲಿಲ್ಲ. ಧರ್ಮದೇವನು ಬೆಳಗಿನ ಜಾವದಲ್ಲೇ ಎದ್ದು ಕೂಪದಲ್ಲಿ ತಿರುಗಾಡುತ್ತಲಿದ್ದನು. ಆಳು ಆಹಾರವನ್ನಿಟ್ಟು ಹೊರಟು ಹೋದ ಮೇಲೆ ಆರೋ ಒಬ್ಬ ಮನುಷ್ಯನು ಸುರಂಗದಿಂದ ತನ್ನ ಬಲಕ್ಕೆ ಬರುವಂತೆ ಸದ್ದಾಯಿತು. ಒಡನೆಯೇ ಮಂಚವನ್ನೆತ್ತಿ ರಂಧ್ರದ ಬಾಯಿಗೆ ಇಟ್ಟಿದ್ದ ಕಲ್ಲನ್ನು ತೆಗೆದು, ನೆಲದ ಮೇಲೆ ತನ್ನ ಎರಡು ಮಂಡಿಗಳನ್ನೂ ಕೈಗಳನ್ನೂ ಊರಿ ಬಗ್ಗಿ ನೋಡುತಲಿರುವಾಗ, ನೀನೆಲ್ಲಿದ್ದೀಯೆ ಎಂದು ಕೇಳಿದಂತಾಯಿತು. ನಾನಿಲ್ಲಿದ್ದೇನೆ ಎಂದು ಹೇಳಿ ಧರ್ಮದೇವನು ರಂಧ್ರವನ್ನು ಚೆನ್ನಾಗಿ ಗುರ್ತಿಸಿ ನೋಡುತ್ತಲಿದ್ದನು.

ಸಿನ್ನ ಆಳು ಬಂದಿದ್ದನೋ ಎಂದು ಕೇಳಿದುದಕೆ, ಧರ್ಮದೇವನು ಹೂ, ಆಗಲೇ ಬಂದಿದ್ದನು ಎಂದು ಹೇಳಲು, ಹಾಗಾದರೆ ಕಲ್ಲನ್ನು ಕೀಳುವೆನು ಎಂದು ಹೇಳಿದ ಒಡನೆಯೇ ಇವನು ಮಾಡಿದ ರಂಧ್ರದಿಂದ ಒಂದು ಕಲ್ಲು ಕುಸಿದುಕೊಂಡಿತು. ಇದೇನೆಂದು ಧರ್ಮದೇವನು ಗಾಬರಿಯಿಂದ ನೋಡುವುದರಲ್ಲಿ, ರಂಧ್ರದಿಂದ ಮೊದಲು ತಲೆ, ಅಮೇಲೆ ಭುಜಗಳು, ಅನಂತರ ಶರೀರ, ಈರೀತಿ ಒಬ್ಬ ಮನುಷ್ಯನು ಈಚೆಗೆ ಬಂದನು. ಹೊರಗೆ ಬರುತಲೆ ಧರ್ಮದೇವನು ಅವನನ್ನು ತಬ್ಬಿಕೊಂಡು ಎತ್ತಿ ಬೆಳಕಿನಲ್ಲಿ ಅವನ ಮುಖವನ್ನು ನೋಡಿ ಆನಂದಪಟ್ಟನು.

ಅವನು ಮಟ್ಟವಾಗಿದ್ದನು. ಕೂದಲು ಬೆಳ್ಳಗಾಗಿದ್ದರೂ ಹೆಚ್ಚಾಗಿ ವಯಸ್ಸಾಗಿದ್ದಂತೆ ತೋರಲಿಲ್ಲ ಅವನ ಮುಖದ ವರ್ಚಸ್ಸೂ, ಕಣ್ಣುಗಳ ಕಾಂತಿಯೂ, ಶರೀರದ ದಾರ್ಢ್ಯವೂ ಲವಲವಿಕೆಯೂ ಪೂರ್ವವಯಸ್ಸನ್ನೇ ಸೂಚಿಸುತ್ತಿದ್ದುವು. ಈಗ ಪಟ್ಟ ಶ್ರಮದಿಂದ ಮುಖವು ಸ್ವಲ್ಪ ಬೆವರಿದ್ದಿತು. ಅವನು ಬರೆಯ ಚಿಂದಿಯನ್ನುಟ್ಟಿದ್ದನು. ಆ ಚಿಂದಿಯನ್ನು ನೋಡಿದರೆ ಅದರ ಪೂರ್ವಾವಸ್ಥೆಯು ಹೀಗಿತ್ತೆಂದು ಊಹಿಸಲು ಕೂಡ ಅಸಾಧ್ಯವಾಗಿದ್ದಿತು.

ಧರ್ಮದೇವನು ತನ್ನನ್ನು ಆದರದೊಡನೆ ಉಪಚರಿಸಿದುದನ್ನು ಕಂಡು ನೆರೆಯವನು

ತೃಪ್ತನಾಗಿ ಅಲ್ಲಿ ಕಲ್ಲು ಕಿತ್ತಿದ್ದುದನ್ನು ನೋಡಿ ನೀನು ಒಹು ಅಜಾಗರೂಕತೆಯಿಂದ ಈ ರಂಧ್ರದ ಬಾಯ ಕಲ್ಲನ್ನು ಕಿತ್ತಹಾಗಿದೆ. ನಿನ್ನಲ್ಲಿ ಆಯುಧಗಳಿಲ್ಲವೋ ಎಂದನು.

ನಿನ್ನಲ್ಲಿ ಇರುವವೋ? "ಕೆಲವನ್ನು ನಾನು ಮಾಡಿಕೊಂಡಿದೇನೆ"

ಹಾಗೆಯೇ! ನಾನು ಅವುಗಳನ್ನು ನೋಡಬೇಕಲ್ಲ.

ಅದಕ್ಕೇನು ಆಗಲಿ. ಇಗೋ ನೋಡು, ಇದು ನನ್ನ ಉಳಿ. ಇದರಿಂದಲೇ ಈ ಐವತ್ತಡಿಯ ಮುಂದವಾದ ಗೋಡೆಯನ್ನು ಕೊರೆದು ಸುರಂಗಮಾಡಿಕೊಂಡು ಬಂದೆನು ಎಂದು ಹೇಳಿ, ಒಂದು ಮರದ ಹಿಡಿ ಹಾಕಿದ್ದ ಕಬ್ಬಿಣದ ಸಲಾಕಿಯನ್ನು ತೋರಿಸಿದನು.

ಅಬ್ಬಬ್ಬಾ, ಇದರಿಂದ ಐವತ್ತಡಿಯ ಮುಂದವಾದ ಈ ಗೋಡೆಯನ್ನು ಕೊರೆದಿರಾ! ಎಂದು ಧರ್ಮದೇವನು ಗಟ್ಟಿಯಾಗಿ ಕೂಗಿಕೊಳ್ಳಲು, ಉಷ್! ಮೆಲ್ಲಗೆ ಮಾತಾಡು; ಇಂಥ ಬಂದಿಶಾಲೆಗಳಲ್ಲಿ ಬಂದಿಗಳು ಏನ ಮಾಡುತ್ತಲಿರುವರೋ ತಿಳಿಯಬೇಕೆಂದು ಅಲ್ಲಲ್ಲೇ ಜನಗಳನ್ನಿಟ್ಟಿರುವರು.

ಈ ಗೋಡೆ ಐವತ್ತಡಿಗಳ ದಪ್ಪವಿದೆಯೇ?

ಅಹುದು. ಈ ಗೋಡೆಯನ್ನೇ ಸಮುದ್ರದ ಪಕ್ಕದಲ್ಲಿರುವ ಹೊರಗಿನ ಗೋಡೆಯೆಂದು ನಾನು ತಿಳಿದುಕೊಂಡಿದ್ದೆ. ನಾನು ಮಾಡಿದ ಲೆಕ್ಕಾಚಾರವು ಸ್ವಲ್ಪ ತಪ್ಪಾಯಿತು; ಅದರಿಂದ ನಿನ್ನ ಕೊಟ್ಟಡಿಗೆ ಸುರಂಗವು ಬಿದ್ದಿತು. ಇದರ ಹೊರಗೇನು ಇರುವುದೋ ನೋಡೋಣ

ಹೀಗೆನ್ನಲು, ಕೂಡಲೇ ಅಲ್ಲಿದ್ದ ಮೇಜನ್ನು ಕಿಟಿಕಿಯ ಕೆಳಗೆ ಎಳೆದು, ಧರ್ಮದೇವನು ಅದರ ಮೇಲೆ ಹತ್ತಿದನು. ಇನ್ನೊಬ್ಬನೂ ಮೇಜಿನ ಮೇಲೆ ಹತ್ತಿ ಧರ್ಮದೇವನ ಹೆಗಲಿನ ಮೇಲೆ ನಿಂತು ಕಿಟಿಕಿಯಿಂದ ನೋಡಲು ಒಂದು ಕಡೆ ಗೂಢಪಥವೂ, ಅದರ ಆಚೆಗೆ ಸಿಪಾಯಿಗಳು ಇರುವ ಅಂಗಳವೂ, ಇನ್ನೊಂದು ಕಡೆ ಅಧಿಕಾರಿಯ ಮನೆಯೂ, ಮತ್ತೊಂದು ಕಡೆ ಬಂಡೆಯೂ ಕಾಣಬಂದುವು. ಅವುಗಳನ್ನು ನೋಡಿ ಅವನು ತಲೆಯನ್ನು ಅಲ್ಲಾಡಿಸುತ ಕೆಳಗೆ ಇಳಿದನು.

ಧರ್ಮದೇವನು ಅವನ ಮುಖವನ್ನೇ ನೋಡುತ್ತಲಿದ್ದು ಅವನು ಶಿರಃಕಂಪನ

ಮಾಡಿದುದನ್ನು ಕಂಡು ಭೀತನಾದನು. ನೆರೆಯವನೂ ಕೂಡ ಇಲ್ಲಿಂದ ತಪ್ಪಿಸಿಕೊಂಡು ಹೋಗುವುದು ಅಸಾಧ್ಯವೆಂದನು.

ಹಾಗಾದರೆ ಗತಿ? "ದೇವರೇ ಗತಿ."

ಇಷ್ಟು ದಿವಸಗಳು ಎಷ್ಟೋ ಸಾಹಸಮಾಡಿ ಅಶಾಭಂಗವಾದರೂ, ಸ್ವಲ್ಪವೂ ವ್ಯಥೆಪಡದೆ, ದೇವರು ಮಾಡಿದಂತಾಗಲಿ ಎಂದು ನೆಮ್ಮದಿಯಾಗಿರುವ ಮಹಾನುಭಾವ ನನ್ನು ನೋಡಿ, ಧರ್ಮದೇವನಿಗೆ ಪರಮಾಶ್ಚರ್ಯವಾಯಿತು.

ಸ್ವಾಮೀ! ನಿಮ್ಮ ಮುಖವರ್ಚಸ್ಸನ್ನೂ ಶಾಂತಿಯನ್ನೂ ನೋಡಿದರೆ ತಾವು ಮಹಾನುಭಾವರೆಂದು ತೋರುತ್ತಿದೆ. ತಾವು ಆರೋ ದಯೆಮಾಡಿ ನನಗೆ ತಿಳಿಸಬೇಕು.

ಅಪ್ಪಾ! ನಾನೊಬ್ಬ ಪರದೇಶಿ; ನನ್ನ ವಿಷಯವನ್ನು ತಿಳಿಯಲು ನಿನಗೆ ಕೌತುಕ ವಿದ್ದರೆ ಹೇಳುವೆನು. ಅದರಿಂದ ನಿನಗೇನೂ ಪ್ರಯೋಜನವಿರಲಾರದು. ನಾನು ನಿನಗೆ ಆವ ಸಹಾಯವನ್ನೂ ಮಾಡಲರಿಯೆನು.

ತಾವು ಹಾಗೆ ಹೇಳಕೂಡದು; ಇನ್ನಾವ ಸಹಾಯವಾಗದಿದ್ದರೂ ತಮ್ಮ ಮನೋ ದಾರ್ಢ್ಯದಿಂದ ನನ್ನನ್ನು ಸಮಾಧಾನಪಡಿಸಿ ಈ ಕಾರಾಗೃಹವಾಸವು ಸಹ್ಯವಾಗುವಂತೆ ಮಾಡಬಹುದು.

ಹಾಗಾದರೆ ಕೇಳು. ನನ್ನನ್ನು ಯೋಗಾನಂದನೆಂದು ಕರೆಯುತ್ತಾರೆ. ಇಂದ್ರ ಪ್ರಸ್ಥವು ನನ ಸ್ಥಳ; ನಾನಿಲ್ಲಿಗೆ ಬಂದು ಹದಿನಾರು ವರ್ಷಗಳಾದುವು. ನಾನಿಲ್ಲಿದ್ದಾಗ ಇಂದ್ರಪ್ರಸ್ಥವು ಅನೇಕ ಪಾಳೆಯಗಾರರ ಪಾಲಾಗಿ ನೆಪಮಾತ್ರಕ್ಕೆ ಅಲ್ಲೊಬ್ಬ ರಾಜ ನಿದ್ದನು. ಅಲ್ಲಿ ಸ್ವರಾಜ್ಯಕಲಹವು ವಿಶೇಷವಾಗಿ, ಜನಗಳಿಗೆ ಕಿರುಕುಳವು ಅಧಿಕವಾ ದುದರಿಂದ, ಅದನ್ನು ಏಕರಾಜಾಧಿಪತ್ಯವನ್ನಾಗಿ ಮಾಡಿ ಅದಕ್ಕೆ ಒಬ್ಬ ಶೂರನಾದ ದೊರೆಯನ್ನು ಏರ್ಪಡಿಸಿದರೆ ಜನಗಳಿಗೆ ನೆಮ್ಮದಿಯೂ ಸುಖವೂ ಉಂಟಾಗುವುದೆಂದು ಒಂದು ಗ್ರಂಥವನ್ನು ಬರೆಯಬೇಕೆಂದಿದ್ದೆನು. ಅದಕ್ಕನುಕೂಲವಾಗಿ, ಅಸಹಾಯ ಶೂರನಾದ ಅಮರರಾಜ್ಯದ ಚಕ್ರವರ್ತಿಗೆ ಒಂದು ಗಂಡು ಮಗು ಹುಟ್ಟಿತೆಂದೂ, ಅದಕ್ಕೆ ಇಂದ್ರಪ್ರಸ್ಥದ ರಾಜನೆಂದು ಆಗಲೇ ನಾಮಕರಣ ಮಾಡಿದನೆಂದೂ ಕೇಳಿ, ನನ್ನ ಕೋರಿಕೆಯು ಕೈಗೂಡಿತೆಂದು ಸಂತೋಷವಾಗಿದ್ದೆನು. ನಾನು ಆ ಪುಸ್ತಕವನ್ನು ಬರೆಯ ಬೇಕೆಂದಿರುವ ಸಮಾಚಾರವು ಇಂದ್ರಪ್ರಸ್ಥದ ಅರಸನಿಗೆ ಹೇಗೋ ತಿಳಿದು ಅವನು

ನನ್ನ ಮೇಲೆ ಕಣ್ಣಿಟ್ಟಿದ್ದನು. ಸ್ವಲ್ಪ ದಿವಸಗಳಲ್ಲಿಯೇ ನಾನು ಪ್ರಯಾಣಮಾಡಬೇಕಾಗಿ ಬಂದಿತು. ಆಗ ರಾಜನಿಗೆ ನನ್ನ ವಿಷಯದಲ್ಲಿ ಹುಟ್ಟಿದ್ದ ಅನುಮಾನವು ಹೆಚ್ಚಿ ನನ್ನನ್ನು ಹಿಡಿದು ಸೆರೆಯಲ್ಲಿಟ್ಟು, ಕೆಲವು ಕಾಲಾನಂತರ ನಾನು ಇಂದ್ರಪ್ರಸ್ಥದ ರಾಜ್ಯದಲ್ಲಿರುವವರೆಗೆ ತನಗೆ ತೊಂದರೆ ತಪ್ಪದೆಂದು ತಿಳಿದು ಅಮರರಾಜ್ಯದ ಅರಸನ ಒಪ್ಪಿಕೆಯಂ ಪಡೆದು ನನ್ನನ್ನು ಇಲ್ಲಿಡಿಸಿದನು. ಚಕ್ರವರ್ತಿಯು ಪರಾಜಿತನಾಗಿ ಏಲಾದ್ವೀಪದಲ್ಲಿರುವ ಸಮಾಚಾರ ನನಗೆ ಗೊತ್ತೇ ಇಲ್ಲ. ಇದನ್ನು ನೋಡಿದರೆ ದೈವಯತ್ನದ ಮುಂದೆ ಮನುಷ್ಯಯತ್ನವು ಸಾಗುವುದಿಲ್ಲವೆಂಬುದು ನಿಜವೆಂದೇ ತೋರುತ್ತಲಿದೆ. ಚಕ್ರವರ್ತಿಯು ರಾಜ್ಯಭ್ರಷ್ಟನಾದುದರಿಂದಲೇ ನಮ್ಮ ರಾಜನು ನನ್ನನ್ನಿಲ್ಲಿರಿಸಿದನು.

ಈಗ ಅಮರದೇಶದರಸನಾರು? "ಜಯಸಿಂಹ."

ಅಯ್ಯೋ ದೇವರೇ! ದೇವೇಂದ್ರನಂತೆ ಬಲಶಾಲಿಯಾಗಿ, ಸೂರ್ಯನಂತೆ ಪರಾಕ್ರಮದಿಂದ ಜ್ವಲಿಸುತ್ತಲಿರುವ ಚಕ್ರವರ್ತಿಯನ್ನು ರಾಜ್ಯಭ್ರಷ್ಟನೆನಿಸಿ ಬಲಹೀನನಾದ ಜಯಸಿಂಹನನ್ನು ಅಮರದೇಶದಲ್ಲಿಯೂ, ಉತ್ತರನಂತೆ ಶತ್ರುಗಳನ್ನು ನೋಡಿ ಓಡುವ ಸೋಮೇಂದ್ರನನ್ನು ಇಂದ್ರಪ್ರಸ್ಥದಲ್ಲಿಯೂ ಇಡುವುದು ನಿನ್ನ ಸಂಕಲ್ಪವೆಂದು ಕಾಣುತ್ತೆ. ಇದು ಅವುದೋ ಒಳ್ಳೆಯದಕ್ಕೇ ಆಗಿರಬೇಕು.

ಈ ರೀತಿ ತನ್ನ ಕಷ್ಟಗಳನ್ನೆಲ್ಲಾ ಮರೆತು ರಾಜ್ಯದ ಮತ್ತು ಜನರ ಸೌಖ್ಯಕ್ಕಾಗಿ ಮರುಗುತ್ತಿರುವ ಆ ಮಹಾತ್ಮನನ್ನು ಕಂಡು ಧರ್ಮದೇವನು ಬೆರಗಾದನು.

ದೇವರೇ! ಹೀಗೆ ನೀನು ಮಾಡುವುದು ಒಳ್ಳೆಯದಕ್ಕಲ್ಲದೆ ಬೇರೆಯಿಲ್ಲ. ರಾಜರು ದುರ್ಬಲರಾದರೆ ಪ್ರಜೆಗಳು ಬಲಿಷ್ಠರಾಗುವರು. ಪ್ರಜೆಗಳು ಬಲಿತರೆ ರಾಜ್ಯವನ್ನು ಒಂದೇ ರೀತಿಗೆ ತಂದು ನಿರಂಕುಶರಾದ ರಾಜರನ್ನು ಓಡಿಸಿ ತಮ್ಮ ಇಷ್ಟಾನುಸಾರವಾಗಿ ಎಲ್ಲ ಕೆಲಸಗಳನ್ನು ನಡೆಯಿಸುವರು ಎಂದು ಹೇಳಿ ಧರ್ಮದೇವನನ್ನು ನೋಡಿ, ನನಗೆ ವಯಸ್ಸಾದುದರಿಂದ ರಾಜ್ಯವು ಆ ಸ್ಥಿತಿಗೆ ಬರುವ ಪರೆಗೆ ಬದುಕಿರಲಾರೆ. ನೀನು ಇನ್ನೂ ಸಣ್ಣವನು; ಅದನ್ನೆಲ್ಲಾ ಮುಂದೆ ನೋಡುವೆ ಎಂದನು.

ಇಲ್ಲಿಂದ ಹೊರಗೆ ಹೋದರಲ್ಲವೇ. ನಾನು ಅವುಗಳನ್ನು ನೋಡುವುದು

ನಿಜವಪ್ಪಾ, ನಿಜ. ಈ ಆಲೋಚನೆಗಳುಂಟಾದಾಗ ಕಾರಾಗೃಹದಲ್ಲಿರುವೆನೆಂಬ ಜ್ಞಾನವೇ ನನಗಿರುವುದಿಲ್ಲ.

ಸ್ವಾಮೀ! ಇಲ್ಲಿ ಅಸ್ಮತ್ಸ್ಥರಾದ ಸನ್ಯಾಸಿಯೊಬ್ಬರು ಇರುವರೆಂದು ಕೇಳಿದ್ದೆನು; ತಾವೇ ಅವರೆಂದು ಕಾಣುತ್ತದೆ.

ಅಸ್ಮತ್ಸ್ಥನೆಂದು ಯಾಕೆ ಮರೆಮಾಡಿ ಹೇಳುವೆ? ಹುಚ್ಚುಹಿಡಿದವನೆಂದು ಸರಿಯಾಗಿ ಹೇಳು.

ಹಾಗೆ ಹೇಳಲು ಸಂಕೋಚವಾಯಿತು.

ಅಹುದಪ್ಪಾ ಅಹುದು. ನಾನೇ ಆ ಹುಚ್ಚು ಸನ್ಯಾಸಿ. ಇಲ್ಲಿರುವವರೆಲ್ಲರೂ ನನ್ನನ್ನು ಹುಚ್ಚನೆಂದು ತಿಳಿದುಕೊಂಡಿದ್ದಾರೆ. ಅದು ಒಂದು ವಿಷಯಕ್ಕೆ ನನಗೆ ಅನುಕೂಲವೇ; ನನ್ನ ಗೋಚಿಗೆ ಆರೂ ಬರುವುದಿಲ್ಲ. ಇಲ್ಲಿರುವವರೆಗೂ ನೆಮ್ಮದಿಯಾಗಿರಬಹುದು.

ತಾವು ಹೀಗೆ ಹೇಳುವುದನ್ನು ನೋಡಿದರೆ ಹೊರಗೆ ಹೋಗುವ ಪ್ರಯತ್ನವನ್ನು ಬಿಟ್ಟಂತೆ ತೋರುತ್ತದೆ.

ಇನ್ನೇನ ಮಾಡಲಿ?

ತಾವು ಹೀಗೆ ಧೈರ್ಯಗೆಡಕೂಡದು. ಬೇರಾವ ಉಪಾಯವನ್ನಾದರೂ ಯೋಚಿಸಿ ಹೇಳಿದರೆ ನಾನು ಅದನ್ನು ಶಿರಸಾವಹಿಸಿ ನಡೆಸುವೆನು.

ಅಪ್ಪಾ! ನಿನಗೆ ಅನುಭವವು ಸಾಲದು. ಈ ರಂಧ್ರವನ್ನು ಮಾಡುವುದಕ್ಕೆ ನಾನು ಎಷ್ಟುದಿವಸ ಕಷ್ಟಪಟ್ಟಿನೋ ನನಗೇ ಗೊತ್ತು. ಆಯುಧಗಳನ್ನು ಮಾಡಿಕೊಳ್ಳುವುದಕ್ಕೆ ಮೂರು ವರ್ಷಗಳು; ರಂಧ್ರವನ್ನು ಕೊರೆಯಲು ಮೂರು ವರ್ಷಗಳು; ಕಲ್ಲು ಮಣ್ಣು ಗಾರೆಗಳನ್ನು ಹೊತ್ತು ನನ್ನ ಕೂಪದಲ್ಲಿದ್ದ ಪಾಳುಬಾವಿಯಲ್ಲಿ ಹಾಕಿದುದು ಸುಮಾರು ಒಂದು ವರ್ಷ ಇಷ್ಟು ದೀರ್ಘಕಾಲ ಶ್ರಮಪಟ್ಟು ಕೈಗೂಡುವುದೆಂದಿದ್ದ ಕಾರ್ಯವು ಕೆಟ್ಟು ಹೋದರೆ, ನಾನು ಇಲ್ಲಿಂದ ಹೊರಡಕೂಡದೆಂದು ದೈವ ಚಿತ್ತದಲ್ಲಿ ಇರುವಂತಿದೆ. ಹಾಗಿರುವಲ್ಲಿ ಮರಳಿ ನಾನೇಕೆ ಪ್ರಯತ್ನಮಾಡಲಿ?

ಯೋಗಾನಂದನ ಕಾರ್ಯವನ್ನೂ, ಆಲೋಚನೆಯನ್ನೂ, ಸಾಹಸವನ್ನೂ ಕೇಳಿ ಧರ್ಮದೇವನು ಬೆರಗಾಗಿ ತಲೆತಗ್ಗಿಸಿಕೊಂಡು ಮೌನವಾಗಿದ್ದನು. ಐವತ್ತಡಿಗಳ ಮಂದವಾದ ಗೋಡೆಯನ್ನು ಕೊರೆದು, ಅಲ್ಲಿಂದ ಸಮುದ್ರಕ್ಕೆ ದುಮ್ಮಿಕ್ಕಿ ಈಸಿಕೊಂಡು ದ್ವೀಪಾಂತರವನ್ನು ಸೇರುವ ಯೋಚನೆಯೂ, ಅದಕ್ಕಾಗಿ ಮಾಡಿದ ಸಾಹಸವೂ

ಧರ್ಮದೇವನಿಗೆ ಬಹಳ ಅದ್ಭುತವಾಗಿ ತೋರಿದುವು. ಈ ತೆರದ ಆಲೋಚನೆಯು ಅವನಿಗೆ ಆವಾಗಲೂ ಹುಟ್ಟಿರಲಿಲ್ಲ. ಇಷ್ಟು ಹೆಚ್ಚು ವಯಸ್ಸಾದವನೇ ಇಂಥ ಸಾಹಸವನ್ನು ಮಾಡಲು ಯತ್ನಪಟ್ಟನೆಂದರೆ ಯೌವನಸ್ಥನಾದ ನಾನು ಅವುದನ್ನು ತಾನೇ ಮಾಡಕೂಡದು? ಕಾಲವೊದಗಿದರೆ ಸರ್ವಪ್ರಯತ್ನವನ್ನೂ ಮಾಡಿಯೇ ನೋಡುವೆನು ಎಂದು ನಿಶ್ಚಯಿಸಿಕೊಂಡನು.

ತಮಗನುಕೂಲವಾದ ಬಂದಾಲೋಚನೆಯನ್ನು ವಿಜ್ಞಾಪಿಸಿಕೊಳ್ಳುವೆನು ಎಂದು ಧರ್ಮದೇವನು ಅನ್ನುತ್ತಲೆ, ಯೋಗಾನಂದನು ಆಶ್ಚರ್ಯಪಟ್ಟು, ಏನು ಹೇಳು ಎಂದನು.

ಇಲ್ಲಿಂದ ಗೂಢಪಥಕ್ಕೆ ರಂಧ್ರಮಾಡಿ ಸಮುದ್ರ ನೋಡುತ್ತಲಿದ್ದು ಅಂಗಳದಲ್ಲಾವಾಗಲೂ ಕಾವಲಿರುವ ಇಬ್ಬರು ಸಿಪಾಯಿಗಳನ್ನು ಕೊಂದು, ಸಮುದ್ರದಲ್ಲಿ ಮುಳುಗಿ, ಸಮೀಪದಲ್ಲಿರುವ ಅವುದಾದರೂ ಒಂದು ದ್ವೀಪವನ್ನು ಸೇರಿದರೆ ಮುಂಡೆ ಎಲ್ಲಾದರೂ ಹೋಗಿ ಜೀವಿಸಬಹುದು. ಇದಕ್ಕೆ ನಮಗೆ ಧೈರ್ಯವೂ ಸಾಹಸವೂ ಬೇಕು. ತಮ್ಮಲ್ಲಿ ಈ ಗುಣಗಳು ಇರುವುದು ನನಗೆ ಇಂದು ತಿಳಿಯಿತು; ನನ್ನಲ್ಲಿ ಇವು ಎಷ್ಟುಮಟ್ಟಿಗೆ ಇವೆಯೋ ಅದನ್ನು ತಮಗೆ ನಾನು ತೋರಿಸುವೆನು.

ನನ್ನ ಧೈರ್ಯವೂ ಸಾಹಸವೂ ಅವ ವಿಧವಾದುದೆಂಬುವುದನ್ನು ನೀನು ಸರಿಯಾಗಿ ತಿಳಿದಿಲ್ಲ; ಅವುಗಳನ್ನು ನ್ಯಾಯಮಾರ್ಗದಲ್ಲಿ ಉಪಯೋಗಿಸಿದರೆ ತಪ್ಪಿಲ್ಲ ಮತ್ತೊಬ್ಬನನ್ನು ಕೊಂದು ಸ್ವಾತಂತ್ರ್ಯವನ್ನು ಸಂಪಾದಿಸುವುದು ಮಹಾಪಾಪ.

ನಮ್ಮ ಸ್ವಾತಂತ್ರ್ಯಕ್ಕೆ ಸಹಾಯವಾಗುವುದಾದರೆ ನಾವು ವಿತಕ್ಕೆ ಆ ಕೃತ್ಯವನ್ನು ಮಾಡಕೂಡದು. ಕೊಲೆಯೇ ನಮ್ಮ ಮುಖ್ಯವಾದ ಉದ್ದೇಶವಲ್ಲವಷ್ಟೆ?

ಅಪ್ಪಾ! ನೀನಿನ್ನೂ ಹುಡುಗ; ನಿನಗೆ ಧರ್ಮಾಧರ್ಮಜ್ಞಾನವಿಲ್ಲ. ಲೋಕದೊಳು ಸ್ವಭಾವವಾಗಿ ಪ್ರಾಣಿಹತ್ಯವನ್ನು ಮಾಡಲು ಜನಗಳು ಹಿಂತೆಗೆಯುವರು. ಅದು ಪಾಪಕೃತ್ಯವೆಂಬ ಜ್ಞಾನವೇ ಇದಕ್ಕೆ ಕಾರಣ. ಕೋಪತಾಪಗಳಿಂದಲೂ ಸ್ಪರ್ಧತೆಯಿಂದಲೂ ಅನೇಕರು ಕೊಲೆಗಳನ್ನು ನಡೆಸುವರು. ಅವುಗಳೆಲ್ಲವೂ ಪಾಪಕೃತ್ಯಗಳೇ. ಬಂದಿಶಾಲೆಗಳಿಂದ ಉಪಾಯಮಾಡಿ ತಪ್ಪಿಸಿಕೊಂಡು ಹೋದ ಸಾಹಸಿಗಳ ಕಥೆಗಳನ್ನು ಅನೇಕ ದಿವಸಗಳಿಂದ ವಿಮರ್ಶಿಸಿ ನೋಡಿದೆನು. ಅವರಿಗೆಲ್ಲಾ ದೈವಸಹಾಯ

ವಿದ್ದಿತು. ಪಾಪಕೃತ್ಯವನ್ನು ಮಾಡಿದರೆ ದೈವಸಹಾಯವಿರುವುದಿಲ್ಲ. ಆದುದರಿಂದ ನಾವು ಅನುಕೂಲಕಾಲವನ್ನು ನಿರೀಕ್ಷಿಸುತ್ತಿರೋಣ.

ಸ್ವಾಮೀ! ತಮಗೆ ಜ್ಞಾನವೂ ಬುದ್ಧಿಯೂ ಶಕ್ತಿಯೂ ವಿಶೇಷವಾಗಿರುವುದರಿಂದ ಕಾಲವನ್ನು ನಿರೀಕ್ಷಿಸಿಕೊಂಡಿದ್ದು ಕೆಲಸವನ್ನು ಮಾಡಬಲ್ಲಿರಿ. ಒಂದು ಏರ್ಪಾಡು ವಿಫಲವಾಗುತ್ತಲೇ, ಮತ್ತೊಂದನ್ನು ಯೋಚಿಸುವುದರಲ್ಲಿಯೂ ಯೋಚಿಸಿದ ಕಾರ್ಯವನ್ನು ನೆರವೇರಿಸುವುದರಲ್ಲಿಯೂ, ತಾವು ಕಾಲಯಾಪನೆ ಮಾಡುತ್ತಿರುವಿರಿ. ನನಗೆ ಅಂತಹ ಯೋಚನೆಗಳೇ ತೋರುವುದಿಲ್ಲ; ನಾನು ಹೇಗೆ ಕಾಲವನ್ನು ಕಳೆಯಲಿ?

ಕಾಲವನ್ನು ಕಳೆಯಲು ಇದು ಒಂದೇ ಉಪಾಯವೇ? ಓದಿ ಬರೆಯುವುದರಿಂದ ಸುಲಭವಾಗಿ ಕಳೆಯಬಹುದು.

ಓದಿ ಬರೆಯಲು ತಮಗೆ ಬೇಕಾದ ಸಾಮಗ್ರಿಗಳಿರುವುವೋ?

ಆಹಾ! ಇವೆ. "ಅವುಗಳನ್ನು ಆರು ಕೊಟ್ಟರು?"

ಕೊಡುವರಾರು? ನಾನೇ ಒದಗಿಸಿಕೊಂಡೆನು.

ತಮ್ಮ ಸಾಮಗ್ರಿಗಳನ್ನು ನಾನು ನೋಡಬೇಕಲ್ಲ?

ನೀನು ನನ್ನ ಕೂಪಕ್ಕೆ ಆವಾಗಲಾದರೂ ಬಂದರೆ ಅವುಗಳನ್ನೆಲ್ಲಾ ತೋರಿಸುವೆನು. ನಾನು ಬರೆಯುತ್ತಲಿದ್ದ ದೊಡ್ಡ ಗ್ರಂಥವು ನೆನ್ನೆಯ ದಿವಸ ತಾನೇ ಪೂರೈಸಿತು.

ಅದನ್ನು ಅವುದರ ಮೇಲೆ ಬರೆದಿರುವಿರಿ?

ಸರ್ಕಾರದವರು ನನಗೆ ಕೊಟ್ಟ ಹಳೆಯ ಅಂಗಿಗಳ ಮೇಲೆ.

ಅದನ್ನು ಬರೆಯಬೇಕಾಗಿದ್ದರೆ ತಮಗೆ ವಿಶೇಷವಾಗಿ ಪುಸ್ತಕಗಳ ಸಹಾಯವಿದ್ದಿರಬೇಕು.

ನನ್ನಲ್ಲಿ ಹಿಂದೆ ಐದು ಸಾವಿರ ಗ್ರಂಥಗಳಿದ್ದುವು. ಅವುಗಳಲ್ಲಿ ಮುಖ್ಯವಾದುವು ನೂರ ಐವತ್ತು. ಅವುಗಳನ್ನು ಚೆನ್ನಾಗಿ ಓದಿದರೆ ಸಾಕೆಂದು ನನಗೆ ತೋರಿದುದರಿಂದ ಮೂರು ವರ್ಷಗಳು ಕಷ್ಟಪಟ್ಟು ವ್ಯಾಸಂಗ ಮಾಡಿ ಆ ಬಲದಿಂದ ಈ ಗ್ರಂಥವನ್ನು ಬರೆದೆನು.

ತಾವು ಮಾತನಾಡುವುದನ್ನು ನೋಡಿದರೆ ತಮಗೆ ಅನೇಕಭಾಷೆಗಳ ಪರಿಚಯವಿರುವಂತೆ ತೋರುತ್ತದೆ.

ಪ್ರಾಚೀನಭಾಷೆಗಳಾದ ಸಂಸ್ಕೃತ ಪ್ರಾಕೃತಗಳಲ್ಲದೆ ನಾಲ್ಕು ಭಾಷೆಗಳನ್ನು ಬಲ್ಲೆ. ಈಗ ಐದನೆಯ ಭಾಷೆಯನ್ನು ಕಲಿಯುತ್ತಲಿದ್ದೇನೆ.

ಹೊಸ ಭಾಷೆಯನ್ನು ಕಲಿಯಬೇಕಾದರೆ ಪುಸ್ತಕವು ಬೇಡವೇ?

ಏನೂ ಅವಶ್ಯಕವಿಲ್ಲ. ಇವೆಲ್ಲವೂ ಪ್ರಾಚೀನಭಾಷೆಗಳ ಆಭಾಸಗಳು. ಪ್ರತಿಯೊಂದು ಭಾಷೆಯಲ್ಲಿಯೂ ಕೆಲವು ಹೊಸಪದಗಳಿರುವುವು; ಅವುಗಳನ್ನು ಜ್ಞಾಪಕದಲ್ಲಿಟ್ಟುಕೊಂಡಿದ್ದರೆ ಸಾಕು; ಆವ ಭಾಷೆಯನ್ನಾದರೂ ಸುಲಭವಾಗಿ ಕಲಿಯಬಹುದು.

ಸ್ವಾಮೀ! ತಾವು ಮಹಾತ್ಮರು. ನಾನಿಬ್ಬರೂ ಇಲ್ಲಿರುವ ವರೆಗೆ ನಾನು ತಮ್ಮ ಶಿಷ್ಯನಾಗಿ ಸ್ವಲ್ಪ ಜ್ಞಾನವನ್ನು ಸಂಪಾದಿಸಬೇಕೆಂಬ ಆಸೆಯಾಗುತ್ತಿದೆ. ತಮ್ಮ ಕೂಪಕ್ಕೆ ಬಂದು ತಮ್ಮ ಕಾರ್ಯಗಳನ್ನು ನೋಡಬೇಕೆಂದು ಬಹು ಕುತೂಹಲವುಳ್ಳವನಾಗಿದ್ದೇನೆ. ಆವಾಗ ಒರಲಿ?

ಈಗಲೇ ನಡೆ, ಹೋಗೋಣ.

ಮದಿನೈದನೆಯ ಅಧ್ಯಾಯ

ಸನ್ಯಾಸಿಯ ಕತ್ತಲೆಯ ಬಿಲ.

ಸನ್ಯಾಸಿಯು ತನ್ನ ಬಿಲಕ್ಕೆ ಸುರಂಗದ ಮೂಲಕವಾಗಿ ಮೊದಲು ಹೊರಟನು; ಅವನ ಹಿಂದೆ ಧರ್ಮದೇವನೂ ಹೋದನು. ಈ ಸುರಂಗದಲ್ಲಿ ಕೆಲವು ಕಡೆ ಬಗ್ಗಿಯೂ, ಕೆಲವು ಕಡೆ ಕುಳಿತೂ, ಕೆಲವು ಕಡೆ ಹಿರಿದು ಕೊಂಡೂ ಹೋಗಬೇಕಾಗಿ ಇದ್ದಿತು. ಬಿಲವನ್ನು ಸೇರಿದ ಒಡನೆ ಧರ್ಮದೇವನು ಅದರ ನಾಲ್ಕು ಕಡೆಯನ್ನೂ ದೃಷ್ಟಿಸಿ ನೋಡಿ ಇದೂ ತನ್ನ ಬಿಲದಂತೆಯೇ ಇರುವುದು ಎಂದುಕೊಂಡನು.

ಈಗ ಸರಿಯಾಗಿ ಹನ್ನೆರಡೂ ಕಾಲು ಗಂಟೆ, ಸಾಯಂಕಾಲದವರೆಗೂ ನಮಗೆ ಅವಕಾಶವಿರುವುದು ಎಂದು ಆನಂದನು ಹೇಳಲು, ಧರ್ಮದೇವನು ಸುತ್ತು ಮುತ್ತಲೂ ತಿರುಗಿ ನೋಡಿದನು. ಅದನ್ನು ಕಂಡು ಯೋಗಾನಂದನು ನಸು ನಕ್ಕು ನೀನು ನನ್ನ ಗಡಿಯಾರವನ್ನೆಲ್ಲಿದೆ ಎಂದು ನೋಡುವಂತಿದೆ. ಇದೇ ನನ್ನ ಗಡಿಯಾರವು ಎಂದು ಗೋಡೆಯ ಮೇಲೆ ತಾನು ಹಾಕಿದ್ದ ಗರಿಗಳನ್ನೂ, ಅದರ ಮೇಲೆ ಬಿಲದ ಕಿಟಕಿಯಿಂದ

ಬೀಳುತ್ತಲಿರುವ ಸೂರ್ಯರಶ್ಮಿಯನ್ನು ಧರ್ಮದೇವನಿಗೆ ತೋರಿಸಿ, ಭೂಮಿಯ ಉಭಯ ಗತಿಗಳನ್ನನುಸರಿಸಿ ಈ ರೇಖೆಗಳನ್ನು ಹಾಕಿರುವೆನ.. ಗಡಿಯಾರಗಳು ಅನೇಕಕಾರಣಗಳಿಂದ ನಿಂತು ಹೋಗುವುವು; ಸೂರ್ಯನೂ ಭೂಮಿಯೂ ತಮ್ಮ ತಮ್ಮ ಗತಿಗಳನ್ನು ಬಿಟ್ಟು ಎಂದಿಗೂ ನಿಲ್ಲುವುದಿಲ್ಲ. ಆದುದರಿಂದ ಈ ಗಡಿಯಾರವು ಆವಾಗಲೂ ಸರಿಯಾದ ಕಾಲವನ್ನೇ ತೋರಿಸುವುದು ಎಂದನು.

ಸ್ವಾಮೀ! ತಾವು ಈಗ ಭೂಮಿಯ ಉಭಯಗತಿ ಎಂದು ಹೇಳಿದುದು ನನಗೆ ಅರ್ಥವೇ ಆಗಲಿಲ್ಲ; ದಯೆಮಾಡಿ ಅದನ್ನು ಸ್ವಲ್ಪ ತಿಳಿಸಬೇಕು.

ಅಪ್ಪಾ! ಸೂರ್ಯನು ಆವಾಗಲೂ ಸ್ಥಿರನಾಗಿರುವನು. ಭೂಮಿಯು ಪ್ರತಿ ದಿನವೂ ತನ್ನನ್ನು ತಾನು ಒಂದು ಸಾರಿ ಸುತ್ತುವುದಲ್ಲದೆ ವರ್ಷಕ್ಕೊಮ್ಮೆ ಸೂರ್ಯನನ್ನೂ ಸುತ್ತುವುದು. ಇದೀಗ ಭೂಮಿಯ ಉಭಯಗತಿ. ಇದು ಹಾಗಿರಲಿ. ನನ್ನ ಭಂಡಾರವನ್ನು ನೋಡು. ಬಾ ಎಂದು ಅತನನ್ನು ಒಂದು ಮೂಲೆಗೆ ಕರೆದುಕೊಂಡು ಹೋಗಿ, ಅಲ್ಲಿ ನೆಲಕ್ಕೆ ಹಾಸಿದ್ದ ಒಂದು ಕಲ್ಲನ್ನೆತ್ತಿ ತಾನು ಇಂದ್ರಪ್ರಸ್ಥದ ವಿಚಾರವಾಗಿ ಸುಮಾರು ಇಪ್ಪತ್ತು ಇಪ್ಪತ್ತೈದು ಹಳೆಯ ಅಂಗಿಯ ತುಂಡುಗಳಲ್ಲಿ ಬರೆದಿದ್ದ ಗ್ರಂಥವನ್ನು ತೋರಿಸಿದನು. ಅವುಗಳಿಗೆ ಪುಟಸಂಖ್ಯೆಗಳನ್ನು ಹಾಕಿ ಸರಿಯಾಗಿ ಜೋಡಿಸಿ ಹೊಲಿದಿದ್ದನು. ಪುಸ್ತಕವನ್ನು ಓದಲು ಧರ್ಮದೇವನಿಗೆ ಬರುತ್ತಿರಲಿಲ್ಲವಾಗಿ, ಅವನು ಅದನ್ನು ನೋಡಿ ಆಶ್ಚರ್ಯಪಟ್ಟು, ಇದನ್ನು ಬರೆಯಲು ತಮಗೆ ಲೇಖಣಿ ಮಸಿ ಇವುಗಳು ಎಲ್ಲಿದ್ದುವು ಎಂದು ಕೇಳಿದನು.

ಇಗೋ, ನನ್ನ ಲೇಖಣಿಯನ್ನು ನೋಡು. ಇದನ್ನು ಇಲ್ಲಿ ಸಿಕ್ಕಿದ ಮಿಶಾನಿನ ಎಲುಬಿನಿಂದ ಮಾಡಿದೆನು. "ಮಸಿಯೋ?"

ನನಗೆ ವಾರಕ್ಕೊಂದಾವೃತ್ತಿ ಕೊಡುವ ದ್ರಾಕ್ಷಾರಸದಲ್ಲಿ ಸ್ವಲ್ಪವನ್ನು ಮಿಗಿಸಿ ಈ ಮೂಲೆಯಲ್ಲಿ ಹೊಗೆ ಹತ್ತಿದ ಗೋಡೆಯನ್ನು ಕೆರೆದು ಒಂದ ದೂಳನ್ನು ಕಲೆಸಿ ಮಸಿಯನ್ನು ಮಾಡಿಕೊಳ್ಳುವೆನು.

ಲೇಖಣಿಯನ್ನು ಮಾಡಲು ನಿಮಗೆ ಚೂರಿಯು ಎಲ್ಲಿ ಸಿಕ್ಕಿತು?

ಇಲ್ಲಿದ್ದ ಒಡಕು ಉಕ್ಕಿನ ದೀಪಸ್ತಂಭದಿಂದ ಈ ಎರಡು ಚೂರುಗಳನ್ನು ಮಾಡಿದೆನು. ಇದರಲ್ಲಿ ಸಣ್ಣದು ಒಹಳ ಕೂರಾಗಿರುವುದು.

ಇಷ್ಟು ಕೆಲಸಗಳನ್ನು ಮಾಡಲು, ತಮಗೆ ಹಗಲು ಹೊತ್ತು ಸಾಕಾಗುತಲಿದ್ದಿತೋ?

ಹಗಲು ಹೊತ್ತು ಸಾಗದಿದ್ದರೆ ರಾತ್ರಿಯೂ ಕೆಲಸಮಾಡುವೆನು.

ಬೆಳಕಿಲ್ಲದೆ ಕೆಲಸಮಾಡುವುದು ಹೇಗೆ?

ಸರ್ಕಾರದವರು ರೊಟ್ಟಿಯ ಸಂಗಡ ನನಗೆ ಕೊಡುತ್ತಿದ್ದ ತುಪ್ಪವನ್ನು ಕೂಡಿಸಿ ಇಟ್ಟುಕೊಂಡು ಅದರಲ್ಲಿ ಚಿಂದಿ ಬಟ್ಟೆಗಳನ್ನು ಅದ್ದಿ ಬತ್ತಿಮಾಡಿಟ್ಟುಕೊಂಡು ಬೇಕಾದಾಗ ಉಪಯೋಗಿಸಿಕೊಳ್ಳುವೆನು.

ದೀಪ ಹೊತ್ತಿಸಲು ಬೆಂಕಿಯೆಲ್ಲಿಯದು?

ಇಲ್ಲಿ ಹಾಸಿದ್ದ ಕಲ್ಲುಗಳಲ್ಲಿ ಒಂದು ಚಕ್ಕಮುಕ್ಕಿ ಇದ್ದಿತು. ಅದರಲ್ಲಿ ಒಂದು ಚೂರನ್ನೂ, ಈ ಉಕ್ಕಿನ ಚೂರನ್ನೂ, ಅಷ್ಟು ಹಳೆಯ ಚಿಂದಿ ಬಟ್ಟೆಗಳನ್ನೂ ಇಟ್ಟಿದ್ದೇನೆ. ಬೇಕಾದಾಗ ಇವುಗಳಿಂದ ಬೆಂಕಿಯನ್ನು ಮಾಡಿ ದೀಪವನ್ನು ಹೊತ್ತಿಸುವೆನು.

ತನಗೆ ತೋರಿಸಿದ್ದ ಪದಾರ್ಥಗಳನ್ನೆಲ್ಲಾ ಒಂದೊಂದಾಗಿ ನೋಡಿ ವಿಸ್ಮಯಗೊಂಡು ಧರ್ಮದೇವನು ಅವುಗಳನ್ನು ಯಥಾಸ್ಥಾನದಲ್ಲಿಟ್ಟು, ಆಹಾ! ಏನು ಬುದ್ಧಿ! ಎಂಥ ಸಾಹಸ! ಎಂದು ತಲೆಯನ್ನು ತಗ್ಗಿಸಿಕೊಂಡು ಸುಮ್ಮನೆ ನಿಂತಿದ್ದನು.

ಏನಾದರೂ ಅವಾಯ ಸಂಭವಿಸಿದರೆ ಎಲ್ಲಿ ಎಲ್ಲಾ ಒಟ್ಟಿಗೆ ಹೋಗುವುದೋ ಎಂಬ ಭಯದಿಂದ, ನನ್ನ ಆಸ್ತಿಯನ್ನೆಲ್ಲಾ ಒಂದೇ ಕಡೆ ಇರಿಸದೆ ವಿಶೇಷವಾಗಿ ಬಳಕೆಗೆ ಬರತಕ್ಕ ಮತ್ತೊಂದನ್ನು ಬೇರೆ ಕಡೆ ಇಟ್ಟಿರುತ್ತೇನೆ. ಅದನ್ನು ತೋರಿಸುವೆನು, ಇತ್ತ ಬಾ ಎಂದು ಆನಂದನು ಧರ್ಮದೇವನನ್ನು ಮತ್ತೊಂದು ಮೂಲೆಗೆ ಕರೆದುಕೊಂಡು ಹೋಗಿ, ಅಲ್ಲಿ ಮತ್ತೊಂದು ಕಲ್ಲನ್ನೆತ್ತಿ ಸುಮಾರು ನಲವತ್ತು ಐವತ್ತು ಅಡಿಗಳುದ್ದ ವಿರುವ ಒಂದು ನೂಲೇಣಿಯನ್ನು ತೋರಿಸಿದನು. ಧರ್ಮದೇವನು ಅದನ್ನು ಕೈಯಲ್ಲಿ ತೆಗೆದು, ಎಳೆದು ನೋಡಿ, ಇದು ಇಬ್ಬರ ಭಾರವನ್ನು ತಡೆಯುವಂತೆ ತೋರುತ್ತದೆ; ಇದನ್ನು ಮಾಡಲು ತಮಗೆ ದಾರವೆಲ್ಲಿದ್ದಿತು ಎಂದನು.

ಅಪ್ಪಾ! ಅದನ್ನು ಹೇಳುವೆನು ಕೇಳು. ಈ ಸೆರೆಮನೆಯಲ್ಲಿ ವರ್ಷಕ್ಕೊಂದಾವೃತ್ತಿ ಬಂದಿಗಳಿಗೆ ಹೊಸಬಟ್ಟೆಯನ್ನು ಕೊಡುತ್ತಾರಷ್ಟೆ. ನಮಲ್ಲಿ ನಿಲ್ಲುವ ಹಳೆಯ ಬಟ್ಟೆಗಳ ದಾರಗಳನ್ನೆಲ್ಲಾ ಒಂದೊಂದಾಗಿ ಬಿಡಿಸಿ ತೆಗೆದು ಅವುಗಳಿಂದ ಇದನ್ನು ಮಾಡಿದೆನು.

ಇದನ್ನು ಮಾಡಲು ಎಷ್ಟು ವರ್ಷಗಳಾದುವು?

ಹತ್ತು. "ಇದರಿಂದೇನು ಪ್ರಯೋಜನ?"

ಅಪ್ಪಾ! ಮೊತ್ತ ಮೊದಲು ನಾನು ಈ ಬಿಲದ ಕಿಟಕಿಗಳನ್ನು ಕಿತ್ತು ಈ ಏಣಿಯ ಸಾಹಾಯ್ಯದಿಂದ ಕೆಳಗೆ ಇಳಿದು ಓಡಿಹೋಗಬೇಕೆಂದು ಯೋಚನೆ ಮಾಡಿದ್ದೆನು; ಕಿಟಕಿಯಿಂದ ಅಂಗಳಕ್ಕೇ ಇಳಿಯಬೇಕಾದುದರಿಂದಲೂ ಅಲ್ಲಿ ಅವಾಗಲೂ ಒಬ್ಬ ಸಿಪಾಯಿ ಕಾವಲಿರುವುದರಿಂದಲೂ ಆ ಯೋಚನೆಯನ್ನು ಬಿಟ್ಟೆನು.

ಆನಂದನು ಈ ಮಾತನ್ನಾಡುತ್ತಿದ್ದಾಗ ಧರ್ಮದೇವನು ಇಷ್ಟು ಬುದ್ಧಿಯೂ, ಸಾಹಸವೂ, ದೂರಾಲೋಚನೆಯೂ ಇರುವ ಈ ಮಹಾತ್ಮನು ತನ್ನ ವಿಪತ್ತು ಹೇಗೆ ಆಯಿತು, ಆರಿಂದಲಾಯಿತು, ಎಂಬುದನ್ನು ಸ್ಪಷ್ಟಪಡಿಸಬಹುದೆಂದು ಯೋಚಿಸುತ್ತಲಿದ್ದನು. ಅದನ್ನು ಯೋಗಾನಂದನು ಕಂಡು, ಅಪ್ಪಾ! ನಿನ್ನನ್ನು ನೋಡಿದರೆ ಏನೋ ಆಲೋಚನೆ ಮಾಡುತ್ತಿರುವನಂತೆ ತೋರುತ್ತದೆ; ಏನು ಹೇಳು ಎಂದನು.

ಸ್ವಾಮೀ! ನನಗುಂಟಾದ ಆಲೋಚನೆಗಳೆರಡು. ಮೊದಲನೆಯದು, ಆವ ಅನುಕೂಲವೂ ಇಲ್ಲದೆ, ಈ ಕೂಪದಲ್ಲಿದ್ದುಕೊಂಡೂ ಇಷ್ಟು ಕೆಲಸಗಳನ್ನು ಮಾಡಿದ ನೀವು ಸ್ವತಂತ್ರರಾಗಿದ್ದಿದ್ದರೆ ಇನ್ನೂ ಏನೇನ ಮಾಡುತ್ತಿದ್ದಿರೋ ಎಂದು ಯೋಚಿಸುತ್ತಿದ್ದೆನು.

ಸ್ವೇಚ್ಛೆಯಾಗಿದ್ದಿದ್ದರೆ ಆವುದನ್ನೂ ಮಾಡಿರಲಾರೆನು. ಆಗ ನನ್ನ ಬುದ್ಧಿಯು ಚಂಚಲವಾಗಿ, ಏಕಾಗ್ರಚಿತ್ತತೆಯು ತಪ್ಪಿ, ಆವ ಕೆಲಸವೂ ಸಾಗುತ್ತಿರಲಿಲ್ಲ. ಕಾಳ ಮೇಘಗಳು ಆಕಾಶದಲ್ಲಿ ಎಷ್ಟೋ ಇದ್ದರೂ ಅವುಗಳು ಒಟ್ಟುಗೂಡಿ ಮಸೆದಲ್ಲದೆ ಸಿಡಿಲಿಲ್ಲ; ಸಿಡಿಲಿಲ್ಲದೆ ಬೆಳಕಿಲ್ಲ.

ಸ್ವಾಮೀ! ತಾವು ಈಗ ಅಪ್ಪಣೆ ಕೊಡಿಸಿದುದು ನನಗೆ ತಿಳಿಯಲಿಲ್ಲ.

ನಿನ್ನ ಆಲೋಚನೆಗಳಲ್ಲಿ ಒಂದನ್ನು ಹೇಳಿದೆ; ಮತ್ತೊಂದಾವುದು?

ತಮ್ಮ ವಿಷಯವನ್ನೆಲ್ಲಾ ದಯೆಯಿಂದ ತಾವು ನನಗೆ ತಿಳಿಸಿದಿರಿ. ನನ್ನ ಸಮಾಚಾರವೇನೆಂದು ತಾವು ಕೇಳಲೇ ಇಲ್ಲವಲ್ಲಾ?

ಇಷ್ಟು ಸಣ್ಣವನ ಸಮಾಚಾರವು ವಿಶೇಷವಾಗಿರಲಾರದು.

ವಯಸ್ಸು ಚಿಕ್ಕದಾಗಿದ್ದರೂ ಕಷ್ಟಾನುಭವವು ವಿಶೇಷವಾಗಿರುವುದು. ಈ ಕಷ್ಟಕ್ಕೆ ನನ್ನನ್ನು ಗುರಿಮಾಡಿದವರಾರು? ಅದಕ್ಕೆ ಕಾರಣವೇನು? ಇದು ಮನುಷ್ಯ

ರಿಂದಾದುದೋ, ದೈವಕೃತವೋ? ಮನುಷ್ಯಕೃತವಾಗಿದ್ದರೆ ದೇವರನ್ನು ನಿಂದಿಸುವುದು ತಪ್ಪು.

ದೇವರು ಎಂದಿಗೂ ಅನ್ಯಾಯ ಮಾಡುವುದಿಲ್ಲ ನಮಗೆ ಬರುವ ಸಂಕಟಗಳೆಲ್ಲಾ ನಮ್ಮ ಪೂರ್ವಜನ್ಮದ ಕರ್ಮದಿಂದುಂಟಾಗುವುವು. ಅದಕ್ಕಾಗಿ ನಾವು ದೇವರನ್ನು ನಿಂದಿಸಬಾರದು. ಇದನ್ನು ಚೆನ್ನಾಗಿ ತಿಳಿಯಿರಿ. ನಿನ್ನ ಮೇಲೆ ಆವ ತಪ್ಪೂ ಇಲ್ಲವೆಂದು ದೃಢವಾಗಿ ಹೇಳಬಲ್ಲೆಯೋ?

ಸ್ವಾಮೀ! ಈ ಲೋಕದಲ್ಲಿ ನನ್ನ ವಿಶ್ವಾಸಕ್ಕೆ ಪಾತ್ರನಾದವನು ನನ್ನ ತಂದೆ; ನನ್ನ ಪ್ರೀತಿಗೆ ಪಾತ್ರಳಾದವಳು ಲಲಿತಾಂಗಿ; ಇಬ್ಬರಿಗಾಗಿಯೂ ನಾನು ಆವ ತಪ್ಪನ್ನೂ ಮಾಡಿದವನಲ್ಲ.

ಹಾಗಾದರೆ ಸರಿ. ನಿನ್ನ ಸಮಾಚಾರವನ್ನು ವಿಸ್ತಾರವಾಗಿ ಹೇಳು ಎಂದು ಆನಂದನು ಧರ್ಮದೇವನನ್ನು ತನ್ನ ಮಂಚದ ಮೇಲೆ ಕುಳ್ಳಿರಿಸಿಕೊಂಡನು.

ಧರ್ಮದೇವನು ಮೊದಲಿನಿಂದ ತನ್ನ ಕಥೆಯನ್ನು ಆನಂದನಿಗೆ ವಿಸ್ತಾರವಾಗಿ ಹೇಳಿದನು. ಅದನ್ನು ಕೇಳಿ ಆನಂದನು ಸ್ವಲ್ಪ ಹೊತ್ತು ಆಲೋಚಿಸಿ, ನಾನು ಮೊದಲೇ ನಿನಗೆ ಒಂದು ನೀತಿಯನ್ನು ಹೇಳಿದ್ದೆ; ಅದನ್ನು ಈಗ ವಿಶದವಾಗಿ ಹೇಳುವೆನು ಕೇಳು. ಮನುಷ್ಯರು ತಮ್ಮ ಸಹಜಬುದ್ಧಿಯುಳ್ಳಿರುವವರೆಗೆ ದುರ್ಮಾರ್ಗಕ್ಕೆ ಹೋಗಲು ಹಿಂತೆಗೆಯುವರು. ಜನ್ಮಾಂತರದ ಪಾಪವಾಸನೆಯಿಂದ ನೀಚಬುದ್ಧಿಯುಂಟಾಗಿ ದುರಾಲೋಚನೆಗಳು ಬೇರೂರಿ ಸದಸದ್ವಿವೇಕವು ಅಳಿಸಿ ಹೋದರೆ, ದುರ್ಮಾರ್ಗಪ್ರವೃತ್ತರಾಗುವರು. ನಮ್ಮ ಈ ಕೃತ್ರಿಮನಾಗರಕತೆಯು ದುರಾಸೆಯನ್ನೂ ಸ್ವಾರ್ಥತೆಯನ್ನೂ ಹುಟ್ಟಿಸಿ ಸದ್ಗುಣಗಳನ್ನು ಅಳಿಸಿ ನಮ್ಮನ್ನು ದುರ್ಮಾರ್ಗಕ್ಕೆ ತಳ್ಳುವುದು. ಇಂಥವರು ಪ್ರಯೋಜನವಿಲ್ಲದೆ ಅಧರ್ಮಪ್ರವೃತ್ತರಾಗರು. ಈಗ ನಿನ್ನ ವಿಷಯವನ್ನು ಸ್ವಲ್ಪ ಯೋಚಿಸೋಣ. ನೀನು ಕೆಟ್ಟದರಿಂದ ಆವುಗೆ ಸಂತೋಷವಾಗುತ್ತಿದ್ದಿತು?

ಸ್ವಾಮೀ! ನನ್ನಂಥ ನಿರ್ಭಾಗ್ಯನು ಕೆಟ್ಟದರಿಂದ ಆವುಗೂ ಏನೂ ಪ್ರಯೋಜನವಿಲ್ಲ.

ಅದೀಗ ಅವಿನೇಕದ ಮಾತು. ಅದನ್ನು ನಾನು ಒಪ್ಪುವುದಿಲ್ಲ. ಲೋಕದಲ್ಲಿ ಅಭಿಷಿಕ್ತನಾದ ರಾಜನು ಮೊದಲು ಕಸಗುಡಿಸುವವನ ವರೆಗೂ ಅವರವರ ಕೆಲಸಗಳನ್ನು

ಅವರವರ ಉತ್ತರಾಧಿಕಾರಿಗಳು ಬಯಸುತ್ತಲಿರುವರು. ನೀನು ಜಯಲಕ್ಷ್ಮಿಯ ನೌಕಾಧಿಪತ್ಯವನ್ನು ಹೊಡ್ಡುವುದರಲ್ಲಿದ್ದೆ ಎಂದು ಹೇಳಿದೆ; ಇನೆರಡನ್ನೂ ಅಗಗೊಡಿಸದವರು ಸ್ವಾರ್ಥಪರರಾಗಿರಬೇಕು. ಅವರಾರು ಹೇಳು, ನೋಡೋಣ.

ಸ್ವಾಮೀ! ಜಯಲಕ್ಷ್ಮಿಯಲ್ಲಿದ್ದ ನಾವಿಕರು ಮೊದಲಾಗಿ ಎಲ್ಲರೂ ನನ್ನಲ್ಲಿ ವಿಶೇಷಾಭಿಮಾನವನ್ನು ತೋರಿಸುತ್ತಲಿದ್ದರೇ ವಿನಾ ಅಸೂಯಾಪರರಾಗಿರಲಿಲ್ಲ.

ನೀನು ಅಲ್ಲವೇ ಇದ್ದು ನಿನಗೆ ನೌಕಾಧಿಪತ್ಯವೂ ದೊರೆಕಿದ್ದು, ನಿನ್ನ ಇಷ್ಟ ಬಂದವರನ್ನು ನಿನ್ನ ಕೈ ಕೆಳಗ ಇಟ್ಟುಕೊಳ್ಳಲು ಸ್ವಾತಂತ್ರ್ಯವೂ ಇದ್ದಿದ್ದರೆ. ಜಯಲಕ್ಷ್ಮಿಯಲ್ಲಿದ್ದವರನ್ನೆಲ್ಲಾ ನಿನ್ನ ಬಳಿ ಇರಿಸಿಕೊಳ್ಳುತಲಿದ್ದೆಯೋ?

ಒಬ್ಬನು ವಿನಾ ಮಿಕ್ಕಾದವರನ್ನೆಲ್ಲಾ ಇಟ್ಟುಕೊಳ್ಳುತಲಿದ್ದೆ.

ಇದೀಗ ಸರಿಯಾದ ಮಾತು. ಆ ಒಬ್ಬನ ಹೆಸರೇನು? ಅವನನ್ನು ಏತಕ್ಕೋ ಸ್ಥರ ನೀನು ಇಟ್ಟುಕೊಳ್ಳುತ್ತಿರಲಿಲ್ಲ?

ಅವನ ಹೆಸರು ದುರ್ಮತಿ. ಅವನು ಅನ್ಯಾಯವಾಗಿ ಒಂದು ದಿವಸ ನನ್ನ ಸಂಗಡ ಜಗಳವಾಡಿದ್ದನು. ಇದಲ್ಲದೆ ಸುಳ್ಳು ಲೆಕ್ಕಗಳನ್ನು ಬರೆಯುತ್ತಲಿದ್ದನು.

ಸಮುದ್ರದಲ್ಲಿ ಮೃತಪಟ್ಟ ನೌಕಾಧಿಪನ ಸಂಗಡ ನೀನು ಮಾತನಾಡುತಲಿದ್ದಾಗ ಮತ್ತಾರಾದರೂ ಇದ್ದರೋ?

ಆರೂ ಇರಲಿಲ್ಲ.

ನಿನ್ನ ಮಾತನ್ನು ಆರಾದರೂ ಕೇಳುತ್ತಲಿದ್ದರೋ? ಬಹುಶಃ ಕೇಳಬಹುದಾದ ಸಂಭವವಿದ್ದಿತೋ?

ನೌಕಾಧಿಪನ ಕೊಟ್ಟಡಿಯು ಜಾಗಿಲು ತೆರೆದಿದ್ದ ಕಾರಣ ನನ್ನ ಮಾತು ಇತರರ ಕಿವಿಗೆ ಬೆದ್ದಿರಬಹುದು. ಆಹಾ! ಈಗ ಜ್ಞಾಪಕಕ್ಕೆ ಬಂದಿತು; ಆ ಕೊಟ್ಟಡಿಯು ಸಮೀಪದಲ್ಲಿ ದುರ್ಮತಿಯು ಓಡಾಡುತ್ತಲಿದ್ದನು.

ನೀನು ಏಲಾದ್ವೀಪಕ್ಕೆ ಹೋದಾಗ ನಿನ್ನ ಜತೆಯಲ್ಲಿ ಆರನ್ನಾದರೂ ಕರೆದು ಕೊಂದು ಹೋಗಿದ್ದಿಯೋ? "ಇಲ್ಲ."

ಆ ದ್ವೀಪದಲ್ಲಿ ಕೊಡಬೇಕೆಂದು ನಿನ್ನ ಕೈಯಲ್ಲಿ ಕೊಟ್ಟಿದ್ದ ಕಾಗದದ ಕಟ್ಟನು ಏನು ಮಾಡಿದೆ?

ಅದನ್ನು ನನ್ನ ಕೈಯಲ್ಲಿಯೇ ಇಟ್ಟುಕೊಂಡು ಹೋದೆನು.

ಆ ದ್ವೀಪದಲ್ಲಿ ಕೊಟ್ಟ ಲೇಖನವನ್ನು ಏನ ಮಾಡಿದೆ ?

ಅದನ್ನೂ ನನ್ನ ಕೈಯಲ್ಲೇ ಇಟ್ಟುಕೊಂಡು ಬಂದೆನು.

ಹಾಗಾದರೆ ನೀನು ಏಲಾದ್ವೀಪಕ್ಕೆ ತೆಗೆದುಕ್ಕೊಂಡು ಹೋದ ಕಾಗದದ ಕಟ್ಟನ್ನೂ ಅಲ್ಲಿಂದ ತಂದ ಲೇಖನವನ್ನೂ ಹಡಗಿನವರೆಲ್ಲರೂ ನೋಡಿರಬಹುದೇ ? "ಇರಬಹುದು."

ಇಲ್ಲಿಯ ವರೆಗೆ ಒಂದು ರೀತಿಯಾಗಿ ಸಂಗತಿಯು ಕ್ರಮವಾಗಿ ತಿಳಿಯಿತು ; ಮುಂದೆ ನೋಡೋಣ. ನಿನಗೆ ವಿರೋಧವಾಗಿ ಸರಕಾರಕ್ಕೆ ಬರೆದಿದ್ದ ಕಾಗದದಲ್ಲಿ ಏನು ಇದ್ದಿತು ?

ನ್ಯಾಯಾಧಿಪನು ತನ್ನ ಕೈಯಲ್ಲಿ ಓದಲು ಕೊಟ್ಟಿದ್ದಾಗ ಧರ್ಮದೇವನು ಅದನ್ನು ಮೂರು ನಾಲ್ಕಾವೃತ್ತಿ ಓದಿದ್ದನಾದುದರಿಂದ ಅದರಲ್ಲಿ ಬರೆದಿದ್ದುದನ್ನು ಎಳ್ಳಷ್ಟು ಕೂಡ ತಪ್ಪದೆ ಹೇಳಿದನು. ಆನಂದನು ಅದನ್ನು ಕೇಳಿ ಈಗ ಎಲ್ಲವೂ ಸ್ಪಷ್ಟವಾಯಿತು ಎಂದನು.

ಅದು ಹೇಗೆ ? "ದುರ್ಮತಿಯು ಹೇಗೆ ಬರೆಯುತ್ತಲಿದ್ದನು ?"

ಅವನು ಮೋಡಿ ಅಕ್ಷರ ಬರೆಯುತ್ತಲಿದ್ದನು.

ಸರ್ಕಾರಕ್ಕೆ ಬರೆದಿದ್ದ ಲೇಖನವು ಹೇಗಿದ್ದಿತು ?

ಅಕ್ಷರಗಳು ಮೋಡಿಯಾಗಿದ್ದರೂ ಅವೆಲ್ಲವೂ ಎಡಗಡೆಗೆ ವಾಲಿದ್ದವು.

ಸ್ವಲ್ಪ ತಾಳು ಎಂದು ಹೇಳಿ, ಆನಂದನು ಎದ್ದು ಬರೆಯುವ ಸಾಮಗ್ರಿಗಳನ್ನು ತಂದು, ಧರ್ಮದೇವನು ಹೇಳಿದುದನ್ನು ಎಡಗೈಯಿಂದ ಬರೆದು ಕೊಟ್ಟನು. ಅದನ್ನು ನೋಡಿ ಧರ್ಮದೇವನು ಪರಮಾಶ್ಚರ್ಯಪಟ್ಟು, ಸ್ವಾಮೀ ! ತಮ್ಮ ಅಕ್ಷರವೂ ಆ ಅಕ್ಷರ ದಂತೆಯೇ ಇರುವುದು. ಅದನ್ನೂ ತಾವೇ ಬರೆದಿರಬಹುದೆಂದು ಹೇಳಲು ಏನೂ ಅಡ್ಡಿ ಇಲ್ಲ ಎಂದನು.

ಅಪ್ಪಾ ! ಇದರಲ್ಲಿ ಒಂದು ರಹಸ್ಯವಿದೆ.

ಅದೇನು ?

ಬಲಗೈಯಲ್ಲಿ ಬರೆದ ಪ್ರತಿಯೊಬ್ಬನ ಅಕ್ಷರಕ್ಕೂ ವ್ಯತ್ಯಾಸವಿದ್ದರೂ, ಎಡಗೈಯಿಂದ ಬರೆದುದು ಒಂದೇ ರೀತಿಯಾಗಿರುವುದು. ಈಗ ಒಂದು ವಿಚಾರವು ಮುಗಿ

ಯಿತು; ಮತ್ತೊಂದನ್ನು ನೋಡೋಣ. ನಿನ್ನ ಮದುವೆಯು ತಪ್ಪಿದುದರಿಂದ ಆರಿಗಾದರೂ ಅನುಕೂಲವೋ?

ಅನ್ಯದೇಶದವನೊಬ್ಬನು ಲಲಿತಾಂಗಿಯನ್ನು ಮೋಹಿಸಿದ್ದನು.

ಅವನ ಹೆಸರೇನು? "ವಿಷಯಲಂಪಟ."

ಸರ್ಕಾರಕ್ಕೆ ಬರೆದ ಆ ಲೇಖನವನ್ನು ಅವನು ಬರೆದಿರಬಹುದೋ?

ಅವನು ಅಷ್ಟು ಬರವಣಿಗೆಯವನಲ್ಲವೆಂದು ತೋರುತ್ತದೆ. ಇದಲ್ಲದೆ ಅದರಲ್ಲಿ ಬರೆದಿದ್ದ ಸಮಾಚಾರಗಳು ಅವನಿಗೆ ಗೊತ್ತಿರಲಿಲ್ಲ. ಮೇಲೂ, ಅವನು ನನ್ನನ್ನು ಇರಿದು, ಕೊಂದು ಹಾಕಿ, ಅವಳನ್ನು ಮದುವೆಯಾಗುತ್ತಲಿದ್ದನೇ ವಿನಾ ಇಂಥ ಕೆಲಸಗಳನ್ನು ಮಾಡುತ್ತಿರಲಿಲ್ಲ.

ಹಾಗಾದರೆ ಈ ಕಾಗದವನ್ನು ದುರ್ಮತಿಯೇ ಬರೆದಿರಬೇಕು.

ಈಗ ನನಗೂ ಹಾಗೇ ತೋರುತ್ತದೆ.

ದುರ್ಮತಿಗೂ ವಿಷಯಲಂಪಟನಿಗೂ ಪರಿಚಯವಿದ್ದಿತೋ?

ಹಾ! ಹೂ, ಇದ್ದಿತು. ಅವರಿಬ್ಬರೂ ಮತ್ತೊಬ್ಬ ಕುಡುಕನೂ ಲೇಖನದ ಸಾಮಗ್ರಿಗಳನ್ನು ಇಟ್ಟುಕೊಂಡು ಒಂದೇ ಮೇಜಿನ ಮುಂದೆ ಕುಳಿತಿದ್ದರು. ಕುಡುಕನು ಚೆನ್ನಾಗಿ ಕುಡಿದು, ಮೇಜಿನ ಮೇಲೆ ತಲೆಯನ್ನು ಹಾಕಿಕೊಂಡು ಬಿದ್ದಿದ್ದನು. ಇದು ಮೊದಲು ನನಗೆ ನೆನಪಿಗೆ ಬರಲಿಲ್ಲ.

ಕುಡುಕನ ಮಾತ ಬಿಡು. ಈ ವಿಷಯದಲ್ಲಿ ನನ್ನಿಂದ ತಿಳಿಯಬೇಕಾದುದು ಇನ್ನೇನಾದರೂ ಉಂಟೋ?

ಸ್ವಾಮೀ! ಸೂರ್ಯನು ತನ್ನ ಕಿರಣಗಳಿಂದ ಅಂಧಕಾರವನ್ನು ಹೋಗಲಾಡಿಸುವಂತೆ, ತಾವೂ ನನ್ನ ಹೃದಯದ ಅಜ್ಞಾನಾಂಧಕಾರವನ್ನು ಹೋಗಲಾಡಿಸಿದಿರಿ. ತಾವು ದಯವಿಟ್ಟು ಇನ್ನೊಂದು ವಿಷಯವನ್ನು ಹೀಗೆಯೇ ಸ್ಪಷ್ಟಪಡಿಸಿಕೊಡಬೇಕು.

ಅದು ಏನು?

ನ್ಯಾಯಾಧಿಪತಿಯು ನನ್ನ ವಿಷಯದಲ್ಲಿ ವಿಶೇಷಕರುಣೆಯನ್ನು ತೋರಿಸಿ ನನ್ನನ್ನು ಜಾಗ್ರತೆಯಾಗಿ ಬಿಡಿಸುವುದಾಗಿ ಹೇಳಿದ್ದರೂ, ವಿಚಾರಣೆಯೇ ಇಲ್ಲದೆ ಹೀಗೆ ಶಿಕ್ಷೆಗೆ ಏಕೆ ನನ್ನನ್ನು ಗುರಿಮಾಡಿದನು?

ಅಪ್ಪಾ ! ನ್ಯಾಯಮಾರ್ಗವು ಅನೇಕ ಸಂದರ್ಭಗಳಲ್ಲಿ ಗೂಢವಾಗಿರುವುದು ; ಅದರಲ್ಲಿ ರಾಜಾಪಚಾರದ ವಿಷಯದಲ್ಲಿ ಅದು ವಕ್ರವಾಗಿರುವುದು. ಹಿಂದೆ ನಾನು ಹೇಳಿದ ನ್ಯಾಯವನ್ನು ಈ ಸಂಗತಿಯಲ್ಲಿ ಯೋಚಿಸಿ ನೋಡಿದರೆ ಅದು ಸುಲಭವಾಗಿ ತಿಳಿಯುವುದು. ಒಳ್ಳೆಯದು, ನ್ಯಾಯಾಧಿಪತಿಗೂ ನಿನಗೂ ನಡೆದ ಮಾತುಗಳನ್ನು ವಿಶದವಾಗಿ ಹೇಳು.

ಸ್ವಾಮೀ ! ಅಲ್ಲಿ ನಡೆದ ಅಂಶಗಳನ್ನೆಲ್ಲಾ ತಮ್ಮಲ್ಲಿ ನಾನು ಮೊದಲೇ ಅರಿಕೆ ಮಾಡಿಕೊಂಡಿದ್ದೇನೆ. ಇಂತಹ ವಿಷಯವನ್ನು ಹೇಳೆಂದರೆ ಅದನ್ನು ಹೇಳುವೆನು.

ನಿನ್ನ ವಿಚಾರಣೆಯನ್ನು ಮಾಡಿದವನಿಗೆ ಎಷ್ಟು ವಯಸ್ಸು.

ಸುಮಾರು ಇಪ್ಪತ್ತಾರು.

ಹಾಗಾದರೆ ಅವನಿಗೆ ದುರ್ಮಾರ್ಗಪ್ರವೃತ್ತಿ ಇಲ್ಲದಿದ್ದರೂ ಕೀರ್ತಿಸ್ಪೃಹೆಯೂ ಐಶ್ವರ್ಯಕಾಂಕ್ಷೆಯೂ ಇರಬೇಕು. ಅವನು ವಿಚಾರಣೆಯ ಕಾಲದಲ್ಲಿ ನಿನ್ನನ್ನು ಹೇಗೆ ಕಂಡನು ? "ದಯಾಪರನಾಗಿದ್ದನು."

ನಿನ್ನ ಕಥೆಯನ್ನು ಅವನು ಕೇಳುತ್ತಲಿರುವಾಗ, ಅವನ ನಡತೆಯಲ್ಲಿ ವ್ಯತ್ಯಾಸ ವೇನಾದರೂ ನಿನಗೆ ತೋರಿಬಂದಿತೋ !

ಏಲಾದ್ವೀಪದ ಲೇಖನವನ್ನು ಓದುವ ವರೆಗೆ ಸುಮುಖನಾಗಿ ನನ್ನನ್ನು ಬಿಟ್ಟು ಬಿಡುತ್ತೇನೆಂದು ಹೇಳುತ್ತಲಿದ್ದು, ಅದನ್ನು ಓದಿದ ಮೇಲೆ ಮುಖವನ್ನು ಸೊಟ್ಟುಮಾಡಿ ಕೊಂಡು ಇದನ್ನು ಆರಿಗಾದರೂ ತೋರಿಸಿದೆಯೋ ? ಎಂದನು. ಇಲ್ಲವೆಂದು ನಾನು ಹೇಳಿದ ಬಳಿಕ, ಇದರ ಸಮಾಚಾರವನ್ನೇ ಆಗಲಿ ಇದು ಆರ ಹೆಸರಿಗೆ ಇದೆಯೋ ಅದನ್ನೇ ಆಗಲಿ ಆರಿಗೂ ಹೇಳದಿರುವೆನೆಂದು ಪ್ರಮಾಣ ಮಾಡಿಕೊಟ್ಟರೆ ಮೇಲಿನ ಅಧಿಕಾರಿಗೆ ತಿಳಿಸಿ ನನ್ನನ್ನು ಬಿಟ್ಟುಬಿಡುವೆನೆಂದು ಹೇಳಿದನು.

ಅವನು ಸುಟ್ಟ ಲೇಖನವಾವುದು ;

ಏಲಾದ್ವೀಪದಿಂದ ನಾನು ತಂದಿದ್ದುದು.

ಅದರ ಜತೆಯಲ್ಲಿ ನಿನ್ನ ಮೇಲೆ ಸರ್ಕಾರಕ್ಕೆ ಬರೆದಿದ್ದ ಲೇಖನವನ್ನೂ ಸುಟ್ಟ ನೋ ? "ಇಲ್ಲ."

ಓಹೋ ! ಆದರೆ ಅವನು ಮೋಸಗಾರನು.

ಅದು ಹೇಗೆ ಸಾಧ್ಯ. ತಾವು ಎಲ್ಲರನ್ನೂ ಹೀಗೆ ಹೇಳಿದರೆ ಲೋಕವೆಲ್ಲವೂ ಹುಲಿ ಕರಡಿಗಳಿಂದ ತುಂಬಿರುವಂತೆಯೇ ತೋರುತ್ತದೆಯಲ್ಲವೇ?

ಅಪ್ಪಾ! ನಾಲ್ಕು ಕಾಲುಳ್ಳ ಹುಲಿಕರಡಿಗಳಿಗಿಂತ ಎರಡು ಕಾಲಿನ ಹುಲಿಕರಡಿಗಳು ಕ್ರೂರಿಗಳು. ಇದು ಹಾಗಿರಲಿ. ಏಲಾದ್ವೀಪದಿಂದ ನೀನು ತಂದಿದ್ದ ಕಾಗದವು ಆರ ಹೆಸರಿಗೆ ಬರೆದಿದ್ದಿತು?

ಮಲಯಪುರದಲ್ಲಿರುವ ದೀನನಾಥನ ಹೆಸರಿಗೆ.

ಅದನ್ನು ಸುಡುವುದರಲ್ಲಿ ನ್ಯಾಯಾಧಿಪತಿಗೇನಾದರೂ ಪ್ರಯೋಜನವಿದ್ದಿತೋ?

ಇದ್ದಿತೋ ಏನೋ ತಿಳಿಯದು. ಆ ಕಾಗದವನ್ನು ಅವನು ಎರಡು ಮೂರಾವೃತ್ತಿ ಓದಿ, ಆ ಹೆಸರನ್ನು ನೋಡಿ ಸಂಕಟಪಟ್ಟು, ಆ ವಿಷಯವಾಗಿ ಆರೊಡನೆಯೂ ಹೇಳುವುದಿಲ್ಲವೆಂದು ನನ್ನಿಂದ ಮಾತು ತೆಗೆದುಕೊಂಡನಲ್ಲದೆ ಪ್ರಮಾಣವನ್ನೂ ಮಾಡಿಸಿಕೊಂಡನು.

ನಾನು ಒಬ್ಬ ದೀನನಾಥನನ್ನು ಬಲ್ಲೆ; ಅವನು ಚಕ್ರವರ್ತಿಯ ಕ್ಷಿಗಾರರಲ್ಲಿ ಮುಖ್ಯಸ್ಥನು. ನಿನ್ನ ವಿಚಾರಣೆ ಮಾಡಿಗನನ ಹೆಸರೇನು? "ವಲ್ಲಭದೇವ."

ಹೀಗೆಂದ ಕೂಡಲೆ ಆನಂದನು ಅರ್ಧಘಂಟೆಯು ಕಾಲ ಹೊಟ್ಟೆ ಹುಣ್ಣಾಗುವಂತೆ ನಕ್ಕು, ಧರ್ಮದೇವನನ್ನು ನೋಡಿ ಇಗೋ, ಈ ಕಿಟಕಿಯಿಂದ ಬರುವ ಬಿಸಿಲನ್ನು ನೋಡಿದೆಯಾ ಎಂದನು.

ನೋಡಿದೆ. ಅದರಲ್ಲಿ ಏನು ವಿಶೇಷ?

ನಿನ್ನ ವಿಷಯವಾಗಿ ವಲ್ಲಭದೇವನು ತೋರಿಸಿದ ಕರುಣೆಯೂ ಇಂತಹದೆಂಬುದು ಈ ಬಿಸಿಲಿಗಿಂತ ಸ್ಪಷ್ಟವಾಗಿದೆ. ನಿನ್ನನ್ನು ಕಾಪಿಡಲೋಸುಗ ಅವನು ಆ ಲೇಖನವನ್ನು ಸುಡಲಿಲ್ಲ. ದೀನನಾಥನು ಆರು ಬಲ್ಲೆಯೋ? "ಇಲ್ಲ."

ಅವನು ವಲ್ಲಭದೇವನ ತಂದೆ.

ಈ ಮಾತನ್ನು ಕೇಳುತ್ತಲೆ ಧರ್ಮದೇವನು ಸಿಡಿಲು ಬಡಿದವನಂತೆ ತಟ್ಟನೆ ಮಂಚದಿಂದೆದ್ದು ಅವನ ತಂದೆ, ಅವನ ತಂದೆ, ಎಂದು ಹುಚ್ಚನಂತೆ ಸ್ವಲ್ಪಹೊತ್ತು ಓಡಾಡಿ, ಅನಂತರ ಸ್ವಾಮೀ! ಸ್ವಲ್ಪ ಕಾಲ ನಾನೊಬ್ಬನೇ ಇದ್ದು ಬರುತ್ತೇನೆ ಎಂದು ಹೇಳಿ ಆನಂದನ ಅನುಮತಿಯನ್ನು ಪಡೆದು ತನ್ನ ಕೂಪವನ್ನು ಸೇರಿ, ಮಂಚದ ಮೇಲೆ

ಬಿದ್ದುಕೊಂಡು ಹಿಂದೆ ನಡೆದ ಸಮಾಚಾರಗಳನ್ನೆಲ್ಲಾ ಒಂದೊಂದಾಗಿ ವಿಮರ್ಶಿಸಿ, ದೇವರ ಕೃಪೆಯಿಂದ ನನಗೆ ಇಲ್ಲಿಂದ ಬಿಡುಗಡೆಯಾದರೆ ಆ ದುರಾತ್ಮರೆಲ್ಲರಿಗೂ ತಕ್ಕ ಶಿಕ್ಷೆಯನ್ನು ಮಾಡದೆ ಬಿಡೆನು ಎಂದು ಪ್ರತಿಜ್ಞೆಮಾಡಿ ಸ್ಮೃತಿತಪ್ಪಿ ಬಿದ್ದಿದ್ದನು. ಅವನು ಎಷ್ಟು ಹೊತ್ತು ಹೀಗಿದ್ದನೋ ತಿಳಿಯದು. ಸಾಯಂಕಾಲ ಆಳು ಬಂದು ಹೋದುದೂ ಅವನಿಗೆ ತಿಳಿಯದು. ಧರ್ಮದೇವನು ಏತಕ್ಕೋ ಬರಲಿಲ್ಲವೆಂದು ಯೋಚಿಸಿ, ತನ್ನೆಡೆಗೆ ಆಳು ಬಂದು ಹೊರಟುಹೋದ ಮೇಲೆ, ಆನಂದನು ಅವನ ಬಿಲಕ್ಕೆ ಹೋಗಿ ಮಾತನಾಡಿಸಿ, ಅವನು ಮಾತಾಡದೆ ಇರುವುದನ್ನು ಕಂಡು, ಭುಜವನ್ನು ಹಿಡಿದು ಅಲುಗಿಸಲು, ಧರ್ಮದೇವನು ಎಚ್ಚತ್ತು ಆನಂದನನ್ನು ನೋಡಿ ನಕ್ಕನು.

ಯೋಗಾನಂದನು ಹುಚ್ಚನಾಗಿದ್ದರೂ ನಿರುಪದ್ರವನೆಂದು ಬಂದಿಶಾಲೆಯ ಅಧಿಕಾರಿಗಳಲ್ಲಿ ಪ್ರಸಿದ್ಧಿಹೊದ್ದಿದ್ದನಾದಕಾರಣ, ಅವನನ್ನು ಅವರೆಲ್ಲರೂ ಪ್ರೀತಿಸುತ್ತಲಿದ್ದರಲ್ಲದೆ ವಾರಕ್ಕೆ ಒಂದಾವೃತ್ತಿ ಬಳ್ಳಿಯ ಊಟವನ್ನೂ ಕೊಡುತ್ತಲಿದ್ದರು. ಈ ದಿನ ಅಂಥಾ ಊಟವು ಬಂದಿದ್ದುದರಿಂದ ಆದನ್ನು ಧರ್ಮದೇವನ ಜತೆಯಲ್ಲಿ ಊಟಮಾಡಬೇಕೆಂಬ ಆಸೆಯಿಂದ ಅವನನ್ನು ಕರೆದುಕೊಂಡು ಹೋಗಲು ಬಂದನು. ಆನಂದನು ಈ ಸಂಗತಿಯನ್ನು ಧರ್ಮದೇವನಿಗೆ ತಿಳಿಸಿ ಅವನನ್ನು ಜತೆಯಲ್ಲಿ ಕರೆದುಕೊಂಡು ಹೋದನು.

ಇಬ್ಬರೂ ಕೂಪವನ್ನು ಸೇರಿ ಊಟಕ್ಕೆ ಕುಳಿತಾಗ, ಆನಂದನು ಧರ್ಮದೇವನನ್ನು ನೋಡಿ ಈಗ ನೀನು ಪೂರ್ವದ ಧರ್ಮದೇವನಲ್ಲ ಎಂದನು.

ಅದೇಕೆ ತಾವು ಹಾಗೆ ಹೇಳುತ್ತೀರಿ?

ನಿನ್ನ ಮುಖವನ್ನು ನೋಡಿದರೆ ಹಗೆಗಳನ್ನು ಶಿಕ್ಷಿಸುವುದಕ್ಕೆ ಬದ್ಧಕಂಕಣನಾಗಿರುವಂತೆ ತೋರುತ್ತಿದೆ. ದೈವಸಮ್ಮತವಿಲ್ಲದ ಕಾರ್ಯವು ಎಂದಿಗೂ ನಡೆಯದು. ನಿನ್ನ ಶತ್ರುಗಳು ಮಾಡಿದ ಮೋಸಗಳನ್ನು ನಾನು ನಿನಗೆ ತಿಳಿಸಬಾರದಾಗಿದ್ದಿತು.

ಸ್ವಾಮೀ! ನನ್ನ ಮನಸ್ಸು ಇನ್ನೂ ಸಮಾಧಾನಸ್ಥಿತಿಗೆ ಬಂದಿಲ್ಲದುದರಿಂದ ಬೇರೆ ಮಾತನಾಡೋಣ.

ಧರ್ಮದೇವನ ಮನಸ್ಸನ್ನು ನೋಯಿಸಬಾರದೆಂದು ಊಟವು ಮುಗಿಯುವವರೆಗೆ ಆನಂದನು ಬೇರೆ ಮಾತುಕತೆಗಳನ್ನು ಹೇಳುತ್ತಲಿದ್ದನು. ಆನಂದನ ವಿದ್ಯೆ,

ಬುದ್ಧಿ, ನಡತೆ, ಗುಣ, ಮಾತು ಇವುಗಳನ್ನು ನೋಡಿ ಧರ್ಮದೇವನು ಆಶ್ಚರ್ಯಪಡುತ್ತ ಇವನು ಇಷ್ಟು ತಿಳಿದವನಾಗಿದ್ದರೂ ಒಂದು ದಿನವಾದರೂ ಆತ್ಮಸ್ತುತಿ ಪರನಿಂದೆಗಳನ್ನು ಮಾಡಿದವನಲ್ಲ; ಇವನ ಮಾತುಗಳು ಅವಾಗಲೂ ಜಾತಿರತ್ನಗಳಂತೆ ಅಮೌಲ್ಯವಾಗಿರುವುವು; ಅವುಗಳನ್ನು ಕೇಳುತ್ತ ಕೇಳುತ್ತ ಬುದ್ಧಿವಿಕಾಸವಾಗುವುದು. ನಾನು ಸಾಧ್ಯವಾದ ಮಟ್ಟಿಗೂ ಇವನಿಂದ ಸಕಲವಿಷಯಗಳನ್ನೂ ತಿಳಿಯಬೇಕು ಎಂದು ಆಲೋಚಿಸಿ, ಧರ್ಮದೇವನು ಆಸನದಿಂದೆದ್ದು, ಆನಂದನಿಗೆ ನಮಸ್ಕಾರ ಮಾಡಿಸ್ವಾಮೀ! ತಮ್ಮಂಥ ಜ್ಞಾನಿಗಳ ಮುಂದೆ ನಾನೆಷ್ಟರವನು? ತಮ್ಮ ಸಹವಾಸಮಾಡಲಿಕ್ಕೆ ತಕ್ಕಂತೆ ನನಗೆ ವಿದ್ಯಾದಾನ ಮಾಡಬೇಕು ಎಂದು ವಿನಯದೊಡನೆ ಪ್ರಾರ್ಥಿಸಿದನು. ಅವನ ವಿನಯಪೂರ್ವಕವಾದ ಪ್ರಾರ್ಥನೆಯನ್ನು ನೋಡಿ ಆನಂದನು ಸಂತೋಷಪಟ್ಟು ನಸುನಗುತ, ಅಪ್ಪಾ! ಮನುಷ್ಯನ ಜ್ಞಾನವು ಅತ್ಯಲ್ಪವಾದುದು; ಅದರಲ್ಲಿಯೂ ನನ್ನದು ಅಲ್ಪತರವು. ಆದುದರಿಂದ ನನಗೆ ತಿಳಿದುದನ್ನೆಲ್ಲಾ ನೀನು ಒಂದು ವರ್ಷದಲ್ಲಿ ಕಲಿತುಕೊಳ್ಳುವೆ ಎಂದನು.

ಅಷ್ಟನ್ನೂ ಒಂದು ವರ್ಷದಲ್ಲಿ ಕಲಿಯಬಹುದೋ?

ಕಲಿಯಬಹುದು; ಅವುಗಳ ಹುರುಳನ್ನು ತಿಳಿದು ಸಮಯಕ್ಕೆ ತಕ್ಕಂತೆ ಉಪಯೋಗಿಸಲು ಬುದ್ಧಿಯೂ, ವಿವೇಕವೂ, ಅನುಭವವೂ ಬೇಕು. ನಿನಗೇನೋ ಬುದ್ಧಿಯಿದೆ; ಮಿಕ್ಕವು ಕಾಲಕ್ರಮವಾಗಿ ಬರತಕ್ಕುವಲ್ಲದೆ ಕಲಿಸಿ ಬರತಕ್ಕವಲ್ಲ.

ತಾವು ವಿಷಯಗಳನ್ನು ಕಲಿಸಿದರೆ ಮಿಕ್ಕವು ತಮ್ಮ ಅನುಗ್ರಹದಿಂದ ತಿಳಿಯು ಬರುವುದು. ಅವಾಗ ಪಾಠವನ್ನು ಪ್ರಾರಂಭಿಸುವಿರಿ?

ಈಗಲೇ ಎಂದು ಆನಂದನು ಪಾಠಕ್ರಮದ ಪಟ್ಟಿಯೊಂದನ್ನು ಒರೆದು ಧರ್ಮದೇವನ ಕೈಯಲ್ಲಿ ಕೊಟ್ಟನು.

ಅಂದಿನಿಂದ ಪಾಠವು ಕ್ರಮವಾಗಿ ನಡೆಯುತ್ತ ಬಂದಿತು. ಧರ್ಮದೇವನು ತನ್ನ ಬುದ್ಧಿ ಜ್ಞಾಪಕಶಕ್ತಿಗಳ ಬಲದಿಂದ ಓದಿ, ಪಾಠಗಳನ್ನು ಚೆನ್ನಾಗಿ ಗ್ರಹಿಸುತ್ತ ಬಂದನು. ಸಮುದ್ರದಲ್ಲಿ ಹೆಚ್ಚಾಗಿ ಓಡಾಡಿ ಅನೇಕದೇಶೀಯರ ಸಂಗಡ ಮಾತನಾಡುತ್ತಲಿದ್ದುದರಿಂದ ಕೆಲವು ಭಾಷೆಗಳನ್ನು ಸುಮಾರಾಗಿ ತಿಳಿದಿದ್ದನು. ಒಂದೊಂದು ಭಾಷೆಯನ್ನು ಆನಂದನಿಂದ ಕಲಿಯುವಾಗಲೂ ಆಯಾಯ ಭಾಷೆಯಲ್ಲಿಯೇ ಅವನ ಸಂಗಡ ಮಾತ

ನಾಡುತ್ತ ಸುಮಾರು ಆರು ತಿಂಗಳುಗಳಲ್ಲಿ ಐದು ಭಾಷೆಗಳನ್ನು ಚೆನ್ನಾಗಿ ಮಾತನಾಡುವ ಶಕ್ತಿಯನ್ನು ಹೊದ್ದಿದನು. ತರುವಾಯ ಯೋಗಾನಂದನು ತನಗೆ ತಿಳಿದಿದ್ದ ಗಣಿತ, ವೈದ್ಯ, ರಸವಾದ ಮುಂತಾದ ಶಾಸ್ತ್ರಗಳನ್ನು ಧರ್ಮದೇವನಿಗೆ ಉಪದೇಶಮಾಡಿದನು. ಹೀಗೆ ಕೆಲವು ಕಾಲ ನಡೆದ ಬಳಿಕ, ಒಂದು ದಿನ ಯೋಗಾನಂದನು ಪಾಠವನ್ನು ಹೇಳುತ್ತಲಿರುವಾಗ ಅಂಗಳದಲ್ಲಿ ಸಿಪಾಯಿ ಇಲ್ಲದಿದ್ದರೆ ಅನುಕೂಲವಾಗಿದ್ದಿತು ಎಂದು ಹೇಳಿದನು. ಧರ್ಮದೇವನು ಆದರ ಅಭಿಪ್ರಾಯವನ್ನು ಗ್ರಹಿಸಿ ಅಪ್ಪಣೆಯಾದರೆ ಒಂದು ನಿಮಿಷದಲ್ಲಿ ಅವನಿಲ್ಲದಂತೆ ಮಾಡುವೆನು ಎನ್ನಲು, ಆನಂದನು ಅವನನ್ನು ಕೊಲ್ಲುವುದು ನನಗೆ ಎಂದೂ ಸಮ್ಮತಿ ಇಲ್ಲ; ಇದನ್ನು ನಾನು ನಿನಗೆ ಮೊದಲೇ ಹೇಳಿರುವೆನು ಎಂದು ಖಂಡಿತವಾಗಿ ಹೇಳಿದನು.

ತಮಗೆ ಬೇರೆ ಯೋಚನೆಯಿದ್ದರೆ ಅದನ್ನು ಅಪ್ಪಣೆಕೊಡಿರಿ, ಅದರಂತೆ ನಡೆಯುವೆನು.

ನಿನ್ನ ಕೂಪದಿಂದ ಸಿಪಾಯಿ ಓಡಾಡುವ ಅಂಗಳಕ್ಕೆ ಒಂದು ಸುರಂಗ ಹೊಡೆದು ಅಲ್ಲಿ ಹಾಸಿರುವ ಕಲ್ಲುಗಳಲ್ಲಿ ಒಂದನ್ನು ಸಡಲಿಸಿ, ಅದು ಕೆಳಗೆ ಬೀಳದಂತೆ ತಡೆಯಿಟ್ಟು, ಅನುಕೂಲವಾದ ಸಮಯವನ್ನು ನೋಡಿಕೊಂಡಿದ್ದು, ಇಟ್ಟಿರುವ ತಡೆಯನ್ನು ಕಿತ್ತು, ಸಿಪಾಯಿಯೊಡನೆ ಕಲ್ಲು ಕೆಳಗೆ ಉರುಳುವಂತೆ ಮಾಡಿ, ಕೆಳಕ್ಕೆ ಬಿದ್ದ ಸಿಪಾಯಿನ ಬಾಯಿಗೆ ಬಟ್ಟೆಯನ್ನು ತುರುಕಿ, ಕೈ ಕಾಲು ಕಟ್ಟಿ, ಅಂಗಳದ ಕಿಟಕಿಯ ಮೂಲಕ ನಮ್ಮ ನೂಲೇಣಿಯಿಂದ ಸಮುದ್ರಕ್ಕೆ ಇಳಿದು, ಅಲ್ಲಿಂದ ಸಮೀಪದಲ್ಲಿರುವ ದ್ವೀಪಕ್ಕೆ ಈಸಿಕೊಂಡು ಹೋಗಬೇಕೆಂದು ನಿಶ್ಚಯಿಸಿದೇನೆ. ಈ ಯೋಚನೆ ಸರಿಯೇ? ನಿನಗೇನು ತೋರುತ್ತದೆ ಹೇಳು

ಇದು ನನಗೂ ವಿಹಿತವಾಗಿಯೇ ತೋರುತ್ತಿದೆ. ಈ ಕೆಲಸವನ್ನು ಆವಾಗ ಪ್ರಾರಂಭಿಸೋಣ? "ನಾಳೆಯೇ."

ಮಾರನೆಯ ದಿನವೇ ಸುರಂಗದ ಕೆಲಸವನ್ನು ಪ್ರಾರಂಭಿಸಿ ಒಂದು ವರ್ಷದಲ್ಲಿ ಅದನ್ನು ಪೂರೈಸಿ, ಒಂದು ಅಮಾಸೆಯ ದಿವಸದ ರಾತ್ರಿ ಇಬ್ಬರೂ ಓಡಿಹೋಗುವುದಾಗಿ ನಿಶ್ಚಯಿಸಿ, ಆ ರಾತ್ರಿ ಮಾಡಬೇಕಾದ ಕೆಲಸಗಳನ್ನು ಆ ದಿನ ಮಧ್ಯಾಹ್ನ ಯೋಚಿಸುತ್ತಲಿದ್ದಾಗ, ಆನಂದನ ಮುಖವು ರಕ್ತ ಕಡಿಮೆಯಾಗಿ ಬೆವರುತ್ತಿರುವುದನ್ನೂ, ಅವನು

ತನ್ನ ಎರಡು ಕೈಗಳನ್ನು ಹಿಸಿಕಿಕೊಳ್ಳುವುದನ್ನೂ ಧರ್ಮದೇವನು ನೋಡಿ ಗಾಬರಿ ಬಿದ್ದು, ಅಯ್ಯೋ, ಇದೇನು ಗ್ರಹಚಾರ ಬಂದಿತು ಎಂದು ಗೋಳಾಡಲು, ಸನ್ಯಾಸಿಯು ಅವನನ್ನು ನೋಡಿ ಅಪ್ಪಾ! ನೀನು ಗಾಬರಿಬಿದ್ದರೆ ಕೆಲಸವು ಕೆಟ್ಟುಹೋಗುವುದು; ನಾನು ಹೇಳಿದಂತೆ ಮಾಡಿದರೆ ಒಂದು ವೇಳೆ ನಾನು ಬದುಕಿದರೂ ಬದುಕಬಹುದು. ಈಗ ನನಗೆ ಬರುವುದು ಅಪಸ್ಮಾರವು; ಇದೇ ಅದರ ಸೂಚನೆ. ಈ ರೋಗಕ್ಕೆ ಇರುವುದು ಒಂದೇ ಚಿಕಿತ್ಸೆ. ನನ್ನ ಮಂಚದ ಎಡಗಡೆಯ ಮುಂದಣ ಕಾಲನ್ನು ತೆಗೆದರೆ, ಅದರಲ್ಲಿ ಒಂದು ಸಣ್ಣಸೀಸೆಯಲ್ಲಿ ಕೆಂಪುದ್ರಾವಕ ಒಂದಿರುವುದು; ಅದನ್ನು ಕೈಯಲ್ಲೆತ್ತಿಕೊಂಡು ಈ ಜಾಡ್ಯದ ಕಿರುಚಾಟ ಒದ್ದಾಟಗಳೆಲ್ಲವೂ ನಿಂತಮೇಲೆ, ನನ್ನ ಬಾಯನ್ನು ಜಡಿಸಿ ಗಂಟಲಲ್ಲಿ ಹತ್ತು ತೊಟ್ಟು ದ್ರಾವಕವನ್ನು ಬಿಟ್ಟರೆ ದೈವಾನುಗ್ರಹದಿಂದ ನಾನು ಬದುಕಬಹುದು. ಒಂದು ವೇಳೆ ನನ್ನ ಕೂಗಾಟವು ಹೆಚ್ಚಾದರೆ, ಅದು ಹೊರಗೆ ಕೇಳಿಸದಂತೆ ಜೋಪಾನವಾಗಿ ನೋಡಿಕೋ; ಇಲ್ಲವಾದರೆ ನಮ್ಮಿಬ್ಬರನ್ನೂ ಬೇರೆ ಮಾಡುವರು ಎಂದನು.

ಹೀಗೆಂದ ಐದು ನಿಮಿಷಗಳಲ್ಲಿಯೇ ಆನಂದನಿಗೆ ಜ್ಞಾನತಪ್ಪಿ ಅವನ ಕಿರಿಚಾಟವು ಪ್ರಾರಂಭವಾಯಿತು. ಧರ್ಮದೇವನು ಅಲ್ಲಿದ್ದ ಕಂಬಳಿಯ ಚೂರನ್ನು ಅವನ ಬಾಯಿಗೆ ತುರುಕಿ ಅವನು ಹೇಳಿದಂತೆ ಸಕಾಲದಲ್ಲಿ ದ್ರಾವಕವನ್ನು ಅವನ ಗಂಟಲನಲ್ಲಿ ಬಿಟ್ಟನು. ಔಷಧಿಯು ಬಿದ್ದು ಒಂದು ಗಂಟೆಯಾದರೂ ಆನಂದನಿಗೆ ಜ್ಞಾನವೇ ಬರಲಿಲ್ಲವಾದುದರಿಂದ, ಧರ್ಮದೇವನು ಗಾಬರಿಬಿದ್ದು ಮುಂದೆ ತಾನು ಮಾಡಬೇಕಾದುದು ಅವುದೆಂದು ಯೋಚಿಸುತ್ತಲಿರುವಾಗ, ಯೋಗಿಯು ಕಣ್ಣು ಜಡಲು, ಅದನ್ನು ನೋಡಿ ನನ್ನ ಭಾಗದ ದೇವರೇ ನಿಮ್ಮನ್ನು ಬದುಕಿಸಿದನು ಎಂದು ಸಂತೋಷದಿಂದ ಗಟ್ಟಿಯಾಗಿ ಕೂಗಿಕೊಂಡನು. ಆ ವೇಳೆಗೆ ಸಂಜೆಯಾಯಿತು.

ಹೀಗೆ ಧರ್ಮದೇವನು ಗಟ್ಟಿಯಾಗಿ ಕೂಗುತ್ತಲೆ, ಮಾತನಾಡುವುದಕ್ಕೆ ಶಕ್ತಿಯಿಲ್ಲದುದರಿಂದ, ಆನಂದನು ಕೂಪದ ಬಾಗಿಲನ್ನು ಅವನಿಗೆ ತೋರಿಸಿದನು; ಬಾಗಿಲಲ್ಲಿ ಹಜ್ಜೆಗಳ ಸದ್ದಾದುವು. ಆಳು ಬರುವನೆಂದು ತಿಳಿದು ಧರ್ಮದೇವನು ತಟ್ಟನೆದ್ದು ಸುರಂಗದಲ್ಲಿ ಇಳಿದು ಅದರ ಬಾಯಿಗೆ ಕಲ್ಲನ್ನು ಮುಚ್ಚಿ, ತನ್ನ ಕೂಪವನ್ನು ಸೇರಿಕೊಂಡನು. ಅವನು ಅತ್ತಕಡೆ ಹೋದೊಡನೆಯೇ ಇತ್ತ ಆಳು ಆನಂದನಿಗೆ ಆಹಾರ

ವನ್ನು ತಂದಿಟ್ಟು ಅವನ ಮುಖವನ್ನು ನೋಡಿ ಇವನಿಗೆ ಇಂದು ಮೈಯ್ ಸ್ವಸ್ಥವಿಲ್ಲ ದಂತಿದೆ, ಎಂದು ತಿಳಿದು, ಅವನನ್ನು ಮಾತನಾಡಿಸಲು ಅವನು ಆವ ಬಗಲನ್ನೂ ಹೇಳದೆ ಸುಮ್ಮನಿದ್ದುದರಿಂದ ಬಾಗಿಲನ್ನು ಹೊಚ್ಚಿಕೊಂಡು ಹೊರಟುಹೋದನು.

ಆಳು ತನ್ನ ಕೂಪಕ್ಕೆ ಬಂದು ಹೋಗುವ ವರೆಗೆ ಕಾದಿದ್ದು, ಆನಂದನು ಹೇಗಿರುವನೋ ನೋಡಬೇಕೆಂದು, ಧರ್ಮದೇವನು ಅವನ ಕೂಪಕ್ಕೆ ಹೋದನು. ಅವನು ಬಂದುದನ್ನು ನೋಡಿ ಆನಂದನು ನೀನು ಪುನಃ ಇಲ್ಲಿಗೆ ಬರುವುದಿಲ್ಲವೆಂದು ಇದ್ದೆನು ಎಂದನು.

ಅದೇನು ಹೀಗೆ ಹೇಳುತ್ತೀರಿ ?

ಓಡಿಹೋಗಲು ಎಲ್ಲವೂ ಸಿದ್ಧವಾಗಿದ್ದು, ಅದಕ್ಕೆ ಅನುಕೂಲವಾಗಿ ಅಮಾವಾಸ್ಯೆಯ ಕತ್ತಲೂ ಒದಗಿದ್ದಿತು. ನನ್ನನ್ನು ಬಿಟ್ಟು ನೀನೊಬ್ಬನೇ ಓಡಿಹೋಗುವೆಯೋ ಏನೋ ಎಂದಿದ್ದೆ.

ಆನಂದನು ಹಾಗೆಂದುದನ್ನು ಕೇಳಿ, ಧರ್ಮದೇವನು ವ್ಯಸನಾಕ್ರಾಂತನಾಗಿ. ಸ್ವಾಮೀ ! ತಾವು ನನ್ನನ್ನು ಕೃತಘ್ನನೆಂದು ಎಣಿಸಿದಂತಿದೆ ; ನಾನು ಅಂಧವನಲ್ಲ ; ತಮ್ಮನ್ನು ಬಿಟ್ಟು ನಾನೆಂದಿಗೂ ಹೋಗತಕ್ಕವನಲ್ಲ ಎಂದನು.

ನಾನು ಹಾಗೆ ಯೋಚಿಸಿದುದು ತಪ್ಪೆಂದು ಈಗ ತೋರಿತು ನನ್ನನ್ನು ಕ್ಷಮಿಸು. ಈ ರೋಗದ ವಿಷಯವನ್ನು ನಿನಗೆ ಸ್ವಲ್ಪ ಹೇಳಿರುವೆನು ಕೇಳು. ನನ್ನನ್ನು ಸೆರೆ ಹಿಡಿಯುವುದಕ್ಕೆ ಒಂದು ವರ್ಷ ಹಿಂದೆ ಈ ರೋಗವು ನನಗೆ ಬಂದಿದ್ದಿತು ; ಆಗ ಒಬ್ಬ ವೈದ್ಯನು ನನ್ನ ಅವಸ್ಥೆಯನ್ನು ನೋಡಿ ದಯೆಯಿಟ್ಟು ತನ್ನಲ್ಲಿದ್ದ ದ್ರಾವಕವನ್ನು ಕೊಟ್ಟು ಗುಣಮಾಡಿ, ಈ ರೋಗದ ಅನುಪೂರ್ವಿಯನ್ನೆಲ್ಲಾ ವಿಚಾರಿಸಿ, ನನ್ನ ಮನೆತನದಲ್ಲಿ ಎಲ್ಲರಿಗೂ ಈ ರೋಗವಿತ್ತೆಂದು ತಿಳಿದು, ಈ ದ್ರಾವಕವನ್ನು ಮಾಡಿಕೊಟ್ಟನು. ಈ ರೋಗವು ಇನ್ನೊಂದು ಸಾರಿ ಬಂದರೆ ನಾನು ಬದುಕುವುದಿಲ್ಲ ನನ್ನ ಹಿರಿಯರೆಲ್ಲರೂ ಹೀಗೆಯೇ ಸತ್ತರು. ನಾನೂ ಹಾಗೆಯೇ ಈ ಕೂಪದಲ್ಲಿ ಸಾಯುವೆನು.

ಸ್ವಾಮೀ ! ಏತಕ್ಕೆ ಇಷ್ಟು ಅಧೈರ್ಯ ? ಎಂಟು ಹತ್ತು ದಿವಸಗಳಲ್ಲಿ ತಮಗೆ ಮನಶ್ಶಕ್ತಿಯು ಬರುವುದು. ಅನಂತರ ನಾವಿಬ್ಬರೂ ನಮ್ಮ ಏರ್ಪಾಡಿನಂತೆ ಸಮುದ್ರದಲ್ಲಿ ಬಿದ್ದು ದ್ವೀಪಾಂತರವನ್ನು ಸೇರೋಣ.

ಅಪ್ಪಾ! ನನ್ನ ಎಡಗಡೆಯ ಕೈಕಾಲುಗಳನ್ನು ನೋಡು; ಅವು ಸ್ವಾಧೀನವಿಲ್ಲದೆ ಕಟ್ಟಿಗೆಯಂತೆ ಇರುವುವು. ಈ ಸ್ಥಿತಿಯಲ್ಲಿರುವ ನನ್ನನ್ನು ಕಟ್ಟಿಕೊಂಡು ನೀನೇನ ಮಾಡಬಲ್ಲೆ?

ತಮ್ಮನ್ನು ನನ್ನ ಭುಜದ ಮೇಲೆ ಎತ್ತಿ ಈಸಿಕೊಂಡು ಹೋಗಬಲ್ಲೆನು. ನಾನೆಂದಿಗೂ ತಮ್ಮನ್ನು ಬಿಟ್ಟು ಹೋಗುವುದಿಲ್ಲ.

ಹೀಗೆಂದ ಧರ್ಮದೇವನ ದಯಾಳುವಾದ ಮನಸ್ಸನ್ನೂ ದೃಢಸಂಕಲ್ಪವನ್ನೂ ನೋಡಿ, ಆನಂದನು ಸಂತೋಷಪಟ್ಟು ಹಾಗೆಯೇ ಆಗಲಿ; ದೇವರು ನಿನಗೆ ಒಳ್ಳೆಯದನ್ನು ಮಾಡಲಿ! ನಿನ್ನ ಕಾರ್ಯಗಳೆಲ್ಲಾ ಕೈಗೂಡಲಿ ಎಂದು ಹರಸಿ, ಈಗ ತೋಡಿರುವ ಸುರಂಗವು ಹಾಗೆಯೇ ಇದ್ದರೆ ಸರಿಯಲ್ಲ; ಅದನ್ನು ಸದ್ಯಕ್ಕೆ ಮುಚ್ಚಿರು ಎಂದನು.

ಹದಿನಾಲ್ಕನೆಯ ಅಧ್ಯಾಯ.

ನಿಕ್ಷೇಪ.

ತನ್ನ ಬಲದಿಂದ ಮಾಡಿದ್ದ ಸುರಂಗವನ್ನು ಮುಚ್ಚುವುದರಲ್ಲಿಯೇ ಎರಡು ದಿವಸಗಳನ್ನು ಕಳೆದು, ಮೂರನೆಯ ದಿನ ಬೆಳಿಗ್ಗೆ ಆನಂದನ ಯೋಗಕ್ಷೇಮವನ್ನು ವಿಚಾರಿಸಲೋಸುಗ ಧರ್ಮದೇವನು ಅವನ ಬಿಲಕ್ಕೆ ಹೋದನು. ಅವನನ್ನು ನೋಡಿ ಆನಂದನು ತನ್ನ ಒಲಗೈಯಲ್ಲಿ ಇಟ್ಟುಕೊಂಡು ನೋಡುತ್ತಲಿದ್ದ ಅರ್ಧ ಸುಟ್ಟಿದ್ದ ಒಂದು ಸಣ್ಣ ಕಾಗದದ ಸುರುಳಿಯನ್ನು ಅವನ ಮುಂದೆ ನೀಡಲು, ಧರ್ಮದೇವನು ಇದೇನೆಂದು ಕೇಳಿದನು. ಅದಕ್ಕೆ ಆನಂದನು ಓದಿನೋಡು, ತಿಳಿಯುವುದು ಎಂದನು.

ಈ ಕಾಗದದಲ್ಲಿ ಬರೆದಿರುವುದು ಇಂತಹುದೆಂದು ಗೊತ್ತಾಗುವುದಿಲ್ಲ; ಇದೂ ಅಲ್ಲದೆ ಅರ್ಧ ಬರವಣಿಗೆಯೆಲ್ಲಾ ಸುಟ್ಟುಹೋಗಿದೆ.

ಅಪ್ಪಾ! ಇದೇ ನನ್ನ ಧನ; ಇಂದಿನಿಂದ ಈ ಧನದಲ್ಲಿ ಅರ್ಧ ನಿನ್ನದೆಂದು ಸಂಕಲ್ಪಿಸಿರುತ್ತೇನೆ. ಈ ಧನದ ವಿಷಯವಾಗಿ ನಾನೆಷ್ಟು ಹೇಳಿದರೂ ಯಾರೂ ನನ್ನ ಮಾತನ್ನು ನಂಬದೆ ಇವನಿಗೆಲ್ಲೋ ಹುಚ್ಚು ಹಿಡಿದಿದೆ ಎಂದು ಹೇಳುತ್ತಾರೆ; ನನ್ನ ಸಮಾಚಾರವನ್ನೆಲ್ಲಾ ಚೆನ್ನಾಗಿ ಬಲ್ಲ ನೀನು ನನಗೆ ಹುಚ್ಚು ಹಿಡಿದಿಲ್ಲವೆಂದು ಬಲ್ಲೆ.

ಈ ಅಮೌಲ್ಯವಾದ ಕಾಗದವನ್ನು ಇದುವರೆಗೂ ನಾನು ಆರಿಗೂ ತೋರಿಸಿರಲಿಲ್ಲ; ನಿನ್ನ ಶೀಲಸ್ವಭಾವಗಳನ್ನು ನಾನು ಚೆನ್ನಾಗಿ ಪರೀಕ್ಷಿಸಿ ಮೆಚ್ಚಿರುವುದರಿಂದ ನಿನಗೆ ಈಗ ತೋರಿಸುವೆನು. "ನಿಮ್ಮ ಧನ" ಎಂದು ಧರ್ಮದೇವನು ವ್ಯಸನಾಕ್ರಾಂತನಾದನು.

ಧರ್ಮದೇವನೂ ಎಲ್ಲರಂತೆಯೇ ಆನಂದನು ಹುಚ್ಚನೆಂದು ಮೊದಲು ತಿಳಿದಿದ್ದನು. ಆನಂದನ ಸಂಗಡ ಕೂಡಾಡಿ ಅವನಲ್ಲಿ ವಿದ್ಯಾಭ್ಯಾಸ ಮಾಡಿದ ಮೇಲೆ ಅವನ ಬುದ್ಧಿಯು ಸರಿಯಾಗಿದೆ ಎಂದು ತಿಳಿದನು. ಇಷ್ಟು ದಿವಸಗಳ ವರೆಗೂ ಆನಂದನು ಈ ಧನದ ಪ್ರಸ್ತಾಪವನ್ನು ಮಾಡದಿದ್ದುದರಿಂದ ಈ ಹುಚ್ಚು ಬಿಟ್ಟು ಹೋಯಿತೆಂದು ಸಂತೋಷವಾಗಿದ್ದನು. ಈಗ ಆನಂದನು ಪುನಃ ಆ ಪ್ರಸ್ತಾಪವನ್ನು ಮಾಡಲು ಅಯ್ಯೋ ಪಾಪ! ಇವನಿಗೆ ಬಂದಿದ್ದ ವ್ಯಾಧಿಯ ದೆಸೆಯಿಂದ ಈ ಹುಚ್ಚು ಮರಳಿ ಬಂದಿತಲ್ಲಾ ಎಂದು ವ್ಯಸನಪಟ್ಟನು.

ಆನಂದನು ಧರ್ಮದೇವನ ಅಭಿಪ್ರಾಯವನ್ನು ತಿಳಿದು ಅಪ್ಪಾ! ನಿನ್ನ ವ್ಯಸನಕ್ಕೆ ಕಾರಣವನ್ನು ನಾನು ಬಲ್ಲೆ; ನಾನು ಹುಚ್ಚನಲ್ಲ. ಈ ಧನವಿರುವುದು ವಾಸ್ತವ; ಅದನ್ನು ಅನುಭವಿಸುವ ಪ್ರಾಪ್ತಿ ನನಗಿಲ್ಲವೆಂದು ತೋರುತ್ತದೆ; ನೀನಾದರೂ ಅನುಭವಿಸುವನಾಗು. ಅದರ ಸಮಾಚಾರವನ್ನು ನಿನಗೆ ಹೇಳುವೆನು; ನಿಧಾನವಾಗಿ ಕೇಳು, ಎಂದನು.

ಇಷ್ಟು ಹೇಳಿದರೂ ಧರ್ಮದೇವನಿಗೆ ನಂಬುಗೆಯುಂಟಾಗದೆ ಸ್ವಾಮೀ, ತಮಗೆ ಬಂದಿರುವ ರೋಗವು ಪರಿಹಾರವಾದರೂ, ಅದರ ಉತ್ತರಾವಸ್ಥೆಯು ಇನ್ನೂ ನಿವಾರಣೆಯಾಗಲಿಲ್ಲವೆಂದು ತೋರುತ್ತದೆ. ಆದುದರಿಂದ ಈಗ ತಮಗೆ ಬೇಕಾಗಿರುವುದು ಉಪಚಾರವೇ ಹೊರತು ಧನವಲ್ಲ. ಧನದ ವಿಚಾರ ಮತ್ತೊಂದು ವೇಳೆ ಆಗಲಿ ಎಂದನು.

ಈ ರೋಗವು ಮೂರನೆಯ ಸಾರಿ ಬಂದರೆ ನಾನು ಒದುಕಲಾರೆನೆಂದು ವೈದ್ಯನು ಹೇಳಿದ್ದನು; ನನಗೂ ಹಾಗೆಯೇ ತೋರುತ್ತದೆ. ಇದು ಪುನಃ ಆವಾಗ ಬರುವುದೋ ಗೊತ್ತಿಲ್ಲವಾದುದರಿಂದ, ಈ ಧನದ ವಿಷಯವನ್ನು ಎಷ್ಟು ಜಾಗ್ರತೆಯಾಗಿ ನಿನಗೆ ತಿಳಿಸಿದರೆ ಅಷ್ಟು ಒಳ್ಳೆಯದು ಎಂದ ಮಾತನ್ನು ಕೇಳುತ್ತಲೇ ಧರ್ಮದೇವನು ಮುಖವನ್ನು ಮರೆಮಾಡಿಕೊಂಡು ನಿಟ್ಟುಸಿರುಬಿಟ್ಟನು. ಇದನ್ನು ನೋಡಿದ ಯೋಗಾನಂದನು ಅಪ್ಪಾ! ನಿನಗೆ ಇನ್ನೂ ಅನುಮಾನ ಬಿಡಲಿಲ್ಲ; ವಿಷಯವನ್ನು ಚೆನ್ನಾಗಿ ಪರೀಕ್ಷಿಸಿದ

ಹೊರತು ನಿನ್ನ ಅನುಮಾನವು ಪರಿಚೇದವಾಗಲಾರದು. ಇಗೋ! ಈ ಕಾಗದವನ್ನು ಓದಿ ನೋಡು ಎಂದು ಹೇಳಿ ಅವನ ಕೈಯಲ್ಲಿ ಮತ್ತೊಂದು ಕಾಗದವನ್ನು ಕೊಟ್ಟನು. ಓದದಿದ್ದರೆ ಅನಂದನಿಗೆ ಎಲ್ಲಿ ಅಸಮಾಧಾನವಾದೀತೋ ಎಂಬ ಭೀತಿಯಿಂದ ಧರ್ಮ ದೇವನು ಅದನ್ನು ಓದಿ ನೋಡಿದನು. ಅದರಲ್ಲಿ ಈ ರೀತಿಯಿದ್ದಿತು.

ನನ್ನನ್ನು ವಿಷವಿಟ್ಟು ಕೊಂದು ನನ್ನ ಆಸ್ತಿ.....
ಕೆಂಬ ಯೋಚನೆಯು ನಮ್ಮ.. ....
ಹು ದಿವಸಗಳಿಂದ ಇರುವುದೆಂ..... .....
ಸಂಭವಿಸುವುದೋ ಎಂಬ ಭೀತಿಯಿಂದ..... .....
ಕೋಟಿ ವರಹಗಳ ಬೆಲೆಯುಳ್ಳ ನನ್ನಲ್ಲಿರತಕ್ಕ ವಜ್ರ.....
ರ ಅಮೂಲ್ಯವಾದ ರತ್ನಗಳು, ಮುತ್ತುಗಳು.....
ಚಿನ್ನದ ನಾಣ್ಯಗಳು, ಆಭರಣಗಳು.....
ದ್ವೀಪದ ಗುಹೆಯಲ್ಲಿರುವ..... .....
ಲೆಯಲ್ಲಿ ನಿಕ್ಷೇಪ ಮಾಡಿರುವೆನು.....
ತ್ತನೆಯ ಕಲ್ಲನ್ನೆತ್ತಿದರೆ ....
ಹೆಯ ವಾಯವ್ಯ..... .....
ಮೇಲೆ ಕಂಡ ನನ್ನ ಆಸ್ತಿಯನ್ನೆಲ್ಲಾ..... .....
ನಿಗೆ ದಾನಮಾಡಿರುವೆನು..... .....
ನಾ.....
ಪ್ರ ....

ಅದನ್ನು ಓದಿದ ಮೇಲೆ ಧರ್ಮದೇವನು ನನಗೆ ಇದು ಅರ್ಥವೇ ಆಗಿಲ್ಲ ಎಂದನು.

ಅದು ನಿನಗೆ ಈಗ ಅರ್ಥವಾಗಲಾರದು. ಅದರ ಪೂರ್ವೋತ್ತರಗಳು ತಿಳಿದು ಮತ್ತೊಂದು ಭಾಗವನ್ನೂ ಓದಿನೋಡಿದರೆ ಆಮೇಲೆ ಗೊತ್ತಾಗುವುದು.

ನ್ವಾಮೀ! ಈ ಧನವು ಇರುವುದೆಂದು ತಾವು ನಂಬಿರುವಿರೋ?

ನನಗೆ ಆ ನಂಬುಗೆಯುಂಟು; ಹಿಂದಣ ಕಥೆಯನ್ನು ಕೇಳಿದರೆ ನಿನಗೂ ನಂಬುಗೆಯುಂಟಾಗುವುದು. ಅದನ್ನು ಸಾವಧಾನನಾಗಿ ಕೇಳು.

ಆ ಕಥೆಯನ್ನು ಕೇಳಲು ಧರ್ಮದೇವನಿಗೆ ಇಷ್ಟವಿರಲಿಲ್ಲ. ಅವನ ಅಭಿಪ್ರಾಯದಲ್ಲಿ ಆನಂದನ ಧನವು ಕನಸಿನ ಗಂಟಂತಿದ್ದಿತು. ಆದರೂ ಆನಂದನಿಗೆ ಅಸಮಾಧಾನವಾಗದಿರಬೇಕೆಂದು ಅವನ ಕಥೆಯನ್ನು ಕೇಳಲು ಕುಳಿತನು. ಅಷ್ಟರಲ್ಲಿಯೇ ಬಿಲದ ಹೊರಗೆ ಆರೋ ಜನರು ಬರುವ ಸದ್ದಾಯಿತು. ಒಡನೆಯೇ ಸನ್ಯಾಸಿಯಿಂದ ತಪ್ಪಿಸಿಕೊಂಡು ಹೋಗಲು ಅನುಕೂಲವಾದ ಸೆಪವು ಸಿಕ್ಕಿತೆಂದು ಧರ್ಮದೇವನು ತಟ್ಟನೆದ್ದು, ಸುರಂಗದ ಬಾಗಿಲನ್ನು ಮುಚ್ಚಿಕೊಂಡು ತನ್ನ ಬಿಲವನ್ನು ಸೇರಿದನು.

ಅತ್ತ ಆನಂದನು ತನ್ನ ಕೈಯಲ್ಲಿದ್ದ ಕಾಗದದ ಚೂರುಗಳನ್ನು ಹಾಸಿಗೆಯ ಕೆಳಗೆ ಮುಚ್ಚಿಟ್ಟು ಸುರಂಗದ ಬಾಯಿಗೆ ಮುಚ್ಚಿದ್ದ ಕಲ್ಲಿನ ಮೇಲೆ ತನ್ನ ಹಳೇ ಚಾಪೆಯನ್ನು ಹಾಸಿ ಅದರ ಮೇಲೆ ಎಂದಿನಂತೆ ಕುಳಿತಿದ್ದನು. ಬಿಲದ ಬಾಗಿಲು ತೆಗೆಯುತ್ತಲೆ, ಅಧಿಕಾರಿಯು ಒಳಕ್ಕೆ ಬಂದನು. ಅವನನ್ನು ನೋಡಿದ ಕೂಡಲೆ, ತನ್ನ ವ್ಯಾಧಿಯು ಸಮಾಚಾರವನ್ನು ಆಳಿನಿಂದ ತಿಳಿದು ತನ್ನ ಯೋಗಕ್ಷೇಮವನ್ನು ವಿಚಾರಿಸಲು ಬಂದಿರುವನೆಂದು ಊಹಿಸಿ, ತಾನು ವ್ಯಾಧಿಗ್ರಸ್ತನೆಂದು ತಿಳಿದರೆ ಈ ಕೂಪವನ್ನು ತಪ್ಪಿಸಿ ಬೇರೆ ಕಡೆ ಕಳುಹಿಸಿದರೆ ಎಲ್ಲಿ ಧರ್ಮದೇವನ ಸಹವಾಸವು ತಪ್ಪಿಹೋಗುವುದೋ ಎಂದು ದಿಗಿಲುಪಟ್ಟು, ಸ್ವಸ್ಥವಾಗಿರುವಂತೆ ನಟಿಸಿದನು. ಅಧಿಕಾರಿಯು ಆನಂದನನ್ನು ನೋಡಿ ಇವನಿಗೆ ಎಲ್ಲೆಯೋ ದೇಹವು ಜಡವಾಗಿದ್ದಿರಬೇಕು ಎಂದು ಗೊಣಗುಟ್ಟುತ್ತ ಹೊರಟು ಹೋದನು.

ತನ್ನ ಕೂಪವನ್ನು ಸೇರುತ್ತಲೆ, ಧರ್ಮದೇವನಿಗೆ ನಾನಾವಿಧವಾದ ಆಲೋಚನೆಗಳುಂಟಾದವು. ಸನ್ಯಾಸಿಯ ಮನೋವ್ಯವಹಾರವನ್ನೂ ಮಾತುಕತೆಗಳನ್ನೂ ನೋಡಿದರೆ ಅವನನ್ನು ಹುಚ್ಚನೆಂದು ಹೇಳುವಹಾಗೇ ಹುಚ್ಚರು; ಧನದ ವಿಚಾರ ನೋಡಿದರೆ ಅವನಿಗೆ ಹುಚ್ಚಿಲ್ಲವೆಂದು ಹೇಳದೆ ಇರುವುದಕ್ಕಾಗುವುದಿಲ್ಲ; ಈ ಧನವು ಕಾದುರೆಯು ಕೊಂಬಿನಂತೆಯೋ, ಇಲ್ಲ ನಿಜವೋ? ಆನನಿಗೆ ಇಷ್ಟು ಧನವಿದ್ದಿದ್ದರೆ ಅವನು ಈ ಗತಿಗೆ ಏಕೆ ಬರುತ್ತಲಿದ್ದನು? ಬಂದು ನೋಳಿ ಅದು ಇನ್ನೂ ಅವನ ಕೈಗೆ ಸಿಕ್ಕಿವಹಾರದು, ಅಥವಾ ಅದನ್ನು ಅನುಭವಿಸುವ ಪ್ರಾಪ್ತಿಯಿಲ್ಲದೆ ಇರಬಹುದು. ಮಿಕ್ಕಾದ ವಿಷಯ

ಗಳಲ್ಲೆಲ್ಲಾ ಬುದ್ಧಿವಂತನಾಗಿಯೂ ವಿವೇಕಿಯಾಗಿಯೂ ಇರುವ ಅವನು ಈ ಧನದ ವಿಷಯದಲ್ಲಿ ಮಾತ್ರ ಹುಚ್ಚನೆಂದರೆ ನಂಬಲಾದೀತೇ? ಅದರೆ ಲೋಕದಲ್ಲಿ ಕೆಲವರು ಏಕವಿಷಯೋನ್ಮತ್ತರಾಗಿರುವರೆಂದು ಕೇಳಿದ್ದೇನೆ; ಅವನೂ ಏತಕ್ಕೆ ಅಂಧವನಾಗಿರ ಬಾರದು ಎಂದು ಈ ರೀತಿಯಾಗಿ ಪರಸ್ಪರವಿರೋಧಾಲೋಚನೆಗಳು ಹುಟ್ಟಿ ಅವು ದನ್ನೂ ನಿರ್ಣಯಿಸಲರಿಯದೆ ಧರ್ಮದೇವನು ಪೇಚಾಡುತ್ತಿರಲು, ಆನಂದನು ತನ್ನ ಬಿಲ ದಿಂದ ಕಷ್ಟಪಟ್ಟುಕೊಂಡು, ಧರ್ಮದೇವನ ಬಿಲಕ್ಕೆ ಬಂದು ಅಪ್ಪಾ! ನಾನು ಕೊಡ ಬೇಕೆಂದಿರುವ ದಾನವನ್ನು ಸ್ವೀಕರಿಸಕೂಡದೆಂದು ನೀನು ಎಷ್ಟು ತಪ್ಪಿಸಿಕೊಂಡು ಹೋದರೂ ನಾನು ಬೇರೆ ನಿನ್ನನ್ನು ಬಿಡುವವನಲ್ಲ. ಈ ಧನದ ವಿಚಾರವನ್ನು ನಿನಗೆ ತಿಳುಹಬೇಕೆಂಬ ಕುತೂಹಲದಿಂದ ಕಷ್ಟಪಟ್ಟು ಕೊಂಡು ಇಲ್ಲಿಗೆ ಬಂದೆನು ಎಂದನು.

ಆನಂದನಿಂದ ತಪ್ಪಿಸಿಕೊಳ್ಳವುದಕ್ಕಾಗುವುದಿಲ್ಲವೆಂದು ತಿಳಿದು ಧರ್ಮದೇವನು ಅವನನ್ನು ತನ್ನ ಮಂಚದ ಮೇಲೆ ಕುಳ್ಳಿರಿಸಿ ತಾನು ಒಂದು ಕಾಲುಮಣೆಯ ಮೇಲೆ ಕುಳಿತನು. ಆನಂದನು ತನ್ನ ಕಥೆಯನ್ನು ಈ ರೀತಿ ಪ್ರಾರಂಭಿಸಿದನು.

ಈಗ ಸುಮಾರು ಮುನ್ನೂರು ವರ್ಷಗಳ ಹಿಂದೆ ಕಳಿಂಗವೆಂಬುದೊಂದು ದೊಡ್ಡ ರಾಜ್ಯವಿದ್ದಿತು. ಆ ರಾಜ್ಯದಲ್ಲಿ ದುಷ್ಟಬುದ್ಧಿಯೆಂಬ ಒಬ್ಬ ದೊರೆಯು ಇದ್ದನು. ಬಾಲ್ಯದಲ್ಲಲ್ಲಯೇ ಅವನ ತಂದೆಯು ಕಾಲವಾದುದರಿಂದ, ಪ್ರಧಾನನಾಗಿದ್ದ ನಾಗೇಂದ್ರ ನೆಂಬುವನು ದುಷ್ಟಬುದ್ಧಿಗೆ ಪಟ್ಟಾಭಿಷೇಕಮಾಡಿ, ಅವನ ಹೆಸರಿನಲ್ಲಿ ತಾನು ರಾಜ್ಯ ವಾಳುತ್ತಿದ್ದನು.

ನಾಗೇಂದ್ರನು ದೊಡ್ಡ ಮನೆತನದವನು: ಅವನ ಪೂರ್ವಿಕರೆಲ್ಲರೂ ಶ್ರೀಮಂತ ರಾಗಿಯೂ ವಿವೇಕಿಗಳಾಗಿಯೂ ಇದ್ದುದರಿಂದ ಹಿರಿಯರು ಗಳಿಸಿಟ್ಟಿದ್ದ ಧನವನ್ನು ಕಾಪಿಟ್ಟುಕೊಂಡು ಬಂದುದಲ್ಲದೆ ತಾವು ಗಳಿಸುವ ಧನದಿಂದ ವೃದ್ಧಿಪಡಿಸುತ್ತಲೂ ಇದ್ದರು. ಅವರ ಕಾಲಾನಂತರ ಆ ಧನವೆಲ್ಲಾ ನಾಗೇಂದ್ರನಿಗೆ ಸೇರಿತು. ಇವನಿಗೆ ಬಹುಕಾಲ ಮಕ್ಕಳಿಲ್ಲದೆ ಇದ್ದು, ಅನಂತರ ಒಬ್ಬ ಮಗನು ಹುಟ್ಟಿ, ಹದಿನೆಂಟು ವಯಸ್ಸು ಬಳೆದು ಮೃತಪಟ್ಟನು. ಮಗನು ಹೋದ ಅರುತಿಂಗಳಲ್ಲಿಯೇ ಅವನ ಮಡದಿಯೂ ದೈವಾಧೀನೆಯಾದಳು. ಅಪರವಯಸ್ಕನಾಗಿದ್ದುದರಿಂದ ನಾಗೇಂದ್ರನು ಪುನರ್ವಿವಾಹದ

ಯೋಚನೆಯುನ್ನು ಬಿಟ್ಟು ತನ್ನ ಸಂಪಾದನೆಯನ್ನೆಲ್ಲಾ ವಿಶೇಷವಾಗಿ ದಾನಧರ್ಮಂಗಳಂ ಮಾಡುವುದರಲ್ಲಿ ವೆಚ್ಚಮಾಡುತ್ತಲಿದ್ದನು.

ದುಷ್ಟಬುದ್ಧಿಯು ಪ್ರಾಪ್ತವಯಸ್ಕನಾದ ಮೇಲೆ ರಾಜ್ಯಭಾರವನ್ನು ತಾನೇ ವಹಿಸಿ ದುರ್ಮಂತ್ರಿಗಳ ಸಹವಾಸಬೋಧನೆಗಳಿಂದ ನಾಗೇಂದ್ರನು ಗಳಿಸಿ ಬಂಡಾರದಲ್ಲಿಟ್ಟಿದ್ದ ದ್ರವ್ಯವನೆಲ್ಲ ದುರುಪಯೋಗಪಡಿಸಿದುದಲ್ಲದೆ, ನಾಗೇಂದ್ರನು ತನ್ನಲ್ಲಿರುವ ಅಪಾರವಾದ ಧನವನ್ನು ತನ್ನ ಸೋದರಳಿಯ ಮಹೇಂದ್ರನಿಗೆ ಕೊಟ್ಟುಬಿಟ್ಟನು. ಅವರಿಬ್ಬರನ್ನೂ ವಿಷಹಾಕಿ ಕೊಂದರೆ ಜನಗಳ ದೂರಿಗೆ ಸಿಕ್ಕದೆ, ಹಣವನ್ನೆಲ್ಲ ತನ್ನ ಭಂಡಾರಕ್ಕೆ ಸೇರಿಸಿ ಕೊಳ್ಳಬಹುದೆಂಬ ದುರಾಲೋಚನೆಯಿಂದ, ಅವರಿಬ್ಬರಿಗೂ ವಿಷಪ್ರಾಶನಮಾಡಿಸಲು ಶಕ್ಯ ಏರ್ಪಾಡುಗಳನ್ನೆಲ್ಲಾ ಮಾಡಿಸಿದನು.

ನಾಗೇಂದ್ರನು ಎಲ್ಲಿ ಹೋಗುವುದಕ್ಕೂ ದಿಕ್ಕು ತೋಚದೆ ದೇವರು ಮಾಡಿದ ಹಾಗಾಗಲಿ ಎಂದು ಸುಮ್ಮನಿದ್ದನು. ಅವನಿಗೆ ತನ್ನ ಸೋದರಳಿಯನನ್ನು ದೊರೆಯು ಕೊಲ್ಲಿಸುವನೆಂಬ ಸಂಗತಿಯು ತಿಳಿಯದು. ಆದುದರಿಂದ ತನ್ನ ಮರಣಶಾಸನವನ್ನು ಬರೆದಿಟ್ಟು ಮಹೇಂದ್ರನಿಗೆ ಕೆಲವು ಸಮಾಚಾರಗಳನ್ನು ಹೇಳಿ ಕಳುಹಿಸಿದ್ದನು ಮಹೇಂದ್ರನಿಗೆ ಈ ಸಮಾಚಾರಗಳು ಸೇರುವುದರೊಳಗಾಗಿ ಸಮಯವನ್ನು ನಿರೀಕ್ಷಿಸುತ್ತ ಲಿದ್ದ ದೊರೆಯು, ಅವರಿಬ್ಬರನ್ನೂ ಏಕಕಾಲದಲ್ಲಿಯೇ ಕೊಲ್ಲಿಸಿ, ನಾಗೇಂದ್ರನ ಮನೆ ಯನ್ನು ಶೋಧನೆಮಾಡಿಸಲು, ಕೆಲವು ಬೆಳ್ಳಿ ಪಾತ್ರೆಗಳು ಚಿನ್ನದ ಒಡವೆಗಳು ವಿನಾ ಬೇರಾವುದೂ ಸಿಕ್ಕಲಿಲ್ಲ. ಅನಂತರ ನಾಗೇಂದ್ರನ ಮರಣಶಾಸನವನ್ನು ನೋಡಲು ತನ್ನ ಆಸ್ತಿಯನ್ನೆಲ್ಲಾ ಸೋದರಳಿಯ ಮಹೇಂದ್ರನಿಗೆ ಕೊಟ್ಟಿರುವಂತೆಯೂ, ವಂಶ ಪಾರಂಪರ್ಯವಾಗಿ ಬಂದಿರುವ ಸ್ತೋತ್ರರತ್ನವೆಂಬ ಗ್ರಂಥವನ್ನು ಆರಿಗೂ ಕೊಡದಂತೆ ತನ್ನ ಜ್ಞಾಪಕಾರ್ಥವಾಗಿ ಅವನೇ ಇಟ್ಟುಕೊಂಡು ವಿಶ್ವಾಸಪೂರ್ವಕ ಕಾಪಿಟ್ಟುಕೊಂಡು ಬರಬೇಕೆಂತಲೂ ಇದ್ದಿತು. ಪುಸ್ತಕಗಳು, ಕುರ್ಚಿ, ಮೇಜು ಮುಂತಾದ ಬೆಲೆಯಿಲ್ಲದೆ ಇರುವ ಪದಾರ್ಥಗಳು ವಿನಾ ಮಿಕ್ಕವೆಲ್ಲವನ್ನೂ ದೊರೆಯ ಕಡೆಯವರು ದೋಚಿ ಕೊಂಡು ಹೋದರು. ಈ ವಂಶದವರಲ್ಲಿದ್ದ ಅಪಾರವಾದ ಧನವು ಏನಾಯಿತೆಂಬುದು ಆರಿಗೂ ಗೊತ್ತಾಗಲಿಲ್ಲ.

ಮಹೇಂದ್ರನು ಸತ್ತಾಗ ಅವನ ಹೆಂಡತಿಯು ಗರ್ಭಿಣಿಯಾಗಿದ್ದಳು. ಕೆಲವು

ಮಾಸಗಳಾದ ಬಳಿಕ ಅವಳಿಗೆ ಒಬ್ಬ ಗಂಡುಮಗನು ಹುಟ್ಟಿ ಮಹೇಂದ್ರವಂಶವು ಅಂಕುರಿತವಾಯಿತು. ಈ ವಂಶದವರು ಬಹುಕಾಲ ಬಡವರಾಗಿದ್ದು ಕೊನೆಗೆ ಕಳಿಂಗ ದೇಶವನ್ನು ಬಿಟ್ಟು ಇಂದ್ರಪ್ರಸ್ಥದಲ್ಲಿ ನೆಲೆಗೊಂಡು, ಇವರಲ್ಲಿ ಕೊನೆಯವನಾದ ಜಿತೇಂದ್ರಿಯನೆಂಬುವನು ಸಕಲಶಾಸ್ತ್ರವಾರಂಗತನಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಪರಮಾನಂದನೆಂಬ ಹೆಸರಿನಿಂದ ಬೆಳಗುತ್ತಿದ್ದನು. ನಾನು ಅವನಿಗೆ ಶಿಷ್ಯನಾಗಿ ಬಹು ಕಾಲ ಅವನಲ್ಲಿ ವಿದ್ಯಾಭ್ಯಾಸವನ್ನು ಮಾಡಿ ಅವನ ಅಪ್ಪಣೆಯುಮೇರೆಗೆ ಅವನಲ್ಲಿದ್ದ ಕಾಗದ ಪತ್ರಗಳನ್ನೆಲ್ಲಾ ಓದಿ ಅವನ ವಂಶಚರಿತ್ರೆಯನ್ನು ಬರೆದೆನು. ನಾನು ಓದಿದ ಕಾಗದ ಪತ್ರಗಳಿಂದ ಪರಮಾನಂದನ ವಂಶದವರೆಲ್ಲರೂ ಶ್ರೀಮಂತರಾಗಿದ್ದರೆಂದು ತಿಳಿಯಬಂದಿತು; ಆದರೆ ಅವರು ಗಳಿಸಿಟ್ಟಿದ್ದ ಅಪರಿಮಿತವಾದ ಧನವೇನಾಯಿತೆಂಬುವುದು ಮಾತ್ರ ತಿಳಿಯಲಿಲ್ಲ. ಅದು ವ್ಯಯವಾಗದೆಯೂ ಅಪಹರಿಸಲ್ಪಡದೆಯೂ ಇದೆಯೆಂಬ ಸಂಗತಿ ಮಾತ್ರ ಚೆನ್ನಾಗಿ ದೃಢವಾಯಿತು ಅಂದಿನಿಂದ ನಾನೂ ಪರಮಾನಂದನೂ ಮನೆಯಲ್ಲಿದ್ದ ಪ್ರತಿಯೊಂದು ಕಾಗದವನ್ನೂ ಪುಸ್ತಕವನ್ನೂ ನೋಡಿ ನೋಡಿ ಕೊನೆಗೆ ಬೇಸತ್ತು, ಆ ಧನದ ಹಂಬಲನ್ನೇ ಬಿಟ್ಟು ಬಿಟ್ಟೆವು.

ಪರಮಾನಂದನಿಗೆ ಅಂತ್ಯಕಾಲವು ಸಮೀಪಿಸಿತು. ಆಗ ಅತನು ನನ್ನನ್ನು ಕರೆದು ಅಯ್ಯಾ, ನಾನು ಸನ್ಯಾಸಿಯಾದುದರಿಂದ ನನಗೆ ಹೆಂಡಿತಿ ಮಕ್ಕಳು ಆರೂ ಇಲ್ಲ; ನಮ್ಮ ವಂಶದವರು ಒಬ್ಬರೂ ಇಲ್ಲ. ನೀನು ನನ್ನ ಶಿಷ್ಯನಾದುದರಿಂದ ನೀನೇ ನನ್ನ ಮಗ; ನನ್ನ ಸರ್ವಸ್ವವನ್ನೂ ನಿನಗೆ ಕೊಟ್ಟರುವೆನು ಎಂದು ಹೇಳಿ ಸ್ವರ್ಗಸ್ಥನಾದನು. ಅವನಿಗೆ ಮಾಡಬೇಕಾದ ಉತ್ತರಕ್ರಿಯೆಗಳನ್ನೆಲ್ಲಾ ನಾನೇ ಮಾಡಿ ಅವನ ಮನೆಯಲ್ಲಿಯೇ ವಾಸಮಾಡುತ್ತ ಸ್ತೋತ್ರರತ್ನವು ಶ್ಲಾಘ್ಯವಾದ ಗ್ರಂಥವಾಗಿದ್ದುದರಿಂದ ಅವಾಗಲೂ ಅದನ್ನೇ ಓದುತ್ತ ಕಾಲವನ್ನು ಕಳೆಯುತ್ತಲಿದ್ದೆನು.

ಇಂದ್ರಪ್ರಸ್ಥದಲ್ಲಿ ಬೇಸಗೆಯಲ್ಲಿ ಬಲು ಬಿಸಿಲು; ಚಳಿಗಾಲದಲ್ಲಿ ಬಲು ಚಳಿ. ಚಳಿಗಾಲದಲ್ಲಿ ರಾತ್ರಿಯೂ ಹಗಲೂ ಬೆಂಕಿಯನ್ನು ಕಾಯದಿದ್ದರೆ ಸಹಿಸುವುದು ಕಷ್ಟವಾದುದರಿಂದ, ಕುಳಿತು ಮಲಗುವ ಕೊಟ್ಟಡಿಗಳಲ್ಲಿ ಅವಾಗಲೂ ಕುಂಪಟಿಯು ಇದ್ದೇ ಇರಬೇಕು. ನನ್ನನ್ನು ಸೆರೆ ಹಿಡಿಯುವುದಕ್ಕೆ ಹದಿನೈದು ದಿವಸಗಳ ಹಿಂದೆ ಒಂದು ದಿನ ರಾತ್ರಿ ಎಂದಿನಂತೆ ನಾನು ಓದುತ್ತಲಿದ್ದಾಗ, ಆ ದಿನ ನನಗೆ ಔತಣದ ಊಟವಾಗಿದ್ದು

ದರಿಂದ, ಹಾಗೆಯೇ ಕುರ್ಚಿಯ ಮೇಲೆ ಕುಳಿತು ಓದುತ್ತಲಿದ್ದವನು ನಿದ್ದೆ ಹೋದೆನು ಸುಮಾರು ಅರ್ಧರಾತ್ರಿಯಲ್ಲಿ ಎಚ್ಚರವಾಗಿ ಕಣ್ಣು ತೆರೆದು ನೋಡಿದೆನು. ದೀಪವು ನೊಂದಿಹೋಗಿ ಅಗ್ಗಿಷ್ಟಿಕೆಯೂ ಬೆಂಕಿಯೂ ತಣ್ಣಗಾಗುವುದರಲ್ಲಿದ್ದುವು. ದೀಪಕ್ಕೆ ಹೊತ್ತಿಸಲೋಸುಗ ಬೆಂಕಿಯ ಕಡ್ಡಿಯನ್ನು ಹುಡುಕಿದೆನು. ಅದು ಸಿಕ್ಕಲಿಲ್ಲ; ಅಗ್ಗಿಷ್ಟಿಕೆಯ ಬೆಂಕಿಯಲ್ಲಿ ದೀಪವನ್ನು ಹೊತ್ತಿಸಿ ಹಾಸಿಗೆಯನ್ನು ಹಾಸಿಕೊಂಡು ಮಲಗೋಣವೆಂದು ಯೋಚಿಸಿ ಕಾಗದದ ಚೂರನ್ನು ಹುಡುಕಿದೆನು. ಅದೂ ಕೈಗೆ ಸಿಕ್ಕದೆ ಇದ್ದುದರಿಂದ ಸ್ತೋತ್ರರತ್ನಗ್ರಂಥದಲ್ಲಿ ಗುರುತಿಗಾಗಿ ಇಟ್ಟಿದ್ದ ಬರೆಯು ಕಾಗದದ ಚೂರು ಜ್ಞಾಪಕಕ್ಕೆ ಬಂದು ಅದನ್ನು ತೆಗೆದು ಸುರಳಿಸುತ್ತಿ ಬೆಂಕಿಯಲ್ಲಿಟ್ಟು ಹೊತ್ತಿಸಿದೆನು. ಅದಕ್ಕೆ ಉರಿ ತಗುಲಿದ ಕೂಡಲೆ ಅದರಲ್ಲಿ ಅಕ್ಷರಗಳು ಸ್ಪಷ್ಟವಾಗಿ ಕಾಣಿಸುವುವು. ಅದನ್ನು ನೋಡಿ ನನಗೆ ಆಶ್ಚರ್ಯವ್ಯಾಪಾರವಾಗಿ ತಟ್ಟನೆ ಆ ಉರಿಯನ್ನು ಆರಿಸಿ ಬೇರೆ ಕಾಗದವನ್ನು ತೆಗೆದು ಅದರಿಂದ ದೀಪವನ್ನು ಹೊತ್ತಿಸಿದೆನು. ಬಳಿಕ ನಾನು ಆ ಅರ್ಧ ಸುಟ್ಟಿದ್ದ ಕಾಗದವನ್ನು ನೋಡಲು ಇದು ವರೆಗೆ ಬರೆಯು ಕಾಗದವೆಂದು ಸ್ತೋತ್ರರತ್ನದಲ್ಲಿ ಗುರುತಿಗಾಗಿ ಇಟ್ಟಿದ್ದುದು ಅವುದೋ ಒಂದು ಅಗೋಚರವಾದ ಮಸಿಯಲ್ಲಿ ಬರೆದು ಇಟ್ಟಿದ್ದ ನಾಗೇಂದ್ರನ ಮರಣಶಾಸನವೆಂದು ತೋರಿತು.

ತಾವು ಮೊದಲು ನನಗೆ ತೋರಿಸಿದುದು ಅದೇ ಕಾಗದವೋ?

ಅಹುದು. "ಹಾಗಾದರೆ ಸುಟ್ಟುಹೋದ ಭಾಗವನ್ನು ಹೇಗೆ ಪೂರ್ತಿ ಮಾಡಿದಿರಿ?"

ಆ ಕಾಗದದ ಅಳತೆಯೂ ಆ ಮನೆತನದವರ ಅಸ್ತಿಯೂ ಸುಮಾರಾಗಿ ನನಗೆ ಗೊತ್ತು ಇದ್ದಿತು. ಸುಟ್ಟುಹೋದ ಕಾಗದದಲ್ಲಿ ಎಷ್ಟು ಅಕ್ಷರಗಳು ಇರಬಹುದೆಂಬುದನ್ನು ನಿಂತ ಅರ್ಧಭಾಗದಲ್ಲಿರುವ ವಾಕ್ಯಗಳಿಗೆ ಆವ ವಾಕ್ಯಗಳು ಸೇರಿದರೆ ಅಭಿಪ್ರಾಯವು ಸರಿಹೋಗುವುದೆಂದು ಹತ್ತು ಹನ್ನೊಂದು ದಿವಸಗಳವರೆಗೆ ಯೋಚಿಸಿ ಅಲ್ಲಿಗೆ ಬೇಕಾದುದನ್ನು ನಿರ್ಣಯಿಸಿ, ಇಗೋ, ಈ ಕಾಗದದಲ್ಲಿ ಬರೆದಿರುವಂತೆ ಬರೆದೆನು. ಇದನ್ನು ಓದಿನೋಡು ಎಂದು ಧರ್ಮದೇವನಿಗೆ ಮತ್ತೊಂದು ಕಾಗದವನ್ನು ಕೊಟ್ಟೆನು.

... . ಯನ್ನೆಲ್ಲಾ ದೋಚಿಕೊಳ್ಳಬೇ
... ... ರಾಜನಾದ ದುಷ್ಟಬುದ್ಧಿಗೆ ಬ
... ... ದು ತಿಳಿದು, ನನಗೆ ಯಾವಾಗ ಮರಣವು
... ... ಸುಮಾರು ಹದಿಮೂರು
... ... ಕೆಂಪು ಪಚ್ಚೆ ಮತ್ತು ಇತ
... ... ಚಿನ್ನದ ಗಟ್ಟಿಗಳು
... ... ಇವೆಲ್ಲವನ್ನೂ ಮಲಯು
... ... ಸಣ್ಣ ಗುಹೆಯು ನೈಋತ್ಯದ ಮೂ
... ... ಆ ದ್ವೀಪದ ಪಶ್ಚಿಮದ ಕೊಲ್ಲಿಯಿಂದ ಇಪ್ಪ
.. .. ಗುಹೆಯ ಬಾಗಿಲು ಸಿಕ್ಕುವುದು. ಆ ಗು
... ... ಮೂಲೆಯಲ್ಲಿ ಸಣ್ಣ ಗುಹೆಯು ಬಾಗಿಲಿರುವುದು
... ... ನನ್ನ ಸೋದರಳಿಯ ಮಹೇಂದ್ರ
... ... ಗೇಂದ್ರ
.. .. ಧಾನ.

ಧರ್ಮದೇವನು ಇದನ್ನೂ ಓದಿ ಮುಗಿಸುತ್ತಲೆ, ಆನಂದನು ಈಗ ಈ ಎರಡು ಕಾಗದಗಳನ್ನೂ ಸೇರಿಸಿ ಓದಿನೋಡು ಎಂದನು. ಆಗ ಧರ್ಮದೇವನು ಆ ಎರಡು ಭಾಗಗಳನ್ನೂ ಸೇರಿಸಿ ಈ ಕೆಳಗಿರುವಂತೆ ಓದಿದನು:—

ನನ್ನನ್ನು ಶಿಷ್ಯನಿಟ್ಟು ಕೊಂದು ನನ್ನ ಆಸ್ತಿ...ಯನ್ನೆಲ್ಲಾ ದೋಚಿಕೊಳ್ಳಬೇ ಕೆಂಬ ಯೋಚನೆಯು ನಮ್ಮ ..ರಾಜನಾದ ದುಷ್ಟಬುದ್ಧಿಗೆ ಬಹು ದಿವಸಗಳಿಂದ ಇರು ವುದೆಂ...ದು ತಿಳಿದ, ನನಗೆ ಯಾವಾಗ ಮರಣವು ಸಂಭವಿಸುವುದೋ ಎಂಬ ಭೀತಿ ಯಿಂದ...ಸುಮಾರು ಹದಿಮೂರು ಕೋಟಿ ವರಹಗಳ ಬೆಲೆಯುಳ್ಳ ನನ್ನಲ್ಲಿರತಕ್ಕ ಪಚ್ಚ...ಕೆಂಪು, ಪಚ್ಚೆ ಮತ್ತು ಇತರ ಅಮೂಲ್ಯವಾದ ರತ್ನಗಳು, ಮುತ್ತುಗಳು...ಚಿನ್ನದ ಗಟ್ಟಿಗಳು, ಚಿನ್ನದ ನಾಣ್ಯ...ಳು, ಆಭರಣಗಳು...ಇವೆಲ್ಲವನ್ನೂ ಮಲಯದ್ವೀಪದ ಗುಹೆಯಲ್ಲಿರುವ ..ಸಣ್ಣ ಗುಹೆಯು ನೈಋತ್ಯದ ಮೂಲೆಯಲ್ಲಿ ನಿಕ್ಷೇಪಮಾಡಿರುವೆನು... ಆ ದ್ವೀಪದ ಪಶ್ಚಿಮದ ಕೊಲ್ಲಿಯಿಂದ ಇಪ್ಪತ್ತನೆಯ ಕಲ್ಲನ್ನೆತ್ತಿದರೆ...ಗುಹೆಯು ಬಾಗಿಲು

ಸಿಕ್ಕುವುದು. ಆ ಗುಹೆಯ ವಾಯವ್ಯ...ಮೂಲೆಯಲ್ಲಿ ಸಣ್ಣಗುಹೆಯು ಬಾಗಿಲಿರುವುದು. ಮೇಲೆ ಕಂಡ ನನ್ನ ಆಸ್ತಿಯನ್ನೆಲ್ಲಾ....ನನ್ನ ಸೋದರಳಿಯ ಮಹೇಂದ್ರನಿಗೆ ದಾನ ಮಾಡಿರುವೆನು.

ನಾ...ಗೇಂದ್ರ.

ಪ್ರ...ಧಾನ.

ಅದನ್ನು ಓದಿದ ಕೂಡಲೇ ಧರ್ಮದೇವನು ಇದು ಪ್ರತ್ಯೇಕ ಮರಣಪತ್ರವೆಂದೂ ಇದನ್ನು ಸ್ತೋತ್ರರತ್ನದಲ್ಲಿಟ್ಟಿದ್ದ ಕಾರಣ ನಾಗೇಂದ್ರನು ಆ ಪುಸ್ತಕವನ್ನು ಅರಗೂ ಕೊಡದೆ ಮಹೇಂದ್ರನೇ ಇಟ್ಟುಕೊಂಡಿರಬೇಕೆಂದು ಮತ್ತೊಂದು ಮರಣಶಾಸನದಲ್ಲಿ ಬರೆದಿದ್ದನೆಂದೂ ತೋರುತ್ತದೆ ಎಂದನು.

"ಅಹುದು." ತಮಗೆ ಈ ಸಮಾಚಾರವು ತಿಳಿದ ಮೇಲೆ ಏನ ಮಾಡಿದಿರಿ.

ಮಲಯದ್ವೀಪಕ್ಕೆ ಹೊರಡುವುದಕ್ಕೆ ಅತಿತ್ವರ್ಯದಿಂದ ಅಣಿಮಾಡಿಕೊಂಡೆನು. ನನ್ನ ಆತುರವನು ಕಂಡು ಇಂದ್ರಪ್ರಸ್ಥದ ರಾಜನಿಗೆ ಅನುಮಾನವು ಹುಟ್ಟಿ ನಾನು ಪಯಣಮಾಡುವುದರಲ್ಲಿಯೇ ನನ್ನನ್ನು ಸೆರೆಹಿಡಿದನು.

ಹದಿಮೂರು ಕೋಟಿ ವರಹಗಳು! ನಿಶ್ಚಯವಾಗಿಯೂ ಅಷ್ಟು ದ್ರವ್ಯ ವಿರುವುದೋ?

ನಾಗೇಂದ್ರನ ಚರಿತ್ರೆಯನ್ನು ನೀನು ಓದಿದರೆ ಅಷ್ಟು ಧನವಿರುವುದು ನಿಜವೆಂದು ನಿನಗೆ ಗೊತ್ತಾಗುವುದು.

ಧರ್ಮದೇವನಿಗೆ ಒಂದು ಕಡೆ ಸಂತೋಷ; ಮತ್ತೊಂದು ಕಡೆ ಅನುಮಾನ. ಆನಂದನು ಹುಚ್ಚನಲ್ಲ ಅವನು ಹೇಳುವ ಧನವು ಇದ್ದಿರಬಹುದು ಎಂಬ ಸಂತೋಷ; ಇಟ್ಟಿದ್ದ ಧನವು ಇನ್ನೂ ಅಲ್ಲಿಯೇ ಇರುವುದೋ ಇಲ್ಲವೋ ಎಂಬ ಅನುಮಾನ. ಒಂದು ವೇಳೆ ಆ ಧನವಿನ್ನೂ ಇದ್ದರೂ ಅದು ನ್ಯಾಯವಾಗಿ ಆನಂದನಿಗೆ ಸೇರತಕ್ಕುದೆಂದು ಯೋಚಿಸಿ ಸ್ವಾಮೀ! ಆ ಧನವು ತಮ್ಮದು, ನನ್ನದಲ್ಲ ಎಂದನು.

ಅಪ್ಪಾ, ನೀನು ನನಗೆ ಸೆರೆಮನೆಯಲ್ಲಿ ಹುಟ್ಟಿದ ಮಗನು. ದೇವರು ನಿನ್ನನ್ನು ನನಗೆ ಶಿಷ್ಯನನ್ನಾಗಿ ದಯೆಪಾಲಿಸಿದನು. ಶಿಷ್ಯನು ಪುತ್ರನಂತೆ ಎಂಬುದನ್ನು ಅರಿಯೆಯಾ? ನಾನು ಬದುಕಿದ್ದು ಇಬ್ಬರೂ ಜತೆಯಾಗಿ ಇಲ್ಲಿಂದ ತಪ್ಪಿಸಿಕೊಂಡು

ಹೋದರೆ ಆ ಧನವನ್ನು ಇಬ್ಬರೂ ಹಂಚಿಕೊಳ್ಳೋಣ. ನಾನಿಲ್ಲೇ ಮೃತನಾದರೆ ಅದೆಲ್ಲವೂ ನಿನ್ನದೇ.

ಧರ್ಮದೇವನು ಈ ಮಾತುಗಳನ್ನು ಕೇಳಿ ಆನಂದಬಾಷ್ಪಗಳನ್ನು ಸುರಿಸುತ್ತ ಆನಂದನಿಗೆ ನಮಸ್ಕಾರವನ್ನು ಮಾಡಿ, ಸ್ವಾಮೀ! ತಮ್ಮ ಇಷ್ಟವಿದ್ದಂತಾಗಲಿ ಎಂದನು.

ಈ ಧನದ ಸಮಾಚಾರವನ್ನು ಹೇಳಿ, ನಾಗೇಂದ್ರನ ಮರಣಪತ್ರವು ಧರ್ಮದೇವನಿಗೆ ಹೃದ್ಗತವಾದ ಮೇಲೆ, ಆನಂದನ ಮನಸ್ಸು ನೆಮ್ಮದಿಯಾಗಿ ಅವನು ಆ ಮರಣ ಪತ್ರದ ಎರಡು ಭಾಗಗಳನ್ನೂ ಸುಟ್ಟುಬಿಟ್ಟನು. ಇಷ್ಟು ಧನವನ್ನಿಟ್ಟುಕೊಂಡು ಲೋಕಕ್ಕೆ ಎಷ್ಟೋ ಉಪಕಾರವನ್ನು ಮಾಡಬಹುದೆಂಬುದನ್ನು ಧರ್ಮದೇವನಿಗೆ ಅವನು ಆಗಾಗ ವಿವರಿಸುತ್ತಲಿದ್ದನು. ಆನಂದನು ಹೀಗೆ ವಿವರಿಸಿದಾಗಲೆಲ್ಲ, ತಾನು ಮಾಡಿದ್ದ ಪ್ರತಿಕ್ರಿಯಾಪ್ರತಿಜ್ಞೆಯು ಧರ್ಮದೇವನಿಗೆ ಜ್ಞಾಪಕಕ್ಕೆ ಬಂದು, ಈ ದ್ರವ್ಯದ ಸಹಾಯದಿಂದ ತನ್ನ ಶತ್ರುಗಳಾದ ವಲ್ಲಭದೇವ, ದುರ್ಮತಿ, ವಿಷಯಲಂಪಟರನ್ನು ಚಿತ್ರಹಿಂಸೆಮಾಡಿಬಿಡಬಹುದೆಂಬ ಯೋಚನೆಯು ತಲೆದೋರಿ ಅಧೋವದನನಾಗುತ್ತಲಿದ್ದನು.

ಇವರಿಬ್ಬರ ಅದೃಷ್ಟಕ್ಕೆ ಸರಿಯಾಗಿ ಧರ್ಮದೇವನ ಕೂಪದಿಂದ ಸಿವಾಯಿ ಓಡಾಡುವ ಅಂಗಳಕ್ಕೆ, ಇವರು ಸುರಂಗ ಹೊಡೆದಿದ್ದ ಕಡೆ ಬಹು ಶಿಥಿಲವಾಗಿದೆ ಎಂದು, ಸೆರೆಮನೆಯ ಅಧಿಕಾರಿಗಳು ಆ ಭಾಗವನ್ನು ದೊಡ್ಡ ದೊಡ್ಡ ಚಪ್ಪಡಿಗಳನ್ನು ಹಾಸಿ ಗಟ್ಟಿಮಾಡಿದರು. ದೈವಾಧೀನದಿಂದ ಆನಂದನು ಹೇಳಿದ್ದಂತೆ, ಧರ್ಮದೇವನು ಆ ಸುರಂಗವನ್ನು ಮುಚ್ಚಿದ್ದನು; ಇಲ್ಲದಿದ್ದರೆ ಅಧಿಕಾರಿಯು ಅದನ್ನು ನೋಡಿ ಇವರಿಬ್ಬರನ್ನೂ ಬೇರೆ ಕೊಟಡಿಗಳಲ್ಲಿಟ್ಟು ಕಾವಲುಗಳನ್ನು ಬಲಪಡಿಸುತ್ತಿದ್ದನು.

ನಾವು ಸುರಂಗಮಾಡಿದ್ದ ಕಡೆಯನ್ನು ಸರಕಾರದವರು ಭದ್ರಪಡಿಸಿದರೆಂದು ಧರ್ಮದೇವನು ಆನಂದನಿಗೆ ಹೇಳಿ, ಸ್ವಾಮೀ! ತಮ್ಮನ್ನು ಬಿಟ್ಟು ನಾನು ಎಂದಿಗೂ ಹೋಗುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿದುದಕ್ಕೆ ದೇವರು ಅನುಕೂಲಮಾಡಿಬಿಟ್ಟನು. ಈಗ ನಾನು ಮಾತಿಗೆ ತಪ್ಪಿ, ಇಲ್ಲಿಂದ ಹೋಗಬೇಕೆಂದರೂ ಸಾಗುವುದಿಲ್ಲವೆಂದು ಸಂತೋಷಪಡುತ್ತಲಿದ್ದೇನೆ. ಇಲ್ಲಿಂದ ಜೀವಸಹಿತ ಹೊರಗೆ ಹೋಗುವುದು ಸಾಧ್ಯವಿಲ್ಲವಾದುದರಿಂದ ತಮ್ಮಂತೆಯೇ ನಾನೂ ಇಲ್ಲಿಯೇ ಸಾಯುವೆನು. ಮಲಯು

ದ್ವೀಪದ ಧನವು ತಮಗೆಷ್ಟು ಲಭ್ಯವೋ ನನಗೂ ಅಷ್ಟೇ ಲಭ್ಯ. ತಾವು ನನಗೆ ಮಾಡಿದ ವಿದ್ಯಾದಾನವೇ ನಿಜವಾದ ಧನವು; ಅದನ್ನು ಮಾತ್ರ ಎಷ್ಟು ದುಷ್ಟ ಬುದ್ಧಿಗಳು ಸೇರಿದರೂ ಅಪಹರಿಸಲಾರರು ಎಂದನು.

ಅಪ್ಪಾ! ವಿದ್ಯೆಯ ವಿಷಯದಲ್ಲಿ ನೀನು ಹೇಳಿದುದು ನಿಜ. ಅದು ನಮಗೆ ಸದ್ಯಃ ಫಲವನ್ನು ಕೊಡುವುದು. ಅದರಿಂದ ಈ ಕಾರಾಗೃಹದ ನಿರ್ಬಂಧವೂ ಕಷ್ಟವೂ ಅನೇಕವೇಳೆಗಳಲ್ಲಿ ತೋರುವುದಿಲ್ಲ.

ಹೀಗೆ ಕೆಲವು ದಿನಗಳು ಕಳೆದ ಬಳಿಕ ಒಂದು ರಾತ್ರಿ ಸುಮಾರು ಹತ್ತುಘಂಟೆಯ ಹೊತ್ತಿನಲ್ಲಿ, ಬಹು ದೀನಸ್ವರದಿಂದ ಅಕೋ ತನ್ನನ್ನು ಕೂಗಿದಂತೆ ಸದ್ದುಕೇಳಿ, ಧರ್ಮದೇವನು ತಟ್ಟನೆ ಎಚ್ಚತ್ತು, ಆರು ತನ್ನನ್ನು ಕೂಗಿರಬಹುದೆಂದು ಯೋಚಿಸುತ್ತಿರುವುದರಲ್ಲಿಯೇ, ಮತ್ತೊಂದು ಸಾರಿ ಪೂರ್ವದಂತೆಯೇ ತನ್ನನ್ನು ಕೂಗಿದಂತೆ ಕೇಳಿಸಿತು. ಆಗ ಆನಂದನು ಕರೆಯುವಂತೆ ತೋರುತ್ತದೆ ಎಂದು, ಬಲದ ಬಾಯಿಯ ಕಲ್ಲನ್ನೆತ್ತಿ ನಿಮಿಷಮಾತ್ರದಲ್ಲಿ ಆವನ ಕೂಪವನ್ನು ಸೇರಿದನು. ಧರ್ಮದೇವನು ತನ್ನ ಬಲಕ್ಕೆ ಬರುತ್ತಲೇ, ಆನಂದನು ಅವನನ್ನು ನೋಡಿ ಅಪ್ಪಾ! ಸ್ನೇಹಿತನೇ, ಮಗನೇ, ಶಿಷ್ಯನೇ, ನಾನು ಹೆದರಿದ್ದಂತೆ ವ್ಯಾಧಿಯು ಪುನಃ ಬರುವಂತಿದೆ ಎಂದನು. ಅದನ್ನು ಕೇಳುತ್ತಲೆ, ಧರ್ಮದೇವನಿಗೆ ಅಪಾರದುಃಖವುಂಟಾಗಿ ಅಯ್ಯೋ, ಅಯ್ಯೋ, ಇನ್ನೇನು ಗತಿ! ಆರೂ ದಿಕ್ಕಿಲ್ಲವಲ್ಲಾ ಎಂದು ಗಟ್ಟಿಯಾಗಿ ಕೂಗಿ ಗೋಳಾಡುತ್ತಿರಲು, ಆನಂದನು ಅಪ್ಪಾ ಕೂಗಬೇಡ; ಕೂಗಿದರೆ ಕೆಲಸವು ಕೆಟ್ಟು ಹೋಗುವುದು. ಹೇಗಿದ್ದರೂ ನಾನು ಬದುಕುವುದಿಲ್ಲ. ಆದುದರಿಂದ ನನ್ನ ಯೋಗಕ್ಷೇಮವನ್ನು ನೋಡುವುದಲ್ಲದೆ ನಿನ್ನ ಯೋಗಕ್ಷೇಮವನ್ನೂ ನೋಡಿಕೋ. ಗದ್ದಲ ಮಾಡಿದರೆ ಅಧಿಕಾರಿಗಳು ಬಂದು ನಾವಿಬ್ಬರೂ ಹೇಗೆ ಸೇರುತ್ತಲಿದ್ದೆವೆಂದು ನಮ್ಮ ಬಲಗಳನ್ನು ಶೋಧನೆಯಂ ಮಾಡಿ ನಾವು ಇಷ್ಟುವರ್ಷಗಳು ಕಷ್ಟಪಟ್ಟು ಮಾಡಿದ ಕೆಲಸಗಳನ್ನೆಲ್ಲಾ ಒಂದು ನಿಮಿಷದಲ್ಲಿ ಧ್ವಂಸಮಾಡುವರಲ್ಲದೆ, ಮುಂದೆ ಬಂದಿಯವರು ಒಬ್ಬರೊಡನೊಬ್ಬರು ಸೇರದ ಹಾಗೆ ಮಾಡಿಬಿಡುವರು. ನಾನು ಈಗ ಬಿಟ್ಟು ಹೋಗುವ ಬಲಕ್ಕೆ ಎಂದಿದ್ದರೂ ಒಂದು ದಿನ ಮತ್ತೊಬ್ಬ ಅದೃಷ್ಟಹೀನನು ಬರುವನು. ಅವನು ನನ್ನಂತೆ ಮುದುಕನಾಗಿರದೆ

ನಿನ್ನಂತೆ ಯೌವನಸ್ಥನಾಗಿದ್ದರೆ ನೀವಿಬ್ಬರೂ ಸೇರಿ ಇಲ್ಲಿಂದ ಸುಲಭವಾಗಿ ತಪ್ಪಿಸಿ ಕೊಂಡು ಹೋಗಬಹುದು ಎಂದನು.

ಸ್ವಾಮೀ, ತಾವು ಹೀಗೆ ಏತಕ್ಕೆ ಧೈರ್ಯಗೆಡುವಿರಿ? ತಮ್ಮಲ್ಲಿರುವ ಸಂಜೀವನ ವನ್ನು ಕೊಟ್ಟು, ಹೋದ ಸಾರಿ ಬದುಕಿಸಿಕೊಂಡಂತೆ ಈ ಸಾರಿಯೂ ಬದುಕಿಸಿಕೊಳ್ಳು ವೆನು. ನಾನು ಏನ ಮಾಡಬೇಕೋ ಅದನ್ನು ಜಾಗ್ರತೆಯಾಗಿ ಅಪ್ಪಣೆ ಕೊಡಿರಿ.

ಅಪ್ಪಾ, ಈ ಸಾರಿ ನಾನು ಖಂಡಿತವಾಗಿಯೂ ಬದುಕುವುದಿಲ್ಲ; ಆದರೂ ಜೀವ ವಿರುವ ವರೆಗೂ ಚಿಕಿತ್ಸೆಮಾಡಬೇಕಾದುದು ಧರ್ಮವಾದುದರಿಂದ ಆ ಔಷಧಿಯನ್ನು ಕೊಟ್ಟು ನೋಡು. ಈಗ ಶರೀರದಲ್ಲಿ ದಾರ್ಢ್ಯವು ಕಡಮೆಯಾಗಿರುವುದರಿಂದ ಹೋದ ಸಲದಂತೆ ಮೈಯ್ಯೆಲ್ಲಾ ತಣ್ಣಗೆ ಆಗುವವರೆಗೂ ಕಾಯದೆ, ಕೈಕಾಲು ತಣ್ಣಗೆ ಆಗಲು ಪ್ರಾರಂಭಿಸಿದ ಒಡನೆಯೇ ನನ್ನ ಬಾಯನ್ನು ಬಿಡಿಸಿ ದ್ರಾಪಕದಲ್ಲಿ ಹದಿನೈದು ತೊಟ್ಟು ಗಳನ್ನು ಬಿಟ್ಟು ಅರ್ಧಘಂಟೆಯ ವರೆಗೂ ನೋಡು; ಅಷ್ಟರಲ್ಲಿ ನನಗೆ ಜ್ಞಾನವು ಬರದೆ ಇದ್ದರೆ, ಸೀಸೆಯಲ್ಲಿ ಮಿಕ್ಕಿರುವ ದ್ರಾವಕವನ್ನೆಲ್ಲಾ ಒಟ್ಟಿಗೆ ಬಾಯಲ್ಲಿ ಸುರಿದುಬಿಡು. ಆ ಮೇಲೆ ದೇವರು ಮಾಡಿದಂತಾಗಲಿ. ನೀನು ನನ್ನ ಆಪತ್ಕಾಲದಲ್ಲಿ ಇಷ್ಟು ನಿಸ್ಪೃಹ ನಾಗಿ ಸಹಾಯವನ್ನು ಮಾಡಿರುವೆ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ. ನಾನು ಸಾಯುವಾಗ ಹೇಳುವ ಮಾತನ್ನು ಕೇಳು. ದೈವಸಹಾಯವಿಲ್ಲದಿದ್ದರೆ ಮನುಷ್ಯನ ಆವ ಪ್ರಯತ್ನವೂ ಸಾಗದು. ನ್ಯಾಯವಾದ ಕೆಲಸಗಳನ್ನು ಮಾಡಲುದ್ಯೋಗಿಸುವು ದಕ್ಕೆ ಮುಂದೆ, ದೇವರ ಮೇಲೆ ಭಾರವನ್ನು ಹಾಕಿ, ಕೆಲಸಗಳನ್ನು ಪ್ರಾರಂಭಿಸು. ಇದು ಪರಮತತ್ತ್ವ. ಧನದ ವಿಷಯದಲ್ಲಿ ಅನುಮಾನಪಡಬೇಡ; ಅದು ಇರುವುದು ನಿಶ್ಚಯ. ನಿನಗೆ ಜಾಗ್ರತೆಯಾಗಿಯೇ ಬಿಡುಗಡೆಯಾಗುವುದೆಂದು ನನ್ನ ಬುದ್ಧಿಗೆ ಈಗ ತೋರುತ್ತಿದೆ. ಹಾಗಾದರೆ, ಮೊದಲು ಮಲಯದ್ವೀಪಕ್ಕೆ ತಪ್ಪದೆ ಹೋಗು; ಆ ಧನ ವನ್ನಿಟ್ಟುಕೊಂಡು ನಿನ್ನ ಕೈಲಾದ ಮಟ್ಟಿಗೂ ಲೋಕೋಪಕಾರವನ್ನು ಮಾಡು.

ಈ ಮಾತನ್ನು ಪೂರೈಸುವುದರಲ್ಲಿಯೇ ರಕ್ತವು ತಲೆಗೇರಿ ಆನಂದನ ಕಣ್ಣುಗಳು ಕೆಂಡದಂತಾದುವು. ಒಡನೆಯೇ ಜ್ಞಾನವು ತಪ್ಪಿ, ಕೈಕಾಲುಗಳನ್ನು ಒದರುತ್ತ ಮೈಯ್ಯನ್ನು ನುಲಿಯುತ್ತ ಬಾಯಲ್ಲಿ ರಕ್ತಮಿಶ್ರವಾದ ನೊರೆಯನ್ನು ಸುರಿಸುತ್ತಿದ್ದನು. ಇಪ್ಪೆಲ್ಲವೂ ನಿಂತಮೇಲೆ ಕೈಕಾಲು ತಣಗಾಗಲು ಪ್ರಾರಂಭವಾದುವು. ಆಗ ಧರ್ಮದೇವನು

ಅವನ ಬಾಯನ್ನು ಸುಲಭವಾಗಿ ಬಿಡಿಸಿ ಹದಿನೈದು ತೊಟ್ಟು ದ್ರಾವಕವನ್ನು ಬಿಟ್ಟು, ಅರ್ಧಘಂಟೆಯು ವರೆಗೂ ನೋಡಿದನು. ಜ್ಞಾನವು ಬಾರದೇ ಇದ್ದುದರಿಂದ ಮಿಕ್ಕಿದ್ದ ದ್ರಾವಕವನ್ನು ಒಂದೇ ಸಾರಿ ಬಾಯಲ್ಲಿ ಸುರಿದನು. ಒಡನೆಯೇ ವಿದ್ಯುತ್ಸಂಬಂಧದಿಂದ ಹೇಗೆ ಶರೀರವು ಮೇಲಕ್ಕೆ ಹಾರಿ ಕೆಳಕ್ಕೆ ಬೀಳುವುದೋ, ಹಾಗೆಯೇ ಆನಂದನ ಶರೀರವು ಮೇಲಕ್ಕೆ ಹಾರಿ ಕೆಳಕ್ಕೆ ಬಿದ್ದಿತು. ಕಣ್ಣಗುಡ್ಡೆಗಳು ಮುಂದಕ್ಕೆ ಚಾಚಿಕೊಂಡು ನೋಡಲು ಭಯಂಕರವಾದುವು. ಜೀವವು ಬರುವುದೋ ಎಂಬ ಆಸೆಯಿಂದ ಧರ್ಮದೇವನು ಅಲ್ಲಿಯೇ ಆನಂದನನ್ನು ನೋಡುತ್ತಲಿದ್ದನು. ಅರುಣೋದಯದ ವರೆಗೆ ಅಲ್ಲಿ ಕಾದಿದ್ದು ಇನ್ನು ಜೀವ ಬರಲಾರದೆಂದು ನಿಶ್ಚಯಿಸಿ, ದ್ರಾವಕದ ಸೀಸೆಯನ್ನು ಮಂಚದ ಕಾಲಿನಲ್ಲಿಟ್ಟು, ದೀಪವನ್ನು ನೊಂದಿಸಿ ಅದರ ಸ್ಥಳದಲ್ಲಿ ಮುಚ್ಚಿಟ್ಟು, ಸುರಂಗದಲ್ಲಿಳಿದು ಐದು ಕಾಣದಂತೆ ಕಲ್ಲನ್ನು ಮುಚ್ಚಿಕೊಂಡು ತನ್ನ ಬೆಲಕ್ಕೆ ಹೋದನು.

ಆ ದಿನ ಬೆಳಿಗ್ಗೆ ಬಂದಿ ಆಳು ಧರ್ಮದೇವನ ಬೆಲಕ್ಕೆ ಮೊದಲು ಬಂದು, ಅನಂತರ ಆನಂದನ ಬೆಲಕ್ಕೆ ಹೋದನು. ಆಳು ಅಲ್ಲಿಗೆ ಹೋಗುವುದರೊಳಗಾಗಿ, ಅಲ್ಲಿ ಏನು ನಡೆಯುವುದೋ ಅದನ್ನು ತಿಳಿಯ ಬೇಕೆಂದು ಧರ್ಮದೇವನು ಸುರಂಗದಲ್ಲಿ ಹೊರಟು ಅತ್ತಕಡೆಯ ಕಲ್ಲನ್ನೆತ್ತಿದೆ ಅದರ ಕೆಳಗೆ ಸುಮ್ಮನೆ ಕುಳಿತನು. ಅಷ್ಟರಲ್ಲಿ ಬಂದಿಆಳು ಕೂಪದ ಬಾಗಿಲನ್ನು ತೆಗೆದು ಆನಂದನ ಶರೀರವು ಬಿದ್ದಿದ್ದ ಸ್ಥಿತಿಯನ್ನು ನೋಡಿ ಆನಂದನು ಸತ್ತುಹೋದನು ; ಎಲ್ಲರೂ ಜಾಗ್ರತೆಯಾಗಿ ಬನ್ನಿರಿ ಎಂದು ಬೆಲದ ಬಾಗಿಲಿನ ಹೊರಗೆ ನಿಂತು ಗಟ್ಟಿಯಾಗಿ ಕೂಗಿಕೊಂಡನು. ಬಳಿಕ ಅಧಿಕಾರಿಯೂ ಮಿಕ್ಕ ಆಳುಗಳೂ ಎಲ್ಲರೂ ಬಂದರು.

ಅಧಿಕಾರಿಯು ಬಂದು ನೋಡಿ, ಆನಂದನ ಮುಖಕ್ಕೆ ಸ್ವಲ್ಪ ತಣ್ಣೀರನ್ನು ಎರಚಿರಿ ಎಂದನು. ಒಡನೆ ಆಳುಗಳು ಹಾಗೆ ಮಾಡಿದರು. ಇದರಿಂದ ಆನಂದನಿಗೆ ಜ್ಞಾನವು ಬರಲಿಲ್ಲವೆಂದು ತಿಳಿದು, ವೈದ್ಯನನ್ನು ಕರೆದುತನ್ನಿರಿ ಎಂದನು. ಕೂಡಲೆ ವೈದ್ಯನು ಬಂದು, ತಾನು ಮಾಡಬೇಕಾದ ಪರೀಕ್ಷೆಗಳನ್ನೆಲ್ಲಾ ಮಾಡಿ ಪ್ರಾಣವು ಹೋಗಿದೆ ಎಂದನು. ಅದನ್ನು ಕೇಳಿ ಅಧಿಕಾರಿಯು ಸ್ವಲ್ಪ ಸಂಕಟಪಟ್ಟು, ವೈದ್ಯನನ್ನು ನೋಡಿ, ಕೊನೆಯ ಪರೀಕ್ಷೆಯನ್ನು ಮಾಡಿಬಿಡಿ ಎಂದು ಹೇಳಿದನು.

ಅದು ಅನವಶ್ಯಕ ; ಖಂಡಿತವಾಗಿಯೂ ಪ್ರಾಣ ಹೋಗಿದೆ.

ಆದರೂ ನಾವು ಮಾಡಬೇಕಾದುದನ್ನು ಮಾಡಲೇ ಬೇಕು.

ಹಾಗಾದರೆ ಕಾದ ಗುಳವನ್ನು ತರಿಸಿರಿ.

ವೈದ್ಯನು ಹಾಗೆ ಹೇಳಿದುದು ಧರ್ಮದೇವನಿಗೆ ಅರ್ಥವಾಗಲಿಲ್ಲ. ಕಾದ ಗುಳ ವೇತಕ್ಕೆ ಎಂದು ಯೋಚಿಸುತ್ತಲಿರುವಲ್ಲಿಯೇ ಆಳುಗಳು ಗುಳವನ್ನು ತಂದರು. ವೈದ್ಯನು ಅದನ್ನು ಆನಂದನ ಎರಡು ಹಿಮ್ಮಡಿಗಳ ಮೇಲೆ ಇಟ್ಟನು. ಒಡನೆ ಚಿರ್ರೆಂದು ಸದ್ದಾದು ದಲ್ಲದೆ ಮಾಂಸವು ಸುಟ್ಟ ವಾತವೂ ಬಂದಿತು. ಆಗ ಧರ್ಮದೇವನಿಗೆ ಗುಳವನ್ನು ಏತಕ್ಕೆ ತಂದರೆಂಬುದು ತಿಳಿಯಿತು.

ಅಧಿಕಾರಿಯು ಆಳನ್ನು ನೋಡಿ ಆನಂದನು ಆವಾಗಲಾದರೂ ತಂಟೆ ಮಾಡಿದ್ದನೋ ಎಂದು ಕೇಳಿದುದಕೆ, ಆಳು ಮಹಾಸ್ವಾಮೀ, ಇವನು ಮಕ್ಕಳಂತೆ ಸಾಧುವಾಗಿದ್ದು ಕೆಲವು ಸಮಯಗಳಲ್ಲಿ ಸೊಗಸಾದ ಕಥೆಗಳನ್ನು ಹೇಳುತ್ತಲಿದ್ದನು. ಒಂದು ದಿನ ವೈದ್ಯರು ಊರಲ್ಲೆಲ್ಲಿಲ್ಲದೆ ಇದ್ದಾಗ ನನ್ನ ಹೆಂಡತಿಯು ಹೊಟ್ಟಿಶೂಲೆಯಿಂದ ಅವಸ್ಥೆ ಪಡುತ್ತಲಿರಲು, ಇವನು ಒಂದು ಸುಲಭವಾದ ಔಷಧಿಯನ್ನು ಹೇಳಿ ಗುಣಮಾಡಿ ದನು ಎಂದನು.

ಇದನ್ನು ಕೇಳಿ ವೈದ್ಯನು, ಓಹೋ! ನನಗೊಬ್ಬ ಪ್ರತಿವಾದಿಯು ಇಲ್ಲಿದ್ದನೋ ಎಂದು ಹೇಳಿ, ಅಧಿಕಾರಿಯನ್ನು ನೋಡಿ ತಾವು ಈತನ ಸಂಸ್ಕಾರದ ಕೆಲಸವನ್ನು ತಕ್ಕ ಮರ್ಯಾದೆಯೊಡನೆ ಮಾಡಿಸಬೇಕು ಎಂದು ಕೇಳಿಕೊಳ್ಳುತಲೆ, ಅವನು ಇವನಿಗೆ ಒಂದು ಹೊಸ ಗೋಣಿಯ ಚೀಲವನ್ನು ಕೊಡಿಸುವೆನು ಎಂದನು.

ಆಳು ಅಧಿಕಾರಿಯನ್ನು ನೋಡಿ ಮಹಾಸ್ವಾಮೀ! ಹೆಣವನ್ನು ಚೀಲದಲ್ಲಿ ಹಾಕಿ ತಮ್ಮ ಇದುರಿಗೆ ಹೊಲಿಯಬೇಕೋ ಎಂದು ಕೇಳಲು, ಅಧಿಕಾರಿಯು ಅಹುದು ಎಂದು ಹೇಳಿ, ಒಂದು ಹೊಸ ಚೀಲವನ್ನು ತರಿಸಿ, ಅದರಲ್ಲಿ ಹೆಣವನ್ನು ಹಾಕಿ ಹೊಲಿ ಯುವವರೆಗೂ ಇದ್ದು, ಪದ್ಧತಿಪ್ರಕಾರ ಕೂಪವನ್ನು ಬೀಗ ಹಾಕಿಸಿ, ರಾತ್ರಿ ಹತ್ತು ಘಂಟೆಯು ವೇಳೆಯಲ್ಲಿ ಇದನ್ನು ಸಾಗಿಸಿರಿ ಎಂದು ಆಳುಗಳಿಗೆ ಆಜ್ಞೆಯನ್ನು ಮಾಡಿ ಹೊರಟುಹೋದನು.

ಹದಿನೇಳನೆಯ ಅಧ್ಯಾಯ.

ಚಾಲದುರ್ಗದ ಶ್ಮಶಾನವೂ ಕಡಲು ಕಳ್ಳರ ಹಡಗೂ.

ಅಧಿಕಾರಿಯು ಅಪ್ಪಣೆಯಂತೆ ಆಳುಗಳು ಯೋಗಾನಂದನ ಹೆಣವನ್ನು ಮಂಚದ ಮೇಲೆ ಇಟ್ಟು ಕೂಪದ ಬಾಗಿಲನ್ನು ಮುಚ್ಚಿ ಬೀಗವನ್ನು ಹಾಕಿಕೊಂಡು ಹೊರಟು ಹೋದ ಸ್ವಲ್ಪಹೊತ್ತಿನ ಮೇಲೆ, ಧರ್ಮದೇವನು ಸುರಂಗದ ಚಪ್ಪಡಿಯನ್ನು ಮೆಲ್ಲಗೆ ಎತ್ತಿ, ಸುತ್ತು ಮುತ್ತಲೂ ನೋಡಿ, ಆರೂ ಇಲ್ಲವೆಂದು ತಿಳಿದು, ಸುರಂಗದಿಂದ ಮೇಲಕ್ಕೆ ಹತ್ತಿ ಬಂದನು.

ಮಂಚದಮೇಲೆ ಇದ್ದ ಹೆಣವನ್ನು ಕಂಡು ಹಾ! ನನ್ನ ತಂದೆಯೇ, ವಿದ್ಯಾ ಗುರುವೇ, ನನ್ನನ್ನು ತಬ್ಬಲಿ ಮಾಡಿದಿರಾ? ನನಗೆ ತಾವು ಅನೇಕವಿದ್ಯಾದಾನವಂ ಮಾಡಿದಿರಿ; ಆದರೆ ಈ ಮರಣರಹಸ್ಯವನ್ನು ಮಾತ್ರ ತಿಳಿಸಲಿಲ್ಲ. ಈ ರಹಸ್ಯವನ್ನು ತಿಳಿದಿದ ತಾವು ಪರಲೋಕದಲ್ಲಿ ಸಕಲಸುಖಗಳನ್ನೂ ಅನುಭವಿಸುತ್ತಲಿರುವಿರಿ. ಆ ಸುಖವು ನನಗೆಂದಿಗೆ ದೊರೆಯುವುದೋ ಎಂದು ಗೋಳಿಡುತ್ತ ಮಂಚದ ಕೊನೆಯಲ್ಲಿ ತಲೆಯ ಮೇಲೆ ಕೈಯಿಟ್ಟುಕೊಂಡು ಕುಳಿತು ಸಂಕಟಪಡುತ್ತಲಿದ್ದನು. ನಾನೂ ಈ ಮಹಾತ್ಮರಂತೆ ಸತ್ತರೆ ಇವರು ಇರುವ ಲೋಕಕ್ಕೆ ಹೋಗಬಹುದು; ಆದರೆ ಸಾಯುವುದು ಹೇಗೆ? ಆತ್ಮಹತ್ಯವನ್ನು ಮಾಡಿಕೊಳ್ಳುವುದು ಪಾಪ; ಇದಲ್ಲದೆ ಇಷ್ಟು ದಿವಸ ಕಷ್ಟಗಳನ್ನನುಭವಿಸಿ, ಬಯಸಿದ ಸುಖವನ್ನು ಹೊಂದ್ದದೆ, ಶತ್ರುಗಳನ್ನು ಶಿಕ್ಷಿಸದೆ, ಸಹಾಯವನ್ನು ಮಾಡಿದವರಿಗೆ ಪ್ರತ್ಯುಪಕಾರ ಮಾಡದೆ, ಸುಮ್ಮನೆ ಸಾಯುವುದಕ್ಕೆ ಮನಸ್ಸು ಒಡಂಬಡದು ಎಂದು ಯೋಚಿಸುತ್ತಿರುವಾಗ, ತಟ್ಟನೆ ಒಂದು ಆಲೋಚನೆಯು ಹುಟ್ಟಿ, ದೇವರೇ! ಇದೇನು ಆಲೋಚನೆ! ಇದು ನಿನ್ನ ಪ್ರೇರಣೆಯಿಂದುಂಟಾದುದಲ್ಲವೆ? ಈ ಬಂದಿಶಾಲೆಯಿಂದ ಸತ್ತವರು ವಿನಾ ಬೇರೊಬ್ಬರೂ ಹೊರಗೆ ಹೋಗಲಾರರಾದುದರಿಂದ ನಾನು ಏತಕ್ಕೆ ನಿನ್ನ ಪ್ರೇರಣೆಯಂತೆ ನಡೆಯಬಾರದು ಎಂದು ಕೊಂಡು, ಸಾವಕಾಶಮಾಡಿದರೆ ಕೆಲಸ ಕೆಡುವುದೆಂದು ಒಡನೆಯೇ ಆನಂದನ ಸಣ್ಣ ಚೂರಿಯನ್ನು ತೆಗೆದು ಚೀಲದ ಬಾಯನ್ನು ಬಿಚ್ಚಿ, ಹೆಣವನ್ನು ತನ್ನ ಕೂಪಕ್ಕೆ ಸಾಗಿಸಿ ಆಳು ಸಾಯಂಕಾಲ ಬಂದರೆ ಐಬು ಕಾಣದಂತೆ ಗೋಡೆಯ ಕಡೆಗೆ ಮುಖಮಾಡಿ

ಅದನ್ನು ಮಲಗಿಸಿ ತನ್ನ ಹರಕು ದುಪ್ಪಟಿಯನ್ನು ಹೊದ್ದಿಸಿ, ಸುರಂಗದ ಬಾಯಿಗೆ ಚಪ್ಪಡಿಯನ್ನು ಮುಚ್ಚಿ ಪುನಃ ಆನಂದನ ಕೂಪಕ್ಕೆ ಬಂದನು.

ಬಳಿಕ್ಕಲ್ಲಿ ಸೂಚಿದಾರವನ್ನೂ ಅದರ ಜತೆಗೆ ಸಣ್ಣ ಚೂರಿಯನ್ನೂ ಹುಡುಕಿ ತೆಗೆದುಕೊಂಡು ತನ್ನ ಮೈಯ್ ಮೇಲೆ ಇದ್ದ ಬಟ್ಟೆಯನ್ನು ತೆಗೆದು ಬಿಸುಟು, ಗೋಣಿಯ ಚೀಲದೊಳಗೆ ಹೊಕ್ಕು, ಒಳಗಡೆಯಿಂದ ಅದರ ಬಾಯನ್ನು ಹೊಲಿದುಕೊಂಡು ಶವ ವಿದ್ದಂತೆಯೇ ಇದ್ದನು. ಧರ್ಮದೇವನ ಅಭಿಪ್ರಾಯದಲ್ಲಿ ಚಾಲದುರ್ಗದ ಹೆಣವನ್ನು ತೂಳುವಂತಿದ್ದಿತು. ಚೀಲವನ್ನು ಹೊಕ್ಕ ಮೇಲೆ ಧರ್ಮದೇವನಿಗೆ ಭೀತಿ ತೋರಿ ಎದೆಯು ಹಾರುವುದಕ್ಕೆ ಪ್ರಾರಂಭವಾಯಿತು. ಆಗ ಅಧಿಕಾರಿಯೇ ಆಗಲಿ ಆಳುಗಳೇ ಆಗಲಿ, ಅಲ್ಲಿಗೆ ಬಂದಿದ್ದರೆ ಇವನ ಎದೆಯು ಹೊಡೆಯುವ ಶಬ್ದವನ್ನು ಕೇಳಿ ಚೀಲದಲ್ಲಿ ರುವುದು ಶವವಲ್ಲವೆಂದು ಸುಲಭವಾಗಿ ತಿಳಿಯಬಹುದಾಗಿದ್ದಿತು. ಸಾಯಂಕಾಲ ವಾಗುತಲೆ ಆಳು ನನ್ನ ಕೂಪಕ್ಕೆ ಆಹಾರವನ್ನು ತೆಗೆದುಕೊಂಡು ಹೋಗಿ ನಾನು ಮಲ ಗಿರುವೆನೆಂದು ತಿಳಿದು ಮಾತನಾಡಿಸುವನು; ಮಾತನಾಡದೆ ಇರುವುದನ್ನು ಕಂಡು ಎಲ್ಲಿ ಅವನು ಹತ್ತಿರ ಬಂದು ಮಂಚದ ಮೇಲೆ ಬೇರೊಬ್ಬನು ಮಲಗಿರುವನೆಂದು ತಿಳಿಯು ವನೋ, ಎಲ್ಲ ನನ್ನ ಕೆಲಸವು ಕೆಟ್ಟುಹೋಗುವುದೋ ಎಂದು ಭಯವಟ್ಟು, ಒಡನೆಯೇ ಎಷ್ಟೋ ಸಾರಿ ನಾನು ಒದಲು ಹೇಳದೆ ಇದ್ದರೂ ಆಳು ಸುಮ್ಮನೆ ಹೊರಟುಹೋಗಿ ರುವನು, ಈಗಲೂ ಹಾಗೆಯೇ ಆಗಿರಬಹುದು ಎಂದು ಧೈರ್ಯತಂದುಕೊಂಡು ನೆಮ್ಮದಿ ಯಾಗಿದ್ದನು.

ಈ ಕೆಲಸವನ್ನು ಸಾಯಂಕಾಲ ಆಳು ಬಂದು ಹೋದನಂತರ ಧರ್ಮದೇವನು ಮಾಡಿರಬಹುದಾಗಿದ್ದಿತು. ಆದರೆ ಅಧಿಕಾರಿಯು ಒಂದು ವೇಳೆ ಹೆಣವನ್ನು ಜಾಗ್ರತೆ ಯಾಗಿ ಸಾಗಿಸುವಂತೆ ಅಪ್ಪಣೆಯನ್ನು ಮಾಡಿದರೆ, ತನ್ನ ಕೆಲಸವಾಗಲಾರದೆಂದು ಯೋ ಚನೆ ಮಾಡಿ ಅವನು ಮುಂದಾಗಿಯೇ ಹಾಗೆ ಮಾಡಿದನು.

ಚೀಲವನ್ನು ಹೊರುವ ಆಳುಗಳಿಗೆ ಒಂದು ವೇಳೆ ಏನಾದರೂ ನಾನು ಶವವಲ್ಲ ವೆಂದು ಅನುಮಾನ ಹುಟ್ಟಿ ನನ್ನನ್ನು ಗುರುತಿಸುವರಾದಲ್ಲಿ ಗೋಣಿಯನ್ನು ಮೇಲಿನಿಂದ ಕೆಳಗಿನ ವರೆಗೆ ಚೂರಿಯಿಂದ ಒಂದೇ ಸಾರಿ ಹರಿದು ಹೊರಗೆ ನಿಂತು ಅದರಿಂದ ಅವ ರಿಗೆ ಗಾಬರಿಯನ್ನುಂಟುಮಾಡಿ ಪಲಾಯನವನ್ನು ಮಾಡುವೆನು ; ಅವರು ನನ್ನನ್ನು ಪಿಡಿ

ಯಲು ಬಂದರೆ ನನ್ನಲ್ಲಿರುವ ಚೂರಿಯು ಉಪಯೋಗವನ್ನು ತೋರಿಸಿ ಓಡಿಹೋಗು ವೆನು. ಅವರು ನನ್ನನ್ನು ಮಣ್ಣು ಮಾಡಿದರೆ ಅವರು ಅತ್ತಕಡೆ ಹೊರಡುತ್ತಲೆ ಮೇಲೆ ಹಾಕಿರುವ ಹುಸಿಮಣ್ಣನ್ನು ತಳ್ಳಿ ಎದ್ದು ಬರುವೆನು; ಅದು ಆಗದಿದ್ದರೆ ನೆಮ್ಮದಿಯಾಗಿ ಪ್ರಾಣವನ್ನು ಬಿಡುವೆನು, ಎಂದು ಆಲೋಚಿಸಿದನು.

ಸಂಜೆಯಾಗುತ್ತಲೆ ಧರ್ಮದೇವನಿಗೆ ಎದೆಯು ಹಾರುತ್ತ ಚಳಿ ಬಂದು ನಡುಕ ವೆತ್ತಿ ಪ್ರಾಣವೇ ಹೋಗುವಂತೆ ಯಾತನೆಯುಂಟಾಯಿತು. ಹೀಗೆ ಸುಮಾರು ಅರ್ಧ ಘಂಟೆ ನರಳಿದ ಮೇಲೆ ಅವನಿಗೆ ಧೈರ್ಯವಾಯಿತು. ಕೊನೆಗೆ ಅಧಿಕಾರಿಯು ಹೇಳಿದ್ದ ವೇಳೆಗೆ ಸರಿಯಾಗಿ ಕೂಪದ ಬಾಗಿಲನ್ನು ತೆಗೆದುಕೊಂಡು ಮುಂದೆ ಇಬ್ಬರು ಒಳಗೆ ಬಂದರು. ಬೇರೆ ಒಬ್ಬನು ದೀವಟಿಗೆಯನ್ನು ಹಿಡಿದುಕೊಂಡು ಬಾಗಿಲಲ್ಲಿ ನಿಂತನು. ಈಗ ಪರೀಕ್ಷಾಕಾಲವು ಪ್ರಾಪ್ತವಾಯಿತೆಂದು ಧೈರ್ಯವಂ ತಾಳಿ ಧರ್ಮದೇವನು ಉಸಿರನ್ನು ಹಿಡಿದು ಕೊಂಡು ಇದ್ದನು. ಒಳಗೆ ಬಂದವರು ತಾವು ತಂದಿದ್ದ ದೇವಯಾನವನ್ನು ಕೆಳಗಿಟ್ಟು, ಕಾಲಕಡೆಯೊಬ್ಬ ತಲೆಯ ಕಡೆಯೊಬ್ಬ ಈ ಮೇರೆಗೆ ಗೋಣಿಯನ್ನು ಮಂಚದಿಂದೆತ್ತಿ ಅದರ ಮೇಲಿಟ್ಟರು. ಆಗ ಧರ್ಮದೇವನು ತನ್ನ ಶರೀರವನ್ನು ಕಟ್ಟಿಗೆಯಂತೆ ಮಾಡಿಕೊಂಡನು.

ತಲೆಯ ಕಡೆ ಎತ್ತಿದವನು ಇವನು ಮುದುಕನಾಗಿದ್ದರೂ ಏನು ಭಾರವಪ್ಪ ಎನ್ನಲು, ಕಾಲಕಡೆಯವನು ವರ್ಷೋವರ್ಷ ಇವನ ಶರೀರವು ಬಳೆಯುತ್ತಲಿದ್ದಿತೆಂದು ಎಲ್ಲರೂ ಹೇಳುತ್ತಲಿದ್ದರು ಎಂದನು.

ಹೇಗಾದರೂ ಆಗಲಿ, ಹೊತ್ತೇ ಹೊರಬೇಕು, ಎತ್ತು ಎಂದು ಹೇಳಿ ಇಬ್ಬರೂ ಚಟ್ಟವನ್ನೆತ್ತಿಕೊಂಡು, ಸ್ವಲ್ಪದೂರ ಹೋಗಿ ಅಲ್ಲಿ ಅದನ್ನು ಕೆಳಗಿಟ್ಟು, ದೀವಟಿಗೆಯವನನ್ನು ಮುಂದೆ ಹೋಗ ಹೇಳಿ ತಾವು ಅವನ ಹಿಂದೆ ಮೆಟ್ಟಲುಗಳನ್ನು ಹತ್ತಿ ಹೋಗುತ್ತಿರಲು, ಧರ್ಮದೇವನಿಗೆ ಬೀಸುತ್ತಿದ್ದ ತಂಗಾಳಿಯು ತೋರಿತು. ಸುಮಾರು ಐವತ್ತು ಗಜ ದೂರ ಹೋಗಿ ಯಾನವನ್ನು ಕೆಳಗಿಟ್ಟು ಒಬ್ಬನು ದೀವಟಿಗೆಯವನನ್ನು ಕರೆದು ಕೊಂಡು ಎಲ್ಲಿಯೋ ಹೋದನು; ಮತ್ತೊಬ್ಬನು ಪಕ್ಕದಲ್ಲಿಯೇ ಕುಳಿತನು. ಆಗ ಕಲ್ಲಕಟ್ಟಡದ ಮೇಲೆ ಹೊಡೆಯುತ್ತಲಿರುವ ಸಮುದ್ರದ ಅಲೆಗಳ ಶಬ್ದವು ಧರ್ಮದೇವನಿಗೆ ಕೇಳಿಸಲು ತಾನೆಲ್ಲಿರಬಹುದೆಂದು ಯೋಚಿಸುತ್ತಲಿದ್ದನು. ಬಂದಿದ್ದ ಮೂವರಲ್ಲಿ

ತನ್ನ ಸಮೀಪದಲ್ಲಿ ಒಬ್ಬನೇ ಇರುವನೆಂದು ತಿಳಿದು ಧರ್ಮದೇವನು ಗೋಣಿಯನ್ನು ಹರಿದು ಓಡಿ ಹೋಗಲೇ ಎಂದಿದ್ದು, ದೈವಾಧೀನದಿಂದ ಹಾಗೆ ಮಾಡಲಿಲ್ಲ. ಇಷ್ಟರಲ್ಲಿಯೇ ಯಾನದ ಸಮೀಪದಲ್ಲಿ ಭಾರವಾದ ಒಂದು ಗುಂಡನ್ನು ಎತ್ತಿ ಹಾಕಿದ ಸದ್ದಾಯಿತು. ಯಾನದ ಪಕ್ಕದಲ್ಲಿದ್ದವನು ಧರ್ಮದೇವನ ಕಾಲಿಗೆ ಒಂದು ಹಗ್ಗವನ್ನು ಬಿಗಿಯಾಗಿ ಕಟ್ಟಿದನು. ತನ್ನ ಕಾಲನ್ನು ಏತಕ್ಕೆ ಕಟ್ಟುವರೆಂದು ಅವನಿಗೆ ತೋರಲಿಲ್ಲ ಸರಿಯಾಗಿ ಗಂಟು ಹಾಕಿದ್ದೀಯೋ ಎಂದು ಒಬ್ಬನು ಕೇಳಿದುದಕ್ಕೆ, ಹೋ, ಬಿಗಿಯಾಗಿ ಕಟ್ಟಿದ್ದೇನೆ ಎಂದು ಮತ್ತೊಬ್ಬನು ಎಂದನು. ಹಾಗಾದರೆ ಎತ್ತು ಎಂದು ಹೇಳಿ, ಇಬ್ಬರೂ ಯಾನವನ್ನು ಎತ್ತಿಕೊಂಡು ಹೋಗಿ ಅಲ್ಲಿ ಒಂದು ಬಾಗಿಲನ್ನು ತೆಗೆಯಿಸಿ ಮುಂದಕ್ಕೆ ಹೊರಟರು. ಆಗ ಅಲೆಗಳ ಸಪ್ಪಳವು ಧರ್ಮದೇವನ ಕಿವಿಗಳಿಗೆ ಚೆನ್ನಾಗಿ ಕೇಳಿಸುತ್ತಿದ್ದಿತು.

ವಾಹಕರಲ್ಲಿ ಒಬ್ಬನು ಮಳೆಗಾಳಿಗಳು ವಿಶೇಷವಾಗಿ ಬರುವಂತೆ ತೋರುತ್ತದೆ; ಸನ್ಯಾಸಿಗೆ ಸಕಾಲದಲ್ಲಿ ಸಮುದ್ರಸ್ನಾನಮಾಡಿಸಿ ನಾವು ಬೇಗನೆ ಮನೆಯನ್ನು ಸೇರಿಕೊಳ್ಳೋಣ ಎಂದನು.

ಸನ್ಯಾಸಿಗೆ ಕ್ರಿಯಾದಿಗಳು ಅವರದೂ ಇಲ್ಲವಾಗಿ ಸಮುದ್ರಸ್ನಾನವೇ ಎಲ್ಲವೂ ಎಂದು ಹೇಳಿ ಮತ್ತೊಬ್ಬನು ಹುಚ್ಚು ಹುಚ್ಚಾಗಿ ನಕ್ಕನು.

ನಮ್ಮ ಸ್ಥಳಕ್ಕೆ ಬಂದೆವು ಎಂದು ಒಬ್ಬನು ಹೇಳಲು, ಮತ್ತೊಬ್ಬನು ಇನ್ನೂ ಮುಂದೆ ಹೋಗು; ಇಲ್ಲವಾದರೆ ಹೋದ ಸಲದಂತೆ ಶವವು ಕಲ್ಲುಗಳ ಮೇಲೆ ಬೀಳುವುದು; ಅಧಿಕಾರಿಯು ನಮ್ಮನ್ನು ಬಯ್ಯುವನು ಎಂದನು.

ಇಬ್ಬರೂ ಶವವನ್ನು ಎತ್ತಿಕೊಂಡು ಮತ್ತಷ್ಟು ದೂರ ಹೋಗಿ ಯಾನವನ್ನು ಕೆಳಗಿಳುಹಿ ಶವವನ್ನು ಎತ್ತಿ ಒಂದು, ಎರಡು, ಮೂರು ಎಂದು ಕೂಗುತ್ತ, ಸಮುದ್ರಕ್ಕೆ ಜೀಸಿ ಎಸೆದರು. ಆಕಾಶದಲ್ಲಿ ಹಾರುವ ಪಕ್ಷಿಯು ಗುಂಡಿನ ಪೆಟ್ಟುತಿಂದರೆ ಹೇಗೆ ಸರ್ರನೆ ಕಲ್ಲಿನಂತೆ ಕೆಳಕ್ಕೆ ಬೀಳುವುದೋ, ಹಾಗೆಯೇ ತಾನೂ ಜೀಳುತ್ತಿದ್ದೇನೆಂದು ಧರ್ಮದೇವನಿಗೆ ತೋರಿತು. ಕಾಲಿಗೆ ಕಟ್ಟಿದ್ದ ಭಾರವಾದ ಕಬ್ಬಿಣದ ಗುಂಡು ಮತ್ತಷ್ಟು ಜೀಗ ಅವನನ್ನು ಕೆಳಕ್ಕೆ ಸೆಳೆಯುತ್ತಲಿದ್ದಿತು. ನೀರಿಗೆ ಜೀಳುವುದರೊಳಗಾಗಿ ಒಂದೊಂದು ನಿಮಿಷವೂ ಅವನಿಗೆ ಒಂದೊಂದು ಯುಗವಾಗಿ ತೋರಿತು.

ನೀರಿನಲ್ಲಿ ಬಿದ್ದೊಡನೆಯೇ ಧರ್ಮದೇವನು ಕಿಟ್ಟಿಂದು ಕಿರುಚಿಕೊಂಡನು. ಆ ಸದ್ದು ಅಲೆಗಳ ಅಬ್ಬರದಲ್ಲಿ ಲೀನವಾಗಿ ಹೋಯಿತೋ, ಇಲ್ಲವೇ ಮೇಲಿದ್ದವರಿಗೆ ಕೇಳಿಸಿತೋ ತಿಳಿಯದು.

ನೀರಿನಲ್ಲಿ ಬಿದ್ದಾಗ ಧರ್ಮದೇವನು ಭ್ರಾಂತನಾದರೂ, ಬಾಲ್ಯದಿಂದಲೂ ತನಗೆ ಸಮುದ್ರದಲ್ಲಿ ಈಸಿ ಮುಳುಗಿ ಅಭ್ಯಾಸವಿದ್ದುದರಿಂದ ಉಸಿರನ್ನು ಹಿಡಿದು ಕೈಯಲ್ಲಿದ್ದ ಚೂರಿಯಿಂದ ಗೋಣಿಯನ್ನು ಹರಿದು ಕೈಗಳನ್ನು ಬಿಡಿಸಿಕೊಂಡು, ಆ ಮೇಲೆ ಕಾಲಿನ ವರೆಗೂ ಚೀಲವನ್ನು ಬಿಡಿಸಿಕೊಂಡು, ಕಾಲಿಗೆ ಕಟ್ಟಿದ್ದ ಗುಂಡಿನ ಹಗ್ಗವನ್ನು ಕುಯ್ಯಲು ಪ್ರಯತ್ನಪಟ್ಟು ಆದು ಸಾಗದೆ, ಕೆಳಕೆಳಗೆ ಮುಳುಗಿ ಹೋಗುತ್ತಲಿದ್ದನು. ಆಗ ಅವನು ಧೈರ್ಯಗೆಟ್ಟಿದ್ದರೆ ಅವನ ಕತೆಯು ಅಲ್ಲಿಗೇ ಮುಗಿಯುತ್ತಲಿದ್ದಿತು. ಜೀವದಾಸೆಯಿಂ ಬಿಟ್ಟು ಬಿಲ್ಲೆನೋಪಾದಿ ತನ್ನ ಶರೀರವನ್ನು ಬಾಗಿಸಿಕೊಂಡು ಕಾಲಿನ ಹಗ್ಗವನ್ನು ಒಂದೇ ನಾರಿ ಕೊಯ್ದನು. ಗುಂಡು ಸಹಿತ ಚೀಲವು ಸಮುದ್ರದ ತಳವನ್ನು ಸೇರಿತು. ಧರ್ಮದೇವನು ನೀರಿನಿಂದ ಮೇಲಕ್ಕೆ ಎದ್ದು ಒಂದು ನಿಮಿಷ ಸುದಾರಿಸಿಕೊಂಡು, ಪುನಃ ಮುಳುಗಿ ಸುಮಾರು ಅರ್ಧ ಮೈಲಿ ದೂರ ಈಸುತ್ತ ಹೋಗಿ ಜಾಲದುರ್ಗದ ಕಡೆ ತಿರುಗಿ ನೋಡಲು, ದೀಪಪಟಿಗೆಯ ಬೆಳಕು ಇನ್ನೂ ಕಾಣುತಲಿದ್ದಿತು. ಪುನಃ ಮುಳುಗಿ ಇನ್ನೊಂದು ಅರ್ಧ ಮೈಲಿ ದೂರ ಹೋಗಿ ತಲೆಯೆತ್ತಿ ನೋಡಲು, ಬೆಳಕು ಇರಲಿಲ್ಲ. ಈಗ ನಾನು ಎಲ್ಲಿರಬಹುದು, ಎಂದು ಯೋಚಿಸಿ ಸುತ್ತಲೂ ನೋಡಲು, ಪ್ಲವಂಗದ್ವೀಪದ ದೀಪಗೃಹದ ಬೆಳಕು ಕಣ್ಣಿಗೆ ಕಂಡಿತು. ಧರ್ಮದೇವನು ಅನೇಕಾವೃತ್ತಿ ಆ ಸಮುದ್ರದಲ್ಲಿ ಓಡಾಡುತ್ತಲಿದ್ದುದರಿಂದ ಅಲ್ಲಿಯ ಸನ್ನಿವೇಶವೆಲ್ಲ ಅವನಿಗೆ ಚೆನ್ನಾಗಿ ಗೊತ್ತಿದ್ದಿತು. ಕಣ್ಣಿಗೆ ಕಂಡ ದೀಪಸ್ಥಳದ ಬೆಳಕಿನಿಂದ ತಾನಿರುವ ಸ್ಥಳವು ಇಂತಹುದೆಂದು ಗೊತ್ತುಮಾಡಿಕೊಂಡು ಸಮೀಪದಲ್ಲಿರುವ ಎರಡು ಮೂರು ದ್ವೀಪಗಳಲ್ಲಿ ಜನಗಳು ವಾಸಮಾಡುತ್ತಲಿರುವರು, ಅವುಗಳ ಆಚೆ ಇರುವ ತೊಪ್ರದ್ವೀಪವು ನಿರ್ಜನವಾಗಿರುವುದು; ಅಲ್ಲಿಗೆ ಹೋಗಬೇಕೆಂದು ಅತ್ತಕಡೆ ತಿರುಗಿದನು.

ಬಂದಿಸೆರೆಯಲ್ಲಿ ಅಷ್ಟು ವರ್ಷಗಳಿದ್ದರೂ, ಧರ್ಮದೇವನಿಗೆ ಬಲ ಕಡಮೆಯಾಗಿರಲಿಲ್ಲ; ಆದರೆ ಅವನಿಗೆ ಒಂದು ಭಯವಿದ್ದಿತು. ಜಾಲದುರ್ಗದ ಸಿಪಾಯಿಗಳು ತನ್ನನ್ನು ಎಲ್ಲಿ ಹಿಂಬಾಲಿಸಿ ಒರುವರೋ ಎಂಬ ಭಯದಿಂದ ಅವನು ಒಂದೊಂದು

ಸಾರಿಯೂ ಮುಳುಗಿ ಎದ್ದು ಹಿಂತಿರುಗಿ ನೋಡುತ್ತ ಹಿಂದಿನಿಂದ ಏಳುತ್ತಿರುವ ಅಲೆಗ ಗಳನ್ನೇ ಸಿಪಾಯಿಗಳು ತುಂಬಿರುವ ದೋಣಿಗಳೆಂದು ಭಾವಿಸಿಕೊಂಡು ವೇಗವೇಗನೆ ತಾಮ್ರದ್ವೀಪದ ಕಡೆಗೆ ಹೋಗುತ್ತಲಿದ್ದನು. ಇವನಿಗೆ ಭಯದಿಂದಲೂ ಅನವಶ್ಯಕ ವಾಗಿ ಮಾಡಿದ ಹೆಚ್ಚು ಪ್ರಯತ್ನದಿಂದಲೂ, ಕೈಕಾಲುಗಳು ಸೋತುಹೋಗಿ ತಾಮ್ರ ದ್ವೀಪವು ಇನ್ನೂ ಎಷ್ಟು ದೂರದಲ್ಲಿದೆಯೋ ಎಂದು ಯೋಚಿಸುತ್ತ, ಸುಮಾರು ಒಂದು ಘಂಟೆಯ ಕಾಲದಿಂದ ಈಸುತ್ತಲಿರುವುದರಿಂದ, ಈ ವೇಳೆಗೆ ಆ ದ್ವೀಪಕ್ಕೆ ಬಂದಿರಬಹು ದೆಂದು ನಿರ್ಧರಮಾಡಿಕೊಂಡನು. ಕಾಲುಗಳನ್ನು ಕೆಳಗೆ ಬಿಟ್ಟು ನೋಡಲು, ನೆಲವು ಸಿಕ್ಕದೆ ಇದ್ದುದರಿಂದ, ತಾನು ಮೋಸಹೋಗಿರಬಹುದೆಂದು ಅನುಮಾನತಟ್ಟಿ, ತಾಮ್ರ ದ್ವೀಪವು ಇನ್ನೂ ದೂರವಿರುವ ಸಂದರ್ಭದಲ್ಲಿ ಕೈಕಾಲುಗಳು ಪೂರಾ ಸೋತುಹೋ ಗುವ ವರೆಗೂ ಈಸುತ್ತಲಿದ್ದು ಸಾಯುವೆನು ಎಂದು ಯೋಚಿಸಿದನು.

ಹೀಗೆಂದು ಸ್ವಲ್ಪ ದೂರದ ವರೆಗೆ ಹೋಗಲು ಅವನ ಮೊಳಕಾಲಿಗೆ ಒಲವಾದ ಒಂದು ಪೆಟ್ಟು ತಗಲಿತು. ಇದೆಲ್ಲಿಯೋ ಜಾಲದುರ್ಗದಿಂದ ಹೊರಟ ಸಿಪಾಯಿಗಳಲ್ಲಿ ಅವನೋ ಒಬ್ಬನು ಹೊಡೆದ ಗುಂಡಿನ ಪೆಟ್ಟೆಂದು ತಿಳಿದು ಕೋಲೆಬಸವನ್ನು ಹಾರಿಸಿದ ಶಬ್ದವನ್ನು ನಿರೀಕ್ಷಿಸಿದನು. ಆದು ಕೇಳಿಸದಿರಲು ಕೈಯನ್ನು ಮುಂದೆ ಚಾಚಿದನು ; ಒಂ ಡೆಯು ಸಿಕ್ಕಿತು. ಆಗ ಅವನಿಗಾದ ಸಂತೋಷವನ್ನು ಅಷ್ಟಿಷ್ಟೆಂದು ಹೇಳಲಾಗದು. ನೀರಿನಲ್ಲಿಯೇ ನಿಂತು ದೇವರನ್ನು ವಂದಿಸಿ, ಒಳಿಕ ಒಂದು ಬಂಡೆಯನ್ನು ಹತ್ತಿ ಕೈ ಕಾಲುಗಳನ್ನು ಚಾಚಿಕೊಂಡು ಸುಪ್ಪತ್ತಿಗೆಯ ಮೇಲೆ ಸುಖವಾಗಿ ಮಲಗುವಂತೆ ಅದರ ಮೇಲೆ ಮಲಗಿದನು. ಮಳೆ ಗಾಳಿಗಳು ಪ್ರಾರಂಭವಾದುವು. ಇವನು ಒಹಳ ಆಯಾಸ ಪಟ್ಟದ್ದುದರಿಂದ ನಿದ್ದೆಯು ಚೆನ್ನಾಗಿ ಬಂದಿತು. ಹೀಗೆ ಎಷ್ಟುಹೊತ್ತು ಮಲಗಿದ್ದನೋ ಗೊತ್ತಾಗಲಿಲ್ಲ. ಛಟ ಛಟೆಂದು ಹತ್ತಿರದಲ್ಲಿಯೇ ಸುಳಿದ ಒಂದು ಸಿಡಿಲಿನ ಶಬ್ದದಿಂದ ಎಚ್ಚರವಾಯಿತು. ಆಗ ಅವನಿಗೆ ಹಸಿವು ತೋರಿ, ಆ ಕಲ್ಲುಬೊಟ್ಟರೆಯಲ್ಲಿ ನಿಂತಿದ್ದ ಮಳೆನೀರನ್ನೇ ಹೊಟ್ಟೆಯ ತುಂಬ ಕುಡಿದು ಒಂದು ಬಂಡೆಯ ಕೆಳಗೆ ಮಳೆಗೆ ಮರೆ ಯಾಗಿ ಕುಳಿತನು.

ಮಳೆ, ಗಾಳಿ, ಮಿಂಚು, ಗುಡುಗು, ಸಿಡಿಲು, ಇವುಗಳ ರಭಸವು ಹೇಳಲಸದಳ ವಾಗಿದ್ದಿತು. ಸಮುದ್ರವು ಉಬ್ಬೊಲ್ಲೋಲಕಲ್ಲೋಲವಾಗಿ ದ್ವೀಪವೇ ಕಳಪುಗುಡಿ ನೀರಿನಲ್ಲಿ

ಮುಳುಗಿಹೋಗುವುದೋ ಏನೋ ಎಂದು ಧರ್ಮದೇವನಿಗೆ ದಿಗಿಲಾಯಿತು. ಹೀಗಿರುವಲ್ಲಿ ಸಮುದ್ರದಲ್ಲಿ ಹೋಗುತ್ತಲಿದ್ದ ಬೆಸ್ತರ ದೋಣಿಗೆ ಬಲವಾದ ಒಂದು ಸಿಡಿಲು ಹೊಡೆದು ದೋಣಿಯು ಮುಳುಗಿ ಹೋಯಿತು. ಅದನ್ನು ಕಂಡು ಧರ್ಮದೇವನು ಬಹು ಸಂಕಟಪಟ್ಟು, ಇಷ್ಟುಮಟ್ಟಿಗೆ ದೇವರು ತನ್ನನ್ನು ಕಾಪಿಟ್ಟನಲ್ಲ ಎಂದು ಭಗವಂತನನ್ನು ವಂದಿಸಿದನು. ಕೊನೆಗೆ ಗಾಳಿಯೂ ಮಳೆಯೂ ಕಡಮೆಯಾಗಲು, ಸಮುದ್ರವು ಸಮಾಧಾನಸ್ಥಿತಿಗೆ ಬಂದಿತು. ಅಷ್ಟು ಹೊತ್ತಿಗೆ ಪೂರ್ವದಿಕ್ಕಿನಲ್ಲಿ ಚಿನ್ನ, ಬೆಳ್ಳಿ, ತಾಮ್ರಗಳು ಕಲೆತ ಸಲಾಕೆಯಂತೆ ರೇಖೆಗಳು ಕಾಣಿಸಿದುವು.

ಆಗ ಧರ್ಮದೇವನು ಈ ರೀತಿಯಲ್ಲಿ ಯೋಚಿಸಿದನು. ಇನ್ನು ಎರಡು ಘಂಟೆಗಳಲ್ಲಿ ಆಳು ನನ್ನ ಕೂಪಕ್ಕೆ ಹೋಗಿ ಅಲ್ಲಿ ಅನಂದನ ಹೆಣವನ್ನು ಕಂಡು ಅಧಿಕಾರಿಗೆ ತಿಳಿಸುವನು. ಅಧಿಕಾರಿಯು ಎರಡು ಕೂಪಗಳನ್ನೂ ಶೋಧಿಸಿ ಸುರಂಗವನ್ನು ಕಂಡು, ನಾನು ಮಾಡಿದ ಉಪಾಯವನ್ನು ತಿಳಿದು, ಸಮುದ್ರದಲ್ಲಿ ಬಿಸುಟ ಸಮಯದಲ್ಲಿ ನಾನು ಕಿರುಚಿಕೊಂಡೆನೆಂದು ವಾಹಕರಿಂದ ಅರಿತು, ಅವಾಯಸೂಚಕವಾದ ಗುಂಡನ್ನು ಹಾರಿಸಿ, ನನ್ನನ್ನು ಹುಡುಕಲಿಕ್ಕೆ ದೋಣಿಗಳನ್ನು ಕಳುಹಿಸುವನು. ಆಗ ಸಮುದ್ರದಲ್ಲಿ ತಿರುಗಾಡುವವೆಲ್ಲರೂ ಅವನೋ ಒಬ್ಬ ಬಂದಿಯು ತಪ್ಪಿಸಿಕೊಂಡು ಹೋಗಿರುವನೆಂದು ತಿಳಿದು ನಾನು ಸಿಕ್ಕಿದರೆ ನನ್ನನ್ನು ಹಿಡಿದು ಕೊಡುವರು. ದೇವರೇ! ನಾನು ಇದುವರೆಗೆ ಬಹು ಕಷ್ಟಗಳನ್ನನುಭವಿಸಿದ್ದೇನೆ; ನನಗೆ ಚಳಿ, ಪ್ರಾಣಹೋಗುವ ಹಸಿವು; ಅಸಹಾಯನಾದ ನನ್ನಲ್ಲಿ ಪೂರ್ಣಕೃಪೆಯನ್ನಿಟ್ಟು ಸಹಾಯವನ್ನು ಮಾಡಬೇಕು ಎಂದು ಪ್ರಾರ್ಥಿಸಿದನು.

ದೇವರು ಇವನ ಪ್ರಾರ್ಥನೆಯನ್ನು ಆಲಿಸಿದನೋ ಎಂಬಂತೆ, ಸುಮಾರು ಒಂದು ಮೈಲಿಯ ದೂರದಲ್ಲಿ ಒಂದು ಸಣ್ಣ ಹಡಗು ಬರುತ್ತಲಿದ್ದಿತು. ಅದು ಅನ್ಯದೇಶದ ಹಡಗಿನಂತೆಯೂ, ಮಲಯಪಟ್ಟಣದ ಕಡೆಯಿಂದ ಬರುತ್ತಿರುವಂತೆಯೂ ಅವನಿಗೆ ತೋರಿತು. ಇನ್ನು ಅರ್ಧಘಂಟೆಯೊಳಗಾಗಿ ಅದು ಇಲ್ಲಿಗೆ ಬರುವುದು. ಅದರಲ್ಲಿರುವವರು ಏನನ್ನೂ ಕೇಳದೆ ನನ್ನನ್ನು ಕರೆದುಕೊಂಡು ಹೋದರೆ ಸರಿ; ಇಲ್ಲದಿದ್ದರೆ ಏನನ್ನು ಹೇಳಿ ಅವರನ್ನು ಸಮಾಧಾನಪಡಿಸಲಿ? ಅವರು ಕಡಲ ಕಳ್ಳರಾಗಿರಬಹುದು; ಹಾಗಿದ್ದರೆ ಅವರು ದುಡ್ಡಿನ ಆಸೆಗಾಗಿ ನನ್ನನ್ನು ಅಧಿಕಾರಿಗಳಿಗೆ ಹಿಡಿದುಕೊಟ್ಟರೂ ಕೊಡಬಹುದು.

ಏನಾದರೂ ಆಗಲಿ, ಅನುಕೂಲವಾದ ಸಾಹಾಯ್ಯವು ಸಿಕ್ಕುವ ವರೆಗೂ ಇಲ್ಲಿಯೇ ಇರುವುದು ಒಳ್ಳೆಯದು ಎಂದು ಯೋಚಿಸಿ, ಕೂಡಲೆ ಅದುವರೆಗೂ ಇಲ್ಲಿರಲಿಕ್ಕೆ ಆಗುವುದಿಲ್ಲ; ಹಸಿವಿನಿಂದ ಪ್ರಾಣವು ಹೋಗುತ್ತಲಿದೆ; ಬಲವೆಲ್ಲಾ ಕುಗ್ಗಿಹೋಯಿತು; ಇನ್ನು ಸ್ವಲ್ಪಕಾಲದಲ್ಲಿಯೇ ಚಾಲದುರ್ಗದಲ್ಲಿ ಗಲಭೆಯುಂಟಾಗುವುದು. ಏನ ಮಾಡಲಿ, ಎಂದು ನಾಲ್ಕು ದಿಕ್ಕುಗಳನ್ನೂ ನೋಡುತ್ತಲಿದ್ದನು.

ಹಿಂದಿನ ರಾತ್ರಿ ಹಡಗು ಮುಳುಗಿ ಸತ್ತ ಬಿಸ್ತರ ಟೋಪಿಯೂ, ಅವರು ಉಟ್ಟಿದ್ದ ಬಟ್ಟೆಯೂ ಅವನಿದ್ದೆಡೆಗೆ ಬರಲು, ಸಂತೋಷಪಟ್ಟು ಅವುಗಳನ್ನು ತೆಗೆದುಕೊಂಡು, ಆ ಹಡಗಿನವರಿಗೆ ಹೇಳತಕ್ಕುದನ್ನು ಮನದಲ್ಲಿ ನಿಶ್ಚಯಿಸಿಕೊಂಡು ಬಟ್ಟೆಯನ್ನು ನಡುವಿಗೆ ಸುತ್ತಿ ಟೋಪಿಯನ್ನು ತಲೆಗೆ ಹಾಕಿಕೊಂಡು ಸಮೀಪದಲ್ಲಿ ತೇಲುತ್ತಿದ್ದ ಒಂದು ಮರದ ತುಂಡನ್ನು ಹಿಡಿದು "ಬದುಕಿದೆ, ಬದುಕಿದೆ" ಎಂದು ಕೂಗುತ್ತ ಹಡಗಿನ ಇದುರಿಗೆ ಈಸಿಕೊಂಡು ಹೋದನು.

ಇವನು ಹೀಗೆ ಹೊರಟೆ ಕೂಡಲೆ, ಹಡಗು ಬೇರೆ ಕಡೆಗೆ ತಿರುಗಿತು; ಅದನ್ನು ನೋಡಿ, ಟೋಪಿಯನ್ನು ಕೈಯಲ್ಲೆತ್ತಿ, ಹಡಗಿನಲ್ಲಿರುವವರು ತನ್ನನ್ನು ನೋಡುವುದಕ್ಕಾಗಿ ಏನೇನೋ ಉಪಾಯ ಮಾಡಿದನು. ಅದು ಪುನಃ ಇವನಿಗೆ ಅಭಿಮುಖವಾದುದರಿಂದ ತಾನು ಮಾಡಿದ ಸಂಜ್ಞೆಯನ್ನು ಹಡಗಿನವರು ತಿಳಿದರೆಂದಿದ್ದನು. ಹಡಗಿಗೂ ತನಗೂ ಇನ್ನೇನು ಕಾಲುಮೈಲಿ ದೂರವಿರುವುದೆಂದಿದ್ದಾಗ, ಅದು ಪುನಃ ಬೇರೆ ಕಡೆಗೆ ತಿರುಗಿತು. ಅದನ್ನು ನೋಡಿ ಧರ್ಮದೇವನು ತಾನು ಸಮುದ್ರದಲ್ಲಿ ಸಾಯುವ ಕಾಲ ಬಂದಿತೆಂದು ಗಾಬರಿಪಟ್ಟು, ಮರದ ತುಂಡಿನ ಮೇಲೆ ನಿಂತು ಟೋಪಿಯನ್ನು ಕಯ್ಯಲ್ಲೆತ್ತಿ ಗಟ್ಟಿಯಾಗಿ ಕೂಗಿಕೊಂಡನು. ಆಗ ಹಡಗಿನವರು ಇವನನ್ನು ಕಂಡು ದೋಣಿಯನ್ನು ಒಡನೆಯೇ ಇಳುಹಿ ಇಬ್ಬರನ್ನು ಕೂರಿಸಿ ಇವನಿರುವೆಡೆಗೆ ವೇಗವಾಗಿ ನಡೆಸಿಕೊಂಡು ಹೋಗಹೇಳಿದರು.

ದೋಣಿಯು ವೇಗವನ್ನು ನೋಡಿ, ಧರ್ಮದೇವನು ತನ್ನ ಶಕ್ತಿಯನ್ನು ನಂಬಿ ಮರದ ತುಂಡನ್ನು ಕೈಬಿಟ್ಟು ಬೇಗಬೇಗನೆ ತಾನೂ ದೋಣಿಯ ಕಡೆಗೆ ಈಸಿಕೊಂಡು ಹೋಗುತ್ತಿದ್ದನು. ಎರಡು ದಿವಸಗಳಿಂದ ತಿಂಡಿಯಿಲ್ಲದೆ ರಾತ್ರಿಯೆಲ್ಲಾ ಮಳೆಗಾಳಿಗಳಲ್ಲಿ ಅಲೆದು ಬಳಲಿದ್ದ ಕಾರಣ, ಇವನು ದೋಣಿಯನ್ನು ಸೇರುವುದರೊಳಗಾಗಿ

ಎರಡು ಮೂರು ಸಾರಿ ನೀರಿನಲ್ಲಿ ಮುಳುಗಿದನು. ಮೂರನೆಯ ಸಾರಿ ಇವನು ಮುಳುಗುವ ವೇಳೆಗೆ ದೋಣಿಯು ಹತ್ತಿರಕ್ಕೆ ಬರಲು, ಅದರಲ್ಲಿದ್ದವರಲ್ಲಿ ಒಬ್ಬನು ಹೆದರಬೇಡ ಎಂದು ಹೇಳಿ, ಪುನಃ ಮುಳುಗುತ್ತಿದ್ದ ಇವನ ತಲೆಗೂದಲನ್ನು ಹಿಡಿದು ಮೇಲಕ್ಕೆ ಎತ್ತಿ ದೋಣಿಯಲ್ಲಿ ಹಾಕಿತ್ತಲೆ ಇವನಿಗೆ ಪ್ರಜ್ಞೆತಪ್ಪಿತು.

ಧರ್ಮದೇವನು ಕಣ್ಣು ಬಿಟ್ಟಾಗ, ಹಡಗಿನಲ್ಲಿ ಮಲಗಿದ್ದನು. ಅವನ ಶರೀರವನ್ನೆಲ್ಲಾ ಒಬ್ಬನು ಕಂಬಳಿಯಿಂದ ಉಜ್ಜುತ್ತಿದ್ದನು; ದೋಣಿಯಲ್ಲಿ ಹೆದರಬೇಡ ಎಂದು ತನಗೆ ಹೇಳಿದವನು ಸ್ವಲ್ಪ ಸಾರಾಯವನ್ನು ಕುಡಿಸಿದನು; ನೌಕಾಧಿಪತಿಯೆಂದು ತೋರುತ್ತಲಿದ್ದ ಮತ್ತೊಬ್ಬನು ಇವನನ್ನು ನೋಡಿ ಸಮುದ್ರದಲ್ಲಿ ಓಡಾಡುತ್ತಲಿರುವವರೆಲ್ಲರಿಗೂ ಇಂಥ ಗಂಡಗಳು ಇರುತ್ತಲಿರುವವು ಎಂದುಕೊಂಡು ಧರ್ಮದೇವನಿಗೆ ಮಾತನಾಡುವ ಶಕ್ತಿಯಿರುವುದೆಂದು ತಿಳಿದು, ನೀನಾರು ಎಂದನು.

ಅಯ್ಯಾ! ನಾನು ಮಾಲತೀದ್ವೀಪದವನು; ನಾನೂ ಇನ್ನು ಮೂವರೂ ಧಾನ್ಯವನ್ನು ಹೇರಿಕೊಂಡು ಬರುತ್ತಲಿರುವಾಗ ಬಿರುಗಾಳಿಯೆದ್ದು ದೋಣಿಯು ಮುಳುಗಿಹೋಗಿ ನಾವಿಕರೆಲ್ಲರೂ ನೀರಿನ ಪಾಲಾದರು; ದೇವರ ದಯೆಯಿಂದ ನಾನೊಬ್ಬನೇ ಬದುಕಿಕೊಂಡೆನು.

ನೀನೆಲ್ಲಿಂದ ಬಂದೆ? ತಾಮ್ರದ್ವೀಪದಿಂದ.

ನಿನ್ನ ಅವತಾರವನ್ನು ನೋಡಿ ಯಾರೋ ಪಕ್ಕಾಕಳ್ಳನೆಂದಿದ್ದೆನು.

ಆಗ ಧರ್ಮದೇವನಿಗೆ ಬಳೆದಿದ್ದ ತಲೆಗೂದಲೂ ಗಡ್ಡಮೀಸೆಗಳೂ ಜ್ಞಾಪಕಕ್ಕೆ ಬಂದು ಅಯ್ಯಾ, ನಾನು ಕಳ್ಳನಲ್ಲ; ನನಗೆ ಒಂದು ರೋಗವಿತ್ತು, ಅದು ವಾಸಿಯಾದರೆ ಹತ್ತು ವರ್ಷಗಳು ದೀಕ್ಷೆ ಬಿಡುವೆನೆಂದು ಹರಕೆಮಾಡಿಕೊಂಡಿದ್ದೆನು. ರೋಗವು ಗುಣವಾದುದರಿಂದಲೂ ಆ ಗಡುವು ಈ ದಿನ ಮುಗಿಯುವುದರಿಂದಲೂ ಇಂದು ಆಯುಷ್ಕರ್ಮವನ್ನು ಮಾಡಿಸಿಕೊಳ್ಳುವೆನು ಎಂದನು.

ನಿನ್ನನ್ನು ನಾವೇನ ಮಾಡಬೇಕು?

ಏನ ಬೇಕಾದರೂ ಮಾಡಿರಿ. ನನ್ನ ಜತೆಯಲ್ಲಿದ್ದವರು ನೌಕಾಧಿಪನ ಸಂಗಡ ಸತ್ತರು. ನನ್ನ ದುಡ್ಡು ಕಾಸು, ಬಟ್ಟೆಬರೆ ಎಲ್ಲವೂ ಹಡಗಿನೊಡನೆ ಸಮುದ್ರದ ಪಾಲಾದುವು. ನಾನು ನಾವಿಕನ ಕೆಲಸವನ್ನು ಬಲ್ಲೆ. ಈ ಪ್ರಾಂತ್ಯಗಳಲ್ಲಿ ಇರುವ ಸಮುದ್ರದ

ದಾರಿ, ದೇವಗಳು ಎಲ್ಲವನ್ನೂ ಸ್ವಪ್ನದಲ್ಲಿ ಕೂಡ ಹೇಳಬಲ್ಲೆನು. ನನ್ನನ್ನು ನೀವಿಟ್ಟು ಕೊಂಡರೆ ಆವ ಕೆಲಸವನ್ನಾದರೂ ಮಾಡುವೆನು. ನನ್ನನ್ನು ಇಟ್ಟುಕೊಳ್ಳುವದು ನಿಮಗೆ ಇಷ್ಟವಿಲ್ಲದಿದ್ದರೆ, ಮುಂದಿನ ಊರಿನಲ್ಲಿ ಬಿಟ್ಟುಬಿಡಿರಿ; ಅಲ್ಲಿ ಹೇಗಾದರೂ ಮಾಡಿ ಹೊಟ್ಟೆಹೊರೆದುಕೊಳ್ಳುವೆನು.

ಸರಿಯಪ್ಪಾ ಸರಿ. ಲೋಕದಲ್ಲಿ ಜನರು ಕಷ್ಟಕಾಲದಲ್ಲಿ ಎಲ್ಲವನ್ನೂ ಮಾಡುತ್ತೇವೆಂದು ಹೇಳಿ, ಕೆಲಸ ಬಂದಾಗ ಹಿಂತೆಗೆಯುವರು.

ಅಯ್ಯಾ, ಪರೀಕ್ಷೆ ಮಾಡಿದ ಹೊರತು ಮನುಷ್ಯರ ಗುಣಗಳು ಹೇಗೆ ತಿಳಿದಾವು? ನಾನು ಎಲ್ಲರಂತೆ ಅಲ್ಲವೆಂಬುದು ಮುಂದೆ ನಿನಗೆ ಗೊತ್ತಾಗುವದು.

ಹಾಗಾದರೆ ನನ್ನಲ್ಲಿರು, ನೋಡೋಣ ಎಂದು ನೌಕಾಧಿಪನು ಹೇಳಿದನು.

ಇದಿರಿಗಿರುವ ಎರಡು ದ್ವೀಪಗಳನ್ನು ಬಲಕ್ಕೆ ಬಿಟ್ಟು ಹಡಗು ತಿರುಗುವದನ್ನು ನೋಡಿ, ಧರ್ಮದೇವನು ಈಗ ನಾವೆಲ್ಲಿಗೆ ಹೋಗಬೇಕು ಎಂದು ಕೇಳಲು, ಲೀಲಾವತೀ ಪಟ್ಟಣಕ್ಕೆ ಎಂದು ನೌಕಾಧಿಪನು ಎಂದನು.

ಹಾಗಾದರೆ ಅಲ್ಲಿ ಕಾಣುವ ಎರಡು ದ್ವೀಪಗಳನ್ನು ಏತಕ್ಕೆ ಸುತ್ತಿಕೊಂಡು ಹೋಗಬೇಕು? ಮಧ್ಯೆ ಹೋದರೆ ನಮಗೊಂದು ಮೈಲ ದೂರ ಪ್ರಯಾಣವು ಲಾಭವಾಗುವದು.

ಅವುಗಳ ಮಧ್ಯೆ ಬಂಡೆಗಳಿರುವುವಾದುದರಿಂದ ಹಾಗೆ ಹೋಗಲಾಗುವದಿಲ್ಲ.

ಅಲ್ಲಿ ಬಂಡೆಗಳಿರುವದೇನೋ ನಿಜವೇ, ಆದರೆ ಅವುಗಳ ಮಧ್ಯೆ ನಮ್ಮ ಹಡಗು ಧಾರಾಳವಾಗಿ ಹೋಗುವಷ್ಟು ದಾರಿಯಿದೆ.

ಹಾಗಾದರೆ ನೀನೇ ಹಡಗನ್ನು ಆ ಹಾದಿಯಲ್ಲಿ ನಡೆಸು, ನೋಡೋಣ.

ಹಾಗೆಂದ ಕೂಡಲೆ ಧರ್ಮದೇವನು ಹಡಗಿನ ಹಿಂದೆ ಇರುವ ಚುಕ್ಕಾಣಿ ಎಂಬ ಕೈಪಿಡಿಯನ್ನು ಹಿಡಿದು, ಆಗಿನ ಸಂದರ್ಭಕ್ಕೆ ಅನುಕೂಲವಾಗಿ ಪಟಗಳನ್ನು ಕಟ್ಟುವ ಮತೆ ಏರ್ಪಾಡು ಮಾಡಿಸಿ, ಆವ ಅಪಾಯವೂ ಇಲ್ಲದಂತೆ ಎರಡು ದ್ವೀಪಗಳ ಮಧ್ಯೆ ಹಡಗನ್ನು ಬಿಟ್ಟುಕೊಂಡು ಹೋದನು. ಆಗ ಹಡಗಿನಲ್ಲಿದ್ದ ನಾವಿಕರೆಲ್ಲರೂ "ಭಲೆ, ಭಲೆ" ಎಂದು ಇವನನ್ನು ಸ್ತೋತ್ರಮಾಡಿದರು. ಆಗ ಧರ್ಮದೇವನು ನೌಕಾಧಿಪನನ್ನು

ನೋಡಿ ನನ್ನನ್ನು ನಿಮ್ಮ ಬಳಿಯಲ್ಲಿರಿಸಿಕೊಂಡರೆ ನಿನಗೆ ನಾನು ಎಷ್ಟೋ ಒತ್ತಾಸೆ ಮಾಡುವೆನು ಎಂದನು.

ಇವನು ಸಮರ್ಥನು. ಇವನನ್ನು ನಮ್ಮ ಹತ್ತಿರ ಇಟ್ಟುಕೊಂಡರೆ ಅನುಕೂಲ ಎಂದು ನೌಕಾಧಿಪನು ಯೋಚಿಸಿ, ನಮ್ಮಲ್ಲಿದ್ದರೆ ನಿನಗೇನ ಕೊಡಬೇಕು ಎಂದು ಕೇಳಿದನು.

ಎಲ್ಲರಿಗೂ ನನನ್ನು ಕೊಡುತ್ತೀರೋ ಅದನ್ನೇ ನನಗೂ ಕೊಡಿರಿ.

ಸಮುದ್ರದಲ್ಲಿ ಮುಳುಗುತ್ತಿರುವಾಗ ಹೆದರಬೇಡ ಎಂದು ಹೇಳಿ, ಧರ್ಮದೇವನ ಜುಟ್ಟನ್ನು ಹಿಡಿದು ದೋಣಿಯಲ್ಲಿ ಎತ್ತಿಹಾಕಿದ ಯಾಗಪ್ಪನೆಂಬ ನಾವಿಕನು, "ಅದು ಸರಿಯಲ್ಲ. ನೀನು ನಮಗಿಂತ ಬುದ್ಧಿವಂತನಾಗಿರುವುದರಿಂದ ನಿನಗೆ ನಮಗಿಂತಲೂ ಅಧಿಕವಾಗಿ ಕೊಡಬೇಕು" ಎಂದನು. ಇದನ್ನು ಕೇಳುತ್ತಲಿದ್ದ ನೌಕಾಧಿಪನು ಯಾಗಪ್ಪನನ್ನು ನೋಡಿ "ಅವರವರಿಗೆ ತೋರಿದಷ್ಟು ಕೇಳುವರು; ಅದನ್ನು ಕಟ್ಟಿಕೊಂಡು ನಿನಗೇನು" ಎನ್ನಲು, ಯಾಗಪ್ಪನು ಅಹುದು ಬುದ್ಧೀ! ಅದು ನಿಜ; ನನಗೆ ತೋರಿದುದನ್ನು ಹೇಳಿದೆನು ಎಂದನು.

ನಿನಗೆ ಅವನಲ್ಲಿ ಅಷ್ಟು ಕನಿಕರವಿದ್ದರೆ ನಿನ್ನ ಉಡುಪುಗಳಲ್ಲಿ ಒಂದೆರಡನ್ನು ಕೊಡು ಎಂದು ಹೇಳಿದ ಒಡನೆಯೇ ಯಾಗಪ್ಪನು ಧರ್ಮದೇವನಿಗೆ ಬೇಕಾದ ಉಡುಪುಗಳನ್ನು ತಂದು ಕೊಟ್ಟು, ಇನ್ನೇನಾದರೂ ಬೇಕಾಗಿದ್ದರೆ ಅದನ್ನು ತಂದುಕೊಡುವೆನೆಂದು ಹೇಳಿದನು.

ನನಗೆ ಅಷ್ಟು ರೊಟ್ಟಿಯೂ ಆಗ ಕೊಟ್ಟ ಮೈರೇಯವೂ ಬೇಕು.

ಅವುಗಳನ್ನು ತಂದು ಕೊಡುತ್ತಲೆ, ಧರ್ಮದೇವನು ರೊಟ್ಟಿಯನ್ನು ತಿಂದು ಮೈರೇಯವನ್ನು ಕುಡಿಯುತ್ತಲಿದ್ದಾಗ ನೌಕಾಧಿಪನು ಜಾಲದುರ್ಗದ ಕಡೆ ಹೊಗೆಯಾಡುತ್ತಿದ್ದುದನ್ನು ನೋಡಿ ಓಹೋ! ಜಾಲದುರ್ಗದಲ್ಲಿ ಏನೋ ಅಪಾಯವು ಉಂಟಾದಂತೆ ತೋರುತ್ತದೆ ಎಂದು ಹೇಳುತ್ತ, ಧರ್ಮದೇವನ ಮುಖವನ್ನು ನೋಡುವುದರಲ್ಲಿಯೇ ಗುಂಡು ಹಾರಿದ ಶಬ್ದವೂ ಕೇಳಿಸಿತು. ಧರ್ಮದೇವನು ಮುಖದಲ್ಲಿ ಆವ ವಿಕಾರವನೂ ತೋರಿಸದೆ ಶಾಂತಭಾವದಿಂದ ಬಂದಿಯವರಾರೋ ಅಲ್ಲಿಂದ ಓಡಿಹೋಗಿರ

ಬೇಕು ; ಅದಕ್ಕಾಗಿಯೇ ಅವರು ಗುಂಡನ್ನು ಹಾರಿಸಿರಬೇಕು. ಹೀಗೆ ಆಗಾಗ ಆಗುವು ದುಂಟು ಎಂದು ಹೇಳಿ ಬೈರೇಯುಪನ್ನು ನಿಧಾನವಾಗಿ ಕುಡಿದನು.

ಹೀಗೆ ಶಾಂತನಾಗಿ ಕುಡಿದ ಧರ್ಮದೇವನನ್ನು ನೋಡಿ, ಅವನ ವಿಷಯದಲ್ಲಿ ನಾಯಕಾಧಿಪನಿಗೆ ಉಂಟಾಗಿದ್ದ ಅನುಮಾನವು ಬಲುಮಟ್ಟಿಗೆ ತೊಲಗಿತು ; ಒಂದುವೇಳೆ ಇವನು ಕಳ್ಳನಾಗಿದ್ದರೆ ತಾನೇ ಏನು ? ಬುದ್ಧಿವಂತನಾದ ಕಾರಣ ಇವನನ್ನು ನಮ್ಮ ಬಳಿ ಇಟ್ಟುಕೊಂಡರೆ ಬಹು ಅನುಕೂಲ ಎಂದು ನಾಯಕಾಧಿಪನು ಯೋಚಿಸಿದನು.

ಧರ್ಮದೇವನು ಒಂಧನಾಲಯದಲ್ಲಿ ಹದಿನಾಲ್ಕು ವರ್ಷಗಳಿದ್ದನು. ಅಲ್ಲಿಗೆ ಹೋದಾಗ ಅವನಿಗೆ ಹತ್ತೊಂಬತ್ತು ವಯಸ್ಸು ; ಈಗ ಮೂವತ್ತಮೂರು ಪ್ರಾಯವು. ಆ ದೀರ್ಘಕಾಲದಲ್ಲಿ ನನ್ನ ಸ್ನೇಹಿತನಾದನೋ ? ಅವನು ಬದುಕಿರಲಾರ. ಲಲಿತಾಂಗಿಯು ಏನಾದಳೋ ? ಬಂದು ಬೇಗ ನಾನು ಬರುವೆನೆಂದು ಅವಳು ಮದುವೆಯಾಗದೆ ಇರುವಳೋ, ಇಲ್ಲ ನಾನು ಸತ್ತುಹೋದೆನೆಂದು ವಿಷಯಲಂಪಟನನ್ನು ಮದುವೆಯಾಗಿರುವಳೋ ? ವಲ್ಲಭದೇವ, ದುರ್ಮತಿ, ವಿಷಯಲಂಪಟರುಗಳೇನಾಗಿರುವರೋ ? ಎಂದು ಅವನು ಯೋಚಿಸುತ್ತಲಿದ್ದನು.

ಪಾಠಕರೇ ! ಸಮುದ್ರವೇ ಜಾಲದುರ್ಗದ ಶ್ಮಶಾನ ; ಧರ್ಮದೇವನು ಈಗಿರುವ ಹಡಗೇ ಕಡಲಗಳ್ಳರ ಹಡಗು.

ಹದಿನೆಂಟನೆಯ ಅಧ್ಯಾಯ

ಮಲಯದ್ವೀಪ

ಕಡಲಗಳ್ಳರ ಹಡಗಿಗೆ ವೇಗವತಿ ಎಂದು ಹೆಸರು ; ಅದರ ಅಧಿಪನನ್ನು ಪ್ರಚಂಡನೆಂದು ಕರೆಯುತ್ತಲಿದ್ದರು. ತನ್ನ ವಿಚಾರವನ್ನು ತಿಳಿಯಬೇಕೆಂದು ನಾವಿಕರೆಲ್ಲರೂ ಬಲುಬಗೆಯಾಗಿ ಪ್ರಶ್ನೆಮಾಡಿದರೂ, ಧರ್ಮದೇವನು ತನ್ನ ಗುಟ್ಟನ್ನು ಎಳ್ಳಷ್ಟಾದರೂ ಬಿಡದೆ, ನಾನು ಮಾಲತೀ ದ್ವೀಪದವನು, ನಾವಿಕನ ಕೆಲಸವನ್ನೆ ಮಾಡುತ್ತಲಿದ್ದೆ ಎಂದು ಹೇಳುತಲಿದ್ದುದರಿಂದ ಇವರೆಲ್ಲರೂ ಇವನನ್ನು ಮಾಲತೀಯ ಎಂದು ಕರೆಯಲು ಪ್ರಾರಂಭಿಸಿದರು. ಧರ್ಮದೇವನು ವೇಗವತಿಯ ನಾವಿಕರ ಸಮಾಚಾರವನ್ನು ತಿಳಿದು

ವ್ಯಾಪಾರದ ರಹಸ್ಯವನ್ನು ಸ್ವಲ್ಪಕಾಲದಲ್ಲಿಯೇ ಚೆನ್ನಾಗಿ ಗ್ರಹಿಸಿ, ತನ್ನ ಬುದ್ಧಿ ಚಮತ್ಕಾರಗಳಿಂದ ಅವರನ್ನು ಮೆಚ್ಚಿಸಿ, ಅವರಿಗೆ ತನ್ನಲ್ಲಿ ಗೌರವವೂ ನಂಬುಗೆಯೂ ಉಂಟಾಗುವಂತೆ ಮಾಡಿಕೊಂಡನು. ಅದು ಮೊದಲು ಇವನನ್ನು ಬಿಟ್ಟು ಅವರು ಅವ ಆಲೋಚನೆಯನ್ನೂ ಮಾಡುತ್ತಿರಲಿಲ್ಲ.

ಹೋದ ಕಡೆಗಳಲ್ಲಿ ಜನರ ಮಾತು ತಿಳಿಯದೆ ಮಧ್ಯಸ್ಥರನ್ನಿಟ್ಟುಕೊಂಡು ವ್ಯಾಪಾರಗಳನ್ನು ನಡೆಸುವುದು ಅಪಾಯಕರವೆಂದು ತಿಳಿದು, ಪ್ರಚಂಡನು ಸುಮಾರಾಗಿ ನಾಲ್ಕೈದು ಭಾಷೆಗಳಲ್ಲಿ ಮಾತನಾಡುವಷ್ಟು ಕಲಿತಿದ್ದನು. ತೀರಪ್ರದೇಶಗಳಲ್ಲಿರುವ ಸುಂಕದ ಅಧಿಕಾರಿಗಳೆಲ್ಲರಿಗೂ ಇವನ ವ್ಯಾಪಾರ ಗೊತ್ತಿದ್ದಿತು; ಮುಖ್ಯವಾಗಿ ವೇಗವತಿಯು ವೇಗದಿಂದಲೂ ನಾವಿಕರ ಚಲುವಿಕೆಯಿಂದಲೂ ಇವನನ್ನು ಹಿಡಿಯಲು ಅವರಿಗೆ ಅಸಾಧ್ಯವಾಗಿತ್ತು.

ಧರ್ಮದೇವನನ್ನು ಹಡಗಿನಲ್ಲಿ ಸೇರಿಸಿಕೊಳ್ಳುವಾಗ, "ನನ್ನ ವ್ಯಾಪಾರದ ಗುಟ್ಟನ್ನೂ ಮತ್ತು ನಾನು ಹೋಗಿ ಬರುವ ಸ್ಥಳಗಳನ್ನೂ ತಿಳಿದು, ಇವನು ಎಲ್ಲಿ ಸಮಯ ನೋಡಿ ನನ್ನನ್ನು ಹಿಡಿದು ಸುಂಕದ ಅಧಿಕಾರಿಗಳಲ್ಲಿ ಒಪ್ಪಿಸಿಬಿಡುವನೋ" ಎಂದು ಪ್ರಚಂಡನು ಅನುಮಾನಪಟ್ಟಿದ್ದನು. ಆದರೆ ಜಾಲದುರ್ಗದಲ್ಲಿ ಹೊಡೆದ ಗುಂಡಿನ ಘೋಷವೂ ಆ ಕಾಲದಲ್ಲಿ ಧರ್ಮದೇವನಿದ್ದ ಸ್ಥಿತಿಯೂ, ಆ ಅನುಮಾನವನ್ನು ಹೋಗಲಾಡಿಸಿದುವು.

ಮಾರನೆ ಬೆಳಿಗ್ಗೆ ವೇಗವತಿಯು ಲೀಲಾವತೀಪಟ್ಟಣವನ್ನು ಸೇರಿದಾಗ ಪ್ರಚಂಡನು ಧರ್ಮದೇವನನ್ನು ಕರೆದು ಎಲೈ ಮಾಲತೀಯ, ಮುಂದೆ ನೀನ ಮಾಡಬೇಕೆಂದಿರುವೆ? ನನ್ನ ಬಳಿ ಇದ್ದರೆ ಎಲ್ಲರಿಗೂ ಕೊಡುವಂತೆ ನಿನಗೂ ಲಾಭವನ್ನು ಹಂಚಿಕೊಡುವೆನು; ನೀನು ನನ್ನಲ್ಲಿಯೇ ಇರು ಎಂದು ಹೇಳಲು, ಧರ್ಮದೇವನು ಸ್ವಲ್ಪ ಯೋಚಿಸಿ ಈ ಮುಗುವಳಿಯು ಸದ್ಯಕ್ಕೆ ಮೂರು ತಿಂಗಳ ವರೆಗೆ ನಡೆಯಲಿ; ಆ ಮೇಲೆ ನೋಡೋಣ ಎಂದನು. ಅದಕ್ಕೆ ಪ್ರಚಂಡನೊಪ್ಪಿ ಅವನ ವೆಚ್ಚಕ್ಕಾಗಿ ಒಂದು ತಿಂಗಳ ಹಣವನ್ನು ಮುಂಗಡವಾಗಿ ಕೊಟ್ಟನು.

ಲೀಲಾವತೀಪಟ್ಟಣವು ಧರ್ಮದೇವನಿಗೆ ತಿಳಿದಿದ್ದ ಊರೇ; ಜಯಲಕ್ಷ್ಮಿಯು ಪ್ರಯಾಣಗಳಲ್ಲಿ ಅನೇಕಾವೃತ್ತಿ ಇವನು ಅಲ್ಲಿ ಇಳಿಯುತ್ತಿದ್ದನು. ಈಗ ಆ ಊರಿನಲ್ಲಿ

ಇವನು ಒಬ್ಬ ಕ್ಷೌರಿಕನ ಅಂಗಡಿಗೆ ಹೋಗಿ ಕ್ಷೌರಮಾಡಿಸಿಕೊಂಡು ಮುಖವನ್ನು ಕನ್ನಡಿಯಲ್ಲಿ ನೋಡಿಕೊಳ್ಳಲು, ಸೆರೆಮನೆಯನ್ನು ಸೇರುವುದಕ್ಕೆ ಹಿಂದೆ ತನಗಿದ್ದ ವಿಶಾಲವಾದ ನೆತ್ತಿಯೂ, ನಗೆಮೊಗವೂ, ನೇತ್ರಕಾಂತಿಯೂ, ಮುಖದ ಕಳೆಯೂ ಹೋಗಿ ಅಂಡಾಕಾರವಾದ ಮುಖವೂ, ಮುಚ್ಚಿದ ಬಾಯೂ, ಗಂಟುಹುಬ್ಬುಗಳೂ, ವ್ಯಸನ ಸೂಚಕವಾದ ನೇತ್ರಕಾಂತಿಯೂ, ಬಹುಕಾಲ ಅಂಧಕೂಪದ ವಾಸದಿಂದುಂಟಾದ ಶ್ರೀಮಂತರ ಮೈಯ್ ಬಣ್ಣವೂ, ಯೋಗಾನಂದಪ್ರಸಾದಜನಿತಜ್ಞಾನಶಕ್ತಿಗಳಿಂದುಂಟಾದ ಮುಖದ ತೇಜಸ್ಸೂ ತೋರಿಬರುತ್ತಿದ್ದವು. ಇವನನ್ನು ನೋಡಿದವರೆಲ್ಲರೂ ಇವನು ದೃಢಸಂಕಲ್ಪದವನೆಂದೂ ಹಿಡಿದ ಕೆಲಸವನ್ನು ನೆರವೇರಿಸದೆ ಬಿಡನೆಂದೂ ತಿಳಿಯುವರು. ಆನಂದನ ಉಪದೇಶದಂತೆ ತನ್ನ ಶರೀರದಾರ್ಢ್ಯವನ್ನು ಕಾಪಿಟ್ಟುಕೊಳ್ಳಲು ಕಾಲಕಾಲಕ್ಕೆ ತಕ್ಕ ವ್ಯಾಯಾಮಮಾಡುತ್ತಲಿದ್ದುದರಿಂದ ಇವನಿಗೆ ದೇಹಶಕ್ತಿಯು ಚೆನ್ನಾಗಿದ್ದಿತು. ವಯಸ್ಸು ಹೆಚ್ಚಿದಂತೆ ಧೃತಿಯೂ ಬದಲಾಯಿಸಿ ಹೋಗಿದ್ದುದರಿಂದ ಇವನನ್ನು ಗುರ್ತಿಸಲು ಆರಿಗೂ ಸಾಧ್ಯವಾಗುತ್ತಿರಲಿಲ್ಲ. ಕೂಪದ ಕತ್ತಲೆಯಲ್ಲಿ ಪದಾರ್ಥಗಳನ್ನು ನೋಡಿದ್ದ ಅಭ್ಯಾಸಬಲದಿಂದ ಇವನಿಗೆ ಕತ್ತಲೆಯಲ್ಲಿಯೂ ಕಣ್ಣು ಚೆನ್ನಾಗಿ ಕಾಣುತಲಿದ್ದಿತು. ಒಟ್ಟಿನ್ನು, ತನ್ನನ್ನು ಗುರ್ತಿಸಲು ತನಗೇ ಅಸಾಧ್ಯವಾಗಿದ್ದಿತು ಎಂದರೆ, ಇತರರು ಗುರ್ತಿಸಲಾತರೆಂಬುದನ್ನು ಹೇಳಬೇಕೇ?

ಅನಂತರ, ಧರ್ಮದೇವನು ನಾಪಿಕರ ಉಡುಪುಗಳನ್ನು ಮಾರುವ ಅಂಗಡಿಗೆ ಹೋಗಿ ಅಲ್ಲಿ ತನಗೆ ಬೇಕಾದ ಎರಡು ಜತೆಯ ಉಡುಪುಗಳನ್ನು ಕೊಂಡು ಒಂದನ್ನು ತೊಟ್ಟು, ತನ್ನ ಉಪಯೋಗಕ್ಕಾಗಿ ಯಾಗಪ್ಪನು ಕೊಟ್ಟಿದ್ದ ಉಡುಪನ್ನು ಅವನಿಗೆ ಪಂತಿರುಗಿ ಕೊಟ್ಟನು. ಕ್ಷೌರಮಾಡಿಕೊಂಡು ನಾಪಿಕರ ಉಡುಪನ್ನು ತೊಟ್ಟು ಇದುರಿಗೆ ಬಂದ ಧರ್ಮದೇವನನ್ನು ನೋಡಿ, ಪ್ರಚಂಡನು ಇವನು ಮಾಲತೀಯನೋ ಅಲ್ಲವೋ ಎಂದು ಅನುಮಾನಪಟ್ಟು, ಅವನ ಬಾಯಿಯಿಂದ ತಾನೇ ಮಾಲತೀಯನೆಂದು ಬಾರಿಬಾರಿಗೂ ಹೇಳಿಸಿ ತನಗಿದ್ದ ಅನುಮಾನವನ್ನು ನಿವೃತ್ತಿಮಾಡಿಕೊಂಡನು.

ವೇಗವತಿಯು ಒಮ್ಮೆ ಮಲಯದ್ವೀಪಕ್ಕೆ ಸುಮಾರು ಅರ್ಧಮೈಲಿ ದೂರದಲ್ಲಿ ಹೋಗಬೇಕಾಗಿ ಬಂದಿತು. ಆಗ ಧರ್ಮದೇವನಿಗೆ ನೀರಿನಲ್ಲಿ ದುಮ್ಮಿಕ್ಕಿ ಆ ದ್ವೀಪವನ್ನು ಸೇರಬೇಕೆಂಬ ಆಲೋಚನೆಯು ಹುಟ್ಟಿತು; ಕೂಡಲೆ, "ನಾನು ನೀರಿಗೆ ದುಮ್ಮಿಕ್ಕಿ

ಈಸಿಕೊಂಡು ಹೋದರೆ ಸುಮಾರು ಅರ್ಧ ಘಂಟೆಯಲ್ಲಿ ದ್ವೀಪವನ್ನು ಸೇರಬಹುದು; ಅದಕ್ಕೆ ಅವ ಆಯುಧವೂ ಇಲ್ಲದೆ ಅಲ್ಲಿಗೆ ಹೋಗಿ ಏನಮಾಡಲಿ? ನಾನು ಹಾಗೆ ಹೊರಟರೆ ನಾವಿಕರು ಏನೆಂದಾರು"? ಎಂದು ಸುಮ್ಮನಿದ್ದನು.

ವೇಗವತಿಯ ನಾವಿಕರೆಲ್ಲರೂ ಶ್ರದ್ಧೆಯಿಂದಲೂ ಚಟುವಟಿಕೆಯಿಂದಲೂ ಕೆಲಸ ಮಾಡುತ್ತಲಿದ್ದ ಕಾರಣ ಪ್ರತಿಯೊಂದು ಪ್ರಯಾಣದಲ್ಲಿಯೂ ಒಬ್ಬೊಬ್ಬನ ಪಾಲಿಗೂ ಹೆಚ್ಚಾಗಿ ಹಣವು ಸಿಕ್ಕುತ್ತಲಿದ್ದಿತು. ಪ್ರಯಾಣ ಮುಗಿದ ಕೂಡಲೆ ಬಂದ ದುಡ್ಡನ್ನು ಪ್ರಚಂಡನು ಎಲ್ಲರಿಗೂ ಹಂಚಿಕೊಡುತ್ತಲಿದ್ದ ಕಾರಣ ಎಲ್ಲರೂ ಅವನು ಹೇಳಿದ ಕೆಲಸವನ್ನು ಅದರದಿಂದ ಮಾಡುತ್ತಲಿದ್ದರು. ಒಂದಾನೊಂದು ಸಲ ವೇಗವತಿಯ ನಾವಿಕರು ಸುಂಕದವರ ಸಂಗಡ ಜಗಳವನ್ನಾಡಿ ತಪ್ಪಿಸಿಕ್ಕೊಂಡು ಹೋದರು. ಆ ಜಗಳದಲ್ಲಿ ಸುಂಕದವರಿಬ್ಬರು ಸತ್ತರು; ಧರ್ಮದೇವನ ತೋಳಿಗೆ ತರಾಚಿಯ ಪೆಟ್ಟು ತಾಕಿ ಅವನು ಕೆಳಗೆ ಬಿದ್ದನು. ಸುಂಕದವರು ಸತ್ತದ್ದನ್ನೂ ತನಗೆ ಗಾಯವಾದುದನ್ನೂ ಕಂಡು ಧರ್ಮದೇವನು ಅತ್ಯಾನಂದಪಟ್ಟನ. ಇತರರ ದುಃಖವನ್ನು ನೋಡಿ ಸಹಿಸಲಾರದೆಯೂ, ತಾನು ಕಷ್ಟಾನುಭವಪಡಲಿರುವುದೆಯೂ ಇರುವ ಮನುಷ್ಯನಿಗೆ ಯಾವಾಗಲೂ ಕನಿಕರಹುಟ್ಟುವುದು; ಆದರೆ ಧರ್ಮದೇವನಿಗೆ ಮಾತ್ರ ಈಗ ಆರೀತಿ ಕನಿಕರ ಹುಟ್ಟಲಿಲ್ಲ. ಅವನ ಮನಸ್ಸು ಮೃದುವಾದುದಾದರೂ, ತಾನು ಹಿಂದೆ ಮಾಡಿದ್ದ ಪ್ರತಿಜ್ಞೆಯನ್ನು (ಎಂದರೆ, ತನಗೆ ಕಷ್ಟವನ್ನು ಕೊಟ್ಟವರಿಗೆ ಕಷ್ಟವನ್ನೂ, ಉಪಕಾರ ಮಾಡಿದವರಿಗೆ ಉಪಕಾರವನ್ನೂ ಮಾಡಬೇಕೆಂಬ ಶಪಥವನ್ನು) ನೆರವೇರಿಸಲು ಮನಸ್ಸು ಹಿಡಿಯುತ್ತಿಯುವುದೆಂಬ ಭೀತಿಯಿಂದ, ಅವನು ಇಂಥ ಅಪಾಯಗಳುಂಟಾದಾಗ ಮನಸ್ಸನ್ನು ಗಟ್ಟಿಮಾಡಿಕೊಳ್ಳಲು ಅನುಕೂಲವೆಂದು ಸಂತೋಷಪಡುತ್ತಲಿದ್ದನು.

ಧರ್ಮದೇವನು ಕೆಳಗೆ ಬಿದ್ದುದನ್ನು ನೋಡಿ ತಲ್ಲಣಿಸಿ ರಾಘಪ್ಪನು ಒಡನೆಯೇ ಅವನನ್ನು ಎತ್ತಿ ಕುಳ್ಳಿರಿಸಿ, ತುಂಬ ಪೆಟ್ಟು ಬಿದ್ದಿತೇ ಎಂದು ಆದರದಿಂದ ವಿಚಾರಿಸಿದನು. ಕಾರಾಗೃಹವನ್ನು ಸೇರುವುದಕ್ಕೆ ಮೊದಲು, ಲೋಕವೆಲ್ಲವೂ ಧರ್ಮದಿಂ ನಡೆಯುವುದೆಂದು ಧರ್ಮದೇವನು ತಿಳಿದಿದ್ದನು; ಅಲ್ಲಿಂದ ಈಚೆಗೆ ಬಂದಾಗ, ಲೋಕವೆಲ್ಲವೂ ಅಧರ್ಮ ಪರಿಪೂರ್ಣವಾದುದೆಂದು ತಿಳಿದುಕೊಂಡನು. ಆದ ಪ್ರಯೋಜನವನ್ನಾಪೇಕ್ಷೆಯಿಲ್ಲದೆ ತನ್ನ ಸುತ್ತಮುತ್ತಿಗೆಗಳಿಗೆ ಸಹಾಯವಾಗುತ್ತಲಿದ್ದ ರಾಘಪ್ಪನ ಗುಣವನ್ನು ನೋಡಿ

ಧರ್ಮದೇವನು ಆಶ್ಚರ್ಯಪಟ್ಟು, ತಾನು ಹಿಂದೆ ಮಾಡಿಕೊಂಡಿದ್ದ ಎರಡು ಅಭಿಪ್ರಾಯಗಳೂ ತಪ್ಪೆಂದುಕೊಂಡು, ಯಾಗಸ್ಪನ ಕ್ರದ್ಧಾಭಕ್ತಿಗೆ ಮೆಚ್ಚಿ ಅವನಲ್ಲಿ ವಿಶೇಷವಾದ ಪ್ರೀತಿಯನ್ನಿಟ್ಟು, ಹಡಗ ನಡೆಸುವ ವಿದ್ಯೆಯನ್ನು ಅನುಕೂಲವಾದಾಗಲೆಲ್ಲಾ ಅವನಿಗೆ ಕಲಿಸುತ್ತ ಬಂದನು. "ಇದರಿಂದ ನನಗೇನು ಪ್ರಯೋಜನ" ಎಂದು ಯಾಗಸ್ಪನು ಕೇಳಲು "ನಿನ್ನ ಅದೃಷ್ಟವನ್ನು ಪರೀಕ್ಷಿಸಬಲ್ಲನು; ನೀನು ಏತಕ್ಕೆ ಒಂದು ದಿನ ನೌಕಾಧಿಪತಿಯಾಗಬಾರದು. ಒಂದು ವೇಳೆ ನೌಕಾಧಿಪನಾದರೆ ಈ ವಿದ್ಯವು ನಿನಗೆ ಅತ್ಯವಶ್ಯಕವು" ಎಂದನು.

ವೇಗವತಿಯು ಇದುವರೆಗೆ ಮಾಡಿದ ಪ್ರಯಾಣಗಳಲ್ಲಿ ಸುಮಾರು ಎರಡುವರೆ ತಿಂಗಳುಗಳಾದುವು. ದೊಡ್ಡ ಹಡಗುಗಳನ್ನು ನಡೆಸುವುದು ಧರ್ಮದೇವನಿಗೆ ಚೆನ್ನಾಗಿ ಗೊತ್ತಿದ್ದಿತು; ವೇಗವತಿಯನ್ನು ಸೇರಿದ ಮೇಲೆ ಸಣ್ಣ ಹಡಗನ್ನೂ ಸಮುದ್ರತೀರದಲ್ಲಿ ನಡೆಸುವ ಶಕ್ತಿಯುಂಟಾಗಿ ಕಡಲಗಳ್ಳರ ಮತ್ತು ಕಳ್ಳವ್ಯಾಪಾರಿಗಳ ಪರಿಚಯವೂ, ಸ್ನೇಹವೂ, ಸಂಕೇತಭಾಷೆಯೂ ಚೆನ್ನಾಗಿ ತಿಳಿಯಿತು. ಇವರ ಶಕ್ತಿಯುಕ್ತಿಗಳನ್ನೂ, ಸಾಹಸಗಳನ್ನೂ, ಐಕಮತ್ಯವನ್ನೂ ನೋಡಿ ಧರ್ಮದೇವನು ಇಂತಹ ಜನರನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವವನು ಯತ್ನಪಟ್ಟರೆ ಅವನ ಕೆಲಸವನ್ನು ತಾನೇ ಮಾಡಲರಿಯನು ಎಂದು ಯೋಚನೆಮಾಡುತ್ತಲಿದ್ದನು.

ಧರ್ಮದೇವನು ಜಾವಲಿಪಟ್ಟಿಣದಲ್ಲಿದ್ದಾಗ ಸುಮಾರು ಇಪ್ಪತ್ತು ಇಪ್ಪತ್ತೈದು ಸಾವಿ ಮಲಯದ್ವೀಪವನ್ನು ದಾಟಿ ಹೋಗುತ್ತ ಬರುತ್ತಲಿದ್ದರೂ, ಒಂದು ಸಾರಿಯಾದರೂ ಆ ದ್ವೀಪದಲ್ಲಿಳಿದಿರಲಿಲ್ಲ. ಈಗ ಅಲ್ಲಿಗೆ ಹೋಗಬೇಕೆಂಬ ಕುತೂಹಲವು ವಿದ್ದರೂ ಅವಕಾಶ ಸಿಕ್ಕಲಿಲ್ಲ. ಈಗ ವೇಗವತಿಯನ್ನು ಮಲಯದ್ವೀಪದ ಬಳಿ ನಿಲ್ಲಿಸುವಂತೆ ಹೇಳಿ, ತಾನು ಒಬ್ಬನೇ ಹೋದರೆ, ನಾವಿಕರಿಗೆ ಅನುಮಾನವು ಹುಟ್ಟಿ ಇವನೇನ ಮಾಡುವನೋ ನೋಡೋಣವೆಂದು ಬೆನ್ನ ಹತ್ತಿ ಬಂದರೂ ಬರಬಹುದು; ಸಂಗಡ ಆರನ್ನಾದರೂ ಕರೆದುಕೊಂಡು ಹೋದರೆ ಅವನಿಗೆ ತನ್ನ ಗುಟ್ಟು ತಿಳಿಯುವುದು; ಅರಿಗೂ ಅನುಮಾನವಾಗದಂತೆ ಹೇಗೆ ಆ ನಿಕ್ಷೇಪವನ್ನು ಕಂಡುಹಿಡಿಯುವುದು ಎಂದು ಎಷ್ಟು ಯೋಚಿಸಿದರೂ ಬಗೆಹರಿಯದೆ, ಪ್ರಚಂಡನ ಸಂಗಡ ತಾನು ಮಾಡಿಕೊಂಡಿದ್ದ ಶುಗ್ಗುವಳಿ ಮುಗಿದಬಳಿಕ ತನ್ನ ಪಾಲಿಗೆ ಬಂದ ಹಣದಲ್ಲಿ ಬಂದು ಸಣ್ಣ ದೋಣಿ

ಯನ್ನು ಕ್ರಯಕ್ಕೆ ತೆಗೆದು ಅದರಲ್ಲಿ ಮಲಯದ್ವೀಪಕ್ಕೆ ಹೋಗಿ ನಿಕ್ಷೇಪವನ್ನು ಹುಡುಕ ಬೇಕೆಂದು ನಿಶ್ಚಯಿಸಿಕೊಂಡನು. ಅಷ್ಟರಲ್ಲಿಯೇ ದೈವಾಧೀನದಿಂದ ಒಂದು ಅನು ಕೂಲಕಾಲವು ಬಂದು ಒದಗಿತು.

ಒಂದು ದಿನ ಪ್ರಚಂಡನು ನಾವಿಕರೆಲ್ಲರನ್ನೂ ಕರೆದು ಕಾಶ್ಮೀರದ ಶಾಲುಗಳು, ರತ್ನಗಂಬಳಿಗಳು ಮುಂತಾದ ಅಮೌಲ್ಯವಾದ ಪದಾರ್ಥಗಳನ್ನು ಇಲ್ಲಿಂದ ಅಮರ ದೇಶಕ್ಕೂ, ರೇಷ್ಮೆ ಬಟ್ಟೆಗಳನ್ನು ಅಲ್ಲಿಂದ ಲೀಲಾವತಿಗೂ ಸಾಗಿಸುವುದೊಂದು ಕೆಲಸ ವಿದೆ. ಇದನ್ನು ಎರಡು ಪಟ್ಟಣಗಳಿಗೂ ನಡುವೆ ನಿರ್ಜನವಾಗಿರುವುದೊಂದು ಎಡ ತಿಟ್ಟನ್ನು ಗೊತ್ತುಮಾಡಿಕೊಂಡು, ಅಮರದೇಶದಿಂದ ತರುವ ಪದಾರ್ಥಗಳನ್ನೂ, ನಾವು ತೆಗೆದುಕೊಂಡು ಹೋಗುವ ಪದಾರ್ಥಗಳನ್ನೂ ಅಲ್ಲಿ ಇಳಿಸಿ, ನಮ್ಮ ನಮ್ಮ ಸರಕುಗ ಳನ್ನು ಬದಲಾಯಿಸಿಕೊಳ್ಳಬಹುದು. ಇದಕ್ಕೆಲ್ಲಾ ಅನುಕೂಲವಾಗಿರುವ ಸ್ಥಳವು ಮಲಯದ್ವೀಪವೆಂದು ನನಗೆ ತೋರುತ್ತದೆ. ನಿಮ್ಮ ಅಭಿಪ್ರಾಯವೇನು ಎನ್ನಲು ಅದೇ ಸರಿಯೆಂದು ಎಲ್ಲರೂ ಒಪ್ಪಿದರು. ಮಾರನೇ ದಿನ ರಾತ್ರೆ ವೇಗವತಿಯು ಮಲಯ ದ್ವೀಪಕ್ಕೆ ಪ್ರಯಾಣಮಾಡಿತು.

ಅನುಕೂಲಕಾಲ ತಾನಾಗಿಯೇ ಒದಗಿದುದಕ್ಕಾಗಿ ಧರ್ಮದೇವನು ದೇವರನ್ನು ಸ್ತುತಿಸಿ ಎಷ್ಟು ಹೊತ್ತಿಗೆ ದ್ವೀಪವನ್ನು ಸೇರುವೆನೆಂದಿದ್ದನು. ಆ ರಾತ್ರೆ ಅವನಿಗೆ ನಿದ್ದೆಯೇ ಬರಲಿಲ್ಲ. ಕಣ್ಣು ಮುಚ್ಚಿದರೆ ನಾಗೇಂದ್ರನ ಮರಣಶಾಸನವು ಆತನ ಇದಿರಿಗೆ ಬಂದು ನಿಲ್ಲುತ್ತಲಿದ್ದಿತು. ನಿಕ್ಷೇಪವು ಸಿಕ್ಕಿದರೆ ಇಷ್ಟರಿಗೆ ಅನುಕೂಲಗಳನ್ನೂ ಶತ್ರು ಗಳಿಗೆ ಕೆಡುಕುಗಳನ್ನೂ ಮಾಡಬಹುದು ಎಂದು ಯೋಚಿಸುತ್ತಲಿದ್ದನು. ಕೊನೆಗೆ ನಿದ್ದೆ ಬಂದ ಮೇಲೆ, ಗುಹೆಯಲ್ಲಿ ತಾನು ಇಳಿದುಹೋಗಿ, ಮೇಲಿನಿಂದ ನೀರಿನ ತೊಟ್ಟು ಗಳಂತೆ ಜೀಳುತ್ತಲಿರುವ ಅಣಿಮುತ್ತುಗಳನ್ನೂ, ಅಲ್ಲೆಲ್ಲಾ ಎರಚಿರುವ ರತ್ನಗಳನ್ನೂ ಆರಿಸಿ, ತನ್ನ ಅಂಗಿಯ ಜೀಲದಲ್ಲಿ ತುಂಬಿಕೊಂಡು, ಹೊರಗೆ ಬಂದು ಬೆಳಕಿನಲ್ಲಿ ನೋಡು ವಲ್ಲಿ ಅವುಗಳೆಲ್ಲಾ ಕಲ್ಲಾದಂತೆಯೂ, ಪುನಃ ಗುಹೆಯನ್ನಿಳಿಯಲು ಪ್ರಯತ್ನಪಟ್ಟಾಗ ಗುಹೆ, ಮುತ್ತು, ರತ್ನಗಳೆಲ್ಲವೂ ಮಾಯವಾದಂತೆಯೂ ಅವನಿಗೆ ಸ್ಪಷ್ಟವಾಯಿತು. ಬಡನೆಯೇ ಎಚ್ಚರವಾಗಿ ಅಯ್ಯೋ, ಧನವು ಸಿಕ್ಕದೇ ಹೋಯಿತಲ್ಲಾ ಎಂದು ಸಂಕಟ

ಪಟ್ಟುಕೊಂಡು ಸ್ವಪ್ನವು ನಿಜವೆಂಬ ಭ್ರಮೆಯಿಂದ ಬೆಳಗಿನವರೆಗೂ ನಿದ್ದೆಬಾರದೆ ಜ್ವರ ಬಂದಂತೆ ಇದ್ದನು.

ಬೆಳಗಾಗುತಲೆ ಧರ್ಮದೇವನ ಧನಜ್ವರವು ನಿಂತರೂ ಅವನ ಆಲೋಚನೆಯು ಬಗೆ ಹರಿಯಲಿಲ್ಲ. ಸಾಧಾರಣವಾಗಿ ಎಲ್ಲರ ಸಂಗಡಲೂ ಎಂದಿಗಲೂ ನಗುತ್ತ ಮಾತ ನಾಡುತ್ತಲಿದ್ದವನು ಯೋಚನಾಪರನಾಗಿರುವುದನ್ನು ನಾವಿಕರು ನೋಡಿದರೆ ಏನ ತಿಳಿದುಕೊಳ್ಳುವರೋ ಎಂಬ ಭೀತಿಯಿಂದ ಆ ದಿನ ಸಾಯಂಕಾಲ ತಾನೊಬ್ಬನೇ ಹಡ ಗನ್ನು ನಡೆಸುವ ಏರ್ಪಾಡನ್ನು ಮಾಡಿಕ್ಕೊಂಡರೆ ಏಕಾಂತದಲ್ಲಿ ಆಲೋಚಿಸಬಹು ದೆಂದು ಯೋಚಿಸಿ, ಪ್ರಚಂಡನನ್ನು ಕೇಳಲು ಅವನು ಹಾಗೆಯೇ ಆಗಲಿ ಎಂದು ಒಪ್ಪಿ ಕೊಂಡನು. ಪಾರಕಮಹಾಶಯರೇ, ಶಾಂತವಾಗಿರುವ ಸಮುದ್ರದ ಮಧ್ಯೆ ಅಲ್ಲಾ ಡದೆ ಹೋಗುತ್ತಲಿರುವ ಹಡಗಿನಲ್ಲಿ ನಾವಿಕರೆಲ್ಲರೂ ಗಾಢನಿದ್ದೆಮಾಡುತ್ತಲಿದ್ದು ಹಡ ಗನ್ನು ನಡೆಸುತ್ತಲಿರುವನೊಬ್ಬನೇ ಅದರಲ್ಲಿ ಕುಳಿತು ಇರುವ ಆಸನ್ನಿವೇಶಕ್ಕಿಂತ ಏಕಾಂತ ವಾದ ಸನ್ನಿವೇಶವು ಎಲ್ಲಿಯಾದರೂ ದೊರಕುವುದೋ? ಆದುದರಿಂದಲೇ ಧರ್ಮ ದೇವನು ನೌಕಾಧಿಪನ ಅಪ್ಪಣೆಯನ್ನು ಕೇಳಿದನು.

ಇವನು ಆಲೋಚನೆಮಾಡುತ್ತಿರುವಾಗ ಮಧ್ಯರಾತ್ರಿಯಾಯಿತು. ಅಷ್ಟು ಹೊತ್ತಿಗೆ ಬೆಳದಿಂಗಳು ಬಂದು ವೇಗವತಿಯು ಮಲಯದ್ವೀಪವನ್ನು ಸೇರಿತು. ಅಮರ ದೇಶದಿಂದ ಬರತಕ್ಕ ಹಡಗು ಇನ್ನೂ ಬಂದಿರಲಿಲ್ಲವಾದುದರಿಂದ, ತಾವು ತಂದ ಸಾಮಾ ನುಗಳನ್ನು ಈಗಲೇ ಇಳಿಸುವುದಿಲ್ಲವೆಂದು ತಿಳಿದು, ಧರ್ಮದೇವನು ದೋಣಿಯನ್ನು ಹಾಕಿಕೊಂಡು ಯಾಗಪ್ಪನ ಜತೆಯಲ್ಲಿ ದ್ವೀಪವನ್ನು ನೋಡಿ, ದಾಯ ಸರಿಯಾಗಿ ಬೀಳು ವುದೋ ಇಲ್ಲವೋ, ಬೀಳದಿದ್ದರೆ ಸರ್ವಸ್ವವೂ ಹೋಗುವುದಲ್ಲಾ ಎಂದು ಯೋಚನೆ ಯಿಂದ ದಾಳವನ್ನೇ ನೋಡುತ್ತಲಿರುವ ಜೂಜುಗಾರನಂತೆ ಅವಸ್ಥೆಪಟ್ಟನು. ಆಗ ಆರಾದರೂ ಅವನ ಮುಖವನ್ನು ನೋಡಿದ್ದರೆ ಅವನ ಮನೋವಿಕಾರಗಳಿಗೆ ಕಾರಣಗ ಳನ್ನು ಕಂಡು ಹಿಡಿಯಬಹುದಾಗಿದ್ದಿತು. ಆದರೆ ಯಾಗಪ್ಪನು, ಬೆಳದಿಂಗಳಲ್ಲಿ ಕಾಣುತ್ತ ಲಿದ್ದ ಆ ದ್ವೀಪದ ಸೊಗಸನ್ನು ನೋಡಿ ಆನಂದ ಪಡುತ್ತಲಿದ್ದ ಕಾರಣ, ಧರ್ಮದೇವನ ಮುಖವನ್ನೇ ನೋಡಲಿಲ್ಲ.

ವೇಗವತಿಯು ನಾವಿಕರು ಈ ದ್ವೀಪದಲ್ಲಿ ಆಗಾಗ ಇಳಿಯುತ್ತಲಿದ್ದ ಕಾರಣ ಅವ

ದಿಗೆ ಇದರ ಪರೀಕ್ಷೆಯುವು ವಿಶೇಷವಾಗಿದ್ದಿತು. ಧರ್ಮದೇವನು ಇದನ್ನು ಬಲ್ಲನಾದುದರಿಂದ ಅವನು ಯಾಗಪ್ಪನನ್ನು ನೋಡಿ ನಾವು ಈ ರಾತ್ರಿ ಎಲ್ಲಿ ಮಲಗೋಣ ಎಂದನು.

ಹುಡಗಿನಲ್ಲಿ. "ಗುಹೆಯಲ್ಲಿದ್ದರೆ ಒಳ್ಳೆಯದಲ್ಲವೆ"?

ಅವ ಗುಹೆ? "ಈ ದ್ವೀಪದಲ್ಲಿರುವ ಗುಹೆ."

'ಈ ದ್ವೀಪದಲ್ಲಿ ಗುಹೆಯಿರುವುದು ನನಗೆ ತಿಳಿಯದು ಎಂದು ಯಾಗಪ್ಪನು ಹೇಳುತಲೆ, ಧರ್ಮದೇವನು ಉತ್ಸಾಹಗೆಟ್ಟು, ಬೈದಿನವಿ, ಮುಂದೆ ಆವ ಪಾತಕನ್ನೂ ಅಡಲಿಯದೆ ಸುಮ್ಮನಿದ್ದು, ಸ್ವಲ್ಪಕಾಲ ಯೋಚನೆಮಾಡಿ, ಬಹುಶಃ ಗುಹೆಯು ಬಾಯಿಯು ಮುಚ್ಚಿಹೋಗಿರಬೇಕು, ಆದುದರಿಂದಲೇ ಅದು ಇರುವುದು ಅರಿಗೂ ತಿಳಿಯದು; ಅದನ್ನು ರಾತ್ರಿಸೇಳೆಯಲ್ಲಿ ಹುಡುಕುವುದು ಅನಾವ್ಯ ಎಂದು ಆತುರವನ್ನು ನುಂಗಿ ಸಮಾಧಾನ ಮಾಡಿಕೊಂಡನು.

ಇಷ್ಟರಲ್ಲಿಯೇ ಬೆಳಕಾಗಿ ಅಪರಿದೇಕದ ಹಡಗು ಕಾಣಿಸಿತು. ಒಡನೆಯೇ ಇವರಿಬ್ಬರೂ ಹಡಗನ್ನು ಸೇರಿ, ತಮ್ಮ ಸಾಮಾನುಗಳನ್ನು ಕೆಳಗೆ ಇಳಿಸಿ, ಆ ಹಡಗಿನ ನಾವಿಕರುಗಳನ್ನು ತಮ್ಮ ಹಡಗಿಗೆ ಕಳುಹಿಕೊಂಡರು. ಅಷ್ಟರಲ್ಲಿಯೇ ಊಟದ ಹೊತ್ತಾದುದರಿಂದ ಊಟ ತೀರಿಸಿಕೊಂಡು ಮುಂದೆ ಪ್ರಯಾಣ ಮಾಡುವುದು ಒಳ್ಳೆಯದೆಂದು ವೇಗವತಿಯು ನಾವಿಕರು ಅಡಿಗೆಗೆ ಹೂಡಿದರು.

ಇದೇ ಸರಿಯಾದ ಸಮಯವೆಂದು ಧರ್ಮದೇವನು ಕೈಯಲ್ಲಿ ಒಂದು ತುಪಾಕಿಯನ್ನು ಹಿಡಿದು ಅಡಿಗೆಯಾಗುವುದರೊಳಗಾಗಿ ನಾನು ಬೇಟೆಯಾಡಿಕೊಂಡು ಬರುತ್ತೇನೆ ಎಂದು ಹೇಳಿ ಹೊರಟನು. ಜೊತೆಯೆಂದು ಎಷ್ಟು ಹೇಳಿದರೂ ಕೇಳದೆ, ಯಾಗಪ್ಪನೂ ಅವನ ಹಿಂದೆಯೇ ಹೋದನು; ಇನ್ನೂ ಬತ್ತಿ ಹೇಳಿದರೆ ಎಲ್ಲಿ ಅವನ ಮೇಲಿನ ಸ್ನೇಹ ಅಸಮಾಧಾನವಾಗುವುದೋ ಎಂದು ಧರ್ಮದೇವನು ಸುಮ್ಮನಾದನು. ಸ್ವಲ್ಪ ದೂರ ಹೋಗುವುದರಲ್ಲಿಯೇ, ಇಬರಿದಿರಿಗೆ ಒಂದು ಕಾಡುಕುರಿಯು ಓಡಿತು; ಧರ್ಮದೇವನು ಅದನ್ನು ಹೊಡೆದು ಯಾಗಪ್ಪನ ಕೈಯಲ್ಲಿ ಕೊಟ್ಟು ನಾನು ಬರುವುದರೊಳಗಾಗಿ ಇದರ ಚಾಪಡನ್ನು ಊಟಕ್ಕೆ ಸಿದ್ಧಪಡಿಸಿರು. ಒಂದು ತುಪಾಕಿಯನ್ನು ಹಾರಿಸಿದರೆ ಆ ಸದ್ದನ್ನು ಕೇಳಿ ನಾನು ಹಿಂತಿರುಗಿ ಬರುವೆನು ಎಂದು ಹೇಳಿ ಕಳುಹಿಸಿದನು. ಯಾಗಪ್ಪನು ಊಟಕ್ಕೆ ಅಣಿಮಾಡಲು ಹೊರಟುಗಿದನು.

ಅವನು ಅತ್ತ ತಿರುಗಲು, ಇತ್ತ ಧರ್ಮದೇವನು ಬಂಡೆಗಳನ್ನು ಏರುತ್ತ ಏರುತ್ತ ಸುಮಾರು ಒಂದು ಸಾವಿರ ಅಡಿಗಳ ಉನ್ನತದಲ್ಲಿದ್ದ ಒಂದು ಕೋಡುಗಲ್ಲನ್ನು ಹತ್ತಿ ನೋಡಲು, ಅವನಿಗೆ ಆ ದ್ವೀಪದ ಪಶ್ಚಿಮಭಾಗದಲ್ಲಿ ಹಡಗುಗಳು ಬಂದು ನಿಲ್ಲಲು ಏಕಾಂತವಾಗಿರುವ ಒಂದು ದೊಡ್ಡ ಕೊಲ್ಲಿಯು ಕಂಡಿತು. ಮತ್ತೊಂದು ಕಡೆ ತಿರುಗಲು ಅಡಿಗೆಯನ್ನು ಮಾಡಿಕೊಂಡು ಆಡುತ್ತ ಪಾಡುತ್ತ ಇರುವ ನಾವಿಕರನ್ನು ನೋಡಿ, "ಇವರೊಬ್ಬೊಬ್ಬರೂ ಅವಾಯಕರವಾದ ಈ ಕಳ್ಳವ್ಯಾಪಾರವನ್ನು ಮಾಡಿ ವಿಶೇಷ ದುಡ್ಡನ್ನು ಗಳಿಸಿ ಅವರುದಾದರೂ ಒಂದು ತೀರಪ್ರದೇಶವನ್ನು ಸೇರಿದರೆ ಮಿಕ ಮಿಠಾಯಿ ವೆಚ್ಚಮಾಡಿ, ಹೇರಳವಾಗಿ ಕುಡಿದು ಕೂಡಿದ್ದ ಹಣವನ್ನೆಲ್ಲಾ ಕಳೆದುಕೊಂಡು ಪುನಃ ಈ ನಿಹೀನವ್ಯಾಪಾರಕ್ಕೆ ಇಳಿಯುವರಲ್ಲಾ" ಎಂದು ವ್ಯಾಕುಲಪಟ್ಟು, ಒಡನೆಯೇ "ಈಗ ನಾನು ಅವರ ವ್ಯಾಪಾರವನ್ನು ಹೀಯಾಳಿಸುತ್ತೇನೆ; ಒಂದು ವೇಳೆಯಲ್ಲಿ ನಿಕ್ಷೇಪವು ದೊರೆಯದಿದ್ದರೆ ಮರಳಿ ಅದೇ ವ್ಯಾಪಾರಕ್ಕೆ ಇಳಿಯಬೇಕಾಗುವುದು" ಎಂದು ಯೋಚಿಸಿದನು. ಆದರೆ ಯೋಗಾನಂದನ ಮಾತು ಸುಳ್ಳಾಗಲಾರದೆಂದು ಅವನಿಗೆ ನಂಬುಗೆ ಇದ್ದಿತು; ಒಂದು ವೇಳೆ ಅದು ಸುಳ್ಳಾದರೂ ಹೀಗೆ ಬೀಪನಮಾಡುವುದಕ್ಕಿಂತ ತಿರುಪೆತ್ತಿ ಜೀವಿಸುವುದು ಉತ್ತಮವೆಂದು ಧರ್ಮದೇವನು ನಿಶ್ಚಯಿಸಿದನು.

ಮೂರು ತಿಂಗಳ ಹಿಂದೆ, ಧರ್ಮದೇವನು ಕಾರಾಗೃಹದಿಂದ ಬಿಡುಗಡೆಯಾದರೆ ಸಾಕೆಂದಿದ್ದನು; ಈಗ ಬಿಡುಗಡೆಯಾದುದು ಸಾಲದೆ ಧನದ ಆಸೆಯು ಹುಟ್ಟಿತು. ಅದು ಅವನ ತಪ್ಪಲ್ಲ; ದೇವರು ಮನುಷ್ಯನ ಶಕ್ತಿಯುಕ್ತಿಗಳಿಗೆ ಪರಿಮಿತಿಯಿಟ್ಟನೇ ಹೊರತು ಅವನ ಆಸೆಯೆಂಬುದಕ್ಕೆ ಪರಿಮಿತಿಯನ್ನೇ ಇಡಲಿಲ್ಲ.

ಶಿಖರದಿಂದ ಧರ್ಮದೇವನು ಕೆಳಗೆ ಇಳಿದು ಪಶ್ಚಿಮಭಾಗದ ಕೊಲ್ಲಿಯನ್ನು ಸೇರಿ ಪೂರ್ವಕ್ಕೆ ಪರಿಶೋಧಿಸುತ್ತ ಹೊರಡಲು, ಮನುಷ್ಯಕಲ್ಪಿತವಾದ ಕೆಲವು ಗುರುತುಗಳು ಸಮುದ್ರತೀರದಿಂದ ಸುಮಾರು ಐವತ್ತು ಗಜಗಳ ದೂರದಲ್ಲಿದ್ದ ಒಂದು ಗುಂಡುಕಲ್ಲಿನ ವರೆಗೂ ಕಂಡುಬಂದುವು; ಮುಂದೆ ಏನೂ ಕಾಣಲಿಲ್ಲ. ಅವುಗಳನ್ನು ನೋಡಿ ಇವೇ ಸೋದರಳಿಯ ಮಹೇಂದ್ರನಿಗಾಗಿ ನಾಗೇಂದ್ರನು ಮಾಡಿಟ್ಟ ಗರ್ತುಗಳು ಎಂದು ಊಹಿಸಿ, ಅವುಗಳು ಮಲಿನವಾಗಿದ್ದುದನ್ನು ಕಂಡು, ಆರಾದರೂ ಬಂದು ಈ ಕುರುಹುಗಳ ಆಧಾರದ ಮೇಲೆ ಹೂತಿದ್ದ ಧನವನ್ನು ಅಪಹರಿಸಿರಬಹುದೋ ಎಂಬ ಅನುಮಾನವು

ಹುಟ್ಟಿ, ಮಾನಸಿಕವಾದ ಸುಖದುಃಖಗಳೇ ಕಾಲಕ್ರಮೇಣ ಅಳಿಸಿಹೋಗುವುವು; ಹಾಗಿರುವಲ್ಲಿ ಭೌತಿಕವಾದ ಈ ಗುರ್ತುಗಳೂ ಕಾಲಕ್ರಮದಿಂದ ಮಲಿನವಾಗುವುದೇ ನಾಶ್ಚರ್ಯ? ಇದರಿಂದ ಹೇಗೆ ಇಲ್ಲಿ ಧನವಿಲ್ಲವೆಂದು ಹೇಳಲಾದೀತು ಎಂದು ಸಮಾಧಾನ ಮಾಡಿಕೊಂಡನು.

ಇಷ್ಟರಲ್ಲಿಯೇ ನಿಗುದಿಮಾಡಿಕೊಂಡಿದ್ದ ಹಾಗೆ ತುವಾಕಿಯು ಸದ್ದು ಕೇಳಲು, ಧರ್ಮದೇವನು ಒಡನೆಯೇ ಬಂಡೆಗಳನ್ನು ಹತ್ತಿ ನಾವಿಕರೆಲ್ಲರೂ ಕಾಣುವಂತೆಯೇ ಆತುರದೊಡನೆ ಓಡಿಬರುತ್ತಲಿರಲು, ಕಾಲು ಜಾರಿ ಕೆಳಕ್ಕೆ ಉರುಳಿಬಿದ್ದನು. ಅದನ್ನು ನೋಡಿ ಎಲ್ಲರೂ ಒಂದೇ ಸಲ ಓಡಿಬಂದರು; ಆದರೆ ಯಾಗಪ್ಪನು ಎಲ್ಲರಿಗಿಂತ ಮುಂದೆ ಬಂದು, ಧರ್ಮದೇವನು ಬೋರಲುಬಿದ್ದಿದ್ದುದನ್ನೂ, ಮೂಗಿನಲ್ಲಿ ರಕ್ತಸುರಿಯುತ್ತಲಿದ್ದುದನ್ನೂ, ಮೈಮೇಲೆ ಪ್ರಜ್ಞೆಯಿಲ್ಲದಿರುವುದನ್ನೂ ನೋಡಿ, ಅವನ ಬಾಯಿಗೆ ಸ್ವಲ್ಪ ಮೈರೇಯವನ್ನು ಬಿಟ್ಟನು. ಕೂಡಲೇ ಧರ್ಮದೇವನು ಕಣ್ಣುಬಿಟ್ಟು ನೋಡಿ ನನ್ನ ಮೈಕೈಯೆಲ್ಲವೂ ಜಜ್ಜಿಹೋಗಿರುವುವು; ಮೊಣಕಾಲುಕೀಲುಗಳಲ್ಲಿ ಬಹಳ ನೋವು; ತಲೆಯು ತಿರುಗುತ್ತಲಿದೆ. ಈಗ ಊಟದ ಹೊತ್ತಾಗಿರುವುದರಿಂದ, ನೀವೆಲ್ಲರೂ ಹೋಗಿ ಊಟಮಾಡಿ ಬನ್ನಿರಿ ಎಂದು ಹೇಳಿದನು.

ಅವನ ಮಾತಿಗೆ ನಾವಿಕರಾರೂ ಒಪ್ಪದೆ ಹೇಗಾದರೂ ಮೆಲ್ಲಗೆ ಎತ್ತಿಕ್ಕೊಂಡು ಹೋಗಿ ಹಡಗಿನಲ್ಲಿ ಮಲಗಿಸಬೇಕೆಂದು ಅವನನ್ನು ಎತ್ತಲು ಪ್ರಯತ್ನಪಟ್ಟರು. ತನ್ನ ಮೈಯ್ಯ ಮೇಲೆ ಅವರು ಕೈಹಾಕಿದ ಒಡನೆ, ಅಯ್ಯಯ್ಯೋ, ಎಂದು ಗಟ್ಟಿಯಾಗಿ ಕಿರುಚಿಕ್ಕೊಂಡು ನೀವೇನಾದರೂ ನನ್ನನ್ನು ಎತ್ತಿದರೆ ಪ್ರಾಣವೇ ಹೋಗುವುದು ಎಂದು ಹೇಳಿದನು. ಹಸಿವಿನಿಂದ ಒಳಲಿದ್ದರೂ, ನೋವಿನಿಂದ ನರಳುತ್ತಿರುವ ತನ್ನನ್ನು ಬಿಟ್ಟು ಹೊರಡಲಾರದೆ ಮುಂದೆ ಏನ ಮಾಡಲಿಕ್ಕೂ ತೋಚದೆ ಸುಮ್ಮನೆ ನಿಂತಿರುವವರನ್ನು ನೋಡಿ, ಧರ್ಮದೇವನು ನೀವೆಲ್ಲರೂ ಊಟತೀರಿಸಿಕ್ಕೊಂಡು ಬನ್ನಿರಿ; ನನಗೆ ಈಗ ಊಟಬೇಕಾಗಿಲ್ಲ; ನೆಮ್ಮದಿಯಾಗಿ ಸ್ವಲ್ಪ ಬಿದ್ದಿದ್ದರೆ ಸಾಕು ಎಂದು ಹೇಳಿ ಅವರೆಲ್ಲರನ್ನೂ ಕಳುಹಿಸಿಕೊಟ್ಟನು. ಹಸಿವನ್ನು ತಡೆಯಲಾರದೆ, ಬಿಟ್ಟರೆ ಸಾಕೆಂದಿದ್ದ ನಾವಿಕರು ಮತ್ತೊಂದು ಸಾರಿ ಹೇಳಿಸಿಕೊಳ್ಳದೆ ಹೊರಟರು.

ಸುಮಾರು ಹನ್ನೊಂದು ಘಂಟೆಯ ಹೊತ್ತಿಗೆ ನಾವಿಕರು ಊಟತೀರಿಸಿಕೊಂಡು ಪುನಃ ಧರ್ಮದೇವನ ಎಡೆಗೆ ಬಂದರು. ಆ ವೇಳೆಗೆ ಅವನು ಗಟ್ಟಿಯಾಗಿ ನರಳುತ್ತಲಿದ್ದುದನ್ನು ನೋಡಿ, ಏತಕ್ಕೆಂದು ಕೇಳಲು, ಅವನು ನೋವು ಹೆಚ್ಚಾಯಿತೆಂದು ಹೇಳಿದನು. ಆಗ ಪ್ರಚಂಡನು ಪ್ರಯಾಣವು ನಿಂತುಹೋದರೆ ಕೆಲಸವು ಕಟ್ಟುಹೋಗುವುದೆಂದು ಯೋಚಿಸಿ, ಕಂಬಳಿದಂಡಿಗೆಯನ್ನು ಮಾಡಿ ಅವನನ್ನು ಹಡಗಿಗೆ ಸಾಗಿಸಿರಿ ಎಂದು ಅಪ್ಪಣೆಮಾಡಿದನು. ಅದನ್ನು ಕೇಳಿ ಧರ್ಮದೇವನು ನನಗೆ ಹಿಂದೆ ತೋಚಿದ್ದ ನೋವಲ್ಲದೆ ಎದೆಯ ಬಲಪಾರ್ಶ್ವದಲ್ಲಿ ದಬ್ಬಳದಿಂದ ಚುಚ್ಚುವಂತೆ ಯಾತನೆಯಾಗುತ್ತಲಿದೆ; ನನ್ನನ್ನು ಮುಟ್ಟಿದರೆ ಬೇರೆ ನಾನು ಉಳಿಯುವುದಿಲ್ಲ ಎಂದು ಹೇಳಲು, ಒಬ್ಬ ನಾವಿಕನು ಬಂದು ನೋಡಿ, ಇವನ ಪಕ್ಕೆಲುಬು ಮುರಿದಿರುವಂತೆ ಇದೆ ಎಂದನು; ಮತ್ತೊಬ್ಬನು ಇವನನ್ನು ಇಲ್ಲಿ ಬಿಟ್ಟುಹೋಗುವುದು ಧರ್ಮವಲ್ಲ; ಹೇಗಾದರೂ ಉಪಾಯಮಾಡಿ ಹಡಗಿಗೆ ಸಾಗಿಸಬೇಕು ಎಂದನು.

ನನ್ನನ್ನು ಉಳಿಸಿಕೊಳ್ಳುವುದಕ್ಕಾಗಿ ನೀವು ಮಾಡುವ ಕೆಲಸಗಳು ನನ್ನನ್ನು ಈಗಲೇ ಸಾಯಿಸುವುವು; ಆದುದರಿಂದ ನನಗೆ ಸ್ವಲ್ಪ ಆಹಾರವನ್ನು ಇಟ್ಟು ನೀವು ಹೋಗಿಬಿಡಿರಿ ಎಂದು ಧರ್ಮದೇವನು ಪ್ರಾರ್ಥಿಸಲು, ಪ್ರಚಂಡನು "ಇವನನ್ನು ಬಿಟ್ಟು ಹೊರಡಲು ನನ್ನ ಮನಸ್ಸೊಡಂಬಡದು; ಸಾಯಂಕಾಲದ ವರೆಗೆ ಇಲ್ಲಿಯೇ ಇದ್ದು ಅನುಕೂಲವಾದರೆ ಇವನನ್ನು ಕರೆದುಕೊಂಡು ಹೋಗೋಣ" ಎಂದನು. ಆವ ಸಂದರ್ಭದಲ್ಲಿಯೂ ತಾನು ಮಾಡಿರುವ ಕಟ್ಟಳೆಗೆ ವಿರೋಧವಾಗಿ ಪ್ರಯಾಣವನ್ನೇ ಆಗಲಿ, ಇತರ ಕೆಲಸವನ್ನೇ ಆಗಲಿ, ನಿಲ್ಲಿಸದ ನೌಕಾಧಿಪನು ಈ ರೀತಿ ಆಡಿದುದನ್ನು ಕೇಳಿ, ನಾವಿಕರೆಲ್ಲರೂ ಪರಮಾಶ್ಚರ್ಯಪಟ್ಟರು. ಬಳಿಕ ಯಾಗಪ್ಪನು ನೌಕಾಧಿಪನನ್ನು ನೋಡಿ ನೀವೆಲ್ಲರೂ ಪ್ರಯಾಣಮಾಡಿರಿ, ನಾನಿಲ್ಲಿದ್ದು ಮಾಲತೀಯನನ್ನು ನೋಡಿಕೊಳ್ಳುವೆನು ಎನಲು, ಅದಕ್ಕೆ ಧರ್ಮದೇವನು ನನ್ನ ಅವಿವೇಕಕ್ಕಾಗಿ ನೀನು ನಿನಗೆ ಬರುವ ಲಾಭವನ್ನು ಬಿಟ್ಟುಬಿಡುವುದು ನನಗಿಷ್ಟವಿಲ್ಲ ಎಂದು ಹೇಳಿದನು.

ಆಗ ಪ್ರಚಂಡನು ಧರ್ಮದೇವನನ್ನು ನೋಡಿ ಏಲೈ ಮಾಲತೀಯ, ನಿನ್ನನ್ನು ಬಿಟ್ಟುಹೋಗಲು ನನಗಿಷ್ಟವಿಲ್ಲ; ಪ್ರಯಾಣವನ್ನು ಹೆಚ್ಚು ಸಾವಕಾಶಮಾಡಲು ಆಗುವುದಿಲ್ಲ; ಈಗ ಏನ ಮಾಡಲಿ ಹೇಳು, ನನಗೇನೂ ತೋಚುವುದಿಲ್ಲ, ಎಂದು ಹೇಳಿದು

ದಕ್ಕೆ, ಧರ್ಮದೇವನು ನೀವೆಲ್ಲರೂ ಹೋಗಿಬನ್ನಿರಿ. ನನಗೆ ಸ್ವಲ್ಪ ಆಹಾರವನ್ನೂ, ಕಾಡುಮೃಗಗಳ ಹಾವಳಿಯನ್ನು ತಪ್ಪಿಸಿಕೊಳ್ಳಲು ಒಂದು ತುಪಾಕಿ, ಅದಕ್ಕೆ ಬೇಕಾದ ಮದ್ದು, ಗುಂಡೂ, ನೀವು ಬರುವುದು ಸಾವಕಾಶವಾಗುವುದಾದರೆ ಒಂದು ಗುಡಿಸಲು ಹಾಕಿಕೊಳ್ಳಲು ಪಿಕಾಶಿ ಮಚ್ಚು ಕತ್ತಿ ಇವುಗಳನ್ನೂ ಕೊಟ್ಟುಹೋದರೆ ಒಂದೆರಡು ದಿನಗಳು ಇಲ್ಲಿದ್ದು ಆಯಾಸತೀರಿಸಿಕೊಂಡು, ಇಲ್ಲಿರುವ ಮೂಲಿಕೆಗಳಿಂದ ನೋವನ್ನು ಆರಿಸಿಕೊಂಡು, ನೀವು ಹಿಂತಿರುಗಿಬರುವುದರೊಳಗಾಗಿ ನಿಮ್ಮೊಡನೆ ಹೊರಡುವುದಕ್ಕೆ ಸಿದ್ಧವಾಗಿರುವೆನು. ಎಂದನು,

ಧರ್ಮದೇವನ ಅವಸ್ಥೆಯನ್ನೂ ಮುಷ್ಕರವನ್ನೂ ನೋಡಿ, ಪ್ರಚಂಡನು ನಿನ್ನ ಇಷ್ಟನಿದ್ದಂತಾಗಲಿ ಎಂದು ಅವನು ಕೇಳಿದ ಪದಾರ್ಥಗಳನ್ನು ತರಿಸಿ ಕೊಟ್ಟು, ಕೆಲವು ಉಪಚಾರೋಕ್ತಿಗಳನ್ನು ಹೇಳಿ ಮುಂದೆ ಪ್ರಯಾಣಮಾಡಿದನು. ಈ ನಾವಿಕರ ಗುಣಗಳನ್ನೂ ಅವರಾಡಿದ ಮಾತುಗಳನ್ನೂ ನೆನಸಿಕೊಂಡು ಈ ಕಳ್ಳರಲ್ಲಿ ಕೂಡ ಇಷ್ಟು ಸ್ನೇಹವೂ ಶ್ರದ್ಧಾಭಕ್ತಿಗಳೂ ಇರುವುವೇ ಎಂದು ಧರ್ಮದೇವನು ಆಶ್ಚರ್ಯಪಟ್ಟನು.

ಹತ್ತೊಂಬತ್ತನೆಯ ಅಧ್ಯಾಯ

ಅಜ್ಞಾತನಾಮಕನು

ವೇಗವತಿಯು ಮಲಯದ್ವೀಪವನ್ನು ಬಿಟ್ಟು ಲೀಲಾವತೀ ಮಾರ್ಗವನ್ನು ಹಿಡಿದು ಹೊರಟ ಸ್ವಲ್ಪ ಹೊತ್ತಿನ ಮೇಲೆ, ಧರ್ಮದೇವನು ಎದ್ದು ಬಂದು ಉನ್ನತವಾದ ಬಂಡೆಯ ಮರೆಯಲ್ಲಿ ನಿಂತು, ಹಡಗು ಕಣ್ಣಿಗೆ ಕಾಣುವ ಪರೆಗೆ ಅಲ್ಲಿಯೇ ಇದ್ದು, ಅನಂತರ ಕಯ್ಯಲ್ಲಿ ಪಿಕಾಶಿಯನ್ನೂ, ಮಚ್ಚು ಕತ್ತಿಯನ್ನೂ, ತುಪಾಕಿ ಮದ್ದು ಗುಂಡುಗಳನ್ನೂ ತೆಗೆದುಕೊಂಡು ತಾನು ಬೆಳಗ್ಗೆ ನೋಡಿದ್ದ ಗುಂಡುಕಲ್ಲಿನ ಬಳಿಗೆ ಬಿಡಿದನು. ಆಗ ಸುಮಾರು ಮಧ್ಯಾಹ್ನವಾಗಿ ಬಿಸಿಲು ಜೋರಾಗಿದ್ದಿತು; ಅದನ್ನು ತಡೆಯಲಾರದೆ ಪಕ್ಷಿಗಳು ಸೊಕ್ಕಿ ಮರದ ಮೇಲೆ ನೆರಳಿನಲ್ಲಿ ನಿಶ್ಶಬ್ದವಾಗಿ ಕುಳಿತಿದ್ದುವು; ಹಾದಿಯಲ್ಲಿ ಹಲ್ಲಿ ಹರಣಿ ಮುಂತಾದವುಗಳು ಇದ್ದ ಸ್ಥಳವನ್ನು ಬಿಟ್ಟು ಪೊದರುಗಳನ್ನಾಶ್ರಯಿಸುತ್ತಲಿದುವು;

ಮಿಡಿತೆಗಳು ಹಾರಿ ಗರಿಕೆಗಳ ಸಂದುಗಳನ್ನು ಸೇರಿ ಚಿವ್ ಚಿವ್ ಎಂದು ದೀನಸ್ವರದಿಂದ ಕೂಗುತ್ತಲಿದ್ದುವು; ಕಾಡು ಕುರಿಗಳು ಧರ್ಮದೇವನು ಬರುವುದನ್ನು ಕಂಡು ಬಂಡೆಯಿಂದ ಬಂಡೆಗೆ ನೆಗೆದು ಕೊನೆಗೆ ಮರದ ನೆರಳಲ್ಲಿ ತಂಪಾಗಿರುವ ಬುಗ್ಗೆಗಳ ಸಮೀಪದಲ್ಲಿ ಮೇಯುತ್ತಲಿದ್ದುವು. ಆ ದ್ವೀಪವು ಹೀಗೆ ಜೀವಭರಿತವಾಗಿದ್ದರೂ ಧರ್ಮದೇವನು ಏಕಾಂಗಿಯಾಗಿದ್ದಂತೆ ಭಾವಿಸಿಕೊಂಡನು.

ಈ ಮಧ್ಯಾಹ್ನದ ಬೆಳಕು ಧರ್ಮದೇವನಿಗೆ ಭಯಂಕರವಾಗಿದ್ದಿತು. ಆ ಹಡಗಿನವರಾರಾದರೂ ತನ್ನ ಕೃತ್ರಿಮವನ್ನು ತಿಳಿದು, ತಾನು ಮಾಡುವ ಕಾರ್ಯಗಳನ್ನು ಮರೆಯಲ್ಲಿ ನಿಂತು ಎಲ್ಲಿ ನೋಡುವರೋ ಎಂಬ ಗಾಬರಿಯೇ ಇವನ ಭಯವು. ಇದಕ್ಕಾಗಿಯೇ ಇವನು ಆಗಾಗ ಉನ್ನತವಾಗಿರುವ ಬಂಡೆಯನ್ನು ಹತ್ತಿ ಸುತ್ತು ಮುತ್ತಲೂ ನೋಡಿ ಆರೂ ಇಲ್ಲವೆಂದು ಸಮಾಧಾನವನ್ನು ಮಾಡಿಕೊಂಡು ಕೆಳಗೆ ಇಳಿದು ಬರುತ್ತಲಿದ್ದನು.

ವಿವೇಕವಿಲ್ಲದೆ ಆತುರಪಟ್ಟು ಮಾಡುವ ಕೆಲಸ ನಿಷ್ಫಲವಾಗುವುದೆಂದು ತಿಳಿದು ಧರ್ಮದೇವನು ಕೊಲ್ಲಿಯಿಂದ ಗುಂಡುಕಲ್ಲಿನವರೆಗೆ ನೆಲವನ್ನೂ ಅಲ್ಲಿ ಮಾಡಿದ್ದ ಗುರ್ತುಗಳನ್ನೂ, ಎರಡು ಮೂರಾವೃತ್ತಿ ಚೆನ್ನಾಗಿ ನೋಡಿ, ನಾಗೇಂದ್ರನು ತನ್ನ ಹಡಗನ್ನು ಈ ಕೊಲ್ಲಿಯಲ್ಲಿ ಬಿಟ್ಟು, ತಂದಿದ್ದ ಧನವನ್ನು ಗುಹೆಯಲ್ಲಿ ನಿಕ್ಷೇಪಿಸಿ, ಅದರ ಬಾಯಿಗೆ ಈ ಗುಂಡುಕಲ್ಲನ್ನು ಇಟ್ಟಿರಬೇಕು ಎಂದು ಊಹಿಸಿದನು. ಆದರೆ ಇಷ್ಟು ದೊಡ್ಡ ಕಲ್ಲನ್ನು ಅವನೊಬ್ಬನೇ ಹೇಗೆ ಎತ್ತಿ ಇಟ್ಟಿದ್ದಾನು? ಬಹುಶಃ ಎತ್ತಿ ಇಡುವುದಕ್ಕಿಂತ ಮೇಲಿನಿಂದ ಉರುಳಿಸಿರಬಹುದು ಎಂದು ಯೋಚಿಸಿ, ಇಲ್ಲಿಯವರೆಗಿದ್ದ ಸೂಚನೆಗಳು ಇದರಮೇಲೆ ಕಾಣದೆ ಇರುವುದರಿಂದ ಇದರ ಕೆಳಗೆ ಗುಹೆಯ ಬಾಯಿ ಇರಬೇಕು ಎಂದು ನಿಶ್ಚಯಿಸಿ, ಕಲ್ಲಿನ ಸುತ್ತಲೂ ನೆಲವನ್ನು ಅಗೆದು ನೋಡಲು ಒಳಗಡೆ ಒಂದು ಗಾರೆಯ ಗೋಡೆಯು ಕಾಣಿಸಿತು. ಅದರಲ್ಲಿ ಒಂದು ಕಡೆ ಸುಮಾರು ತೋಳು ಹಿಡಿಯುವಷ್ಟು ಒಂದು ರಂಧ್ರವನ್ನಾಡಿ, ಮರದ ಸನ್ನೆಯಿಂದ ನೂಕಿದರೆ ಗುಂಡುಕಲ್ಲು ಸುಲಭವಾಗಿ ಉರುಳಿ ಹೋಗುವುದೆಂದು ಯೋಚಿಸಿ ಬಲವಾದ ಒಂದು ಕಂಬಿಯನ್ನು ಕತ್ತರಿಸಿತಂದನು.

ಗಾರೆಯ ಗೋಡೆಯು ತೂತಿನಿಂದ ಸನ್ನೆಯನ್ನು ಹಾಕಿ ಎಷ್ಟು ಮಾಟಿದರೂ ಗುಂಡು ಕಲ್ಲು ಅಲ್ಲಾಡಲೇ ಇಲ್ಲ. ಅದರ ಸುತ್ತಲೂ ಜಡಿದಿದ್ದ ಜಲ್ಲಿಕಲ್ಲುಗಳನ್ನು ಬಿಡಿಸಿದ ಹೊರತು ಗುಂಡು ಅಲ್ಲಾಡದೆಂದು ಅವುಗಳನ್ನು ಕೀಳಲು ನೋಡಿ ಸಾಧ್ಯವಿಲ್ಲವೆಂದು ತಿಳಿದು ಮೂರು ಕಡೆ ಸಣ್ಣ ತೂತುಗಳನ್ನು ಮಾಡಿ ಮದ್ದುತುಂಬಿ ಸುರಂಗವನ್ನು ಹಾರಿಸಿದನು. ಕೂಡಲೆ ಗುಂಡುಕಲ್ಲು ಅಲ್ಲಾಡಿ ಜಲ್ಲಿಕಲ್ಲುಗಳು ಸಡಲಿದುವು. ಒಡನೆಯೇ ಗಾರೆಗೋಡೆಯು ತೂತಿನಿಂದ ಅನೇಕಕ್ರಿಮಿಕೀಟಗಳೂ, ಹರಣಿಗಳೂ, ಸಣ್ಣ ಸಣ್ಣ ಹಾವುಗಳೂ ಹೊರಗೆ ಹೊರಟವು; ಕೊನೆಗೆ ಒಂದು ಘಟಸರ್ಪವು ಧನವನ್ನು ಕಾಯುತ್ತಲಿದ್ದು ಧನಾಧ್ಯಕ್ಷನು ಬಂದ ಮೇಲೆ ತನಗಿನ್ನೇನು ಕೆಲಸವೆಂದು ಹೊರಡುವುದೋ ಎಂಬಂತೆ ಹೊರಗೆ ನಲಿಯುತ್ತ ಬಂದು ಸಮುದ್ರತೀರದಲ್ಲಿದ್ದ ಒಂದು ದೊಡ್ಡ ಬೊದೆಯನ್ನು ಸೇರಿಕೊಂಡಿತು.

ಧರ್ಮದೇವನು ಪುನಃ ಸನ್ನೆಮರದಿಂದ ಗುಂಡುಕಲ್ಲನ್ನು ಮೀಟಲು ಅದು ಉರುಳಿ ಸಮುದ್ರದ ಕೊಲ್ಲಿಗೆ ಹೋಗಿ ಬಿದ್ದಿತು. ಆ ಕಲ್ಲಿನ ಅಡಿಯಲ್ಲಿದ್ದ ಮಣ್ಣನ್ನು ತೆಗೆಯುತ್ತಲೆ ಕಬ್ಬಿಣದ ಬಳೆ ಹಾಕಿದ ಒಂದು ಚೌಕವಾದ ಸಣ್ಣ ಚಪ್ಪಡಿಯು ಕಂಡಿತು; ಅದನ್ನು ಮೀಟ ನೋಡಲು, ಕೆಳಗೆ ಇಳಿಯಲು ಅನುಕೂಲವಾಗಿ ಗಾರೆಯಿಂದ ಕಟ್ಟಿದ ಮೆಟ್ಟಲುಗಳು ಕಂಡವು. ಪ್ರಥಮಪ್ರಯತ್ನದಲ್ಲಿ ಹಿಡಿದ ಕೆಲಸ ಇಷ್ಟುಮಟ್ಟಿಗೆ ಕೈಗೂಡಿತೆಂಬ ಸಂತೋಷವು ಧರ್ಮದೇವನಿಗಿದ್ದರೂ, ಈ ಮೆಟ್ಟಲುಗಳನ್ನು ನೋಡುತಲೆ ಅವನಿಗೆ ಕೈಕಾಲು ಸಡುಗಿ, ಮೈ ಬೆವರಿ, ಮನಸ್ಸು ತಲ್ಲಣಿಸಿತು. ಇವನಲ್ಲದೆ ಮತ್ತಾರಾಗಿದ್ದರೂ ಆತುರದಿಂದ ಒಳಗೆ ಇಳಿಯುತ್ತಲಿದ್ದರು; ಆದರೆ ಇವನು ವಿವೇಕಶಾಲಿಯಾದುದರಿಂದ ಅಲ್ಲಿಯೇ ನಿಂತು "ಎಲೈ ಧರ್ಮದೇವ, ನೀನು ಹೆದರಬೇಡ; ಧನವು ಸಿಕ್ಕುವುದೆಂಬ ಆಸೆಯನ್ನು ಬಿಡು; ನಾಗೇಂದ್ರನು ಇಲ್ಲಿ ಧನವನ್ನು ಇಡಲಿಲ್ಲ; ಯೋಗಾನಂದನು ಹೇಳಿದ ನಿಕ್ಷೇಪವು ಅವನ ಕನಸಿನ ಗಂಟು; ಒಂದು ವೇಳೆ ನಾಗೇಂದ್ರನು ಧನವಿಲ್ಲಿಟ್ಟಿದ್ದುದು ವಾಸ್ತವವಾಗಿದ್ದರೂ, ದುಷ್ಟಬುದ್ಧಿಯ ಕಡೆಯವರು ನಾನು ಈಗ ಬಂದಿರುವಂತೆ ಬಂದು ಧನವನ್ನು ಅಪಹರಿಸದೆ ಇದ್ದಿರಲಾರರು. ಹೇಗಾದರೂ ಧನವಿಲ್ಲವೆಂದು ಮನಸ್ಸನ್ನು ಗಟ್ಟಿಮಾಡಿಕೊಂಡು ಒಳಗೆ ಇಳಿ. ಸಿಕ್ಕಿದರೆ ನಿನ್ನ ಪುಣ್ಯವೆಂದು ತಿಳಿ; ಇಲ್ಲವಾದರೆ ಸಂಕಟಪಡಬೇಡ" ಎಂದು ತಾನೇ ಹೇಳಿಕೊಂಡನು.

ಈ ರೀತಿ ಧೈರ್ಯಮಾಡಿಕೊಂಡು ಒಳಗೆ ಇಳಿಯುವುದರೊಳಗಾಗಿಯೇ ಧರ್ಮದೇವನಿಗೆ ಮತ್ತೊಂದಾಲೋಚನೆಯು ಹುಟ್ಟಿತು. ನಾಗೇಂದ್ರನು ಇಲ್ಲಿ ಧನವನ್ನಿಡದಿದ್ದರೂ, ಅಥವಾ ಇಟ್ಟಿದ್ದ ಧನವನ್ನು ದುಷ್ಟಬುದ್ಧಿಯ ಕಡೆಯವರು ದೋಚಿಕ್ಕೊಂಡು ಹೋಗಿದ್ದರೂ ಈ ಗುಹೆಗೆ ಇಷ್ಟು ಬಂದೋಬಸ್ತನ್ನು ಮಾಡಬೇಕಾದ ಅವಶ್ಯಕತೆಯು ಇರುತ್ತಿರಲಿಲ್ಲ; ಆದುದರಿಂದ ಧನವು ಬಹುಶಃ ಇಲ್ಲಿ ಇರಬಹುದು ಎಂದು ಊಹಿಸಿ, ಧನವು ಸಿಕ್ಕಿದರೆ ಸಂತೋಷ, ಸಿಕ್ಕದಿದ್ದರೆ ದುಃಖವಿಲ್ಲ ಎಂದು ನಿರ್ಧರಮಾಡಿಕೊಂಡು ಒಳಗೆ ಇಳಿದನು.

ಗುಹೆಯು ಒಳಗೆ ಅಷ್ಟುಕತ್ತಲೆಯಾಗಿರಲಿಲ್ಲ; ಅಲ್ಲಲ್ಲಿ ಬಂಡೆಗಳ ಸಂದುಗಳಿಂದ ಬೆಳಕೂ ಗಾಳಿಯೂ ಒಳಕ್ಕೆ ಬರುತ್ತಲಿದ್ದುವು. ಧರ್ಮದೇವನು ಕೆಳಕ್ಕೆ ಇಳಿದು ಗುಹೆಯ ಮಧ್ಯೆ ನಿಂತು ಸುತ್ತುಮುತ್ತಲೂ ನೋಡಿ ನಾನಾ ಬಣ್ಣದ ಕಲ್ಲುಗಳನ್ನು ಕಂಡು ಆಶ್ಚರ್ಯ! ಇವೇ ನಾಗೇಂದ್ರನ ರತ್ನಗಳು, ಇವುಗಳನ್ನೇ ಯೋಗಾನಂದನು ರತ್ನಗಳೆಂದು ಭಾವಿಸಿದ್ದುದು; ಅವನ ಭ್ರಾಂತಿಯೇ ನನಗೂ ಉಂಟಾಯಿತು ಎಂದು ವ್ಯಸನಪಟ್ಟು, ನಾಗೇಂದ್ರನ ಮರಣಶಾಸನವನ್ನು ಬಾಯಲ್ಲಿ ಹೇಳಿಕೊಂಡು ನಿಂತನು ಆಗ ಆತುರ ಗಾರನಿಗೆ ಬುದ್ಧಿ ಶೂನ್ಯವು ಎಂಬ ಗಾದೆಯು ಅವನಿಗೆ ಜ್ಞಾಪಕಕ್ಕೆ ಬಂದಿತು. ಆಹಾ! ನಾಗೇಂದ್ರನ ಮರಣಶಾಸನದ ಪ್ರಕಾರ ಇದರೊಳಗೆ ಮತ್ತೊಂದು ಸಣ್ಣ ಗುಹೆ ಇರಬೇಕು. ಇದರ ಬಾಗಿಲು ವಾಯವ್ಯಮೂಲೆಯಲ್ಲಿರಬೇಕು ಎಂದು ಜ್ಞಾಪಿಸಿಕೊಂಡು ಆ ಮೂಲೆಯ ಗೋಡೆಯನ್ನು ಪಿಕಾಶಿಯಿಂದ ಕುಟ್ಟಲು ತೊಳ್ಳಸದ್ದಾಯಿತು. ತನ್ನ ಶ್ರಮವು ವ್ಯರ್ಥವಾಗಬಾರದೆಂದು ಆ ಗೋಡೆಯ ಮಿಕ್ಕಾದ ಭಾಗಗಳನ್ನು ಕುಟ್ಟಿನೋಡಿ ಅಲ್ಲೆಲ್ಲಿಯೂ ಈ ತೊಳ್ಳಸದ್ದನ್ನು ಕಾಣದೆ ತಾನು ಮೊದಲು ನೋಡಿದ ಸ್ಥಳದಲ್ಲಿ ಅಗೆಯಲು ಪ್ರಾರಂಭಿಸಿದನು. ಕಲ್ಲಿನಂತೆ ಬಣ್ಣಹಾಕಿದ್ದ ಗೋಡೆಯು ಗಾರೆಯು ಹೆಪ್ಪು ಹೆಪ್ಪಾಗಿ ಕೆಳಗೆ ಬಿದ್ದು, ಒಳಗೆ ಒಂದು ಕಲ್ಲಿನ ದ್ವಾರವೂ ಅದಕ್ಕೆ ಕೀಲುಗಳು ಹಾಕಿ ಮುಚ್ಚಿದ್ದ ಒಂದು ಕಲ್ಲಿನ ಕದವೂ ಕಂಡುಬಂದುವು. ಈ ಕಲ್ಲಿನ ಕದಕ್ಕೆ ಒಂದು ಕಬ್ಬಿಣದ ಒಳೆಯು ಇದ್ದಿತು; ಅದನ್ನು ಹಿಡಿದು ಕದವನ್ನು ಎಳೆಯಲು ಬಾಗಿಲು ತೆರೆದು ಹೋಗಿ ಒಳಗಿನ ಗುಹೆಯು ಕಂಡಿತು.

ಧನನಿರಬಹುದೆಂಬುದಕ್ಕೆ ದೃಷ್ಟಾಂತಗಳು ಹೆಚ್ಚಾದಷ್ಟೂ ಧರ್ಮದೇವನಿಗೆ ಆಧೈರ್ಯವು ಹೆಚ್ಚುತಲಿದ್ದಿತು. ಒಳಗಿನ ಗುಹೆಯಿರುವುದೆಂದು ತಿಳಿದ ಕೂಡಲೆ, ಅವನ

ಕಯ್ಯಲ್ಲಿದ್ದ ಪಿಕಾಸಿಯು ಕೆಳಗೆ ಬಿದ್ದು, ತಲೆ ಬಿರಿಯುವಂತೆ ಆಗಿ, ಎರಡು ಕೈಗಳಿಂದ ತಲೆಯನ್ನು ಒತ್ತಿಹಿಡಿದು, ಮೇಲಾರಾದರೂ ಇದ್ದು ತನ್ನ ಕೆಲಸವನ್ನು ನೋಡುವರೋ ಎಂಬ ವ್ಯಾಜದಿಂದ ಹೊರಕ್ಕೆ ಬಂದು ಶಿಖರದ ಬಂಡೆಯನ್ನು ಮೆಲ್ಲಮೆಲ್ಲಗೆ ಹತ್ತಿ ಸುತ್ತಲೂ ನೋಡಿ, ಆಲ್ಲಿಂದಿಳಿದು ಗುಹೆಯನ್ನು ಪುನಃ ಪ್ರವೇಶಿಸಿದನು. ಇವನು ಸಣ್ಣ ಗುಹೆಯು ಬಾಗಿಲನ್ನು ಸೇರುವುದರೊಳಗಾಗಿ ಆ ಗುಹೆಯಲ್ಲಿದ್ದ ಕೆಟ್ಟ ಗಾಳಿಯೆಲ್ಲಾ ಹೋಗಿದ್ದಿತು. ಒಳಗೆ ಪ್ರವೇಶಮಾಡಿ ನೋಡಲು ಬಂದು ಕಡೆ ಕಲ್ಲ ಸಂದಿನಿಂದ ಸ್ವಲ್ಪ ಬೆಳಕು ಬರುತ್ತಲಿದ್ದರೂ ಒಟ್ಟು ಕತ್ತಲಾಗಿದ್ದಿತು; ಅವನಿಗೆ ಕತ್ತಲೆಯಲ್ಲಿ ಚೆನ್ನಾಗಿ ಕಣ್ಣು ಕಾಣಿಸುತ್ತಲಿದ್ದುದರಿಂದ ಎಲ್ಲಾ ಕಡೆಯನ್ನೂ ನಿಧಾನವಾಗಿ ನೋಡಿ ಈ ಗುಹೆಯೂ ಮೊದಲಿನ ಗುಹೆಯಂತೆ ಬರಿದಾಗಿದ್ದುದನು ಗ್ರಹಿಸಿದನು.

ಒಡನೆಯೇ ಅವನು ನೈಋತ್ಯಮೂಲೆಯಲ್ಲಿ ಧನವು ನಿಕ್ಷೇಪಿಸಿರುವುದೆಂದು ಜ್ಞಾಪಿಸಿಕೊಂಡು ಪಿಕಾಸಿಯಿಂದ ಆ ಮೂಲೆಯ ನೆಲವನ್ನು ಸುಮಾರು ಒಂದಡಿ ಆಳ ಅಗೆದನು. ಆವ ಧನವೂ ಕಂಡುಬರಲಿಲ್ಲ; ಪುನಃ ಅಗೆದನು; ಎಷ್ಟು ಅಗೆದರೂ ಒಲೇ ಮಣ್ಣೇ ಸಿಕ್ಕುತಲಿತ್ತು. ಗುಂಡಿಯನ್ನು ತೆಗೆದು ಹಣವನ್ನು ಹೂಳಿಡುವವನಿಗೆ ಗುಂಡಿಯು "ನನ್ನ ಬಾಯಿಗೆ ಧನವೂ ನಿನ್ನ ಬಾಯಿಗೆ ಮಣ್ಣೂ" ಎಂದು ಹೇಳುವುದೆಂಬ ಗಾದೆಯನ್ನು ಧರ್ಮದೇವನು ಕೇಳಿದ್ದನು; ಅದರಂತೆ ಧನವನ್ನು ಭೂಮಿಯು ನುಂಗಿರಬಹುದೆಂದು ಚಿಂತಿಸಿದನು. ಇನ್ನಷ್ಟು ಅಗೆದು ನೋಡೋಣವೆಂದು ಪಿಕಾಸಿಯನ್ನು ಒಂದೇ ಸ್ಥಳದಲ್ಲಿ ಮೂರು ನಾಲ್ಕಾವೃತ್ತಿ ಬಲವಾಗಿ ಹಾಕಲು ಅಡಿಯಲ್ಲಿ ಒಂದು ಮರದ ಹಲಗೆ ಇರುವಂತೆ ತೋರಿತು. ಆ ಹಲಗೆಯ ಮೇಲೆ ಪಿಕಾಸಿಯ ಪೆಟ್ಟು ಬೀಳಲು ಅವನ ಎದೆಗೆ ಗುಂಡಿನ ಪೆಟ್ಟು ಬಿದ್ದಂತಾಯಿತು. ಅವನ ಆಗಿನ ಅವಸ್ಥೆಯನ್ನು ಬಣ್ಣಿಸಲು ಆಸಿಂದಲೂ ಸಾಧ್ಯವಾಗದು. "ಹಣವಿದ್ದರೆ ಚಿಂತೆ, ಹಣವಿಲ್ಲದ ಚಿಂತೆ—ಏನಾದರೂ ಚಿಂತೆ ಜೀವಕ್ಕೆ" ಎಂದು ದಾಸರು ಹೇಳುವಂತೆ ಆತನ ಅವಸ್ಥೆಯು ಇದ್ದಿತು. ಈ ರೀತಿ ಸ್ವಲ್ಪ ಚಿಂತಿಸಿ, ಮೇಲಿದ್ದ ಹಲಗೆಯ ಮಣ್ಣನ್ನು ತೆಗೆಯಲು, ಅದು ಎರಡು ಅಡಿಗಳು ಅಗಲ ಮೂರು ಅಡಿಗಳುದ್ದದ ಪೆಟ್ಟಿಗೆಯು ಮುಚ್ಚಳವಾಗಿದ್ದಿತು. ಹಲಗೆಯನ್ನು ಎತ್ತಲು ನೋಡಿದನು; ಪೆಟ್ಟಿಗೆಗೆ ಹಾಕಿದ್ದ ಬಲವಾದ ಕೀಲುಗಳೂ ಮತ್ತು ಒಳ ಹೊರ ಬೀಗಗಳೂ ತಮ್ಮ ವಶಕ್ಕೆ ಕೊಟ್ಟಿದ್ದ ಧನವನ್ನು ಯಜಮಾನನಿಗೆ ನಿನಾ ಮತ್ತಾರಿಗೂ

ಸುಲಭವಾಗಿ ಕೊಡಕೂಡದೆಂದು ಅದನ್ನು ಭದ್ರವಾಗಿ ಕಾಪಿಟ್ಟುಕೊಂಡಿದೆಯೋ ಎಂಬಂತಿದ್ದುವು. ಮುಚ್ಚಳವನ್ನು ತೆರೆಯಲು ಸಾಧ್ಯವಿಲ್ಲದೆ, ಪೆಟ್ಟಿಗೆಗೂ ಮುಚ್ಚಳಕ್ಕೂ ಮಧ್ಯೆ ಇದ್ದ ಸಂದಿನಲ್ಲಿ ಪಿಕಾಸಿಯನ್ನು ಸಿಕ್ಕಿಸಿ, ಒಲವಾಗಿ ಐದಾರು ಸಲ ಮೀಟಲು ಮುಚ್ಚಳವು ಕಿತ್ತು ಕೆಳಗೆ ಬಿದ್ದಿತು. ಒಳಗೆ ಮುಚ್ಚಿದ್ದ ಮಯಣದ ಬಟ್ಟೆಯನ್ನೆತ್ತಿ ನೋಡುತ್ತಲಿರುವ ವೇಳೆಗೆ, ಮೇಲೆ ಅತೋ ಓಡಾಡುವಂತೆ ನೆರಳಾಯಿತು.

ಧರ್ಮದೇವನು ಒಡನೆಯೇ ಪೆಟ್ಟಿಗೆಯನ್ನು ಮಯಣದ ಬಟ್ಟೆಯಿಂದ ಮುಚ್ಚಿ, ತುಪಾಕಿಯನ್ನು ಕಯ್ಯಲ್ಲಿ ಹಿಡಿದು ಗುಹೆಯಿಂದ ಹೊರಗೆ ಬಂದು ಬಂಡೆಯನ್ನು ಹತ್ತಿ ನೋಡುವಲ್ಲಿ, ಒಂದು ಕುರಿಯು ಮೇಲೆ ಮೇಯುತಲಿದ್ದಿತು. ಮನುಷ್ಯರಾರೂ ಇಲ್ಲವೆಂದು ತಿಳಿದು, ಅವನು ಪುನಃ ಗುಹೆಯನ್ನು ಹೊಕ್ಕು ಮಯಣದ ಒಟ್ಟೆಯನ್ನು ಎತ್ತಿ ನೋಡಲು ಕಣ್ಣು ಚದುರಿತು. ಸ್ವಲ್ಪಕಾಲ ಕಣ್ಣುಮುಚ್ಚಿಕೊಂಡಿದ್ದು, ಅನಂತರ ಕಣ್ಣು ಬಿಟ್ಟು ನೋಡುವಲ್ಲಿ, ಪೆಟ್ಟಿಗೆಯಲ್ಲಿ ಮಾಡಿದ್ದ ಮೂರು ಅರೆಗಳೊಳಗೆ, ಒಂದರಲ್ಲಿ ಭಂಗಾರದ ಇಟ್ಟಿಗೆಗಳೂ, ಮತ್ತೊಂದರಲ್ಲಿ ಚಿನ್ನದ ಹಳೆಯ ನಾಣ್ಯಗಳೂ, ಇವೆರಡಕ್ಕಿಂತ ದೊಡ್ಡದಾದ ಮೂರನೆಯದರಲ್ಲಿ ಮುತ್ತುಗಳೂ ಕೆಂಪುಗಳೂ ವಜ್ರಗಳೂ ಹೇರಳವಾಗಿ ತುಂಬಿರುವುದನ್ನು ಕಂಡನು. ಅವುಗಳನ್ನು ನೋಡಿ ಇದೇನು ಭ್ರಾಂತಿಯೋ ನಿಜವೋ ಎಂದು, ಆ ಅರೆಗೆ ಕೈಹಾಕಿ ಕೆಲವು ಕೆಂಪು ಮುತ್ತು ವಜ್ರಗಳನ್ನು ಸೇರಿಸೇರಿಯಾಗಿ ಎತ್ತಿ ಪೆಟ್ಟಿಗೆಗೆ ಸುರಿದು, ಕಿಲಿಗಿಂಪಾಗಿ ಕೇಳಿದ ಶಬ್ದದಿಂದ ಆನಂದಪಟ್ಟು, ಅದರಿಂದುಂಟಾದ ಸಂತೋಷವಂ ತಡೆಯಲಾರದೆ, ಗುಹೆಯ ಹೊರಗೆ ಬಂದು, ಹುಚ್ಚನಂತೆ ಕೆಲವು ಕಾಲ ದ್ವೀಪದಲ್ಲಿ ಓಡಾಡುತ್ತಲಿದ್ದನು. ಮನಸ್ಸು ಸಮಾಧಾನಸ್ಥಿತಿಗೆ ಬಂದ ಮೇಲೆ ಮರಳಿ ಗುಹೆಯೊಳಗೆ ಬಂದು ಪೆಟ್ಟಿಗೆಯ ಪಕ್ಕದಲ್ಲಿ ನಿಂತು ತನ್ನ ಗುರುವಾದ ಯೋಗಾನಂದನಿಗೂ ದೇವರಿಗೂ ವಂದನೆ ಮಾಡಿದನು. ಇಷ್ಟರಲ್ಲಿಯೇ ಸೂರ್ಯನು ಪಡುವಣ ಸಮುದ್ರದಲ್ಲಿ ಮುಳುಗಲಾರಂಭಿಸಿದನು. ಇನ್ನು ಕತ್ತಲಾಗುವುದೆಂದು ತಿಳಿದು ಗುಹೆಯಿಂದ ಹೊರಗೆ ಬಂದು, ಅದರ ಬಾಯಿಗೆ ಒಂದು ಚೌಕದ ಕಲ್ಲನ್ನು ಮುಚ್ಚಿ, ಅದರ ಮೇಲೆ ಮಲಗಿದನು. ಆ ದಿನ ಇವನು ಊಟವೇ ಮಾಡಲಿಲ್ಲ; ಆದರೂ ಇವನಿಗೆ ಹಸಿವು ತೋರಲಿಲ್ಲ. ದೇಹಶ್ರಮವಪಟ್ಟಿದ್ದನಾದುದರಿಂದ ಇವನಿಗೆ ಒಳ್ಳೆಯ ನಿದ್ರೆ ಬಂದು ಮಾರನೆಯ ದಿನ ಬೆಳಿಗ್ಗೆ ಸೂರ್ಯೋದಯವಾಗಿ ಬಿಸಿಲು ಕಣ್ಣನ್ನು ಚುಚ್ಚುವ

ವರೆಗೂ ಏಳಲೇ ಇಲ್ಲ. ಎದ್ದ ಮೇಲೆ ಗುಹೆಯನ್ನು ಹೊಕ್ಕು ಕೆಲವು ವಜ್ರಗಳನ್ನು ಮಾತ್ರ ಅಂಗಿಯ ಜೇಬಿನಲ್ಲಿ ತುಂಬಿಕೊಂಡು, ಪೆಟ್ಟಿಗೆಯನ್ನು ಕೈಲಾದ ವರೆಗೂ ಪೂರ್ವದಂತೆ ಮುಚ್ಚಿ, ಅದರ ಮೇಲೆ ಮಣ್ಣನ್ನು ಹರಡಿ ಕಾಲಿನಲ್ಲಿ ತುಳಿದು ಆಗೆದ ಸುಳಿವು ತಿಳಿಯದಂತೆ ಮಾಡಿ, ಗುಹೆಗಳ ಬಾಗಿಲುಗಳನ್ನು ಕಲ್ಲು ಮಣ್ಣುಗಳಿಂದ ಮುಚ್ಚಿ, ಹೊರಗಿನ ಬಾಯಿಗೆ ತೀಕ್ಷ್ಣದಲ್ಲಿಯೇ ಬೆಳೆಯುವ ಬಳ್ಳಿಗಳನ್ನು ನೆಟ್ಟು ನೀರು ಹಾಕುತ್ತ ವೇಗವತಿಯ ಆಗಮನವನ್ನೇ ನಿರೀಕ್ಷಿಸುತ್ತಲಿದ್ದನು.

ಆರನೆಯ ದಿನ ವೇಗವತಿಯು ಧರ್ಮದೇವನನ್ನು ಕರೆದುಕೊಂಡು ಹೋಗಲು ಮಲಯದ್ವೀಪಕ್ಕೆ ಬಂದಿತು. ಹಡಗು ಬರುವುದನ್ನೇ ನೋಡುತ್ತಲಿದ್ದ ಧರ್ಮದೇವನು ಒಡನೆಯೇ ದಡವನ್ನು ಸೇರಿ, ಆ ವೇಳೆಗೆ ಹಡಗಿನಿಂದ ದೋಣಿಯಲ್ಲಿ ಬಂದ ನಾವಿಕರ ಯೋಗಕ್ಷೇಮವನ್ನು ವಿಚಾರಿಸಿದನು. ಮೊದಲು ಧರ್ಮದೇವನ ಯೋಗಕ್ಷೇಮವನ್ನು ವಿಚಾರಿಸಬೇಕೆಂಬ ಆತುರದಿಂದ, ನಿನ್ನ ದೇಹಸ್ಥಿತಿ ಹೇಗಿದೆ, ಎಂದು ಅವರು ಮಾಡಿದ ಪ್ರಶ್ನೆಗೆ ಅವನು ನನ್ನನ್ನು ನೀವು ಬಿಟ್ಟು ಹೋದುದರಿಂದ ಎಲ್ಲಾ ವಿಷಯದಲ್ಲಿಯೂ ಅನುಕೂಲವಾಯಿತು; ಕಾಲಲ್ಲಿ ಮಾತ್ರ ಒಂದು ಕಪೆ ನೋವು ಇನ್ನೂ ಸ್ವಲ್ಪ ಇದೆ. ಆದನೆ ಅದು ಕೆಲಸಕ್ಕೆ ಅಡ್ಡಿಮಾಡುವಹಾಗಿಲ್ಲ ಎಂದನು. "ಈ ಪ್ರಯಾಣವು ಬಹು ಲಾಭಕರವಾಗಿದ್ದಿತು; ಆದರೆ ಹಿಂತಿರುಗಿ ಬರುವ ಸಮಯದಲ್ಲಿ ಸುಂಕದ ಅಧಿಕಾರಿಗಳು ನಮ್ಮನ್ನು ಅಟ್ಟಿಕೊಂಡು ಬಂದರು. ಅವರ ಕೈಗೆ ನಾವು ಸಿಕ್ಕುವುದರಲ್ಲಿದ್ದೆವು; ಅಷ್ಟರಲ್ಲಿಯೇ ನಮ್ಮ ಪುಣ್ಯಕ್ಕೆ ಕತ್ತಲೆಯಾದುದರಿಂದ ತಪ್ಪಿಸಿಕೊಂಡು ಬಂದೆವು" ಎಂದರು. ಯಾಗಪ್ಪನು "ಈ ಪ್ರಯಾಣದಲ್ಲಿ ನೀನಿದ್ದಿದ್ದರೆ ನಮಗೆ ಸುಂಕದವರ ಯೋಚನೆಯೇ ಇರುತ್ತಿರಲಿಲ್ಲವಲ್ಲಾ ಎಂದು ವ್ಯಸನಪಟ್ಟೆವು. ಈ ಸಾರಿ ಹೆಚ್ಚು ಲಾಭವು ಸಿಕ್ಕಿತು; ಆದರಲ್ಲಿ ನಿನಗೇನೂ ಸಿಕ್ಕುವುದಿಲ್ಲವಲ್ಲಾ ಎಂದು ನಾನು ವ್ಯಸನಪಡುತ್ತೇನೆ" ಎಂದನು. ಈ ಮಾತನ್ನು ಕೇಳಿ ಧರ್ಮದೇವನಿಗೆ ತಡೆಯಲಾರದಷ್ಟು ನಗು ಬಂದಿತು; ಅದನ್ನು ಕಷ್ಟದಿಂದ ಅಡಗಿಸಿಕೊಂಡು ಬರುವ ಲಾಭವು ಹೋಯಿತಲ್ಲಾ ಎಂದು ವ್ಯಸನಪಡುವಂತೆ ನಟಿಸಿದನು.

ತನಗಾಗಿಯೇ ಬಂದ ಹಡಗನ್ನು ಏರಿ, ಧರ್ಮದೇವನು ಲೀಲಾವತೀಪಟ್ಟಣವನ್ನು ಸೇರಿದ ಕೂಡಲೇ ರತ್ನಪಡಿ ವ್ಯಾಪಾರ ಮಾಡುತ್ತಲಿದ್ದ ಒಬ್ಬ ಶೆಟ್ಟಿಯ ಬಳಿಗೆ

ಹೋಗಿ ಕೆಲವು ಸಣ್ಣ ವಜ್ರಗಳನ್ನು ಆರುವತ್ತು ಸಾವಿರ ವರಹಗಳಿಗೆ ಮಾರಿದನು. ಈ ವ್ಯಾಪಾರದಿಂದ ಸೆಟ್ಟಿಗೆ ಸುಮಾರು ಸೇಕಡಾ ಅರುವತ್ತರಂತೆ ಲಾಭ ಬಂದುದರಿಂದ ಅವನು ಅವ ಪ್ರಶ್ನೆಯನ್ನೂ ಮಾಡದೆ ಹಣವನ್ನು ಕೊಟ್ಟು ಇನ್ನೂ ಇಂತಹ ವಜ್ರಗಳಿದ್ದರೆ ತೆಗೆದುಕೊಂಡು ಬಾ, ತಕ್ಕ ಬೆಲೆಯನ್ನು ಕೊಡುವೆನು, ಎಂದು ಹೇಳಿ ಕಳುಹಿಸಿದನು.

ಮಾರನೇ ದಿನ ಧರ್ಮದೇವನು ಯಾಗಪ್ಪನನ್ನು ಕರೆದು ಅಪ್ಪಾ! ನನಗೆ ತಂದೆ ತಾಯಿಗಳಾರೂ ಇಲ್ಲ; ನನ್ನನ್ನು ಸಾಕುತ್ತಲಿದ್ದ ಸೋದರಮಾವನ ಸಂಗಡ ಜಗಳವಾಡಿಕೊಂಡು ನಾವಿಕನಾಗಿ ಜೀವನಮಾಡುತ್ತಲಿದ್ದು ಕೊನೆಗೆ ನಿಮ್ಮನ್ನು ಸೇರಿದೆನು. ಸೋದರಮಾವನು ಶ್ರೀಮಂತನು; ಮಕ್ಕಳಿಲ್ಲದುದರಿಂದ ಆಸ್ತಿಯನ್ನೆಲ್ಲಾ ನನ್ನ ಹೆಸರಿಗೆ ಬರೆದಿಟ್ಟು ಮೃತಪಟ್ಟನೆಂದು ನನಗೆ ಈಗ ತಿಳಿಯಿತು ಎಂದು ಹೇಳಿ, ಅವನೊಂದಿಗೆ ಕೆಲವು ಮಾತುಗಳನ್ನಾಡಿ ಅವನನ್ನು ತನ್ನ ವಶಮಾಡಿಕೊಂಡು ಅವನಿಗೆ ಬಂದು ಸಣ್ಣದಾದ ಹೊಸ ಹಡಗನ್ನು ಕೊಂಡುಕೊಟ್ಟು, ಅದಕ್ಕೆ ಬೇಕಾದ ನಾವಿಕರನ್ನು ಏರ್ಪಾಡು ಮಾಡಿಕೊಳ್ಳಲು ದುಡ್ಡನ್ನು ಕೊಟ್ಟು " ಬಂದಾನೊಂದು ಕಾಲದಲ್ಲಿ ನೀನು ಮಾಡಿದ ಪ್ರಶ್ನೆಗೆ, ದೈವಕೃಪೆಯಿದ್ದರೆ ನೀನೂ ಏತಕ್ಕೆ ನಾಯಕಾಧಿಪನಾಗಬಾರದು, ಎಂದು ನಾನು ಹೇಳಿದುದು ನಿನಗೆ ಜ್ಞಾಪಕವಿರಬಹುದು. ಇಗೋ! ಈಗ ಆ ಕಾಲವು ಒದಗಿದೆ. ನೀನು ಮಲಯಪಟ್ಟಣಕ್ಕೆ ಹೋಗಿ ಕಾಳಿಕಾಬೀದಿಯಲ್ಲಿರುತ್ತಿದ್ದ ಭುಜಂಗಭೂಷಣನು ಮತ್ತು ಅದೇ ಊರ ಪಾಳೆಯದಲ್ಲಿ ವಾಸವಾಗಿರುತ್ತಿದ್ದ ಲಲಿತಾಂಗಿಯು ಇವರಿಬ್ಬರ ವೃತ್ತಾಂತಗಳನ್ನು ತಿಳಿದುಕೊಂಡು ಮಲಯದ್ವೀಪಕ್ಕೆ ಬಂದು ನನಗೆ ತಿಳಿಸು. ನಿನಗೋಸ್ಕರ ನಾನು ಅಲ್ಲಿಯೇ ಕಾದಿರುವೆನು " ಎಂದು ಹೇಳಿ ಕಳುಹಿಸಿದನು.

ಧರ್ಮದೇವನಿಗೆ ಸೋದರಮಾವನ ಆಸ್ತಿ ಸಿಕ್ಕಿದ ವರ್ತಮಾನವು ವೇಗವತಿಯ ನಾವಿಕರೆಲ್ಲರಿಗೂ ನಿಮಿಷಮಾತ್ರದಲ್ಲಿ ತಿಳಿದು, ಅವರು ತಮ್ಮ ಯಜಮಾನ ಪ್ರಚಂಡನನ್ನು ಮುಂದಿಟ್ಟುಕೊಂಡು ಧರ್ಮದೇವನ ಬಳಿಗೆ ಬಂದು ಅವನು ಹಣಗಾರನಾದುದಕ್ಕಾಗಿ ತಮ್ಮ ಸಂತೋಷವನ್ನು ತಿಳಿಸಿದರು. ಅವನ ವಿದ್ಯೆ, ಬುದ್ಧಿ, ನಾಗರಕಶೆಯನ್ನು ನೋಡಿ ಇವನು ಆವನೋ ದೊಡ್ಡ ಮನೆತನಕ್ಕೆ ಸೇರಿದವನಾಗಿರಬಹುದೆಂದು ಈ ಮಧ್ಯೆ ಅವರು ಊಹಿಸಿದ್ದರು. ಈಗ ಅದು ಸ್ಥಿರಪಟ್ಟಿತು. ಮುಗುವಳೆಮಾಡಿ

ಕೊಂಡಿದ್ದ ಮೂರು ತಿಂಗಳು ಅಂದಿಗೆ ಮುಗಿದುದರಿಂದ ಅವನು ನಾವಿಕರೆಲ್ಲರಿಗೂ ತಕ್ಕ ಬಹುಮಾನವನ್ನು ಮಾಡಿ, ಪ್ರಚಂಡನಿಂದ ಅಪ್ಪಣೆಯನ್ನು ಪಡೆದು, ನನ್ನ ಕಾರ್ಯಕ್ಕೆ ನಿಮ್ಮ ಸಾಹಾಯ್ಯವು ಬೇಕಾಗುವುದಾದರೆ ನಿಮಗೆ ಒನ್ನಹಮಾಡಿಕೊಳ್ಳುವೆನು ಎಂದು, ಹೇಳಿ ಲೀಲಾವತೀಪಟ್ಟಣದಿಂದ ಜಲಂಧರಪಟ್ಟಣಕ್ಕೆ ಆ ದಿನ ಹೋಗುತ್ತಲಿದ್ದ ಒಂದು ಹಡಗಿನಲ್ಲಿ ಪ್ರಯಾಣವನ್ನು ಮಾಡಿದನು.

ಧರ್ಮದೇವನು ಆ ಪಟ್ಟಣವನ್ನು ಸೇರಿದಾಗ ಆ ಊರಿನಲ್ಲಿ ಹೊಸದಾಗಿ ತಯಾರಾಗಿದ್ದ ಒಂದು ಹಡಗನ್ನು ಪರೀಕ್ಷಾರ್ಥವಾಗಿ ಲೇಖನಿಲ್ಲಿ ನಡೆಸುತ್ತಲಿದ್ದರು. ಅದು ಕೇವಲ ಸಣ್ಣದಲ್ಲದೆಯೂ, ವಿಶೇಷ ದೊಡ್ಡದಲ್ಲದೆಯೂ, ಲಘುವಾಗಿಯೂ, ಬಲವಾಗಿರುವಂತೆಯೂ, ವೇಗವಾಗಿ ಹೋಗುವಂತೆಯೂ ಧರ್ಮದೇವನಿಗೆ ತೋರಿತು. ಆ ಪಟ್ಟಣದವರು ಇಂಥ ಹಡಗುಗಳನ್ನು ಕಟ್ಟುವುದರಲ್ಲಿ ನಿಸ್ಸೀಮರೆಂದು ಅವನು ಕೇಳಿದ್ದನು. ಹಡಗಿನ ಚೆಂದವನ್ನು ನೋಡಿ ಮೋಹಿಸಿ ಅದಕ್ಕೆ ನಲವತ್ತು ಸಾವಿರ ವರಹಗಳ ಬೆಲೆಯೆಂದು ತಿಳಿದು, ಅದನ್ನು ತನಗೆ ಮಾರುವುದಾದರೆ ಅರುವತ್ತುಸಾವಿರ ವರಹಗಳನ್ನು ಕೊಡುವೆನೆಂದು ಅದರ ಯಜಮಾನನಿಗೆ ಹೇಳಿದನು. ಕಂಡಹಾಗೆ ಇಪ್ಪತ್ತುಸಾವಿರ ವರಹಗಳು ಹೆಚ್ಚಾಗಿ ಸಿಕ್ಕುತ್ತದೆ; ಇದಲ್ಲದೆ ಈ ಹಡಗು ಅರಿಗೋಸ್ಕರ ಕಟ್ಟಲ್ಪಟ್ಟಿತೋ ಅವನು ಇನ್ನೂ ಮೂರು ತಿಂಗಳು ಬರುವುದಿಲ್ಲ; ಅಷ್ಟರೊಳಗೆ ಇನ್ನೊಂದು ಇಂತಹ ಹಡಗನ್ನು ಮಾಡಬಹುದು ಎಂದು ಯಜಮಾನನು ಯೋಚಿಸಿ, ಈ ಹಡಗನ್ನು ಧರ್ಮದೇವನಿಗೆ ಮಾರಲು ಒಪ್ಪಿದನು. ಒಡನೆಯೇ ಧರ್ಮದೇವನು ಹಡಗಿನ ಯಜಮಾನನನ್ನು ಒಬ್ಬ ಕೋವಿಯ ಹತ್ತಿರಕ್ಕೆ ಕರೆದುಕೊಂಡು ಹೋಗಿ, ಅವನೊಂದಿಗೆ ಏಕಾಂತವಾಗಿ ಕೆಲವು ಮಾತುಗಳನ್ನಾಡಿ ಅವನಿಂದ ದುಡ್ಡನ್ನು ಕೊಡಿಸಿದನು. ಯಜಮಾನನು ಸಂತೋಷಪಟ್ಟು, ಬೇಕಾಗಿದ್ದಲ್ಲಿ ಆ ಹಡಗಿಗೆ ತಕ್ಕ ನಾವಿಕರನ್ನು ಏರ್ಪಾಡುಮಾಡಿ ಕೊಡುವೆನು ಎಂದನು. "ನನ್ನ ಹಡಗನ್ನು ನಾನೇ ನಡೆಸುವುದು ನನಗೆ ಇಷ್ಟ; ನಾವಿಕರನ್ನು ಸಂಪಾದಿಸಿ ಕೊಡುವುದಕ್ಕೆ ಬದಲಾಗಿ ನೌಕಾಧಿಪನ ಕೊಟ್ಟಡಿಯಲ್ಲಿ ಒಂದು ನಿಲುವುಗನ್ನಡಿಯನ್ನು ಹಾಕಿ ಕೊಡುವುದಲ್ಲದೆ ಅರ ಕಣ್ಣಿಗೂ ಕಾಣದಂತೆ ಒಂದು ಸಣ್ಣ ಬೀರುವನ್ನು ಮಾಡಿಕೊಟ್ಟರೆ ಸಾಕು" ಎಂದನು. ಮಾರನೇದಿನ ಬೆಳಗಾಗುವುದರಲ್ಲಿಯೇ ಇವನು ಹೇಳಿದ ಹಾಗೆ ಎಲ್ಲವೂ ಆಣಿಯಾದುವು.

ಆ ದಿನ ಬೆಳಿಗ್ಗೆ ಧರ್ಮದೇವನು ಅಂಗಡಿಗಳಿಗೆ ಹೋಗಿ ತನಗೆ ಬೇಕಾದ ಸಾಮಾನುಗಳನ್ನು ತೆಗೆದುಕೊಂಡು ಸುಮಾರು ಹತ್ತು ಗಂಟಿಗೆ ಜಲಂಧರಪಟ್ಟಣವನ್ನು ಬಿಟ್ಟು ಹಡಗನ್ನು ತಾನೇ ನಡೆಸಿಕೊಂಡು ಹೊರಟನು. ರೇವಿನಲ್ಲಿದ್ದವರೆಲ್ಲರೂ ನಾವಿಕರಾರೂ ಇಲ್ಲದೆ ಯಜಮಾನನೇ ಹಡಗ ನಡೆಸುವುದನ್ನು ನೋಡಬೇಕು ಎಂದು ಕಾದಿದ್ದರು. ಧರ್ಮದೇವನು ಚಮತ್ಕಾರದಿಂದ ಹಡಗ ನಡೆಸುವುದನ್ನು ಕಂಡು ಪರಮಾಶ್ಚರ್ಯಪಟ್ಟು, ಇವನು ಆರೋ ಒಬ್ಬ ದೊಡ್ಡ ವರ್ತಕ, ಅನ್ಯದೇಶದ ಅಧಿಕಾರಿ, ಮಲೆಯಾಳಪ್ರಾಂತ್ಯ ಹೋಗುವನು ಎಂದು ನಾನಾವಿಧವಾಗಿ ಹೇಳುತ್ತಲಿದ್ದರು. ಇವನಿಂಧವನೆಂಬುದನ್ನೂ, ಮಲಯದ್ವೀಪಕ್ಕೆ ಹೋಗುವನೆಂಬುದನ್ನೂ ಆರೂ ಊಹಿಸಲಿಲ್ಲ.

ಸ್ವಲ್ಪ ದೂರ ನಡೆಸುವುದರಲ್ಲಿಯೇ ಧರ್ಮದೇವನಿಗೆ ಹಡಗಿನ ವೇಗವು ಗೊತ್ತಾಯಿತು. ಸ್ವಾಧೀನತೆಯು ಉಂಟಾಯಿತು. ಮಾರನೇ ದಿನ ಸಂಜೆಗೆ ಮೊದಲೇ ಹಡಗು ಮಲಯದ್ವೀಪವನ್ನು ಸೇರಿ, ಗುಹೆಯ ಸಮೀಪದ ಏಕಾಂತವಾದ ಕೊಲ್ಲಿಯಲ್ಲಿ ನಿಂತಿತು. ಒಡನೆ ಧರ್ಮದೇವನು ದೋಣಿಯಲ್ಲಿ ಇಳಿದು ದಡವನ್ನು ಸೇರಿ ಗುಹೆಯನ್ನು ಹೊಕ್ಕು ಪೆಟ್ಟಿಗೆಯಲ್ಲಿದ್ದ ಧನವಸ್ತ್ರೆಲ್ಲಾ ಹಡಗಿಗೆ ಸಾಗಿಸಿ, ಹಡಗಿನಲ್ಲಿ ಪುಲಗಿದ್ದನು. ಮಾರನೆಯ ದಿನ ಗುಹೆಯ ಬಾಯನ್ನು ಯಥಾಪ್ರಕಾರ ಮುಚ್ಚಿ ಯಾಗಪ್ಪನು ಬರುವುದನ್ನೇ ಇದಿರು ನೋಡುತ್ತಲಿದ್ದನು. ಇವನು ಬರುವುದು ನಾಲ್ಕು ದಿವಸಗಳು ಸಾವಕಾಶವಾಯಿತು. ಅಲ್ಲಿಯ ವರೆಗೆ ಧರ್ಮದೇವನು ಪ್ರತಿನಿತ್ಯವೂ ದ್ವೀಪವನ್ನು ಒಂದು ಸುತ್ತು ಬಂದು, ರೇವು ಗಳನ್ನೂ ಗುಹೆಯನ್ನೂ ಗುಣವೃದ್ಧಿ ಹೇಗೆ ಮಾಡಬಹುದೆಂದು ಯೋಚಿಸುತ್ತಲಿದ್ದನು.

ಯಾಗಪ್ಪನು ಬಂದ ಕೂಡಲೆ ಧರ್ಮದೇವನು ಹಡಗನ್ನು ಸೇರಿ, ಸಮಾಚಾರವನ್ನು ವಿಚಾರಿಸಲು, ಭುಜಂಗಭೂಷಣನು ಸತ್ತು ಹೋದನೆಂತಲೂ ಲಲಿತಾಂಗಿಯು ಅದೃಶ್ಯಳಾದಳೆಂತಲೂ ತಿಳಿಯಬಂದಿತು. ಭುಜಂಗಭೂಷಣನು ವೃದ್ಧನಾಗಿದ್ದುದರಿಂದ ಸಾಯುವುದೇನೋ ಸ್ವಭಾವ; ಲಲಿತಾಂಗಿಯು ಅದೃಶ್ಯಳಾದಳೆಂದರೆ ಅರ್ಥವಾಗಲಿಲ್ಲ; ಅದನ್ನು ವಿಚಾರಿಸಬೇಕೆಂದು ಯೋಚಿಸಿ, ತನ್ನ ಗುಟ್ಟನ್ನು ಹೊರಗೆ ಬಿಡದೆ ಈ ವರ್ತಮಾನವನ್ನೂ, ತನಗೆ ಬೇಕಾದ ಇತರ ಸಂಗತಿಗಳನ್ನೂ ಇತರರ

ಮೂಲಕ ವಿಚಾರಿಸುವುದು ಅನುಚಿತವೆಂದು ತಿಳಿದು, ತಾನೇ ಮಲಯಪಟ್ಟಣಕ್ಕೆ ಹೋಗಬೇಕೆಂದು ನಿಶ್ಚಯಿಸಿದನು.

ತನ್ನ ಗುರ್ತನ್ನು ಹಿಡಿಯಲು ತನಗೇ ಅಸಾಧ್ಯವಾಗಿದ್ದಿತೆಂದು ಮೊದಲೇ ನಮ್ಮ ವಾಚಕರಿಗೆ ತಿಳಿಸಿರುವೆವು. ಧರ್ಮದೇವನಿಗೆ ಪುನಃ ಆ ವಿಷಯದಲ್ಲಿ ಅನುಮಾನ ಹುಟ್ಟಿ ಹಡಗಿನಲ್ಲಿರುವ ನಿಲುಗನ್ನಡಿಯಲ್ಲಿ ತನ್ನನ್ನು ನೋಡಿಕೊಂಡು ಸ್ವಭಾವವಾಗಿಯೇ ನೆನ್ನನ್ನು ಗುರುತಿಸಲು ಅಸಾಧ್ಯ; ಇದರ ಮೇಲೆ ನಾನು ಬೇಕಾದ ವೇಷವನ್ನು ಧರಿಸಲು ಅನುಕೂಲವಿರುವುದರಿಂದ ಎಲ್ಲಿಗೆ ಬೇಕಾದರೂ ಧಾರಾಳವಾಗಿ ಹೋಗಬಹುದೆಂದು ಧೈರ್ಯವಾಗಿದ್ದನು.

ಒಂದಾನೊಂದು ಪ್ರಾತಃಕಾಲ ಯಾಗಪ್ಪನನ್ನೂ ಅವನ ನಾವಿಕರಲ್ಲಿ ನಾಲ್ವರನ್ನೂ ಕರೆದುಕೊಂಡು ಮಲಯ ಪಟ್ಟಣಕ್ಕೆ ಪ್ರಯಾಣಮಾಡಿ, ಆ ಪಟ್ಟಣದ ರೇವನ್ನು ಸೇರುತ್ತಲೆ, ಸುಂಕದ ಅಧಿಕಾರಿಗಳೂ, ಅವರ ಜತೆಯಲ್ಲಿ ಕೆಲವು ಸಿಪಾಯಿಗಳೂ ತನ್ನ ಹಡಗಿಗೆ ಬರಲು, ಧರ್ಮದೇವನು ಸ್ವಲ್ಪ ಚಕಿತನಾದರೂ ಅದನ್ನು ಎಳ್ಳಷ್ಟಾದರೂ ಹೊರಗೆ ತೋರ್ಪಡಿಸದೆ, ತಾನು ಉದಾರಸಿಂಹನ ಹೆಸರಿನಲ್ಲಿ ಜಲಂಧರದಲ್ಲಿ ಪಡೆದಿದ್ದ ರಹದಾರಿಯನ್ನು ತೋರಿಸಿ, ಅವರಿಗೆ ಬೇಕಾದ ಸಂಗತಿಗಳನ್ನು ತಿಳಿಸಿ ಅವರನ್ನು ಕಳುಹಿಸಿಕೊಟ್ಟನು.

ಧರ್ಮದೇವನು ಹಡಗಿನಿಂದ ಇಳಿದು ಊರಿನಲ್ಲಿ ಹೋಗುತ್ತಿದ್ದಾಗ ಇದಿರಿಗೆ ತನ್ನ ಸಂಗಡ ಜಯಲಕ್ಷ್ಮಿಯಲ್ಲಿ ಕೆಲಸಮಾಡುತ್ತಲಿದ್ದ ಒಬ್ಬ ನಾವಿಕನು ಬಂದನು. ತನ್ನ ಪರೀಕ್ಷೆಗೆ ಇದು ಬಹು ಅನುಕೂಲವಾಯಿತೆಂದು ಧರ್ಮದೇವನು ಸಂತೋಷಪಟ್ಟು, ಅವನ ಇದಿರಿಗೆ ನಿಂತು ಕೆಲವು ಹೊತ್ತು ಮಾತನಾಡಿ, ಅವನು ತನ್ನನ್ನು ಸ್ವಲ್ಪವೂ ಗುರ್ತಿಸದೆ ಹೋಗಲು, ಅವನ ಕಯ್ಯಲ್ಲಿ ಇನಾಮಾಗಿ ಆ ದೇಶದ ಒಂದು ಸಣ್ಣ ಚಿನ್ನದ ನಾಣ್ಯವನ್ನು ಕೊಟ್ಟು ಮುಂದೆ ಹೊರಟನು. ಸ್ವಲ್ಪ ದೂರ ಹೋಗುವುದರೊಳಗಾಗಿಯೇ ಹಿಂದೆ ಕೂಗುತ್ತ ಓಡಿಬರುತ್ತಲಿದ್ದ ಆ ನಾವಿಕನನ್ನು ನೋಡಿ ಏನೆಂದು ಕೇಳಲು, ಅವನು ಅಯ್ಯೋ! ತಾವು ಚಿಲ್ಲರೆ ನಾಣ್ಯವನ್ನು ಕೊಡುವುದಕ್ಕೆ ಬದಲಾಗಿ ಚಿನ್ನದ ನಾಣ್ಯವನ್ನು ಕೊಟ್ಟಂತೆ ತೋರುತ್ತೆ; ಅದನ್ನು ತಮಗೆ ಹಿಂದಿರುಗಿ ಕೊಡಲು ಬಂದೆನು ಎಂದನು. ಧರ್ಮದೇವನು ಅದಕ್ಕೆ ನೀನು ಹೇಳುವಂತೆ ನಾನು

ತಪ್ಪುಮಾಡಿದುದೇನೋ ನಿಜ; ಆದರೆ ನಿನ್ನ ಸತ್ಯಕ್ಕೆ ಮೆಚ್ಚಿ ಆ ನಾಣ್ಯದ ಜತೆಗೆ ಇದನೂ ಸೇರಿಸುವೆನು ಎಂದು ಮತ್ತೊಂದು ಚಿನ್ನದ ನಾಣ್ಯವನ್ನು ಕೊಟ್ಟು, ಈ ದುಡ್ಡನ್ನು ಕುಡಿದು ವ್ಯರ್ಥಮಾಡದೆ ನನ್ನ ಹೆಸರಿನಲ್ಲಿ ನಿನ್ನ ಹೆಂಡತಿ ಮಕ್ಕಳಿಗೆ ಅವರಿಗೆ ಇಷ್ಟವಾದ ಅಪೂರ್ವವಸ್ತುಗಳನ್ನು ತೆಗೆದುಕೊಡು ಎಂದನು. ಅಯ್ಯಾ! ತಾವು ಆರು, ತಮ್ಮ ಹೆಸರೇನು ಎಂದು ಅವನು ಕೇಳಿದುದಕೆ, "ಉದಾರಸಿಂಹ" ಎಂದು ಹೇಳಿ ಮುಂದೆ ಹೊರಟನು. ನಾವಿಕನು ಈ ಎರಡು ನಾಣ್ಯಗಳನ್ನು ತನ್ನ ಹೆಂಡತಿಯ ಕಯ್ಯಲ್ಲಿ ಕೊಟ್ಟು ಉದಾರಸಿಂಹನ ಉದಾರತ್ವವನ್ನು ಕೊಂಡಾಡುತ್ತಲಿದ್ದನು.

ಧರ್ಮದೇವನು ಮೊದಲು ತನ್ನ ತಂದೆ ವಾಸವಾಗಿದ್ದ ಮನೆಗೆ ಹೋದನು. ಆ ಮನೆಯ ಸಮೀಪವನ್ನು ಸೇರಿ ಅದರ ಮುಂದೆ ನಿಂತಾಗ ಅವನ ಕಾಲುಗಳು ಅದುರಿದುವು. ಸ್ವಲ್ಪ ಕಾಲ ಅಲ್ಲಿಯೇ ಇದ್ದು ಮನೆಯ ಮುಂದೆ ವಾಸಮಾಡುತ್ತಲಿದ್ದ ಆಳನ್ನು ಇಲ್ಲಿ ಜಾಡಿಗೆಗೆ ಸ್ಥಳ ಸಿಕ್ಕುವುದೋ ಎಂದು ಕೇಳಿ, ಅವನು ಇಲ್ಲವೆಂದು ಹೇಳಿದರೂ ಕೇಳದೆ, ನಾಲ್ಕನೆಯ ಅಂತಸ್ತನ್ನು ನಾನು ನೋಡಬೇಕು, ಅಲ್ಲಿ ಆರಾದರೂ ವಾಸವಾಗಿದ್ದರೆ ಅವರ ಅಪ್ಪಣೆಯನ್ನು ಕೇಳಿ ಬಾ ಎಂದು ಅವನ ಕಯ್ಯಲ್ಲಿ ಒಂದು ರೂಪಾಯಿಯನ್ನು ಕೊಟ್ಟನು. ಅವನು ಒಡನೆಯೇ ಮೇಲೆ ಹೋಗಿ ಅಲ್ಲಿದ್ದವರ ಅನುಮತಿಯನ್ನು ಪಡೆದು ಧರ್ಮದೇವನಿಗೆ ತಿಳಿಸಿದನು.

ಅವನು ತನ್ನ ತಂದೆಯಿದ್ದ ಕೊಟ್ಟಡಿಯನ್ನು ಪ್ರವೇಶಿಸಲು, ಅಲ್ಲಿ ವಾಸವಾಗಿದ್ದ ನೂತನದಂಪತಿಗಳು ಎದ್ದು ಅವನಿಗೆ ಒಂದು ಆಸನವನ್ನು ಕೊಟ್ಟು ತಾವು ನಿಂತಿದ್ದರು. ಧರ್ಮದೇವನು ಅವರನ್ನು ನೋಡಿ ಮರ್ಯಾದೆಮಾಡಿ, ತನ್ನ ತಂದೆ ಆವಾಗಲೂ ಕುಳಿತುಕೊಳ್ಳುತ್ತಲಿದ್ದ ಸ್ಥಳವನ್ನು ನೋಡಿ ಕಂಬನಿಗಳನ್ನು ಸುರಿಸುತ್ತ ನಿಂತಿದ್ದನು. ಇವನು ಹೀಗೆ ದುಃಖಿಸುವುದನ್ನು ಕಂಡು ಅವರು ಪಶ್ಚಾತ್ತಾಪಪಟ್ಟು, ದುಃಖದ ಕಾರಣ ಇಂತಹುದೆಂದು ತಿಳಿಯದಿದ್ದರೂ ಆ ವೇಳೆಯಲ್ಲಿ ಅವನನ್ನು ಪ್ರಶ್ನೆ ಮಾಡುವುದು ಯುಕ್ತವಲ್ಲವೆಂದು ತಿಳಿದು ಸುಮ್ಮನಿದ್ದರು. ಧರ್ಮದೇವನು ತೃಪ್ತಿಯಾಗುವವರೆಗೂ ದುಃಖಿಸಿ "ಹಿಂದೆ ನಾವು ಇಲ್ಲಿದ್ದೆವು; ನನಗೆ ಮುಖ್ಯ ಪ್ರೇಮ ಕಾರಣವಾಗಿದ್ದ ವಸ್ತುವು ಇಲ್ಲಿಯೇ ಕಾಲಾಧೀನವಾಗಿ ಹೋದುದರಿಂದ ಈ ಸ್ಥಳವನ್ನು ನೋಡಲು ಬಂದೆನು" ಎಂದು ಹೇಳಿ ಅವರ ಕ್ಷಮಾಪಣೆಯನ್ನು ಕೇಳಿದನು.

ಆಗ ಆ ದಂಪತಿಗಳು "ಇದು ತಮ್ಮ ಮನೆ, ಆವಾಗ ಬೇಕಾದರೂ ತಾವು ಇಲ್ಲಿಗೆ ಬರ ಬಹುದು" ಎಂದು ಹೇಳಿದರು.

ಧರ್ಮದೇವನು ಅವರಿಗೆ ತಕ್ಕ ಉಪಚಾರಗಳನ್ನು ಹೇಳಿ ಅಲ್ಲಿಂದ ಇಳಿದು ಮೂರನೆ ಅಂತಸ್ತಿನಲ್ಲಿದ್ದ ಕದರ್ಥಕನೇನಾದನೆಂದು ವಿಚಾರಿಸಲು, ಅವನಿಗೆ ಅನೇಕ ಕಷ್ಟಗಳು ಸಂಭವಿಸಿ ಈಗ ಅವನು ಆ ಪಟ್ಟಣದ ಉತ್ತರಭಾಗಕ್ಕೆ ಸ್ವಲ್ಪ ದೂರದಲ್ಲಿ ಮನೋರಂಜಿನೀ ಎಂಬ ಹೆಸರಿನ ಒಂದು ಭೋಜನಶಾಲೆಯನ್ನು ಇಟ್ಟುಕೊಂಡು ಜೀವಿಸುವನು ಎಂದು ಹೇಳಿದರು. ಬಳಿಕ ಧರ್ಮದೇವನು ಕೆಳಗಿಳಿದು ಆಕಿನಿಂದ ಮನೆಯ ಯಜಮಾನನ ಹೆಸರು ಗುರ್ತುಗಳನ್ನು ತಿಳಿದು, ಆ ದಿನವೇ ಒಬ್ಬ ವಕೀಲನ ಮೂಲಕ ಆ ಮನೆಯನ್ನು ಉದಾರಸಿಂಹನ ಹೆಸರಿನಲ್ಲಿ ಕೇಳಿದಷ್ಟು ದುಡ್ಡು ಕೊಟ್ಟು ಕೊಂಡುಕೊಂಡನು. ಅದೇ ವಕೀಲನ ಮೂಲಕವಾಗಿಯೇ ನಾಲ್ಕನೆಯ ಮಹಡಿಯನ್ನು ಒಡನೆ ಬಿಟ್ಟುಕೊಟ್ಟರೆ ಆ ಮನೆಯಲ್ಲಿ ಮಿಕ್ಕ ಅನುಕೂಲವಾದ ಅವ ಕಡೆ ಬೇಕಾದರೂ ಹೆಚ್ಚು ಬಾಡಿಗೆಯಿಲ್ಲದೆ ವಾಸವಾಗಿರಬಹುದೆಂದು ಅಲ್ಲಿದ್ದ ದಂಪತಿಗಳಿಗೆ ಹೇಳಿ ಕಳುಹಿಸಿದನು.

ಆ ದಿನ ಸಾಯಂಕಾಲವೇ ಆರೋ ಒಬ್ಬ ಅಜ್ಞಾತನಾಮಕನಾದ ದೊಡ್ಡ ಮನುಷ್ಯನು ಮಲಯಪಟ್ಟಣದ ವಾಳೆಯದಲ್ಲಿ ಒಂದು ಗುಡಿಸಲನ್ನು ಹೊಕ್ಕು ಅಲ್ಲಿ ಸುಮಾರು ಎರಡು ಗಳಿಗೆಯವರೆಗೆ, ಹಿಂದೆ ಇದ್ದು ಸತ್ತು ಅಥವಾ ದೇಶಾಂತರ ಹೋದ ವರ ವರ್ತಮಾನಗಳನ್ನು ಕೇಳಿ, ಅಲ್ಲಿಂದ ಹೊರಡುವಾಗ ತನ್ನ ಜತೆಯಲ್ಲಿ ಬಂದಿದ್ದ ನಾವಿಕನೊಬ್ಬನಿಗೆ ಕೆಲವು ಮಾತುಗಳನ್ನು ಹೇಳಿ ಹೊರಟುಹೋದನು. ಬೆಳಗಾದ ಕೂಡಲೆ ರಾತ್ರಿ ದೊಡ್ಡ ಮನುಷ್ಯನ ಜತೆಯಲ್ಲಿ ಬಂದಿದ್ದ ನಾವಿಕನು ಆ ಗುಡಿಸಲಿನಲ್ಲಿದ್ದ ಬೆಸ್ತನಿಗೆ ಮೀನ ಹಿಡಿಯಲು ಅನುಕೂಲವಾದ ಒಂದು ಹೊಸ ದೋಣಿಯನ್ನೂ ಅದಕ್ಕೆ ಬೇಕಾದ ಇತರ ಸಾಮಾನುಗಳನ್ನೂ ಉಚಿತವಾಗಿ ಕೊಟ್ಟು ಹೋದನು. ಜಯಲಕ್ಷ್ಮಿಯ ನಾವಿಕನೂ, ನಾಲ್ಕನೆಯ ಮಹಡಿಯಲ್ಲಿದ್ದ ನೂತನ ದಂಪತಿಗಳೂ, ವಾಳೆಯದ ಬೆಸ್ತನೂ ಅಜ್ಞಾತನಾಮಕನು ಮಾಡಿದ ಒಹುಮಾನಗಳಿಗೆ ಸಂತೋಷಪಟ್ಟು ಅವನನ್ನು ಕೊಂಡಾಡುತ್ತಲಿದ್ದರು.

ಇಪ್ಪತ್ತನೆಯ ಅಧ್ಯಾಯ

" ಮನೋರಂಜಿನೀ "

ಮಲಯಪಟ್ಟಣದಿಂದ ಉತ್ತರಕ್ಕೆ ಹೋಗುವ ದೊಡ್ಡ ದಾರಿಯಲ್ಲಿ ಸುಮಾರು ಏಳೆಂಟು ಮೈಲಿ ದೂರದಲ್ಲಿ ಬಂದು ಅನ್ನಶಾಲೆಯು ಇದ್ದಿತು. ಆ ಕಡೆ ವ್ಯಾಪಾರಿಗಾರರೂ ಪ್ರಯಾಣಿಕರೂ ವಿಶೇಷವಾಗಿ ಸಂಚಾರಮಾಡುತ್ತಲಿದ್ದುದರಿಂದ ಎಲ್ಲರೂ ಆ ಶಾಲೆಯಲ್ಲಿ ಇಳಿದು ಊಟಮಾಡಿಕ್ಕೊಂಡು ಮುಂದೆ ಹೋಗುತ್ತಲಿದ್ದರು. ಈ ಮನೆಗೆ ಸೇರಿದಂತಿದ್ದ ಉದ್ಯಾನವು ಹೂವಿನ ತೋಟಗಳಿಂದಲೂ, ಲತಾಗೃಹಗಳಿಂದಲೂ, ಅಲ್ಲಲ್ಲಿ ಅಪೂರ್ವವಾದ ಸ್ಥಲಗಳಿಂದ ತುಂಬಿದ ವೃಕ್ಷಗಳಿಂದಲೂ, ಆಟಪಾಟಗಳಿಗೆ ಅನುಕೂಲವಾದ ಸ್ಥಳಗಳಿಂದಲೂ ರಮ್ಯವಾಗಿದ್ದಿತು. ಭೋಜನಶಾಲೆಯು ಒಳಗೆ ಚಿತ್ರವಿಚಿತ್ರಗಳಾದ ಪಟಗಳಿಂದಲೂ ಕುರ್ಚಿ ಮೇಜು ಮಂಚಗಳೇ ಮೊದಲಾದ ಸಾಮಾನುಗಳಿಂದಲೂ ಅಲಂಕೃತವಾಗಿ ನೋಡುವವರ ಮನಸ್ಸನ್ನು ಆಕರ್ಷಿಸುತ್ತಾ ಮನೋರಂಜಿನೀ ಎಂಬ ತನ್ನ ಹೆಸರನ್ನು ಸಾರ್ಥಕಮಾಡಿಕೊಳ್ಳುತಿದ್ದಿತು. ಆದುದರಿಂದಲೇ ಅನೇಕರು ಅಲ್ಲಿಗೆ ವಿಹಾರಾರ್ಥವಾಗಿ ಕೂಡ ಹೋಗುತ್ತಲಿದ್ದರು. ಈಚೆಗೆ, ಎಂದರೆ ಸುಮಾರು ನಾಲ್ಕೈದು ವರ್ಷಗಳ ಹಿಂದೆ, ಪ್ರಯಾಣಿಕರ ಅನುಕೂಲಕ್ಕಾಗಿಯೂ ವ್ಯಾಪಾರದ ಸೌಕರ್ಯಕ್ಕಾಗಿಯೂ ಸರ್ಕಾರದವರು ಸಮುದ್ರತೀರದಲ್ಲಿ ಬಂದು ದೊಡ್ಡ ಕಾಲುವೆಯನ್ನು ತೋಡಿಸಿದರು. ಅದು ಸುಗಮವಾಗಿಯೂ, ಅನುಕೂಲವಾಗಿಯೂ, ಸುಲಭವಾಗಿಯೂ ಇದ್ದುದರಿಂದ ಎಲ್ಲರೂ ಆ ಕಾಲುವೆಯಲ್ಲಿಯೇ ಹೋಗಿಬರುತ್ತಿದ್ದರು. ಈ ಹಾದಿಯಲ್ಲಿ ಜನರ ಸುಳಿವೇ ಇಲ್ಲದೆ ಭೋಜನಶಾಲಾಧ್ಯಕ್ಷನ ಆದಾಯವು ಕಡಿಮೆಯಾಗಿ, ಹಿಂದೆ ಸಂಪಾದಿಸಿದ್ದುದನ್ನು ವೆಚ್ಚಮಾಡಿಕೊಂಡು ಜೀವಿಸುತ್ತಲಿದ್ದನು. ಅವನೂ ಅವನ ಹೆಂಡತಿಯೂ ಡಂಭಗಾರರಾದುದರಿಂದ, ಗಳಿಸಿದ್ದ ದ್ರವ್ಯವು ಸ್ವಲ್ಪ ಕಾಲದಲ್ಲಿಯೇ ವೆಚ್ಚವಾಗಿ, ಅಂದಂದಿನ ಕಾಲಕ್ಷೇಪವಾಗುವುದೇ ಕಷ್ಟವಾಗುತ್ತ ಬಂದಿತು. ಹೀಗಿರುವಲ್ಲಿ ಅಲ್ಲಿದ್ದ ಮನೋರಂಜಕವಾಗಿದ್ದ ಪದಾರ್ಥಗಳೆಲ್ಲವೂ ಒಂದೊಂದಾಗಿ ಮಾಯವಾಗುತ್ತ ಬಂದು, ಬಿಯು ಭೋಜನಶಾಲೆಯೂ ಅದರ ಹೆಸರೂ ಮಾತ್ರ ನಿಂತಿದ್ದುವು.

ಆ ಯಜಮಾನನಿಗೆ ಸುಮಾರು ನಲವತ್ತು ಅಥವಾ ನಲವತ್ತೈದು ವಯಸ್ಸಿನ

ಬಹುದು. ಅವನು ಉದ್ದ ; ದೃಢಕಾಯನಾಗಿ ಶರೀರಪುಷ್ಟಿ ಚೆನ್ನಾಗಿದ್ದುದರಿಂದ ಅವನ ಉದ್ದವು ಕಾಣುತ್ತಿರಲಿಲ್ಲ. ಅವನ ಪರಿಚಯವು ನಮ್ಮ ವಾತಕರಿಗೆ ಮೊದಲೇ ಆಗಿದೆ. ಅವನು ಹಿಂದೆ ಚಿಪ್ಪಿಗನ ಕೆಲಸ ಮಾಡುತ್ತಲಿದ್ದು, ಅದರಲ್ಲಿ ಜೀವನಕ್ಕೆ ಅನುಕೂಲವಾಗದೆ, ಇದ್ದ ಆಸ್ತಿಯನ್ನೆಲ್ಲಾ ಮಾರಿ, ಸುಮಾರು ಹನ್ನೆರಡು ವರ್ಷಗಳ ಹಿಂದೆ ಮನೋರಂಜಿನಿಯನ್ನು ಕ್ರಯಕ್ಕೆ ಕೊಂಡು, ಅಲ್ಲಿ ಜನಗಳಿಗೆ ಅನ್ನವನ್ನು ಹಾಕಿ ಜೀವಿಸುತ್ತಲಿದ್ದನು. ಹೀಗೆ ಎರಡು ವರ್ಷಗಳಾದ ಬಳಿಕ ಅವನು ತನ್ನ ಊರಿನ ಕಳಾಕಾಂತೆಯೆಂಬ ಒಬ್ಬ ಹೆಂಗುಸನ್ನು ಮದುವೆಯಾದನು. ಅವಳು ಆಗ ದೃಢಕಾಯಳಾಗಿದ್ದಳು ; ಈಚೆಗೆ, ಎಂದರೆ ಸುಮಾರು ಎರಡು ವರುಷಗಳಿಂದ, ಆಗಾಗ ಅವಳಿಗೆ ಚಳಿಜ್ವರ ಬರುತ್ತಲಿದ್ದುದರಿಂದ ಮೈಯ್ಯೆಲ್ಲ ಕೃಶವಾಗಿ ಆವಾಗಲೂ ಒಂದು ಬರಗು ಮಂಚದ ಮೇಲೆ ಮಲಗಿಕೊಂಡೇ ಇರುವಳು.

ಈ ಶಾಲೆಯ ಅಧ್ಯಕ್ಷನು ಕದರ್ಥಕನೆಂದು ನಮ್ಮ ವಾತಕರು ಆವಾಗಲೇ ಊಹಿಸಿರಬಹುದು. ಇವನು ಆ ಮಾರ್ಗದಲ್ಲಿ ತನ್ನ ಶಾಲೆಯಲ್ಲಿ ಊಟಮಾಡಲಿಕ್ಕೆ ಯಾರಾದರೂ ಬರುವರೋ ಎಂದು ಪ್ರತಿನಿತ್ಯವೂ ಮನೆಯ ಜಾಗಿಲಿನಲ್ಲಿ ಬೆಳಗಿನಿಂದ ಸಾಯಂಕಾಲದ ವರೆಗೂ ನೋಡಿ, ಆರೂ ಜಾರದೇ ಇರುವುದನ್ನು ಕಂಡು, ಗೊಣಗುಟ್ಟುತ್ತ ಒಳಗೆ ಹೋಗುತ್ತಲಿದ್ದನು ; ಕಳಾಕಾಂತೆಯು ಮತ್ತಷ್ಟು ಗೊಣಗುಟ್ಟುವಳು. ಆಗ ಕದರ್ಥಕನು ದೈವಕೃಪೆಯಿದ್ದಂತಾಗಲಿ ಎಂದು ಅವಳಿಗೆ ಸಮಾಧಾನ ಹೇಳುತ್ತಲಿದ್ದನು.

ಒಂದು ದಿನ ಕದರ್ಥಕನು ಎಂದಿನಂತೆ ಜಾಗಿಲಲ್ಲಿ ನಿಂದಿರಲು, ದೂರದಲ್ಲಿ ಒಂದು ಅರಬ್ಬಿ ಕುದುರೆಯ ಮೇಲೆ ಅವನೋ ಒಬ್ಬನು ಮಲಯಪಟ್ಟಣದ ಕಡೆಯಿಂದ ತನ್ನ ಮನೆಯ ಕಡೆಗೆ ಬರುತ್ತ, ಅಲ್ಲಿ ಹುಲಗಯಲ್ಲಿ ದೊಡ್ಡದಾಗಿ ಬರೆದಿದ್ದ " ಮನೋರಂಜಿನೀ " ಎಂಬ ಹೆಸರನ್ನು ನೋಡಿ ನಿಂತನು. ಆಗ ಕದರ್ಥಕನು ಅವನ ಸಮೀಪಕ್ಕೆ ಹೋಗಿ ಅವನು ಸನ್ಯಾಸಿಯೆಂದು ತಿಳಿದು ಅವನಿಗೆ ತಕ್ಕ ಮರ್ಯಾದೆಯನ್ನು ಮಾಡಲು, ಸನ್ಯಾಸಿಯು ಮನೋರಂಜಿನಿಯು ಇದೇಯೋ? ಇದರ ಯಜಮಾನನಾರು ? ಅವನು ಎಲ್ಲಿರುವನು ? ಎಂದು ಕೇಳಿದನು. ಆದಕ್ಕೆ ಕದರ್ಥಕನು ಸ್ವಾಮೀ ! ಇದೇ

ಮನೋರಂಜಿನೀ ; ಇದರ ಯಜಮಾನನು ನಾನೇ. ತಾವು ಕೆಳಗಿಳಿದು ಮನೆಯೊಳಗೆ ಸ್ವಲ್ಪ ವಿಶ್ರಮಿಸಿಕೊಳ್ಳಬೇಕು ಎಂದನು.

ಒಡನೆಯೇ ಸನ್ಯಾಸಿಯು ಕೆಳಗಿಳಿದು ಕುದುರೆಯನ್ನು ಸಮೀಪದಲ್ಲಿದ್ದ ಒಂದು ಮರಕ್ಕೆ ಕಟ್ಟಿ ಒಳಕ್ಕೆ ಹೋದನು. ಕದರ್ಧಕನು ಅವಸರದಿಂದ ಸನ್ಯಾಸಿಯ ಹಿಂದೆ ಓಡಿ ಒಳಗಿದ್ದ ಕುರ್ಚಿಗಳಲ್ಲಿ ಒಂದರ ದೂಳನ್ನೊರಸಿ ಹಾಕಿ, ತನಗೆ ಮತ್ತೊಂದನ್ನು ಅದರ ಎದುರಿಗೆ ಹಾಕಿಕೊಂಡನು. ಸನ್ಯಾಸಿಯು ಕುರ್ಚಿಯಲ್ಲಿ ಕೂರುತಲೆ, ಕದರ್ಧಕನು ತಮಗೇನು ಬೇಕು, ಅದನ್ನು ತಿಳಿಸಿದರೆ ಶಿರಸಾವಹಿಸಿ ತಂದು ಕೊಡುವೆನು ಎಂದನು. ಸನ್ಯಾಸಿಯು ಆತನ ಮುಖವನ್ನು ಗುರುತಿಸಿ ನೋಡಿ ಆತನು ತನ್ನ ಮುಖವನ್ನು ಅದೇ ರೀತಿ ಗುರುತಿಸಿ ನೋಡಲಪೇಕ್ಷಿಸುವಂತೆ ಸ್ವಲ್ಪಕಾಲ ಸುಮ್ಮನಿದ್ದು, ಅನಂತರ ಕದರ್ಧಕನೆಂಬುವನು ನೀನೇಯೋ ಎಂದನು.

ನಾನೇ ಅವನು ; ತಾವು ಯಾರು ? ಎಲ್ಲಿಂದ ಬಿಜಯಮಾಡಿಸಿದಿರಿ ? ತಮಗೇನು ಬೇಕು ?

ನಾನೊಬ್ಬ ಪರದೇಶಿ ; ನನ್ನ ಹೆಸರು ನಿರ್ಮಲಾನಂದ ; ನಾನು ದೇಶಾಟನೆ ಮಾಡಿಕೊಂಡು ತಿರಿಯುತ್ತಲಿರುವೆನು.

ತಾವು ಬಿಜಯಮಾಡಿಸಿದುದು ಬಹಳ ಸಂತೋಷ. ತಮಗೇನು ಬೇಕು ? ಅಪ್ಪಣೆಯಾಗಲಿ.

ನೀನು ಮಲಯಪಟ್ಟಣದಲ್ಲಿ ರಾಜಬೀದಿಯ ಕಾಳಿಕಾಗುಡಿಯ ಅಡ್ಡರಸ್ತೆ ನಾಲ್ಕಂಸ್ತಿನ ಮನೆಯಲ್ಲಿ ಆನಾಗಲಾದರೂ ವಾಸವಾಗಿದ್ದೆಯೋ ?

ಅಹುದು.

ಆನಾಗ ಚಪ್ಪಗನ ಕೆಲಸವನ್ನು ಮಾಡುತ್ತಲಿದ್ದೆಯೋ ?

ಇದ್ದೆ ; ಆದರೆ ಆ ಕೆಲಸದಲ್ಲಿ ವರಮಾನ ಕಡಿಮೆಯಾದುದರಿಂದ ಅದನ್ನು ಬಿಟ್ಟು ಇಲ್ಲಿ ಬಂದೆ. ತಾವು ಬೆಸಿಲಿನಲ್ಲಿ ಬಂದು ದಣಿದಿದ್ದೀರಿ ; ಏನಾದರೂ ಸ್ವಲ್ಪ ಫಲಾಹಾರ ತೆಗೆದುಕೊಂಡರೆ ವಾಸಿಯಲ್ಲವೇ ?

ಒಳ್ಳೆಯ ಪದಾರ್ಥಗಳಿದ್ದರೆ ಆಗಲಿ ಎಂದು ಸನ್ಯಾಸಿಯು ಹೇಳುತಲೆ, ಕದರ್ಧ

ಕನು ಒಳಗೆ ಹೋಗಿ ತಕ್ಕ ಏರ್ಪಾಡನ್ನು ಮಾಡಿ ಹಿಂದಿರುಗಿ ಬಂದು ಇನ್ನು ಹತ್ತು ನಿಮಿಷಗಳಲ್ಲಿ ಸಿದ್ಧವಾಗುವುವು ಎಂದು ತಿಳಿಸಿದನು.

ನೀನೊಬ್ಬನೇ ಇರುವೆಯೋ?

ನನ್ನ ಹೆಂಡತಿ ಮತ್ತು ಒಬ್ಬ ಆಳು ಏನಾ ಮತ್ತಾರೂ ಇಲ್ಲ. ಆಳು ಅಡಿಗೆಯ ಮನೆಯಲ್ಲಿದ್ದಾನೆ; ಹೆಂಡತಿಯು ಜ್ವರದಲ್ಲಿ ನರಳುತ್ತಿರುವುದರಿಂದ ಇದ್ದರೂ ಇಲ್ಲದಂತೆ ಎಂದು ಹೇಳಬಹುದು. ಅವಳು ಆವಾಗಲೂ ಮಹಡಿಯಲ್ಲಿ ಮಲಗಿರುವಳು.

ಓಹೋ! ನಿನಗೆ ಹೆಂಡತಿಯೊಬ್ಬಳು ಇದ್ದಾಳೆಯೋ? ಎಂದು ಸನ್ಯಾಸಿಯು ಸುತ್ತುಮುತ್ತಲು ನೋಡಲು, ಸಂಸಾರಿಯ ಮನೆಯಲ್ಲಿರಬೇಕಾದ ವಸ್ತುಗಳಾವುದನ್ನೂ ಕಾಣದೆ, ಸನ್ಯಾಸಿಯು ಸುತ್ತುನೋಡಿದನೆಂದು ಕದರ್ಥಕನು ಊಹಿಸಿ, ಸ್ವಾಮೀ! ಸರಿಯಾದ ಮಾರ್ಗದಲ್ಲಿ ನಡೆಯುವವರಿಗೆ ದೈವಸಹಾಯವು ಕಡಿಮೆ ಎಂದನು. ಆಗ ನಿರ್ಮಲಾನಂದನು ಅವನ ಮುಖವನ್ನು ನೋಡುತ್ತ, ಹಾಗೆಂದರೇನು ಎಂದುದಕ್ಕೆ, ಸತ್ಯಮಾರ್ಗವನ್ನು ಬಿಟ್ಟು ಎಂದೂ ನಾನು ಹೋದವನಲ್ಲ; ಆದರೂ ದೈವಬಲವು ಕಿಂಚಿತ್ತಾಗಿ ಜೀವನವು ನಡೆಯುವುದೇ ಕಷ್ಟವಾಗಿದೆ ಎಂದು ಸಂಕಟಪಟ್ಟನು.

ಒಳ್ಳೆಯ ಮಾರ್ಗದಲ್ಲಿ ನಡೆಯುತ್ತಲಿದ್ದರೆ ಆವಾಗಲಾದರೂ ಬಿಮ್ಮೆ ದೇವರ ಕೃಪೆಯು ಅಂಧವನ ಮೇಲೆ ಬಿದ್ದೇ ಬೀಳುವುದು.

ತಾವು ಸನ್ಯಾಸಿಗಳಾದುದರಿಂದ ಈರೀತಿ ಹೇಳುವಿರಿ. ನನ್ನ ಅನುಭವದಲ್ಲಿ ಹಾಗಿಲ್ಲ.

ನೀನು ಹಾಗೆ ಹೇಳುವುದು ತಪ್ಪೆಂಬುದನ್ನು ನಾನೇ ಈಗ ನಿನಗೆ ತೋರಿಸಿ ಕೊಡುತ್ತೇನೆ; ನೋಡುವೆಯಂತೆ. ಆದರೆ ನನಗೆ ನೀನೇ ಕದರ್ಥಕನೆಂಬುದನ್ನು ಮೊದಲು ಸ್ಥಿರಪಡಿಸಿಕೊಡು.

ನಾನೇ ಎಂದು ಮೊದಲೇ ಅರಿಕೆಮಾಡಿದ್ದೆ; ಇದರ ಮೇಲೆ ತಮಗೆ ಇನ್ನೇನಾದರೂ ತಿಳಿಯಬೇಕಾಗಿದ್ದರೆ ಪ್ರಶ್ನೆಮಾಡಿದರೆ ತಿಳಿಸುವೆನು.

ಧರ್ಮದೇವನೆಂಬ ನಾಸ್ತಿಕನನ್ನು ನೀನು ಬಲ್ಲೆಯೋ?

ಅಯ್ಯೋ! ನಾನು ಬಲ್ಲೆನೇ! ಅವನು ಜೀವದೊಂದಿಗಿದ್ದಾನೆಯೇ? ಅವನಿಗೆ ಬಿಡುಗಡೆಯಾಯಿತೇ? ಸುಖವಾಗಿದ್ದಾನೆಯೇ? ತಮಗೇನಾದರೂ ಅವನ ಸಮಾಚಾರ

ತಿಳಿದಿದ್ದರೆ ದಯಮಾಡಿ ತಿಳಿಸಬೇಕು. ಅವನನ್ನು ಸರ್ಕಾರದವರು ಹಿಡಿದುಕೊಂಡು ಹೋದ ಮೇಲೆ ಅವನ ಸುದ್ದಿಯೇ ತಿಳಿಯದು.

ಅವನು ಕಾರಾಗೃಹದಲ್ಲಿ ಸತ್ತನು.

ಮಹಾಸ್ವಾಮೀ! ಒಳ್ಳೆಯವರಿಗೆ ಕಾಲವಿಲ್ಲವೆಂಬುದಕ್ಕೆ ಇದೊಂದು ದೃಷ್ಟಾಂತ. ಅವನಿಗೇನಾಗಿದ್ದಿತು?

ಯೌವನವೂ ದಾರ್ಢ್ಯವೂ ಇರುವವರು ಕಾರಾಗೃಹದಲ್ಲಿ ಹೇಗೆ ಸಾಯುವರು? ಅಲ್ಲಿಯ ಕಷ್ಟವನ್ನನುಭವಿಸಲಾರದೆ ಸತ್ತನು.

ಅಯ್ಯೋ, ಎಂದು ಕದರ್ಥಕನು ಕಂಬನಿಗಳನ್ನು ಸುರಿಸಿದನು.

ನೀನು ಅಳುವುದನ್ನು ನೋಡಿದರೆ ನಿನಗೆ ಅವನಲ್ಲಿ ಪ್ರೇಮವಿದ್ದಿತೆಂದು ತೋರುತ್ತದೆ.

ಅವನನ್ನು ನಾನು ಆವಾಗಲೂ ಪ್ರೀತಿಸುತಲಿದ್ದೆ. ಒಂದು ವೇಳೆ ಮಾತ್ರ, ಎಂದರೆ ಅವನು ಜಯಲಕ್ಷ್ಮಿ ಎಂಬ ಹಡಗಿನ ಅಧಿಪತಿಯಾಗುತಲಿದ್ದಾಗ, ಅವನನ್ನು ನೋಡಿ ನನಗೆ ಹೊಟ್ಟೆಯ ಕಿಚ್ಚಾಯಿತು. ಅದು ಆ ಕ್ಷಣವೇ ಹೋಯಿತು ಎಂದು ಕದರ್ಥಕನು ಕಣ್ಣನ್ನೊರಸಿಕೊಂಡನು.

ಧರ್ಮದೇವನು ತಾನು ಸಾಯುವಾಗ ಕೂಡ ತನ್ನನ್ನು ಅವ ತಪ್ಪಿಗೋಸುಗ ಹಿಡಿದು ಸೆರೆಯಲ್ಲಿಟ್ಟರೋ ಗೊತ್ತಿಲ್ಲವೆಂದು ಗೋಳಿಡುತ್ತ ಸತ್ತನು.

ಅದು ನಿಜ: ಅಯ್ಯೋ ಪಾಪ, ಅವನಿಗೆ ಅದು ತಿಳಿಯುಹು.

ಬಂದಿಮನೆಯಲ್ಲಿ ಅವನ ಜತೆಯಲ್ಲಿ ಅನ್ಯದೇಶದ ಒಬ್ಬ ಹಣಗಾರನಿದ್ದನು. ಅವನು ಅಧಿಕಾರಿಗಳಿಗೆ ವಿಶೇಷವಾಗಿ ಲಂಚವನ್ನು ಕೊಟ್ಟು ಕಾರಾಗೃಹದಿಂದ ಬಿಡುಗಡೆಮಾಡಿಕೊಂಡು ಹೋದನು. ಕಾರಾಗೃಹದಲ್ಲಿರುವಾಗ ಧರ್ಮದೇವನು ತನಗೆ ಸ್ವಲ್ಪ ಸಹಾಯಮಾಡಿದ್ದುದರಿಂದ ತಾನು ಹೋಗುವಾಗ ಕಯ್ಯಲ್ಲಿ ಹಾಕಿದ್ದ ಒಂದು ಒಳ್ಳೆಯ ವಜ್ರದ ಉಂಗುರವನ್ನು ತನ್ನ ಗುರುತಿಗಾಗಿ ಅವನಿಗೆ ಕೊಟ್ಟನು. ಲಂಚ ಕೊಟ್ಟು ಬಿಡುಗಡೆಮಾಡಿಕ್ಕೊಳ್ಳುವುದಕ್ಕೆ ಬದಲಾಗಿ ಧರ್ಮದೇವನು ತನಗೆ ಬಿಡುಗಡೆಯಾದ ಮೇಲೆ ಜೀವನೋಪಾಯಕ್ಕಿರಲೆಂದು ಆ ಉಂಗುರವನ್ನು ಇಟ್ಟುಕೊಂಡಿದ್ದನು.

ಆ ಉಂಗುರವು ಬೆಲೆಯುಳ್ಳದೋ ?

ಅದರ ಬೆಲೆ ಸುಮಾರು ಐವತ್ತುಸಾವಿರ ಪರಹಗಳು. ಧರ್ಮದೇವನಂಥವರಿಗೆ ಅದು ದೊಡ್ಡ ಆಸ್ತಿಯಲ್ಲವೇ ?

ಆ ಉಂಗುರವನ್ನು ಧರ್ಮದೇವನು ತನ್ನ ಜೀವನೋಪಾಯಕ್ಕೆ ಇಟ್ಟುಕೊಂಡಿದ್ದ ನೆಂದು ತಾವು ಹೇಳುತ್ತಲಿದ್ದಿರಿ.

ಅಹುದು. ಅವನು ಸಾಯುವಾಗ ' ನನಗೆ ಐದುಜನ ಆಪ್ತರಿರುವರು ; ನನ್ನ ಕಷ್ಟಕ್ಕಾಗಿಯೂ, ನಾನು ಸತ್ತುದಕ್ಕಾಗಿಯೂ, ಅವರು ವ್ಯಸನಪಡುತ್ತಲಿರುವರು. ಅವರನ್ನು ವಿಚಾರಿಸಿ, ನನ್ನ ವಿಷಯದಲ್ಲಿ ಅವರೆಲ್ಲರೂ ನಿರ್ವಂಚಕರಾಗಿದ್ದರೆಂದು ತಮಗೆ ತಿಳಿದರೆ, ಆ ಉಂಗರದ ಬೆಲೆಯನ್ನು ಅವರಿಗೆ ಹಂಚಿಕೊಡಿರಿ ' ಎಂದು ಹೇಳಿ ನನ್ನಲ್ಲಿ ಕೊಟ್ಟನು.

ಆ ಐದು ಜನಗಳಾರೆಂದು ಅವನು ಹೇಳಿದನೋ ?

ಹೂಂ, ಹೇಳಿದ. " ಮೊದಲನೆಯವನು ಕದರ್ಥಕನು ; ಎರಡನೆಯವನು ನನ್ನ ಸಂಗಡ ಜಯಲಕ್ಷ್ಮಿಯಲ್ಲಿದ್ದ ದುರ್ಮತಿಯು ; ಇವನು ಸ್ವಲ್ಪ ಅಸೂಯಾಪರನಾವರೂ ಒಳ್ಳೆಯವನು. ಮೂರನೆಯವನು ನಾನು ಮದುವೆಯಾಗಬೇಕೆಂದಿದ್ದ ಯುವತಿಯ ಬಂಧು ವಿಷಯಲಂಪಟನೆಂಬುವನು ; ಇವನು ಆ ಯುವತಿಯನ್ನು ಪೋಷಿಸುತ್ತ ಲಿದ್ದರೂ, ನನ್ನನ್ನು ಅತಿಪ್ರೀತಿಯಿಂದ ಕಾಣುತ್ತಲಿದ್ದನು ನಾಲ್ಕನೆಯವಳು ನಾನು ಮದುವೆಯಾಗಬೇಕೆಂದಿದ್ದ ; " ತಾಳು, ತಾಳು, ಅವಳ ಹೆಸರು ಮರೆತುಹೋಯಿತು.

ಲಲಿತಾಂಗಿಯಲ್ಲವೇ ಎಂದು ಕದರ್ಥಕನು ಕೇಳುತಲೆ, ಹಾ ! ಅಹುದು ಎಂದು ಸನ್ಯಾಸಿಯು ಸಂಕಟಪಟ್ಟು, ಕೂಡಲೇ ಸಮಾಧಾನವನ್ನು ತಾಳಿ, ' ನಾನು ಈಗ ಏನ ಹೇಳುತಲಿದ್ದೆ ' ?

ನಾಲ್ಕನೆಯವಳು ಲಲಿತಾಂಗಿ.

ಸರಿಸರಿ. ಐದನೆಯವನು ಧರ್ಮದೇವನ ತಂದೆ ಭುಜಂಗಭೂಷಣನೆಂಬುವನು. ನಾನು ವಿಚಾರಿಸಿದುದರಲ್ಲಿ ಇವನು ಬಹಳ ದಿವಸಗಳ ಹಿಂದೆ ಸತ್ತುಹೋದನೆಂದು ತಿಳಿಯಿತು. ಅವನು ಹೇಗೆ ಸತ್ತನೆಂಬುದು ಗೊತ್ತಾಗಲಿಲ್ಲ.

ಹೇಗೆ ? ಹೊಟ್ಟೆಗಿಲ್ಲದೆ ಪ್ರಾಣವನ್ನು ಬಿಟ್ಟನು. ಇದನ್ನು ನಾನು ಚೆನ್ನಾಗಿ ಬಲ್ಲೆ.

ಮುದುಕನಿಗಾರೂ ಸಹಾಯಕರಿರಲಿಲ್ಲವೇ? ಮೇಲೆ ಹೇಳಿದ ಧರ್ಮದೇವನ ನಾಲ್ಕು ಜನ ಆಪ್ತಸ್ನೇಹಿತರು ಸುಮ್ಮನಿದ್ದರೆ?

ಅವನು ಸಾಯುವ ಪರಿಗೆ ಲಲಿತಾಂಗಿಯು ಸಂಗಡಲೇ ಇದ್ದಳು. ಅವನ ಸಹಾಯಾರ್ಥವಾಗಿ ಧನಕೋಟಿಯು

ಅವನಾರು?

ಜಯಲಕ್ಷ್ಮಿಯ ಯಜಮಾನ.

ಧನಕೋಟಿಯು ಏನ ಮಾಡಿದ?

ಒಂದು ಚೀಲದ ತುಂಬ ವರಹಗಳನ್ನು ತಂದಿಟ್ಟಿದ್ದನು. ಮುದುಕನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಉಪಚಾರಮಾಡಬೇಕೆಂದು ಲಲಿತಾಂಗಿಯು ಎಷ್ಟೋ ಪ್ರಯತ್ನಪಟ್ಟರೂ, ಅವನು ಅದಕ್ಕೊಪ್ಪದೆ "ನಾನಿದ್ದ ಕಡೆಯಲ್ಲೇ ಇರುವೆನು; ಒಂದು ವೇಳೆ ನನ್ನ ಮಗನು ಬಿಡುಗಡೆಯಾಗಿ ಬಂದರೆ ಮೊದಲು ನನ್ನನ್ನು ನೋಡಲು ಇಲ್ಲಿಗೆ ಬರುವನು; ಆದುದರಿಂದ ನಾನು ಇಲ್ಲಿ ಬಿಟ್ಟು ಎಲ್ಲಿಗೂ ಹೋಗುವುದಿಲ್ಲ" ಎಂದು ಹಟಹಿಡಿದು, ಕೆಲವು ಕಾಲ ಆಹಾರವನ್ನು ತೆಗೆದುಕೊಳ್ಳದೇ ಇದ್ದನು. ಆಗ ಲಲಿತಾಂಗಿಯು ನಿಮ್ಮ ಕುಮಾರರು ಬಂಧನಾಲಯದಿಂದ ಬರುವವರೆಗಾದರೂ ನೀವು ಜೀವಿಸಿರಬೇಕು; ಇಲ್ಲವಾದರೆ ಅವರು ಪ್ರಾಣವನ್ನಿಡರು ಎಂದು ಈ ಉಪಾಯಗಳಿಂದ ಅವನಿಗೆ ಸ್ವಲ್ಪಸ್ವಲ್ಪ ಆಹಾರವನ್ನು ಕೊಡುತ್ತಿದ್ದಳು. ಹೀಗೆ ಸುಮಾರು ಒಂದು ವರ್ಷವಿದ್ದು, ಮಗನು ಜೀವಸಹಿತನಿದ್ದಿದ್ದರೆ ಇಷ್ಟು ದಿವಸಗಳಲ್ಲಿ ಬರುತ್ತಲಿದ್ದನು; ಅವನು ಸತ್ತಿರಬೇಕು ಎಂದು ಕೊರಗುತ್ತ, ಲಲಿತಾಂಗಿಯ ತೊಡೆಯ ಮೇಲೆ ತಲೆಯನ್ನಿಟ್ಟುಕೊಂಡು ಪ್ರಾಣಬಿಟ್ಟನು. ಅವಳನ್ನು ನೋಡಿಕೊಂಡು ಹೋಗಲು ಆಗಾಗ ವಿಷಯಲಂಪಟನು ಭುಜಂಗಭೂಷಣನ ಮನೆಗೆ ಬರುತ್ತಲಿದ್ದನು. ಭುಜಂಗಭೂಷಣನಿಗೆ ಅವನನ್ನು ಕಂಡರೆ ಆಗುತ್ತಿರಲಿಲ್ಲ.

ಅದು ಏಕೆ?

ಧರ್ಮದೇವನನ್ನು ಕೊಂದಾದರೂ ಅವನು ವರಿಸಿದ್ದ ಲಲಿತಾಂಗಿಯನ್ನು ತಾನು ಮದುವೆಯಾಗಬೇಕೆಂದು ವಿಷಯಲಂಪಟನಿಗೆ ಮನಸ್ಸಿದ್ದಿತು. ಇದು ಭುಜಂಗಭೂಷಣನಿಗೆ ಹೇಗೆಯೋ ತಿಳಿದಿತ್ತು.

ಹಾಗಾದರೆ ಧರ್ಮದೇವನು ವಿಷಯಲಂಪಟನ ವಿಷಯದಲ್ಲಿ ಪೋಸಹೋಗಿದ್ದಂತೆ ತೋರುತ್ತದೆ.

ಅದಕ್ಕೆ ಸಂದೇಹವೇ ಇಲ್ಲ ಎಂದು ಕದರ್ಥಕನು ಹೇಳುತಲೆ, ತನ್ನ ಗಂಡನ ಸಂಗಡ ಆರೋ ಬಂದು ಮಾತನಾಡುತ್ತಲಿರುವರೆಂದು ತಿಳಿದು, ಮೇಲಿನಿಂದ ಅರ್ಧ ದೂರ ಇಳಿದು ಬಂದು, ಮೆಟ್ಟಿಲಿನ ಮೇಲೆ ಕುಳಿತಿದ್ದ ಕಳಾಕಾಂತೆಯು ದೊಡ್ಡವರ ಮಾತು ನಮಗೇಕೆ ಎಂದು ಗಂಡನಿಗೆ ಹೇಳಲು, ಅವನು ಅದು ಸರಿ ಎಂದು ಮುಂದೆ ಅವುದನ್ನೂ ಹೇಳದೆ ಸುಮ್ಮನಾದನು.

ಆಗ ನಿರ್ಮಲಾನಂದನು ಉಂಗುರವನ್ನು ಹೊರಗೆ ತೆಗೆದು ತಳತಳನೆ ಮಿನುಗುತ್ತಲಿರುವ ವಜ್ರವನ್ನು ಕದರ್ಥಕನಿಗೆ ಕಾಣುವಂತೆ ನೋಡುತ್ತ, ಧರ್ಮದೇವನು ತನಗೆ ಆಪ್ತರಾಗಿಯೂ ಸ್ನೇಹಿತರಾಗಿಯೂ ಇರುವವರಿಗೆ ಇದರ ಬೆಲೆಯನ್ನು ಹಂಚಿ ಕೊಡುವಂತೆ ಕೊಟ್ಟನು. ಸಮಾಚಾರವು ಸರಿಯಾಗಿ ತಿಳಿದರೆ ಕ್ರಮವಾಗಿ ವಿನಿಯೋಗಿಸಬಹುದು; ಇಲ್ಲವಾದರೆ ಇದರ ದುಡ್ಡನ್ನು ಯತ್ನವಿಲ್ಲದೆ ಆವುದಾದರೂ ಒಂದು ಧರ್ಮಕೆಲಸಕ್ಕೆ ಕೊಡಬೇಕಾಗುವುದು ಎಂದು ಹೇಳಿ ಅಲ್ಲಿಂದ ಹೊರಡುವ ಪ್ರಯತ್ನ ಮಾಡಿದನು.

ಸನ್ಯಾಸಿಯು ಹೊರಟು ಹೋದನೆ ಅವನಿಗಾಗಿ ಮಾಡಿದ ಫಲಾಹಾರವು ವ್ಯರ್ಥವಾಗುವುದಲ್ಲದೆ, ಉಂಗುರವನ್ನು ಮಾರಿ ತನ್ನ ಪಾಲಿಗೆ ಬರುವ ದುಡ್ಡೂ ಹೋಗುವುದೆಂದು ಯೋಚಿಸಿ, ಕದರ್ಥಕನು ಹೆಂಡತಿಯನ್ನು ನೋಡಿ, ಇದೇ ಉಂಗುರ ನೋಡು, ಬಾ. ಇದು ಅಮೌಲ್ಯವಾದ ವಜ್ರ ಎಂದನು. ಆಗ ಅವಳು ಇಳಿದ ಬಂದು ಅವ ವಜ್ರವೆಂದು ಕೇಳಿದುದಕೆ, ಕದರ್ಥಕನು ನಾವು ಮಾತನಾಡುತ್ತಲಿದ್ದುದನ್ನು ನೀನು ಪೂರ್ತಿಯಾಗಿ ಕೇಳಲಿಲ್ಲವೆಂದು ತೋರುತ್ತಲಿದೆ. ನನ್ನ ಸ್ನೇಹಿತ ಧರ್ಮದೇವನೆಂಬುವನು ತಾನು ಸಾಯುವಾಗ ತನ್ನ ಸ್ನೇಹಿತರಿಗೆ ಇದರ ಬೆಲೆಯನ್ನು ಭಾಗ ಮಾಡಿಕೊಡುವಂತೆ ಈ ಸನ್ಯಾಸಿಯಲ್ಲಿ ಕೊಟ್ಟ ವಜ್ರದುಂಗುರ. ಇದರಲ್ಲಿ ಐದರಲ್ಲಿ ಒಂದು ಭಾಗ ನನಗೆ ಬರುತ್ತದೆ ಎಂದನು.

ಇದರ ಬೆಲೆಯೆಷ್ಟು? ಎಂದು ಕಳಾಕಾಂತೆಯು ಕೇಳಿದುದಕೆ, ಆನಂದನು

ಐವತ್ತುನಾವಿರ ವರಹಗಳು; ಇದರಲ್ಲಿ ಐದರಲ್ಲಿ ಒಂದು ಭಾಗವಲ್ಲದೆ ಸತ್ತ ಭುಜಂಗ ಭೂಷಣನ ಆಸ್ತಿಯಲ್ಲಿಯೂ ನಾಲ್ಕರಲ್ಲಿ ಒಂದು ಭಾಗವು ನಿನಗೆ ಸಿಕ್ಕುವುದು ಎಂದನು.

ಆಗ ಕಳಾಕಾಂತೆಯು ಹೇಗೆ ನಾಲ್ಕು ಭಾಗ? ಎಂದು ಆನಂದನನ್ನು ಕೇಳಲು, ಅವನು ಧರ್ಮದೇವನಿಗೆ ಆಪ್ತರಾಗಿದ್ದ ಐದರಲ್ಲಿ ಒಬ್ಬನು ಸತ್ತುಹೋದುದರಿಂದ, ಉಳಿದವರು ನಾಲ್ವರೇ ಎಂದನು.

ಧರ್ಮದೇವನ ನಾಶವನ್ನು ಅರಿಸಿ ಕದಳ್ಯನುಕೂಲವಾದ ಕೆಲಸಗಳನ್ನು ಮಾಡಿದ ದುರ್ಮತಿನಿಷಯಲಂಪಟರು ಆಪ್ತರೋ? ಹಗೆಗಳೋ?

ಅಮ್ಮಾ, ಹಗೆಗಳಿಗೆ ನಾನು ಯಾವ ಭಾಗವನ್ನೂ ಕೊಡಲಾರೆ ಎಂದು ಆನಂದನು ಹೇಳುತಲೆ, ಕದಳ್ಯಕನೂ ಕಳಾಕಾಂತೆಯೂ ನಿಕಾಂತದಲ್ಲಿ ಕೆಲವು ಮಾತುಗಳನ್ನಾಡಿಕೊಂಡು ಆನಂದನಿಗೆ ನಾವು ನಿಜವನ್ನು ಹೇಳಿದರೆ ಲಲಿತಾಂಗಿಗೆ ಕೂಡ ಇದರಲ್ಲಿ ಭಾಗವು ದೊರೆಯಲಾರದು; ಬುಂಗುರವು ನಮ್ಮದೇ ಆಗುವುದು ಎಂದು ಯೋಚಿಸಿದರು. ಆದರೆ, ಕಳಾಕಾಂತೆಯು ದುರ್ಮತಿನಿಷಯಲಂಪಟರು ಈಗ ಹಣಗಾರರಾಗಿ ದೊಡ್ಡ ಮನುಷ್ಯರೆಂದೆಣಿಸಿಕೊಂಡಿರುವರು; ಅವರ ಸಮಾಚಾರವನ್ನು ನಮಗೆ ಗುರುತು ಪರಿಚಯವಾವುದೂ ಇಲ್ಲದ ಈ ಸನ್ಯಾಸಿಗೆ ತಿಳಿಸುವುದು ಉಪಾಯ: ಇದರ ಮೇಲೆ ನಿನ್ನ ಇಷ್ಟ ಎಂದು ಹೇಳೆ ಮಹಡಿಯನ್ನು ಸೇರಿದಳು.

ಸನ್ಯಾಸಿಯು ಕದಳ್ಯಕನನ್ನು ನೋಡಿ ಸನಗಾಗಿ ಫಲಾಹಾರವನ್ನು ಮಾಡಿಸಿದೆಯಲ್ಲಾ, ಅದನ್ನು ಕೊಟ್ಟರೆ ಬಾಯಲ್ಲಿ ದಾಕಿಕೊಂಡು ಮುಂದಕ್ಕೆ ಹೊರಡುವೆನು ಎಂದನು.

ಸ್ವಾಮೀ! ತಾವು ಇರಿ. ತಾವು ಫಲಾಹಾರ ಮಾಡುವಾಗ ಇತಕ್ಕೆ ಸಂಗತಿಯನ್ನು ನಿಜವಾಗಿ ತಮಗೆ ತಿಳಿಸುತ್ತೇನೆ ಎಂದು ಫಲಾಹಾರದ ಸಾಮಾನುಗಳನ್ನು ತಂದಿಟ್ಟು, ಸ್ವಾಮೀ! ತಮ್ಮಪ್ಪನೆಯಾದರೆ ನಾವು ಮಾತನಾಡುತ್ತಲಿರುವಾಗ ಆರೂ ಬಂದು ನಮ್ಮನ್ನು ತೊಂದರೆ ಮಾಡದಂತೆಯೂ, ನಾವು ಆಡುವ ಮಾತನ್ನು ಆರೂ ಕೇಳದಂತೆಯೂ ಬಾಗಿಲನ್ನೂ ಕಿಟಕಿಗಳನ್ನೂ ಮುಚ್ಚುವೆನು ಎಂದನು. ನಿರ್ಮಲಾನಂದನು ಅದಕ್ಕೆ ಒಪ್ಪಿ ಕುರ್ಚಿಯನ್ನೂ ಫಲಾಹಾರದ ತಟ್ಟೆಯನ್ನೂ ಸುಮಾರು ಕತ್ತಲಾ

ಗಿದ್ದ ಬಂದು ಮೂಲೆಗೆ ತೆಗೆದುಕೊಂಡು ಹೋಗಿ ಅಲ್ಲಿ ಕುಳಿತನು. ಕದರ್ಥಕನು ಸ್ವಲ್ಪದೂರದಲ್ಲಿ ಕುಳಿತು ಸ್ವಾಮೀ! ಪ್ರಾರಂಭಿಸಲೋ, ಎಂದನು.

ಅವ್ಹಾ! ನಿನಗಿಷ್ಟವಾದರೆ ಹೇಳು, ಇಲ್ಲವಾದರೆ ಬೇಡ.

ನಾನೇನೋ ಇದ್ದ ಸಂಗತಿಯನ್ನು ತಮಗೆ ಹೇಳಬೇಕೆಂದು ನಿಶ್ಚಯಿಸಿದೇನೆ. ಆದರೆ, ತಾವು ನನಗೆ ಒಂದು ಮಾತನ್ನು ಕೊಡಬೇಕು. ಅದೇನು?

ನಾನು ಈಗ ತಮಗೆ ತಿಳಿಸುವ ಸಮಾಚಾರಗಳನ್ನು ನನ್ನಿಂದ ತಾವು ತಿಳಿದುದಾಗಿ ಅರಿಗೂ ಹೇಳಕೂಡದು.

ಅಪ್ಪಾ! ನಾನು ಈ ದೇಶದವನಲ್ಲ, ಮೇಲೂ ಸನ್ಯಾಸಿ. ಈವತ್ತು ಇಲ್ಲಿದ್ದರೆ ನಾಳೆ ಮತ್ತೊಂದು ಕಡೆ ಇರುವೆನು. ಈ ವಿಷಯಗಳನ್ನು ನಾನು ಅರಿಗೆ ಹೇಳಬೇಕಾಗಿಹೆ? ಧರ್ಮದೇವನು ನಾಯುವಾಗ ಶರಣಾಗತನಾಗಿ ಈ ಉಂಗುರವನ್ನು ನನ್ನಲ್ಲಿ ಕೊಟ್ಟು ಅದರ ವಿನಿಯೋಗವನ್ನು ಹೇಳಿದನಾದುದರಿಂದ ನಾನಿಲ್ಲಿಗೆ ಬಂದೆನು. ಇಲ್ಲದಿದ್ದರೆ ನನ್ನ ತಪಸ್ಸಿನಲ್ಲಿಯೂ ಯಾತ್ರೆಯಲ್ಲಿಯೂ ಕಾಲವನ್ನು ಕಳೆಯುತ್ತ ಇರುತ್ತಿದ್ದೆನು.

ಬಳಿಕ ಕದರ್ಥಕನಿಗೆ ಧೈರ್ಯಪ್ರಂಟಾಗಿ, ನಮ್ಮ ಪಾತಕರಿಗೆ ನಾವು ಮೊದಲೇ ತಿಳಿಸಿದ್ದಂತೆ ಸಂಗತಿಯನ್ನೆಲ್ಲಾ ಮೊದಲಿನಿಂದ ಕೊನೆಯ ವರೆಗೂ ಸ್ವಲ್ಪವೂ ತಪ್ಪದೆ ಹೇಳಿಬಿಟ್ಟನು. ಇದನ್ನೆಲ್ಲಾ ಕೇಳಿದ ಬಳಿಕ ದುರ್ಮತಿಯೂ ವಿಷಯಲಂಪಟನೂ ಸರ್ಕಾರಕ್ಕೆ ಹೆಸರಿಲ್ಲದ ಅರ್ಜಿಯನ್ನು ಒರೆದಾಗ ನೀನು ಏತಕ್ಕೆ ಅವರಿಗೆ ಬೇಡವೆಂದು ಹೇಳಲಿಲ್ಲ? ಎಂದು ಸನ್ಯಾಸಿಯು ಕೇಳಿದನು.

ಸ್ವಾಮೀ! ಅವರು ನನಗೆ ಮದ್ಯವನ್ನು ಕುಡಿಸಿದುದರಿಂದ ನಾನು ಮತ್ತನಾಗಿ ಜಿದ್ದಿದ್ದೆನು. ಆದರೂ ಆ ಸ್ಥಿತಿಯಲ್ಲಿ ನಾನೆಷ್ಟು ಹೇಳಬಹುದಾಗಿದ್ದಿತೋ ಅಷ್ಟನ್ನು ಹೇಳಿದೆ. ವಿನೋದಕ್ಕಾಗಿ ಮಾಡಿದುದೇ ಹೊರತು ಮತ್ತೆ ಬೇರೆ ಅಲ್ಲವೆಂದು ಅವರು ನನ್ನನ್ನು ಸಮಾಧಾನಪಡಿಸಿದರು.

ಮಾರನೇ ದಿನ ಧರ್ಮದೇವನನ್ನು ಹಿಡಿಯುವಾಗ ನಿನಗೆ ಜ್ಞಾನ ಸರಿಯಾಗಿದ್ದಿರಬೇಕಲ್ಲವೇ? ಆಗ ಏತಕ್ಕೆ ಅವನಿಗೆ ಈ ವರ್ತಮಾನವನ್ನು ನೀನು ಹೇಳಲಿಲ್ಲ?

ನಾನು ಹೇಳಬೇಕೆಂದು ಸವಿಾಪಕ್ಕೆ ಹೋದೆನು; ಆಗ ದುರ್ಮತಿಯು ಬಂದು

ಒಂದು ವೇಳೆ ಅವನು ಏಲಾದ್ವೀಪಕ್ಕೆ ಹೋಗಿದ್ದುದು ನಿಜವಾಗಿದ್ದರೆ, ನೀನು ಅವನಿಗೆ ಆವ ಸಹಾಯಮಾಡಿದರೂ ನಿನಗೆ ತೊಂದರೆ ಒರುವುದು ಎಂದು ಹೇಳಿ ನನ್ನನ್ನು ಹೆದರಿಸಿ ಬಿಟ್ಟನು. ನನಗೆ ಗಾಬರಿಯಾಗಿ ಸುಮ್ಮನಿದ್ದುಬಿಟ್ಟೆನು.

ಧನಕೋಟಿಯು ಮುದುಕನ ಜೀವನಾರ್ಥವಾಗಿ ಹಣ ಕೊಟ್ಟುದು ನಿಜವೋ?

ನಿಜ ಭುಜಂಗಭೂಷಣನು ಸತ್ತಾಗ ಲಲಿತಾಂಗಿಯು ಅವನ ಸಾಲವನ್ನೆಲ್ಲಾ ತೀರಿಸಿ ಮಿಕ್ಕಿದ್ದುದನ್ನು ಅವನ ಅಪರಕಾರ್ಯಕ್ಕೆ ಉಪಯೋಗಿಸಿ ಹಣದ ಚೀಲವನ್ನು ಬಿಸುಟಿದ್ದಳು ನಾನು ಅದನ್ನು ತೆಗೆದು ಇಟ್ಟಿದ್ದೇನೆ. ಅದೇ ಇದು ಎಂದು ತನ್ನ ಪೆಟ್ಟಿಗೆಯಲ್ಲಿದ್ದ ಒಂದು ಹಳೆಯ ಪಟ್ಟಿಚೀಲವನ್ನು ತಂದು ಸನ್ಯಾಸಿಯ ಮುಂದೆ ಇಟ್ಟನು.

ಈ ಚೀಲದ ತುಂಬ ವರಹಗಳನ್ನು ಕೊಡಬೇಕಾಗಿದ್ದರೆ ಧನಕೋಟಿಯು ತುಂಬ ಹಣಗಾರನಾಗಿಯೂ ಬಹು ಧರ್ಮಿಷ್ಟನಾಗಿಯೂ ಇರಬೇಕು.

ಅಹುದು, ಅವನು ಧನವಂತನಾಗಿಯೇ ಇದ್ದನು; ಈಚೆಗೆ ನನ್ನಂತೆ ಅವನೂ ನಷ್ಟಪಟ್ಟು ದಿವಾಳಿಯಾಗುವುದರಲ್ಲಿದ್ದಾನೆ.

ಅದು ಹೇಗೆ?

ಅವನ ಹಡಗುಗಳಲ್ಲಿ ಕೆಲವು ಮುಳುಗಿ ಹೋದುವು; ಅವನು ಹಣವಿಟ್ಟಿದ್ದ ಧನಾಗಾರಗಳು ಬರಿದಾಗಿ ಹೋದುವು. ಧರ್ಮದೇವನು ನಡಿಸುತ್ತಲಿದ್ದ ಜಯಲಕ್ಷ್ಮಿಯೊಂದೇ ಈಗ ಅವನಿಗೆ ನಿಂತಿರುವುದು. ಅದರಲ್ಲಿ ಬರುವ ಸರಕಿನ ಆಧಾರದ ಮೇಲೆ ಧನಕೋಟಿಯು ಕೆಲವು ಸಾಲಗಳನ್ನು ಮಾಡಿದ್ದಾನೆ. ಅದು ಇಷ್ಟು ದಿವಸಗಳಿಗೆ ಹಿಂತಿರುಗಿ ಬರಬೇಕಾಗಿದ್ದಿತು; ಆವ ಕಾರಣದಿಂದಲೋ ಇನ್ನೂ ಬರಲಿಲ್ಲ. ಒಂದು ವೇಳೆ ಅದು ಮುಳುಗಿಹೋಗಿದ್ದರೆ ಅವನು ಖಂಡಿತವಾಗಿಯೂ ದಿವಾಳಿಯಾಗುವನು.

ಅವನಿಗೆ ಹೆಂಡಿರು ಮಕ್ಕಳುಂಟೋ?

ಅವನಿಗೆ ಒಬ್ಬ ಮಗನೂ ಒಬ್ಬ ಮಗಳೂ ಇರುವರು; ಅವರಿಬ್ಬರೂ ದೊಡ್ಡವರಾಗಿದ್ದಾರೆ. ಮಗಳಿಗೆ ಮದುವೆಮಾಡಬೇಕೆಂದಿದ್ದನು; ಅನೇಕ ನಷ್ಟಗಳು ಸಂಭವಿಸಿದ್ದುದರಿಂದ ಸದ್ಯಕ್ಕೆ ಮದುವೆಯು ನಿಂತುಹೋಯಿತು. ಮಗನು ಜೀವನಾರ್ಥವಾಗಿ ಸೈನ್ಯದಲ್ಲಿ ಸೇರಿಕೊಂಡನು. ಅವನ ಹೆಂಡತಿಯು ಚೆನ್ನಾಗಿ ಬದುಕಿ ಬಾಳಿದವರಿಗೆ

ಈ ಗತಿ ಒಂದಿತಲ್ಲಾ ಎಂದು ಸರ್ವದಾ ಆಳುತ್ತಲಿರುವಳು. ಈ ಹೆಂಡಿರು ಮಕ್ಕಳಿಗಾಗಿ ಧನಕೋಟಿಯು ಜೀವದೊಡನಿದ್ದಾನೆ; ಇಲ್ಲದಿದ್ದರೆ ಅವನು ಆಗಲೇ ಆತ್ಮಹತ್ಯವನ್ನು ಮಾಡಿಕೊಳ್ಳುತ್ತಲಿದ್ದನು.

ಪಾಪ, ಬಹಳ ಕಷ್ಟ.

ದೇವರು ಒಳ್ಳೆಯವರಿಗೆ ಅನುಕೂಲಪಡಿಸುವುದಿಲ್ಲವೆಂಬುದಕ್ಕೆ ಇದೊಂದು ದೃಷ್ಟಾಂತ. ದುರ್ಮಾರ್ಗದಲ್ಲಿ ಪ್ರವೃತ್ತಿಸಿದ ದುರ್ಮತಿ ವಿಷಯಲಂಪಟರು ಧನವಂತರಾಗಿ ದೊಡ್ಡ ಮನುಷ್ಯರಂತೆ ಇರುವರು. ಅವ ಕೆಟ್ಟಕೆಲಸಕ್ಕೂ ಹೋಗದ ಧನಕೋಟಿಯು, ಇದ್ದಬದ್ದುದನ್ನೆಲ್ಲಾ ಕಳೆದುಕೊಂಡು ನನ್ನಂತೆ ದಿವಾಳಿಯಾಗುವುದರಲ್ಲಿದ್ದಾನೆ.

ಹಾಗಾದರೆ ದುರ್ಮತಿ ವಿಷಯಲಂಪಟರಿಬ್ಬರೂ ಒಳ್ಳೇ ಸ್ಥಿತಿಯಲ್ಲಿರುವರೋ?

ಅಹುದು.

ದುರ್ಮತಿ ಈಗೇನಾಗಿರುವನು?

ಅವನ ಕೆಟ್ಟ ಚಾಕಚಿಯನ್ನು ತಿಳಿಯುವೆ ಧನಕೋಟಿಯು ಅವನ ವಿಷಯವಾಗಿ ಅನ್ಯದೇಶದ ಒಬ್ಬ ದೊಡ್ಡ ಧನಾಗಾರಪತಿಗೆ ಒಂದು ಸಿಫಾರಸ್ಸು ಕಾಗದವನ್ನು ಕೊಟ್ಟನು. ದುರ್ಮತಿಯು ಅಲ್ಲಿಗೆ ಹೋಗಿ ಹೇಗೋ ಒಷ್ಟು ಹಣವನ್ನು ಕೂಡಿಸಿಕೊಂಡು ಅವನ ಒಬ್ಬಳೇ ಮಗಳನ್ನು ಮದುವೆಯಾಗಿ ಅವನ ಆಸ್ತಿಯನ್ನೆಲ್ಲಾ ವಶ ಮಾಡಿಕ್ಕೊಂಡು ಈಗ ಅಮರಪುರದಲ್ಲಿ ದೊಡ್ಡ ಧನಾಗಾರಪತಿಯಾಗಿ ಕುದುರೆ, ಬಂಡಿ, ಆಳು, ಕಾಳುಗಳನ್ನಿಟ್ಟುಕೊಂಡು ನೆಮ್ಮದಿಯಾಗಿರುತ್ತಲಿದ್ದಾನೆ.

ನೆಮ್ಮದಿಯಾಗಿದಾನೆಂದು ನೀನು ಹೇಗೆ ಬಲ್ಲೆ?

ನೆಮ್ಮದಿಯೋ ಇಲ್ಲವೋ ದೇವರೇ ಬಲ್ಲ. ಅನ್ಯಾಯಮಾಡಿದವರು ಬಹುಶಃ ನೆಮ್ಮದಿಯಾಗಿರಲಾರರು. ಅದರೆ ದುಡ್ಡಿರುವ ಹೆಮ್ಮೆಯಿಂದ ಅವರು ಅದನ್ನು ಲಕ್ಷ್ಯ ಮಾಡರು.

ಅದೇನೋ ನಿಜ. ವಿಷಯಲಂಪಟನ ಸಮಾಚಾರವೇನು?

ಅವನು ಚಕ್ರವರ್ತಿಯ ಸೈನ್ಯವನ್ನ ಸೇರಿ, ಸೇನಾಪತಿಗೆ ಮುಖ್ಯಸಹಾಯನಾಗಿದ್ದು ಚಕ್ರವರ್ತಿಯು ಸೋಲುವ ಸಂದರ್ಭ ಬಂದಾಗ ಹಗೆಗಳಿಗೆ ತನ್ನ ಸೇನಾಪತಿ

ಯನ್ನು ಮೋಸದಿಂದ ಹಿಡಿದುಕೊಟ್ಟು ಈ ದಿನ ರಾಜನಿಂದ ಕೆಲವು ಧನವನ್ನೂ ಅಧಿಕಾರವನ್ನೂ ಸಂಪಾದಿಸಿದನು. ಅನಂತರ, ಸ್ವದೇಶವಾದ ಕಳಿಂಗದೇಶದ ದೊರೆಯ ಮೇಲೆ ಅಮರದೇಶದ ರಾಜನು ಯುದ್ಧಮಾಡಬೇಕಾಗಿ ಬಂದಾಗ ಆ ದೇಶದ ಜನಗಳ ಅಭಿಪ್ರಾಯವನ್ನು ತಿಳಿದು ಬರಲು ಅವನನ್ನು ಅಲ್ಲಿಗೆ ಕಳುಹಿಸಿದರು. ಅವನು ಅಲ್ಲಿಗೆ ಹೋಗಿ ದುರ್ಮತಿಯನ್ನು ಕಂಡು ಅವನಲ್ಲಿ ಸ್ನೇಹಬೆಳಸಿ ಅವನ ಮೂಲಕ ಸ್ವದೇಶದ ಸಮಾಚಾರಗಳನ್ನೆಲ್ಲಾ ತಿಳಿದು, ಅಲ್ಲಿಂದ ಬಂದು ಅಮರದೇಶದವರಿಗೆ ಸಹಾಯವಾಗಿ ತನ್ನ ದೇಶದವರ ಮೇಲೆ ಯುದ್ಧವನ್ನು ಮಾಡಿ, ಅವರನ್ನು ಮೋಸದಿಂದ ಜಯಿಸಿ ಈ ದೇಶದಲ್ಲಿ ದೊಡ್ಡ ಕೆಲಸವನ್ನೂ ಸಂಬಳವನ್ನೂ ಸಂಪಾದಿಸಿದನು.

ಅದೃಷ್ಟ. ಅದೃಷ್ಟ.

ಇಷ್ಟೇ ಅಲ್ಲ ಅವನ ಚರಿತ್ರವಿನ್ನೂ ಇದೆ. ಯವನದೇಶದ ದೊರೆಯಾದ ಕ್ಷಿತೀಂದ್ರನು ತನ್ನ ಶ್ರೇಷ್ಠಾಧಿಪನ ಮೇಲೆ ಯುದ್ಧಮಾಡಿದಾಗ, ಅಮರದೇಶದ ರಾಜನ ಅಪ್ಪಣೆಯನ್ನು ಪಡೆದು ಆ ದೊರೆಯಲ್ಲಿ ಸೇರಿ ಅವನ ಅಭಿಮಾನವನ್ನು ಸಂಪಾದಿಸಿ ಕೊನೆಗೆ ಅವನ ಸೈನ್ಯಕ್ಕೆ ಅಧಿಪತಿಯಾದನು. ದೊರೆಯು ಯುದ್ಧದಲ್ಲಿ ದೈವಾಧೀನನಾದಾಗ ತನಗೆ ವಿಶೇಷದ್ರವ್ಯವನ್ನು ಕೊಟ್ಟನೆಂದು ಹೇಳಿಕೊಂಡು ಅಮರಪುರದಲ್ಲಿ ಒಂದು ದೊಡ್ಡ ಮನೆಯನ್ನು ಕಟ್ಟಿಕೊಂಡು, ಅಮರದೇಶದ ದೊರೆಯು ಇವನ ಸಾಹಸಗಳಿಗೆ ಮೆಚ್ಚಿ ಮರ್ಯಾದಾರ್ಥವಾಗಿ ಕೊಟ್ಟ "ಶ್ರೀಮಂತ ರಾಜಸಿಂಹ" ಎಂಬ ಹೆಸರಿನಿಂದ ಮೆರೆಯುತ್ತಲಿರುವನು.

ಲಲಿತಾಂಗಿಯು ಅದೃಶ್ಯಳಾದಳೆಂದು ಕೇಳಿದೆ ; ಅದು ಹೇಗೆ?

ಅಹುದು. ಅವಳು ಸಂಜೆಯ ಸೂರ್ಯನಂತೆ ಅದೃಶ್ಯಳಾದಳು.

ಹಾಗೆಂದರೆ ನನಗೆ ಗೊತ್ತಾಗಲಿಲ್ಲ.

ಅಸ್ತಮಯಕಾಲದಲ್ಲಿ ಸೂರ್ಯನು ಅದೃಶ್ಯನಾಗಿ ಪುನಃ ಮಾರನೆಯ ದಿನ ತಳ ತಳಿಸುತ್ತ ಉದಯಿಸುವಂತೆ ಅವಳು ಕೆಲವು ಕಾಲ ಅದೃಶ್ಯಳಾಗಿದ್ದು ಈಗ ಹೆಚ್ಚಾದ ಕಾಂತಿಯಿಂದ ಕೂಡಿರುವಳು.

ಅದು ಹೇಗೆ ?

ಧರ್ಮದೇವನನ್ನು ಸೆರೆ ಹಿಡಿದ ಮೇಲೆ ವಿಷಯಲಂಪಟನು ಅವಾಗಲೂ ಅವಳ

ಜತೆಯಲ್ಲಿಯೇ ಇರುತ್ತಿದ್ದನು. ಭುಜಂಗಭೂಷಣನಿರುವ ವರೆಗೂ ಅವಳು ಅವನ ಶುಶ್ರೂಷೆಯಲ್ಲೇ ಇರುತ್ತಿದ್ದಳು. ಅವನು ಒದುಕಿರುವ ವರೆಗೂ ವಿಷಯಲಂಪಟನು ಮದುವೆಯ ಪ್ರಸ್ತಾಪವನ್ನೇ ಮಾಡಲಿಲ್ಲ. ಅವನು ಸತ್ತ ಮೇಲೆ, ವಿಷಯಲಂಪಟನು ಮದುವೆಯ ಪ್ರಸ್ತಾಪ ಮಾಡಲು, ಇನ್ನಾರುತಿಂಗಳೊಳಗಾಗಿ ಧರ್ಮದೇವನು ಬರದೆ ಇದ್ದರೆ ಆ ಮೇಲೆ ನೋಡೋಣ ಎಂದು ಅವಳು ಹೇಳಿದಳು.

ಹಾಗಾದರೆ, ಧರ್ಮದೇವನಿಗಾಗಿ ಅವಳು ಹದಿನೆಂಟು ತಿಂಗಳು ಕಾದಿದ್ದ ಹಾಗಾಯಿತು ಎಂದು ಗಟ್ಟಿಯಾಗಿ ಹೇಳಿ, ಮನಸ್ಸಿನಲ್ಲಿ ಅಸ್ಥಿರಬುದ್ಧಿಯೇ, ನಿನ್ನ ಹೆಸರು ಹೆಂಗಸಲ್ಲವೇ ಎಂದುಕೊಂಡನು.

ಹದಿನೆಂಟು ತಿಂಗಳಾದ ಮೇಲೆ ವಿಷಯಲಂಪಟನು ಲಲಿತಾಂಗಿಗೆ ಇಷ್ಟವಿಲ್ಲದಿದ್ದರೂ ಅವಳನ್ನು ಮದುವೆ ಮಾಡಿಕೊಂಡನು. ಮದುವೆ ಮುಗಿದು ಅವಳು ಧಾರೆಯ ಮಂಟಪದಿಂದ ಬರುತ್ತಿರುವಾಗ ಮೂರ್ಛಿತಳಾಗಿ ಕೆಳಗೆ ಬಿದ್ದಳು.

ಆಮೇಲೇನಾಯಿತು ?

ಕೆಲವು ಕಾಲಾನಂತರ ವಿಷಯಲಂಪಟನು ತನ್ನ ಕಳಿಂಗದೇಶದವರ ಮೇಲೆ ಯುದ್ಧಕ್ಕೆ ಹೋದಾಗ, ಮಗನಿಗೆ ವಿದ್ಯಾಭ್ಯಾಸಮಾಡಿಸಲೋಸುಗ ಹೆಂಡತಿಯನ್ನು ಅಮರದೇಶದಲ್ಲಿ ಬಿಟ್ಟು ಹೋದನು.

ಮಗನಿಗೇ ! ಎಂದು ಸನ್ಯಾಸಿಯು ಬೆಚ್ಚಿಬಿದ್ದನು.

ಅಹುದು, ಮಗನಿಗೆ ವಿದ್ಯೆಯನ್ನು ಕಲಿಸಲು ಬಿಟ್ಟು ಹೋದನು.

ಧರ್ಮದೇವನು ಹೇಳಿದುದರಲ್ಲಿ ಏನೂ ಅರಿಯದ ಬೆಸ್ತರ ಹುಡುಗಿ ಎಂದು ನಾನು ತಿಳಿದಿದ್ದೆನು ; ಅವಳು ಮಗನಿಗೆ ಏನು ವಿದ್ಯವನ್ನು ಕಲಿಸಬಲ್ಲಳು ?

ಅವಳ ಸಮಾಚಾರ ಧರ್ಮದೇವನಿಗೆ ಚೆನ್ನಾಗಿ ಗೊತ್ತಿರಲಿಲ್ಲವೆಂದು ತೋರುತ್ತದೆ. ಅವಳು ರಾಜಮಹಿಷಿಯಾಗುವುದಕ್ಕೆ ಅರ್ಹಳಾಗಿದ್ದಳು. ವಿಷಯಲಂಪಟನಿಗೆ ದ್ರವ್ಯಾನುಕೂಲವೂ ಪದವಿಯೂ ಹೆಚ್ಚಾದ ಹಾಗೆಲ್ಲ ಅವಳೂ ಸ್ವಬುದ್ಧಿಯಿಂದ ಅನೇಕ ವಿದ್ಯೆಗಳನ್ನು ಕಲಿತು ಈಗ ತನ್ನ ಸಮಾನರಾರೂ ಇಲ್ಲವೆಂದೆನಿಸಿಕೊಂಡು ಇರುತ್ತಾಳೆ. ಇವ್ವಾದರೂ—

ಇವಾದರೂ ಏನು ?

ಅವಳಿಗೆ ಸುಖವಿಲ್ಲವೆಂದು ತೋರುತ್ತದೆ.

ಅದು ಹೇಗೆ?

ಒಂದಾನೊಂದು ವೇಳೆ ನಾನು ನಿರ್ಗತಿಕನಾಗಿ ಪೂರ್ವಸ್ನೇಹಿತರಲ್ಲಿ ಹೋಗಿ ಏನಾದರೂ ಸ್ವಲ್ಪ ಸಹಾಯವನ್ನು ಕೇಳೋಣವೆಂದು ದುರ್ಮತಿಯು ಬಳಿಗೆ ಹೋದಾಗ ಅವನು ನೋಡಲು ಅನುಕೂಲವಿಲ್ಲವೆಂದು ನನ್ನನ್ನು ಹಿಂದಕ್ಕೆ ಕಳುಹಿಸಿದನು. ಬಳಿಕ ವಿಷಯಲಂಪಟನ ಒಳಿಗೆ ಹೋದೆನು. ಅವನು ನನಗೆ ಕೊಟ್ಟು ಬರುವಂತೆ ಆಳಿನ ಕೈಯಲ್ಲಿ ಒಂದು ನೂರು ರೂಪಾಯಿಯನ್ನು ಕಳುಹಿಸಿದನು.

ಹಾಗಾದರೆ ಅವರಿಬ್ಬರೂ ನಿನ್ನನ್ನು ನೋಡಲೇ ಇಲ್ಲವೇ?

ಇಲ್ಲ. ಆದರೆ ಶ್ರೀಮತೀ ರಾಜಾಬಾಯಿ ಎಂದು ಹೆಸರಿಟ್ಟುಕೊಂಡಿರುವ ಲಲಿತಾಂಗಿಯು ಮಾತ್ರ ನನ್ನನ್ನು ನೋಡಿ ನಾನು ಬಾಗಿಲ ಸಮೀಪಕ್ಕೆ ಸರಿಯಾಗಿ ಬಂದಾಗ ಐವತ್ತು ವರಹಗಳನ್ನು ಒಂದು ಚೀಲದಲ್ಲಿ ಗಂಟುಕಟ್ಟಿ, ಅದನ್ನು ನನ್ನ ಕಾಲಿನ ಮುಂದೆ ಬೀಳುವಂತೆ ಮಹಡಿ ಕಿಟಕಿಯಿಂದ ಕೆಳಕ್ಕೆ ಬಿಸುಟಳು. ಇದನ್ನಾರು ಬಿಸುಟರೆಂದು ನಾನು ತಲೆಯೆತ್ತಿ ನೋಡಲು ಅವಳ ವ್ಯಸನಾಕ್ರಾಂತವಾದ ಮುಖವು ಕಂಡಿತು. ಜನಗಳಿಗೆ ಅವಳು ಸುಖವಾಗಿರುವಂತ ತೋರಿದರೂ ಅವಳಿಗೆ ಸುಖವಿಲ್ಲವೆಂದು ನನಗೆ ತೋರುತ್ತದೆ.

ನೀನು ಹೇಳುವುದನ್ನು ನೋಡಿದರೆ ಧರ್ಮದೇವನು ಇವರುಗಳ ವಿಷಯದಲ್ಲಿ ಬಲುಮಟ್ಟಿಗೆ ಮೋಸಹೋಗಿದ್ದನೆಂದು ತೋರುತ್ತದೆ. ಅವನು ನ್ಯಾಯಾಧಿಪನಾಗಿದ್ದ ವಲ್ಲಭದೇವನನ್ನು ಬಲುಮಟ್ಟಿಗೆ ಕೊಂಡಾಡುತ್ತಿದ್ದನು. ಅವನು ಏನ ಮಾಡಿದನು?

ಆ ಸಮಾಚಾರ ನನಗೆ ತಿಳಿಯದು. ಅವನು ಶಾಂತವೀರನೆಂಬ ಒಬ್ಬ ಶ್ರೀಮಂತನ ಮಗಳನ್ನು ಮದುವೆಯಾಗಿ ನೆಮ್ಮದಿಯಾಗಿದಾನೆಂದು ಕೇಳಿಬಲ್ಲೆ. ಧರ್ಮದೇವನು ಸತ್ತು ಬದುಕಿಕೊಂಡನು. ಧನಕೋಟಿಯೂ ನಾನೂ ಜೀವಸಹಿಟ್ಟುಕೊಂಡು ಸಂಕಟ ಪಡುತ್ತಲಿದೇವೆ. ಹೀಗಿರುವಲ್ಲಿ ಒಳ್ಳೆಯವರಿಗೆ ಕಾಲವೆಂದು ಹೇಳಬಹುದೇ? ತಾವೇ ಆಪ್ಪಣೆ ಕೊಡಿಸಬೇಕು.

ಅಪ್ಪಾ! ನೀನು ಹಾಗೆ ಹೇಳುವುದು ತಪ್ಪು. ದೇವರು ಅವರವರ ಕರ್ಮಾನುಸಾರವಾಗಿ ಸಮಯಗಳನ್ನು ನೋಡಿ ಅವರವರಿಗೆ ಶಿಕ್ಷೆ ರಕ್ಷಣೆಗಳನ್ನು ಮಾಡುವನು.

ಇದಕ್ಕೆ ನಾನೇ ಸಾಕ್ಷಿ ಎಂದು ಹೇಳಿ ಇಗೋ ನೋಡು. ಈ ಉಂಗುರವು ನಿನ್ನದು ; ಇದನ್ನಿಟ್ಟುಕೊಂಡು ಸುಖವಾಗಿರು ಎಂದು ಕದರ್ಥಕನು ಅದನ್ನು ಕಮ್ಯುಲ್ಲಿ ಕೊಟ್ಟನು.

ಇದು ನನ್ನೊಬ್ಬನಿಗೇಯೇ ?

ಅಹುದು. ತನಗೆ ಆಪ್ತರಾಗಿದ್ದ ಐದುಮಂದಿಗಳಿಗೆ ಕೊಡೆಂದು ಧರ್ಮದೇವನು ಇದನ್ನು ನನ್ನಲ್ಲಿ ಕೊಟ್ಟನು. ಇರುವವರಲ್ಲಿ ನೀನೊಬ್ಬನೇ ಆಪ್ತನೆಂದು ಈಗ ತಿಳಿಯು ಬಂದುದರಿಂದ ಇದನ್ನು ನಿನಗೆ ಕೊಟ್ಟೆನು. ಇದಕ್ಕೆ ಬದಲಾಗಿ ಈ ಹಳೆಯ ಚೀಲವನ್ನು ನಾನು ತೆಗೆದುಕೊಳ್ಳಲೇ ಎಂದು ಧನಕೋಟಿಯು ಭುಜಂಗಭೂಷಣನಿಗೆ ಕೊಟ್ಟಿದ್ದ ಚೀಲಕ್ಕೆ ಕೈ ಹಾಕಿದನು.

ಆಗಬಹುದು. ಸ್ವಾಮೀ ! ತಾವು ಸತ್ಯವಂತರಾದುದರಿಂದ ಧರ್ಮದೇವನು ಹೇಳಿದಂತೆ ಈ ಅಮೂಲ್ಯವಾದ ಉಂಗುರವನ್ನು ಸರಿಯಾಗಿ ವಿನಿಯೋಗಿಸಿದಿರಿ. ಮತ್ತಾರಾದರೂ ಆಗಿದ್ದರೆ ತಾವೇ ಇಟ್ಟುಕೊಳ್ಳುತ್ತಲಿದ್ದರು.

ನೀನಾಗಿದ್ದರೆ ಹಾಗೆ ಮಾಡುತ್ತಲಿದ್ದೆ ಎಂದು ಮೆಲ್ಲಗೆ ಹೇಳಿ, ಸನ್ಯಾಸಿಯು ಕುದುರೆಯನ್ನು ಏರಿ ಹೊರಟುಹೋದನು.

ಬಳಿಕ ಕದರ್ಥಕನು ಉಂಗುರವನ್ನು ಕಳಾಕಾಂತೆಗೆ ತೋರಿಸಿ ನಾನು ಯೋಚಿಸಿದ್ದಂತೆ ಈ ವಜ್ರದ ಉಂಗುರವನ್ನು ನಮಗೇ ಕೊಟ್ಟನು ಎಂದನು.

ಇದು ಕೃತ್ರಿಮವಜ್ರವಾಗಿದ್ದರೋ ಎಂದು ಅವಳು ಹೇಳಲು, ಅವನು ಬೆಪ್ಪು ಬಿದ್ದು, ನಮಗೆ ಮೋಸಮಾಡುವುದರಲ್ಲಿ ಆ ಸನ್ಯಾಸಿಗೆ ಏನು ಪ್ರಯೋಜನ ಎಂದನು. ಅದಕ್ಕವಳು ಪುಕಸಟ್ಟೆ ನಿನ್ನಿಂದ ಗುಟ್ಟು ತಿಳಿದುಕೊಳ್ಳುವುದೇ ಎಂದಳು.

ಹಾಗಾದರೆ ಮನೆಯನ್ನು ನೋಡಿಕೊಂಡಿರು ; ಸಮಾಪದಲ್ಲಿ ಆಗುತ್ತಿರುವ ಸಂತೆಗೆ ಹೋಗಿ ಇದನ್ನು ವರ್ತಕರಿಗೆ ತೋರಿಸಿ ಬೆಲೆಯನ್ನು ತಿಳಿದುಬರುವೆನು ಎಂದು ಹೇಳಿ ಬಟ್ಟೆಯನ್ನು ಹಾಕಿಕೊಂಡು ಸಂತೆಗೆ ಹೊರಟನು. ಅವನು ಅಕಡೆ ಹೊರಟ ಕೂಡಲೆ ಕಳಾಕಾಂತೆಯು ಬೀದಿಯ ಬಾಗಿಲನ್ನು ಹಾಕಿ ಐವತ್ತುನಾನಿರ ವರಹ, ಅದು ಒಳ್ಳೆಯ ವಜ್ರವಾಗಿದ್ದು ಇಷ್ಟು ಬೆಲೆ ಬಂದರೂ, ನೆಮ್ಮದಿಯಾಗಿ ಜೀವನ ಮಾಡಲು ಅನುಕೂಲವಾದ ಆಸ್ತಿಯಲ್ಲ. ಒಂದು ಲಕ್ಷವರಹಗಳ ಆಸ್ತಿಯಿದ್ದರೆ ಸಾಕು. ಆದಿಲ್ಲವಲ್ಲಾ ಎಂದು ಗೊಣಗುಟ್ಟುತ್ತ ಮುಹಡಿಯನ್ನೇರಿ ಮಂಜದ ಮೇಲೆ ಮಲಗಿದಳು.

ಇಪ್ಪತೆಂಟನೆಯ ಅಧ್ಯಾಯ

ಧನಕೋಟಿಯವ್ಯಾಪಾರ.

ಮನೋರಂಜಿನಿಯಲ್ಲಿ ಕದರ್ಥಕನಿಗೂ ನಿರ್ಮಲಾನಂದನಿಗೂ ಸಂವಾದ ನಡೆದ ಮಾರನೇ ದಿನ ಬೆಳಿಗ್ಗೆ, ಸುಮಾರು ಮೂವತ್ತೈದು ವಯಸ್ಸುಳ್ಳ ಅಂಗದೇಶೀಯ ಸೊಬ್ಬನು ಮಲಯಪಟ್ಟಣದ ನಗರಾಧ್ಯಕ್ಷನ ಬಳಿಗೆ ಹೋಗಿ, ಸ್ವಾಮೀ! ನಾನು ಇಂದ್ರಪ್ರಸ್ಥದ ಧನಾಗಾರಪತಿ ನಂದಕುಮಾರರ ಗುಮಾಸ್ತನು; ನಮ್ಮ ಯಜಮಾನರಿಗೆ ಧನಕೋಟಿಯಿಂದ ಒಂದು ಲಕ್ಷ ವರಹಗಳು ಬರಬೇಕಾಗಿದೆ. ಅವನ ಸ್ಥಿತಿಯು ಈಚೆಗೆ ಸರಿಯಾಗಿಲ್ಲವೆಂದು ವರ್ತಮಾನವನ್ನು ಕೇಳಿ, ಅದು ನಿಜವೋ ಅಲ್ಲವೋ ಎಂಬುವುದನ್ನು ತಮ್ಮಿಂದ ತಿಳಿಯಲೋಸುಗ ಬಂದಿದ್ದೇನೆ; ದಯವಿಟ್ಟು ತಿಳಿಸಬೇಕು ಎಂದನು.

ನನ್ನನ್ನು ಅಧ್ಯಕ್ಷನನ್ನಾಗಿ ಭಾವಿಸಿ ನೀವು ಕೇಳುವುದಾದರೆ, ಧನಕೋಟಿಯು ಹಡಗುಗಳು ಮೂರು ನಾಲ್ಕು ಮುಳುಗಿ ಹೋದರೂ, ಅವನು ಹಣವಿಟ್ಟಿದ್ದ ಅನೇಕ ಧನಾಗಾರಗಳು ದಿವಾಳಿಯಾಗರೂ, ತಾನು ಕೊಡತಕ್ಕ ಹಣಗಳನ್ನು ಮಾತ್ರ ಸಕಾಲದಲ್ಲಿ ಕೊಡುತ್ತಲಿದ್ದಾನೆ. ನಾನೂ ಹತ್ತು ಸಾವಿರ ವರಹಗಳನ್ನು ಅವನಲ್ಲಿ ಇಟ್ಟಿರುವೆನು; ಅದನ್ನು ವಾಪಸು ಕೊಡಲು ಇನ್ನೂ ಆರು ತಿಂಗಳ ವಾಯಿದೆ ಇದೆ. ಅವನಿಗೆ ಮಿಕ್ಕ ಸಾಲಗಳು ಎಷ್ಟು ಇವೆಯೋ, ಅವುಗಳನ್ನು ತೀರಿಸಲು ಅವನಿಗೆ ಶಕ್ತಿಯುಂಟೋ ಇಲ್ಲವೋ ನಾನು ಕಾಣೆ; ನನಗಿಂತ ಹೆಚ್ಚಾಗಿ ಅವನಲ್ಲಿ ಹಣವನ್ನು ಇಟ್ಟಿರುವ ಬಂದಿಶಾಲೆಗಳ ಮೇಲು ವಿಚಾರಕನಾದ ಭಾಸ್ಕರನನ್ನು ಕೇಳಿದರೆ ಎಲ್ಲವೂ ಗೊತ್ತಾಗುತ್ತದೆ ಎಂದನು.

ಒಡನೆಯೇ ಗುಮಾಸ್ತನು ಭಾಸ್ಕರನ ಮನೆಗೆ ಹೋಗಿ ತಾನು ಬಂದ ಸಮಾಚಾರವನ್ನು ತಿಳಿಸಲು, ಅವನು ಕೂಡಲೆ ಮರ್ಯಾದೆಯಾಗಿ ಇವನನ್ನು ಒಳಗೆ ಕರೆದುಕೊಂಡು ಹೋಗಿ ಆಸನವನ್ನಿತ್ತು ಕುಳ್ಳಿರಿಸಿ, ಸ್ವಾಮೀ! ನನ್ನಿಂದ ತಮಗೇನಾಗಬೇಕು ಎಂದು ಕೇಳಿದನು. ಭಾಸ್ಕರನ ಮುಖವನ್ನು ನೋಡುತಲೆ ಗುಮಾಸ್ತನು ಸ್ವಲ್ಪ ಬೆಚ್ಚಿ ವಿಸ್ಮಯಗೊಂಡನು; ಆದರೆ ತನ್ನ ಮಗಳ ಮದುವೆಗಾಗಿ ಧನಕೋಟಿಯು ಬಳಿ ಇಟ್ಟಿದ್ದ

ಎರಡು ಲಕ್ಷ ವರಹಗಳು ಹೋಯಿತಲ್ಲಾ ಎಂಬ ವ್ಯಸನದಲ್ಲಿ ಮುಳುಗಿದ್ದ ಭಾಸ್ಕರನು ಅವನು ಬೆಚ್ಚಿದುದನ್ನು ನೋಡಲೇ ಇಲ್ಲ. ಒಂದು ವೇಳೆ ಅವನು ನೋಡಿದ್ದರೂ ಹಿಂದೆ ನಡೆದುದನ್ನು ನೆನಸಿಕೊಳ್ಳುವಷ್ಟು ಬುದ್ಧಿಯೂ ಇರಲಿಲ್ಲ.

ಸ್ವಾಮೀ ಭಾಸ್ಕರರೇ! ಈ ಪಟ್ಟಣದಲ್ಲಿ ಧನಕೋಟಿಯು ವಿಷಯವಾಗಿ ಜನರು ಏನೇನೋ ಆಡಿಕೊಳ್ಳುತ್ತಿದ್ದಾರೆ ಎಂದು ತಾನು ಕೇಳಿದ್ದ ವರ್ತಮಾನಗಳನ್ನೆಲ್ಲಾ ಹೇಳಿ ಅದು ನಿಜವೋ ಎಂದುದಕ್ಕೆ, ಭಾಸ್ಕರನು ಅಯ್ಯಾ! ತಾವು ಕೇಳಿರುವುದೆಲ್ಲಾ ನಿಶ್ಚಯ; ಅವನ ಬಳಿ ನನ್ನ ಮಗಳ ಮದುವೆಗಾಗಿ ನಾನೂ ಎರಡು ಲಕ್ಷ ವರಹಗಳನ್ನಿಟ್ಟಿರುವೆನು. ಇನ್ನು ಹದಿನೈದು ದಿವಸಗಳಲ್ಲಿ ಮದುವೆಯು ನಡೆಯುವಂತೆ ಗೊತ್ತಾಗಿದೆ; ಇದನು ಧನಕೋಟಿಗೆ ತಿಳಿಸಿ ಹಣ ಬೇಕೆಂದು ಕೇಳಿದುದಕೆ ನನ್ನ ಹಡಗು ಜಯಲಕ್ಷ್ಮಿಯು ಬಂದರೆ ನಿನ್ನ ಹಣವನ್ನು ಕೊಡುತ್ತೇನೆ, ಬಾರದಿದ್ದರೆ ನನ್ನ ಯತ್ನವೇನಿದೆ ಎಂದು ಈಗ ತಾನೆ ಹೇಳಿ ಹೋದನು ಎಂದನು.

ಹಾಗಾದರೆ ತಮ್ಮ ಹಣವು ಹೋದಂತೆಯೇ ತಾನೇ "ಆಹಾ! ಹಾಗೆಯೇ ಸರಿ."

ಒಂದು ವೇಳೆ ನಿಮ್ಮ ಹಣವನ್ನು ಆರಾದರೂ ಕೊಡುವುದಾದರೆ ಧನಕೋಟಿಯ ಮೇಲೆ ಆ ಹಣಕ್ಕೆ ಒಂದು ಹುಂಡಿಯನ್ನು ಬರೆದುಕೊಡುವಿರಾ?

ಹಣವನ್ನು ಕೊಡುವರಾರು? ಕೊಟ್ಟರೆ ಆ ಹಣವು ಅವರಿಗೆ ಬಹುಶಃ ಹಿಂತಿರುಗಿ ಬಾರದು. "ನಾನೇ ಕೊಡುತ್ತೇನೆ." ನೀವು ಕೊಡುತ್ತೀರಾ? "ಹೂಂ" ಎಂದು ನಂದಕುಮಾರನ ಗುಮಾಸ್ತನು ಸುಮಾರು ನಾಲ್ಕೈದು ಲಕ್ಷ ವರಹಗಳ ನೋಟುಗಳನ್ನು ಚೀಲದಿಂದ ಹೊರಗೆ ತೆಗೆದನು.

ತಾವು ಹೆಚ್ಚು ವಟ್ಟವನ್ನು ಕೇಳಬಹುದು; ಅದೂ ನ್ಯಾಯವೇ.

ನಮ್ಮ ಯಜಮಾನರು ಹಣಕ್ಕೆ ವಟ್ಟ ಕೇಳುವರಲ್ಲ. ನಾವು ಕೇಳುವುದೇ ಬೇರೆ. "ಅದಾವುದು?"

ನಾನು ಇಂದ್ರಪ್ರಸ್ಥನಗರದಲ್ಲಿ ಒಬ್ಬ ಆನಂದರಲ್ಲಿ ವಿದ್ಯಾಭ್ಯಾಸವನ್ನು ಮಾಡಿದ್ದೆನು; ಆವರು ಇದ್ದುದಿದ್ದಂತೆಯೇ ಅದೃಶ್ಯರಾದರು. ಹುಡುಕಿ ಹುಡುಕಿ ಬೇಸತ್ತು ಕೊನೆಗೆ ಜಾಲದುರ್ಗದಲ್ಲಿದ್ದಾರೆಂದು ತಿಳಿದು ನಿಮ್ಮಲ್ಲಿಗೆ ಬಂದೆನು. ನಿಮ್ಮಿಂದ ಅವರ ಸಮಾಚಾರವು ತಿಳಿಯಬೇಕಾಗಿದೆ,

ಅವರ ಹೆಸರೇನು? "ಯೋಗಾನಂದರು."

ಓಹೋ, ಅವನೇ! ಅವನನ್ನು ನಾನು ಚೆನ್ನಾಗಿ ಬಲ್ಲೆ; ಅವನು ಸ್ವಲ್ಪ ಹುಚ್ಚನಲ್ಲವೇ? "ಹಾಗೆಂದು ಜನರು ಹೇಳುತ್ತಲಿದ್ದರು."

ಖಂಡಿತವಾಗಿಯೂ ಅವನಿಗೆ ಸ್ವಲ್ಪ ಹುಚ್ಚಿದ್ದಿತು. "ಆವ ಹುಚ್ಚು?"

ತನಗೆ ಒಂದು ದೊಡ್ಡ ನಿಕ್ಷೇಪವಿರುವುದು ಗೊತ್ತಿರುವುದೆಂತಲೂ, ಸರ್ಕಾರದವರು ಬಿಡುಗಡೆ ಮಾಡಿಕೊಟ್ಟರೆ ವಿಶೇಷ ದ್ರವ್ಯವನ್ನು ಕೊಡುವೆನೆಂತಲೂ ಹೇಳುತ್ತಲಿದ್ದನು.

ಇದು ವಿನಾ ಬೇರಾವುದಾದರೂ ಹುಚ್ಚು ಉಂಟೋ? "ಇಲ್ಲ."

ಹಾಗಾದರೆ ಅವರು ಏಕವಿಷಯೋನ್ಮಾದಗ್ರಸ್ತರಾಗಿದ್ದರೆಂದು ತೋರುತ್ತಲಿದೆ. "ಅಹುದು."

ಈಗಲೂ ಹಾಗೆಯೇ ಇದಾರೆಯೋ?

ಅಯ್ಯೋ ಪಾಪ! ಅವನು ಸತ್ತುಹೋದನು.

ಹಾ! ಸತ್ತುಹೋದರೇ? "ಆವಾಗ? ಏನಾಗಿದ್ದಿತು?"

ಅವನು ಸತ್ತು ಆರು ತಿಂಗಳಾದುವು; ಅವನಿಗೇನಾಗಿದ್ದಿತೋ ಗೊತ್ತಿಲ್ಲ.

ತಮ್ಮ ಸ್ವಾಧೀನದಲ್ಲಿ ಎಷ್ಟೋ ಬಂದಿಶಾಲೆಗಳಿರುವುವು; ಒಂದೊಂದು ಬಂದಿಶಾಲೆಯಲ್ಲಿಯೂ ಎಷ್ಟೋ ಬಂದಿಯವರಿರುವರು. ಅವರು ಸತ್ತ ಕಾಲವನ್ನು ಸರಿಯಾಗಿ ಹೇಳುವುದನ್ನು ನೋಡಿದರೆ ತಮಗೆ ಜ್ಞಾಪಕಶಕ್ತಿಯು ಚೆನ್ನಾಗಿರುವಂತೆ ತೋರುತ್ತಲಿದೆ ಎಂದು ಗುಮಾಸ್ತನು ನಕ್ಕನು.

ಎಲ್ಲವೂ ನೆನಪಿಲ್ಲ; ಇದು ಮಾತ್ರ ಜ್ಞಾಪಕವಿರಲು ಒಂದು ಕಾರಣವುಂಟು. ಅದೇನು?

ಆನಂದನಿದ್ದ ಅಂಧಕೂಪಕ್ಕೂ ರಾಜದ್ರೋಹಿಯೊಬ್ಬನಿದ್ದ ಅಂಧಕೂಪಕ್ಕೂ ಮಧ್ಯೆ ಸುಮಾರು ನಲವತ್ತೈವತ್ತು ಅಡಿಗಳ ಮಂದವಾದ ಗೋಡೆಯಿದ್ದಿತು. ಈ ರಾಜದ್ರೋಹಿಯು ಬಲು ಘಾತುಕನು. "ಹಾಗೆಯೇ?"

ಅಹುದು. ಅವನನ್ನು ನೋಡಬೇಕೆಂದು ನಾನೊಂದು ಸಾರಿ ಅವನಿದ್ದ ಕೂಪಕ್ಕೆ ಹೋಗುವಾಗ ಜಾಲದುರ್ಗದ ಕಾರಾಗೃಹದ ಅಧಿಕಾರಿಯು ಇವನು ಘಾತುಕನು, ಸಂಗಡ ಕೆಲವು ಸಿಪಾಯಿಗಳನ್ನು ಕರೆದುಕೊಂಡು ಹೋಗುವುದು ಒಳ್ಳೆಯದು ಎಂದು

ಹೇಳಿದನು. ನಾನು ಆ ಕೂಪಕ್ಕೆ ಹೋದ ಒಡನೆಯೇ ಅವನು ಬಂದೇ ಹಾರು ಹಾರಿ ನನ್ನ ಸಮೀಪಕ್ಕೆ ಬಂದು, ಸುತ್ತಲಿದ್ದ ಸಿಪಾಯಿಗಳನ್ನು ನೋಡಿ ಹಾಗೆಯೇ ನಿಂತನು; ಇಲ್ಲದಿದ್ದರೆ ನನ್ನ ಗತಿ ಏನಾಗುತ್ತಲಿದ್ದಿತೋ! ಅವನು ಹಾರಿ ನನ್ನ ಬಳಿಗೆ ಬಂದಾಗ ಅವನಿಗೆ ಇದ್ದ ಮುಖಭಾವವು ಇನ್ನೂ ನನಗೆ ಜ್ಞಾಪಕವಿದೆ.

ಅದನ್ನು ಕೇಳಿ ಅಂಗದೇಶೀಯನು ಸ್ವಲ್ಪ ನಕ್ಕು ಅವನ ಹೆಸರೇನು? ಎಂದು ಕೇಳಿದನು. "ಧರ್ಮದೇವ." ಆಮೇಲೆ?

ಆ ಘಾತುಕನು ಹೇಗೆಯೋ ಕೆಲವು ಆಯುಧಗಳನ್ನು ಸಂಪಾದಿಸಿಕೊಂಡು ತನ್ನ ಕೂಪದಿಂದ ಯೋಗಾನಂದನ ಕೂಪಕ್ಕೆ ಬಂದಾಳು ಓಡಾಡುವಂತೆ ಸುರಂಗವನ್ನು ಹಾಕಿ, ಆಗಾಗ ಸನ್ಯಾಸಿಯ ಜತೆಯಲ್ಲಿ ಸೇರಿ ಮಾತನಾಡುತಲಿದ್ದಂತೆ ತೋರುತ್ತದೆ.

ಅದರಿಂದೇನು ಅಪಾಯ?

ಇಬ್ಬರು ಬಂದಿಗಳು ಸೇರಿದರೆ ಅವರು ಅವಾಗಲೂ ತಪ್ಪಿಸಿಕೊಂಡು ಹೋಗುವ ಯೋಚನೆಯನ್ನೇ ಮಾಡುವರು. ಅದೇ ಅಪಾಯ. ದೈವವಶಾತ್ ಅಷ್ಟರಲ್ಲಿ ಆನಂದನು ಸತ್ತುಹೋದನು.

ಅದರಿಂದ ಆ ಘಾತುಕನು ಓಡಿಹೋಗಲು ಮಾಡಿದ್ದ ಯೋಚನೆಯು ಮುರಿದು ಹೋಯಿತಲ್ಲವೇ?

ಸತ್ತವನಿಗೆ ಮಾತ್ರ ಹಾಗಾಯಿತು. ಜಾಲದುರ್ಗದ ಬಂಧನಾಲಯದಲ್ಲಿ ಸತ್ತವರನ್ನು ಗೋಣೀಚೀಲದಲ್ಲಿ ಹಾಕಿ ಹೊಲಿದು ಸಮುದ್ರದಲ್ಲಿ ಬಿಸುಡುವ ಪದ್ಧತಿ; ಅದನ್ನು ತಿಳಿದು ಆ ಘಾತುಕನು ಗೋಣೀಚೀಲದಲ್ಲಿದ್ದ ಆನಂದನ ಹೆಣವನ್ನು ತನ್ನ ಕೂಪಕ್ಕೆ ಸಾಗಿಸಿ ಆ ಚೀಲದಲ್ಲಿ ತಾನು ಮಲಗಿಕೊಂಡು ಒಳಗಡೆಯಿಂದ ಅದರ ಬಾಯಿಯನ್ನು ಹೊಲಿದು, ಸಮುದ್ರದಲ್ಲಿ ಬೀಳುವುದನ್ನು ನಿರೀಕ್ಷಿಸುತ್ತಲಿದ್ದನು.

ಹಾಗಾದರೆ ಅವನು ಮಹಾ ಸಾಹಸಿಯೂ ಧೈರ್ಯಶಾಲಿಯೂ ಆಗಿರಬೇಕು ಎಂದು ತೋರುತ್ತಲಿದೆ.

ಅವನು ಘಾತುಕನೆಂದು ಮೊದಲೇ ಹೇಳಲಿಲ್ಲವೆ? ಆದರೆ ಅವನ ಯೋಚನೆಯು ಅವನಿಗೇ ಮೃತ್ಯುವಾಯಿತು.

ಅದು ಹೇಗೆ? "ನಿಮಗೆ ಗೊತ್ತಾಗಲಿಲ್ಲವೋ?" ಇಲ್ಲ.

ಹೆಣದ ಚೀಲಕ್ಕೆ ಅವಾಗಲೂ ಒಂದು ಭಾರವಾದ ಕಬ್ಬಿಣದ ಗುಂಡನ್ನು ಕಟ್ಟಿಯೇ ಸಮುದ್ರದಲ್ಲಿ ಎಸೆಯುವ ಪದ್ಧತಿ; ಅದು ಅವನಿಗೆ ಗೊತ್ತಿರಲಿಲ್ಲವೆಂದು ತೋರುತ್ತಲಿದೆ.

ಅಮೇಲೆ?

ಅವನು ಮಲಗಿದ್ದ ಚೀಲಕ್ಕೂ ಪದ್ಧತಿಯು ಪ್ರಕಾರ ಭಾರವಾದ ಒಂದು ಗುಂಡನ್ನು ಕಟ್ಟಿ ಸಮುದ್ರದಲ್ಲಿ ಬಿಸುಟರು.

ನಿಶ್ಚಯವಾಗಿ?

ನಿಶ್ಚಯವಾಗಿ ಮೇಲಿನಿಂದ ನೀರಿನಲ್ಲಿ ಬೀಳುವಾಗ ಅವನಿಗೆ ಎಷ್ಟು ವಿಸ್ಮಯ ವ್ಯಾಕುಲವುಂಟಾಯಿತೋ ಕಾಣೆ; ನನಗೆ ಆಗ ಅವನ ಮುಖವನ್ನು ನೋಡಲು ಆಸೆ ಇದ್ದಿತು.

ಅದು ಹೇಗೆ ಸಾಧ್ಯ?

ಚಿಂತೆಯಿಲ್ಲ. ಅದನ್ನು ನಾನು ಮನಸಾ ಊಹಿಸಬಲ್ಲೆನು. ಆ ಹುಚ್ಚನು ಸತ್ತ ದಿನವೇ ಈ ಸಂಗತಿಯು ನಡೆದುದರಿಂದ ನನಗೆ ಚೆನ್ನಾಗಿ ಆ ದಿನವು ಜ್ಞಾಪಕವಿದೆ.

ಹಾಗಾದರೆ ಆ ಘಾತುಕನು ಸತ್ತುಹೋಗಿರಬೇಕು.

ಸಾಯದೆ ಇನ್ನೇನು ಆದಾನು?

ಹಾಗಾದರೆ ಆ ಹುಚ್ಚನಿಗೂ ಘಾತುಕನಿಗೂ ಒಂದೇ ಸಲ ಬಿಡುಗಡೆಯಾಯಿತು ಎಂದು ಅಂಗದೇಶೀಯನು ನಕ್ಕನು.

ಅಹುದು, ಅಹುದು ಎಂದು ಭಾಸ್ಕರನೂ ನಕ್ಕನು.

ಅದು ಹೋಗಲಿ. ಆ ಅನಂದನ ವಿಚಾರವಾಗಿ ನಿಮ್ಮ ಪುಸ್ತಕದಲ್ಲಿ ಏನನ್ನು ಬರೆದಿರುವಿರೋ ಅದನ್ನು ನೋಡಬೇಕಲ್ಲಾ?

ಓಹೋ! ಈ ಕಥೆಯಲ್ಲಿ ಅದು ಮರೆತೇಹೋಯಿತು. ಅದನ್ನು ನೀವು ಅಗತ್ಯ ನೋಡಬೇಕೋ?

ತಾವು ದಯವಿಟ್ಟು ತೋರಿಸಿದರೆ.

ಹಾಗಾದರೆ ಇಲ್ಲಿ ಬನ್ನಿ ಎಂದು ಭಾಸ್ಕರನು ಅವನನ್ನು ಒಂದು ಕೊಟ್ಟಡಿಗೆ ಕರೆದುಕೊಂಡು ಹೋಗಿ ಕುಳ್ಳಿರಿಸಿ, ಅವನ ಮುಂದಿದ್ದ ಮೇಜಿನ ಮೇಲೆ ಬೇಕಾದ ಪುಸ್ತಕಗಳನ್ನು ತಂದಿಟ್ಟು, ತಾನು ಒಂದು ವೃತ್ತಾಂತಪತ್ರಿಕೆಯನ್ನು ಕಯ್ಯಲ್ಲಿ ಹಿಡಿದು

ಓದುತ್ತ ಸ್ವಲ್ಪ ದೂರದಲ್ಲಿ ಮತ್ತೊಂದು ಕುರ್ಚಿಯಲ್ಲಿ ಕುಳಿತನು. ನಂದಕುಮಾರನ ಗುಮಾಸ್ತನಿಗೆ ಯೋಗಾನಂದನ ವಿಷಯವಾಗಿ ತಿಳಿಯಬೇಕಾದ ಸಂಗತಿಯು ಸುಲಭವಾಗಿ ಸಿಕ್ಕಿದರೂ, ಧರ್ಮದೇವನ ವಿಷಯವಾಗಿ ಭಾಸ್ಕರನು ಹೇಳಿದ ಕಥೆಯಲ್ಲಿ ಕುತೂಹಲವುಂಟಾಗಿ ಅದನ್ನು ಬರೆದಿರುವ ಪತ್ರವನ್ನು ತೆಗೆದು ಓದುತ್ತಿದ್ದನು. ಅದರಲ್ಲಿ ದುರ್ಮತಿಯು ಬರೆದಿದ್ದ ಹೆಸರಿಲ್ಲದ ಅರ್ಜಿಯೂ, ಧನಕೋಟಿಯು ಧರ್ಮದೇವನ ವಿಷಯವಾಗಿ ಬರೆದುಕೊಂಡಿದ್ದ ಮನವಿಯೂ, ಅದರ ಮೇಲೆ ವಲ್ಲಭದೇವನು ಬರೆದಿದ್ದ ಟಿಪ್ಪಣಿಯೂ, ಕೊನೆಯಲ್ಲಿ ಭಾಸ್ಕರನು ಮೇಲೆ ಒರೆದಿರುವುದನ್ನು ನೋಡಿದರೆ ಅವ ಸಹಾಯವನ್ನೂ ಮಾಡಲಾಗದು ಎಂದು ಬರೆದಿದ್ದುದೂ ಎಲ್ಲವೂ ಕ್ರಮವಾಗಿದ್ದುವು. ಅವುಗಳನ್ನೆಲ್ಲಾ ಚೆನ್ನಾಗಿ ಓದಿನೋಡಲು ಧನಕೋಟಿಯು ಮಾಡಿದ ಸಹಾಯ, ವಲ್ಲಭದೇವನ ಕೃತ್ರಿಮಸಂಧಾನ. ಇವೆಲ್ಲ ಅವನಿಗೆ ಚೆನ್ನಾಗಿ ಮಂದಟ್ಟಾದುವು. ಇವುಗಳಲ್ಲಿ ದುರ್ಮತಿಯು ಬರೆದಿದ್ದ ಹೆಸರಿಲ್ಲದ ಅರ್ಜಿಯನ್ನು ಮಾತ್ರ ಕಿತ್ತು ಜೇಬಿನಲ್ಲಿ ಹಾಕಿಕೊಂಡು, ಪುಸ್ತಕವನ್ನು ದಬ್ಬಿಂದು ಮುಚ್ಚಿದನು. ಭಾಸ್ಕರನಿಗೆ ಇದಾವುದೂ ತಿಳಿಯಲಿಲ್ಲ; ವೃತ್ತಾಂತಪತ್ರಿಕೆಯನ್ನು ಓದುತ್ತಿದ್ದುದರಿಂದ ನೋಡಲಿಲ್ಲವೋ, ಅಥವಾ ಅವನು ತನಗೆ ಕೊಡುತ್ತೇನೆಂದು ಹೇಳಿದ್ದ ಎರಡುಲಕ್ಷ ವರಹಗಳಿಗಿಂತ ಅವನು ಕಿತ್ತು ತೆಗೆದುಕೊಂಡ ಕಾಗದವು ದೊಡ್ಡದಲ್ಲವೆಂದು ಉದಾಸೀನಭಾವದಿಂದ ಸುಮ್ಮನಿದ್ದನೋ ನಾವು ಕಾಣೆವು.

ಆಗ ಗುಮಾಸ್ತನು ಪುಸ್ತಕವನ್ನು ಮುಚ್ಚಿ ಎದ್ದು ನನಗೆ ಬೇಕಾದುದು ಸಿಕ್ಕಿತು; ಇಗೋ ನಿಮ್ಮ ಹಣವನ್ನು ತೆಗೆದುಕೊಳ್ಳಿರಿ. ಈ ಹಣಕ್ಕೆ ಧನಕೋಟಿಯ ಮೇಲೆ ಒಂದು ಹುಂಡಿಯನ್ನು ಬರೆದುಕೊಟ್ಟರೆ ಸಾಕು, ಎಂದೆನು.

ಭಾಸ್ಕರನು ಹಣವನ್ನು ತೆಗೆದಿಟ್ಟುಕೊಂಡು, ಹುಂಡಿಯನ್ನು ಬರೆದುಕೊಟ್ಟು ಗುಮಾಸ್ತನನ್ನು ಸಾಗಕಳುಹಿಸಿದ ಮೇಲೆ, ತನ್ನ ಕೊಟ್ಟಡಿಗೆ ಬಂದು ಇಂತಹ ಮುಟ್ಠಾಳ ಗುಮಾಸ್ತನಿಲ್ಲದಿದ್ದರೆ ನನ್ನ ಗತಿಯೇನಾಗುತಲಿದ್ದಿತು? ಈ ಎರಡು ಲಕ್ಷ ವರಹಗಳಲ್ಲಿ ಒಂದುಕಾಸು ಕೂಡ ಇವನಿಗೆ ಬಾರದು ಎಂದು ಹೇಳಿಕೊಂಡನು.

ಭಾಸ್ಕರನು ಧನಕೋಟಿಯ ಮೇಲೆ ಹುಂಡಿಯನ್ನು ಬರೆದುಕೊಟ್ಟಾಗ ಇವನ ಸ್ಥಿತಿ

ಯು ಹೇಗಿದ್ದಿತೆಂದು ತಿಳಿಯಲು ನಮ್ಮ ಪಾಠಕರು ಕುತೂಹಲವುಳ್ಳವರಾಗಿರಬಹುದು ; ಆದುದರಿಂದ ನಾವು ಅದನ್ನು ಅವರಿಗೆ ಸಂಕ್ಷೇಪವಾಗಿ ತಿಳಿಸುವೆವು.

ಪ್ರಾರಂಭದಲ್ಲಿ ಧನಕೋಟಿಯು ವ್ಯಾಪಾರವು ಒಳ್ಳೆಯ ಸ್ಥಿತಿಯಲ್ಲಿದ್ದಿತು ; ಆಗ ಅವನ ಮಳಿಗೆಗಳು ಅವಾಗಲೂ ಸರಕುಗಳಿಂದ ತುಂಬಿದ್ದುವು ; ಅನೇಕರು ಅವನ ಬಳಿಗೆ ಬರುತ್ತ ಹೋಗುತ್ತಲಿದ್ದರು ; ಹತ್ತಿರ ನೂರಾರು ಜನ ಗುಮಾಸ್ತರುಗಳು ಒಂದು ನಿಮಿಷವಾದರೂ ವ್ಯವಧಾನವಿಲ್ಲದೆ ಓಡಾಡುತ್ತಲಿದ್ದರು. ಈಗಲೋ ಮಳಿಗೆಗಳೆಲ್ಲವೂ ಮುಚ್ಚಿ ಹೋಗಿರುವುವು ; ಜನಗಳ ಓಡಾಟವೂ ನಿಂತುಹೋಯಿತು ; ಒಬ್ಬ ಒಕ್ಕಣ್ಣನಲ್ಲದೆ (ಅದಕ್ಕಾಗಿಯೇ ಎಲ್ಲರೂ ಅವನನ್ನು ಶುಕ್ರಾಚಾರಿಯೆಂದು ಕರೆಯುತ್ತಲಿದ್ದರು) ಬೇರಾರೂ ಗುಮಾಸ್ತರು ಇರಲಿಲ್ಲ. ಈ ಗುಮಾಸ್ತನು ಮಾತ್ರ ಧನಕೋಟಿಯಲ್ಲಿ ಪೂರ್ಣವಾದ ಭಕ್ತಿಯಿಂದ ಬಡತನದಲ್ಲಿಯೂ ಅವನನ್ನು ಬಿಟ್ಟುಹೋಗದೆ ಇದ್ದನು.

ಧನಕೋಟಿಯು ಹೀನಸ್ಥಿತಿಗೆ ಬಂದ ಹಾಗೆಲ್ಲಾ ಅವನ ಯೋಚನೆಗಳು ಹೆಚ್ಚುತ್ತಲಿದ್ದುವು. ತಾನು ಕೊಡಬೇಕಾಗಿದ್ದ ಚಿಲ್ಲರೆ ಸಾಲಗಳನ್ನು ತೀರಿಸಲು, ಹಣವಿಲ್ಲದೆ ಹೆಂಡಿತಿ ಮಕ್ಕಳ ಮೇಲೆ ಹಾಕಿದ್ದ ಒಡವೆಗಳನ್ನು ಮಾರಿ ತೀರಿಸಬೇಕೆಂದು ಯೋಚಿಸಿ, ಇಲ್ಲಿ ಮಾಡಿದರೆ ತನ್ನ ಸ್ಥಿತಿಯು ಎಲ್ಲರಿಗೂ ತಿಳಿದು ಸಾಲಗಾರರೆಲ್ಲರೂ ಒಂದೇ ಸಲ ಮೇಲೆ ಬೀಳುವರೆಂಬ ಭೀತಿಯಿಂದ, ದೂರದೇಶಕ್ಕೆ ಹೋಗಿ ಅವುಗಳನ್ನು ಮಾರಿ ಬಂದ ಹಣದಿಂದಲೂ, ಅವನಿಗೆ ಬರಬೇಕಾಗಿದ್ದು ಆಗಾಗ ಬರುತ್ತಲಿದ್ದ ಅಲ್ಪಸ್ವಲ್ಪ ಹಣಗಳಿಂದಲೂ, ಚಿಲ್ಲರೆ ಸಾಲಗಳನ್ನು ತೀರಿಸುತ್ತಲಿದ್ದನು. ದೊಡ್ಡದೊಡ್ಡ ಸಾಲಗಳನ್ನು ತೀರಿಸಲು ಜಾಮುಲಕ್ಷ್ಮಿಯು ಬರುವುದನ್ನೇ ಕಾಯುತ್ತಲಿದ್ದನು. ದೈವಾಧೀನದಿಂದ ಆಂತಹ ಸಾಲಗಳಿಗೆ ವರಾತುಗಳು ಬಂದಿರಲಿಲ್ಲ.

ಹೀಗಿರುವಾಗ ನಂದಕ-ಮಾರನ ಗುಮಾಸ್ತನು ಧನಕೋಟಿಯನ್ನು ನೋಡುವುದಕ್ಕೆ ಬಂದನು. ಇವನಾವನೋ ಹೊಸ ಸಾಲಗಾರನಿರಬಹುದೆಂದು ಯೋಚಿಸಿ ಧನಕೋಟಿಯು ಮಗಳನ್ನು ಮದುವೆಯಾಗಬೇಕೆಂಬ ಉದ್ದೇಶದಿಂದ ಅವನ ಮನೆಯಲ್ಲಿಯೇ ಇರುತಲಿದ್ದ ಮನೋಮೋಹನನು ಇವನನ್ನು ನೋಡುವುದರಿಂದ ಧನಕೋಟಿಗೆ ಉಂಟಾಗುವ ಸಂಕಟವನ್ನು ತಪ್ಪಿಸಲು ತಾನೇ ಅವನನ್ನು ವಿಚಾರಿಸಿ ಕಳುಹಿಸಬೇಕೆಂದು ಪ್ರಯತ್ನಪಟ್ಟನು ; ಆ ಗುಮಾಸ್ತನು " ನಾನು ಯಜಮಾನನ ಸಂಗಡ

ಮಾತನಾಡಲು ಬಂದಿದ್ದೇನೆ, ನಿಮ್ಮಲ್ಲಿ ನನಗೆ ಏನೂ ಕೆಲಸವಿಲ್ಲ" ಎಂದು ಹೇಳಲು, ಮನೋಮೋಹನನು ನಿಟ್ಟುಸಿರನ್ನು ಬಿಟ್ಟು ಶುಕ್ರಾಚಾರಿಯನ್ನು ಕರೆದು ಶ್ರೀಮಂತ ನಂದಕುಮಾರರ ಗುಮಾಸ್ತರನ್ನು ಯಜಮಾನರ ಬಳಿಗೆ ಕರೆದುಕೊಂಡು ಹೋಗು ಎಂದನು.

ಅವರಿಬ್ಬರೂ ಉಪ್ಪರಿಗೆಯ ಮೆಟ್ಟಲುಗಳನ್ನು ಏರಿ ಹೋಗುತ್ತಲಿರುವಾಗ, ಅರ್ಧ ದಾರಿಯಲ್ಲಿ ನಿಂತಿದ್ದ ಹದಿನೆಂಟು ವಯಸ್ಸಿನ ಒಬ್ಬ ಯುವತಿಯನ್ನು ನೋಡಿ ಶುಕ್ರಾಚಾರಿಯು ಅಮ್ಮಾ, ರತ್ನಾಂಬೆ! ಯಜಮಾನರು ಮೇಲಿರುವರೋ ಎಂದು ಕೇಳಿದುದಕ್ಕೆ, ಅವಳು ಇರಬೇಕು ಎಂದಳು.

ಯಜಮಾನರನ್ನು ನೋಡಬೇಕೆಂದು ಈ ದೊಡ್ಡಮನುಷ್ಯರು ಬಂದಿದ್ದಾರೆ, ಅದನ್ನು ಅವರಿಗೆ ತಿಳಿಸಿರಿ ಎಂದು ಶುಕ್ರಾಚಾರಿಯು ಹೇಳಲು, ಅಂಗದೇಶೀಯನು ಅಮ್ಮಾ ಯಜಮಾನರಿಗೆ ನಾನಿಂಥವನೆಂದು ತಿಳಿಯದು; ಧನಾಗಾರಾಧ್ಯಕ್ಷರಾದ ಶ್ರೀಮಂತ ನಂದಕುಮಾರರ ಗುಮಾಸ್ತನು ಬಂದಿದ್ದಾನೆಂದು ತಿಳಿಸಿರಿ ಎಂದು ಹೇಳಿದನು. ಆಕೆಯು ಇವನಾವನೋ ದೊಡ್ಡ ಸಾಲಗಾರನೆಂದು ಗಾಬರಿಬಿದ್ದು ಆವ ಮಾತನ್ನೂ ಆಡದೆ ಮಹಡಿಯಿಂದ ಇಳಿದು ಮನೋಮೋಹನನ ಬಳಿಗೆ ಓಡಿಹೋದಳು. ಶುಕ್ರಾಚಾರಿಯು ಅಂಗದೇಶೀಯನನ್ನು ಧನಕೋಟಿಯ ಕೊಟ್ಟಡಿಗೆ ಕರೆದುಕೊಂಡುಹೋಗಿ ಅವನಿಂಥವನೆಂದು ಯಜಮಾನನಿಗೆ ಹೇಳಿ ಹೊರಟು ಹೋದನು.

ಆಗ ಧನಕೋಟಿಯು ಲೆಕ್ಕದ ಪುಸ್ತಕಗಳನ್ನು ನೋಡುತ್ತಲಿದ್ದನು. ಗುಮಾಸ್ತನು ಬಂದೊಡನೆಯೇ ಪುಸ್ತಕವನ್ನು ಮುಚ್ಚಿ ಎದ್ದು ಅವನಿಗೆ ಮರ್ಯಾದೆಯನ್ನು ಮಾಡಿ, ಆಸನವನ್ನು ಕೊಟ್ಟು ಕುಳ್ಳಿರಿಸಿ, ತಾನೊಂದು ಕುರ್ಚಿಯಲ್ಲಿ ಕುಳಿತುಕೊಂಡನು.

ಈ ಹದಿನಾಲ್ಕು ವರ್ಷಗಳಲ್ಲಿ ಧನಕೋಟಿಯ ಮುಖದಲ್ಲಿ ಅನೇಕ ವ್ಯತ್ಯಾಸಗಳು ತೋರುತ್ತಲಿದ್ದುವು. ಆಗ ಅವನಿಗೆ ಮೂವತ್ತಾರು ವಯಸ್ಸು. ಈಗ ಐವತ್ತು ವಯಸ್ಸು; ಆಗ ಅವನ ಮುಖವು ಅರಳಿದ ಬಂಧೂಕದ ಪುಷ್ಪದಂತೆ ಸಂತೋಷದಿಂದ ಕೆಚ್ಚನೆ ತೋರುತ್ತಲಿದ್ದಿತು; ಈಗ ಬಾಡಿಹೋಗಿ ಮನಸ್ಸಿನಲ್ಲಿದ್ದ ಚಿಂತೆಯನ್ನು ಸೂಚಿಸುತ್ತಲಿದ್ದಿತು. ಅತಿ ಕೌತುಕದಿಂದ ಗುಮಾಸ್ತನು ನೋಡುತ್ತಿರಲು, ಧನಕೋಟಿಯು ಅಯ್ಯಾ! ತಾವೇನು ಇಷ್ಟುದೂರ ವಿಜಯಮಾಡಿಸಿದುದು ಎಂದನು.

ಶ್ರೀಮಂತನಂದಕುಮಾರರು ಅಮರದೇಶದಲ್ಲಿ ಈ ತಿಂಗಳು ಸುಮಾರು ಮೂರು ಲಕ್ಷ ವರಹಗಳನ್ನು ಸಲ್ಲಿಸಬೇಕಾಗಿರುವುದರಿಂದ, ಹುಂಡಿಗಳನ್ನು ಜತೆಮಾಡಿ ನನ್ನಲ್ಲಿ ಕೊಟ್ಟಿದ್ದಾರೆ. ಈ ಹಣಗಳನ್ನು ನಿನ್ನಿಂದ ಪಡೆದು ಕೊಡತಕ್ಕವರಿಗೆಲ್ಲಾ ಸಕಾಲದಲ್ಲಿ ಕೊಡಹೇಳಿದ್ದಾರೆ. ನೀವು ಗಡುವಿಗೆ ಸರಿಯಾಗಿ ಕೊಡದಿರಲಾರಿರಿ.

ಯಾವ ಯಾವ ಹುಂಡಿಗಳು ?

ಇಗೋ ಮೊದಲನೆಯದು ಬಂದಿಶಾಲೆಗಳ ಮೇಲ್ವಿಚಾರಕನಾದ ಭಾಸ್ಕರನ ಎರಡು ಲಕ್ಷ ವರಹಗಳ ಹುಂಡಿ ಎಂದು ಅದನ್ನು ಅವನ ಕಯ್ಯಲ್ಲಿ ಕೊಟ್ಟನು.

ಇದು ನಾನು ಕೊಡತಕ್ಕ ಹಣವೇ. ಇನ್ನಾವುದಾದರೂ ಉಂಟೋ ?

ಹೂಂ, ಇನ್ನೂ ಎಂಭತ್ತೇಳು ಸಾವಿರದ ಐದುನೂರು ವರಹಗಳಿಗೆ ಹುಂಡಿಗಳುಂಟು ಎಂದು ಅವುಗಳನ್ನೂ ಧನಕೋಟಿಯ ಕೈಗೆ ಕೊಟ್ಟನು. ಎರಡು ಲಕ್ಷವೂ ಎಂಭತ್ತೇಳು ಸಾವಿರದ ಐದುನೂರು ವರಹಗಳು! ಎಂದು ಹೇಳಿ ಧನಕೋಟಿಯು ನಿಟ್ಟುಸಿರನ್ನು ಬಿಟ್ಟನು.

ಆಗ ಗುಮಾಸ್ತನು ಸ್ವಾಮೀ, ನಾನು ಕೇಳಿದ ಸಮಾಚಾರಗಳನ್ನು ನಿರ್ವಂಚನೆಯಾಗಿ ತಮಗೆ ತಿಳಿಸುವೆನು, ಕ್ಷಮಿಸಬೇಕು. ಸಾಲಗಳನ್ನು ತೀರಿಸುವುದಕ್ಕೆ ಈಗ ತಮಗೆ ಶಕ್ತಿಸಾಲದೆಂದು ಊರೆಲ್ಲಾ ಹೇಳಿಕೊಳ್ಳುತ್ತಾರೆ. ಇದು ನಿಜವೋ ಎಂದನು.

ಈ ಕ್ರೂರವಾದ ಮಾತನ್ನು ಕೇಳಿ ಧನಕೋಟಿಯು ಸಂಕಟದಿಂದ ಅಪ್ಪಾ, ನಾನು ಕೊಡತಕ್ಕ ಹಣಗಳನ್ನು ಒಂದು ನಿಮಿಷವೂ ಸಾವಕಾಶವಿಲ್ಲದಂತೆ ಕೊಡುತ ಲಿದ್ದೇನೆ ಎಂದನು.

ನಾನು ಅದನ್ನು ಬಲ್ಲೆನು ; ಅದುದರಿಂದಲೇ ಈ ಹಣಗಳು ಖಂಡಿತವಾಗಿಯೂ ಸಕಾಲಕ್ಕೆ ಸಿಕ್ಕುವುವೆಂದು ತಮ್ಮಲ್ಲಿಗೆ ಬಂದೆನು.

ನಿರ್ವಂಚನೆಯಾಗಿ ಮಾಡಿದ ಪ್ರಶ್ನೆಗೆ ಖಂಡಿತವಾದ ಉತ್ತರವನ್ನೇ ಕೊಡ ಬೇಕು ; ನನ್ನ ಜಯಲಕ್ಷ್ಮಿಯು ಚೀನಾದೇಶದಿಂದ ಹೊರಟ ವರ್ತಮಾನ ಬಂದಿದೆ ; ಅದು ಕೂಡಲೇ ಒರಬಹುದು. ಆಮೇಲೆ ಈ ಸಾಲವನ್ನೆಲ್ಲಾ ಸಲ್ಲಿಸಿಬಿಡುತ್ತೇನೆ.

" ಇಲ್ಲವಾದರೆ ? " " ಇಲ್ಲವಾದರೆ——. "

" ಏನು ? "

ಇಷ್ಟು ಕಠಿನವಾಗಿ ಕೇಳಿದ ಗುಮಾಸ್ತನು ಧನಕೋಟಿಯ ಭಾವವನ್ನು ನೋಡಿ ಕಣ್ಣಿನಲ್ಲಿ ನೀರ ತುಂಬಿಕೊಂಡನು. ಆದರೆ ಅವನು ಮುಖವನ್ನು ಒರೆಸಿಕೊಳ್ಳುವನಂತೆ ಅದನ್ನೂ ಒರೆಸಿಕೊಂಡು, " ಈ ಆಪತ್ಕಾಲದಲ್ಲಿ ತಮಗೆ ಆವ ಸಹಾಯಕನೂ ಇಲ್ಲವೋ ? "

ಅಪ್ಪಾ ! ಹಣವಿರುವ ವರೆಗೇ ಸ್ನೇಹಿತರೂ ಬಂಧುಬಳಗಗಳೂ; ಅದು ಹೋದ ಮೇಲೆ ಯಾರೂ ಇಲ್ಲ.

ಹಾಗಾದರೆ ನಿಮ್ಮ ಹಡಗು ಬಂದರೆ ಹಣ ; ಇಲ್ಲವಾದರೆ ಇಲ್ಲ ತಾನೇ ?

" ಹೂಂ "

ನಾನಿಲ್ಲಿಗೆ ಬರುವಾಗ ರೇವಿನಲ್ಲಿ ಬಂದು ಹಡಗಿದ್ದಿತು. ಅದು ತಮ್ಮದೋ ?

ಅದು ನನ್ನದಲ್ಲ ; ಅದರ ಹೆಸರು ಗೋಲಕೊಂಡ ; ನನ್ನದು ಜಯಲಕ್ಷ್ಮಿ.

ಈ ವೇಳೆಗೆ ಸರಿಯಾಗಿ ಧನಕೋಟಿಯು ಮನೆಯ ಮುಂದೆ ವಿಪರೀತ ಗಲಭೆಯಾಯಿತು. ಅದೇನೆಂದು ನೋಡಲೋಸುಗ ಧನಕೋಟಿಯು ಎದ್ದು ಬಾಗಿಲನ್ನು ತೆರೆಯಲು, ಅವನ ಮಗಳು ರತ್ನಾಂಬೆಯು ಅಳುತ್ತಾ ಬಂದು " ಅಪ್ಪಾ ! ನಮ್ಮ ಜಯಲಕ್ಷ್ಮಿಯು ಮುಳುಗಿಹೋಯಿತಂತೆ " ಎಂದಳು.

ಅಮ್ಮಾ ! ನಾವಿಕರೋ ?

ಅವರೆಲ್ಲರೂ ಸೌಖ್ಯವಾಗಿ ಬಂದು ಊರನ್ನು ಸೇರಿದರು.

ನನ್ನ ಪಾಪದಿಂದ ಹಡಗು ಹೋದರೂ ಚಿಂತೆಯಿಲ್ಲ ; ದೇವರ ದಯೆಯಿಂದ ಅವರೆಲ್ಲರೂ ಬದುಕಿಬಂದರಲ್ಲ, ಅಷ್ಟೇ ಸಾಕು ಎಂದು ದೇವರಿಗೆ ವಂದನೆಮಾಡಿದನು. ಅಷ್ಟರಲ್ಲಿಯೇ ಅವನ ಹೆಂಡತಿಯು ಅಳುತ್ತ ಬಂದಳು ; ಮನೋಮೋಹನನೂ ಅವಳ ಹಿಂದೆ ತಲೆಯನ್ನು ಬಗ್ಗಿಸಿಕೊಂಡು ಬಂದನು. ಅವರ ಹಿಂದೆ ಜಯಲಕ್ಷ್ಮಿಯ ನಾವಿಕರೆಲ್ಲರೂ ಬಂದು ಬಾಗಿಲಿನಲ್ಲಿ ನಿಂತರು. ಅವರನ್ನು ನೋಡಿ ನಂದಕುಮಾರನ ಗುಮಾಸ್ತನು ಸ್ವಲ್ಪ ಬೆಚ್ಚಿ ತಾನು ಕುಳಿತಿದ್ದ ಕುರ್ಚಿಯನ್ನು ಬಿಟ್ಟು ಮತ್ತೊಂದು ಕುರ್ಚಿಯಲ್ಲಿ ಕೂತುಕೊಂಡನು.

ಧನಕೋಟಿಯು ನಾವಿಕರನ್ನು ನೋಡಿ, ಏನು ಸಮಾಚಾರ ಎಂದು ಕೇಳಲು, ದಾಶನೆಂಬ ಮುಖ್ಯನಾವಿಕನು ಯಜಮಾನನಿಗೆ ಅಡ್ಡಬಿದ್ದು, ಮಹಾಸ್ವಾಮೀ !

ಇನ್ನೇನು ನಾಲ್ಕು ದಿವಸಗಳಲ್ಲಿ ಊರನ್ನು ಸೇರಬಹುದೆಂದು ಇದ್ದೆವು. ಆಗ ಬಿರುಗಾಳಿಯೆದ್ದು ಸಮುದ್ರವು ಉಲ್ಲೋಲಕಲ್ಲೋಲವಾಯಿತು. ಗುಡುಗು ಸಿಡಿಲು ಮಳೆ ವಿಪರೀತವಾಯಿತು. ಗಾಳಿಯು ಜಯಲಕ್ಷ್ಮಿಯನ್ನು ಒಂದು ಬಂಡೆಗೆ ತಾಟಿಸಿತು. ಅದು ಬಿರುಕುಬಿಟ್ಟಿತು. ಅದರಿಂದ ಒಳಗೆ ನೀರು ನುಗ್ಗಿ ನಾವು ಹೊರಗೆ ಬರುವುದೇ ಪ್ರಯಾಸವಾಯಿತು. ಅಷ್ಟರಲ್ಲಿಯೇ ದೈವಾನುಗ್ರಹದಿಂದ ಗೋಲಕೊಂಡವೆಂಬ ಹಡಗು ಅದೇ ದಾರಿಯಲ್ಲಿ ಬರಲು, ಅದರಲ್ಲಿ ನಾವು ಹತ್ತಿಕೊಂಡು ಬಂದೆವು. ಜಯಲಕ್ಷ್ಮಿಯೂ ಸರಕುಗಳೂ ಅನ್ಯಾಯವಾಗಿ ಸಮುದ್ರದ ಪಾಲಾದುವು ಎಂದನು.

ಅದನ್ನು ಕೇಳಿ ಧನಕೋಟಿಯು ಎಲೋ, ದಾಶ! ಹಡಗೂ ಸರಕುಗಳೂ ಹೋದರೆ ಅವುಗಳನ್ನು ಪುನಃ ಸಂಪಾದಿಸಬಹುದು; ಮನುಷ್ಯರು ಹೋದರೆ ಪುನಃ ಬರಲಾರರು. ಇಷ್ಟರಮಟ್ಟಿಗೆ ದೇವರು ನಿಮ್ಮನ್ನು ಕಾಪಿಟ್ಟುದಕ್ಕಾಗಿ ಅವನನ್ನು ಎಷ್ಟು ಕೊಂಡಾಡಿದರೂ ತೀರದು ಎಂದು ಹೇಳಿ ಶುಕ್ರಾಚಾರಿಯನ್ನು ಕರೆದು ಇವರಿಗೆ ಕೊಡಬೇಕಾದ ಸಂಬಳಗಳನ್ನು ಸಲ್ಲಿಸಿಬಿಡು; ಬೇರೆ ಎಲ್ಲಿಯಾದರೂ ಇವರು ಚಾಕರಿಗೆ ಸೇರಿಕೊಳ್ಳಲಿ ಎಂದನು.

ದಾಶನು ನಮ್ಮ ಮೇಲೆ ಮಹಾನ್ವಾಮಿಯವರಿಗೆ ಕೋಪವೇನೋ ಎನ್ನಲು, ಧನಕೋಟಿಯು ಅಪ್ಪಾ! ನನಗೆ ಕೋಪವಿಲ್ಲ; ದೈವಗತಿಗೆ ನೀವೇನ ಮಾಡುವಿರಿ? ನನ್ನಲ್ಲಿ ಯಾವ ಹಡಗೂ ಇಲ್ಲವಾದುದರಿಂದ ನಾನು ಹಾಗೆ ಹೇಳಿದೆ ಎಂದನು.

ಈಗ ಹಡಗಿಲ್ಲದಿದ್ದರೆ ತಾವು ಬೇರೆ ಹಡಗನ್ನು ಕಟ್ಟುವ ವರೆಗೆ ಕಾದಿರುವೆವು.

ಅಪ್ಪಾ! ಕಟ್ಟಲು ಹಣವಿಲ್ಲ; ಒಳ್ಳೆಯ ಕಾಲ ಬಂದಾಗ ನೋಡೋಣ ಎಂದು ಹೇಳಿ, ಮನೋಮೋಹನನಿಗೆ ಸಂಜ್ಞೆಮಾಡಲು ಅವನು ಅವರನ್ನು ಕರೆದುಕೊಂಡು ಹೋದನು.

ಆಗ ಧನಕೋಟಿಯು ಹೆಂಡತಿಯನ್ನೂ ಮಗಳನ್ನೂ ಹೊರಕ್ಕೆ ಕಳುಹಿಸಿ, ನಂದಕುಮಾರನ ಗುಮಾಸ್ತನ ಕಡೆ ತಿರುಗಿ ಅಯ್ಯಾ! ತಾವು ಎಲ್ಲವನ್ನೂ ಕೇಳುತ್ತಲಿದ್ದಿರಷ್ಟೆ ಎಂದನು.

ಇದು ಬಹು ಅನ್ಯಾಯ; ಈ ಹಣಗಳನ್ನು ಕೊಡಲು ತಮಗೆ ವ್ಯವಧಾನ ಬೇಕಾಗಿದ್ದರೆ ನಾನು ಕೊಡುವೆನು.

ನಿಮ್ಮ ಯಜಮಾನರ ಅಪ್ಪಣೆಯಿಲ್ಲದೆ ವ್ಯವಧಾನವನ್ನು ಕೊಡುವುದಕ್ಕೆ ಆಗುತ್ತದೆಯೇ ?

ನಮ್ಮ ಯಜಮಾನರು ನನಗೆ ಸರ್ವಸ್ವಾತಂತ್ರ್ಯವನ್ನೂ ಕೊಟ್ಟಿರುವರು.

ವ್ಯವಧಾನವನ್ನು ಕೊಟ್ಟರೆ ಹೇಗಾದರೂ ಪ್ರಯತ್ನಮಾಡಿ ಸಾಲವನ್ನು ತೀರಿಸಿ ಮಾನವನ್ನು ಉಳಿಸಿಕೊಳ್ಳುವೆನು.

ಎಷ್ಟು ತಿಂಗಳು ಬೇಕು ?

ಎರಡು ತಿಂಗಳಾದರೆ ಸಾಕು.

ಮೂರು ತಿಂಗಳು ತೆಗೆದುಕೊಳ್ಳೋಣಾಗಲಿ. ಇಂದು ಭಾದ್ರಪದಶುದ್ಧ ಪಂಚಮಿ, ಈಗ ಹನ್ನೊಂದು ಘಂಟೆ; ನಾಳೆಯ ಮಾರ್ಗಶಿರಶುದ್ಧ ಪಂಚಮಿಯ ದಿನ ಬೆಳಿಗ್ಗೆ ಹನ್ನೊಂದು ಘಂಟೆಗೆ ಸರಿಯಾಗಿ ಬರುವೆನು; ಆವೇಳೆಗೆ ತಾವು ಹಣವನ್ನು ಸಿದ್ಧಪಡಿಸಿ ಕೊಂಡಿರಬಹುದು ಎಂದನು.

ಆ ದಿನ ಖಂಡಿತವಾಗಿಯೂ ತವಗೆ ಹಣವನ್ನು ಕೊಡುತ್ತೇನೆ; ಇಲ್ಲವಾದರೆ ಪ್ರಾಣವನ್ನು ಬಿಡುತ್ತೇನೆ ಎಂದು ಹೇಳಿದ ಧನಕೋಟಿಯು ಮಾತಿನ ಉತ್ತರಾರ್ಧವು ಗುಮಾಸ್ತನಿಗೆ ಕೇಳಿಸಿತೋ ಇಲ್ಲವೋ ತಿಳಿಯದು; ಅವನೇನೋ ಕೇಳದವನಂತೆ ಹೊರಟನು. ಅವನು ಪೆಟ್ಟಿಗೆಗಳನ್ನು ಇಳಿದು ಕೆಳಕ್ಕೆ ಬರುತ್ತಲಿರುವಾಗ ಅಲ್ಲಿ ನಿಂತಿದ್ದ ರತ್ನಾಂಬಿಯು ಎರಡು ಕೈಗಳನ್ನೂ ಜೋಡಿಸಿಕೊಂಡು ಸ್ವಾಮೀ, ಎಂದು ಏನನ್ನೋ ಹೇಳಲು ಪ್ರಾರಂಭಿಸಿದಳು; ಮಾತೇ ಹೊರಡಲಿಲ್ಲ. ನಂದಕುಮಾರನ ಗುಮಾಸ್ತನು ಅವಳ ಇಂಗಿತವನ್ನು ತಿಳಿದಂತೆ ನಟಿಸಿ, ಅಮ್ಮಾ! ಒಂದಾನೊಂದು ದಿನ ನಾವಿಕ ಸೈಂಧವನೆಂಬವನಿಂದ ಒಂದು ಲೇಖನವು ನಿನ್ನ ಹೆಸರಿಗೆ ಬರುವುದು; ಅದರಲ್ಲಿ ಹೇಳುವಂತೆ ಲೇಶವೂ ತಪ್ಪದೆ, ಸಾವಕಾಶಮಾಡದೆ, ನಿರ್ಭಯಳಾಗಿ ನೀನು ನಡೆದುಕೊಂಡರೆ ದೇವರು ನಿನ್ನ ತಂದೆಗೆ ಒಳ್ಳೆಯದನ್ನು ಮಾಡುವನು ಎಂದನು.

ಹಾಗೆಯೇ ಆಗಲಿ. " ಆರೀತಿ ನಡೆಯುತ್ತೇನೆಂದು ಪ್ರಮಾಣಮಾಡಿ ಕೊಡು " ಆರೀತಿ ಪ್ರಮಾಣಮಾಡಿಕೊಟ್ಟ ಒಳಕ, ಅದು ಸರಿ; ಈಗ ನಾನು ಹೋಗಿ ಬರುವೆನು. ಈಗಿರುವಂತೆಯೇ ಸನ್ಮಾರ್ಗದಲ್ಲಿ ಮುಂದೆಯೂ ಇದ್ದರೆ ನೀನು

ವರಿಸುವ ಮನೋವ್ಯಾಪಾರದೊಂದಿಗೆ ಸುಖವಾಗಿ ಬಾಳುವೆ ಎಂದು ಹೊರಟು ಹೋದನು.

ತನ್ನ ಪ್ರಿಯನ ಹೆಸರನ್ನು ಗುಮಾಸ್ತನು ಹೇಳಿದುದನ್ನು ಕೇಳಿ ರತ್ನಾಂಬೆಯು ಪರಮಾಶ್ಚರ್ಯಪಟ್ಟು, ನಾಚಿಕೆಯಿಂದ ಅಲ್ಲಿ ನಿಲ್ಲದೆ ಮನೆಯ ಒಳಕ್ಕೆ ಹೋದಳು. ಮಹಡಿಯಿಂದ ಇಳಿದು ಹೊರಗೆ ಬಂದಾಗ ಲಂಗದೇವಿಯನು ನಾವಿಕದಾಮನನ್ನು ನೋಡಿ ಅಪ್ಪಾ ದಾಸ! ನಿನ್ನನ್ನು ಸಂಗಡ ನಾನು ಕೆಲವು ಮಾತುಗಳನ್ನಾಡಬೇಕಾಗಿದೆ, ಬಾ ಎಂದು ಅವನನ್ನು ಕರೆದುಕೊಂಡು ಹೋದನು.

ಇಪ್ಪತ್ತೆರಡನೆಯ ಅಧ್ಯಾಯ

ಮಾರ್ಗಶಿರ ಶುದ್ಧ ಪಂಚಮಿ.

ನಂದಕುಮಾರನ ಗುಮಾಸ್ತನು ತನಗೆ ತೋರಿಸಿದ ದಾಕ್ಷಿಣ್ಯಕ್ಕಾಗಿ ಧನಕೋಟಿಯು ಆಶ್ಚರ್ಯಪಟ್ಟು, "ಹೀಗಾದುದು ನನಗೆ ಅನುಕೂಲವೋ ಪ್ರತಿಕೂಲವೋ! ಹೇಗಾದರೂ ಆಗಲಿ, ವ್ಯವಧಾನಕೊಟ್ಟುದಕ್ಕಾಗಿ ಇವನಿಗೆ ನಾನು ಕೃತಜ್ಞನಾಗಿರಬೇಕು. ನನ್ನ ಸಾಲಗಳಲ್ಲಿ ಇವನಿಗೆ ಕೊಡಬೇಕಾದುದೇ ಹೆಚ್ಚಿದ್ದು, ಇದನ್ನು ತೀರಿಸುವುದಕ್ಕೆ ಮೂರು ತಿಂಗಳ ಕಾಲವಿದೆ; ಅಷ್ಟರಲ್ಲಿ ಇತರರಿಂದ ಸಾಲಮಾಡಿ ಇದನ್ನು ತೀರಿಸಿ, ನನಗೆ ಬರುತ್ತಲಿರುವ ಹಣಗಳಿಂದ ಮಿಕ್ಕ ಸಾಲಗಳನ್ನು ತೀರಿಸಿಬಿಡುವೆನು" ಎಂದು ಸಂತೋಷವಾಗಿದ್ದನು.

ಭಾದ್ರಪದಮಾಸದಲ್ಲಿಯೇ ಧನಕೋಟಿಯು ದಿವಾಳಿಯಾಗುವನೆಂದು ತಿಳಿದಿದ್ದವರೆಲ್ಲರೂ ಆ ತಿಂಗಳು ಚಮಸಿಗೆ ಬರಬೇಕಾದ ಹಣಗಳನ್ನು ಗಡುವಿಗೆ ಸರಿಯಾಗಿ ಅವನು ಕೊಟ್ಟುದರಿಂದ ಆಶ್ಚರ್ಯಪಟ್ಟು, ಹೇಗೂ ವಿಶ್ವಯುಜದಲ್ಲಿ ಅವನ ಪರಿಣಾಮವು ಪ್ರಾಪ್ತಿಸುವುದು ಎಂದು ನಿಶ್ಚಯಿಸಿದರು. ವಿಶ್ವಯುಜವೂ ಕಳೆಯಿತು. ಖಂಡಿತವಾಗಿಯೂ ಇನ್ನೊಂದು ತಿಂಗಳಲ್ಲಿ ಅವನ ಸಂಗತಿಯು ಗೊತ್ತಾಗುವುದೆಂದಿದ್ದರು. ಆ ತಿಂಗಳೂ ಆಯಿತು. ಈಮಧ್ಯೆ ಧನಕೋಟಿಯು ತನ್ನ ಸಾಲಗಳನ್ನು ತೆಗೆಯಲು ಪ್ರಯತ್ನಪಟ್ಟನು; ಅವನಿಗೆ ಆಪ್ತರಾದವರೇ ಅವನನ್ನು ನಂಬದೆ ಹೋದರು.

ತನ್ನ ಬಳಿ ಕೆಲಸಮಾಡುತ್ತಲಿದ್ದು, ತನ್ನಿಂದ ಮುಂದಕ್ಕೆ ಬಂದು ಈಗ ಅಮರ ಪುರದಲ್ಲಿ ದೊಡ್ಡ ಧನಗಾರಾಧ್ಯಕ್ಷನಾಗಿರುವ ದುರ್ಮತಿಯನ್ನು ಕೇಳಿದನೆ ತನಗೆ ಬೇಕಾದಷ್ಟು ಸಾಲವನ್ನು ಕೊಡದೆ ಇರನು; ಕೊಡದಿದ್ದರೂ ವಾಕ್ಸಹಾಯವನ್ನಾದರೂ ಮಾಡದೆ ಇರನು. ಅಷ್ಟುಮಟ್ಟಿಗೆ ಅವನು ಮಾಡಿದರೆ ಈಗ ಬಂದಿರುವ ವಿಪತ್ತನ್ನು ನಿವಾರಣೆಮಾಡಿಕೊಂಡು ಮುಂದೆ ಜೇತರಿಸಿಕೊಳ್ಳಬಹುದು ಎಂದು ಧನಕೋಟಿಯು ಯೋಚಿಸಿ, ಅವನ ಬಳಿಗೆ ಹೋಗಲು ತನಗೆ ಇಷ್ಟವಿಲ್ಲದಿದ್ದರೂ, ಇತರಕಡೆ ಎಲ್ಲಿಯೂ ಸಾಲ ದೊರೆಯದೆ ಇದ್ದುದರಿಂದ ಯತ್ನವಿಲ್ಲದೆ ಕಾರ್ತೀಕಮಾಸದ ಕೊನೆಯಲ್ಲಿ ಅಮರ ಪುರಕ್ಕೆ ಹೋಗಿರ್ದು ಮಾರ್ಗಶಿರಶುದ್ಧತದಿಗೆಯ ದಿನ ಅಲ್ಲಿಂದ ಹಿಂತಿರುಗಿ ಬಂದನು.

ದುರ್ಮತಿಯು ತನ್ನನ್ನು ನೋಡದೆಯೂ ಪುರಸ್ಕರಿಸದೆಯೂ ಆವ ಸಾಹಾಯ್ಯವನ್ನೂ ಮಾಡದೆಯೂ ಹೋದುದನ್ನು ಧನಕೋಟಿಯು ಅರಿಗೂ ತಿಳಿಸದಿದ್ದರೂ, ಹೆಂಡತಿಯೂ ಮಗಳೂ ಅವನ ಮುಖಭಾವದಿಂದ ಅದನ್ನು ತಿಳಿದುಕೊಂಡರು. ಇನ್ನು ಏನು ಗತಿಯೆಂದು ಅವರಿಬ್ಬರೂ ಮನೋಮೋಹನನ ಸಂಗಡ ಆಲೋಚಿಸಿ, ಸೈನ್ಯದಲ್ಲಿ ಸೇರಿ ಸಮಿಾಪದ ಬಂದು ದುರ್ಗದಲ್ಲಿ ವಾಳೆಯವಿದ್ದ ಮಗ ಜಯವೀರನನ್ನು ಕರೆಸಿಕೊಳ್ಳುವುದು ಒಳ್ಳೆಯದೆಂದು ತಿಳಿದು, ರತ್ನಾಂಬೆಯು ಅವನಿಗೆ ಒಂದು ಕಾಗದವನ್ನು ಬರೆದಳು.

ಧನಕೋಟಿಯು ಸಾಧಾರಣವಾಗಿ ತನ್ನ ಕೊಟ್ಟಡಿಯಲ್ಲಿಯೇ ಇರುತ್ತಿದ್ದನು. ಊಟಮಾಡುವಾಗ ಆಗಲಿ ಮಾತುಕಥೆಗಳನ್ನಾಡುವಾಗ ಆಗಲಿ ಅವನು ತನ್ನ ಕ್ಲೇಶವನ್ನು ಅರಿಗೂ ಎಳ್ಳಷ್ಟಾದರೂ ತೋರ್ಪಡಿಸದೆ ಶಾಂತವಾಗಿರುವಂತಿದ್ದನು. ಅದನ್ನು ನೋಡಿ ಒಳಗೆ ಕುದಿಯುತ್ತಲಿರುವ ಜ್ವಾಲಾಮುಖಿಯೆಂದು ಹೆದರಿ ಹೆಂಡತಿಯೂ ಮಗಳೂ ಆದಿನ ರಾತ್ರಿಯೆಲ್ಲಾ ಅವನ ಕೊಟ್ಟಡಿಯ ಬಾಗಿಲ ಬೀಗದಕೈ ಸಂದಿನಲ್ಲಿ ಆಗಾಗ ಇಣಿಕಿನೋಡುತ್ತಲಿದ್ದರು. ಅಪ್ಪಾಜಿಯವರು ಏನನ್ನೋ ಬರೆಯುತ್ತಲಿದ್ದಾರೆಂದು ತಾಯಿಗೆ ಮಗಳು ತಿಳಿಸಲು, ಅವಳು ಇಣಿಕಿನೋಡಿ ಛಾಪಾಕಾಗದ ಬರೆಯುತ್ತಿರುವುದನ್ನು ಕಂಡು, ಓಹೋ! ಮರಣಶಾಸನವನ್ನು ಬರೆಯುತ್ತಲಿದಾರೆ ಎಂದು ಊಹಿಸಿದಳಲ್ಲದೆ ಅದೇನೆಂಬುದನ್ನು ಕೇಳಿ ತಿಳಿಯಲು ಧೈರ್ಯವಿರಲಿಲ್ಲ. ಚೌತಿಯ ದಿನ ರಾತ್ರಿಯೆಲ್ಲಾ ಧನಕೋಟಿಯು ಮಲಗದೆ, ತನ್ನ ಕೊಟ್ಟಡಿಯಲ್ಲಿ ಶತಪಥಮಾಡುತ್ತ

ಲಿದ್ದು, ಅರುಣೋದಯಸಮಯದಲ್ಲಿ ಹಾಸಿಗೆಯ ಮೇಲೆ ಬಿದ್ದುಕೊಂಡನು. ಬೆಳಗಾದ ಮೇಲೆ ಎಂದಿನಂತೆ ಎದ್ದು ಕೆಳಗಿಳಿದು ಬಂದಾಗ, ರಾತ್ರಿ ಅವನು ನಿದ್ದೆಮಾಡದೆ ಇದ್ದುದೂ, ಅವನಿಗಿದ್ದ ಪ್ರಬಲತರವಾದ ಚಿಂತೆಯೂ ಅವನ ಮುಖದಲ್ಲಿ ಕಾಣಬರುತ್ತ ಲಿದ್ದುವು.

ಧನಕೋಟಿಯು ಎಂದೂ ಇಲ್ಲದ ಅಭಿಮಾನದಿಂದ ಮಗಳನ್ನು ನೋಡಿ ಅಮ್ಮಾ! ನೀನು ನಿಜವಾಗಿಯೂ ರತ್ನವೇ ಸರಿ; ನೀನು ಸುಖವಾಗಿ ನಿನ್ನ ತಾಯಿಯ ಸಂಗಡ ಬಾಳು ಎಂದು ಹರಸಿ ಹೊರಟನು.

ಆಗ ರತ್ನಾಂಬೆಯು ಅಪ್ಪಾ! ಇದೇನು ಎಂದೂ ಆಡದ ಮಾತನ್ನು ಈ ದಿನ ಆಡುವೆ ಎಂದು ಕೇಳಲು, ಮಗು! ನಿನ್ನ ನಲ್ಮೆಗಾಗಿ ಹೇಳಿದೆ ಎಂದು ತನ್ನ ಕೊಟ್ಟಡಿಗೆ ಹೋಗಿ ಬಾಗಿಲನ್ನು ಮುಚ್ಚಿಕೊಂಡನು. ತಾಯಿಯು ಕಂಬನಿಯನ್ನು ಸುರಿಸುತ್ತ ತನ್ನ ಕಿರುಮನೆಗೆ ಹೋದಳು. ತಂದೆಯ ಅಭಿಪ್ರಾಯವು ತಿಳಿಯದೆ ರತ್ನಾಂಬೆಯು ಸ್ತಂಭೀಭೂತಳಾಗಿ ನಿಂತಿದ್ದಳು. ಯಾರೋ ಹಿಂದುಗಡೆಯಿಂದ ಬರುವುದನ್ನು ಕಂಡು ತನ್ನ ಅಣ್ಣನು ಬಂದಿರಬಹುದೆಂದು ಊಹಿಸಿ ಅಣ್ಣಯ್ಯಾ ಬಂದೆಯೋ, ಎಂದಳು. ಕೂಡಲೆ ತಾಯಿಯೂ ಓಡಿಬಂದಳು.

ಜಯವೀರನು ತಾಯಿಯನ್ನು ನೋಡಿ ಅಮ್ಮಾ! ಅಪ್ಪಾಜಿಯವರು ಸ್ವಸ್ಥವಾಗಿ ದಾರೆಯೋ? ರತ್ನ ಒಡೆದ ಕಾಗದದಿಂದ ನನಗೆ ಬಲು ಗಾಬರಿಯಾಗಿ ಓಡಿಬಂದೆನು. ಸಮಾಚಾರವೇನು ಎಂದು ಕೇಳಲು, ಅಪ್ಪಾ! ನಿನ್ನ ತಂದೆಯವರು ಸ್ವಸ್ಥವಾಗಿದಾರೆ. ಆದರೆ ಅನೇಕ ಸಷ್ಟಗಳು ಸಂಭವಿಸಿ ಬಹು ಚಿಂತೆಪಡುತ್ತಲಿದಾರೆ. ನಮಗೆ ಆವ ಸಮಾಚಾರವೂ ತಿಳಿಯದು; ಪ್ರಬಲವಾದ ದುರ್ದೆಶೆಯೇನೋ ಪ್ರಾಪ್ತವಾಗಿರುವಂತಿದೆ. ಅವರನ್ನೇ ಕೇಳಿದರೆ ಎಲ್ಲವೂ ತಿಳಿಯುವುದು. ರತ್ನಾಂಬೆ! ಅಣ್ಣ ಬಂದಿರುವನೆಂದು ನಿನ್ನ ಅಪ್ಪಾಜಿಯವರಿಗೆ ತಿಳಿಸು ಎಂದಳು.

ಅವಳು ಮಹಡಿಯ ಬಾಗಿಲ ಬಳಿಗೆ ಹೋಗುವುದರೊಳಗಾಗಿಯೇ ಅಲ್ಲಿ ಅವನೋ ಒಬ್ಬನು ಕಯ್ಯಲ್ಲಿ ಒಂದು ಕಾಗದವನ್ನು ಹಿಡಿದುಕೊಂಡು ರತ್ನಾಂಬೆಯೆಂಬವರು ತಾವೇಯೋ ಎಂದು ವಿಚಾರಿಸಿದನು ಅವಳು "ಅಹುದು, ಏಕೆ?" ಎಂದು ಕೇಳಲು

ಆ ಕಾಗದವನ್ನು ಅವಳ ಕೈಯಲ್ಲಿ ಕೊಟ್ಟು ಇದನ್ನು ಓದಿ ನೋಡಿ ಎಂದನು. ಆ ಕಾಗದದಲ್ಲಿ ಈರೀತಿ ಬರೆದಿದ್ದಿತು.

ತಾಯಿ! ಕಾಳಿಕಾದೇವಾಲಯದ ಬೀದಿಯಲ್ಲಿರುವ ನಾಲ್ಕು ಮಹಡಿಯ ಮನೆಗೆ ಈಕ್ಷಣ ನೀನು ಒಬ್ಬಳೇ ಹೋಗಿ ನಾಲ್ಕನೇಯ ಮಹಡಿಯ ಕೊಟ್ಟಡಿಯ ಬೀಗದ ಕಯ್ಯನ್ನು ಕಾವಲುಗಾರನಿಂದ ತೆಗೆದುಕೊಂಡು, ಉತ್ತರಪಾರ್ಶ್ವದ ಮೂಲೆಯ ಹಲಗೆಯ ಮೇಲೆ ಇಟ್ಟಿರುವ ಪಟ್ಟಿಯ ಓಲೆಯನ್ನು ತಂದು ಒಡನೆಯೇ ನಿನ್ನ ತಂದೆಯ ಕೈಯಲ್ಲಿ ಕೊಡು ಹನ್ನೊಂದು ಗಂಟೆಯೊಳಗಾಗಿ ಆ ಓಲೆಯು ಅವನ ಕೈಸೇರದಿದ್ದರೆ ಅನಾಹುತಗಳು ಸಂಭವಿಸುವುವು. ನಾನು ಹೇಳಿದಂತೆ ನೀನು ಮಾಡುವುದಾಗಿ ಹಂಗೀ ಕಾರಮಾಡಿ ಪ್ರತಿಜ್ಞೆಮಾಡಿಕೊಟ್ಟಿದ್ದುದನ್ನು ಜ್ಞಾಪಿಸಿಕೊಂಡು ಲೇಶವೂ ಸಾವಕಾಶ ವಿಲ್ಲದೆ ಈ ಕೆಲಸವನ್ನು ನೀನೇ ಮಾಡಬೇಕೆಂದು ಕೋರುವ,

ನಾವಿಕ ಸೈಂಧವ.

ಅದನ್ನು ಓದಿ ನೋಡಿದ ಕೂಡಲೆ ತಂದೆಗೆ ಹೇಗೋ ಅನುಕೂಲವುಂಟಾಗುವು ದೆಂಬ ಸಂತೋಷವು ಅವಳಿಗೆ ಉಂಟಾಗಿ ಸಮಾಚಾರವನ್ನು ಚೆನ್ನಾಗಿ ತಿಳಿಯಬೇ ಕೆಂದು ಕಾಗದ ತಂದವನನ್ನು ನೋಡಿದಳು; ಆತನು ಆವಾಗಲೇ ಹೊರಟುಹೋಗಿ ದ್ದನು. ಕಾಗದವನ್ನು ಪುನಃ ಓದಿನಳು, ಆಗ ಹೊದಲು ನೋಡದೆ ಇದ್ದ ಈ ಅನು ಲೇಖನವು ಕಣ್ಣಿಗೆ ಬಿದ್ದಿತು. ಅದೇನೆಂದರೆ:

ನಾನು ಮೇಲೆ ಬರೆದಿರುವಂತೆ ಈ ಕೆಲಸವನ್ನು ನೀನೊಬ್ಬಳೇ ಹೋಗಿ ಮಾಡ ಬೇಕು. ಜತೆಯಲ್ಲಿ ಇರನ್ನಾದರೂ ಕರೆದುಕೊಂಡು ಹೋದರೂ, ನಿನಗೆ ಬದಲಾಗಿ ಬೇರೆ ಯಾರನ್ನಾದರೂ ಕಳುಹಿಸಿದರೂ, ಕಾವಲುಗಾರನು ಆ ಮಹಡಿಯ ಬೀಗದ ಕೈಯನ್ನು ಕೊಡನು.

ಅದನ್ನು ಓದುತ್ತಲೆ ಅವಳ ಸಂತೋಷವು ಸ್ವಲ್ಪ ಕಡಿಮೆಯಾಗಿ, ಈ ಸೈಂಧವ ನಾರೋ ಗೊತ್ತಿಲ್ಲ, ಇವನು ಹೇಳುವಂತೆ ನಾನೊಬ್ಬಳೇ ಹೋಗುವುದು ಅನುಚಿತ, ಏನಾಗಬಹುದಲಿ ಎಂದು ಸ್ವಲ್ಪ ಯೋಚಿಸಿ, ಮನೋಮೋಹನನ ಒಳಿಗೆ ಓಡಿಹೋಗಿ, ಅವನ ಕೈಯಲ್ಲಿ ಆಕಾಗದವನ್ನು ಕೊಟ್ಟು, ತಾನು ಮಾಡಿದ್ದ ವಾಗ್ದಾನವನ್ನೂ ತಿಳಿಸಿದಳು. ಅವನು ಅದನ್ನು ಓದಿನೋಡಿ ನೀನೇ ಹೋಗಿ ಬರಬೇಕು ಎಂದನು.

ಒಬ್ಬಳೇ ಹೋಗುವುದು ಉಚಿತವೋ?

ನಾನೂ ಜತೆಯಲ್ಲಿ ಬರುವೆನು.

ನೀವು ಬಂದರೆ ಕೆಲಸವಾಗದು ಎಂದು ಆ ಕಾಗದದಲ್ಲಿ ಬರೆದು ಇದೆಯಲ್ಲಾ?

ನಾನು ನಿನ್ನ ಕೂಡ ಬಂದರೂ ಆ ಮನೆಯ ಸಮೀಪದಲ್ಲಿ ಒಂದು ಕಡೆ ಮರೆಯಾಗಿ ನಿಂತಿರುವೆನು. ಧೈರ್ಯವಾಗಿ ಹೋಗು.

ರತ್ನಾಂಬೆಯು ಅದರಂತೆ ಅನುಮಾನಿಸಿದಳು. ಆಗ ಮನೋಮೋಹನನು ಅವಳನ್ನು ನೋಡಿ ಇಗೋ, ಇಂದು ಮಾರ್ಗಶಿರಶುದ್ಧಪಂಚಮಿ; ಈಗ ಹತ್ತು ಗಂಟೆ; ಇನ್ನೊಂದು ಗಂಟೆಯಲ್ಲಿ ನಿನ್ನ ತಂದೆಯು ಸುಮಾರು ಮೂರು ಲಕ್ಷ ವರಹಗಳನ್ನು ಜತೆ ಮಾಡಿ ಕೊಡಬೇಕು. ಈಗ ಅವನಲ್ಲಿ ಒಂದು ಕಾಸೂ ಇಲ್ಲ ಇನ್ನೊಂದು ಗಂಟೆಯಲ್ಲಿ ಅವನಿಗೆ ಯಾರೂ ಸಾಹಾಯ್ಯಮಾಡದಿದ್ದರೆ ಅವನ ಮಾನವು ಹೋಗುವುದಲ್ಲದೆ ಪ್ರಾಣವೂ ಹೋಗಬಹುದು. ಈ ನಾಮಿಕಸ್ಯೆಂಧವನು ನಂದಕುಮಾರನ ಗುಮಾಸ್ತನೇ ಹೊರತು ಮತ್ತಾರೂ ಅಲ್ಲ ಅವನ ಇಂಗಿತವನ್ನು ನಾನು ಸುಮಾರಾಗಿ ಒಲ್ಲೆ. ಈ ಕಾಗದವನ್ನು ನೋಡಿದರೆ ಈ ಸೈಂಧವನನ್ನು ದೇವರೇ ನಿನ್ನ ತಂದೆಯ ಸಾಹಾಯ್ಯಕ್ಕಾಗಿ ಕಳುಹಿಸಿರುವಂತೆ ತೋರುತ್ತಲಿದೆ. ನಿನಗೆ ಅರಿಂದಲೂ ಅಪತೊಂದರೆಯೂ ಬಾರದಂತೆ ನಾನು ನೋಡಿಕೊಳ್ಳುವೆನು ಎಂದನು. ಹಾಗಾದರೆ ಸರಿ ಎಂದು ಹೇಳಿ ರತ್ನಾಂಬೆಯು ಮನೋಮೋಹನನ ಜತೆಯಲ್ಲಿ ಕಾಳಿಯ ಗುಡಿಯ ಬೀದಿಗೆ ಹೊರಟಳು.

ಅವರತ್ತ ಹೋಗುತಲೇ ಇತ್ತ ಜಯವೀರನು ತಾಯಿಯಿಂದ ಕೆಲವು ಸಮಾಚಾರಗಳನ್ನು ತಿಳಿದು, ತಂದೆಯನ್ನು ನೋಡಲು ಹೊರಟನು. ಕೊಟ್ಟಡಿ ಬಾಗಿಲನ್ನು ತೆರೆದು ಒಳಕ್ಕೆ ತಲೆ ಹಾಕುತ್ತಲೇ ಧನಕೋಟಿಯು ತನ್ನ ಕೈಯಲ್ಲಿದ್ದುದನ್ನು ಮರೆಮಾಡಿ ಕೊಂಡನು. ಅದನ್ನು ಕಂಡು ಜಯವೀರನು ಅಪ್ಪಾ, ಇದೇನು! ಪಿಸ್ತೂಲುಗಳನ್ನು ಕಯ್ಯಲ್ಲಿ ಏಕೆ ಇಟ್ಟುಕೊಂಡಿದ್ದೀಯೆ ಎಂದನು.

ನೀನು ಒಂದರೆ ಈ ಅಪಪ್ಪೆಯು ಅಂದಾಗುವುದೆಂದು ತಿಳಿದೇ ನಾನು ನಿನಗೆ ಅವುದನ್ನೂ ಬರೆಯುಲ್ಲಿಲ್ಲ.

ಅಪ್ಪಾ! ಆ ಪಿಸ್ತೂಲುಗಳಿಂದೇನು ಕೆಲಸ?

ಹಾಗಾದರೆ ಕೇಳು ಎಂದು ಧನಕೋಟಿಯು ಪಿಸ್ತೂಲುಗಳನ್ನು ಮೇಜಿನ ಮೇಲೆ

ಇಟ್ಟು, ಕೊಟ್ಟಡಿಯು ಬಾಗಿಲನ್ನು ಹಾಕಿ, ಮಗೂ, ಈ ಪಿಸ್ತೂಲುಗಳು ನನ್ನ ಮಾನವನ್ನು ಕಾಪಿಡುವುವು. ಇಗೋ, ಈ ಕಾಗದವನ್ನು ಓದು, ಎಂದು ಸಾಲದ ಪಟ್ಟಿಯನ್ನು ಅವನಲ್ಲಿ ಕೊಟ್ಟನು. ಇವನ್ನು ತೀರಿಸಲು ನನ್ನಲ್ಲಿ ಒಂದು ಕಾಸೂ ಇಲ್ಲ, ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು; ಮಾನಹೋಗುವುದಕ್ಕಿಂತ ಪ್ರಾಣ ಹೋಗುವುದೇ ಮೇಲು ಎಂದನು.

ಅಪ್ಪಾಜೀ! ನೀವು ಹೇಳುವುದೇನೋ ಸರಿ; ಆದರೆ ಪ್ರಾಣವಿದ್ದರೆ ಎಂದಾದರೂ ಬಂದು ಋಣ ಸಾಲವನ್ನು ತೀರಿಸಬಹುದಲ್ಲವೇ?

ಮಗೂ! ಸಾವಕಾಶವಿದ್ದರೆ ನೀನು ಹೇಳುವುದೇನೋ ಸರಿ. ನಂದಕುಮಾರನ ಗುಮಾಸ್ತನು ತಾನಾಗಿಯೇ ಮೂರು ತಿಂಗಳ ಗಡುವು ಕೊಟ್ಟನು; ಪುನಃ ಅವನನ್ನು ಕೇಳುವುದು ಸರಿಯಲ್ಲ. ಈ ದಿನ ಹನ್ನೊಂದು ಗಂಟೆಗೆ ಸರಿಯಾಗಿ ಬರುವನು; ಅಷ್ಟರೊಳಗಾಗಿ ಮೂರು ಲಕ್ಷ ವರಹಗಳನ್ನು ನಾನು ಹೇಗೆ ತಾನೇ ಜತೆಮಾಡಲಾಪೆನು? ನೀನಾದರೆ ಏನ ಮಾಡುತ್ತಲಿದ್ದೆ?

ಹಾಗಾದರೆ ಸರಿ; ನಿಮಗೊಂದು, ನನಗೊಂದು ಎಂದು ಮೇಜಿನ ಮೇಲಿಟ್ಟಿದ್ದ ಪಿಸ್ತೂಲುಗಳಲ್ಲಿ ಒಂದನ್ನು ತೆಗೆದುಕೊಂಡನು.

ಆಗ ಧನಕೋಟಿಯು ಮಗನ ಕಯ್ಯನ್ನು ಹಿಡಿದು ನಿನ್ನ ತಾಯಿ ತಂಗಿಯರ ಗತಿ ಏನಾಗಬೇಕು ಎನ್ನಲು, ಜಯವೀರನು ಬಿಕ್ಕಳಿಸುತ್ತಾ ಅಪ್ಪಾಜೀ! ನೀವು ಸತ್ತು ನಾನಿದ್ದು ತಾನೇ ಏನು ಪ್ರಯೋಜನ ಎಂದನು.

ಮಗೂ! ನೀನು ಸಣ್ಣವನಾದರೂ ವಿವೇಕಿ. ದೇವರು ನಿನಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟಿದ್ದಾನೆ. ಚೆನ್ನಾಗಿ ಬದುಕು.

ತಮ್ಮ ಆಶೀರ್ವಾದದಿಂದ ಹಾಗೆಯೇ ಆಗಲಿ; ಆದರೆ ನೀನಿಲ್ಲದೆ ನಾನಿರಲಾರೆನು.

ವಂಶಪಾರಂಪರ್ಯವಾಗಿ ಸತ್ಯಸಂಧರಾದ ನಮ್ಮ ಹಿರಿಯರು ಕಷ್ಟಪಟ್ಟು ವೃದ್ಧಿ ಮಾಡಿದ್ದ ಈ ವ್ಯಾಪಾರವು ನನ್ನ ದುರದೃಷ್ಟದಿಂದ ಇಂದಿಗೆ ತೀರಿಹೋದಂತೆ ಇದ್ದರೂ ಮುಂದೆ ದೈವಾನುಗ್ರಹದಿಂದ ಸರಿಹೋಗಬಹುದು. ನೀನು ಸಾಯಲೇಕೆ?

ಅಪ್ಪಾಜೀ! ನೀವು ಒಪ್ಪುಕಿದ್ದರೆ ನಾವಿಬ್ಬರೂ ಹಗಲೂ ಇರುಳೂ ದುಡಿದು ಸ್ವಲ್ಪ

ಕಾಲದಲ್ಲಿಯೇ ನನ್ನ ಸ್ಥಿತಿಯನ್ನು ಸರಿಮಾಡಿಕೊಳ್ಳಬಹುದು. ನಿನ್ನ ಅನುಭವವಿಲ್ಲದೆ ನಾನೊಬ್ಬನೇ ಏನ ಮಾಡಬಲ್ಲೆನು?

ನಾನು ಬದುಕಿದ್ದರೆ "ಪಿಯರು ಸಂಪಾದಿಸಿದ್ದ ಆಸ್ತಿಯನ್ನೆಲ್ಲಾ ಹಾಳುಮಾಡಿ ಸಾಲವನ್ನೂ ತೀರಿಸದೆ ನಾಚಿಕೆಯಿಲ್ಲದೆ ಒದುಕಿದ್ದಾನೆ ನೋಡಿರಿ" ಎಂದು ಎಲ್ಲರೂ ಪಿಯ್ಯಾಳಿಸುವರು. ನೀನೂ ತಪ್ಪಿಸಿತ್ತುವುದಕ್ಕಾಗುವುದಿಲ್ಲ.

ಜಯವೀರನು ಅಳುತ್ತ ಅಪ್ಪಾಜೀ, ನಿನ್ನ ಚಿತ್ತ ಎಂದನು.

ನಂದಕುಮಾರನ ಗುಮಾಸ್ತನು ಆವ ಕಾರಣದಿಂದಲೋ ತನಗೆ ಬರಬೇಕಾದ ಸಾಲವನ್ನು ತೀರಿಸಲು ಮೂರು ತಿಂಗಳ ವ್ಯವಧಾನವನ್ನು ಕೊಟ್ಟನು; ಇಲ್ಲದಿದ್ದರೆ ಈ ವೇಳೆಗೆ ನಾನು ಸತ್ತು ಮೂರು ತಿಂಗಳಾಗಿರಬೇಕು. ದೇವರು ನಿನಗೆ ಅನುಕೂಲ ಮಾಡಿ ಕೊಟ್ಟಾಗ ಅವನ ಸಾಲವನ್ನು ಪೂರ್ತಿ ತೀರಿಸಿ ಮಿಕ್ಕ ಕೆಲಸವನ್ನು ಮಾಡು. ನೀನು ಸನ್ಮಾರ್ಗದಲ್ಲಿದ್ದರೆ ದೇವರು ಕೈಬಿಡನು; ನಿನ್ನ ತಾಯಿಯು ಬಳ್ಳೆಯವಳು; ತಂಗಿಯು ಏನೂ ತಿಳಿಯದವಳು, ಅವರನ್ನು ಜಾಗರೂಕತೆಯಿಂದ ನೋಡಿಕೋ. ಇನ್ನು ನೀನು ಹೋಗಿ ಶುಕ್ರಾಚಾರಿಯನ್ನು ಕಳುಹಿಸು ಎಂದು ಮಗನಿಗೆ ಆಶೀರ್ವಾದವನ್ನು ಮಾಡಿ ಶುಕ್ರಾಚಾರಿಯ ಆಗಮನವನ್ನು ನಿರೀಕ್ಷಿಸುತ್ತಲಿದ್ದನು.

ಶುಕ್ರಾಚಾರಿಯು ಬಂದು, ಏನಪ್ಪಣೆ ಎಂದು ಕೇಳಲು, ಇಲ್ಲಿಯೇ ಹೊರಗೆ ಇದ್ದುಕೊಂಡು ನಂದಕುಮಾರನ ಗುಮಾಸ್ತನು ಬಂದ ಒಡನೆಯೇ ನನಗೆ ವರ್ತಮಾನ ಕೊಡು ಎಂದು ಧನಕೋಟೆಯು ಬಾಗಿಲನ್ನು ಮುಚ್ಚಿ ಮೇಜಿನ ಮೇಲೆ ಇದ್ದ ಎರಡು ಪಿಸ್ತೂಲುಗಳನ್ನೂ ಹತ್ತಿರ ಇಟ್ಟುಕೊಂಡು, ಗಡಿಯಾರವನ್ನು ನೋಡಿ ಯೋಚನೆ ಮಾಡುತ್ತ ಕುಳಿತುಕೊಂಡನು. ಹನ್ನೊಂದು ಗಂಟೆಗೆ ಐದು ನಿಮಿಷಗಳಿದ್ದುವು; ಪಿಸ್ತೂಲುಗಳಿಗೆ ಮದ್ದು ಗುಂಡು ಸರಿಯಾಗಿದೆಯೆಂದು ತೃಪ್ತಿಮಾಡಿಕೊಂಡು, ಬಂದನ್ನು ಕಯ್ಯಲ್ಲಿ ತೆಗೆದುಕೊಂಡನು. ಆಗ ಮಗಳ ನೆನಪು ಬಂದಿತು; ಕಯ್ಯಲ್ಲಿದ್ದ ಮೃತ್ಯು ರೂಪವಾದ ಆಯುಧವನ್ನು ಮೇಜಿನ ಮೇಲೆ ಇಟ್ಟು, ಮಗಳ ವಿಷಯವಾಗಿ ನಾಲ್ಕು ಮಾತುಗಳನ್ನು ಬಂದು ಕಾಗದದಲ್ಲಿ ಬರೆದಿಟ್ಟು, ಪುನಃ ಆ ಆಯುಧವನ್ನು ತೆಗೆದುಕೊಂಡು ಅದರ ಕುದುರೆಯನ್ನು ಹಿಂದಕ್ಕೆ ಎಳೆದು. ಕೊಟ್ಟಡಿಯಲ್ಲಿ ಕಟ್ಟಿದ್ದ ದೇವರ ಪಟಗ

ಳನ್ನೂ, ತನ್ನ ಹೆಂಡತಿತಿಕ್ಕಳ ಪಟಗಳನ್ನೂ ನೋಡಿ, ಕಣ್ಣಿನಿಂದ ನೀರನ್ನು ಧಾರೆಧಾರೆಯಾಗಿ ಸುರಿಸುತ್ತ ಗಡಿಯಾರವನ್ನೇ ನೋಡುತ್ತಲಿದ್ದನು.

ಇನ್ನೇನು ಹನ್ನೊಂದು ಗಂಟೆಯು ಹೊಡೆಯುವ ಸಮಯ. ತನ್ನ ಬಾಯಿಯಲ್ಲಿ ಪಿಸ್ತೂಲಿನ ಬಾಯಿಯನ್ನಿಟ್ಟು ಕೊಂಡನು. ನಂದಕುಮಾರನ ಗುಮಾಸ್ತನ ಹಜ್ಜೆಯ ಶಬ್ದವನ್ನೇ ನಿರೀಕ್ಷಿಸುತ್ತಲಿದ್ದನು. ಆಗ ಕೊಟ್ಟಡಿಯ ಬಾಗಿಲು ತೆರೆದಂತಾಯಿತು. ಶುಕ್ರಾಚಾರಿಯು ಬಂದನೆಂಬ ಭ್ರಮೆಯಿಂದ ಧನಕೋಟಿಯು ಮತ್ತೊಂದು ಸಲ ದೇವರ ಪಟವನ್ನು ನೋಡಿ, ಪಿಸ್ತೂಲನ್ನು ಹಾರಿಸುವುದಕ್ಕೆ ಹೋದನು. ಆಗ ಒದು ಕಿದೆವಪ್ಪಾ, ಬದುಕಿದೆಪ್ಪ! ಎಂಬ ರತ್ನಾಂಬೆಯು ಕೂಗು ಕೇಳಿಸಿತು. ಇದೇನು ಬದುಕಿದೆವು ಎಂದು ರತ್ನಾಂಬೆಯು ಹೇಗೆ ಹೇಳಿಕೊಂಡು ಹಿಂತಿರುಗಿವಷ್ಟರಲ್ಲಿಯೇ, ಅಪ್ಪಾ! ಒದು ಕಿದೆವು. ದೇವರು ನಮ್ಮ ಕಷ್ಟವನ್ನು ನಿವಾರಣೆ ಮಾಡಿದನು ಎಂದು ಹಿಗ್ಗಿ ಮಾತನಾಡಲಾರದೆಹೋದಳು.

ಅವ್ವಾ! ಅದು ಹೇಗೆ?

ಇಗೋ ನೋಡು, ಎಂದು ತಾನು ತಂದಿದ್ದ ಪಟ್ಟೆಯ ಜೀಲವನ್ನು ನೀಡಿದಳು. ಅದನ್ನು ನೋಡಿ ಇದು ನಮ್ಮ ಜೀಲದಂತೆ ತೋರುತ್ತಲಿದೆ, ಇದೆಲ್ಲಿದ್ದಿತು ಎನ್ನಲು ತಾನು ತಂದಿದ್ದ ಸ್ಥಳವನ್ನು ಅವಳು ತಳಿಸಿದಳು.

ನೀನು ಏತಕ್ಕೆ ಇದನ್ನು ತಂದೆ ಎನ್ನಲು, ನಾಪಿಕನೈಂಧವನು ತನಗೆ ಒಪ್ಪಿದ ಕಾಗದವನ್ನು ಕೊಟ್ಟಳು; ಅವನು ಅದನ್ನು ಓದಿ ನೀನೊಬ್ಬಳೇ ಹೋಗಿದ್ದೆಯೋ ಎಂದು ಕೇಳಲು, ಇಲ್ಲ, ತಮಗೆ ಆಳಿಯಂವಿರಾಗುವವರೂ ಜತೆಯಲ್ಲಿ ಬಂದಿದ್ದರು ಎಂದಳು.

ಧನಕೋಟಿಯು ಜೀಲವನ್ನು ಬಿಚ್ಚಿ ನೋಡುತ್ತಲೆ. ಅದರಲ್ಲಿ ನಂದಕುಮಾರನ ಗುಮಾಸ್ತನು ಮೂರು ತಿಂಗಳ ಹಿಂದೆ ತಂದು ಈಗ ನಾಲತೀರಿದಂತೆ ಒರೆದಿದ್ದ ಹುಂಡಿಗಳೂ, ಸುಮಾರು ದಪ್ಪ ಅವರೆಯಷ್ಟು ಗಾತ್ರವುಳ್ಳ ಶ್ರೇಷ್ಠವಾದ ನಾಲ್ಕು ವಜ್ರದ ಹರಳುಗಳೂ ಇದ್ದುವು. ಇದಲ್ಲದೆ ಜೀಲದ ಮೇಲೆ ಮತ್ತೊಂದು ದೊಡ್ಡ ವಜ್ರವೂ ಇದ್ದಿತು. ಮೇಲೆ ಕಟ್ಟಿರುವ ವಜ್ರವು ರತ್ನಾಂಬೆಯ ಸ್ತ್ರೀಧನಕ್ಕಾಗಿಯೂ, ಮಿಕ್ಕ

ನಾಲ್ಕು ವಜ್ರಗಳು ಧನಕೋಟಿಯವರ ಸ್ವಾಮಿದ್ರೋಹದ ಬಂಡವಾಳಕ್ಕಾಗಿಯೂ ಎಂದು ಬರೆದಿದ್ದ ಬಂಯು ಚೀಟಿಯನ್ನೂ ಇಟ್ಟಿದ್ದನು.

ಅಮ್ಮಾ! ಇದು ಅವನೇ ನಿನ್ನ ಮಹೋಪಕಾರಿಯ ಕೆಲಸ; ನಮ್ಮನ್ನು ಬಿಟ್ಟು ಹೋಗಿದ್ದ ದೈವಕೃಪೆಯು ಇಂದು ನಮ್ಮ ಕೈಸೇರಿತು ಎಂದು ಹೇಳಿ, ದೇವರ ಮುಂಬಾಯನ್ನು ಕೊಂಡಾಡುತ್ತಿದ್ದನು. ಆಗ ಮನೋಮೋಹನನು ಓಡಿಬಂದು ನಮ್ಮ ಜಯಲಕ್ಷ್ಮಿಯು ದೇವಿಗೆ ಬಂದಿತೇ ಎಂದನು.

ಏನು! ಏನು! ಜಯಲಕ್ಷ್ಮಿಯೆ! ಬಹಳುಗಿ ಹೋಗಿತಲ್ಲನೆ! ಪುನಃ ಬರುವು ದುಂಟೇನು? ಎಂದು ಧನಕೋಟಿಯು ಆಶ್ಚರ್ಯಪಡಲು, ಸ್ವಾಮೀ! ಅದೇ ಬಂದು ನಿಂತಿರುವಂತೆ. ಅಗದೆಲ್ಲ ಬೇಳಿಕ್ಕಾಗಿ ಎಂದನು.

ಆಶ್ಚರ್ಯ, ಆಶ್ಚರ್ಯ! ಎಂದು ಧನಕೋಟಿಯು ತಲೆಯನ್ನು ಅಲ್ಲಾಡಿಸಲು ರತ್ನಾವಳಿಯು ತಂದೆಯನ್ನು ನೋಡಿ, ಅಪ್ಪಯ್ಯಾ! ಈ ಜಗಲಿಯೂ ಇದರಲ್ಲಿರುವ ವಸ್ತುಗಳೂ ಹೇಗೆ ಸಿಕ್ಕಿದುವು? ಪಾಪಿಯೇ ಜಯಲಕ್ಷ್ಮಿಯೂ ಏಕೆ ಬಂದಿರಕೂಡದು! ಎಂದು ಕೇಳಿದಳು. ಅದಕ್ಕವನು ಇದೆಲ್ಲವೂ ಆಶ್ಚರ್ಯವಾಗಿದೆ, ದೇವಿಗೆ ಹತ್ತಿಗೆ ನೋಡೋಣ ಬನ್ನಿ ಎಂದು ಎಲ್ಲರೂ ದೇವಿಗೆ ಹೋದರು.

ದೇವಿಯನ್ನು ನೋಡುತಲೆ, ದೊಡ್ಡ ದೊಡ್ಡ ಅಕ್ಷರಗಳಲ್ಲಿ ಸಾಹುಕಾರ ಧನಕೋಟಿಯ ಜಯಲಕ್ಷ್ಮಿ ಎಂದು ಬರೆದಿದ್ದ ಪಡಗು ಸಿಕ್ಕಿದ್ದಿತು ಅದರ ಆಕಾರವನ್ನೂ ಬಣ್ಣವನ್ನೂ ನೋಡಿ ಅದು ತನ್ನ ಪಡಗೇನೋ ಇರುವುದು, ಮುಳುಗಿಹೋದುದು ಪುನಃ ಹೇಗೆ ಬಂದಿತು ಎಂದು ಯೋಚಿಸುತ್ತಿರುವನು. ಆಗ ದಾಸ ಮುಂತಾದ ನಾವಿಕರೆಲ್ಲರೂ ಧನಕೋಟಿಯನ್ನು ಕಂಡು ಪಡಗಿನಿಂದಲೇ ಜಯಸೋಷವನ್ನು ಮಾಡಿದರು. ಧನಕೋಟಿಯು ಅನುಮಾನವು ತಿಳಿಯಲಿಲ್ಲ ಆನಂದಭರಿತನಾಗಿ ಜಯಲಕ್ಷ್ಮಿಯನ್ನು ನೋಡುತ್ತ ಹಾಗೆಯೆ ನಿಂತಿದ್ದನು

ಈ ಆಶ್ಚರ್ಯವನ್ನು ನೋಡುವುದಕ್ಕೆ ಊರಿನವರೆಲ್ಲರೂ ಬಂದು ದೇವಿನಲ್ಲಿ ನೆರೆದಿದ್ದರು. ನೆರೆದ್ದ ಜನಗಳ ಮಧ್ಯೆ ವಿಶಾಲವಾಗಿ ಗಡ್ಡ ಮೀಸೆಗಳಿದ್ದು ಮುಖವನ್ನು ರುಮಾಲಿನಿಂದ ಅರ್ಧ ಮುಚ್ಚಿಕೊಂಡಿದ್ದ ಒಬ್ಬನು "ದಯಾನಿಧಿಯೇ! ನೀನು ಇಂದು ಮಾಡಿರುವ ಮತ್ತು ಮುಂದೆ ಮಾಡಲಿರುವ ಸತ್ಕಾರ್ಯಗಳಿಂದ ಭಗವಂತನು ಸುಪ್ರೀತ

ನಾಗಲಿ; ನಿನ್ನ ಸತ್ಕಾರ್ಯಗಳು ಗೂಢವಾಗಿದ್ದಂತೆಯೇ ನನ್ನ ಕೃತಜ್ಞತಾರೂಪವಾದ ಈ ಅಲ್ಪ ಕಾರ್ಯವೂ ಗೂಢವಾಗಿಯೇ ಇರಲಿ". ಎಂದು ಹೇಳಿ, ಯಾಗಪ್ಪ! ಯಾಗಪ್ಪ! ಎಂದು ಮೂರುಸಾರಿ ಕೂಗಲು, ಬಂದು ನಿಂತ ದೋಣಿಯಲ್ಲಿ ಕುಳಿತು ಅವುದೋ ಹಡಗನ್ನು ಸೇರಿದನು.

ಧನಕೋಟಿಯು ಸಂತೋಷದಿಂದ ಕೂಡಿದವನಾಗಿ, ತನ್ನನ್ನು ವಿಚಾರಿಸಲು ಬಂದವರ ಸಂಗಡ ಯಥೋಚಿತವಾಗಿ ಮಾತನಾಡುತ್ತಲಿರುವುದನ್ನೂ, ತನಗೆ ಈ ಉಪಕಾರಮಾಡಿದ ವಸ್ತುವು ದೇವಲೋಕದಲ್ಲಿರುವುದೆಂದು ಭಾವಿಸಿ ಅಂತರಿಕ್ಷವನ್ನು ನೋಡಿ ಕೈಮುಗಿಯುತ್ತಲಿರುವುದನ್ನೂ, ಹಡಗಿನಲ್ಲಿ ಪ್ರಯಾಣ ಮಾಡುತ್ತಲಿದ್ದ ಅಜ್ಞಾತ ನಾವಿಕನು ನೋಡಿ ಹಿಗ್ಗುತ್ತ "ಲೋಕದಲ್ಲಿ ಇಂತಹ ಬಳ್ಳಿಯ ವಸ್ತುಗಳು ಬಹುವಿರಳ. ಈಗ ನಾನು ಉಪಕಾರಕ್ಕೆ ಪ್ರತ್ಯುಪಕಾರವನ್ನು ಮಾಡಿದುದಾಯಿತು. ಇನ್ನು ಅಪಕಾರ ಮಾಡಿದವರಿಗೆ ಪ್ರತಿಕ್ರಿಯೆಯನ್ನು ಮಾಡಹೋಗುವೆನು" ಎಂದುಕೊಂಡು ಹೋದನು.

ಇಷ್ಟರಲ್ಲಿಯೇ ನಾವಿಕದಾಶನು ಹಡಗಿನಿಂದಿಳಿದು ದೋಣಿಯಲ್ಲಿ ಹೊರಟು ದಡವನ್ನು ಸೇರಿ, ಧನಕೋಟಿಯ ಬಳಿಗೆ ಬಂದು ಮಹಾನ್ಯಾಮೀ! ಹಡಗು ಸುಖವಾಗಿ ಬಂದಿತು, ನಾಮಾನುಗಳೆಲ್ಲವೂ ಸರಿಯಾಗಿವೆ ಎಂದನು. ಮುಳುಗಿಹೋಗಿದ್ದ ಹಡಗೂ ನಾಮಾನುಗಳೂ ಹೇಗೆ ಸರಿಯಾಗಿ ಪುನಃ ಬಂದುವು ಎಂದು ಧನಕೋಟಿಯು ಕೇಳಲು ದಾಶನು ಅಂತರಿಕ್ಷವನ್ನು ತೋರಿಸಿದನು.

ಇಪ್ಪತ್ತಮೂರನೆಯ ಅಧ್ಯಾಯ

ನಾವಿಕ ಸೈಂಧವ.

ಈ ಸಂಗತಿಗಳೆಲ್ಲ ನಡೆದ ಸುಮಾರು ಏಳೆಂಟು ವರ್ಷಗಳಾದ ಮೇಲೆ ದೇಶಾಟನವನ್ನು ಮಾಡುತ್ತಲಿದ್ದ ವೀರಸಿಂಹ ಉದಯಸಿಂಹರೆಂಬ ಅಮರಪುರದ ಶ್ರೀಮಂತರ ಮಕ್ಕಳಿಬ್ಬರು ಉತ್ತರದೇಶದ ಒಂದು ರೇವಪಟ್ಟಣದಲ್ಲಿ ಹಠಾತ್ತಾಗಿ ಸಂಧಿಸಿದರು. ಇಬ್ಬರೂ ಹುಟ್ಟಿದಂದಿನಿಂದಲೂ ಗೆಳೆಯರು. ಅಲ್ಲಿಲ್ಲಿ ನೋಡಿದ ವಿಶೇಷಗಳನ್ನು ಒಬ್ಬರಿಗೊಬ್ಬರು ಹೇಳಿಕೊಂಡ ಬಳಿಕ ಇಂದ್ರಪ್ರಸ್ಥದಲ್ಲಿ ನಡೆಯುವ ಲೋಕಪ್ರಸಿದ್ಧವಾದ

ಉತ್ಸವವನ್ನು ನೋಡಲು ಒಟ್ಟಿಗೆ ಹೋಗುವುದಕ್ಕೆ ಒಪ್ಪಿದರು. ಇಂದ್ರಪ್ರಸ್ಥವು ಬಹು ವಿಸ್ತಾರವಾದ ಪಟ್ಟಣ, ಮೇಲೂ ಪುಣ್ಯಕ್ಷೇತ್ರ; ಇಂತಹ ಸ್ಥಳವನ್ನು ನೋಡಬೇಕಾ ಕಾದರೆ ಅಲ್ಲಿಯ ಮಾಹಾತ್ಮ್ಯಗಳನ್ನೆಲ್ಲಾ ಚೆನ್ನಾಗಿ ತಿಳಿದವರ ಸಾಹಾಯ್ಯವಿರಬೇಕು. ವೀರಸಿಂಹನು ಆ ಪಟ್ಟಣದಲ್ಲಿಯೇ ಮೂರುನಾಲ್ಕು ವರ್ಷಗಳಿದ್ದುದರಿಂದ ಯಾರ ಸಾಹಾಯ್ಯವೂ ಅವರಿಗೆ ಬೇಕಾಗಲಿಲ್ಲ.

ಇಂದ್ರಪ್ರಸ್ಥದಲ್ಲಿ ಉತ್ಸವಕಾಲದಲ್ಲಿ ಅನುಕೂಲವಾದ ಬಿಡಾರವು ದೊರೆಯುವುದು ಕಷ್ಟವಾದುದರಿಂದ ತನ್ನ ಪರಿಚಯಸ್ಥನಾದ ಪಶುಪತಿಯೆಂಬ ಒಬ್ಬ ದೊಡ್ಡ ಭೋಜನಶಾಲಾಧಿಕಾರಿಗೆ ವೀರಸಿಂಹನು ಒಡನೆಯೇ ಒಂದು ಕಾಗದವನ್ನು ಒರೆದು, ದಿನ ಒಂದಕ್ಕೆ ಒಂದೊಂದು ಕೊಟ್ಟಡಿಗೆ ಒಂದೊಂದು ವರಹದಂತೆ ಎರಡು ಕೊಟ್ಟಡಿಗಳನ್ನು ಬಾಡಿಗೆಗೆ ಗೊತ್ತುಮಾಡಿಕ್ಕೊಂಡನು. ಉತ್ಸವಾರಂಭಕ್ಕೆ ಇನ್ನೂ ಐದುದಿವಸಗಳಿದ್ದುವು; ಈ ಮಧ್ಯೆ ಉದಯಸಿಂಹನು "ನಾನು ಇಲ್ಲಿಗೆ ಸಮೀಪದಲ್ಲಿರುವ ಒಂದೆರಡು ಊರುಗಳನ್ನು ನೋಡಿಕೊಂಡು ಇಂದ್ರಪ್ರಸ್ಥಕ್ಕೆ ಹೋಗುವೆನು; ನೀನು ಲಕ್ಷದ್ವೀಪಗಳಲ್ಲಿ ಬೇಟೆಯಾಡಿಕ್ಕೊಂಡು ಸಕಾಲದಲ್ಲಿ ನನ್ನನ್ನು ಸೇರುವನಾಗು" ಎಂದು ವೀರಸಿಂಹನೊಡನೆ ಹೇಳಿ ಇಬ್ಬರೂ ಅಲ್ಲಲ್ಲಿಗೆ ಪ್ರಯಾಣಮಾಡಿದರು.

ಆ ದಿನ ಸಾಯಂಕಾಲ ವೀರಸಿಂಹನು ದೇವಿನಲ್ಲಿದ್ದ ದೊಡ್ಡದೋಣಿಗಳಲ್ಲಿ ಪ್ರಶಸ್ತವಾದುದೊಂದನ್ನು ಹತ್ತಿ, ಲಕ್ಷದ್ವೀಪಗಳಲ್ಲಿ ಮುಖ್ಯವಾದ ಶ್ವೇತದ್ವೀಪಕ್ಕೆ ಜಡು ಎಂದು ದೋಣಿಯವನಿಗೆ ಹೇಳಲು, ದೋಣಿಯು ಗರುಡವೇಗದಿಂದ ಹೊರಟು ಮರುದಿನ ಸೂರ್ಯೋದಯಕ್ಕೆ ಸರಿಯಾಗಿ ಶ್ವೇತದ್ವೀಪವನ್ನು ಸೇರಿತು. ವೀರಸಿಂಹನಿಗೆ ಅಲ್ಲಿ ಅನುಕೂಲವಾದ ಬೇಟೆಯಾವುದೂ ಸಿಕ್ಕದೆ ಅಸಮಾಧಾನವಾದುದನ್ನು ನೋಡಿ, ದೋಣಿಯ ಯಜಮಾನನಾದ ಗುಹಸೆಂಬುವನು, ಸ್ವಾಮೀ! ಇಲ್ಲಿಗೆ ಇಪ್ಪತ್ತು ಮೈಲಿಗಳ ದೂರದಲ್ಲಿ ಪ್ರತ್ಯೇಕವಾದ ಒಂದು ದ್ವೀಪವಿರುವುದು; ಅಲ್ಲಿ ಕಾಡುಮೃಗಗಳು ವಿಶೇಷವಾಗಿ ಇಲ್ಲವಾದರೂ ಕಾಡುಮೇಕೆ ಕುರಿಗಳು ಹೇರಳವಾಗಿ ಬೇಟೆಗೆ ಬಹು ಅನುಕೂಲವಾಗಿರುವುದು ಎಂದನು.

ಆ ದ್ವೀಪದ ಹೆಸರೇನು? ಮಲಯದ್ವೀಪ.

ಅದರಲ್ಲಿ ಬೇಟೆಯಾಡಲು ನನಗೆ ಅಪ್ಪಣೆಯಿಲ್ಲವಲ್ಲಾ.

ಅಲ್ಲಿ ಜನಗಳೇ ಇಲ್ಲ; ಯಾರ ಅಪ್ಪಣೆ ಬೇಕು?

ಅಲ್ಲಿ ಜನಗಳೇ ಇಲ್ಲವೇ?

ಅದು ಬರಿಯ ಕಲ್ಲು ಬಂಡೆಗಳಿಂದ ಕೂಡಿದೆ, ವ್ಯವಸಾಯಕ್ಕೆ ಅನುಕೂಲವಿಲ್ಲವಾಗಿ ಜನಗಳೇ ಇಲ್ಲ.

ಅಗು ಬರಿಯ ಬಂಡೆಗಳಿಂದ ಕೂಡಿದ್ದರೆ ಅಲ್ಲಿನ ಮೇಕೆ ಕುರಿಗಳಿಗೆ ಬಂಡೆಗಳೇ ಆಹಾರವೋ?

ಬಂಡೆಗಳ ಸಂದಿನಲ್ಲಿ ಹುಟ್ಟಿನ ಗರಿಕೆಗಳನ್ನಾ, ಗಿಡಗಳಲ್ಲಿರುವ ಸೊಪ್ಪುಗಳನ್ನು ತಿನ್ನುವವು.

ಒಂದು ವೇಳೆ ರಾತ್ರಿ ನಾನು ಅಲ್ಲಿ ನಿಂತರೆ ಮಲಗಲು ಅನುಕೂಲವಾದ ಸ್ಥಳವುಂಟೋ?

ಅದರಲ್ಲಿ ಗಿಡದ ಪೊದರುಗಳು ಇರುವುದಿಲ್ಲ, ಅಲ್ಲಿ ಬೇಕಾದರೆ ಮಲಗಬಹುದು; ಇಲ್ಲವಿದ್ದರೆ ನಮ್ಮ ದೋಣಿಯು ಇದ್ದೇ ಇದೆ

ಹಾಗಾದರೆ ಆ ದ್ವೀಪಕ್ಕೆ ಹೋಗೋಣ ಎಂದು ವೀರಸಿಂಹನು ಹೇಳಿತಲೆ ದೋಣಿಯಲ್ಲಿದ್ದ ನಾವಿಕರೆಲ್ಲರೂ ಒಬ್ಬರ ಮುಖವನ್ನು ಒಬ್ಬರು ನೋಡಿ. ಗುಸಗುಸ ಎಂದು ಮಾತನಾಡತೊಡಗಿದರು; ಇದನ್ನು ಕಂಡು ವೀರಸಿಂಹನು ಏಕೆ ಅನುವಾನ? ಏನ್ನಲು, ಗುಹನು ಮಹಾನ್ವಾಮೀ! ಅತ್ತೀರೂ ಇಲ್ಲ; ಅಲ್ಲಿ ತೆಂಗಿನಯನ್ನು ಕೊಡದೆ ಪೋಸಮಾಡುವ ಕಳ್ಳವ್ಯಾಪಾರಿಗಳಾ ಮನ್ನು ಕಡಲುಗಳ್ಳರೂ ಅಡಿಗಡಿಗೆ ಇಂದು ಇಳಿಯುವುದುಂಟು. ಅದನ್ನು ತಮಗೆ ತಿಳಿಸೋಣವೋ ಬೇಡವೋ ಎಂದು ಯೋಚಿಸಿದೆವು ಎಂದನು.

ಅವರು ನಮ್ಮನ್ನೇನ ಮಾಡಾರು?

ಕಳ್ಳವ್ಯಾಪಾರಿಗಳು ಒಬ್ಬರ ತಂಟೆಗೂ ಹೋಗರು. ಕಡಲುಗಳ್ಳರ ನಿವಾಸ ಕೆಟ್ಟದು; ಅವರೂ ದೊಡ್ಡ ದೊಡ್ಡ ಹಡಗುಗಳ ಮತ್ತು ಹಣವಂತರ ಮೇಲೆ ಬೀಳುವರೇ ಹೊರತು ನಮ್ಮಂಥವರ ಗೋಜಿಗೆ ಬಾರರು.

ಹಾಗಾದರೆ ಆ ದ್ವೀಪಕ್ಕೆ ಹೋಗೋಣ, ನಮಗೆ ಎಂದು ವೀರಸಿಂಹನು ಹೇಳಲು, ಒಡನೆಯೇ ದೋಣಿಯು ಮಲಯದ್ವೀಪಕ್ಕೆ ಹೊರಟಿತು. ಸ್ವಲ್ಪದೂರ ಹೋದ ಬಳಿಕ

ಕಡಲುಗಳ್ಳರ ಸಮಾಚಾರವನ್ನೇ ಈಚೆಗೆ ನಾನು ಕೇಳಿರಲಿಲ್ಲ, ಅವರೆಲ್ಲರೂ ಧ್ವಂಸವಾಗಿ ಹೋದರೆಂದು ತಿಳಿದಿದ್ದೆನು ಎಂದು ಯೋಚನೆಮಾಡುತ್ತ, ವೀರಸಿಂಹನು ಗುಹನನ್ನು ಕರೆದು ಅಮರದೇಶದ ರಾಜನು ಸುತ್ತಮುತ್ತು ಇರುವ ರಾಜರ ಸಾಹಾಯ್ಯದಿಂದ ಈ ಕಡಲುಗಳ್ಳರನ್ನು ನಿರ್ಮೂಲಮಾಡಿದ್ದನಲ್ಲ, ಪುನಃ ಅವರು ಹೇಗುಂಟಾದರು ಎಂದು ಕೇಳಿದನು.

ಮಹಾಸ್ವಾಮೀ! ಇಂದ್ರಪ್ರಸ್ಥದ ದೊರೆಯು ಆ ಪಟ್ಟಣದ ಸುತ್ತುಮುತ್ತಲೂ ಇರುವ ಕಳ್ಳರ ಗುಂಪನ್ನು ಹೇಗೆ ನಿರ್ಮೂಲಮಾಡಿದನೋ, ಹಾಗೆಯೇ ಅಮರದೇಶದ ರಾಜನು ಈ ಕಡಲುಗಳ್ಳರನ್ನೂ ನಿರ್ಮೂಲಮಾಡಿದನು; ಇಂದ್ರಪ್ರಸ್ಥದ ಹೆಜ್ಜಾಗಿಲುಗಳಲ್ಲಿ ಈಗಲೂ ಪ್ರತಿದಿನವೂ ಕಳ್ಳತನವು ಹೇಗೆ ನಡೆಯುತ್ತಲಿದೆಯೋ ಹಾಗೆಯೇ ಈ ಕಡಲಿನಲ್ಲಿಯೂ ಅಗಾಗ ಕಳ್ಳತನವು ನಡೆಯುತ್ತಲೇ ಇದೆ. ಕೆಲವು ಹಡಗುಗಳು ಊರನ್ನು ಸೇರದೆ ಹೋದಕಡೆ ಗೊತ್ತಿಲ್ಲದೆ ಹೋಗುವುದನ್ನೂ, ಸಾಧಾರಣವಾಗಿ ಅಂತಹ ಹಡಗುಗಳು ಬಂಡೆಗಳಿಗೆ ತಗುಲಿಯೋ ಸುಂಟುರುಗಾಳಿಗೆ ಸಿಕ್ಕಿಯೋ ಹೋದುವೆಂಬ ವರ್ತಮಾನವನ್ನೂ, ಆಗಾಗ ತಾವು ಕೇಳುತ್ತಲಿರಬಹುದು. ಈ ಬಂಡೆಗಳು ಅಥವಾ ಸುಂಟುರುಗಾಳಿಯು ಎಂಟು ಹತ್ತು ಮುಂದಿ ಬಲಿಷ್ಠರಿರುವ ವೇಗವಾದ ದೋಣಿಗಳಲ್ಲದೆ ಮತ್ತಾವುವೂ ಇಲ್ಲ; ಇಂತಹ ದೋಣಿಗಳು ಕತ್ತಲೆಯಾದ ದಿನಗಳಲ್ಲಿ ಹಡಗುಗಳು ಬರುವ ದಾರಿಯಲ್ಲಿ ನಿರ್ಜನವಾದ ದ್ವೀಪಗಳ ಪಕ್ಕದಲ್ಲಿದ್ದುಕೊಂಡು ಬಂದ ಹಡಗುಗಳ ಮೇಲೆ ಏಕಾಏಕಿ ಬಿದ್ದು ಕೊಳ್ಳೆ ಹೊಡೆಯುವುವು.

ಹಾಗಾದರೆ ಹಣವನ್ನು ಸೂರೆಗೊಟ್ಟ ಜನರು ಸರ್ಕಾರಕ್ಕೆ ಏತಕ್ಕೆ ಈ ಸಂಗತಿಯನ್ನು ತಿಳಿಸಬಾರದು?

ಏತಕ್ಕೆ? ಏತಕ್ಕೆ? ಎಂದು ಗುಹನು ನಕ್ಕು ಇವರು ಹಡಗಿನಲ್ಲಿರುವ ಜನರ ಕೈಕಾಲುಗಳನ್ನು ಕಟ್ಟಿ ಪ್ರತಿಯೊಬ್ಬನಿಗೂ ಒಂದು ಕಬ್ಬಿಣದ ಗುಂಡನ್ನು ಕಟ್ಟಿ, ಬೆಲೆಯುಳ್ಳ ಪದಾರ್ಥಗಳನ್ನೆಲ್ಲಾ ತಮ್ಮ ದೋಣಿಗೆ ಸಾಗಿಸಿ, ಹಡಗಿನ ತಳದಲ್ಲಿ ಒಂದು ದೊಡ್ಡ ರಂಧ್ರವನ್ನು ಮಾಡಿ ಬಿಟ್ಟು ಹೊರಟು ಹೋಗುವರು. ಸ್ವಲ್ಪ ಹೊತ್ತಿನಲ್ಲಿಯೇ ಹಡಗು ಈ ಕಡೆ ಆ ಕಡೆ ಓಲಾಡುತ್ತ, ಹತ್ತು ನಿಮಿಷಗಳಲ್ಲಿ ಒಂದು ದೊಡ್ಡ ಗುಂಡು ಹಾಕಿದಂತೆ ಸದ್ದಾಗುವುದು; ಆ ಮೇಲೆ ಹಡಗಿರುವ ಸ್ಥಳವು ದೇವರಿಗೇ ಗೊತ್ತಾಗ

ಬೇಕಲ್ಲದೆ ಮನುಷ್ಯರಿಗೆ ಬೇರೆ ಗೊತ್ತಾಗದು. ಸೂರೆಗೊಟ್ಟವರು ಸಂಸ್ಕಾರಕ್ಕೆ ಸಂಗತಿಯನ್ನು ತಿಳಿಸುವುದಿಲ್ಲವೆಂಬುದಕ್ಕೆ ಇದೇ ಕಾರಣ. ಗೊತ್ತಾಯಿತೋ ?

ತನಗೆ ಈ ವರ್ತಮಾನ ಮೊದಲೇ ತಿಳಿದಿದ್ದರೆ ವೀರಸಿಂಹನು ಮಲಯದ್ವೀಪಕ್ಕೆ ಹೊರಡುತ್ತಲೇ ಇರಲಿಲ್ಲ ; ಹೊರಟ ಮೇಲೆ ಹಿಂದಿರುಗುವುದು ಹೇಡಿತನವೆಂದು ತಿಳಿದು ಗುಹನನ್ನು ಕುರಿತು ಈ ವಾಕ್ಯಗಳಲ್ಲಿ ಬೇಕಾದಷ್ಟು ಸುತ್ತಿದ್ದೇನೆ ; ಇಂತಹ ಕಳ್ಳರ ಸುದ್ದಿಯನ್ನೇ ನಾನು ಕೇಳಿ ಇಲ್ಲ ; ಬಂದು ವೇಳೆ ಅವರು ನಮ್ಮ ಮೇಲೆ ಬಿದ್ದರೂ ನಾವ್ರ ಭಯಪಡಕೆಲಸವಿಲ್ಲ ಎಂದು ತಾನು ತಂದಿದ್ದ ಮೂರು ಕೋವಿಗಳಿಗೂ ಗುಂಡನ್ನೂ ಮದ್ದನ್ನೂ ತುಂಬಿ ಸಿದ್ಧಮಾಡಿ ಪಕ್ಕದಲ್ಲಿಟ್ಟುಕೊಂಡನು.

ಮೂರನೆಯ ದಿನ ದೋಣಿಯು ಮಲಯದ್ವೀಪವನ್ನು ಸೇರುವುದರೊಳಗಾಗಿ ಕತ್ತಲಾಯಿತು ; ಆ ದ್ವೀಪವು ಕತ್ತಲೆಯಲ್ಲಿ ಒಂದು ದೊಡ್ಡ ಭೂತವು ನಿಂತಿರುವಂತೆ ತೋರುತ್ತಿದ್ದಿತು. ದೋಣಿಯು ಇನ್ನೂ ಸ್ವಲ್ಪ ಸಮೀಪಕ್ಕೆ ಹೋಗುತಲೆ ಅದರಲ್ಲಿ ಬಂದು ಕಡೆ ಬೆಂಕಿಯು ಹೊತ್ತಿಸಿದ್ದಂತೆ ಕಾಣಿಸಿತು. ಇದೇನು ಬೆಂಕಿ ಎಂದು ವೀರಸಿಂಹನು ಕೇಳಲು, ಗುಹನು ಊಹ್ ! ಆರೋ ಅಲ್ಲಿ ಬಂದು ಇಳಿದಿರಬೇಕು ಎಂದನು.

ಆಗ ವೀರಸಿಂಹನು ತನ್ನ ಧ್ವನಿಯನ್ನು ತಗ್ಗಿಸಿ ಇದು ನಿರ್ಜನವಾದುದೆಂದು ನೀನು ಹೇಳಲಿಲ್ಲವೇ ? ಎಂದನು.

ಅಹುದು ಮಹಾಸ್ವಾಮೀ ! ಆದರೆ ಕಳ್ಳವ್ಯಾಪಾರಿಗಳೂ, ಕಡಲುಗಳ್ಳರೂ ಆಗಾಗ ಬಂದು ಇಲ್ಲಿ ಇಳಿಯುವುದುಂಟು ಎಂದು ಆಗಲೇ ತಮಗೆ ನಾನು ತಿಳಿಸಿರಲಿಲ್ಲವೇ ?

ಇಲ್ಲಿರುವವರು ಕಳ್ಳರಾಗಿದ್ದರೆ ತಾವಿರುವ ಸ್ಥಳ ಎಲ್ಲರಿಗೂ ತಿಳಿಯುವಂತೆ ಬೆಂಕಿ ಹಾಕಿಕೊಂಡು ಇರುವರೇ ?

ಅವರಾರೋ ಈಗ ತಿಳಿದು ಬರುವೆನು ಎಂದು ಗುಹನು ಹೇಳಿದುದಕ್ಕೆ ವೀರಸಿಂಹನು ಅದು ಹೇಗೆ ಎಂದು ಕೇಳಲು, ಹೀಗೆ ಎಂದು ಬೆಂಕಿಯಿದ್ದ ಕಡೆ ಬಿಟ್ಟು ಮತೆಯಾಗಿರುವ ಮತ್ತೊಂದು ಕಡೆಯಲ್ಲಿ ದೋಣಿಯನ್ನು ನಿಲ್ಲಿಸಿ, ಸದ್ದಿಲ್ಲದಂತೆ ಲಂಗರನ್ನು ಇಳಿಯಬಿಟ್ಟು, ಮೆಯ್ಯ ವೇಲಿನ ಒಟ್ಟಿಗಳನ್ನು ತೆಗೆದು, ದೋಣಿಯಲ್ಲಿಟ್ಟು, ನೀರಿನಲ್ಲಿ ಮೆಲ್ಲಗೆ ಇಳಿದನು, ಅವನೆತ್ತ ಹೋದನೆಂಬುದು ಕತ್ತಲಲ್ಲಿ ಕಾಣಿಸಲಿಲ್ಲ ;

ಆದರೆ ಒಂದು ಬಿಳಿಯ ಗೆರೆ ಮಾತ್ರ ದೋಣಿಯಿಂದ ದಡಕ್ಕೆ ನೀರಿನಲ್ಲಿ ಹಬ್ಬುವಂತೆ ತೋರಿ ಕೊನೆಗೆ ಆ ಗೆರೆಯೂ ಕಾಣಿಸಲಿಲ್ಲ. ಸುಮಾರು ಅರ್ಧ ಗಂಟೆಯ ಮೇಲೆ ಪುನಃ ದಡದಿಂದ ಆ ಬಿಳಿಯ ಗೆರೆಯು ಕಾಣಿಸಿಕೊಂಡು ದೋಣಿಯ ವರೆಗೆ ಬಂದ ಕೂಡಲೆ ಗುಹನು ದೋಣಿಯನ್ನು ಹತ್ತಿ ಬಂದು, ಮಹಾಸ್ವಾಮೀ! ಅಲ್ಲಿ ಆರು ಮಂದಿ ಇರುತ್ತಾರೆ; ಅವರಲ್ಲಿ ಇಬ್ಬರು ಕಡಲುಗಳ್ಳರು, ಮಿಕ್ಕವರು ಕಳ್ಳವ್ಯಾಪಾರಿಗಳು ಎಂದನು.

ಕಳ್ಳವ್ಯಾಪಾರಿಗಳ ಸಂಗಡ ಕಳ್ಳರಿಗೇನು ಕೆಲಸ?

ಸ್ವಾಮೀ! ನಾವು ಒಬ್ಬರಿಗೊಬ್ಬರು ಸಹಾಯಮಾಡದಿದ್ದರೆ ಬದುಕುವುದು ಹೇಗೆ? ಅನೇಕಾವೃತ್ತಿ ಪೋಲೀಸಿನವರು ಕಳ್ಳರನ್ನು ಅಟ್ಟಿಸಿಕೊಂಡು ಬಂದಾಗ, ಅವರು ನಮ್ಮವರಾರನ್ನಾದರೂ ಕಂಡರೆ, ಕಾಪಿಡಿ ಎಂದು ಸಂಕೇತದಲ್ಲಿ ಬೀಡುವರು; ಆಗ ಅವರಿಗೆ ನಾವು ಸಹಾಯ ಮಾಡಿದರೆ, ಅವರು ನಮಗೆ ಅನೇಕ ವೇಳೆ ಉಪಕಾರ ಮಾಡುವರು.

ಅವರು ನಿಮಗೆ ಮಾಡುವ ಉಪಕಾರವಾವುದು?

ನಮ್ಮ ಸರಕುಗಳನ್ನು ಇಳಿಸಲು ಸರ್ಕಾರದವರ ತೊಂದರೆಯಿಲ್ಲದೆ ಏಕಾಂತವಾಗಿಯೂ ಅನುಕೂಲವಾಗಿಯೂ ಇರುವ ಸ್ಥಳಗಳನ್ನು ತೋರಿಸುವುದು.

ಹಾಗಾದರೆ ನೀನೊಬ್ಬ ಕಳ್ಳವ್ಯಾಪಾರಿಯೆಂದು ತೋರುತ್ತದೆ.

ಮಹಾಸ್ವಾಮೀ, ಹೇಗಾದರೂ ಜೀವನ ನಡೆಯಬೇಕಲ್ಲಾ.

ನೀನು ಕಳ್ಳವ್ಯಾಪಾರಿಯಾಗಿದ್ದರೆ ನಿನಗೆ ಅವರೆಲ್ಲರೂ ತಿಳಿದಿರಬೇಕು.

ನಾನವರನ್ನು ಬಲ್ಲೆ. "ಹಾಗಾದರೆ ನಾವಿಲ್ಲಿಳಿದರೆ ಭಯವೇನು?"

ಸ್ವಾಮೀ, ಕಳ್ಳವ್ಯಾಪಾರಿಗಳು ಕಳ್ಳರಲ್ಲ.

ಆ ಇಬ್ಬರು ಕಳ್ಳರೋ?

ನ್ಯಾಯವಾಗಿ ನೋಡಿದರೆ ಅವರೂ ಕಳ್ಳರಲ್ಲ; ಅವರು ತಮ್ಮ ದೇಶದಲ್ಲಿ ತಮ್ಮ ಹಗೆಗಳನ್ನು ಕೊಂದು ಅಲ್ಲಿಯ ಸರ್ಕಾರದವರ ಬಾಧೆಯಿಂದ ತಪ್ಪಿಸಿಕೊಂಡು ಇಲ್ಲಿ ಬಂದು ಸೇರಿರುವರು.

ಇವರು ಆರು ಮಂದಿಗೆ ನಾವಾರು ಮಂದಿ ಇರುವೆವು; ಆದರೇನಾದರೂ

ನಮ್ಮನ್ನು ತಂಟೆಮಾಡಿದರೆ ನಾನು ಅವರನ್ನು ಒಲಿಹಾಕಿ ಬಿಡುವೆನು ಎಂದು ತನ್ನ ಕೋವಿಗಳನ್ನು ಗುಹನಿಗೆ ತೋರಿಸಿದನು. ಗುಹನು ಸ್ವಲ್ಪ ನಕ್ಕು ಹಾಗಾದರೆ ಇಲ್ಲಿ ಇಳಿಯೋಣವೋ ಎಂದುದಕೆ, ವೀರಸಿಂಹನು ಹೂಂ ಎಂದನು.

ಗುಹನ ಕಥೆಗಳನ್ನು ಸಂಪೂರ್ಣವಾಗಿ ನಂಬಿದ್ದರೂ ವೀರಸಿಂಹನಿಗೆ ಮನಸ್ಸಿನಲ್ಲಿ ಸ್ವಲ್ಪ ಭಯವುಂಟಾಯಿತು. ದೋಣಿಯವರೂ ಆ ಕಳ್ಳವ್ಯಾಪಾರಿಗಳೂ ಒಂದಾದರೆ ತನ್ನನ್ನು ಏನ ಬೇಕಾದರೂ ಮಾಡಬಹುದು; ಆದುದರಿಂದ ಅವರ ಚರ್ಯೆಗಳನ್ನು ಬಹು ಜಾಗರೂಕತೆಯಿಂದ ನೋಡುತ್ತಲಿರಬೇಕು ಎಂದು ಯೋಚಿಸಿ, ವೀರಸಿಂಹನು ದೋಣಿಯವರ ಮೇಲೆ ಕಣ್ಣಿಟ್ಟು, ಕೈಯ್ಯಲ್ಲಿ ಕೋವಿಗಳನ್ನು ಹಿಡಿದು ಎದ್ದನು. ಇಷ್ಟರಲ್ಲಿ ದೋಣಿಯು ಪುನಃ ಬೆಂಕೆಯಿದ್ದ ಕಡೆಗೆ ಬರಲು, ಗುಹನು ನಾವಿಕರ ಹಾಡು ಒಂದನ್ನು ಗಟ್ಟಿಯಾಗಿ ಹಾಡಿದನು. ಆಗ ಬೆಂಕಿ ಕಾಯುತ್ತಲಿದ್ದವರು ನಮಗೆ ತಿಳಿದವರಾರೋ ಬರುತ್ತಾರೆ ಎಂದು ಸುಮ್ಮನಿದ್ದರು. ದೋಣಿಯು ಸ್ವಲ್ಪ ಮುಂದಕ್ಕೆ ಹೋಗಿ ಅಲ್ಲಿದ್ದ ಒಂದು ಕೊಲ್ಲಿಯನ್ನು ಪ್ರವೇಶಿಸಿತು; ಜನಗಳು ಇಳಿಯುವುದಕ್ಕೆ ಹೋಗಲು ಅಲ್ಲಿದ್ದ ಕಾವಲುಗಾರನೊಬ್ಬನು, ಯಾರದು ಎಂದು ಕೇಳಿ ತನ್ನ ಭುಜದ ಮೇಲಿದ್ದ ತುಪಾಕಿಯನ್ನು ಅವರಿಗೆ ಗುರಿಕಟ್ಟಿ ಹಿಡಿದನು; ಅದನ್ನು ನೋಡಿ ವೀರಸಿಂಹನು ತನ್ನ ಕೋವಿಯನ್ನು ಕಾವಲುಗಾರನ ಮೇಲೆ ಹಾರಿಸಲು ಸಿದ್ಧನಾದನು.

ಆಗ ಗುಹನು ಮಹಾಸ್ವಾಮೀ, ಸ್ವಲ್ಪ ನಿಧಾನಿಸಬೇಕು ಎಂದು ಹೇಳಿ, ಕಾವಲುಗಾರನ ಸಂಗಡ ಕೆಲವು ಸಂಕೇತವಾದ ಮಾತನ್ನಾಡಲು, ಅವನೂ ಅದೇ ಸಂಕೇತ ಭಾಷೆಯಲ್ಲಿ ಪ್ರತ್ಯುತ್ತರವನ್ನಿತ್ತ ಒಳಿಕ, ಮಹಾಸ್ವಾಮೀ! ನೀವು ಇಳಿಯುವುದಕ್ಕೆ ಮೊದಲು ನಿಮ್ಮ ಹೆಸರನ್ನು ಹೇಳಬೇಕು; ಹಾಗೆ ಮಾಡಲು ಇಷ್ಟವಿಲ್ಲವೋ ಎಂದು ಕೇಳಿದನು.

ಹೆಸರನ್ನು ಹೇಳಲು ನನಗೆ ಇಷ್ಟವಿಲ್ಲ ಎಂದು ವೀರಸಿಂಹನು ಹೇಳಲು, ಗುಹನು ಆದನ್ನು ಆ ಕಾವಲುಗಾರನಿಗೆ ತಿಳಿಸುತಲೆ ಅವನು ಬೆಂಕಿಯ ಮುಂದೆ ಕುಳಿತಿದ್ದವರಲ್ಲಿ ಒಬ್ಬನನ್ನು ಕರೆದು ಏನನ್ನೋ ಹೇಳಿ ಕಳುಹಿಸಿದನು. ಸ್ವಲ್ಪ ಹೊತ್ತಿನ ಮೇಲೆ ಅವನು ಹಿಂದಿರುಗಿ ಬಂದು ತಾನು ಹೋಗಿದ್ದ ಕೆಲಸದ ಫಲಿತಾಂಶವನ್ನು ತಿಳಿ

ಸಿದ ಕೂಡಲೆ, ಕಾವಲುಗಾರನು ತುತ್ತೂರಿಯನ್ನು ಪುನಃ ಎತ್ತಿ ಭುಜದ ಮೇಲಿಟ್ಟು ಕೊಂಡು, ದೋಣಿಯಲ್ಲಿದ್ದವರನ್ನು ನೋಡಿ ಬಿಜಯಮಾಡಿಸಬಹುದು ಎಂದನು.

ಎಲ್ಲರೂ ದೋಣಿಯಿಂದ ಇಳಿದು ಬಂದರು. ಬರುತ್ತ ವೀರಸಿಂಹನು ಬೆಂಕಿಯು ಬಳಿ ಕೆಲವರು ರೊಟ್ಟಿ ಸುಡುತ್ತಲಿದ್ದುದನ್ನು ನೋಡಿ, ಗುಹನೊಡನೆ ನನಗೆ ಹಸಿವು ಆಗುವುದರಿಂದ ಅವರನ್ನು ಕೇಳಿ, ಸ್ವಲ್ಪ ರೊಟ್ಟಿಯನ್ನು ತೆಗೆದುಕೊಂಡು ಬಾ ಎಂದನು. ಗುಹನು ಅವರನ್ನು ಕೇಳುತ್ತಿದ್ದಾಗ ಅವನೋ ಬಬ್ಬನು ಬಂದು ಅವನ ಕೂಡ ಮಾತ ನಾಡಿ ಹೋಗಲು, ಗುಹನು ವೀರಸಿಂಹನ ಬಳಿಗೆ ಬಂದು ಮಹಾಸ್ವಾಮೀ, ಅಮರ ದೇಶದಿಂದ ನೀವು ಬಂದಿರುವಿರಿ ಎಂದು ತಿಳಿದು ಇವರ ಯಜಮಾನರು ನಿಮ್ಮನ್ನು ಅವರ ಮನೆಗೇ ಊಟಕ್ಕೆ ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಿದ್ದಾರೆ ಎಂದನು.

ಇದನ್ನು ಕೇಳಿ ವೀರಸಿಂಹನು ಓಹೋ, ಇವರಿಗೆ ಯಜಮಾನನೂ ಬಬ್ಬನು ಉಂಟೋ ಎನ್ನಲು, ಗುಹನು ಸ್ವಾಮೀ, ಯಜಮಾನನಿಲ್ಲದಿದ್ದರೆ ಅವ ಕೆಲಸ ತಾನೇ ವಿವೇಕವಾಗಿ ನಡೆದೀತು ಎಂದನು.

ಅವನ ಮನೆಯೆಲ್ಲಿದೆ ?

ಅವರು ಇಲ್ಲಿಗೆ ಆಗಾಗ ಬರುತ್ತಾ ಇರುವುದರಿಂದ ಇಲ್ಲಿರುವ ಗೃಹೆಯೊಂದನ್ನು ತಮ್ಮ ವಾಸಕ್ಕೆ ಅನುಕೂಲವಾಗಿರುವಂತೆ ಮಾಡಿಕೊಂಡಿರುವರು.

ನೀನು ಅವನನ್ನು ಬಲ್ಲೆಯೆಂದು ತೋರುತ್ತದೆ.

ಅವರನ್ನು ನಾನು ನೋಡಿಲ್ಲ, ಅವರ ವಿಷಯವನ್ನು ಕೇಳಿ ಬಲ್ಲೆ.

ಅವರು ಒಳ್ಳೆಯವರೋ ಕೆಟ್ಟವರೋ ?

ಎರಡೂ.

ಹಾಗೆಂದರೇನು ?

ಒಳ್ಳೆಯವರಿಗೆ ಒಳ್ಳೆಯವರು, ಕೆಟ್ಟವರಿಗೆ ಕೆಟ್ಟವರು.

ಇವರಿಂದ ರೊಟ್ಟಿಯನ್ನು ತೆಗೆದು ತಿನ್ನುವುದಕ್ಕಿಂತ ಯಜಮಾನನ ಮನೆಗೆ ಊಟಕ್ಕೆ ಹೋಗುವುದೇ ಮೇಲೆಂದು ತೋರುತ್ತದೆ. ನೀನೇನ ಹೇಳುತ್ತೀಯೆ ಎಂದು ವೀರಸಿಂಹನು ಕೇಳಲು, ಗುಹನು ಸ್ವಾಮೀ, ಹೋಗಬಹುದು ; ಆದರೆ ಅವರು

ಒಂದು ನಿಯಮವನ್ನು ಮಾಡಿರುವರು, ಅದಕ್ಕೆ ತಾವು ಒಪ್ಪಿಕೊಳ್ಳಬೇಕಾಗುವುದು ಎಂದನು.

ಅದೇನು ?

ಒಳಗೆ ಹೋಗತಕ್ಕವರು ಬಟ್ಟೆಯಿಂದ ಕಣ್ಣಕಟ್ಟಿಸಿಕೊಂಡು ಯಜಮಾನರ ಮುಂದೆ ನಿಂತು ಅವರು ಹೇಳುವ ವರೆಗೆ ಕಣ್ಣ ಕಟ್ಟನ್ನು ಬಿಚ್ಚಕೂಡದು. ಇದೇ ಅವರ ನಿಯಮ.

ಈ ನಿಯಮವನ್ನು ಕೇಳುತಲೆ ವೀರಸಿಂಹನಿಗೆ ಅನುಮಾನವು ಹುಟ್ಟಿ, ಗುಹನ ಮುಖವನ್ನು ದೃಷ್ಟಿಸಿ ನೋಡಲು, ಅವನು ತಮ್ಮ ಅಭಿಪ್ರಾಯವು ಸನಗೆ ಗೊತ್ತಾ ಯಿತು ; ಇದೇನೋ ಯೋಚಿಸಿ ಮಾಡಬೇಕಾದ ಕೆಲಸವೇ ಸರಿ ಎಂದನು.

ನೀನಾಗಿದ್ದರೆ ಏನ ಮಾಡುತ್ತಲಿದ್ದೆ ?

ಊಟವೇನೋ ಒಳ್ಳೆಯದೆಂದು ಹೇಳುತ್ತಾರೆ, ಅದು ಹೇಗಾದರೂ ಇರಲಿ. ಗುಹೆಯು ನೋಡತಕ್ಕುದೆಂದು ಅನೇಕರು ಹೇಳಿದ್ದಾರೆ ; ಅದನ್ನು ನೋಡಲೋಸುಗ ವಾದರೂ ಹೋಗಬೇಕು. ನಾನಾಗಿದ್ದರೆ ಒಪ್ಪಿಕೊಳ್ಳುತಲಿದ್ದೆ.

ಈ ನಿಮ್ಮ ಯಜಮಾನನು ವಿಜಾತೀಯಮನುಷ್ಯನೆಂದು ತೋರುತ್ತದೆ.

ಇದನ್ನು ಕೇಳಿ ಗುಹನು ಅತ್ತಿತ್ತ ನೋಡಿ ತನ್ನ ಧ್ವನಿಯನ್ನು ತಗ್ಗಿಸಿಕೊಂಡು ಸ್ವಾಮೀ, ಇವರು ಶ್ರೀಮಂತರೆಂದೂ, ಗುಹೆಯು ಇಂದ್ರಭವನಕ್ಕೆ ಸಮಾನವಾಗಿದೆ ಯೆಂದೂ ನೋಡಿದ ಜನರು ಹೇಳಿದ್ದಾರೆ. ಅದು ನಿಜವೋ ಸುಳ್ಳೋ ಗೊತ್ತಿಲ್ಲ.

ನೀನು ಹೇಳುವುದನ್ನು ನೋಡಿದರೆ ದೇವತೆಗಳು ಅರಣ್ಯಗಳಲ್ಲಿ ಅರಮನೆಗ ಳನ್ನೂ, ಗುಹೆಗಳಲ್ಲಿ ಕುಬೇರನ ವಾಸಕ್ಕೆ ಯೋಗ್ಯವಾದ ಭವನಗಳನ್ನೂ ನಿರ್ಮಿಸಿದ ರೆಂದು ಹೇಳುವ ಯವನಯಾಮಿನೀವಿನೋದಕಥೆಯೇ ಜ್ಞಾಪಕಕ್ಕೆ ಬರುವುದು.

ಸ್ವಾಮೀ, ನಾನು ಕೇಳಿದುದನ್ನು ತಮ್ಮಲ್ಲಿ ಅರಿಕೆಮಾಡಿದೆ.

ಹಾಗಾದರೆ ನೀನು ಏನ ಹೇಳುತ್ತೀಯೆ, ಹೋಗಲೋ ಬೇಡವೋ ?

ತಮ್ಮಿಷ್ಟ.

ಗುಹನು ಹೀಗೆ ಹೇಳುತ್ತಲೆ ವೀರಸಿಂಹನಿಗೆ ಯೋಚನೆಯು ಹತ್ತಿತು. ಈ ಕಳ್ಳ ವ್ಯಾಪಾರಿಗಳ ಯಜಮಾನನು ಕಳ್ಳನೋ, ಸಭ್ಯನೋ ? ಗುಹನು ಹೇಳುವಂತೆ ಶ್ರೀಮಂತ

ನಾಗಿದ್ದರೆ ಇವನಿಗೆ ಕಳ್ಳವ್ಯಾಪಾರಿಗಳ ಸಹವಾಸವೇತಕ್ಕೆ? ಕಣ್ಣನ್ನು ಕಟ್ಟಿ ಗುಹೆಗೆ ಕರೆದುಕೊಂಡು ಹೋಗಲೇಕೆ? ನನ್ನಲ್ಲಿರುವ ದುಡ್ಡನ್ನು ಕಸುಗೊಳ್ಳಲೋಸುಗ ಊಟಕ್ಕೆ ಕರೆದಿರುವನೋ? ಇಲ್ಲಿರುವವರೆಲ್ಲರೂ ಅವನ ಕಡೆಯವರಾದುದರಿಂದ ಹಾಗೆ ಕಸುಗೊಳಬೇಕೆಂದಿದ್ದರೆ ಊಟಕ್ಕೆ ಕರೆಯುದೆಯೇ ಆ ಕಾರ್ಯವನ್ನು ಮಾಡಲು ಒಹುದು. ಊಟದಲ್ಲಿಯೇ ಆಗಲಿ, ಪಾನದಲ್ಲಿಯೇ ಆಗಲಿ ಅನುಲೇರುವಂತೆ ಔಷಧವನ್ನು ಹಾಕಿ ಮೆಯ್ಯ ಮೇಲಿರುವುದನ್ನು ಕಸುಗೊಳ್ಳುವುದುಂಟು; ಒಂದು ವೇಳೆ ಅವನು ಹಾಗೆ ಮಾಡುವುದಾದರೆ ನನಗೆ ಬಡ್ಡಿಸುವುದನ್ನೆಲ್ಲಾ ಅವನೂ ಬಡ್ಡಿಸಿಕೊಂಡು ತಿಂದ ಹೊರತು ನಾನು ಮುಟ್ಟುವುದಿಲ್ಲ. ಅವನೆಂಥವನೋ, ಅವನಿರುವ ಗುಹೆಯು ಹೇಗಿರುವುದೋ, ನೋಡಬೇಕು ಎಂದು ಯೋಚಿಸಿ, ಗುಹನನ್ನು ಕುರಿತು ಊಟಕ್ಕೆ ಬರುತ್ತೇನೆಂದು ಯಜಮಾನನಿಗೆ ತಿಳಿಸು ಎಂದನು.

ಈ ವಾರ್ತೆಯನ್ನು ಯಜಮಾನನಿಗೆ ತಿಳಿಸಲೋಸುಗ ಅವನ ಕಡೆ ಆಳನ್ನು ಹುಡುಕಿಕೊಂಡು ಗುಹನು ಹೊರಟ ಮೇಲೆ, ವೀರಸಿಂಹನು ಅಲ್ಲಿದ್ದ ಕಾವಲುಗಾರನ ಸಮೀಪಕ್ಕೆ ಹೋಗಿ ಇಲ್ಲಿ ಆವ ಹಡಗೂ ಇಲ್ಲವಲ್ಲಾ; ಈ ಜನರು ಹೇಗೆ ಬಂದರು ಎಂದು ಪ್ರಶ್ನೆ ಮಾಡಿದನು.

ಅವರ ಹಡಗನ್ನು ನಾನು ಬಲ್ಲೆ.

ಅದು ಹೇಗಿರುವುದು?

ಅದಕ್ಕಿಂತ ಒಳ್ಳೆಯ ಹಡಗು ಎಲ್ಲಿಯೂ ಇಲ್ಲ.

ಈ ಕಳ್ಳವ್ಯಾಪಾರಿಗೆ ಅಷ್ಟು ಒಳ್ಳೆಯ ಹಡಗು ಎಲ್ಲಿ ಒಂಟಿತು?

ಅವನು ಕಳ್ಳವ್ಯಾಪಾರಿಯೆಂದು ಆರು ಹೇಳಿದರು? ನಾನು ಹೇಳಲಿಲ್ಲವಲ್ಲಾ?

ನೀನು ಹೇಳಲಿಲ್ಲ; ಗುಹನು ಹೇಳಿದ ಹಾಗಿದ್ದಿತು.

ಗುಹನು ಅವನನ್ನು ನೋಡಿರಲಾರನು; ಆಧವಾ ನೋಡಿದ್ದರೂ ದೂರದಲ್ಲಿ ನೋಡಿರಬಹುದು.

ಹಾಗಾದರೆ ಅವನಾರು?

ಅವನನ್ನು ರಾಜಪುತ್ರನೆಂದು ಕೆಲವರು ಹೇಳುವರು; ಇನ್ನು ಕೆಲವರು ಶ್ರೀಮಂತನೆಂದು ಹೇಳುವರು. ರಾಜಕುಮಾರನೋ ಶ್ರೀಮಂತನೋ ನನಗೆ ಗೊತ್ತಿಲ್ಲ.

ಅವನಲ್ಲಿ ವಿಶೇಷಧನವಿರುವುದು; ಇಷ್ಟಬಂದವರಿಗೆ ಯಥೇಚ್ಛವಾಗಿ ದ್ರವ್ಯವನ್ನು ಕೊಡುವನು; ಆರಿಗಾದರೂ ಆಪತ್ತು ಬಂದು ಸರ್ಕಾರದವರಿಂದ ಪೀಡಿತರಾದರೆ, ಅವರು ಅಪರಾಧಿಗಳಾಗಿದ್ದರೂ ಕಾಪಿಡುವನು. ಅವನಿಗೆ ಈ ಕಡಲಿನಲ್ಲಿರುವ ಕಳ್ಳರೂ ಕಳ್ಳ ವ್ಯಾಪಾರಿಗಳೂ ಭೃತ್ಯರು; ಪ್ರಾಣಹೋದರೂ ಅವನು ಆವಾಗಲೂ ಸಂಚಾರಮಾಡುತ್ತಲೇ ಇರುವನು; ಈ ದ್ವೀಪಕ್ಕೂ ಆಗಾಗ ಬರುವುದುಂಟು.

ಅವನ ಹೆಸರೇನು?

ಅವನ ನಿಜವಾದ ಹೆಸರು ಆರಿಗೂ ತಿಳಿಯದು; ಆವಾಗಲೂ ಸಮುದ್ರದಲ್ಲೇ ಸುತ್ತುತ್ತಲಿರುವುದರಿಂದ ನಾವಿಕಸೈಂಧವನೆಂದು ಎಲ್ಲರೂ ಕರೆಯುವರು. ಅವನೂ ಅದೇ ಹೆಸರನ್ನೇ ಹೇಳುವನು.

ಅವನು ವಾಸವಾಗಿರುವುದು ಎಲ್ಲಿ? "ಸಮುದ್ರದಲ್ಲಿ."

ಆವ ದೇಶದವನು?

ಅದು ಆರಿಗೂ ತಿಳಿಯದು; ಒಂದೊಂದು ವೇಳೆ ಒಂದೊಂದು ದೇಶದವನಂತೆ ತೋರುವನು. ಪ್ರತಿಯೊಂದು ಭಾಷೆಯನ್ನೂ ಆ ದೇಶೀಯರಂತೆಯೇ ಚೆನ್ನಾಗಿ ಆಡುವನು.

ನೀನು ಅವನನ್ನು ಆವಾಗಲಾದರೂ ನೋಡಿರುವೆಯೋ?

ಆಡಿಗಡಿಗೆ ನೋಡುವುದುಂಟು.

ಅವನೆಂತಹ ಮನುಷ್ಯ?

ತಮ್ಮ ಪ್ರಶ್ನೆಯು ನನಗೆ ಸರಿಯಾಗಿ ತಿಳಿಯಲಿಲ್ಲ. ಹೇಗಾದರೂ ಈಗ ತಾವು ಅವನಲ್ಲಿ ದಯೆಮಾಡಿಸುತ್ತೀರಾಗಿ ತಾವೇ ಗೊತ್ತುಮಾಡಿಕೊಳ್ಳಬಹುದು.

ಎಲ್ಲಿ ಊಟಮಾಡುತ್ತಾನೆ? "ಗುಹೆಯಲ್ಲಿ."

ಈ ದ್ವೀಪವು ನಿರ್ಜನವಾದುದಲ್ಲವೇ? "ಅಹುದು."

ಆರೂ ಇಲ್ಲದ ವೇಳೆಯಲ್ಲಿ ಗುಹೆಯನ್ನು ಹೊಕ್ಕು ನೋಡಬೇಕೆಂಬ ಆಸೆಯು ನಿನಗೆ ಆವಾಗಲೂ ಆಗಲಿಲ್ಲವೋ?

ಸ್ವಾಮೀ! ಆ ಆಸೆಯಿಂದಲೇ ಎಷ್ಟೋಜನರು ಬಹು ಪ್ರಯತ್ನಪಟ್ಟರು; ಆರಿಗೂ ಗುಹೆಯು ಬಾಗಿಲೇ ತೋಡವಾಗಲಿಲ್ಲ. ಆ ಯಜಮಾನನಲ್ಲಿರುವ ಮಂತ್ರವನ್ನು

ಹೇಳಿದ ಹೊರತು ಗುಹೆಯು ಬಾಯಿಬಿಡುವುದೂ ಇಲ್ಲ, ಮುಚ್ಚುವುದೂ ಇಲ್ಲವೆಂದು ಜನರು ಹೇಳುವರು; ಅದು ನಿಜವೆಂದು ನನಗೂ ತೋರುತ್ತದೆ.

ವೀರಸಿಂಹನು ಈ ಯಜಮಾನನಾರೆಂಬುದನ್ನು ತಿಳಿಯಬೇಕೆಂದು ಎಷ್ಟೆಷ್ಟು ವಿಚಾರಿಸಿದರೂ ಅದು ಅಷ್ಟಷ್ಟು ಗೂಢವಾಗಿ ತೋರುತ್ತಲಿದ್ದುದೇ ಹೊರತು ಅವ್ವದೂ ವ್ಯಕ್ತವಾಗಲಿಲ್ಲ. ಯಜಮಾನನ ಸಂಗಡ ತಾನೇ ಮಾತನಾಡಿ ತಿಳಿದುಕೊಳ್ಳಬಹುದೆಂದು ಯೋಚಿಸುತ್ತಿರುವ ವೇಳೆಗೆ ಸರಿಯಾಗಿ, ಒಬ್ಬ ಆಳು ಬಂದು ಮಹಾಸ್ವಾಮೀ! ಯಜಮಾನರು ತಮಗೋಸ್ಕರ ಕಾದಿರುತ್ತಾರೆ ವಿಜಯಮಾಡಿಸಬೇಕು ಎಂದು ಹೇಳಲು, ವೀರಸಿಂಹನು ತನ್ನ ಕರವಸ್ತ್ರದಿಂದ ಕಣ್ಣನ್ನು ಕಟ್ಟಿಸಿಕೊಂಡು ಆಳಿನ ಕಯ್ಯನ್ನು ಹಿಡಿದುಕೊಂಡು ಅವನ ಹಿಂದೆ ಹೋದನು.

ಆ ಆಳು ನೆಟ್ಟಗೆ ಹೋಗದಂತೆ ಕೆಲವು ವೇಳೆ ಎಡಕ್ಕೂ ಬಲಕ್ಕೂ ತಿರುಗುತ್ತ, ಕೆಲವು ವೇಳೆ ಏರುತ್ತ ಇಳಿಯುತ್ತ, ಸ್ವಲ್ಪ ದೂರ ನೆಟ್ಟಗೆ ಹೋಗುತ್ತ, ಈ ರೀತಿ ಕರೆದುಕೊಂಡು ಹೋಗುತ್ತಿರಲು, ವೀರಸಿಂಹನಿಗೆ ಆ ದಾರಿಯನ್ನು ನೆನಪಿಟ್ಟುಕೊಳ್ಳಲು ಸಾಧ್ಯವಾಗಲಿಲ್ಲ. ಸುಮಾರು ಹತ್ತು ನಿಮಿಷಗಳ ವರೆಗೆ ನಡೆದು ಆಳು ವೀರಸಿಂಹನನ್ನು ಯಜಮಾನನ ಮುಂದೆ ನಿಲ್ಲಿಸಿದನು. ಆಗ ಯಜಮಾನನು ಸ್ವಾಮಿ, ಈಗ ತಾವು ಕಣ್ಣುಕಟ್ಟನ್ನು ಬಿಚ್ಚಿಬಹುದು; ನನ್ನ ಈ ಗುಡಿಸಲಿಗೆ ತಾವು ವಿಜಯಮಾಡಿಸಿದುದು ನನ್ನ ಪುಣ್ಯವೇ ಸರಿ. ಇದನ್ನು ತಮ್ಮ ಮನೆಯಂತೆಯೇ ಭಾವಿಸಿ ಸಂಕೋಚಪಡದೆ ಇರಬೇಕೆಂದು ಪ್ರಾರ್ಥಿಸುತ್ತೇನೆ ಎನ್ನಲು, ಅಷ್ಟೇ ಸಾಕೆಂದು ವೀರಸಿಂಹನು ಕಣ್ಣುಕಟ್ಟನ್ನು ಬಿಚ್ಚಿದನು.

ಆ ಕಳ್ಳರೊಡೆಯನಿಗೆ ನಲವತ್ತು ವಯಸ್ಸು. ಅವನು ಅಷ್ಟು ಉದ್ದವಾಗಿಯೂ ಇರಲಿಲ್ಲ, ಗಿಡ್ಡನಾಗಿಯೂ ಇರಲಿಲ್ಲ; ಅವನು ಅರಬ್ಬೀದೇಶದವರ ಉಡುಪನ್ನು ತೊಟ್ಟಿದ್ದನು; ಅವನ ಮುಖದಲ್ಲಿ ರಕ್ತಪುಷ್ಟಿಯಿಲ್ಲದಿದ್ದರೂ ಬುದ್ಧಿವಿವೇಕಗಳು ತುಂಬಿ ತುಳುಕಾಡುತ್ತಲಿದ್ದುವು. ಸಂಪಗೆಯ ಮೊಗ್ಗೆಯಂತಿರುವ ಮೂಗೂ, ಕಮಲದಳದಂತಿರುವ ಕಣ್ಣುಗಳೂ, ತಿದ್ದಿದಂತಿರುವ ಹುಬ್ಬುಗಳೂ, ಗಂಭೀರವಾದ ಮಾತೂ, ಇಂಪಾದ ಧ್ವನಿಯೂ, ಅವನು ಅಸಾಧಾರಣನೆಂಬುದನ್ನು ಸೂಚಿಸುತ್ತಲಿದ್ದುವು.

ಸುಮಾರು ಒಂದು ನಿಮಿಷದ ವರೆಗೆ ವೀರಸಿಂಹನು ಯಜಮಾನನನ್ನೇ ನೋಡು

ತ್ತಲಿದ್ದು, ತರುವಾಯ ಗುಹೆಯನ್ನು ನೋಡಿದನು. ಗುಹನು ಇಂದ್ರಭವನವೆಂದು ಹೇಳಿದುದು ಕಡಿಮೆ ಎಂದು ತೋರಿತು. ಅದು ಸುಮಾರಾಗಿ ಆಗಲವಾಗಿದ್ದಿತು; ನೆಲದ ಮೇಲೆ ಪಾರಶೀದೇಶದ ಅಮೂಲ್ಯವಾದ ರತ್ನಗಂಬಳಿಗಳನ್ನು ಹಾಸಿದ್ದರು; ಅವುಗಳ ಮೇಲೆ ಅಲ್ಲಲ್ಲಿ ಶ್ಲಾಘ್ಯವಾದ ತಿಲೆಯ ಮೆತ್ತೆಜ ಕುರ್ಚಿಗಳು ಇದ್ದುವು. ನಾಲ್ಕು ಮೂಲೆಗಳಲ್ಲಿಯೂ, ಗೋಡೆಗಳಲ್ಲಿ ಕೆಲವು ಕಡೆಗಳಲ್ಲಿಯೂ, ಅಪ್ಸರಸ್ತ್ರೀಯರಂತೆ ತೋರುತ್ತಲಿದ್ದ ಅವ್ಯತಶಿಲೆಯ ಸ್ತ್ರೀಮೂರ್ತಿಗಳಿದ್ದುವು. ಆಯುಧಶಾಲೆಯೆಂದು ಹೇಳಬಹುದಾದ ಗುಹೆಯ ಒಂದು ಭಾಗವು ಹೊಸದಾಗಿ ಮಾಡಿದ ಕೋಶಗಳಿಂದಲೂ ರತ್ನಖಚಿತವಾದ ಹಿಡಿಗಳುಳ್ಳ ಕತ್ತಿ ಕರಾರಿ ಈಟಿಗಳಿಂದಲೂ, ನಾಲ್ಕು ಗೋಡೆಗಳಲ್ಲಿಯೂ ಕಾಣಬರುತ್ತಲಿದ್ದ ವ್ಯಾಘ್ರಗಳ ಕೊಂಬುಗಳಿಂದಲೂ, ಸೂರ್ಯಚಂದ್ರರಂತೆ ಪ್ರಕಾಶಿಸುತ್ತಲಿರುವ ದೀಪಗಳಿಂದಲೂ, ಅಲಂಕೃತವಾಗಿದ್ದಿತು. ಸೂರಿನಲ್ಲಿ ಭಂಗಾರದ ಮುಖಾಮು ಮಾಡಿದ್ದ ಬೆಳ್ಳಿ ಸರಪಣಿಗಳಿಂದ ಎರಡು ಪಾರ್ಶ್ವದಲ್ಲಿಯೂ ತೂಗು ಮಂಚಗಳು ತೂಗುತ್ತಲಿದ್ದುವು.

ಇವುಗಳೆಲ್ಲವನ್ನೂ ನೋಡಿ ಭ್ರಮಿಸಿ ನಿಂತಿದ್ದ ವೀರಸಿಂಹನನ್ನು ಕುರಿತು, ಯುಜಮಾನನು ಸ್ವಾಮೀ! ತಮಗೆ ಅಜ್ಞಾತನಾಮರಾಗಿರಬೇಕೆಂಬ ಅಭಿಲಾಷೆಯು ಇರುವುದೆಂದು ಕೇಳಿರುವೆನಾಗಿ ನಿಮ್ಮ ಹೆಸರನ್ನು ನಾನು ಕೇಳುವುದಿಲ್ಲ; ಆದರೆ ಇಬ್ಬರು ಒಂದು ಕಡೆ ಸೇರಿ ಒಬ್ಬರ ಹೆಸರು ಒಬ್ಬರಿಗೆ ತಿಳಿಯದೆ ಮಾತನಾಡುವುದು ಕಷ್ಟವಾದುದರಿಂದ, ನಿಮಗಿಷ್ಟವಾದದೊಂದು ಹೆಸರನ್ನು ಹೇಳಿರಿ. ನನ್ನನ್ನು ನಾವಿಕ ಸೈಂಧವನೆಂದು ನೀವು ಕರೆಯಿರಿ ಎಂದನು.

ಸ್ವಾಮೀ ನಾವಿಕಸೈಂಧವರೇ, ಅರಣ್ಯಗಳಲ್ಲಿ ಅರಮನೆಗಳೂ ಗುಹೆಗಳಲ್ಲಿ ಇಂದ್ರಭವನಗಳೂ ಉಂಟೆಂದು ಯವನಯಾಮಿನೀಕಥೆಗಳಲ್ಲಿ ಕೇಳಿದ್ದೇನೇ ಹೊರತು ಇದುವರೆಗೂ ನೋಡಿರಲಿಲ್ಲ; ಈ ಕಲ್ಲುಬಂಡೆಯು ಎಡತಿಪ್ಪೆಯಲ್ಲಿ ಇಂತಹ ಐಶ್ವರ್ಯಯುಕ್ತವಾದ ಗುಹೆಯೂ, ತನ್ನ ಹೆಸರೂ ಆ ಕಥೆಯಲ್ಲಿರುವಂತೆಯೇ ಇರುವುವು. ಈಗ ನಾನು ಈ ಗುಹೆಯಲ್ಲಿ ಇರುವುದರಿಂದ 'ಅಲ್ಲಿಬಾಬ' ಎಂಬ ಹೆಸರು ನನಗೊಪ್ಪುವುದು ಎಂದನು.

ಸರಿಯೆ. ಈ ನಿಮ್ಮ ಹೆಸರಿನಿಂದ, ಆ ಕಥೆಗಳಲ್ಲಿ ನನಗಿರುವ ರುಚಿಯು ನಿಮಗೂ

ಇರುವಂತೆ ತೋರುತ್ತಲಿದೆ; ಅದು ಹಾಗಿರಲಿ. ವರ್ಷದಲ್ಲಿ ಮುನ್ನೂರರವತ್ತು ದಿನಗಳೂ ನಾನಿಲ್ಲಿರುವುದಿಲ್ಲವಾದ ಕಾರಣ, ಗುಹೆಯು ಬಾಗಿಲು ಅರಿಗಾದರೂ ತೆರೆದರೆ ನಾನಿಲ್ಲದ ವೇಳೆಯುಲ್ಲಿ ಇಲ್ಲಿರುವ ಪದಾರ್ಥಗಳನ್ನು ಲೂಟಮಾಡುವರು. ಪದಾರ್ಥಗಳು ಅಷ್ಟು ಬೆಲೆಯುಳ್ಳವಲ್ಲವಾದರೂ ಸಮಯದಲ್ಲಿ ಅವಿಲ್ಲದಿದ್ದರೆ ತುಂಬಾ ಅನನುಕೂಲವಾಗುವುದು; ಅದಕ್ಕಾಗಿಯೇ ಹೊಸಬರು ಆರಾದರೂ ನನ್ನಲ್ಲಿಗೆ ಬಂದರೆ ಅವರ ಕಣ್ಣನ್ನು ಕಟ್ಟಿ ಕರೆದು ತರುವ ನಿಯಮವನ್ನು ಮಾಡಿರುವೆನು. ತಮಗೆ ಇದರಿಂದುಂಟಾದ ತೊಂದರೆಯನ್ನು ಕ್ಷಮಿಸಬೇಕು.

ನೀವು ಮಾಡಿರುವ ನಿಯಮವೇನೋ ಅತ್ಯವಶ್ಯಕವಾದುದೇ; ಇದರಿಂದುಂಟಾಗುವ ಸ್ವಲ್ಪ ತೊಂದರೆಯು ನಿಮ್ಮ ದರ್ಶನಲಾಭದಿಂದಲೂ ಉಪಚಾರೋಕ್ತಿಗಳಿಂದಲೂ ಉಂಟಾಗುವ ಆನಂದದಲ್ಲಿ ಲೀನವಾಗಿ ಹೋಗುವುದು.

ನೀವಿಲ್ಲಿಗೆ ಜಿಜಯಮಾಡಿಸುವ ಪರ್ಯಾಯವು ಕೊಂಚ ಮುಂದಾಗಿ ನನಗೆ ತಿಳಿದಿದ್ದರೆ ಭೋಜನಕ್ಕೆ ತಕ್ಕ ಮಟ್ಟಿಗೆ ಅನುಕೂಲಪಡಿಸುತ್ತಿದ್ದೆನು. ಈಗಲೂ ನಿಮ್ಮ ಸೇವಕನು ಅಣಿಮಾಡಿಸಿರುವ ಭೋಜನವನ್ನು ಪ್ರೀತಿಯಿಂದ ಅಂಗೀಕರಿಸಬೇಕು.

ಊಟವೂ ಈ ಗುಡಿಸಲಿಗೆ ತಕ್ಕಂತೆ ಇದ್ದರೆ ಅದು ರಾಜಯೋಗ್ಯವಾದುದು ಎಂದು ಹೇಳಲು ಸಂದೇಹವೇ ಇಲ್ಲ.

ವೀರಸಿಂಹನು ಹೀಗೆಂದ ಕೂಡಲೆ, ಸೈಂಧವನು ವಾಮನಭಟ್ಟ, ಭೋಜನವು ಸಿದ್ಧವಾಗಿದೆಯೋ ಎಂದು ಕೇಳಿದನು. ಆಗ ಗೋಡೆಯು ಅವುದೋ ಒಂದು ಕಡೆಯಿಂದ ಸದ್ದಿಲ್ಲದೆ ಬಾಗಿಲನ್ನು ತೆಗೆದುಕೊಂಡು, ಕಾಶ್ಮೀರದೇಶದವನಂತೆ ಆರುವರೆ ಅಡಿ ಉದ್ದವಾದವನೊಬ್ಬನು ತಲೆಪಾಕಿ ಎಲ್ಲವೂ ಸಿದ್ಧವಾಗಿರುವುವು ಎಂದು ಸನ್ನೆ ಮಾಡಿ, ಭೋಜನಶಾಲೆಯ ಕಡೆಗೆ ಕೈನೀಡಿ ಬಾಗಿಲನ್ನು ಮುಚ್ಚಿಕೊಂಡು ಹೋದನು. ಅನಂತರ ಸೈಂಧವನು ವೀರಸಿಂಹನನ್ನು ಭೋಜನಶಾಲೆಗೆ ಕರೆದುಕೊಂಡು ಹೋಗಿ ಅಲ್ಲಿದ್ದ ಆಸನಗಳಲ್ಲಿ ಒಂದರ ಮೇಲೆ ಅವನನ್ನು ಕುಳ್ಳಿರಿಸಿ ತಾನೂ ಒಂದರ ಮೇಲೆ ಕುಳಿತನು.

ಗುಹೆಯ ಅಂದವನ್ನು ಕಂಡು ಮೊದಲೇ ಬೆರಗಾಗಿದ್ದ ವೀರಸಿಂಹನು, ಭೋಜನಶಾಲೆಯು ಅಚ್ಚುಕಟ್ಟನ್ನು ನೋಡಿ ಮತ್ತೂ ಬೆರಗಾದನು. ಅದು ಸಣ್ಣದಾಗಿದ್ದರೂ

ಬಹು ರಮಣೀಯವಾಗಿದ್ದಿತು. ನೆಲವು ಕನ್ನಡಿಯಂತಿರುವ ನಾನಾವರ್ಣದ ಅಪೂರ್ವವಾದ ಶಿಲೆಗಳಿಂದ ಖಚಿತವಾಗಿದ್ದಿತು; ಮೂಲೆಗಳಲ್ಲಿ ಗಂಧರ್ವಪ್ರತಿಮೆಗಳು ಫಲಭರಿತಗಳಾದ ಬಂಗಾರದ ತಟ್ಟಿಗಳನ್ನು ಪಿಡಿದು ಅತಿಥಿಗಳಿಗೆ ಒಪ್ಪಿಸುವಂತೆ ನಿಂತಿದ್ದುವು; ತಟ್ಟಿಗಳಲ್ಲಿ ಬಡ್ಡಿಸಿದ್ದ ಅಸಂಖ್ಯಾತವಾದ ಪದಾರ್ಥಗಳ ಇಂಪಾದ ಕಂಪು ನಾಲಗೆಯಲ್ಲಿ ನೀರನ್ನೂರಿಸುತ್ತಿದ್ದಿತು. ವೀರಸಿಂಹನಿಗೆ ಇವೆಲ್ಲವೂ ಸ್ವಪ್ನವೋ ಎಂಬ ಭಯವುಂಟಾಯಿತು. ಅದನ್ನು ತಿಳಿದು ಸೈಂಧವನು ಸ್ವಾಮೀ, ಅಲ್ಲಿಬಾಬರೇ, ಅಡುಗೆ ಮಾಡಿದ ಅಲ್ಪಸ್ವಲ್ಪ ಪದಾರ್ಥಗಳನ್ನು ಒಡ್ಡಿಸಿದುದಾಯಿತು; ಇನ್ನು ಭೋಜನಮಾಡಬಹುದು ಎನ್ನಲು, ವೀರಸಿಂಹನು ಎಚ್ಚತ್ತು ಆಗಬಹುದು ಎಂದನು.

ಆ ಕಾಲದಲ್ಲಿ ವಾಮನಭಟ್ಟನು ಆವ ಮಾತನ್ನೂ ಆಡದೆ ಕಾಲಕಾಲಕ್ಕೆ ತಕ್ಕಂತೆ ಭಕ್ತಿ, ವಿಶ್ವಾಸ, ಜಾಗರೂಕತೆ, ವಿವೇಕಗಳಿಂದ ತನ್ನ ಕೆಲಸವನ್ನು ಮಾಡಿಕೊಂಡು ಹೋಗುವುದನ್ನು ನೋಡಿ, ವೀರಸಿಂಹನಿಗೆ ಅತ್ಯಾಶ್ಚರ್ಯವುಂಟಾಗಿ, ಸ್ವಾಮೀ, ಸೈಂಧವರೇ, ನೀವು ಒಳ್ಳೆಯ ಯೋಗ್ಯನಾದ ಪರಿಚಾರಕನನ್ನು ಸಂಪಾದಿಸಿದ್ದೀರಿ ಎನ್ನಲು, ಸೈಂಧವನು ಅಯ್ಯೋ ಪಾಪ, ಒಂದಾನೊಂದು ಕಾಲದಲ್ಲಿ ಅವನ ಪ್ರಾಣವನ್ನು ನಾನು ಕಾಪಿಟ್ಟೆನು; ಅದಕ್ಕೋಸುಗ ಅವನು ನನಗೆ ಬಹು ಕೃತಜ್ಞನಾಗಿದ್ದಾನೆ ಎಂದು ಹೇಳಿದ ಕೂಡಲೆ ವಾಮನಭಟ್ಟನು ಎರಡು ಕೈಗಳನ್ನೂ ಜೋಡಿಸಿಕೊಂಡು ಸೈಂಧವನಿಗೆ ವಂದಿಸಿದನು.

ಸ್ವಾಮೀ! ಇವನಿಗೆ ನೀವು ಮಾಡಿದ ಉಪಕಾರವಾವುದು ಎಂದು ವೀರಸಿಂಹನು ಕೇಳಲು, ಸೈಂಧವನು ಸ್ವಾಮೀ, ಕೇಳಿರಿ; ಇವನು ತನ್ನ ದೇಶದಲ್ಲಿ ಅರಸನಾಗಿದ್ದ ಒಬ್ಬ ನವಾಬನ ಅರಮನೆಯಲ್ಲಿ ಒಳ್ಳೆಯ ಕೆಲಸದಲ್ಲಿದ್ದನು. ಒಂದಾನೊಂದು ದಿನ ಇವನು ಅಂತಃಪುರಪ್ರವೇಶಮಾಡಿದನೆಂದು ನವಾಬನಿಗೆ ಹೇಗೋ ಅನುಮಾನವು ಹುಟ್ಟಿ, ಮೊದಲನೆಯ ದಿನ ಇವನ ನಾಲಗೆಯನ್ನು ಸೀಳಿ, ಮಾರನೆಯ ದಿನ ಕೈಕಾಲುಗಳನ್ನು ಕತ್ತರಿಸಿ, ಮೂರನೆಯ ದಿನ ಶಿರಶ್ಛೇದನವನ್ನು ಮಾಡಿ ಕೊಲ್ಲುವಂತೆ ಆಜ್ಞಾಪಿಸಿದನು. ಅದರಂತೆಯೇ ಮೊದಲನೆಯ ದಿನ ಇವನ ನಾಲಗೆಯನ್ನು ಕುಯ್ದರು. ಇದು ಇವನಿಗೆ ಕ್ರೂರವಾದ ಶಿಕ್ಷೆಯಾಗಿದ್ದರೂ ನನಗೆ ಅನುಕೂಲವಾಯಿತು. ಮೂಗನಾಗಿರುವ ಆಳು ಒಬ್ಬನಿದ್ದರೆ ಅನುಕೂಲವೆಂದು ಒಹು ದಿವಸಗಳಿಂದ ನನಗೆ ಯೋ

ಚನೆಯಿದ್ದಿತು ; ಇವನ ನಾಲಗೆಯನ್ನು ಕುಯ್ಯುವಾಗ ಆಕಸ್ಮಾತ್ತಾಗಿ ನಾನಲ್ಲಿಗೆ ಹೋದೆನು. ಇವನನ್ನು ನೋಡಿ ಯೋಗ್ಯನಾದವನೆಂದು ತಿಳಿದು, ನವಾಬನ ಸಂಗಡ ಮಾತನಾಡಿ ಅವನಿಗೆ ಟೀಕಾಗಿದ್ದ ಕೆಲವು ತುಪಾಕಿಗಳನ್ನೂ ವಜ್ರಗಳನ್ನೂ ಕೊಟ್ಟು ಅವನಿಂದ ಇವನನ್ನು ಕ್ರಯಕ್ಕೆ ಕೊಂಡೆನು. ವಿಕ್ರೀತನಾದವನ ಪ್ರಾಣವು ಯಜಮಾನನ ಅಧೀನವೆಂಬುದು ವಾಮನಭಟ್ಟನಿಗೆ ತಿಳಿಯುವುದು ; ಆದುದರಿಂದ ಅವನು ನನ್ನಲ್ಲಿ ಶ್ರದ್ಧಾಭಕ್ತಿಯುಕ್ತನಾಗಿರುವನು ಎಂದು ಹೇಳಿ ಸೈಂಧವನು ವಾಮನಭಟ್ಟನನ್ನು ನೋಡಲು, ಅವನು ಅಹುದೆಂದು ತಲೆಯನ್ನು ಅಲುಗಿಸಿದನು.

ಈ ಕ್ರೂರಮಿಶ್ರವಾದ ದಯಾಕಾರ್ಯಕ್ಕಾಗಿ ಸಂತೋಷಪಡಬೇಕೋ ಕ್ರೂರತರವಾದ ಸೈಂಧವನ ಕಥನಕ್ಕಾಗಿ ವ್ಯಸನಪಡಬೇಕೋ ಅವುದೂ ತಿಳಿಯದೆ ವೀರಸಿಂಹನು ಸ್ವಲ್ಪಕಾಲ ಸುಮ್ಮನಿದ್ದು, ಬೇರೆ ಪ್ರಸ್ತಾಪವನ್ನು ಮಾಡುವುದು ಉತ್ತಮವೆಂದು ತಿಳಿದು ನೀವು ಅವಾಗಲೂ ಪ್ರಯಾಣ ಮಾಡುತ್ತಲೇ ಇರುವಿರೆಂದು ತೋರುತ್ತಲಿದೆ ಎಂದನು.

ಸ್ವಾಮೀ, ಒಂದಾನೊಂದು ಕಾಲದಲ್ಲಿ ಕೆಲವು ಹರಕೆಗಳನ್ನು ಮಾಡಿಕೊಂಡಿದ್ದೆನು ; ಆಗ ಅವುಗಳು ನೆರವೇರುವೆಂಬ ನಂಬುಗೆಯು ನನಗಿರಲಿಲ್ಲ. ಅವುಗಳನು ಹೇಗಾದರೂ ನೆರವೇರಿಸಬೇಕೆಂಬ ಅಭಿಲಾಷೆಯಿಂದ ಅನೇಕದೇಶಗಳನ್ನು ಸುತ್ತಿ ಅನೇಕವಿದ್ಯೆಗಳನ್ನು ಕಲಿತು ದೈವಾನುಗ್ರಹದಿಂದ ಆ ಹರಕೆಗಳಲ್ಲಿ ಕೆಲವನ್ನು ಸಲ್ಲಿಸಿದೆನು ; ಮಿಕ್ಕುವುಗಳನ್ನು ಸಕಾಲದಲ್ಲಿ ಸಲ್ಲಿಸುವೆನು ಎಂದನು.

ಆ ಮಾತುಗಳನ್ನಾಡುವ ಸೈಂಧವನ ಕಣ್ಣುಗಳು ಕೆಂಡದಂತಾಗಿ ಬೆಂಕಿಯನ್ನುಗಿಯುವುದನ್ನು ವೀರಸಿಂಹನು ಕಂಡು ಸ್ವಾಮೀ, ನೀವು ವಿಶೇಷಕಷ್ಟಪಟ್ಟಿರುವಂತೆ ತೋರುತ್ತಲಿದೆಯೆಂದನು. ಅದಕ್ಕೆ ಸೈಂಧವನು ಸ್ವಲ್ಪ ಬೆಚ್ಚಿ, ವೀರಸಿಂಹನನ್ನು ಅನುಮಾನದಿಂದ ನೋಡಿ ನೀವು ಹೀಗೆ ಊಹಿಸಲು ಕಾರಣವೇನು ಎಂದು ಕೇಳಿದನು.

ನಿಮ್ಮ ಆಕಾರ ಇಂಗಿತ ಭಾಷೆಗಳನ್ನು ನೋಡಿ ನನಗೆ ಹಾಗೆ ತೋರಿತು.

ಅಯ್ಯಾ ಅಲ್ಲಿಬಾಬರೆ, ಕೇಳಿರಿ. ನನ್ನಂಥ ಸುಖವುರುಷನು ಈ ಲೋಕದಲ್ಲಿಯೇ ಇಲ್ಲ. ನನಗೂ ಪಕ್ಷಿಗಳಂತೆ ರೆಕ್ಕೆಗಳಿರುವುದರಿಂದ ಅವುಗಳಂತೆಯೇ ಸ್ವೇಚ್ಛೆಯಾಗಿ ಸಂಚಾರಮಾಡುತ್ತಲಿರುವೆನು. ನನ ಪದವಿಯ ಮುಂದೆ ರಾಜರ ಪದವಿಗಳು

ಏನು? ಅವರಿಗೆ ತನ್ನ ತನ್ನ ರಾಜ್ಯಗಳಲ್ಲಿ ನಡೆಯುವ ಮರ್ಯಾದೆಯೂ ಸುಖವೂ ಮತ್ತೊಂದು ಕಡೆ ದೊರೆಯಲಾರದು; ಸೇವಕರು ಅವರ ಉಪ್ಪನ್ನು ತಿನ್ನುತ್ತಲಿದ್ದರೂ ಅವರಿಗೇ ಎರಡನ್ನು ಒಗೆಯುವರು; ಅವರ ರಾಜ್ಯದ ಎಲ್ಲೆಯೇ ಅವರ ಐಶ್ವರ್ಯದ ಎಲ್ಲೆ; ಅವರ ಕಟ್ಟಳೆಗಳನ್ನು ಮೀರುವವರು ಅನ್ಯದೇಶದಲ್ಲಿದ್ದರೆ ಅವರನ್ನು ಅವರು ಶಿಕ್ಷಿಸಲಾರರು. ನಾನೋ! ಈ ಭೂಲೋಕದಲ್ಲಿ ಎಲ್ಲಿದ್ದರೂ ನನ್ನ ಸೇವಕರು ನನ ಮನೋಭೀಷ್ಟಗಳನ್ನು ಕ್ಷಣಮಾತ್ರದಲ್ಲಿ ವಂಚನೆಯಿಲ್ಲದೆ ನಡೆಯಿಸುವರು; ನನ್ನ ಐಶ್ವರ್ಯಕ್ಕೆ ಪಾರವೇ ಇಲ್ಲ; ನನ್ನ ಮರ್ಯಾದೆಯೂ ಸುಖವೂ ನಾನು ಎಲ್ಲಿ ಹೋದರೂ ಒಂದೇ ರೀತಿಯಾಗಿ ನಡೆಯುವುದು; ನನ್ನ ಶಾಸನವನ್ನು ಮೀರಿ ನಡೆಯುವವರನ್ನು ಎಲ್ಲಿದ್ದರೂ ಇತರರಿಗೆ ಲೇಶವೂ ತಿಳಿಯದಂತೆ ನನ್ನಿಂದ ನಿಯತವಾದ ಶಿಕ್ಷೆಗಳಿಂದ ಶಿಕ್ಷಿಸುವೆನು. ಹಾ! ನನ್ನ ಐಶ್ವರ್ಯವೂ, ಶಕ್ತಿಯೂ, ಅನುಭವವೂ ನಿಮಗಿದ್ದಿದ್ದರೆ ನೀವೂ ನನ್ನಂತೆಯೇ ಇರಲು ಅಪೇಕ್ಷಿಸುತ್ತಲಿರುವಿರಲ್ಲದೆ, ಉದ್ದೇಶವಿಲ್ಲದೆ ಒಂದು ನಿಮಿಷವಾದರೂ ಜನಗಳ ಮಧ್ಯೆ ಇರಲಾರಿರಿ.

ನಿಮ್ಮ ಉದ್ದೇಶವೇನು, ಪ್ರತೀಕಾರವೋ, ಎಂದು ವೀರಸಿಂಹನು ಕೇಳಲು ಸೈಂಧವನು ಅವನ ಹೃದಯವನ್ನು ಭೇದಿಸುವಂತೆ ತೀವ್ರದೃಷ್ಟಿಯಿಂದ ನೋಡಿ, ಅದೇನು ಹಾಗೆನ್ನುವಿರಿ ಎಂದು ಕೇಳಿದನು.

ಸ್ವಾಮೀ, ನಿಮ್ಮನ್ನು ನೋಡಿ ನೀವು ಆಡುವ ಮಾತುಗಳನ್ನು ಕೇಳಿದರೆ ಜನಗಳಿಂದ ಬಲು ಹಿಂಸೆಪಟ್ಟು ಹಗೆತೀರಿಸಿಕೊಳ್ಳುವ ಪ್ರತಿಜ್ಞೆಯನ್ನು ಮಾಡಿರುವರಂತೆ ತೋರುತ್ತಲಿದೆ.

ವೀರಸಿಂಹನು ಹೀಗೆನ್ನಲೆ ಸೈಂಧವನು ನಸುನಕ್ಕು, ಸ್ವಾಮೀ! ನಿಮ್ಮ ಊಹೆಯು ತಪ್ಪು. ಈ ಲೋಕದಲ್ಲಿ ಸುಖದುಃಖಗಳನ್ನು ಸಮವಾಗಿ ಭಾವಿಸಿರುವ ನಾನು ಒಬ್ಬ ತತ್ವಜ್ಞಾನಿ. ಒಂದಾನೊಂದು ದಿನ ಅಮರಪುರದಲ್ಲಿರುವ ತತ್ವಜ್ಞಾನಿಗಳಲ್ಲಿ ಅಗ್ರೇಸರನೆನಿಸಿಕೊಂಡು ನ್ಯಾಯಧುರಂಧರನಾಗಿರುವ ವಲ್ಲಭದೇವನನ್ನು ವಾದದಲ್ಲಿ ಜಯಿಸುವೇಕೆಂಬ ಆಸೆಯಿದೆ.

ತಾವು ಅಮರಪುರಕ್ಕೆ ಹೋಗುವುದು ಇದೇ ಮೊದಲನೇ ಸಾರಿಯೋ?

ಇದಕ್ಕೆ ಮೊದಲೇ ನಾನಲ್ಲಿಗೆ ಹೋಗಬೇಕಾಗಿದ್ದಿತು; ಆದರೆ ಅದಕ್ಕೆ ಏರ್ಪಾಡುಗಳಾಗಿರಲಿಲ್ಲ.

ತಾವು ಜಾಗ್ರತೆಯಾಗಿ ಅಲ್ಲಿಗೆ ಹೊರಡುವಿರೋ?

ಅದನ್ನು ಹೇಳಲಾರೆ. ನಾನಲ್ಲಿಗೆ ಹೋಗುವುದಕ್ಕೆ ಕೆಲವು ಏರ್ಪಾಡುಗಳನ್ನು ಮಾಡಿಕೊಳ್ಳಬೇಕು; ಅವುಗಳು ಜಾಗ್ರತೆಯಾಗಿ ಮುಗಿದರೆ ಪ್ರಯಾಣವು ಜಾಗ್ರತೆಯಾಗಿ ಆಗುವುದು.

ನೀವು ಯಾವಾಗ ಅಲ್ಲಿಗೆ ಹೋದರೂ ಸರಿಯೆ, ಆವಾಗ ನಾನಲ್ಲಿದ್ದು ನಿಮಗೆ ಯೋಗ್ಯವಾದ ಆತಿಥ್ಯವನ್ನು ಮಾಡಬೇಕೆಂಬ ಕುತೂಹಲವಿದೆ.

ನಾನು ಅಮರಪುರಕ್ಕೆ ಹೋದರೆ ಅಜ್ಞಾತನಾಮನಾಗಿಯೇ ಹೋಗುವೆನು, ಆದುದರಿಂದ ನಿನ್ನ ಆತಿಥ್ಯವನ್ನು ಸ್ವೀಕರಿಸುವ ವ್ಯಾಪ್ತಿ ನನಗಿರಲಾರದು.

ಇಷ್ಟು ಹೊತ್ತಿಗೆ ಭೋಜನವು ಮುಗಿಯಿತು. ಕೈಗಳನ್ನು ತೊಳೆದು ಕುರ್ಚಿಗಳಲ್ಲಿ ಕುಳಿತಾಗ ಮೂಲೆಯ ಪ್ರತಿಮೆಗಳ ಕಯ್ಯಲ್ಲಿದ್ದ ಹಣ್ಣಿನ ತಟ್ಟೆಗಳನ್ನು ವಾಮನ ಭಟ್ಟನು ಮೇಜಿನ ಮೇಲೆ ತಂದಿಟ್ಟು, ಅವುಗಳ ಮಧ್ಯೆ ಮುಚ್ಚಿದ್ದ ಒಂದು ಬಂಗಾರದ ಬಟ್ಟಲನ್ನು ಇಟ್ಟನು. ಅದರಲ್ಲಿ ಏನಿರಬಹುದೆಂದು ವೀರಸಿಂಹನು ಮುಚ್ಚಳವನ್ನು ತೆಗೆದು ನೋಡಲು, ಒಂದು ಬಗೆಯ ಹಸರು ಪುಡಿ ಇದ್ದಿತು. ಅದು ಇಂತಹುದೆಂಬುದನ್ನು ತಿಳಿಯಲಾರದೆ ಬಟ್ಟಲನ್ನು ಪುನಃ ಮುಚ್ಚಿಟ್ಟನು.

ಇದನ್ನು ನೋಡುತ್ತಲಿದ್ದ ಸೈಂಧವನು ಅದರಲ್ಲಿರುವುದು ಇಂತಹುದೆಂಬುದನ್ನು ನೀವು ಊಹಿಸಲಾರಿರಿ. ಅದು ದೇವಲೋಕದ ಅಮೃತಕ್ಕೆ ಸಮಾನವಾದುದು. ನಾವು ಅವುದಾದರೂ ಒಂದು ವಿಷಯವನ್ನು ಯೋಚಿಸಿಕೊಂಡು ಈ ಪುಡಿಯಲ್ಲಿ ಒಂದು ಚಿಟಕಿಯನ್ನು ಬಾಯಲ್ಲಿ ಹಾಕಿಕೊಂಡು ನುಂಗಿದರೆ ನನ್ನ ಅಭೀಷ್ಟವು ನೆರವೇರಿದಂತೆ ನಮಗೆ ತೋರುವುದು ಎಂದನು.

ದೇವಲೋಕದಿಂದ ಇಲ್ಲಿಗೆ ಬಂದಾಗಲೇ ಅದರ ಮಾಹಾತ್ಮ್ಯವು ಹೋಗುವುದಲ್ಲವೇ?

ನಿಮ್ಮ ಪ್ರಕೃತಿಸಂಬಂಧದ ಪ್ರಾಬಲ್ಯದಿಂದ ನೀವು ಹೀಗೆ ಹೇಳುತ್ತೀರಿ. ನಾವು ಎಷ್ಟೋ ಜನ್ಮ ಸುಖದ ಹಕ್ಕಿದಲ್ಲೇ ಓಡಾಡುತ್ತಲಿದ್ದರೂ ಅದು ಸುಖವೆಂಬ ಜ್ಞಾನ

ವಿಲ್ಲದೆಯೇ ಇರುವೆವು. ನಿಮಗೆ ಧನವೇ ದೈವವಾಗಿದ್ದರೆ ಇದರಲ್ಲಿ ಸ್ವಲ್ಪ ಸೇವನೆ ಮಾಡಿದರೆ ಭೂಗತಗಳಾಗಿರುವ ಬಂಗಾರ ಮತ್ತು ರತ್ನಗಳ ಖನಿಗಳು ಬಾಯ್ದೆರೆದು ಮುಂದೆ ನಿಲ್ಲುವವು ; ಕಲ್ಪನಾಶಕ್ತಿಯಲ್ಲಿ ಅಪೇಕ್ಷೆಯಿದ್ದರೆ, ನಭೋಮಂಡಲವು ಮುಂದೆ ಬಂದು ನಿಂತು ನಿಮ್ಮ ಕವಿತಾಶಕ್ತಿಯ ಸ್ವೇಚ್ಛಾವಿಹಾರಕ್ಕೆ ಅನುಕೂಲಪಡಿಸಿಕೊಡುವುದು ; ನಿಮಗೆ ರಾಜ್ಯತೃಷ್ಣೆಯಿದ್ದರೆ, ಭೂಮಂಡಲದಲ್ಲಿ ಯಾವ ರಾಜರಿಗೂ ಇಲ್ಲದ ಏಕಚ ತ್ರಾಧಿಪತ್ಯವು ನಿಮ್ಮ ಕರಗತವಾಗುವಂತೆ ಮಾಡುವುದು. ಕಷ್ಟಸಾಧ್ಯವಲ್ಲದ ಈ ಸುಖಿಗಳನ್ನುಂಟುಮಾಡಿಕೊಡುವ ಈ ಅಮೃತವು ನಿಮ್ಮ ಮನಸ್ಸನ್ನು ಸೆಳೆಯುವುದಿಲ್ಲವೇ ? ಇದಕ್ಕಾಗಿ ನಾವು ಮಾಡಬೇಕಾದುದು ಇಷ್ಟೇ ಎಂದು ಸೈಂಧವನು ಒಂದು ಚಿಟಕಿ ಪುಡಿಯನ್ನು ತೆಗೆದು ಬಾಯಿಯಲ್ಲಿ ಹಾಕಿಕೊಂಡು, ತಲೆಯನ್ನು ಹಿಂದಕ್ಕೆ ಬಾಗಿಸಿ, ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು ಮೆಲ್ಲಗೆ ನುಂಗಿ ಅದರ ರಸಾನುಭವವನ್ನು ಮಾಡುತ್ತಿದ್ದನು.

ಹಾಗಾದರೆ ಇದರ ಹೆಸರೇನು ?

ಕಲ್ಪವಲ್ಲೀ ; ಒಂದಾನೊಂದು ಕಾಲದಲ್ಲಿ ಅವನೋ ಒಬ್ಬ ಮಹಾಪುರುಷನು ದೇವಲೋಕದ ಕಲ್ಪವೃಕ್ಷದ ಒಂದು ಕೊಂಬೆಯನ್ನು ತಂದು ಕುಲಪರ್ವತಗಳಲ್ಲಿ ಪರಮಪುಣ್ಯವಾದ ಹಿಮಪರ್ವತದಲ್ಲಿ ಒಂದು ಕಡೆ ನೆಟ್ಟನು. ಅದು ಈಗ ದೊಡ್ಡ ಮರವಾಗಿದೆ ; ಅದರ ಎಲೆಯ ಪುಡಿಯು ಕಲ್ಪವೃಕ್ಷದಂತೆ ಕೇಳಿದುದನ್ನು ಕೊಡದಿದ್ದರೂ ನಾನು ಈಗ ಹೇಳಿದ ಅನುಭವಗಳನ್ನುಂಟುಮಾಡುವುದು.

ಇದೇಯೋ ಕಲ್ಪವಲ್ಲೀಚೂರ್ಣ ; ಇದನ್ನು ನಾನು ಕೇಳಿದ್ದೆನು, ನೋಡಿರಲಿಲ್ಲ. ಇದರ ಗುಣವನ್ನು ಪರೀಕ್ಷಿಸಿ ನೋಡಬೇಕೆಂಬ ಅಭಿಲಾಷೆಯು ನನಗುಂಟಾಗಿದೆ ಎಂದು ಹೇಳಿ ವೀರಸಿಂಹನು ಆ ಚೂರ್ಣದಲ್ಲಿ ಒಂದು ಚಿಟಕಿಯನ್ನು ತೆಗೆದು ಬಾಯಿಯಲ್ಲಿ ಹಾಕಿಕೊಂಡನು. ಸುಮಾರು ಅರ್ಧ ಗಂಟೆಯಲ್ಲಿಯೇ ತನಗೆ ರಕ್ಕೆಗಳು ಹುಟ್ಟಿದಂತೆಯೂ ತಾನು ಈ ಭೂಮಂಡಲವನ್ನೆಲ್ಲಾ ಸುತ್ತಿಕೊಂಡು ಬರುವಂತೆಯೂ ಹೇಳಲಾರಂಭಿಸಿದನು. ಸೈಂಧವನು ಇದು ಚೂರ್ಣದ ಕೆಲಸವೆಂದು ತಿಳಿದು ಸ್ವಾಮೀ ಅಲ್ಲಿಜಾಬೇ, ತಾವು ಆಕಾಶಕ್ಕೆ ಹಾರಿ ಸಂಚರಿಸುತ್ತಲಿರುವಾಗ ಅಕಸ್ಮಾತ್ತಾಗಿ ಸೂರ್ಯನ ಸಮೀಪಕ್ಕೆ ಹೋಗಿ ರಕ್ಕೆಗಳು ಸುಟ್ಟು ಕೆಳಗೆ ಬೀಳುವ

ಸಂದರ್ಭವು ಬಂದರೆ, ನಿಮಗೆ ಆವ ಅಪಾಯವೂ ಇಲ್ಲದಿರುವಂತೆ ನೋಡಿಕೊಳ್ಳಲು ನಾನಿಲ್ಲಿರುವೆನು. ನೀವು ಧೈರ್ಯವಾಗಿ ಸಂಚಾರಮಾಡಬಹುದು ಎಂದು ಗಟ್ಟಿಯಾಗಿ ಹೇಳಿ, ವಾಮನಭಟ್ಟನನ್ನು ಕರೆದು ಏನನ್ನೋ ಹೇಳಲು ಅವನು ಹಾಗೆಯೇ ಆಗಲಿ ಎಂದು ಸಂಜ್ಞೆಯನ್ನು ಮಾಡಿ ಹೋದನು.

ಆಗ ರಾತ್ರೆ ಸುಮಾರು ಹನ್ನೆರಡು ಗಂಟೆಯಾಗಿರಬಹುದು. ವೀರಸಿಂಹನು ಅದುವರೆಗೆ ತನಗುಂಟಾಗಿದ್ದ ಆನಂದವನ್ನು ಆನನ್ವಿತವಾದ ಮಾತುಗಳಿಂದಲೂ ಮುಖ ಭಾವಗಳಿಂದಲೂ ತೋರಿಸುತ್ತಾಲಿದ್ದು, ತರುವಾಯ ಮೆಲ್ಲಗೆ ನಿದ್ರಾಭಿಭೂತನಾಗಿ ಮಲಗಿ, ಆ ದಿನದ ಪ್ರಯಾಣದ ಅಲಸಿಕೆಯೂ ಮಲಯದ್ವೀಪಕ್ಕೆ ಬಂದಬಳಿಕ ಉಂಟಾದ ಯೋಚನೆಗಳೂ ತೊಲಗಿ, ಶರೀರವು ಲಘುವಾಗಿ ಆಕಾಶಮಾರ್ಗವಾಗಿ ಸಂಚರಿಸುತ್ತ ಏಕಚ್ಛತ್ರಾಧಿಪತ್ಯವನ್ನು ಮಾಡುತ್ತ, ವಿಹಾರಾರ್ಥವಾಗಿ ಸಮುದ್ರದ ಮಧ್ಯೆ ಇರುವ ಒಂದು ದ್ವೀಪದಲ್ಲಿ ಅನೇಕ ಗಂಧರ್ವರು ನೃತ್ಯಗೀತಾದಿಗಳಿಂದ ಆನಂದ ಪಡುತ್ತ ಹೋಗುತ್ತಲಿರುವುದನ್ನು ಕಂಡು ಮಲಗಿರುವಂತೆ ಸ್ವಪ್ನವನ್ನು ಕಂಡನು.

ಇಪ್ಪತ್ತನಾಲ್ಕನೆಯ ಅಧ್ಯಾಯ

ಪ್ರಬೋಧನ

ಬೆಳಗಾಗಿ ವೀರಸಿಂಹನು ಕಣ್ಣು ಬಿಟ್ಟಿದ್ದರೂ ಸ್ವಪ್ನಾವಸ್ಥೆಯಲ್ಲಿಯೇ ಇರುವಂತಿದ್ದನು. ಆಸ್ಪದೋ ಒಂದು ನೆಲಮಾಳಿಗೆಯಲ್ಲಿರುವಂತೆಯೂ, ಅದರೊಳಗೆ ಸೂರ್ಯ ಕಿರಣವು ಒಂದು ಸಂದಿನಿಂದ ಕಷ್ಟಪಟ್ಟು ಪ್ರವೇಶಿಸುತ್ತಿರುವಂತೆಯೂ ತೋರಿತು. ನಿದ್ರೆಯು ತಿಳಿದು ಎಚ್ಚರವಾಗಿ ಹಾಸಿಗೆಯನ್ನು ಬಿಟ್ಟು ಎದ್ದು ನಿಂತಾಗ ಕತ್ತಲಾದ ಗುಹೆಯಲ್ಲಿ ತಾನಿರುವೆನೆಂದೂ ದೂರದಲ್ಲಿ ಬೆಳಕು ಬೀರುತ್ತಲಿರುವ ಕಿಂಡಿಯೇ ಆ ಗುಹೆಯ ಬಾಗಿಲೆಂದೂ ಗೊತ್ತುಮಾಡಿಕೊಂಡು, ಬೆಳಕಿನ ದಾರಿಯನ್ನೇ ಹಿಡಿದು ಹೊರಗೆ ಬಂದನು. ಆಗ ನಾವಿಕರೈವರೂ ದೋಣಿಯ ಸಮೀಪದಲ್ಲಿ ದಡದ ಮೇಲೆ ಕುಳಿತು ಹರಟುತ್ತಲಿದ್ದುದನ್ನು ನೋಡಿದನು. ರಾತ್ರೆಯೆಲ್ಲಾ ಗುಹೆಯಲ್ಲಿದ್ದು ಹೊರಗೆ ಬಂದು

ಬೆಳಗಿನ ತಂಗಾಳಿಯು ಸ್ಪರ್ಶವಾಗುತಲೆ ಅವನಿಗೆ ಬ್ರಹ್ಮಾನಂದವುಂಟಾಗಿ ಕೆಲವು ಹೊತ್ತು ಸ್ತಬ್ಧನಾಗಿ ನಿಂತನು.

ಆ ಮೇಲೆ ತಾನು ಈ ದ್ವೀಪಕ್ಕೆ ಬಂದುದೂ, ಸೈಂಧವನ ಸಂಗಡ ಮಾತನಾಡಿದುದೂ, ಇಂದ್ರಭವನದಂತಿದ್ದ ಗುಹೆಯಲ್ಲಿದ್ದುದೂ, ವಿಷ್ಟಭೋಜನವನ್ನು ಮಾಡಿದುದೂ, ಕಲ್ಪವಲ್ಲೀಚೂರ್ಣವನ್ನು ಸೇವಿಸಿದುದೂ, ಒಂದೊಂದಾಗಿ ನೆನಪಿಗೆ ಬಂದಿತು; ಆದರೂ ಅವೆಲ್ಲ ಸ್ವಪ್ನವೋ ನಿಜವೋ ಎಂಬ ಅನುಮಾನವು ಅವನಿಗೆ ಇನ್ನೂ ಇದ್ದಿತು. ಅವನು ಮೆಲ್ಲಮೆಲ್ಲಗೆ ನಾವಿಕರಿದ್ದೆಡೆಗೆ ಹೋದನು. ಗುಹನು ಎದ್ದು ಮಹಾಸ್ವಾಮೀ, ಯಜಮಾನರು ಅವಸರದ ಕೆಲಸವಾಗಿ ಹೊರಟುಹೋದರು. ಹೊರಡುವುದಕ್ಕೆ ಮುಂಚೆ ನಿಮ್ಮಪ್ಪಣೆಯನ್ನು ಪಡೆಯಬೇಕೆಂದಿದ್ದರು; ತಾವು ಇನ್ನೂ ನಿದ್ರೆಮಾಡುತ್ತಲಿದ್ದುದರಿಂದ ನಿಮ್ಮಲ್ಲಿ ಅರಿಕೆಮಾಡುವಂತೆ ನನಗೆ ಹೇಳಿ ಹೋದರು ಎಂದನು.

ಹಾಗಾದರೆ ಗುಹೆಯೂ, ಯಜಮಾನನೂ, ಅವನ ಜತೆಯಲ್ಲಿ ನಾನು ಊಟ ಮಾಡಿದುದೂ, ಎಲ್ಲವೂ ನಿಜವೋ ?

ಎಲ್ಲವೂ ನಿಜ. ಅಗೋ ನೋಡಿ ; ಅಲ್ಲಿ ಹೋಗುತ್ತಲಿರುವುದೇ ಅವರ ಹಡಗು; ತಮ್ಮಪ್ಪಣೆಯನ್ನು ಕೇಳುವ ಭಾವದಿಂದ ಕೈಸನ್ನೆಯನ್ನು ಅಲ್ಲಾಡಿಸುತ್ತ ನಿಂತಿರುವವರೇ ಯಜಮಾನರು, ಎಂದು ಗುಹನು ಸಮುದ್ರದಲ್ಲಿ ಹೋಗುತ್ತಲಿದ್ದ ಹಡಗನ್ನು ತೋರಿಸಿದನು. ಆಗ ವೀರಸಿಂಹನು ಹಡಗನ್ನೂ ಯಜಮಾನನನ್ನೂ ಕಂಡು ತನ್ನ ಕೈಯ ವಸ್ತ್ರವನ್ನು ಎತ್ತಿ ಅಲ್ಲಾಡಿಸುತ್ತ, ಹಡಗು ಕಣ್ಣಿಗೆ ಕಾಣುವ ವರೆಗೂ ನೋಡುತ್ತ ಅಲ್ಲಿಯೇ ನಿಂತಿದ್ದು, ಅನಂತರ ಗುಹನನ್ನು ಕರೆದು ಈಗ ದ್ವೀಪದಲ್ಲಿ ಆರಿರುವರು ಎನ್ನಲು ಮಹಾಸ್ವಾಮೀ, ಇಲ್ಲಿ ನಾವು ನಿನಾ ಮತ್ತಾರೂ ಇಲ್ಲ ಎಂದನು.

ಆ ಇಬ್ಬರು ಕಳ್ಳರೇನಾದರು ?

ಅವರು ಯಜಮಾನರ ಸಂಗಡ ಹೊರಟು ಹೋದರು.

ಯಜಮಾನನಿಗೆ ಅವರಿಂದೇನು ಕೆಲಸ ?

ಮಹಾಸ್ವಾಮೀ, ಯಜಮಾನನು ತನ್ನ ಸಂಗಡ ಅವರನ್ನು ಕರೆದುಕೊಂಡು ಹೋಗಿ ಅನುಕೂಲವಾದ ಕಡೆಯಲ್ಲಿ ಅವರನ್ನು ಬಿಟ್ಟು ತಾನು ಮುಂದೆ ಹೋಗುವನು.

ಈ ಯಜಮಾನನು ಹೀಗೆ ಮಾಡುತ್ತಲಿದ್ದರೆ ಅವುದಾದರೂ ಒಂದು ದಿನ ಸರ್ಕಾ ದವರ ಕೈಗೆ ಸಿಕ್ಕಿ ನರಳುವನು.

ಮಹಾನ್ಸ್ವಾಮೀ! ಅವನು ಸಾಮಾನ್ಯನಲ್ಲ; ಅವನೊಂದು ಪಕ್ಷಿ; ಅವನ ಹಡ ಗೊಂದು ಪಕ್ಷಿ. ಹಿಡಿಯಲು ಹೋದರೆ ಈ ಪಕ್ಷಿಗಳು ಕೈಗೆ ಸಿಕ್ಕವು. ಒಂದು ವೇಳೆ ಸಿಕ್ಕುವ ಸಂದರ್ಭವಾದರೂ ಅವನಿಗೆ ತಪ್ಪಿಸಿಕೊಳ್ಳಲು ನಾವಿರಾರು ಉಪಾಯಗಳು ಇರುವುವು. ಇದಲ್ಲದೆ ಈ ಪ್ರಾಂತ್ಯದ ದೇಶಗಳಲ್ಲಿಯೂ ಕಡಲಿನ ಮೇಲೂ ಇರುವ ರನೇಕರು ಅವನಿಗೆ ಅತ್ಯಂತ ಆಪ್ತರು; ಅವನನ್ನು ದೇವರಂತೆ ಭಾವಿಸಿ ಅವನಿಗಾಗಿ ಅವರು ತಮ್ಮ ಪ್ರಾಣವನ್ನಾದರೂ ಕೊಡುವರು.

ಹಾಗಾದರೆ ಈ ದ್ವೀಪದಲ್ಲಿ ನಾವು ಏನಾ ಮುತ್ತಾರೂ ಇಲ್ಲವೋ?

ಇಲ್ಲ. ಈಗ ನೀವು ಸ್ವೇಚ್ಛೆಯಾಗಿ ಬೇಟೆಯನ್ನಾಡಬಹುದು.

ಬೇಟೆಯು ಹಾಗಿರಲಿ; ಮೊದಲು ಒಂದು ದೀವಟಿಯನ್ನು ತರಿಸು.

ಸ್ವಾಮೀ! ನಿಮಗೆ ಈಗುಂಟಾಗಿರುವ ಭ್ರಮೆಯು ನಮಗೂ ಅನೇಕ ಸಾರಿ ಯುಂಟಾಗಿ ಎಷ್ಟೆಷ್ಟು ನೋಡಿದರೂ ಯಜಮಾನನ ಗುಹೆಯ ಬಾಗಿಲೇ ಸಿಕ್ಕಲಿಲ್ಲ.

ನಿಮಗೆ ಸಿಕ್ಕದೆ ಇರಬಹುದು, ನನಗೆ ಹಾಗಾಗದು. ಮೊದಲು ದೀವಟಿಗೆ ಯನ್ನು ತರಿಸು.

ಆಗ ಗುಹನು ದೋಣಿಯವರಲ್ಲಿ ಒಬ್ಬನನ್ನು ಕೂಗಿ ಒಂದು ಗೊರಮೀ ಕಡ್ಡಿ ಯನ್ನು ಹೊತ್ತಿಸಿ ತರಹೇಳಿದನು. ಕೂಡಲೆ ದೀವಟಿಗೆಯು ಬಂದಿತು. ಅದನ್ನು ತೆಗೆದುಸಿಕೊಂಡು ವೀರಸಿಂಹನು ತಾನು ಮಲಗಿದ್ದ ಗುಹೆಯನ್ನು ಹೊಕ್ಕು ಅದರ ಎಲ್ಲಾ ಭಾಗಗಳನ್ನೂ ಪರಿಶೋಧಿಸಿದನು; ಎಷ್ಟು ನೋಡಿದರೂ ಯಜಮಾನನ ಗುಹೆ ಯು ಗೊತ್ತಾಗಲಿಲ್ಲ. ಊಟದ ವೇಳೆಯಾಗುತಲೆ ಊಟವನ್ನು ಮಾಡಿಕೊಂಡು ಪುನಃ ನೋಡಿದನು; ಆದರೂ ಸಿಕ್ಕಲಿಲ್ಲ. ಇನ್ನು ನೋಡುವುದು ಪ್ರಯೋಜನವಿಲ್ಲವೆಂದು ಪ್ರಯಾಣಮಾಡಲು ಸಿದ್ಧನಾದನು. ಗುಹನು ಪುನಃ ಬೇಟೆಯಾಡುವುದಿಲ್ಲವೇ ಎನಲು ವೀರಸಿಂಹನು ಬೇಟೆಯಾಡಿದಂತೆ ಮಾಡಿ, ಅಯ್ಯಾ! ನಾನು ಇಂದ್ರಪ್ರಸ್ಥಕ್ಕೆ ಜಾಗ್ರತೆ ಯಾಗಿ ಹೋಗಬೇಕಾಗಿದೆ; ನನ್ನನ್ನು ಆ ಊರಿಗೆ ಸಮೀಪದಲ್ಲಿರುವ ಅವುದಾದರೂ ಒಂದು ರೇವಿನಲ್ಲಿ ಬಿಡು ಎಂದನು.

ಅವನು ಇಂದ್ರಪ್ರಸ್ಥಕ್ಕೆ ಸೇರಲು ಎರಡು ದಿವಸಗಳಾದುವು. ಸಿದ್ಧವಾಗಿದ್ದ ಬಿಡಾರಕ್ಕೆ ಹೋದ ಕೂಡಲೆ, ಪಶುಪತಿಯು ಇದಿರುಗೊಂಡು ಬಂದು ಯೋಗಕ್ಷೇಮವನ್ನು ವಿಚಾರಿಸುತ್ತಲಿರುವ ವೇಳೆಗೆ ಸರಿಯಾಗಿ ಉದಯಸಿಂಹನು ಒಂದು ಇಳಿದನು. ಇಬ್ಬರೂ ತಮಗಾಗಿ ಏರ್ಪಾಡಾಗಿದ್ದ ಜಿಡಾರವನ್ನು ನೋಡಿ ಈ ಸ್ಥಳವು ಸಾಲದು; ಇದರ ಜತೆಗೆ ಇನ್ನೊಂದು ದೊಡ್ಡಕೊಟ್ಟಡಿ ಇದ್ದರೆ ಕೊಡು ಎಂದು ಪಶುಪತಿಯನ್ನು ಕೇಳಲು, ಅವನು ಮಹಾಸ್ವಾಮೀ ! ಬೇರೆ ಆವ ಕೊಟ್ಟಡಿಯೂ ಇಲ್ಲ ; ತಾವು ಮೊದಲೇ ಬರೆದು ಏರ್ಪಾಡುಮಾಡಿಕೊಳ್ಳದಿದ್ದರೆ ಈ ಸ್ಥಳವೂ ಸಿಕ್ಕುತ್ತಿರಲಿಲ್ಲ ಎಂದನು.

ನಮ್ಮ ಕೊಟ್ಟಡಿಯ ಪಕ್ಕದ ದೊಡ್ಡ ಕೊಟ್ಟಡಿಯಲ್ಲಿ ಯಾರೂ ಇಲ್ಲ, ಅದನ್ನು ಏತಕ್ಕೆ ಕೊಡಬಾರದು ?

ಅದನ್ನು ಆವನೋ ಒಬ್ಬ ಅನ್ಯದೇಶದ ಶ್ರೀಮಂತನು ಬಾಡಿಗೆಯನ್ನು ಕೊಟ್ಟು ಇಟ್ಟುಕೊಂಡಿದ್ದಾನೆ.

ಆವನಾರು ? " ನನಗೆ ತಿಳಿಯದು. "

ಹಾಗಾದರೆ ನಮಗೆ ಸ್ಥಳಕ್ಕೇನಮಾಡುವುದು ?

ಮಹಾಸ್ವಾಮೀ, ನಾನೇನಮಾಡಲಿ.

ಆಗ ಉದಯಸಿಂಹನು ಪಶುಪತಿಯನ್ನು ಕುರಿತು ಸ್ಥಳವು ಹೇಗಾದರೂ ಇರಲಿ, ನನಗೆ ಬಲು ಹಸಿವಾಗಿದೆ, ಮೊದಲು ಊಟಕ್ಕೆ ಏರ್ಪಾಡಮಾಡು. ನಾಳೆ ಬೆಳಗಿನಿಂದ ಉತ್ಸವವು ಮುಗಿಯುವ ವರೆಗೂ ಒಂದು ಬಂಡಿಯನ್ನು ಗೊತ್ತುಮಾಡಿ ಕೊಡು ಎಂದನು.

ಮಹಾಸ್ವಾಮೀ, ಊಟವೇನೋ ಸಿದ್ಧವಾಗಿದೆ ; ಈ ಉತ್ಸವವು ಮುಗಿಯುವ ವರೆಗೆ ಬಂಡಿಯು ಸಿಕ್ಕಲಾರದು. ಮೊದಲೇ ತಿಳಿಸಿದ್ದರೆ ಅದಕ್ಕೂ ಏರ್ಪಾಡ ಮಾಡುತ್ತಲಿದ್ದೆ.

ಸ್ಥಳವನ್ನು ಅನುಕೂಲವಾಗಿ ಮಾಡಿದಂತೆಯೇ ಅಲ್ಲವೇ ?

ಸ್ಥಳವು ಅನುಕೂಲವಿಲ್ಲವೇ ?

ಆಗ ವೀರಸಿಂಹನು ಅವ್ವಾ ಪಶುಪತಿ, ಬಂಡಿಯು ಸಿಕ್ಕಲಾರದೆಂದರೆ ನಾನೊಪ್ಪಲಾರೆ ಎಂದು ಹೇಳಲು, ಪಶುಪತಿಯು ಸ್ವಾಮೀ ! ವಿಚಾರಿಸುತ್ತೇನೆ, ಮುಕ್ಕಾಲು ಪಾಲು

ಸಿಕ್ಕಲಾರದು, ಸಿಕ್ಕಿದರೆ ಸಿದ್ಧಪಡಿಸುವೆನು ಎಂದು ಹೇಳಿ ಹೊರಟು ಹೋದನು. ಪಶುಪತಿಯು ಹೋದ ಬಳಿಕ ವೀರಸಿಂಹನು ಉದಯಸಿಂಹನನ್ನು ನೋಡಿ ಬಂಡಿಯು ಇಲ್ಲದಿದ್ದರೆ ಬಲು ತೊಂದರೆಯಾಗುವುದು, ಏನಮಾಡೋಣ ಎನ್ನಲು, ಹೆಚ್ಚು ಹಣಕ್ಕೋಸುಗ ಅವನು ಹೀಗೆ ಹೇಳುವನು; ಅದನ್ನು ಕೊಟ್ಟರೆ ಎಲ್ಲವೂ ಸಿಕ್ಕುವುದು ಎಂದನು.

ಅನಂತರ ಇಬ್ಬರೂ ಭೋಜನವನ್ನು ತೀರಿಸಿಕೊಂಡು ಪಿಡಾರದಲ್ಲಿ ಮಲಗಿದರು. ಉದಯಸಿಂಹನಿಗೆ ಆದಿನ ರಾತ್ರಿಯೆಲ್ಲಾ ತಾನು ಆರು ಕುದುರೆಯ ಬಂಡಿಯಲ್ಲಿ ಕುಳಿತು ಊರೆಲ್ಲಾ ಸುತ್ತಿ ಉತ್ಸವದ ಸಂಭ್ರಮವನ್ನು ನೋಡಿ ಬೇಸತ್ತು ಮಲಗಿದಂತೆ ಸ್ವಪ್ನವಾಯಿತು.

ಮಾರನೇ ದಿನ ಬೆಳಿಗ್ಗೆ ವೀರಸಿಂಹನು ಮೊದಲು ಎದ್ದು ಪಶುಪತಿಯನ್ನು ಬರಹೇಳಿದನು. ಅವನು ಕೂಡಲೆ ಬಂದು ಮಹಾಸ್ವಾಮೀ! ನಾನು ಬಂಡಿಯು ಸಿಕ್ಕಲಾರದೆಂದು ನಿನ್ನೆ ಹೇಳಿದ್ದೆನಷ್ಟೆ; ರಾತ್ರಿ ವಿಚಾರಿಸಿದುದರಲ್ಲಿ ಉತ್ಸವದ ಕೊನೆಯ ಮೂರು ದಿನ ಆವ ಬಂಡಿಯೂ ಸಿಕ್ಕದು ಎಂದು ಗೊತ್ತಾಯಿತು ಎಂದನು.

ನನಗೆ ಮುಖ್ಯವಾಗಿ ಯಾವಾಗ ಬಂಡಿಯು ಬೇಕೋ ಆಗಲೆ ಇಲ್ಲದೆ ಹೋದರೆ ಏನು ಪ್ರಯೋಜನ ಎಂದು ವೀರಸಿಂಹನು ಹೇಳುತ್ತಿದ್ದಾಗ ಹೊರಗೆ ಹೋಗಿದ್ದ ಉದಯಸಿಂಹನು ಒಳಕ್ಕೆ ಬಂದು ಏನು, ಗಾಡಿ ಸಿಕ್ಕದೆನ್ನುತ್ತಾನೋ ಎಂದು ಕೇಳಲು ವೀರಸಿಂಹನು ಹೂ ಎಂದನು. ಆಗ ಪಶುಪತಿಯು ಮಹಾಸ್ವಾಮೀ! ಇಂದಿನಿಂದ ಭಾನುವಾರದ ವರೆಗೆ ಬೇಕಾದಷ್ಟು ಬಂಡಿಗಳು ಸಿಕ್ಕುವುವು ಎಂದನು. ಉದಯಸಿಂಹನು ಅದು ಸರಿ, ಹಾಗೆ ಹೇಳು. ಇಂದು ಗುರುವಾರ; ಭಾನುವಾರಕ್ಕೆ ಇನ್ನೂ ಮೂರು ದಿನಗಳಿರುವುವು; ಅಷ್ಟರಲ್ಲಿ ಏನೇನಾಗುವುದೋ ನೋಡೋಣ ಎಂದನು.

ಆಗುವುದೇನು? ಆ ವೇಳೆಗೆ ಇನ್ನೂ ಸುಮಾರು ಹತ್ತು ಹನ್ನೆರಡು ಸಾವಿರ ಜನಗಳು ಬಂದು ಸೇರುವರು, ಆಗ ಬಂಡಿ ಸಿಕ್ಕುವುದಕ್ಕೆ ಮತ್ತಷ್ಟು ಕಷ್ಟವಾಗುವುದು ಎಂದು ವೀರಸಿಂಹನೆಂದನು.

ಎಲೈ ಮಿತ್ರನೇ! ಮುಂದೆ ಆನನುಕೂಲಗಳು ಬರಬಹುದೆಂದು ಯೋಚಿಸಿಕೊಂಡು ವ್ಯಸನಪಡುವುದಕ್ಕಿಂತ ಈಗಿನ ಅನುಕೂಲಗಳನ್ನು ಉಪಯೋಗಿಸಿಕೊಂಡು

ಸುಖವಾಗಿರೋಣ. ನಾವು ಕುಳಿತುನೋಡಲು ಕಲ್ಯಾಣಿಯ ಚೌಕದಲ್ಲಿ ಒಂದು ಮಾಳಿಗೆಯಾದರೂ ಬಾಡಿಗೆಗೆ ಸಿಕ್ಕುವುದೋ ಇಲ್ಲವೋ ?

ಖಂಡಿತವಾಗಿಯೂ ಸಿಕ್ಕುವುದಿಲ್ಲ. ಅಲ್ಲಿ ಮಿಕ್ಕಿದ್ದುದೇ ಒಂದು ಮಾಳಿಗೆ; ಅದನ್ನು ನೆನ್ನೆಯ ದಿನ ಒಬ್ಬ ಅರಸುಮಗನು ನೂರು ವರಹಗಳಿಗೆ ಗೊತ್ತುಮಾಡಿಕೊಂಡನು ಎಂದು ಪಶುಪತಿಯು ಹೇಳಲು, ಏನು! ಒಂದು ದಿನ ಅಲ್ಲಿ ಕುಳಿತು ನೋಡುವುದಕ್ಕೆ ನೂರು ವರಹಗಳೇ ಎಂದು ಇಬ್ಬರೂ ಒಂದೇ ಸಾರಿ ಕೇಳಿದರು.

ಮಹಾಸ್ವಾಮೀ! ದೊರೆಮಕ್ಕಳಿಗೆ ಕಷ್ಟವಿಲ್ಲದೆ ಬೇಕಾದಷ್ಟು ಹಣ ಸಿಕ್ಕುವುದಾದುದರಿಂದ ಹಣವೆಂದರೆ ಅವರಿಗೆ ಲಕ್ಷ್ಯವಿಲ್ಲ.

ಆಗ ವೀರಸಿಂಹನು ಉದಯಸಿಂಹನನ್ನು ನೋಡಿ ಅಪ್ಪಾ ಉದಯಸಿಂಹ, ನಾನು ಹೇಳುವುದನ್ನು ಕೇಳು. ಇಲ್ಲಿ ಇದ್ದು ಅವಸ್ಥೆಪಡುವುದಕ್ಕಿಂತ ನಾವಿಬ್ಬರೂ ಕಾಶ್ಮೀರಕ್ಕೆ ಹೋಗಿ ಆ ನಾಡಿನ ರಚನೆಗಳನ್ನು ನೋಡಿ ಒರೋಣ; ಅಲ್ಲಿಯೂ ಒಂದು ಜಾತ್ರೆ ಈಗ ನಡೆಯುತ್ತಾ ಇರುವುದು ಎಂದನು.

ನಾನು ಇಲ್ಲಿಯ ಉತ್ಸವವನ್ನು ನೋಡಲು ಬಂದೆನಾದ ಕಾರಣ ಹೇಗಾದರೂ ಇದನ್ನು ನೋಡಿಯೇ ಹೋಗಬೇಕು. ಬಂಡಿಯು ಸಿಕ್ಕದಿದ್ದರೆ ಮರದ ಕಾಲನ್ನಾದರೂ ಕಟ್ಟಿಕೊಂಡು ನೋಡುವೆನು.

ಹಾಗಾದರೆ ಒಂದು ಕೆಲಸ ಮಾಡೋಣ. ಈ ಉತ್ಸವಕಾಲದಲ್ಲಿ ಇಲ್ಲಿಯ ಜನಗಳು ತಮ್ಮ ಗುರುತು ಸಿಕ್ಕದಂತೆ ವೇಷಗಳನ್ನು ಹಾಕಿಕೊಂಡು ಕುದುರೆಬಂಡಿಯಲ್ಲಿಯೋ ಎತ್ತಿನ ಬಂಡಿಯಲ್ಲಿಯೋ, ಅಥವಾ ಕಾಲ್ನಡೆಯಿಂದಲೋ ಇಷ್ಟಾನುಸಾರ ಸಂಚರಿಸುವರು; ನಾವೂ ಅದೇ ರೀತಿ ಮಾಡೋಣ.

ಇವರಿಬ್ಬರ ಮಾತನ್ನು ಕೇಳುತ್ತಲಿದ್ದ ಪಶುಪತಿಯು ನಿಮಗೆ ಬಂಡಿ ಬೇಡವೋ ಎಂದು ಕೇಳಿದನು. ಅವರು ಅಗತ್ಯ ಬೇಕು ತರಿಸೆನ್ನಲು, ಹತ್ತುನಿಮಿಷಗಳಲ್ಲಿಯೇ ಶಾಲೆಯ ಮುಂದೆ ಬಂಡಿಯೊಂದು ಬಂದು ನಿಂತಿತು. ಇಬ್ಬರೂ ಅದರಲ್ಲಿ ಕುಳಿತು ಊರಿನಲ್ಲಿ ಮುಖ್ಯವಾದ ಬೀದಿಗಳಲ್ಲಿ ಸುತ್ತಿಕೊಂಡು ಊಟದ ಹೊತ್ತಿಗೆ ಬಿಡಾರಕ್ಕೆ ಬಂದರು. ಊಟವಾಗುತಲೆ ಉದಯಸಿಂಹನು ಪುನಃ ಸುತ್ತುವುದಕ್ಕೆ ಹೊರಡಬೇಕೆಂದಿದ್ದಾಗ, ವೀರಸಿಂಹನು ಬೆಳಿಗ್ಗೆಯೆಲ್ಲಾ ಸುತ್ತಿ ಸುತ್ತಿ ಬೇಸತ್ತಿದ್ದೇನೆ; ಈಗ ಪುನಃ ಹೊರ

ಡಲು ನನ್ನಿಂದಾಗದು. ಈ ದಿನ ಪೌರ್ಣಮಿ; ರಾತ್ರಿ ಒಳ್ಳೆಯ ಬೆಳದಿಂಗಳು ಬರುವುದು. ಆಗ ಬೇಕಾದರೆ ಊರ ಹೊರಗಿರುವ ಚಕ್ರಭೀಮನ ಕೋಟೆಯನ್ನು ನೋಡಿಕೊಂಡು ಬರೋಣ ಎಂದನು.

ಹಾಗಾದರೆ ರಾತ್ರಿ ಊಟಮಾಡಿಕೊಂಡು ಎಂಟು ಗಂಟೆಗೆ ಹೊರಡೋಣ; ಆ ವೇಳೆಗೆ ಬರುವಂತೆ ಬಂಡಿಯವನಿಗೆ ಹೇಳು.

ಸುಮಾರು ಒಂದು ಗಂಟೆಯ ಸಮಯದಲ್ಲಿ ಪಶುಪತಿಯು ಬಳಗೆ ಬಂದು ಮಹಾ ಸ್ವಾಮೀ! ನೀವಿಬ್ಬರೂ ಚಕ್ರಭೀಮನ ಕೋಟೆಯನ್ನು ನೋಡುವುದಕ್ಕೆ ರಾತ್ರಿ ಎಂಟು ಗಂಟೆಗೆ ಊರ ಹೊರಗಿನ ದಾರಿಯಿಂದ ಹೋಗುವುದಾಗಿ ಬಂಡಿಯವನಿಂದ ಕೇಳಿದೆ. ಅದು ನಿಜವಾದರೆ ಅಷ್ಟು ಹೊತ್ತಿನಲ್ಲಿ ಆ ದಾರಿಯಲ್ಲಿ ಹೋಗುವುದು ಒಳ್ಳೆಯದಲ್ಲವೆಂದು ನಿಮಗೆ ತಿಳಿಸಲು ಬಂದೆನು ಎಂದನು.

ಏನು ಅಪಾಯ?

ಕಳ್ಳರ ಗುರು ಒಂಪನದೆಸೆಯಿಂದ.

ಅವನು ಏನ ಮಾಡುವನು?

ನೀವು ಇಲ್ಲಿಂದ ಹೋಗುವುದೇನೋ ನಿಶ್ಚಯ; ಅಲ್ಲಿಂದ ಹಿಂತಿರುಗಿ ಬರುವುದು ಅನುಮಾನ.

ಆ ಒಂಪನೆಂಬವನಾರು?

ನಿಮಗೆ ಅವನ ಸಮಾಚಾರವೇ ತಿಳಿಯುದೋ? "ತಿಳಿಯದು"

ಅವನು ಕಳ್ಳರಿಗೆಲ್ಲ ಯಜಮಾನ. ಅವನ ಮಾತೆಂದರೆ ಕಳ್ಳರಿಗೆಲ್ಲರಿಗೂ ವೇದವಾಕ್ಯ. ಅವನ ವಿಷಯದಲ್ಲಿ ನೀವು ಬಲು ಎಚ್ಚರಿಕೆಯಿಂದ ಇರಬೇಕು.

ಉದಯಸಿಂಹನು ವೀರಸಿಂಹನನ್ನು ನೋಡಿ ಇಗೋ ನೋಡು, ಒಂಪನು ನಮ್ಮನ್ನು ಹಿಡಿಯಬರುವನು; ನಾವು ಅವನನ್ನು ಹಿಡಿದು ಇಲ್ಲಿಯ ರಾಜನಿಗೆ ಒಪ್ಪಿಸಿದರೆ, ಪ್ರತ್ಯುಪಕಾರಕ್ಕಾಗಿ ಏನ ಮಾಡಲಿ ಎಂದು ಅವನು ನಮ್ಮನ್ನು ಕೇಳುವನು ಆಗ ನಮಗೆ ಬಂಡಿಯೊಂದು ಬೇಕೆಂದು ಕೇಳಿದರೆ ನಾವಿಲ್ಲಿರುವ ವರೆಗೆ ಅವನು ತನ್ನ ಆಯದಿಂದ ಬಂದನ್ನು ಕಳುಹಿಸುವನು ಎಂದನು.

ಮಹಾನ್ವಾಮೀ! ಈ ಕಳ್ಳನ ಸಮಾಚಾರ ನಿಮಿಗೆ ಇನ್ನೂ ಗೊತ್ತಿಲ್ಲ ಇವನ

ಕೈಕೆಳಗೆ ಸಾವಿರಾರು ಜನರಿರುವರು ; ಅವರು ಹಳ್ಳಕೊಳ್ಳಗಳಲ್ಲಿಯೂ ಬಂಡೆಗಳಲ್ಲಿಯೂ ಮರಗಳಲ್ಲಿಯೂ ಅಡಗಿಕೊಂಡು ಸಮಯ ಬಂದಾಗ ಬಂದು ಸೇರಿ ಸಿಕ್ಕಿದವರನ್ನು ತಮ್ಮ ಸಂಕೇತಸ್ಥಾನಕ್ಕೆ ಕೊಂಡು ಹೋಗಿ ಒಂದು ಕ್ಲಿಪ್ತಕಾಲದಲ್ಲಿ ಕೇಳಿದಷ್ಟು ಹಣವನ್ನು ತರಿಸಿಕೊಟ್ಟರೆ ಸರಿ; ಇಲ್ಲದಿದ್ದರೆ ನಿಮಿಷದಲ್ಲಿ ಪರಲೋಕಕ್ಕೆ ಸಾಗಿಸಿಬಿಡುವರು.

ಈ ಕಳ್ಳನು ಅಷ್ಟು ಬಲಿಷ್ಠನೋ? ಈ ದೇಶದ ರಾಜನಿಗೆ ಇವನನ್ನು ಹಿಡಿಯಲು ಆಗಲಿಲ್ಲವೋ?

ಇವನ ಚರಿತ್ರೆಯನ್ನು ಕೇಳಿದರೆ ನೀವು ಆಶ್ಚರ್ಯಪಡುವಿರಿ. ಇವನನ್ನು ಹಿಡಿದು ಕೊಡುವವರಿಗೆ ರಾಜನು ಲಕ್ಷ ವರಹಗಳನ್ನು ಕೊಡುತ್ತೇನೆಂದು ಸಾರಿ ಇರುವನು. ಹಣದ ಆಸೆಗೆ ಇವನನ್ನು ಹಿಡಿಯುಹೋದವರೆಲ್ಲಾ ಹಿಂದಿರುಗಲೇ ಇಲ್ಲ.

ಅವನ ಸಮಾಚಾರ ನಿನಗೆ ಹೇಗೆ ಗೊತ್ತು?

ಅವನನ್ನು ಹುಟ್ಟಿದಂದಿನಿಂದಲೂ ಬಲ್ಲೆನು.

ಹಾಗಾದರೆ ಅವನ ಕಥೆಯನ್ನು ಸಂಕ್ಷೇಪವಾಗಿ ಹೇಳು, ಕೇಳೋಣ.

ಅವನೊಬ್ಬ ಕುರುಬರ ಹುಡಗ, ಅವನ ಹೆಸರು ಲುಂಗಿ ಬಂಪ. ಅವನ ತಾಯಿ ತಂದೆಗಳು ಚಿಕ್ಕ ವಯಸ್ಸಿನಲ್ಲಿಯೇ ತೀರಿಹೋದರು; ಅವರ ಗುಗ್ಗುಲ ಮನೆಯು ಕುರುಬನು ಸಾಕುತ್ತಲಿದ್ದನು. ಆ ಕುರುಬನಿಗೆ ರೂಪವತಿಯಾದ ತಾರಕೆಯೆಂಬ ಮಗಳಿದ್ದಳು. ಬಂಪನೂ ತಾರಕೆಯೂ ಬಾಲ್ಯದಿಂದಲೂ ಜತೆಯಲ್ಲಿ ಆಡುತ್ತಲಿದ್ದು, ದೊಡ್ಡವರಾದ ಮೇಲೆ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು.

ಒಂದಾನೊಂದು ದಿನ ಬಂಪನೂ ತಾರಕೆಯೂ ವಿನೋದವಾಗಿ ಕಥೆಗಳನ್ನು ಹೇಳಿಕೊಂಡು ಕುರಿಗಳನ್ನು ಕಾಯುತ್ತಲಿದ್ದಾಗ, ಸಮೀಪದ ಕಾಡಿನಲ್ಲಿ ತುವಾಕಿಯ ಸದ್ದಾಯಿತು. ಅದೇನೆಂದು ಆ ಕಡೆ ತಿರುಗಿ ನೋಡಲು ಅವನೋ ಒಬ್ಬನು ಓಡಿ ಬಂದು ಅಪ್ಪಾ, ಸಿಪಾಯಿಗಳು ನನ್ನನ್ನು ಅಟ್ಟಿಸಿಕೊಂಡು ಬರುತ್ತಲಿದ್ದಾರೆ; ಅವರ ಕಣ್ಣಿಗೆ ಜೀಳದಂತೆ ತಪ್ಪಿಸಿಕೊಳ್ಳುವ ದಾರಿಯನ್ನು ಜಾಗ್ರತೆಯಾಗಿ ತೋರಿಸಿ ನನ್ನನ್ನು ಉದ್ಧಾರ ಮಾಡು ಎಂದು ಬೇಡಿಕೊಂಡನು. ಬಂಪನು ಸಮೀಪದಲ್ಲಿ ತನಗೆ ಗೊತ್ತಿದ್ದ ಗುಹೆಯು ಬಳಿಗೆ ಅವನನ್ನು ಕರೆದುಕೊಂಡು ಹೋಗಿ ಗುಹೆಯ ಬಾಯಿಗೆ ಮುಚ್ಚಿದ್ದ ಕಲ್ಲನ್ನು ತೆಗೆದು ಅವನನ್ನು ಒಳಗೆ ಕೂಡಿ ಕಲ್ಲನ್ನು ಮುಚ್ಚಿದನು. ಐದು ನಿಮಿಷಗಳೊಳ

ಗಾಗಿಯೇ ಆಯುಧಪಾಣಿಗಳಾದ ನಾಲ್ವರು ಸವಾರರು ಕಾಡಿನಿಂದ ಹೊರಗೆ ಬಂದು, ಓಡಿಹೋದ ಕಳ್ಳನನ್ನು ಕಾಣದೆ, ಸಮೀಪದಲ್ಲಿ ತಾರಕೆಯೂ ಒಂಪನೂ ಕುಳಿತಿದ್ದುದನ್ನು ನೋಡಿ ಅವರ ಬಳಿಗೆ ಕುದುರೆಗಳನ್ನು ಓಡಿಸಿಕೊಂಡು ಬಂದು ಕಳ್ಳನೆತ್ತಹೋದನೆಂದು ಪ್ರಶ್ನೆಮಾಡಿದರು.

ಅವ ಕಳ್ಳ? "ಈಗ ಕಾಡಿನಿಂದ ಓಡಿಬಂದವನು"

ಅರನ್ನೂ ನೋಡಲಿಲ್ಲವಲ್ಲಾ. ಅಯ್ಯೋ ಅದೃಷ್ಟವೇ! ಅವನು ಕಳ್ಳರ ಯಜಮಾನ; ಸರ್ಕಾರದವರು ಅವನನ್ನು ಹಿಡಿದುಕೊಟ್ಟವರಿಗೆ ಬಂದು ಲಕ್ಷವರಹಗಳನ್ನು ಕೊಡುವುದಾಗಿ ಸಾರಿದಾರೆ. ಅವನನ್ನು ನೀವು ತೋರಿಸಿಕೊಟ್ಟರೆ ಅದರಲ್ಲಿ ನಿಮಗರ್ಧ ಸಿಕ್ಕುವ್ರದು.

ಅಯ್ಯೋ! ನಮಗೆ ಅದೃಷ್ಟವಿಲ್ಲ ಎಂದು ಒಂಪನು ಹೇಳುತಲೆ ಸವಾರರು ಒಂದೊಂದು ದಿಕ್ಕನ್ನು ಹಿಡಿದು ಹೋದರು.

ಅವರತ್ತ ಹೋಗುತಲೆ ಇತ್ತ ಒಂಪನು ಗುಹೆಯ ಬಾಗಿಲನ್ನು ತೆರೆದು, ಸವಾರರು ಹೊರಟುಹೋದರು; ನಿನ್ನ ದಾರಿಯನ್ನು ಹಿಡಿದು ನೀನು ಹೋಗಬಹುದು ಎಂದನು. ನೀವು ಮಾಡಿದ ಉಪಕಾರವನ್ನು ಎಂದಿಗೂ ಮರೆಯಲಾರೆನು ಎಂದು ಹೇಳಿ ಆ ಕಳ್ಳನು ತನ್ನಲ್ಲಿದ್ದ ವರಹಗಳು ತುಂಬಿದ ಒಂದು ಚೀಲವನ್ನು ಒಂಪನಿಗೆ ಕೊಡಬಂದಾಗ ಅವನು ನಾನೇನೂ ಹಣದಾಸೆಗೆ ಮಾಡಲಿಲ್ಲ. ಒಲ್ಲೆ ಎಂದನು. ಸವಾರರು ಒಂಪನ ಸಂಗಡ ಮಾತನಾಡುತ್ತಲಿದ್ದಾಗ ತನ್ನನ್ನು ಎಲ್ಲಿ ಬಿಟ್ಟುಕೊಡುವನೋ ಎಂಬ ಭೀತಿಯಿಂದ ಆ ಕಳ್ಳನು ಕಲ್ಲಿನ ಸಂದಿಯಿಂದ ಇಣಿಕಿನೋಡುತ್ತಿದ್ದನು. ಆಗ ತಾರಕೆಯ ರೂಪಲಾವಣ್ಯ ಯೌವನಗಳನ್ನು ಕಂಡು ಅವನು ಮನಸೋತು ಅವಳನ್ನು ಹೇಗಾದರೂ ವಶಪಡಿಸಿಕೊಳ್ಳಬೇಕೆಂದು ಹೊಂಚುಹಾಕುತ್ತಲಿದ್ದನು. ಈ ಕಳ್ಳರ ಯಜಮಾನನು ಇಷ್ಟು ಅನ್ಯಾಯದ ಯೋಚನೆಯನ್ನು ಮಾಡಿಕೊಂಡಿದಾನೆಂಬುದು ಒಂಪನಿಗೆ ತಿಳಿಯದು.

ಹೀಗೆ ಕೆಲವು ತಿಂಗಳು ಕಳೆದ ಮೇಲೆ, ಅವೂರಿನಲ್ಲಿ ನರೇಂದ್ರನಾಥನೆಂಬ ಒಬ್ಬ ಶ್ರೀಮಂತನ ಮನೆಯಲ್ಲಿ ಒಂದು ಮದುವೆಯಾಯಿತು. ಅಲ್ಲಿ ವಧುವಿನ ಒಡವೆಗಳನ್ನೂ ಸೀರೆಯನ್ನೂ ನೋಡಿ, ಇವುಗಳನ್ನು ನನಗೆ ತಂದುಕೊಟ್ಟ ಹೊರತು ನಾನು ನಿಮ್ಮನು ವರಿಸಲೊಲ್ಲೆನೆಂದು ತಾರಕೆಯು ಒಂಪನಿಗೆ ಹೇಳಿದಳು. ಅವನು ಆ ರಾತ್ರೆ

ಶ್ರೀಮಂತ ನರೇಂದ್ರನಾಥನ ಮನೆಗೆ ಬೆಂಕಿಯನ್ನು ಇಕ್ಕಿ, ಮನೆಯು ಬೇಯುತ್ತಲಿರುವಾಗ ಒಳಗೆ ನುಗ್ಗಿ ಆಭರಣವಸ್ತ್ರಗಳನ್ನೆಲ್ಲಾ ಸಾಗಿಸಿಕೊಂಡು ಊರ ಹೊರಗಣ ಒಂದು ಗುಹೆಯಲ್ಲಿರಿಸಿದನು. ಬೆಳಗಾಗುತಲೇ ತಾರಕೆಯನ್ನು ಕರೆದುಕೊಂಡು ಹೋಗಿ ಆ ಆಭರಣಗಳನ್ನೂ ವಸ್ತ್ರಗಳನ್ನೂ ಅವಳಿಗೆ ಕೊಟ್ಟು ಇವುಗಳನ್ನು ತೊಟ್ಟುಕೊಂಡು ಬಾ ಎಂದು ಹೇಳಿದನು. ಅವಳು ಗುಹೆಯೊಳಗೆ ಹೋದಳು. ಇವನು ಗುಹೆಯ ಬಾಗಿಲಲ್ಲಿ ನಿಂತಿದ್ದನು.

ಆಗ ಅವನೋ ಒಬ್ಬನು ಕುದುರೆಯ ಸವಾರಿ ಮಾಡುತ್ತ ಆ ಮಾರ್ಗವಾಗಿ ಬಂದು ಬಂಪನನ್ನು ಕುರಿತು ಅಪ್ಪಾ! ಇಲ್ಲಿ ತ್ರಿಪಳಿಯೆಂಬುದೊಂದು ಊರಿದೆಯಂತೆ; ಅದಕ್ಕೆ ದಾರಿಯು ನನಗೆ ಗೊತ್ತಾಗಲಿಲ್ಲ; ದಯೆಮಾಡಿ ತೋರಿಸು ಎಂದನು. ಬಂಪನು ಕಂಬಳಿಯನ್ನು ಭುಜದ ಮೇಲೆ ಹಾಕಿಕೊಂಡು, ತಪಾಕಿಯನ್ನು ಕಯ್ಯಲ್ಲಿ ಹಿಡಿದು, ಅಷ್ಟುದೂರ ಹೋಗಿ, ಈ ದಾರಿಯಲ್ಲಿಯೇ ನೆಟ್ಟಗೆ ಹೋದರೆ ಊರನ್ನು ಸೇರಬಹುದು ಎಂದು ಹೇಳಿ ಹಿಂದಿರುಗಿದನು. ಆಗ ಪ್ರಯಾಣೀಕನು ತನ್ನ ಜೇಬಿನಿಂದ ಒಂದು ಹಿಡಿ ಚಿನ್ನದ ನಾಣ್ಯಗಳನ್ನು ತೆಗೆದು ಬಂಪನಿಗೆ ಕೊಡುವುದಕ್ಕೆ ಹೋದನು. ಅವನು ಮಹಾಸ್ವಾಮೀ, ನಾನು ಕೂಲಿಗೆ ಕೆಲಸಮಾಡುವವನಲ್ಲ; ಮಾಡಿದ ಉಪಕಾರಕ್ಕೆ ಬೆಲೆಯನ್ನು ತೆಗೆಯುವುದಿಲ್ಲ ಎಂದನು.

ಹಾಗಾದರೆ, ಈ ರತ್ನಖಚಿತವಾದ ಕಠಾರಿಯನ್ನು ನನ್ನ ಜ್ಞಾಪಕಾರ್ಥವಾಗಿ ಇಟ್ಟುಕೊಂಡಿರು ಎಂದು ತನ್ನ ನಡುವಿನಿಂದ ಅದನ್ನು ತೆಗೆದುಕೊಟ್ಟು, ನಿನಗೆ ಆವಾಗಲಾದರೂ ಏನಾದರೂ ತೊಂದರೆಯುಂಟಾದರೆ ನನಗೆ ಸ್ವಲ್ಪ ವರ್ತಮಾನವನ್ನು ಕೊಡು; ನನ್ನಿಂದ ಆಗುವ ಸಹಾಯ್ಯವನ್ನು ಮಾಡಿಕೊಡುವೆನು. ನಾವಿಕಸೈಂಧವ ಎಂದು ಹೇಳಿ ಕಳುಹಿಸಿದರೆ ಸಾಕು. ನಿನ್ನ ಹೆಸರೇನು?

ಲುಂಗಿ ಬಂಪ. ವೀರಸಿಂಹನು ಬೆರಗಾಗಿ ನಾವಿಕಸೈಂಧವನೇ ಎಂದುದಕ್ಕೆ ಪಶುಪತಿಯು ಆಹುದೆಂದನು. ಆ ಹೆಸರಿನಲ್ಲಿ ಏನು ಸ್ವಾರಸ್ಯವನ್ನು ಕಂಡು ಬೆರಗಾದೆ ಎಂದು ಉದಯಸಿಂಹನು ಕೇಳಲು ವೀರಸಿಂಹನು ಏನೂ ಇಲ್ಲ, ನಾನು ಚಿಕ್ಕವನಾಗಿದ್ದಾಗ ಅವನ ಕಥೆಗಳನ್ನು ಓದಿ ವಿನೋದದಿಂದ ಹೊತ್ತಕಳೆಯುತ್ತಲಿದ್ದೆನು, ಅದು ಈಗ ಜ್ಞಾಪಕಕ್ಕೆ ಬಂದಿತು ಎಂದು ಮಲಯದ್ವೀಪದಲ್ಲಿ ನಡೆದುದೆಲ್ಲವನ್ನೂ ನೆನಸಿಕೊಂಡನು.

ಮುಂದೆ ನಿನ್ನ ಕಥೆಯನ್ನು ಹೇಳು ಎಂದು ಇಬ್ಬರೂ ಹೇಳುತಲೆ ಪಶುಪತಿಯು ಹೀಗೆಂದು ಹೇಳತೊಡಗಿದನು:—ಒಂಪನು ಹಿಂದಿರುಗಿ ಸೈಂಧವನು ಕೊಟ್ಟ ಕಠಾರಿಯನ್ನು ನೋಡಿ ಆಶ್ಚರ್ಯಪಟ್ಟು ನಿಧಾನವಾಗಿ ಬರುತ್ತಲಿದ್ದಾಗ ಆರೋ ತನ್ನ ಹೆಸರನ್ನು ಹಿಡಿದು ಗಟ್ಟಿಯು ಕಡೆಯಿಂದ ಕೂಗಿದಂತಾಗಲು, ಒಂದೇ ಓಟದಲ್ಲಿ ಬಂದು ನೋಡಿದನು. ತಾರಕೆಯನ್ನು ಕಳ್ಳರ ಯಜಮಾನನಾಗಿದ್ದ ಕಕುಂಭನೆಂಬುವನು ಎತ್ತಿಕೊಂಡು ಸಮೀಪದಲ್ಲಿರುವ ಕಾಡಿಗೆ ಓಡಿಹೋಗುತ್ತಲಿದ್ದನು.

ಒಂಪನಿಗೂ ಕಕುಂಭನಿಗೂ ಮಧ್ಯೆ ಸುಮಾರು ಎರಡು ನೂರು ಗಜಗಳ ದೂರವಿದ್ದಿತು; ಅವನು ಕಾಡನ್ನು ಸೇರಿದರೆ ಹಿಡಿಯುವುದು ಅಸಾಧ್ಯ, ಮುಂಚೆಯೇ ಓಡಿಹೋಗಿ ಹಿಡಿಯುವುದಕ್ಕೆ ಆಗುವುದಿಲ್ಲ; ಏನಪಾಡುವುದು ಎಂದು ಯೋಚಿಸಿ, ಒಂಪನು ಇದ ಸ್ಥಳದಲ್ಲಿ ನಿಂತು ಗುರಿಹಿಡಿದು ತುಪಾಕಿಯನ್ನು ಹಾರಿಸಿದನು. ಆಗ ಕಕುಂಭನು ಆ ಪೆಟ್ಟಿನಿಂದ ತತ್ತರಿಸಿ, ಕಾಲುಗಳು ನಡುಗಿ ಕೆಳಗೆ ಬಿದ್ದನು. ತಾರಕೆಯು ತಟ್ಟನೆದ್ದು ಒಂಪನ ಕಡೆಗೆ ತಿರುಗಿ ಸುಮಾರು ಹತ್ತುಗಜಗಳ ದೂರ ಬಂದು ನೆಲದ ಮೇಲೆ ಬಿದ್ದಳು. ತುಪಾಕಿಯು ಪೆಟ್ಟು ಅವಳಿಗೂ ತಾಕಿತೋ ಎಂದು ಒಂಪನಿಗೆ ಗಾಬರಿಯಾಗಿ ಓಡಿಹೋಗಿ ಅವಳನ್ನು ಎತ್ತಿ ನೋಡಲು ಅವಳು ಸುರಕ್ಷಿತಳಾಗಿದ್ದಳು. ಕಕುಂಭನ ಸಮೀಪಕ್ಕೆ ಹೋಗಿ ನೋಡಲು, ಅವನು ಸತ್ತಿದ್ದನು.

ಒಂಪನು ಸ್ವಲ್ಪ ನಿಂತು ಆಲೋಚಿಸಿ, ಕಕುಂಭನ ಮೈಮೇಲಿದ್ದ ಒಟ್ಟೆಗಳನ್ನು ಬಿಚ್ಚಿ, ಹೆಣವನ್ನು ಸಮೀಪದಲ್ಲಿದ್ದ ಒಂದು ಹಳ್ಳಕ್ಕೆ ಎಳೆದು, ತಾರಕೆಯನ್ನು ಕರೆದುಕೊಂಡು ಗಟ್ಟಿಯನ್ನು ಸೇರಿದನು. ಒಂಪನು ವಸ್ತ್ರಾಭರಣಭೂಷಿತೆಯಾಗಿ ಕಳ್ಳರ ಕೈಯಿಂದ ಬದುಕಿ ಬಂದ ತಾರಕೆಯನ್ನು ನೋಡಿ ಸಂತೋಷದಿಂದ ನನ್ನನ್ನು ನೀನು ಮದುವೆಯಾಗುವೆಯೋ ಎಂದು ಕೇಳಲು, ಅವಳು ಲಜ್ಜೆಯಿಂದ ತಲೆಯನ್ನು ತಗ್ಗಿಸಿದಳು.

ಆ ಮೇಲೆ ಇಬ್ಬರೂ ಕಾಡಿನೊಳಗೆ ಹತ್ತಡಿಯಿಡಲು, ಅಲ್ಲಿ ತುಪಾಕಿಯನ್ನು ಇಟ್ಟುಕೊಂಡು ನಿಂತಿದ್ದ ಕಾವಲುಗಾರನು ಯಾರದು? ನಿಲ್ಲಿರಿ! ಎಂದು ತುಪಾಕಿಯನ್ನು ಎತ್ತಿ ಗುರಿಹಿಡಿದನು. "ಈ ಕಾಡಿನಲ್ಲಿ ಕುರಿಕಾಯುವ ಲುಂಗಿ ಒಂಪ"

ಇಲ್ಲಿಗೇಕೆ ಬಂದೆ? "ಈ ಕಾಡಿನ ಮಧ್ಯೆ ಬಂಕನೆಂಬ ಜ್ವಾಲಾಮುಖಿಯು ಬಳಿ ಇರುವ ನಿನ್ನ ಜತೆಗಾರರನ್ನು ನೋಡುವುದಕ್ಕೆ"

ಹಾಗಾದರೆ ನನ್ನ ಹಿಂದೆ ಬಾ; ಎಂದು ಕರೆದುಕೊಂಡು ಬಂಕಕ್ಕೆ ಹೋದನು. ಅಲ್ಲಿಗೆ ಹೋಗುತ್ತಲೆ ಸುಮಾರು ಮೂವತ್ತು ನಲವತ್ತು ಮಂದಿ ಕಳ್ಳರು ಸುತ್ತಿಕೊಂಡರು. ಆಗ ಆ ಕಾವಲುಗಾರನು ಒಂಪನನ್ನು ತೋರಿಸಿ ಇವನು ನಿಮ್ಮ ಸಂಗಡ ಮಾತನಾಡಬೇಕಂತೆ, ಎಂದನು. ಎಲ್ಲರೂ ನಿನಗೇನು ಬೇಕು, ಎಂದು ಕೇಳಿದುದಕ್ಕೆ ನನಗೆ ಕುರುಬನ ಕೆಲಸದಲ್ಲಿ ಬೇಸರ ಹುಟ್ಟಿದೆಯೆಂದು ಮುಗಿಸುವುದರೊಳಗಾಗಿಯೇ ಓಹೋ, ನಮ್ಮ ಗುಂಪನ್ನು ಸೇರ ಬಂದೆಯೋ? ಅಗತ್ಯವಾಗಿ ಆಗಬಹುದು ಎಂದರು. ಆಗ ಒಂಪನು ನಿಮ್ಮ ಯಜಮಾನನಾಗಿರಬೇಕೆಂದು ಬಂದಿರುವೆನು ಎಂದನು. ಹಾಗಾದರೆ ನಮ್ಮ ಯಜಮಾನನೇನಾಗಬೇಕು?

ಅವನನ್ನು ಈಗ ತಾನೆ ಕೊಂದು ಬಂದೆನು. ಇಗೋ ಅವನ ಉಡುಪು.

ಈ ಗುಂಪಿಗೆ ಯಜಮಾನನಾಗಿರಬೇಕಾಗಿದ್ದರೆ ಅವ್ವದಾದರೂ ಒಂದು ಸಾಹಸದ ಕೆಲಸವನ್ನು ಮಾಡಿರಬೇಕು; ಅಂಥಾ ಸಾಹಸದ ಕೆಲಸವನ್ನು ನೀನೇನ ಮಾಡಿದ್ದೀಯೇ ಎಂದು ಕೇಳಿದುದಕ್ಕೆ ಒಂಪನು ಶ್ರೀಮಂತನರೇಂದ್ರನಾಥನ ಮನೆಗೆ ಬೆಂಕಿಯನ್ನು ಹೊತ್ತಿಸಿ ನನ್ನ ಹೆಂಡತಿಗೆ ಈ ಉಡುಪುಗಳನ್ನೂ ಒಡವೆಗಳನ್ನೂ ತಂದು ಕೊಟ್ಟೆನು; ಸಿವಾಯಿಗಳು ಅಟ್ಟಿಸಿಕೊಂಡು ಬಂದಾಗ, ನಿಮ್ಮ ಯಜಮಾನನನ್ನು ಕಾಪಿಟ್ಟೆನು; ನಿಮ್ಮ ಯಜಮಾನನು ಇವಳನ್ನು ಎತ್ತಿಕೊಂಡು ಓಡುತ್ತಲಿದ್ದಾಗ ಅವನನ್ನು ಕೊಂದು ಬಿಡಿಸಿಕೊಂಡು ಬಂದೆನು ಎಂದನು.

ಹತ್ತು ನಿಮಿಷಗಳು ಇಲ್ಲಿಯೇ ಇರು; ನಾವು ಯೋಚಿಸಿ ಹೇಳುವೆವು, ಎಂದು ಹೇಳಿ ಕಳ್ಳರೆಲ್ಲಾ ಹತ್ತು ನಿಮಿಷಗಳು ಆಲೋಚನೆ ಮಾಡಿ ಬಂದು, ಲುಂಗಿಒಂಪನಿಗೆ ಕಾಣಿಕೆಗಳನ್ನು ಒಪ್ಪಿಸಿದರು. ಅಂದು ಮೊದಲು ಲುಂಗಿಒಂಪನೆಂದರೆ ಎಲ್ಲರಿಗೂ ಭಯ; ಅವನು ಇಲ್ಲದ ಸ್ಥಳವೇ ಇಲ್ಲ. ಹಣಗಾರರನ್ನು ಸುಲಿದು ಬಡವರಿಗೆ ಸಾಹಾಯ್ಯವನ್ನು ಮಾಡುವುದೇ ಅವನ ಮುಖ್ಯ ಉದ್ದೇಶ. ನಾನೊಂದಾವೃತ್ತಿ ಅವನ ಕೈಗೆ ಸಿಕ್ಕಿಬಿದ್ದಿದ್ದೆನು; ಅದೃಷ್ಟವಶಾತ್ ಅವನು ನನ್ನ ಗುರುತನ್ನು ಹಿಡಿದು, ನನಗೊಂದು ಬೆಲೆಯುಳ್ಳ ಗಡಿಯಾರವನ್ನು ಬಹುಮಾನವಾಗಿ ಕೊಟ್ಟು ಕಳುಹಿಸಿದನು. ಇದೇ ಆದು ಎಂದು ಜೇಬಿನಿಂದ ಗಡಿಯಾರವನ್ನು ತೆಗೆದು ತೋರಿಸಿದನು.

ಉದಯಸಿಂಹನಲ್ಲಿಯೂ ಅಂಥ ಗಡಿಯಾರವೊಂದಿದ್ದಿತು; ನನ್ನ ಗಡಿಯಾರಕ್ಕೆ

ಸಾವಿರ ವರಹಗಳ ಕೊಟ್ಟಿನು ಎಂದನು. ಆಗ ವೀರಸಿಂಹನು ಉದಯಸಿಂಹನನ್ನು ನೋಡಿ ಏನಪ್ಪಾ, ಇನ್ನೂ ನಿನಗೆ ಊರ ಹೊರಗಿನ ದಾರಿಯಲ್ಲಿ ಹೋಗಬೇಕೆಂಬ ಆಸೆಯಿರುವುದೋ ಎನ್ನಲು, ಅವನು ಇವೆಲ್ಲಾ ಸುಳ್ಳು ಕಥೆಗಳು ಎಂದನು.

ಉದಯಸಿಂಹನು ಪಶುಪತಿಯನ್ನು ನೋಡಿ ಒಂಪನು ಈಗಲೂ ತನ್ನ ವ್ಯಾಪಾರವನ್ನು ನಡೆಸುತ್ತಲಿದ್ದರೆ ಪೋಲೀಸಿನವರು ಏನಮಾಡುತ್ತಲಿರುವರು ಎಂದು ಕೇಳಿದುದಕ್ಕೆ, ಅವನಂತೆ ಜನಸಹಾಯವೂ ಧನಸಹಾಯವೂ ಇರುವವನನ್ನು ಯಾರು ತಾನೇ ಹಿಡಿಯುವರು ನೀವು ಊರ ಹೊರಗಿನ ದಾರಿಯಲ್ಲಿ ಹೋಗುವುದು ಅನುಚಿತವೆಂದು ನನಗೆ ತೋರುತ್ತದೆ. ಇದರ ಮೇಲೆ ನಿಮ್ಮ ಇಷ್ಟ ಎಂದು ಹೇಳಿ ಪಶುಪತಿಯು ಹೋದನು.

ಇಷ್ಟು ಹೊತ್ತಿಗೆ ಸಾಯಂಕಾಲವಾಯಿತು. ವೀರಸಿಂಹನೂ ಉದಯಸಿಂಹನೂ ಊಟವನ್ನು ತೀರಿಸಿಕೊಂಡು, ಬಂಡಿಯಲ್ಲಿ ಕುಳಿತು ಊರೊಳಗಣ ದಾರಿಯಲ್ಲಿ ಹೊರಟರು. ಉದಯಸಿಂಹನು ತನ್ನ ಸ್ನೇಹಿತನನ್ನು ನೋಡಿ ನೀನು ಧೈರ್ಯಶಾಲಿಯೆಂದಿದ್ದೆನು ಎಂದನು.

ವೀರಸಿಂಹನು ಆವ ಬದಲನ್ನೂ ಹೇಳದೆ ತಾನು ಮಲಯದ್ವೀಪದಲ್ಲಿ ನೋಡಿದ್ದ ನಾವಿಕಸೈಂಧವನೂ, ಈ ಕಳ್ಳರ ಯಜಮಾನ ಲಂಗಿ ಒಂಪನಿಗೆ ಸಿಕ್ಕಿದ್ದ ನಾವಿಕಸೈಂಧವನೂ, ಒಬ್ಬನೇ ಆಗಿರಬೇಕೆಂದು ಊಹಿಸಿಕೊಂಡನು. ಬಂಡಿಯು ಚಕ್ರಭೀಮನ ಕೋಟೆಯನ್ನು ಸೇರಿತು.

ಈ ಕೋಟೆಯು ಬಲು ವಿಚಿತ್ರವಾದುದು. ಇದರಲ್ಲಿ ತೊಡಕು ತೊಡಕಾದ ದಾರಿಗಳು ಅನೇಕವಿರುವುವು ; ಹೊಸಬರು ಈ ಕೋಟೆಯನ್ನು ಹೊಕ್ಕರೆ ಸುತ್ತಿ ಸುತ್ತಿ ಬೇಸತ್ತು ಹೊರಗೆ ಬರುವುದೇ ಪ್ರಯಾಸ.

ವೀರಸಿಂಹ ಉದಯಸಿಂಹರಿಬ್ಬರೂ ಬಂಡಿಯಿಂದ ಇಳಿದು ಕೋಟೆಯ ಬಾಗಿಲಿನಲ್ಲಿದ್ದ ದಾರಿತಿಳಿದವನೊಬ್ಬನನ್ನು ಗೊತ್ತುಮಾಡಿಕೊಂಡು ಒಳಗೆ ಹೋದರು. ಅಲ್ಲಿ ಸುಮಾರು ಒಂದು ಗಂಟೆಯ ಕಾಲ ಚಂದ್ರಿಕೆಯಲ್ಲಿ ದಾರಿಗಳ ಮಧ್ಯೆಮಧ್ಯೆ ಇದ್ದ ಮನೋಹರವಾದ ತಟಾಕಗಳನ್ನೂ, ವೃಕ್ಷಗಳನ್ನೂ, ಸುವಾಸನೆಯಾದ ಪುಷ್ಪಗಳಿಂದ ತುಂಬಿದ ಗಿಡುಗಳನ್ನೂ ನೋಡುತ್ತ ಸುತ್ತಾಡುತ್ತಲಿದ್ದು, ಹಿಂದಿರುಗಿ ಹೊರಟ

ಮುಕ್ಕಾಲು ದಾರಿಗೆ ಮೇಲೆ ಬಂದಾಗ ವೀರಸಿಂಹನಿಗೆ ಸೈಂಧವನ ಧ್ವನಿ ಕೇಳಿಸಿದಂತಾ ಯಿತು. ಆಗ ಅವನು ಉದಯಸಿಂಹನನ್ನು ಕುರಿತು ನನಗೆ ಮುಂದಣ ದಾರಿ ತಿಳಿಯುವುದು; ನಾನಿಲ್ಲಿ ಸ್ವಲ್ಪ ವಿಶ್ರಮಿಸಿಕೊಂಡು ಬರುವೆನು; ನೀನು ಹೋಗು ಎಂದು ಹೇಳಿ ತಾನು ಅಲ್ಲಿಯೇ ನಿಂತನು. ಆಗ ಈ ಮಾತುಗಳು ಅವನ ಕಿವಿಯಲ್ಲಿ ಬಿದ್ದುವು.

ದೇವದೂತನೆಂಬವನಾರು?

ಅವನು ಅರಮನೆಯ ಚಾಕರನು. ಅಲ್ಲಿ ನಡೆಯುವ ವರ್ತಮಾನವನ್ನು ನನಗೆ ತಿಳಿಸಲು ಅವನಿಗೆ ವರ್ಷಕ್ಕೆ ಅಷ್ಟು ಹಣವನ್ನು ಕೊಡುತ್ತಾ ಇರುವೆನು.

ನೀನು ಬುದ್ಧಿಮಂತ.

ಮಹಾಸ್ವಾಮೀ, ಅವ ವೇಳೆಯಲ್ಲಿ ಏನು ಬರುವುದೋ! ಈಗ ಪ್ರತಿರೋಧಿಯು ಸಿಕ್ಕಿಬಿದ್ದಿರುವಂತೆ ನಾನೆಂದು ಸಿಕ್ಕಿಬೀಳುವೆನೋ ಅಂಥಾ ಸಂದರ್ಭಗಳಲ್ಲಿ ಮುಂದಾಗಿ ವರ್ತಮಾನವು ತಿಳಿದಿದ್ದರೆ ಅನುಕೂಲವಲ್ಲವೇ?

ನೀನು ದೇವದೂತನನ್ನು ವಿಚಾರಿಸಿದುದರಲ್ಲಿ ನಿನಗೇನು ಗೊತ್ತಾಯಿತು?

ಸ್ವಾಮೀ! ನಾಡಿದ್ದು ಸರ್ಕಾರದವರು ಇಬ್ಬರು ಅಪರಾಧಿಗಳನ್ನು ಶೂಲಕ್ಕೆ ಏರಿಸುವರಂತೆ. ಇವರಲ್ಲಿ ಗುರುವನ್ನು ಕೊಂದ ಮಹಾಪಾಪಿಯಾದ ಸನ್ಯಾಸಿಯೊಬ್ಬ; ಮತ್ತೊಬ್ಬನೇ ನಮ್ಮ ಪ್ರತಿರೋಧಿ; ಇವನು ಕಳ್ಳರಿಗೆ ಅನ್ನ ಆರಿವೆಗಳನ್ನು ಒದಗಿಸಿ ಕೊಟ್ಟನೆಂದು ಇವನ ಮೇಲೆ ತಪ್ಪು ಆಪಾದನೆಯಾಗಿದೆಯಂತೆ. ಸನ್ಯಾಸಿಯ ಶಿರಸ್ಸನ್ನು ಛೇದಿಸುವರಂತೆ; ಪ್ರತಿರೋಧಿಯನ್ನು ಶೂಲಕ್ಕೆ ಏರಿಸುವರಂತೆ.

ಈಗ ನೀನು ಪ್ರತಿರೋಧಿಯನ್ನು ಬಿಡಿಸಿಕೊಳ್ಳಲು ಏನು ಏರ್ಪಾಡು ಮಾಡಿ ಕೊಂಡಿದ್ದೀಯೆ?

ನಮ್ಮ ಗುರುತು ಆರಿಗೂ ತಿಳಿಯದಂತೆ ವೇಷಗಳನ್ನು ಹಾಕಿಕೊಂಡು ಗುಂಪಿನಲ್ಲಿ ಸೇರಿ, ಪ್ರತಿರೋಧಿಯನ್ನು ಹನನಸ್ಥಳಕ್ಕೆ ಕರೆದುಕೊಂಡು ಬರುವಾಗ ಗಲಿಬಿಲಿಹತ್ತಿಸಿ, ಸರ್ಕಾರದವರು ಗಾಬರಿಬಿದ್ದಾಗ ಅವನನ್ನು ಬಿಡಿಸಿಕೊಂಡುಹೋಗಲು ಏರ್ಪಾಡು ಮಾಡಿಕೊಂಡಿದ್ದೇನೆ.

ಅದು ಪ್ರಯೋಜನವಿಲ್ಲ. ಈಗಲೇ ಸರ್ಕಾರದವರಿಗೂ ಈ ಊರಿನಲ್ಲಿರುವವರಿಗೂ ಈ ಊರಿನಲ್ಲಿರುವ ಶ್ರೀಮಂತರಿಗೂ ನಿನ್ನ ಮೇಲೆ ಕಣ್ಣಿದೆ; ನಿನ್ನ ಹಾವಳಿಯನ್ನು

ಹೇಗಾದರೂ ನಿಲ್ಲಿಸಬೇಕೆಂದು ಪ್ರಯತ್ನಪಡುತ್ತಲಿದ್ದಾಕೆ. ಹೀಗಿರುವಲ್ಲಿ ನೀನು ಒಳ ಟಾಟ ಮಾಡಿದರೆ ನಿನ್ನ ಮೇಲೆ ದ್ವೇಷವು ಇನ್ನೂ ಹೆಚ್ಚುವುದು. ಒರಟು ಬಲ ಕ್ಕಿಂತ ಹಣದ ಬಲವೇ ಮೇಲು; ಆದುದರಿಂದ ಈ ಕೆಲಸವನ್ನು ನನಗೆ ಬಿಡು, ನಾನು ನೋಡಿಕೊಳ್ಳುತ್ತೇನೆ.

ಮಹಾಸ್ವಾಮೀ! ನಾಡಿದ್ದು ಬೆಳಿಗ್ಗೆ ಅವನನ್ನು ಶೂಲಕ್ಕೆ ಏರಿಸುವುದಾಗಿ ಏರ್ಪಾಡಾಗಿದೆ; ನಾಳೆ ಒಂದೇ ದಿನ ನಿಮಗೆ ಅವಕಾಶವಿರುವುದು.

ಆದರೇನು? ಒಂದು ದಿವಸಕ್ಕೆ ಇಪ್ಪತ್ತು ನಾಲ್ಕು ಗಂಟೆಗಳಿಲ್ಲವೇ? ಗಂಟೆಗೆ ಅರ ವತ್ತು ನಿಮಿಷಗಳಿಲ್ಲವೇ? ನಿಮಿಷಕ್ಕೆ ಅರವತ್ತು ವಿನಿಮಿಷಗಳಿಲ್ಲವೇ? ಈ ಎಂಬತ್ತಾರು ನಾಣಿದರ ನಾನೂರು ವಿನಿಮಿಷಗಳಲ್ಲಿ ಅಪ ಕೆಲಸವನ್ನು ತಾನೇ ಮಾಡಕೂಡದು?

ನೀವು ಮಾಡಿದ ಪ್ರಯತ್ನವು ಸಫಲವಾಯಿತೆಂದು ನನಗೆ ಹೇಗೆ ತಿಳಿಯುವೀಕು?

ಕಲ್ಯಾಣಿ ಚೌಕದಲ್ಲಿ ನಾನೊಂದು ಮಾಳಿಗೆಯನ್ನು ಬಾಡಿಗೆಗೆ ತೆಗೆದುಕೊಂಡಿ ದೇನೆ; ಅದಕ್ಕೆ ಮೂರು ಕಿಟಕಿಗಳಿವೆ. ನನ್ನ ಪ್ರಯತ್ನವು ಸಾಗಿದರೆ ಅತ್ತಿತ್ತಲಿರುವ ಕಿಟಕಿಗಳಿಗೆ ಕೆಂಪು ಬಟ್ಟೆಯ ತೆರೆಯನ್ನು ಹಾಕಿ, ಮಧ್ಯದಕ್ಕೆ ಹಸರು ಬಣ್ಣದ ತೆರೆ ಯನ್ನು ಹಾಕುವೆನು; ಸಾಗದೆ ಇದ್ದರೆ ಮೂರಕ್ಕೂ ಕೆಂಪು ತೆರೆಯೇ ಇರುವುದು.

ಮಹಾಸ್ವಾಮಿಯವರಿಗೆ ಅಸಮಾಧಾನವಿಲ್ಲದಿದ್ದರೆ ನಾನು ಒಂದು ಕೆಲಸವನ್ನು ಮಾಡುತ್ತೇನೆ. ನಾನೂ ನನ್ನ ಮನುಷ್ಯರೂ ಸಿದ್ಧವಾಗಿ ಬರುವೆವು; ತಮ್ಮ ಏರ್ಪಾಡು ನಡೆದರೆ ಸರಿ, ಇಲ್ಲದಿದ್ದರೆ ನನ್ನ ಏರ್ಪಾಡನ್ನು ನಡೆಸುವೆನು.

ಅದರಿಂದ ಅಸಮಾಧಾನಕ್ಕೆ ಕಾರಣವೇನು? ಅದು ಅನವಶ್ಯಕವೆಂದು ನನಗೆ ತೋರುತ್ತದೆ; ನಿನಗೆ ತೃಪ್ತಿಯುಂಟಾಗುವುದಾದರೆ ಹಾಗೆಯೇ ಮಾಡು.

ಮಹಾಸ್ವಾಮೀ! ಪ್ರತಿಕೋಧಿಯನ್ನು ತಾವು ಬಿಡಿಸಿಕೊಟ್ಟರೆ ನನ್ನ ಜೀವವಿರುವ ವರೆಗೆ ನಾನೂ ನನ್ನ ಕಡೆಯವರೂ ತಮ್ಮ ಸೇವಕರಾಗಿರುವೆವು.

ಅಪ್ಪಾ? ಒಂದಾನೊಂದು ಕಾಲದಲ್ಲಿ ನಾನೂ ನಿನ್ನ ಸಾಹಾಯ್ಯವನ್ನು ಕೋರ ಬೇಕಾಗಿ ಬರುವುದು.

ಸ್ವಾಮೀ! ಅಂಥ ಕಾಲ ಒಂದಾಗ ತಮ್ಮ ಗುಲಾಮನಾದ ನನಗೆ ಒಂದು ಮಾತ ಹೇಳಿ ಕಳುಹಿಸಿದರೆ ನಾನೆಲ್ಲಿದ್ದರೂ ತಮ್ಮ ಆಪ್ಪಣೆಯನ್ನು ಶಿರಸಾವಹಿಸಿ ನಡೆದು

ಕೊಳ್ಳುವೆನು. ಅಷ್ಟೇ ಅಲ್ಲ. ತಮ್ಮ ಕಡೆಯವರಾರಾದರೂ ಸರಿಯೆ; ಅವರನ್ನೂ ತಮ್ಮಂತೆ ಭಾವಿಸುವೆನು.

ಈ ಮಾತುಗಳು ಇಲ್ಲಿಗೆ ನಿಂತು, ಮಾತನಾಡುತ್ತಲಿದ್ದವರಿಬ್ಬರೂ ಹೊರಟಂತೆ ತೋರಿತು. ವೀರಸಿಂಹನು ಸ್ವಲ್ಪ ಹೊತ್ತು ನೋಡಿ ಅವರು ಹೊರಟು ಹೋದರೆಂದು ದೃಢಪಡಿಸಿಕೊಂಡು, ಎದ್ದು ಹೊರಗೆ ಬಂದು ಬಂಡಿಯನ್ನು ಸೇರಿದನು. ಉದಯ ಸಿಂಹನು ಮೊದಲೇ ಬಂಡಿಯಲ್ಲಿ ಕುಳಿತಿದ್ದನಾದ ಕಾರಣ ಬಂಡಿಯು ಒಡನೆಯೇ ಜಿಡಾ ರಕ್ಕೆ ಹೊರಟಿತು. ವೀರಸಿಂಹನಿಗೆ ತಾನು ಮಲಯದ್ವೀಪದಲ್ಲಿ ನೋಡಿ ಮಾತನಾಡಿ ಸಿದ್ದ ನಾವಿಕ ಸೈಂಧವನೂ, ಲುಂಗಿ ಬಂಪನ ಕಥೆಯಲ್ಲಿ ಕೇಳಿದ್ದ ನಾವಿಕ ಸೈಂಧವನೂ, ಈಗ ಮಾತನಾಡುತ್ತಲಿದ್ದವರಲ್ಲಿ ಒಬ್ಬನು ಆ ಸೈಂಧವನೂ ಮತ್ತೊಬ್ಬನು ಲುಂಗಿ ಬಂಪ ನಾಗಿರಬೇಕೆಂದು ನಿರ್ಧರಮಾಡಿಕೊಂಡನು; ಆದರೆ ಬಂಪನಿಗೂ ಅವನಿಗೂ ಏನು ಸಂಬಂಧ; ಇಷ್ಟು ಸ್ನೇಹಕ್ಕೆ ಕಾರಣವೇನು ಎಂದು ಯೋಚಿಸುತ್ತಲಿದ್ದನು. ಉದಯ ಸಿಂಹನು ತಾನು ಚಕ್ರಭೀಮನ ಕೋಟೆಯಲ್ಲಿ ನೋಡಿದ ಅತಿಶಯಗಳನ್ನು ಅತ್ಯು ತ್ಸಾಹದಿಂದ ವರ್ಣಿಸುತ್ತಲಿದ್ದಾಗ ಇವನು ಯೋಚನಾಪರನಾಗಿದ್ದುದರಿಂದ ಅವನ ಮಾತುಗಳಿಗೆ ಗಮನವೇ ಕೊಡಲಿಲ್ಲ.

ಆ ರಾತ್ರಿ ಇಬ್ಬರೂ ಎಂದಿನಂತೆ ಮಲಗಿಕೊಂಡರು; ಆದರೆ ವೀರಸಿಂಹನಿಗೆ ಈ ಯೋಚನೆಯಿಂದ ಬಲು ಹೊತ್ತು ನಿದ್ರೆಯೇ ಹತ್ತಲಿಲ್ಲ. ಅವನು ಎಷ್ಟು ಪ್ರಯತ್ನ ಮಾಡಿದರೂ ಸೈಂಧವನ ವಿಚಾರವನ್ನು ಮರೆಯಲು ಆಗಲಿಲ್ಲ. ಬಲು ಹೊತ್ತು ಹಾಸಿಗೆಯಲ್ಲಿ ಒದ್ದಾಡಿ ಬಳಲಿ ಬೇಸತ್ತು ಬೆಳಗಿನ ಜಾವದಲ್ಲಿ ಸ್ವಲ್ಪ ನಿದ್ದೆಮಾಡಿದನು.

ಇಪ್ಪತ್ತೈದನೆಯ ಅಧ್ಯಾಯ

ಉತ್ಸವ

ಮಾರನೆಯ ದಿನ ಬೆಳಿಗ್ಗೆ ಎದ್ದು ಉದಯಸಿಂಹನು ರಾತ್ರೆ ನಾಟಕಕ್ಕೆ ಹೋಗ ಬೇಕೆಂದು ನಿಶ್ಚಯಿಸಿ, ಅಲ್ಲಿಗೆ ಬರುವ ಅಬಲೆಯರ ಮನಸ್ಸನ್ನು ಸೆಳೆಯಲೋಸುಗ ತಕ್ಕ ಉಡಿಗೆಗಳನ್ನು ಕೊಳ್ಳಲು ಅಂಗಡಿಗೆ ಹೋದನು. ವೀರಸಿಂಹನು ಊರಿಗೆ ಕಾಗದ ಗಳನ್ನು ಬರೆಯುವ ನೆವದಿಂದ ವಿಡಾರದಲ್ಲಿಯೇ ನಿಂತನು.

ಈ ಸ್ನೇಹಿತರಿಬ್ಬರಿಗೂ ವಯಸ್ಸಾಗಿದ್ದರೂ ಮದುವೆಯಾಗಿರಲಿಲ್ಲ. ವೀರಸಿಂಹನು ಕೂಡಿದ ಮಟ್ಟಿಗೆ ಜಿತೇಂದ್ರಿಯನಾಗಿದ್ದನು; ಉದಯಸಿಂಹನಿಗೆ ಹೆಂಗುಸರ ಚಾಪಲ್ಯ. ಆದರಿಂದಲೇ ಅವನು ದೇಶಾಟನವನ್ನು ಮಾಡಲು ಹೊರಟನು. ಇಂದ್ರ ಪ್ರಸ್ಥಕ್ಕೆ ಬಂದ ಮೇಲೆ ವೀರಸಿಂಹನೊಡನೆ ಈ ವಿಷಯವಾಗಿ ಪ್ರಸ್ತಾಪಮಾಡಿದಾಗ ಲೆಲ್ಲಾ, ಅವನು ಅಮರದೇಶದಲ್ಲಿರುವಷ್ಟು ವ್ಯಭಿಚಾರವು ಇಲ್ಲಿಲ್ಲವೆಂದೂ, ಒಂದು ವೇಳೆ ಇದ್ದರೂ ಅದರಲ್ಲಿಯೂ ಸ್ವಲ್ಪ ಸತ್ಯದಿಂದ ನಡೆಯುವರೆಂದೂ ಎಷ್ಟು ಹೇಳಿದರೂ ತನ್ನ ಚಾಪಲ್ಯ ತಪ್ಪಲಿಲ್ಲ. ತಾನು ಶ್ರೀಮಂತನೂ, ರೂಪವಂತನೂ ಆಗಿದ್ದುದರಿಂದ ತನ್ನ ರೂಪಯೌವನಾದಿಸಂಪತ್ತುಗಳನ್ನು ನೋಡಿದೊಡನೆಯೇ ದೊಡ್ಡವರ ಮನೆಯ ಸ್ತ್ರೀಯರು ಮೋಹಗೊಳ್ಳುವರು ಎಂದೂ, ಅಂತಹ ಹೆಂಗುಸರ ಸ್ನೇಹವಾದರೆ ಉತ್ಸವದ ಕೊನೆಯ ಮೂರು ದಿವಸಗಳು ತನಗೆ ಬಂಡಿಗೂ ಅನುಕೂಲವಾಗುವುದು ಎಂದೂ ಯೋಚಿಸಿ, ಇದರಿಂದಲೇ ಅವನು ಹೆಚ್ಚು ಹಣವನ್ನು ಕೊಟ್ಟು ನಾಟಕಶಾಲೆಯಲ್ಲಿ ಕುಟುಂಬಿಗಳಿಗಾಗಿ ಪ್ರತ್ಯೇಕವಾಗಿ ಮಾಡಿದ್ದ ಆಸನಗಳಲ್ಲಿ ಒಂದನ್ನು ಮಾಡಿ ಕೊಂಡನು.

ವೀರಸಿಂಹನಿಗೆ ಇಷ್ಟವಿಲ್ಲದಿದ್ದರೂ ಸ್ನೇಹಿತನ ದಾಕ್ಷಿಣ್ಯಕ್ಕಾಗಿ ನಾಟಕಕ್ಕೆ ಹೋಗಿ ಅವನ ಜತೆಯಲ್ಲಿ ಕುಳಿತನು. ನಾಟಕವು ಆರಂಭವಾದುದು ಮೊದಲು ಉದಯಸಿಂಹನು ಎಷ್ಟೆಷ್ಟು ನೋಡಿದರೂ ರೂಪವತಿಯಾದ ಹೆಂಗುಸರೊಬ್ಬರೂ ಇವನನ್ನು ಲಕ್ಷ್ಯಮಾಡಲಿಲ್ಲ. ಇವನೂ ನೋಡಿ ನೋಡಿ ಬೇಸತ್ತು 'ವೀರಸಿಂಹನನ್ನು ನೋಡಿ, ಇಲ್ಲಿಯ ಹೆಂಗುಸರಿಗೆ ಉತ್ಸಾಹವೇ ಇಲ್ಲ ಎಂದು ಹೇಳುತ್ತಲಿರುವಾಗ ಸುಮಾರು ಇಪ್ಪತ್ತೈದು ವಯಸ್ಸಿನ ತರುಣಿಯೊಬ್ಬಳು ಸುತ್ತಲೂ ನೋಡಿ, ವೀರಸಿಂಹನನ್ನು ಕಂಡು ನಸುನಗುತ್ತ ಕುಳಿತುಕೊಂಡಳು.

ಈ ಯುವತಿಯು ಒಬ್ಬ ಶ್ರೀಮಂತನನ್ನು ಕೈಹಿಡಿದಿದ್ದಳು; ಮದುವೆಯಾದ ವರ್ಷದೊಳಗಾಗಿಯೇ ಪತಿಯೋಗವಾದುದರಿಂದ ನಾಟಕ, ಸಂಗೀತಗೋಷ್ಠಿಗಳಿಗೆ ತಪ್ಪದೆ ಹೋಗಿ ಕಾಲಹರಣ ಮಾಡುತಲಿದ್ದಳು. ಕೆಲವರು ಸ್ತ್ರೀಯರು ಆಭರಣಗಳಿಂದ ಸೌಂದರ್ಯವು ಹೆಚ್ಚುವುದೆಂದು ತಿಳಿದುಕೊಂಡಿರುವರು; ಇವಳಾದರೋ ಆಭರಣವು

ತನ್ನ ಸೌಂದರ್ಯವನ್ನು ಮುಚ್ಚುವುದೆಂದು ತಿಳಿದುಕೊಂಡು ಹೆಚ್ಚಾಗಿ ಒಡವೆಗಳಾವು ವನ್ನೂ ತೊಟ್ಟಿರಲಿಲ್ಲ.

ವೀರಸಿಂಹನಿಗೆ ಇವಳ ಪರಿಚಯವು ಇದೆ ಎಂದು ತಿಳಿದು, ಉದಯಸಿಂಹನು ಅವನನ್ನು ನೋಡಿ ಅವಳನ್ನು ನೀನು ಬಲ್ಲೆಯೋ ಎಂದುದಕ್ಕೆ ಹೌದು, ಬಲ್ಲೆ ಎಂದನು.

ಅವಳ ಹೆಸರೇನು? "ಗಂಗಾಬಾಯಿ"

ಅವಳ ಪರಿಚಯವನ್ನು ನನಗೆ ಮಾಡಿಕೊಡು ಎಂದು ಉದಯಸಿಂಹನು ಕೇಳುವುದಕ್ಕೆ ಸರಿಯಾಗಿ, ಗಂಗಾಬಾಯಿಯು ವೀರಸಿಂಹನಿಗೆ ತನ್ನ ಹತ್ತಿರ ಬರುವಂತೆ ಸಂಜ್ಞೆ ಮಾಡಿದಳು; ಅದಕ್ಕೆ ಅವನು ಉದಯಸಿಂಹನನ್ನು ತೋರಿಸಿ ಇವನನ್ನೂ ಕರೆದುಕೊಂಡು ಬರಲೋ ಎಂದು ಕೇಳಿದುದಕ್ಕೆ ಅವಳು ಆಗಬಹುದೆಂದಳು.

ಇದೆಲ್ಲವನ್ನೂ ನೋಡುತ್ತಲಿದ್ದ ಉದಯಸಿಂಹನು ಅಪ್ಪಾ, ವೀರ! ನಿನಗೂ ಅವಳಿಗೂ ವಿಶೇಷ ಪರಿಚಯವಿರುವಂತೆ ಇದೆ ಎನ್ನಲು, ಅವನು ಅಂತಹುದು ಅವ್ವದೂ ಇಲ್ಲ; ನಮ್ಮ ಹೆಂಗುಸರಂತೆ ಇಲ್ಲಿಯವರು ಅಲ್ಲವೆಂದು ಎಷ್ಟು ಸಾರಿ ಹೇಳಲಿ? ಇವರು ಸ್ವಲ್ಪ ಪರಿಚಯವಿದ್ದರೂ ಧಾರಾಳವಾಗಿ ಮಾತುಕತೆಗಳನ್ನಾಡುವರಲ್ಲದೆ ಮತ್ತೇನೂ ಇಲ್ಲ. ಇದನ್ನು ಚೆನ್ನಾಗಿ ತಿಳಿದಿರು; ಇಲ್ಲವಾದರೆ ನೋಸಹೋಗಿ ಅಪಮಾನ ಪಡುವೆ ಎಂದನು.

ಇಷ್ಟು ಹೊತ್ತಿಗೆ ಒಂದು ಅಂಕವು ಮುಗಿದು ತೆರೆಯು ಬಿದ್ದಿತು. ಆಗ ವೀರಸಿಂಹನು ಉದಯಸಿಂಹನನ್ನು ಕರೆದುಕೊಂಡು ಗಂಗಾಬಾಯಿಯ ಬಳಿಗೆ ಹೋಗಿ ಅವರಿಬ್ಬರಿಗೂ ಪರಿಚಯವನ್ನು ಮಾಡಿಕೊಟ್ಟು ಉದಯಸಿಂಹನನ್ನು ಅವಳ ಪಕ್ಕದಲ್ಲಿ ಕುಳ್ಳಿರಿಸಿ ತಾನು ಹಿಂದೆ ಇದ್ದ ಆಸನದಲ್ಲಿ ಕುಳಿತನು.

ಯೌವನಸ್ಥರಲ್ಲಿ ಪರಿಚಯವೆಂದರೆ ಸ್ನೇಹ. ಗಂಗಾಬಾಯಿಯೂ ಉದಯಸಿಂಹನೂ ತಡೆಯಿಲ್ಲದೆ ಮಾತುಗಳನ್ನಾಡುತ್ತಿದ್ದರು. ಅವರನ್ನು ತೊಂದರೆ ಮಾಡಲು ಇಷ್ಟವಿಲ್ಲದೆ ಬೇಸರಿಕೆಯಿಂದ ವೀರಸಿಂಹನು ಸುತ್ತೂ ನೋಡುತ್ತಲಿದ್ದಾಗ, ಇದಿರಿಗೆ ಸ್ಫುರದ್ರೂಪಿಯಾಗಿ ಸರ್ವಾಭರಣಭೂಷಿತೆಯಾದ ಯುವತಿಯೊಬ್ಬಳು ಕುಳಿತು ಇದ್ದುದನ್ನು ಕಂಡನು. ಉಡಿಗೆತೊಡಿಗೆಗಳಿಂದ ಇವಳು ಯವನದೇಶದವಳಂತೆ ಕಾಣಿಸುತ್ತಿ

ದ್ದಳು. ಸಾಮಾನ್ಯವಾಗಿ ಆ ದೇಶದ ಹೆಂಗುಸರೇ ಸುಂದರಿಯರು ; ಅವಳ ಸೌಂದರ್ಯವು ಅಸಾಧಾರಣವಾಗಿ ಊರ್ವಶಿ ರತಿ ರಂಭೆಯರನ್ನೂ ಕೀಳೆನಿಸುತ್ತಿದ್ದುದರಿಂದ ಜಿತೇಂದ್ರಿಯನಾದ ವೀರಸಿಂಹನೂ ಮೋಹಪರವಶನಾಗಿ ಹೋದನು.

ಅವಳ ಹಿಂದೆ ಸ್ವಲ್ಪ ಮರೆಯಲ್ಲಿ ಅವನೋ ಒಬ್ಬನು ಕುಳಿತಿದ್ದನು. ಉದಯಸಿಂಹ ಗಂಗಾಬಾಯಿಯರ ಸಂಭಾಷಣೆಗೆ ಅಡ್ಡಿಮಾಡಕೂಡದೆಂದಿದ್ದರೂ, ಆ ಸುಂದರಿಯು ಆರೆಂಬುದನ್ನು ತಿಳಿಯುವ ಕುತೂಹಲದಿಂದ ಅವಳಾರು ಬಲ್ಲೆಯೋ, ಎಂದು ಗಂಗಾಬಾಯಿಯನ್ನು ಕೇಳಿದನು.

ನನಗೆ ತಿಳಿಯದು ; ಈ ಉತ್ಸವಾರಂಭವಾದಂದಿನಿಂದಲೂ ಅವಳು ಪ್ರತಿನಿತ್ಯವೂ ತಪ್ಪದೆ ಇಲ್ಲಿಗೆ ಬರುತ್ತಲಿದ್ದಾಳೆ.

ಅವಳ ರೂಪವು ಹೇಗಿದೆ ?

ನನ್ನನ್ನು ರೂಪವತಿಯೆಂದು ಎಲ್ಲರೂ ಹೊಗಳುವರು ; ಆದರೆ ಅವಳ ರೂಪದ ಮುಂದೆ ನನ್ನದೇನು !

ಅವಳ ಹಿಂದೆ ಇರುವವನಾರು ?

ಹಿಂದೆ ಆರಿರುವರು ಎಂದು ಗಂಗಾಬಾಯಿಯು ಎದ್ದು ನೋಡಿದ ಒಡನೆಯೇ, ಕೈಕಾಲುಗಳು ಗಡಗಡನೆ ನಡುಗುತ್ತ ನಿಲ್ಲಲಾರದೆ ಕುರ್ಚಿಯ ಮೇಲೆ ಕುಳಿತು, ನಾನಿಲ್ಲಿರಲಾರೆ, ಬೇಗ ನನ್ನನ್ನು ಕರೆದುಕೊಂಡು ಮನೆಯಲ್ಲಿ ಬಿಟ್ಟುಬಿಡು ಎಂದು ವೀರಸಿಂಹನ ಎರಡು ಕೈಗಳನ್ನೂ ಹಿಡಿದು ಬೇಡಿಕೊಳ್ಳಲು, ಅವನು ಅವಳ ಜತೆಯಲ್ಲಿ ಬಂಡಿಯಲ್ಲಿ ಕುಳಿತು ಹೊರಟು ಹೋದನು.

ವೀರಸಿಂಹನು ತನ್ನ ಬಿಡಾರಕ್ಕೆ ಬಂದಾಗ ರಾತ್ರೆ ಸುಮಾರು ಒಂದು ಗಂಟೆಯಾಗಿದ್ದಿತು. ಉದಯಸಿಂಹನು ಮಂಚದ ಮೇಲೆ ದಿಂಬನ್ನು ಒರಗಿ ಕುಳಿತುಕೊಂಡು ಯೋಚನಾಪರನಾಗಿದ್ದನು. ಅವನಿಗೆ ವೀರಸಿಂಹನು ಬಂದುದೇ ಗೊತ್ತಾಗಲಿಲ್ಲ; ಗೊತ್ತಾದ ಮೇಲೆ, ಎಲೋ ವೀರಸಿಂಹ ! ನೀನು ಬೆಳಗಾಗುವವರೆಗೆ ಇಲ್ಲಿಗೆ ಬರಲಾರೆ ಎಂದಿದ್ದೆನು, ಇದೇನು ಆಗಳೇ ಬಂದುಬಿಟ್ಟೆ ಎನ್ನಲು, ಅವನು ಅಪ್ಪಾ ಉದಯ ನಾನು ಎಷ್ಟು ಹೇಳಿದರೂ ನಿನ್ನ ದುರ್ಬುದ್ಧಿಯನ್ನು ನೀನು ಬೇರೆ ಬಿಡುವುದಿಲ್ಲ ಎಂದನು.

ಈ ದೇಶದ ಹೆಂಗುಸರ ಚರ್ಯೆಯನ್ನು ಹೀಗೆಂದು ತಿಳಿಯಲು ಅಸಾಧ್ಯ; ನನ್ನೊಂದಿಗೆ ಸರಸವಾಗಿ ಮಾತನಾಡುತ್ತಲಿದ್ದವಳು ಏನನ್ನೋ ನೆನಸಿಕೊಂಡು ಹೆದರಿದಂತೆ ರಾತ್ರೆಯೆಲ್ಲ ಪರಪುರುಷನ ಜತೆಯಲ್ಲಿ ಒಬ್ಬಳೇ ಬಂಡಿಯಲ್ಲಿ ಕುಳಿತು ಮನೆಗೆ ಹೋದಳಲ್ಲಾ, ಏನೆಂದು ಹೇಳೋಣ! ನಮ್ಮ ಹೆಂಗುಸರು ಹೀಗೆ ಮಾಡಿದ್ದರೆ ಅವರ ಮಾನವು ನಿಲ್ಲುತಿದ್ದಿತೆ?

ನಮ್ಮ ಹೆಂಗಸರಲ್ಲಿ ಜಾರತ್ವವು ಹೆಚ್ಚಾದುದರಿಂದ ಅವರು ಸ್ವಲ್ಪ ಸರಸರಾಗಿದ್ದರೂ ಮಾನ ನಿಲ್ಲದು; ಈ ದೇಶದವರಲ್ಲಿ ಅದು ಕಡಿಮೆಯಾದುದರಿಂದ ಅವರು ಪರಿಚಿತರಾದವರೊಡನೆ ಭಯವಿಲ್ಲದೆ ಧಾರಾಳವಾಗಿ ಸರಸವಾಡುವರು; ಹೀಗಿರುವುದರಿಂದ ಇವರು ಸುಲಭರೆಂದು ತಿಳಿಯಬೇಡ. ಗಂಗಾಜಾಯಿಯು ನಾಟಕ ಶಾಲೆಯಲ್ಲಿ ಯವನ ದೇಶದ ಯುವತಿಯು ಹಿಂದೆ ಕುಳಿತಿದ್ದವನು ಭೂಗತನಾಗಿದ್ದು ಅವುದೋ ಅನಾಹುತವನ್ನು ನಡೆಸಲು ಮನುಷ್ಯಾಕಾರದಿಂದ ಓಡಾಡುತ್ತಲಿರುವ ಪಿಶಾಚನೆಂದು ಭಾವಿಸಿ ಗಡಗಡನೆ ನಡುಗಿ ಅಲ್ಲಿ ನಿಲ್ಲಲಾರದೆ ಮನೆಗೆ ಹೋದಳು.

ನಾಟಕ ಮುಗಿದು ಎಲ್ಲರೂ ಹೊರಟಾಗ ನಾನು ಆ ಯವನಿಯನ್ನೂ ಅವಳ ಹಿಂದೆ ಇದ್ದವನನ್ನೂ ನೋಡಿದೆನು; ಆ ಮನುಷ್ಯನು ಶ್ರೀಮಂತರ ವಂಶದಲ್ಲಿ ಹುಟ್ಟಿದವನಂತೆ ತೋರುತ್ತಲಿದ್ದನು. ಆಹಾ! ಆ ಯುವತಿಯ ಸೌಂದರ್ಯವನ್ನು ವರ್ಣಿಸಲು ಅಸಾಧ್ಯವು; ಅಂತಹ ಸುಂದರಿಯನ್ನು ನಾನೆಲ್ಲಿಯೂ ನೋಡಿರಲಿಲ್ಲ. ಅವಳ ಪರಿಚಯವು ಹೇಗೆ ತಾನೇ ನನಗಾದೀತು?

ಈ ದುರ್ಬುದ್ಧಿಯನ್ನು ಬಿಡು; ಇಲ್ಲದಿದ್ದರೆ ನಿನ್ನ ಪರಿಣಾಮವು ಏನಾದೀತೋ! ಇನ್ನು ಈ ಪ್ರಸ್ತಾಪವು ಸಾಕು. ನಾಳೆಯ ದಿನ ಒಂಡಿಗೆ ಏನ ಮಾಡಿದೆ?

ಅದಕ್ಕೆ ನಾನೊಂದು ಏರ್ಪಾಡನ್ನು ಮಾಡಿರುವೆನು.

ಅದೇನು?

ಈ ಊರಲ್ಲಿ ಎಲ್ಲರೂ ಉತ್ಸವಕಾಲದಲ್ಲಿ ವೇಷವನ್ನು ಹಾಕಿಕ್ಕೊಂಡು ಓಡಾಡುವುದುರಿಂದ ನಾವೂ ಒಂದು ಎತ್ತಿನ ಬಂಡಿಯನ್ನು ಮಾಡಿಕೊಂಡು ಹಳ್ಳಿಯವರಂತೆ ವೇಷವನ್ನು ಹಾಕಿಕೊಂಡು ಊರೆಲ್ಲ ತಿರುಗಿ ಉತ್ಸವವನ್ನು ನೋಡಿಕೊಂಡು ಬರ

ಬಹುದು. ಇದನ್ನು ಪಶುಪತಿಗೆ ತಿಳಿಸಿದ ಕೂಡಲೇ, ಛಲ, ಇದು ಒಳ್ಳೆಯ ಉಪಾಯವೇ ಸರಿ ಎಂದು ಅವನು ಒಪ್ಪಿಕೊಂಡನು.

ಎತ್ತಿನ ಬಂಡಿಯು ಸಿಕ್ಕುವುದೋ ?

ಸಿಕ್ಕುವುದೋ ಇಲ್ಲವೋ ತಿಳಿದು ಬಂದು ಹೇಳುವುದಾಗಿ ಹೋಗಿದ್ದಾನೆ ಎಂದು ಉದಯಸಿಂಹನು ಹೇಳಿ ಮುಗಿಸುವುದರೊಳಗಾಗಿ ಪಶುಪತಿಯು ಕೊಟ್ಟಡಿಯೊಳಗೆ ತಲೆ ಹಾಕಿದನು.

ಅವನು ಒಳಗೆ ಬಂದು ಮಹಾಸ್ವಾಮೀ, ನಾನು ಎತ್ತಿನ ಬಂಡಿಯನ್ನು ಮಾಡಿಕೊಂಡು ಬರುವುದಕ್ಕೆ ಹೋದಾಗ, ನಿಮ್ಮ ಪಕ್ಕದ ಕೊಟ್ಟಡಿಯಲ್ಲಿಳಿದಿರುವ ರಾಜಾಮಲಯಸಿಂಹರು, ನೀವು ತೊಂದರೆ ಪಡುತ್ತಿರುವಿರೆಂಬುದನ್ನು ಕೇಳಿ, ತಮ್ಮ ಬಂಡಿಯನ್ನೂ ತಾವು ಬಾಡಿಗೆಗೆ ಮಾಡಿಕೊಂಡಿರುವ ಮಾಳಿಗೆಯಲ್ಲಿ ಸ್ಥಳವನ್ನೂ ಕೊಡುವುದಾಗಿ ನಿಮಗೆ ತಿಳಿಸಬೇಕೆಂದು ನನ್ನನ್ನು ಕಳುಹಿಸಿದಾರೆ. ನಿಮ್ಮ ಅಭಿಪ್ರಾಯವೇನು ? ಅವರಿಗೆ ಅದನ್ನು ತಿಳಿಸುವೆನು ಎಂದನು.

ಆಗ ಸ್ನೇಹಿತರಿಬ್ಬರೂ ಒಬ್ಬರ ಮುಖವನ್ನು ಒಬ್ಬರು ನೋಡಿ ಪಶುಪತಿಯನ್ನು ಕುರಿತು ಅವನಾರು ಎನ್ನಲು, ಅವನು ಒಬ್ಬ ರಾಜಕುಮಾರನೆಂದು ತೋರುತ್ತಲಿದೆ. ಅವನ ನಡತೆಯು ಬಹು ಶ್ಲಾಘ್ಯವಾದುದು ಎಂದನು.

ನೀನು ಹೇಳಿದಂತೆ ಅವನು ಶೀಲವಂತನಾಗಿದ್ದರೆ ಈ ವಿಷಯದಲ್ಲಿ ನಮಗೇಕೆ ಬಂದು ಕಾಗದವನ್ನು ಬರೆಯದೇ ಹೋದನು ಎಂದು ವೀರಸಿಂಹನು ಕೇಳುವ ವೇಳೆಗೆ ಸರಿಯಾಗಿ ಒಳ್ಳೆಯ ಉಡುಪನ್ನು ತೊಟ್ಟು ಒಬ್ಬ ಆಳು ಬಂದು ಪಶುಪತಿಯ ಕಯ್ಯಲ್ಲಿ ಎರಡು ಪತ್ರಗಳನ್ನು ಕೊಟ್ಟನು. ಅವನು ಇದೋ ಮಹಾಸ್ವಾಮೀ, ತಾವು ಕೇಳುವ ಪತ್ರಗಳು ಬಂದಿರುವಂತೆ ತೋರುತ್ತಲಿದೆ ಎಂದು ಅವುಗಳನ್ನು ಅವರ ಕಯ್ಯಲ್ಲಿ ಕೊಟ್ಟನು. ಆ ಪತ್ರಗಳಲ್ಲಿ ಈ ರೀತಿ ಒಕ್ಕಣೆಯಿದ್ದಿತು :—

ಮಹಾರಾಜಶ್ರೀಯವರ ಸಮಕ್ಷಮಕ್ಕೆ — ಉಭಯಕುಶಲೋಪರಿ. ನಿಮ್ಮ ಪಕ್ಕದ ಕೊಟ್ಟಡಿಯಲ್ಲಿರುವ ರಾಜಾಮಲಯಸಿಂಹನೆಂಬ ನಾನು ತಮ್ಮ ದರ್ಶನಲಾಭಕ್ಕೋಸುಗ ನಾಳೆಯ ಬೆಳಿಗ್ಗೆ ಬರಬೇಕೆಂದು ಇದ್ದೇನೆ. ತಮಗೆ ಅನುಕೂಲವಾದ ಕಾಲವನ್ನು ದಯೆಮಾಡಿ ತಿಳಿಸಬೇಕಾಗಿ ಬೇಡುತ್ತೇನೆ.

ವೀರಸಿಂಹನೂ ಉದಯಸಿಂಹನೂ ಆ ಪತ್ರಗಳನ್ನು ಓದಿ ನೋಡಿಕೊಂಡು ರಾಜಾಮಲಯಸಿಂಹರು ಇಲ್ಲಿಗೆ ವಿಜಯಮಾಡುವುದಕ್ಕಿಂತ ನಾವಿಬ್ಬರೂ ಅಲ್ಲಿಗೇ ಅವರ ದರ್ಶನಕ್ಕೆ ಬರುವೆವು ಎಂದು ಆಳಿಗೆ ಹೇಳಿ ಕಳುಹಿಸಿ, ಪಶುಪತಿಯನ್ನು ನೋಡಿ ನಿಮ್ಮ ರಾಜನು ಶೀಲವಂತನೇ ಸರಿ ಎಂದರು. ಮಹಾಸ್ವಾಮೀ, ಅವರು ಹೇಳಿದುದಕ್ಕೆ ನೀವು ಒಪ್ಪಿಕೊಂಡಿರಿ ಎಂದು ತಿಳಿಸಲೋ ಎಂದು ಪಶುಪತಿಯು ಕೇಳಿದುದಕ್ಕೆ ವೀರಸಿಂಹನು ತಿಳಿಸು; ನಾಳೆ ಬೆಳಿಗ್ಗೆ ಸ್ವಲ್ಪ ಜಾಗ್ರತೆಯಾಗಿ ಎದ್ದು ಬಾ ಎಂದನು.

ಪಶುಪತಿಯು ಹೊರಟು ಹೋದ ಮೇಲೆ ಗೆಳೆಯರಿಬ್ಬರೂ ಮಲಗಿದರು. ಉದಯಸಿಂಹನು ಯವನದೇಶದ ಯುವತಿಯನ್ನೇ ಧ್ಯಾನಿಸುತ್ತಿದ್ದನು; ವೀರಸಿಂಹನು ಈ ರಾಜಾಮಲಯಸಿಂಹನೇ ಮಲಯದ್ವೀಪದಲ್ಲಿ ತನ್ನ ಸಂಗಡ ಗುಹೆಯಲ್ಲಿದ್ದ ನಾವಿಕ ಸೈಂಧವನಾಗಿರಬೇಕೆಂತಲೂ, ಆ ರಹಸ್ಯವನ್ನು ಬೆಳಗಾಗುತಲೆ ಹೇಗಾದರೂ ತಿಳಿಯಬೇಕೆಂತಲೂ ಯೋಚಿಸುತ್ತಿದ್ದನು. ಅಂತು ಇಂತು ಇವರಿಬ್ಬರಿಗೂ ನಿದ್ದೆ ಬರಲಿಲ್ಲ. ಬೆಳಗಾಗುತಲೆ ಇಬ್ಬರೂ ಎದ್ದು ಒಳ್ಳೆಯ ಉಡುಪುಗಳನ್ನು ತೊಟ್ಟು ಪಶುಪತಿಯನ್ನು ಮುಂದಿಟ್ಟುಕೊಂಡು ರಾಜಾಮಲಯಸಿಂಹನ ಕೊಟ್ಟಡಿಗೆ ಹೋಗಿ ಸೇವಕನಿಗೆ ತಮ್ಮ ವಿಷಯವನ್ನು ಒಳಗೆ ತಿಳಿಸಹೇಳಲು, ಅವನು ಮಹಾಸ್ವಾಮೀ, ಸ್ವಲ್ಪ ಕಾಲತಡಕೊಳ್ಳಿರಿ; ನಾನು ರಾಜರಿಗೆ ತಮ್ಮ ಆಗಮನವನ್ನು ತಿಳಿಸುವೆನು ಎಂದು ಅವರುಗಳನ್ನು ಆಸನದಲ್ಲಿ ಕುಳ್ಳಿರಿಸಿ ತಾನು ಒಳಕ್ಕೆ ಹೋದನು.

ಆ ಕೊಟ್ಟಡಿಯು ಅಂದವನ್ನು ವರ್ಣಿಸಲು ಅರಿಗೆ ತಾನೇ ಸಾಧ್ಯ! ವಿಶೇಷಧನವೂ ಅಲಂಕಾರಾಭಿರುಚಿಯೂ ಇದ್ದರೆ ಎಷ್ಟು ಮಟ್ಟಿಗೆ ಅಲಂಕರಿಸಬಹುದೋ ಅಷ್ಟುಮಟ್ಟಿಗೆ ಅದು ಅಲಂಕೃತವಾಗಿದ್ದಿತು. ಅದರ ಸೋಪಸ್ಕರಗಳನ್ನೂ ರಚನೆಯ ರೀತಿಯನ್ನೂ ನೋಡಿ ಇಬ್ಬರೂ ಆನಂದಪರವಶರಾಗಿದ್ದಾಗ, ರಾಜಾಮಲಯಸಿಂಹನು ಒಳಗಣ ಬಾಗಿಲನ್ನು ತೆರೆದುಕೊಂಡು ಈ ಕೊಟ್ಟಡಿಗೆ ಬಂದು ಕೂಡಲೇ ಬಾಗಿಲನ್ನು ಮುಚ್ಚಿದನು. ಅಷ್ಟರಲ್ಲಿಯೇ ಒಳಗೆ ಹಾಡುತ್ತಲಿದ್ದ ಗಾನದ ಇಂಪು ಕೊಟ್ಟಡಿಯನ್ನೆಲ್ಲಾ ತುಂಬಿಕೊಂಡು ದೇವಲೋಕದ ಗಾನದ ಸೊಗಸೆಂಬ ಭ್ರಾಂತಿಯನ್ನು ಹುಟ್ಟಿಸಿತು.

ರಾಜಾಮಲಯಸಿಂಹನು ಆ ಕೊಟ್ಟಡಿಗೆ ಬಂದ ಒಡನೆಯೇ ಇವರ ಕುಶಲ ಪ್ರಶ್ನೆಯನ್ನು ಮಾಡಿ, ಸಮೀಪದಲ್ಲಿರುವ ದೊಡ್ಡ ಮನುಷ್ಯರ ಸ್ನೇಹವನ್ನು ಬೆಳೆಸಿ, ಅವರ

ಸೇವೆಯನ್ನು ಮಾಡಿ ಸಂತೋಷಪಡಿಸಬೇಕೆಂದು ನನಗೆ ಆವಾಗಲೂ ಬಲು ಆಸೆ; ಇದನ್ನು ಪಶುಪತಿಯು ಬಲ್ಲನು. ಆದರೂ ಆ ದಡ್ಡನು ನಿಮ್ಮ ಅನಾನುಕೂಲಗಳನ್ನು ನೆನ್ನೆಯ ರಾತ್ರಿಯ ವರೆಗೂ ನನಗೆ ಹೇಳಲೇ ಇಲ್ಲ. ಅದು ನನಗೆ ತಿಳಿದ ಕೂಡಲೆ ಅವನನ್ನು ನಿಮ್ಮ ಬಳಿಗೆ ಕಳುಹಿಸಿದೆನು ಎಂದನು. ಅದಕ್ಕೆ ವೀರಸಿಂಹನು ನಮಗಿದ್ದ ಕಷ್ಟವನ್ನು ನಿವೃತ್ತಿಮಾಡಿಕೊಟ್ಟುದಕ್ಕಾಗಿ ನಿಮಗೆ ನಾವು ಎಷ್ಟು ಕೃತಜ್ಞರಾಗಿದ್ದರೂ ತೀರದು ಎಂದನು.

ಮಲಯಸಿಂಹನ ವಿಷಯದಲ್ಲಿ ತನಗಿದ್ದ ಅನುಮಾನವನ್ನು ಆಗಲೇ ಪ್ರಶ್ನೆಮಾಡಿ ಪರಿಹಾರಮಾಡಿಕೊಳ್ಳುವುದೋ ಅಥವಾ ಮುಂದೆ ಸಂಗತಿಗಳು ಹೇಗೆ ಬಹುವುದೋ ನೋಡಿಕೊಂಡು ಕೇಳೋಣವೋ ಎಂದು ಯೋಚಿಸಿ, ಕೊನೆಗೆ ತನಗೂ ಅವನಿಗೂ ಹಿಂದೆ ಮಲಯದ್ವೀಪದಲ್ಲಿ ಉಂಟಾಗಿದ್ದ ಗುರುತು ಪರಿಚಯಗಳನ್ನು ಅವನು ಎಳ್ಳಷ್ಟಾದರೂ ಸೂಚಿಸದೆ ಇದ್ದುದರಿಂದಲೂ, ಆ ಕಾಲದಲ್ಲಿ ತಾನು ಹೆಸರನ್ನು ತಿಳಿಸಲು ಇಷ್ಟಪಡದಿದ್ದುದರಿಂದಲೂ, ಆ ಪರಿಚಯವನ್ನು ಈಗ ಸ್ಪಷ್ಟಪಡಿಸುವುದು ಅಲೌಕಿಕ ವೆಂದಿದ್ದನು. ಮೇಲೂ, ವೀರಸಿಂಹನಿಗೆ ಇವನೇ ಸೈಂಧವನು ಎಂಬಂಶವು ಸ್ಪಷ್ಟವಾಗಿದ್ದರೂ ಅವನನ್ನು ಪ್ರಶ್ನೆಮಾಡುವಷ್ಟು ದೃಢವಾಗಿ ತಿಳಿದಿರಲಿಲ್ಲ.

ಆದರೆ ಚಕ್ರಭೀಮನ ಕೋಟೆಯಲ್ಲಿ ಕೇಳಿದ ದನಿಯು ಇವನದೇ ಎಂದು ನಂಬುಗೆ ಇದ್ದುದರಿಂದ ರಾಜರೇ, ಈ ದಿನ ಮಧ್ಯಸ್ಥಾನದಲ್ಲಿ ಎರಡು ವಧೆಗಳು ಆಗುವು ವಲ್ಲವೆ ಎಂದು ಕೇಳಲು, ಅವನು ಅಹುದು, ಎಷ್ಟು ಹೊತ್ತಿಗಾಗುವುದೋ ನೆನಪಿಲ್ಲ, ವಿಚಾರಿಸೋಣ ಎಂದು ಮೇಜಿನ ಮೇಲೆ ಇದ್ದ ಗಂಟೆಯನ್ನು ತೆಗೆದು ಮೂರು ಸಾರಿ ಸದ್ದುಮಾಡಿ, ವೀರಸಿಂಹರೇ, ಸೇವಕರನ್ನು ಕರೆಯುವುದಕ್ಕೆ ನಾನೊಂದು ಏರ್ಪಾಟು ಮಾಡಿಕೊಂಡಿದ್ದೇನೆ; ಕೈಯಾಳನ್ನು ಕರೆಯಬೇಕಾದರೆ ಒಂದು ಸಾರಿಯೂ, ಪರಿಚಾರಕನನ್ನು ಕೂಗಬೇಕಾದರೆ ಎರಡು ಸಾರಿಯೂ, ಮನವಾರ್ತೆಯವನು ಬರಬೇಕಾದರೆ ಮೂರು ಸಾರಿಯೂ ಗಂಟೆ ಬಾರಿಸುತ್ತೇನೆ; ಇದರಿಂದ ಈ ಕೆಲಸವು ಸುಲಭವಾಗಿ ಹೋಗಿದೆ ಎಂದನು.

ಗಂಟೆಯ ಸದ್ದು ನಿಲ್ಲುವುದರೊಳಗಾಗಿಯೇ ಸುಮಾರು ನಲವತ್ತೈದು ವಯಸ್ಸಿನವನೊಬ್ಬನು ಬಂದನು. ಅವನನ್ನು ನೋಡುತಲೆ ವೀರಸಿಂಹನು ಇವನೀಗ ಮಲ

ಯದ್ವೀಪದಲ್ಲಿ ತನ್ನನ್ನು ಕಣ್ಣುಕಟ್ಟಿ ಗುಹೆಯೊಳಗೆ ಕರೆದುಕೊಂಡು ಹೋದವನೆಂದು ತಿಳಿದುಕೊಂಡನು.

ಮಲಯಸಿಂಹನು ಮನವಾರ್ತೆಯವನನ್ನು ನೋಡಿ ಈ ದಿನ ಹನನಗಳು ಯಾವಾಗ ನಡೆಯುವುವು ಎಂದು ಕೇಳಿದುದಕ್ಕೆ ಮಹಾಸ್ವಾಮೀ, ಹತ್ತು ಗಂಟೆಗೆ ಎಂದನು.

ಈಗ ಎಂಟು ಗಂಟೆ; ಊಟವನ್ನು ತೀರಿಸಿಕೊಂಡು ಹೋಗಬಹುದು; ಅಡಿಗೆ ಯಾದ ಒಡನೆಯೇ ತಿಳಿಸು. ಈ ದೊಡ್ಡ ಮನುಷ್ಯರಿಬ್ಬರೂ ಇಲ್ಲಿಯೇ ಭೋಜನ ಮಾಡುವರು ಎಂದು ಹೇಳಿ ಅವರ ಮುಖಗಳನ್ನು ನೋಡಲು, ಅವರು ಆಗಬಹುದು ಎಂದರು.

ಅತಿಥಿಯನ್ನು ಸತ್ಕರಿಸುವುದು ಪ್ರತಿಯೊಬ್ಬ ಮನುಷ್ಯನಿಗೂ ಧರ್ಮ; ನೀವು ಭೋಜನಕ್ಕೆ ನಿಂತುದು ಸಂತೋಷ. ನಾನು ಅಮರಪುರಕ್ಕೆ ಬಂದಾಗ ನಿಮ್ಮ ಆತಿಥ್ಯ ವನ್ನು ಸ್ವೀಕರಿಸುವೆನು ಎಂದು ಹೇಳಿ, ಮನವಾರ್ತೆಯವನನ್ನು ನೋಡಿ ಭದ್ರಕ, ಅಡಿಗೆಯಾಗಿದ್ದರೆ ಮೂರು ಎಡೆಗಳನ್ನು ಸಿದ್ಧಪಡಿಸು, ಹೋಗು ಎಂದನು.

ಅಮರಪುರದ ಸ್ನೇಹಿತರಿಬ್ಬರೂ ಮಲಯಸಿಂಹನ ಜತೆಯಲ್ಲಿ ಮಾತನಾಡುತ್ತ ಭೋಜನವನ್ನು ತೀರಿಸಿಕೊಂಡು ಬಂಡಿಯಲ್ಲಿ ಕುಳಿತು ಹೊರಡುವ ವೇಳೆಗೆ ಸರಿಯಾಗಿ ಮಲಯಸಿಂಹನು ಬಂದು ಬಂದು ಕ್ಷಣ ಸಾವಕಾಶವಾಗಬಹುದಾದರೆ ನಾನೂ ಜತೆ ಯಲ್ಲಿ ಬರುವೆನು ಎಂದು ಒಳಗೆ ಹೋದನು.

ಆಗ ವೀರಸಿಂಹನು ಉದಯಸಿಂಹನನ್ನು ನೋಡಿ ಈ ಮಲಯಸಿಂಹನ ವಿಷಯ ದಲ್ಲಿ ನಿನ್ನ ಅಭಿಪ್ರಾಯವೇನು ಎಂದುದಕ್ಕೆ, ಅವನು ಇವನ ವಿವೇಕ, ನಡತೆ, ಬುದ್ಧಿ ಗಳನ್ನು ನೋಡಿದರೆ ಇವನೊಬ್ಬ ದೊಡ್ಡ ಮನುಷ್ಯನೆಂದು ತೋರುತ್ತಲಿದೆ ಎಂದನು.

ನೀನು ಒಂದು ಸ್ವಾರಸ್ಯವನ್ನು ನೋಡಿದೆಯೋ? ಅದೇನು?

ಅವನು ನಿನ್ನನ್ನು ಬಲುವಾಗಿ ದೃಷ್ಟಿಸಿ ನೋಡಿದನು.

ನನ್ನನ್ನೇ? ಅಹುದು.

ನಾನು ಊರನ್ನು ಬಿಟ್ಟು ಬಂದು ವರ್ಷವಾಯಿತು; ಪ್ರಯಾಣದ ಶ್ರಮದಿಂದ ಮುಖವು ಬಾಡಿರಬಹುದು; ಉಡುಪುಗಳು ಹಳದಾಗಿರಬಹುದು; ಆದುದರಿಂದ ಅವನು

ನನ್ನನ್ನು ಹಳ್ಳಿಯವನೆಂದು ತಿಳಿದು ಹಾಗೆ ನೋಡಿರಬಹುದು. ಸಮಯ ಬಂದಾಗ ನಾನಿಂಥವನೆಂದು ಅವನಿಗೆ ಹೇಳು.

ಇಷ್ಟರಲ್ಲಿಯೇ ಮಲಯಸಿಂಹನು ಬಂದನು. ಎಲ್ಲರೂ ಗಾಡಿಯಲ್ಲಿ ಕುಳಿತು ಕಲ್ಯಾಣೀ ಚೌಕದ ಸಮೀಪಕ್ಕೆ ಹೋಗಲು ಆ ಚೌಕದಲ್ಲಿ ಹಾಕಿದ್ದ ಗಲ್ಲಿನ ಮರವನ್ನೂ, ಅದರ ಮೇಲೆ ಕಟುಕರಿಬ್ಬರು ಕುಳಿತು ಸಂತೋಷವಾಗಿರುವುದನ್ನೂ, ಕೆಳಗೆ ಬಿಚ್ಚುಕತ್ತಿ ಸಿಪಾಯಿಗಳು ನೂರಾರು ಜನ ನಿಂತಿರುವುದನ್ನೂ, ಕಂಡು, ವೀರಸಿಂಹನಿಗೆ ಮೆಯ್ಯು ಬೆವರಿತು. ಬಂಡಿಯು ಹೋಗಿ ಮಾಳಿಗೆಯ ಮುಂದೆ ನಿಂತಿತು. ವೀರಸಿಂಹನು ಇದೇ ನಿಮ್ಮ ಮಾಳಿಗೆಯೋ ಎಂದು ಕೇಳಲು, ಮಲಯಸಿಂಹನು ಅಹುದೆಂದನು. ಮಾಳಿಗೆಯ ಕಿಟಕಿಗಳಿಗೆ ಹಾಕಿದ್ದ ಕೆಂಪು ಹಸುರು ಬಟ್ಟೆಗಳನ್ನು ನೋಡಿ ವೀರಸಿಂಹನಿಗೆ ಚಕ್ರ ಭೀಮನ ಕೋಟೆಯಲ್ಲಿ ಮಾಡಿಕೊಂಡಿದ್ದ ಸಂಕೇತವು ಜ್ಞಾಪಕಕ್ಕೆ ಬಂದು ರಾಜಾ ಮಲಯಸಿಂಹನೇ ಅಲ್ಲಿ ಬಂಪನ ಸಂಗಡ ಮಾತನಾಡುತ್ತಿದ್ದವನು ಎಂದು ನಿರ್ಧರ ಮಾಡಿಕೊಂಡನು.

ಎಲ್ಲರೂ ಮಾಳಿಗೆಯಲ್ಲಿ ಕುಳಿತ ಮೇಲೆ ವಧಾರ್ಹರಾದ ಇಬ್ಬರು ಅಪರಾಧಿಗಳನ್ನು ತೂಗುಮರದ ಸಮೀಪಕ್ಕೆ ಕರೆತಂದರು. ಜನಗಳೆಲ್ಲಾ ಎಷ್ಟು ಹೊತ್ತಿಗೆ ಈ ವಧೆಗಳು ನಡೆಯುವವು ಎಂದು ಕುತೂಹಲದಿಂದ ನೋಡುತ್ತಲಿರುವ ವೇಳೆಗೆ ಅವನೋ ಒಬ್ಬ ಅಧಿಕಾರಿಯು ಕುದುರೆಯನ್ನು ಬಹು ವೇಗವಾಗಿ ಓಡಿಸಿಕೊಂಡು ಬಂದು ಅಪರಾಧಿಗಳಿದ್ದೆಡೆಗೆ ಹೋಗಿ ಈ ಇಬ್ಬರಲ್ಲಿ ಪ್ರತಿರೋಧಿಯೆಂಬವನಾರು ಎಂದು ಕೇಳಲು ಸಿಪಾಯಿಗಳ ಯಜಮಾನನು ಇವನು, ಎಂದು ಪ್ರತಿರೋಧಿಯನ್ನು ತೋರಿಸಿದನು.

ಇವನನ್ನು ಮನ್ನಿಸಿ ಬಿಟ್ಟುಬಿಡುವಂತೆ ಮಹಾರಾಜರ ಅಪ್ಪಣೆಯಾಗಿರುವುದು ಎಂದು ಹೇಳಿದ ಕೂಡಲೆ ಪ್ರತಿರೋಧಿಯ ಕೈ ಕಟ್ಟನ್ನು ಬಿಚ್ಚಿ ಬಿಟ್ಟುಬಿಟ್ಟರು. ಆಗ ಬಂದಿದ್ದವರು ಬಂದು ಜೀವವು ಉಳಿಯಿತಲ್ಲಾ ಎಂದು ಸಂತೋಷಪಟ್ಟು ರಾಜನನ್ನು ಸ್ತೋತ್ರಮಾಡಿದರು.

ಅರಸು ಪ್ರತಿರೋಧಿಯನ್ನು ಮನ್ನಿಸಿ ಬಿಟ್ಟುದು ಮತ್ತೊಬ್ಬ ಪಾಪಿಗೆ ಸಹಿಸಲಿಲ್ಲ. ಅವನನ್ನು ಬಿಡುವುದೇಕೆ, ನನ್ನನ್ನು ಕೊಲ್ಲುವುದೇಕೆ, ನಾನೊಬ್ಬನೇ ಸಾಯಲಾರೆ;

ಆಭರಣವನ್ನು ಮೊದಲು ಕೊಂದು, ಆಮೇಲೆ ನನ್ನನ್ನು ಕೊಲ್ಲಿರಿ ಎಂದು ಕೈಕಾಲುಗಳನ್ನು ಒದರುತ್ತ ಬಲು ರಗಳೆಮಾಡಿದನು.

ವೀರಸಿಂಹನು ಈ ಅವಸ್ಥೆಯನ್ನು ನೋಡಲಾರದೆ ಅತ್ತಕಡೆ ತಿರುಗಿಕೊಂಡನು; ಆಗ ಚೌಕದಲ್ಲಿ ವಿಶೇಷ ಗಲಭೆಯಾಗುವುದರಿಂದ ಮಲಯಸಿಂಹನನ್ನು ನೋಡಿ ಅದೇನು ಗಲಭೆ, ಎಂದು ಕೇಳಲು, ತನ್ನ ಜತೆಯವನಿಗೆ ಬಡುಗಡೆಯಾಯಿತಲ್ಲಾ ಎಂದು ಸಂತೋಷಪಡುವುದಕ್ಕೆ ಒದಲಾಗಿ ಅವನನ್ನೂ ಕೊಂದರೆ ತಾನು ನೆಮ್ಮದಿಯಿಂದ ಸಾಯುವುದಾಗಿ ಹೇಳಿಕೊಂಡು ಆ ಪಾಪಿ ಸನ್ಯಾಸಿಯು ಒದ್ದಾಡಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಪಡುತ್ತಲಿದ್ದಾನೆ. ಆಹಾ! ಮನುಷ್ಯರ ಸ್ವಭಾವವು ಎಂತಹುದು? ಉತ್ತರ ಕ್ಷಣದಲ್ಲಿ ತನುಗುಂಟಾಗುವ ಕಷ್ಟವನ್ನು ತಿಳಿಯದೆ ಇತರರ ಬಳ್ಳಿಯ ಸ್ಥಿತಿಯನ್ನು ನೋಡಿ ಕರುಬುತ್ತ ಅವರಿಗೆ ಹಿಂಸೆಯನ್ನುಂಟುಮಾಡುವರು. ದೇವರಂತಿಂದೂ ಶಾಸ್ತ್ರಗಳೆಲ್ಲವೂ ನಿಶ್ಚಯವೆಂದೂ ತಿಳಿದು, ಮುಂದೆ ನರಕವ್ಯಾಪ್ತಿಯಾಗುವುದನ್ನೂ ಲೆಕ್ಕಿಸದೆ ತಮ್ಮ ಅಸೂಯೆಯನ್ನು ತೋರಿಸಿ ತೃಪ್ತಿಪಡುವುದೇ ಸಕಲವೂ ಎಂದಿರುವವರನ್ನು ಏನೆಂದು ಹೇಳೋಣ ಎಂದನು.

ಆ ಪಾಪಿಯು ಒದ್ದಾಟ ಹೆಚ್ಚಾದಷ್ಟೂ ಜನರ ಕೂಗಾಟವೂ ಹೆಚ್ಚಿತು. ಅವನನ್ನು ಛಿನ್ನಭಿನ್ನಮಾಡಿರಿ, ಸುಣ್ಣದ ಗೂಡಿನಲ್ಲಿ ಸುಡಿಸಿರಿ, ಶೂಲಕ್ಕೆ ಏರಿಸಿರಿ ಎಂದು ಸಾವಿರಾರು ಜನಗಳು ಕೂಗಿಕೊಂಡರು. ಅಷ್ಟು ಹೊತ್ತಿಗೆ ಅವನನ್ನು ತೂಗುಮರದ ಮೇಲೆ ನಿಲ್ಲಿಸುವುದಕ್ಕೆ ಕಟುಕರು ಅಣಿಯಾದರು. ಇದನ್ನು ನೋಡಿ ವೀರಸಿಂಹನೂ ಉದಯಸಿಂಹನೂ ಮೂರ್ಛಿತರಾದರು. ಅವರಿಗೆ ಪ್ರಜ್ಞೆ ಬಂದಾಗ ಕೊಲೆಯು ಮುಗಿದು ಚೌಕದಲ್ಲಿದ್ದ ಗಲ್ಲಿನ ಮರವೂ ಶೂಲವೂ ಕೀಳಲ್ಪಟ್ಟು ಉತ್ಸವಕ್ಕೆ ಆರಂಭವಾಗಿದ್ದಿತು.

ಆಗ ವೀರಸಿಂಹನು ಮಲಯಸಿಂಹನನ್ನು ನೋಡಿ ಸ್ವಾಮೀ ರಾಜರೇ, ಆ ಭಯಂಕರವಾದ ನೋಟವು ನನಗೆ ಸ್ವಪ್ನದಂತಾಯಿತು. ಆ ಪಾಪಿಯು ಏನಾದನು ಎಂದು ಕೇಳಿದನು.

ಆ ಪಾಪಿಗೂ ಸ್ವಪ್ನವೇ; ಎಂದರೆ ನೀವು ಎಚ್ಚತ್ತಿರಿ, ಅವನು ಎಚ್ಚರುವುದಿಲ್ಲ; ಇದೇ ವ್ಯತ್ಯಾಸ.

ಇದನ್ನು ನೋಡಿದ ಮೇಲೆ ಉತ್ಸವದ ಕೂಟದಲ್ಲಿ ಸೇರಲು ನನಗೆ ಇಷ್ಟವಿಲ್ಲ.

ಆದೇನು ? ಇಂತಹ ನೋಟಗಳನ್ನು ನೋಡಿದ ಹೊರತು ಮನಸ್ಸು ಗಟ್ಟಿಯಾಗ ಲಾರದು. ಏಳಿರಿ ; ಸಿದ್ಧಪಡಿಸಿರುವ ಉಡುಪುಗಳನ್ನು ತೊಟ್ಟು ನಾವು ಈ ಉತ್ಸವದ ಸಂಭ್ರಮವನ್ನು ಅನುಭವಿಸೋಣ ಎಂದು ಮಲಯಸಿಂಹನು ವೇಷವನ್ನು ಮರೆಸಿ ಕೊಳಲು ಹೊರಟನು. ವೀರಸಿಂಹ ಉದಯಸಿಂಹರೂ ಎದ್ದು ವೇಷಗಳನ್ನು ಮಾರ್ಪ ಡಿಸಿಕೊಂಡು ಕೆಳಗೆ ಇಳಿದು ಬಂಡಿಗೆ ಬಂದರು. ಒಂದು ಬುಟ್ಟಿಯು ತುಂಬ ಹೂವು ಗಳೂ ಮತ್ತೊಂದು ಬುಟ್ಟಿಯು ತುಂಬ ನಿಶಾಯಿಗಳೂ ಅದರಲ್ಲಿ ಇಟ್ಟಿದ್ದಿತು.

ಉತ್ಸವಕ್ಕೆ ಲಕ್ಷೋಪಲಕ್ಷ ಜನಗಳು ಸೇರಿದ್ದರೂ ಸ್ವಲ್ಪ ಹೆಚ್ಚು ಕಡಮೆ ಎಲ್ಲರೂ ಸಂಭ್ರಮವನ್ನು ನೋಡುವುದಕ್ಕೂ ಮನಬಂದಂತೆ ವಿಹರಿಸುವುದಕ್ಕೂ ಬರುವವರೇ ಹೊರತು, ದೇವಾಲಯಕ್ಕೆ ಹೋಗಿ ಭಕ್ತಿವಿಶ್ವಾಸಗಳಿಂದ ದೇವರ ಸೇವೆಯನ್ನು ಮಾಡು ವುದಕ್ಕೆ ಬರುವವರು ಬಹು ವಿರಳ.

ಒಂದು ದೊಡ್ಡ ಬಯಲೂ ಅದರ ಸುತ್ತಲೂ ಅನೇಕ ಅಂತಸ್ತಿನ ಮನೆಗಳೂ, ಪ್ರತಿಯೊಂದು ಮಹಡಿಗೂ ಕೈಸಾಲೆಗಳೂ, ಆ ಕೈಸಾಲೆಗಳ ತುಂಬ ದೊಡ್ಡಮನುಷ್ಯರ ಮನೆಯ ಹೆಂಗುಸರೂ ಮಕ್ಕಳೂ, ಪ್ರತಿಯೊಬ್ಬ ಹೆಂಗುಸಿನ ಪಕ್ಕದಲ್ಲಿಯೂ ಒಂದೊಂದು ಹೂವಿನ ಬುಟ್ಟಿಯೂ ನಿಶಾಯಿ ಬುಟ್ಟಿಯೂ, ಆ ಹೆಂಗುಸರು ಕೆಳಗೆ ಬೀದಿಯಲ್ಲಿ ಹೋ ಗುತ್ತಲಿರುವವರಲ್ಲಿ ತಮ್ಮ ಅಭಿಮಾನಕ್ಕೆ ಪಾತ್ರರಾದವರ ಮೇಲೆ ಹೂವುಗಳನ್ನೂ ನಿಶಾಯಿಗಳನ್ನೂ ಎರಚುತ್ತಲಿರುವುದೂ, ಅವರು ತಮ್ಮ ಪ್ರೀತಿಯನ್ನು ತೋರಿಸಲು ಮೇಲೆ ಇರುವವರ ಮೇಲೆ ಅವುಗಳನ್ನು ಮರಳಿ ಎರಚುವುದೂ ; ಕೆಳಗೆ ಬೀದಿಗಳಲ್ಲಿ ವಿಧವಿಧವಾದ ಉಡುಪುಗಳನ್ನು ತೊಟ್ಟು ವೇಷಗಳನ್ನು ಹಾಕಿಕೊಂಡು ಓಡಾಡುತ್ತ ಲಿರುವುದೂ, ಜನಭರಿತವಾದ ಬಂಡಿಗಳು ಹೋಗುತ್ತ ಬರುತ್ತಲಿರುವುದೂ, ಅಲ್ಲಲ್ಲಿ ಆಟ ಪಾಟಗಳೂ, ಸಂಗೀತಗಳೂ. ನೃತ್ಯಗಳೂ, ನಡೆಯುತ್ತಲಿರುವುದೂ ; ಕಪಿಗಳಂತೆಯೂ, ಹುಲಿಗಳಂತೆಯೂ, ಕೋಣಗಳೇ ಮೊದಲಾದ ಮೃಗಗಳಂತೆಯೂ ವೇಷಗಳನ್ನು ಧರಿಸಿ ಆಯಾಯ ಮೃಗಗಳಂತೆ ಕುಣಿದಾಡುತ್ತ ಕೂಗುತ್ತಲಿರುವುದೂ ; ಮಧ್ಯೆ ಮಧ್ಯೆ ಸುಂದ ರಿಯರಾದ ಹೆಂಗುಸರು ವೇಷವು ತೊಲಗಿದೊಡನೆಯೇ ಚಂದ್ರನು ಕಳಕಳಿಸಿ ತೋರು ವಂತೆ ಅವಕುಂಠನದಿಂದ ಮುಚ್ಚಿದ್ದ ವದನಗಳನ್ನು ತಮ್ಮಲ್ಲಿ ಅಭಿಮಾನವುಂಟಾದವರಿಗೆ ಸಲ್ಪ ಸ್ವಲ್ಪ ತೆರೆದು ತೋರಿಸುತ್ತಲಿರುವುದೂ ; ಇವುಗಳನ್ನು ನಮ್ಮ ಪಾತಕರು ಊಹಿಸಿ

ಕೊಂಡರೆ ಇಂದ್ರಪ್ರಸ್ಥದಲ್ಲಿ ಆಗ ನಡೆಯುತ್ತಲಿದ್ದ ಉತ್ಸವವು ಸ್ವಲ್ಪ ಮಟ್ಟಿಗಾದರೂ ಅವರ ಮನಸ್ಸಿಗೆ ಗೋಚರವಾಗದಿರದು.

ಈ ಓಡಾಟಗಳಲ್ಲಿ ಸ್ಫುರದ್ರೂಪಿಯಾದ ಗ್ರಾಮಯುವತಿಯರಂತೆ ತೋರುತ್ತ ಲಿದ್ದ ನಾಲ್ಕುಮಂದಿ ಕುಳಿತಿದ್ದ ಬಂಡಿಯೂ ನಮ್ಮ ಉದಯಸಿಂಹನ ಬಂಡಿಯೂ ಅನೇ ಕಾವೃತ್ತಿ ಸಂಧಿಸಲು, ಉದಯಸಿಂಹನು ಆ ನಾಲ್ವರಲ್ಲಿ ತಾನು ಮೆಚ್ಚಿದ ತರುಣಿಯ ಮೇಲೆ ಮಲ್ಲಿಗೆ ಹೂವಿನ ಚೆಂಡನ್ನು ಎಸೆದನು. ಮರಳಿ ಇವರ ಬಂಡಿಗಳು ಸೇರಿದಾಗ ಅವಳು ಒಂದು ಗುಲಾಬಿಯ ಹೂವನ್ನು ಉದಯಸಿಂಹನ ಮೇಲೆ ಎಸೆದಳು. ಇದ ರಿಂದ ತಾನು ಅವಳಲ್ಲಿ ಮೋಹಗೊಂಡಿದ್ದಂತೆ ಅವಳೂ ತನ್ನಲ್ಲಿ ಮೋಹಗೊಂಡಿರುವ ಳೆಂದು ತಿಳಿದು, ಮತ್ತೊಂದು ಸಾರಿ ಬಂಡಿಯು ಬರುವುದನ್ನೇ ನೋಡುತ್ತಲಿದ್ದನು. ಇಷ್ಟರಲ್ಲಿಯೇ ಸಾಯಂಕಾಲವಾಯಿತು.

ಮಾರನೆಯ ದಿನವೆಲ್ಲಾ ಎಷ್ಟೆಷ್ಟು ತಿರುಗಿದರೂ ಉದಯಸಿಂಹನಿಗೆ ಆ ತರುಣಿ ಯರು ಸಿಕ್ಕಲಿಲ್ಲ; ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲಾ ಎಂದು ಅವನು ಖಿನ್ನ ನಾಗಿ ಬಿಡಾರಕ್ಕೆ ಬಂದು ಸೇರಿದನು. ಆ ರಾತ್ರಿ ನಿದ್ದೆಯೇ ಬರಲಿಲ್ಲ. ಬೆಳಿಗ್ಗೆ ಎದ್ದು ತಾನೂ ಹಳ್ಳಿಯವನಂತೆ ವೇಷವನ್ನು ಹಾಕಿಕೊಂಡು ವೀರಸಿಂಹನನ್ನೂ ಕರೆಯಲು, ಅವನು ನಿನ್ನೊಡನೆ ನಾನು ಬರುವುದಕ್ಕಾಗುವುದಿಲ್ಲ, ದೇವಾಲಯಕ್ಕೆ ಹೋಗಿ ದೇವರ ದರ್ಶನವನ್ನು ಮಾಡಬೇಕೆಂದು ಇದ್ದೇನೆ, ನೀನೇ ಹೋಗು ಎಂದು ಹೇಳಿಬಿಟ್ಟನು.

ಉದಯಸಿಂಹನಿಗೂ ಇದೇ ಬೇಕಾಗಿದ್ದುದರಿಂದ ತಾನೊಬ್ಬನೇ ಬಂಡಿಯಲ್ಲಿ ಕುಳಿತು, ಹಳ್ಳಿಯ ತರುಣಿಯು ತನಗೆ ಕೊಟ್ಟಿದ್ದ ಗುಲಾಬಿ ಹೂವನ್ನು ಕಯ್ಯಲ್ಲಿ ಹಿಡಿದು ಹೊರಟನು. ಚೌಕದಲ್ಲಿ ಎರಡು ಮೂರು ಸುತ್ತು ಬರುವುದರೊಳಗಾಗಿಯೇ ಆ ಹೆಂ ಗುಸರಿದ್ದ ಬಂಡಿಯು ಸಿಕ್ಕಿ ತನ್ನ ಮೇಲೆ ಗುಲಾಬಿಹೂವನ್ನು ಎಸೆದ ಹೆಂಗುಸು ಮೋರೆಗೆ ಮುಚ್ಚಿದ್ದ ಅವಕುಂಠನವನ್ನು ಸ್ವಲ್ಪ ಓರೆಮಾಡಿ ಮುಖವನ್ನು ತೋರಿಸಿ ಮುಂದೆ ಹೊರಟು ಹೋದಳು. ಅವಳ ಮುಖವನ್ನು ನೋಡಿದ ಮಾತ್ರದಿಂದಲೇ ಉದಯಸಿಂಹನು ಮರು ಳಾಗಿ ಮತ್ತೊಂದ ಸಾರಿ ಬಂಡಿಯು ಸಂಧಿಸುವುದರೊಳಗಾಗಿ 'ನನ್ನ ಪ್ರಾಣವು ನಿನ್ನಲ್ಲಿದೆ ನಿನ್ನ ದರ್ಶನಸುಖವನ್ನು ಕೊಟ್ಟು ಕಾಪಿಡು' ಎಂದು ಒಂದು ಪತ್ರವನ್ನು ಬರೆದು ಅದನ್ನು ಹೂವಿನ ಚೆಂಡಿನಲ್ಲಿಟ್ಟುಕೊಂಡು ಬಂಡಿಯು ಪುನಃ ಸಂಧಿಸಿದಾಗ ಅದನ್ನು

ಅವಳ ಮೇಲೆ ಬಿಸುಟನು. ಮತ್ತೊಂದು ಸಾರಿ ಅವಳನ್ನು ನೋಡಿದಾಗ ಆ ಯುವತಿಯು ಅದೇ ಚೆಂಡನ್ನು ಇವನ ಮೇಲೆ ಹಾಕಿದಳು. ಉದಯಸಿಂಹನು ಅದನ್ನು ಬಿಚ್ಚಿ ನೋಡಲು 'ಈ ದಿನ ಸಾಯಂಕಾಲ ಎಂಟು ಗಂಟೆಗೆ ಸರಿಯಾಗಿ ಚಕ್ರಭೀಮನ ಕೋಟೆಯು ಎಡಗಡೆಯಲ್ಲಿರುವ ಆಲದ ಮರದ ಕೆಳಗೆ ನಾನು ಕೊಟ್ಟ ಗುಲಾಬೀ ಹೂವನ್ನು ಕಯ್ಯಲ್ಲಿ ಹಿಡಿದು ನಿಂತಿದ್ದರೆ, ನಾನು ಬಂದು ನಿನ್ನನ್ನು ಸೇರುವೆನು' ಎಂದು ಬರೆದಿದ್ದ ಕಾಗದವನ್ನು ಓದಿ ನೋಡಿ, ಇಂದು ನನ್ನ ಕೆಲಸವು ಕೈಗೂಡಿತು ಎಂದು ಸಂತೋಷಪಟ್ಟು ತನ್ನ ಬಿಡಾರವನ್ನು ಸೇರಿ, ಎಷ್ಟು ಹೊತ್ತಿಗೆ ಸಾಯಂಕಾಲವಾದೀತು, ಎಷ್ಟು ಹೊತ್ತಿಗೆ ನಾನು ಅವಳನ್ನು ನೋಡೇನು, ಎಂದು ಒಹಳ ಆತುರಪಡುತ್ತಿದ್ದನು.

ಇಪ್ಪತ್ತಾರನೆಯ ಅಧ್ಯಾಯ

ಕಳ್ಳರ ಗುಂಪು

ಉದಯಸಿಂಹನು ಬಿಡಾರಕ್ಕೆ ಬಂದ ತರುವಾಯ ಹೂವಿನ ಚೆಂಡಿನಲ್ಲಿದ್ದ ಕಾಗದವನ್ನು ವೀರಸಿಂಹನಿಗೆ ತೋರಿಸಲು, ಅವನು ಅದನ್ನು ಓದಿ ನೋಡಿ ನೀನು ಅದೃಷ್ಟಶಾಲಿಯೇ ಸರಿ; ಆದರೂ ಮೆಯ್ಯಮರೆತಿರಬೇಡ ಎಂದನು. ಅದಕ್ಕೆ ಉದಯಸಿಂಹನು ಅವಳು ಹಳ್ಳಿಯವಳಂತೆ ಇದ್ದರೂ ದೊಡ್ಡವರ ಮನೆಯವಳಂತೆ ಕಾಣುತ್ತಾಳೆ; ಆದುದರಿಂದ ಆವ ಭಯಕ್ಕೂ ಕಾರಣವಿಲ್ಲ. ಅವಳು ರೂಪವತಿಯಾಗಿರುವಷ್ಟು ಗುಣವತಿಯಾಗಿದ್ದಲ್ಲಿ ನಾನು ಇನ್ನೂ ಕೆಲವು ದಿವಸಗಳು ಇಲ್ಲಿಯೇ ಇರಬೇಕಾಗುವುದು ಎಂದನು.

ಧನಾಗಾರಪತಿಯಾದ ಅಮರನಾಥನು ತನ್ನ ಮನೆಯಲ್ಲಿ ಈ ದಿನವಾಗುವ ಹರಿಕಥೆಗೆ ನಮ್ಮಿಬ್ಬರನ್ನೂ ಕರೆದಿರುತ್ತಾನೆ; ಅಲ್ಲಿಗೆ ನೀನು ಬರುತ್ತೀಯೊ?

ಕಥೆಯು ಎಷ್ಟು ಹೊತ್ತಿಗೆ ವ್ಯಾರಂಭವಾಗುತ್ತದೆ?

ಒಂಭತ್ತು ಗಂಟೆಗೆ.

ಹಾಗಾದರೆ ನಾನು ಬರುವುದು ಅನುಮಾನ; ಚಕ್ರಭೀಮನ ಕೋಟೆಯ ಬಳಿ ಹೋದ ಮೇಲೆ ಅಲ್ಲಿಯ ಸಂದರ್ಭವು ಹೇಗಿರುವುದೋ? ನಾನು ಬರಲು ಅನುಕೂಲಿಸಲಿಲ್ಲವೆಂದು ಅಮರನಾಥನಿಗೆ ಹೇಳಿಬಿಡು.

ಪಕ್ಕದಲ್ಲಿಯು ಅಡಿಗೆಯಾಗಿರುವುದೆಂದು ಈಗ ತಾನೆ ಹೇಳಿಹೋದನು. ಊಟ ವನ್ನು ಮಾಡಿಕೊಂಡು ಇಬ್ಬರೂ ಹೊರಡೋಣ, ಏಳು. ನಿನ್ನನ್ನು ನಾನು ಸಂಕೇತ ಸ್ಥಾನದಲ್ಲಿ ಬಿಟ್ಟು ಗಂಗಾಬಾಯಿಯನ್ನು ನೋಡಿಕೊಂಡು ಅಮರನಾಥನ ಮನೆಗೆ ಹೋಗುವೆನು.

ಹಾಗೆಯೇ ಆಗಲಿ ಎಂದು ಉದಯಸಿಂಹನು ಒಪ್ಪಿಕೊಳ್ಳಲು, ಇಬ್ಬರೂ ಭೋಜನವನ್ನು ತೀರಿಸಿಕೊಂಡು ಉಡುಪುಗಳನ್ನು ತೊಟ್ಟು ಬಂಡಿಯಲ್ಲಿ ಕುಳಿತುಕೊಳ್ಳುವ ವೇಳೆಗೆ ಸರಿಯಾಗಿ ಮಲಯಸಿಂಹನ ಆಳು ವೀರಸಿಂಹನ ಕೈಯಲ್ಲಿ ಬಂದು ಚೀಟನ್ನು ತಂದುಕೊಟ್ಟನು. ಅವನು ಅದನ್ನು ಓದಿ ನೋಡಿ ಏನಪ್ಪಾ ಉದಯ, ಮಲಯಸಿಂಹನು ಇಂದು ನಾಟಕಕ್ಕೆ ಹೋಗುವುದಿಲ್ಲವಂತೆ; ಬೇಕಾದರೆ ಅವನ ಸ್ಥಾನದಲ್ಲಿ ನಾವು ಕುಳಿತುಕೊಳ್ಳಬಹುದು ಎಂದು ಬರೆದಿದ್ದಾನೆ ಎಂದನು.

ಈ ದಿನ ನಮ್ಮಿಬ್ಬರಿಗೂ ಬೇರೆ ಕೆಲಸವಿರುವುದರಿಂದ ನಾಟಕಕ್ಕೆ ಹೋಗುವುದಿಲ್ಲ ವೆಂದು ರಾಜರಿಗೆ ತಿಳಿಸು ಎಂದು ಉದಯಸಿಂಹನು ಹೇಳಿ ಕಳುಹಿಸಿ ಬಂಡಿಯನ್ನು ಬಿಡ ಹೇಳಿದನು.

ಬಂಡಿಯು ಜಾಗ್ರತೆಯಾಗಿಯೇ ಚಕ್ರಭೀಮನ ಕೋಟೆಯ ಬಳಿಗೆ ಬಂದಿತು. ಜನರ ಗುಂಪು ವಿಶೇಷವಾಗಿದ್ದುದರಿಂದ ಸ್ವಲ್ಪದೂರದಲ್ಲಿಯೇ ಇಬ್ಬರೂ ಬಂಡಿಯಿಂದಿಳಿದು ಸುತ್ತುಮುತ್ತ ನೋಡಿ, ಉದಯಸಿಂಹನ ವ್ಯಕ್ತಿಯನ್ನು ಕಾಣದೆ ಸಂಕೇತಸ್ಥಾನದಲ್ಲಿ ಹೋಗಿ ನಿಂತರು. ಆಗ ವೀರಸಿಂಹನು ಅಪ್ಪಾ ಉದಯ, ಇನ್ನು ನಾನು ನಿನ್ನ ಜತೆಯಲ್ಲಿರುವುದು ಸರಿಯಲ್ಲ; ದೂರದಲ್ಲಿದ್ದು ನೀನೂ ನಿನ್ನ ಪ್ರಿಯಳೂ ಸೇರುವುದನ್ನು ನೋಡಿ ಹೊರಡುವೆನು ಎಂದನು.

ಉದಯಸಿಂಹನು ವೀರಸಿಂಹನ ನಡೆ ನುಡಿಗಳಿಗೆ ಸಂತೋಷಪಟ್ಟನು. ಸುಮಾರು ಅರ್ಧಗಂಟೆಯು ವರೆಗೆ ಉದಯಸಿಂಹನು ತನ್ನ ಪ್ರಿಯೆಯನ್ನು ಕಾಣದೆ ಅಲೆದಾಡಿ ಸುತ್ತಲೂ ನೋಡಿ ಬೇಸತ್ತು ಅವಳು ಸುಳ್ಳ ಹೇಳಿರಬಹುದು ಎಂದು ಯೋಚಿಸುವಷ್ಟರಲ್ಲಿ, ಅಲ್ಲಿಗೆ ಒಂದು ಬಂಡಿಯು ಬಂದು ನಿಂತು ಅದರಿಂದ ಒಬ್ಬ ಹೆಂಗಸು ಇಳಿದು ಉದಯಸಿಂಹನನ್ನು ತನ್ನ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಹೋದಳು.

ಇದನ್ನು ದೂರದಿಂದ ನೋಡುತ್ತಲಿದ್ದ ವೀರಸಿಂಹನು ತನ್ನ ಬಂಡಿಯನ್ನು ಹತ್ತಿ

ಗಂಗಾಬಾಯಿಯ ಮನೆಗೆ ಹೋಗಿ ಅಲ್ಲಿ ಸುಮಾರು ಒಂದು ಗಂಟೆಯು ಕಾಲ ಮಾತು ಕಥೆಗಳನ್ನಾಡುತ್ತಿದ್ದು, ಅವಳೊಡನೆ ಅಮರನಾಥನ ಮನೆಗೆ ಹೋದನು. ಆ ವೇಳೆಗೆ ಹರಿಕಥೆಯು ಪ್ರಾರಂಭವಾಗಿದ್ದಿತು. ಇವರು ಬಂದುದನ್ನು ಕಂಡು ಮನೆಯ ಯಜಮಾನನು ದಿಗ್ಗನೆ ಎದ್ದು ಮರ್ಯಾದೆಯಿಂದ ಇಬ್ಬರನ್ನೂ ಉಚಿತಸ್ಥಾನದಲ್ಲಿ ಕುಳ್ಳಿರಿಸಿದನು. ಶ್ರೀರಾಮಚಂದ್ರನು ವಿಭೀಷಣನಿಗೆ ಅಭಯಪ್ರದಾನವನ್ನು ಮಾಡಿದ ಕಥೆಯು ನಡೆಯುತ್ತಲಿದ್ದಿತು. ಕೃಪಾವಿಶಿಷ್ಟನಾದ ಭಗವಂತನ ಮಹಿಮೆಯನ್ನು ದಾಸರು ಹೃದಯಂಗಮವಾಗಿ ವರ್ಣಿಸುತ್ತಲಿದ್ದಾಗ ನೆಟ್ಟ ಕಣ್ಣೂ ಬಿಟ್ಟ ಬಾಯೂ ಆಗಿ ಜನರು ಕೇಳುತ್ತಲಿದ್ದರು. ಕಥೆಯು ಹನ್ನೆರಡು ಗಂಟೆಗೆ ಸರಿಯಾಗಿ ಪೂರ್ತಿಯಾಯಿತು.

ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹೋಗಲು ಎದ್ದರು; ಗಂಗಾಬಾಯಿಯು ತನಗೆ ಪರಿಚಯವಿದ್ದ ಮತ್ತೊಬ್ಬ ಶ್ರೀಮಂತನನ್ನು ಮಾತನಾಡಿಸಲು ಹೋದಳು; ಆಗ ಅಮರನಾಥನು ವೀರಸಿಂಹನ ಬಳಿಗೆ ಬಂದು ಉದಯಸಿಂಹನೇಕೆ ಬರಲಿಲ್ಲ ಎಂದು ದಕ್ಕೆ, ನಾವಿಬ್ಬರೂ ಚಕ್ರಭೀಮನ ಕೋಟೆಯು ಸಮೀಪದಲ್ಲಿ ನಿಂತು ನೋಟವನ್ನು ನೋಡುತ್ತಲಿದ್ದೆವು; ಅವನೆಲ್ಲಿಯೋ ಗುಂಪಿನಲ್ಲಿ ತಪ್ಪಿಸಿ ಕೊಂಡು ಹೋದನು; ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಇದರಿಂದಲೇ ಇಲ್ಲಿಗೆ ನಾನು ಬರುವುದು ಹೊತ್ತಾಯಿತು ಎಂದನು.

ಇಂತಹ ಕಾಳರಾತ್ರಿಯಲ್ಲಿ ಬಲು ಹೊತ್ತು ಹೊರಗಿರುವುದು ತಪ್ಪು ಎಂದು ಅಮರನಾಥನು ಹೇಳಿದ ವೇಳೆಗೆ ಸರಿಯಾಗಿ ಗಂಗಾಬಾಯಿಯು ಬಂದು ಬಹು ರಮ್ಯವಾದ ಈ ಜ್ಯೋತ್ಸ್ನೆಯನ್ನು ನೀವು ಕಾಳರಾತ್ರಿಯೆಂದು ಹೇಳುವುದು ಸರಿಯಲ್ಲ ಎಂದಳು. ಅದಕ್ಕೆ ಅಮರನಾಥನು ನಗುತ್ತ ನಾನು ಇಷ್ಟು ಹೊತ್ತಿನಲ್ಲಿ ಮನೆಗಳಲ್ಲಿರದೆ ಊರಲ್ಲಿ ಅಲೆಯುತ್ತಿರುವರಿಗಾಗಿ ಆ ಮಾತನ್ನಾಡಿದೆನಲ್ಲದೆ ಇಲ್ಲಿ ಬಂದಿರುವವರ ವಿಷಯದಲ್ಲಿ ಹೇಳಲಿಲ್ಲ. ಇಲ್ಲಿರುವವರು ನಿನ್ನ ಮುಖಚಂದ್ರನಿಂದ ಪ್ರಸರಿಸಿರುವ ಬೆಳ್ಳಗೆಯೆಂಬ ಚಂದ್ರಿಕೆಯಲ್ಲಿ ವಿಹರಿಸುತ್ತಲಿರುವರು ಎಂದನು.

ಹಾಗಾದರೆ ಹೊರಗೆ ಸುತ್ತುವರಾರು?

ನಮ್ಮ ಉದಯಸಿಂಹ ಎಂದು ವೀರಸಿಂಹನು ಹೇಳಲು, ಗಂಗಾಬಾಯಿಯು

ಅವನು ಇಂತಹ ಕಡೆಗೆ ಹೋದನೆಂಬುದು ತಿಳಿಯದೋ ಎಂದು ಕೇಳಿದುದಕ್ಕೆ ಇಲ್ಲ ವೆಂದನು.

ಅವನನ್ನು ಹಾಗೆ ಒಬ್ಬನನ್ನೇ ನೀವು ಬಿಡಬಾರದಾಗಿದ್ದಿತು.

ಹಾಗೆ ಹೋಗುವುದರಲ್ಲಿ ಅವಾಯವೇನು ಎಂದು ವೀರಸಿಂಹನು ಕೇಳಲು, ಯಾರು ಬಲ್ಲರು; ಈ ಊರಿನಲ್ಲಿ ಕಳ್ಳರ ಕಾಟ ಬಲ; ಸಮರಾತ್ರೆ; ಊರಿನ ಪಕ್ಕದಲ್ಲೇ ನದಿ ಎಂದಳು. ಇದನ್ನು ಕೇಳುತಲೆ ವೀರಸಿಂಹನಿಗೆ ಪಶುಪತಿಯು ಹೇಳಿದ್ದ ಕತೆಯು ಜ್ಞಾಪಕಕ್ಕೆ ಬಂದು ಸರ್ವಾಂಗವೂ ನಡ ಗಿತು. ನಾನು ಹೊರಟಾಗ ಉದಯಸಿಂಹನು ಬಿಡಾರಕ್ಕೆ ಬಂದ ಕೂಡಲೆ ನನಗೆ ತಿಳಿಸೆಂದು ಪಶುಪತಿಗೆ ಹೇಳಿ ಬಂದಿದ್ದೆ. ಆವ ಸಮಾಚಾರವೂ ಬರಲಿಲ್ಲವಾಗಿ ನನಗೆ ಬಲು ಯೋಚನೆಯಾಗಿದೆ ಎಂದನು.

ಇಷ್ಟು ಹೊತ್ತಿಗೆ ಅಮರನಾಥನ ಆಳು ವೀರಸಿಂಹನನ್ನು ಹುಡುಕಿಕೊಂಡು ಬಂದು, ಮಹಾಸ್ವಾಮೀ! ಆವನೋ ಒಬ್ಬನು ಉದಯಸಿಂಹರಿಂದ ಒಂದು ಲೇಖನ ವನ್ನು ತಂದಿರುವನೆಂದು ಪಶುಪತಿಯು ಹೇಳಿಕಳುಹಿಸಿದ್ದಾನೆ ಎಂದನು.

ಅವನೆಲ್ಲಿ? "ಹೊರಗೆ ನಿಂತಿದ್ದಾನೆ"

ಆಗ ವೀರಸಿಂಹ, ಗಂಗಾಬಾಯಿ, ಅಮರನಾಥ, ಎಲ್ಲರೂ ಹೊರಗೆ ಬಂದು ವಿಚಾರಿಸಲು, ಆಳು ಲೇಖನವನ್ನಿಟ್ಟುಕೊಂಡು ವೀರಸಿಂಹನ ಬಿಡಾರದಲ್ಲಿರುವನೆಂದು ತಿಳಿಯಿತು. ವೀರಸಿಂಹನು ಗಂಗಾಬಾಯಿ ಅಮರನಾಥರನ್ನು ಕುರಿತು ನಾನು ಬಿಡಾ ರಕ್ಕೆ ಹೋಗಿ ನೋಡುತ್ತೇನೆ ಎಂದು ಹೇಳಲು, ಅವರಿಬ್ಬರೂ ಬೇಗನೆ ಹೋಗು; ಅಯ್ಯೋ ಪಾಪ ಅವನ ಗತಿ ಏನಾಗಿರುವುದೋ? ಎಂದರು.

ಇದೋ ಹೊರಟೆ.

ಪುನಃ ನೋಡಬಹುದಷ್ಟೆ ಎಂದು ಗಂಗಾಬಾಯಿಯು ಕೇಳಲು, ವೀರ ಸಿಂಹನು ಪ್ರಮಾದವೇನೂ ಇಲ್ಲದಿದ್ದರೆ ಸಮಾಚಾರವನ್ನು ತಿಳಿಸಲು ಅಗತ್ಯವಾಗಿ ಬರುವೆನು; ಇಲ್ಲದಿದ್ದರೆ ನಾನೇನ ಮಾಡುವೆನೋ ಗೊತ್ತಿಲ್ಲ ಎಂದನು.

ಹೇಗಾದರೂ ಆಗಲಿ, ವಿವೇಕವನ್ನು ಬಿಟ್ಟು ಕೆಲಸ ಮಾಡಬೇಡಿ.

ಆ ವಿಷಯವಾಗಿ ನೀವು ಯೋಚಿಸಬೇಕಾದುದಿಲ್ಲ ಎಂದು ಹೇಳಿ ವೀರ ಸಿಂಹನು ಹೊರಟು ತನ್ನ ಬಿಡಾರದ ಹತ್ತಿರಕ್ಕೆ ಬರುತ್ತಲೆ, ಮುಸುಕ ಹಾಕಿಕೊಂಡು

ಸ್ವಲ್ಪ ಮರೆಯಾಗಿ ನಿಂತಿದ್ದ ಮನುಷ್ಯನೊಬ್ಬನನ್ನು ನೋಡಿ ಉದಯಸಿಂಹನಿಂದ ಲೇಖನವನ್ನು ತಂದಿರುವವನು ನೀನೇಯೋ ಎಂದು ಕೇಳಿದನು.

ಪಶುಪತಿಯು ಭೋಜನ ಶಾಲೆಯಲ್ಲಿ ಬಿಡಾರ ಮಾಡಿರುವರು ತಾವೇಯೋ?

ಅಹುದು.

ಉದಯಸಿಂಹರ ಸ್ನೇಹಿತರು ತಾನೇಯೋ? ಹೂ.

ತಮ್ಮ ಹೆಸರು? ವೀರಸಿಂಹ.

ಹಾಗಾದರೆ ಇದೇ ಉದಯಸಿಂಹರು ತಮಗೆ ಕೊಟ್ಟ ಕಾಗದ ಎಂದು ಅದನು ಕಯ್ಯಲ್ಲಿ ಕೊಟ್ಟನು.

ಅದಕ್ಕೆ ಬದಲು ಏನಾದರೂ ಬೇಕೋ?

ಬದಲು ಬೇಕೆಂದು ತೋರುತ್ತದೆ.

ಹಾಗಾದರೆ ಒಳಕ್ಕೆ ಬಾ.

ಕ್ಷಮಿಸಬೇಕು, ನಾನಿಲ್ಲಿಯೇ ಇರುತ್ತೇನೆ.

ಏಕೆ? "ಕಾಗದವನ್ನು ಓದಿದರೆ ಗೊತ್ತಾಗುತ್ತದೆ."

ಹಾಗಾದರೆ ಸರಿ ಎಂದು ವೀರಸಿಂಹನು ತನ್ನ ಕೊಟ್ಟಡಿಯನ್ನು ಸೇರುವ್ರದರೊಳಗಾಗಿಯೇ ಪಶುಪತಿಯು ಬಂದು ಮಹಾಸ್ವಾಮೀ, ಉದಯಸಿಂಹರು ತಮಗೆ ಕಳುಹಿಸಿದ್ದ ಕಾಗದವ್ರ ಕೈಸೇರಿತೋ ಎಂದನು.

ಈಗ ತಾನೇ ಬಂದಿತು, ಸ್ವಲ್ಪ ದೀಪವನ್ನು ಹೊತ್ತಿಸು.

ಬೆಳಕಿನಲ್ಲಿ ಪಶುಪತಿಯು ವ್ಯಾಕುಲಚಿತ್ತನಾಗಿದ್ದುದನ್ನು ಕಂಡು ವೀರಸಿಂಹನು ದಿಗಿಲುಪಟ್ಟನು. ಕಾಗದದಲ್ಲಿ ಈ ರೀತಿ ಬರೆದಿದ್ದಿತು:—

ಅಯ್ಯಾ ಸ್ನೇಹಿತನೇ, ಈ ಕಾಗದವನ್ನು ತರುವವನ ಕಯ್ಯಲ್ಲಿ ಆರುಸಾವಿರ ವರಹಗಳನ್ನು ಒಡನೆಯೇ ಕಳುಹಿಸು. ನನ್ನ ಪೆಟ್ಟಿಗೆಯಲ್ಲಿ ಬಂದು ವೇಳೆ ಅಷ್ಟು ಹಣ ವಿಲ್ಲದಿದ್ದರೆ ನಿನ್ನಲ್ಲಿರುವ್ರದನ್ನೂ ಜತೆಮಾಡಿ ಕಳುಹಿಸು. ಈ ಹಣವು ಅಗತ್ಯವಾಗಿ ಈಗಲೇ ಬೇಕು. ಇಂದ್ರಪ್ರಸ್ಥದಲ್ಲಿ ಕಳ್ಳರಿರುವರೆಂದು ನನಗೂ ಈಗ ಗೊತ್ತಾಯಿತು.

ಇದರ ಕೆಳಗೆ "ನಾಳೆಯ ದಿನ ಸೂರ್ಯೋದಯದೊಳಗಾಗಿ ಈ ಹಣವು ಬಾರದಿದ್ದರೆ ಉದಯಸಿಂಹನು ಜೀವಸಹಿತವಿರಲಾರನು. ಲುಂಗಿಬಂಪ" ಎಂದಿದ್ದಿತು.

ಇದನ್ನು ಓದಿದ ಒಡನೆಯೇ ಉದಯಸಿಂಹನು ಬಾರದಿದ್ದುದಕ್ಕೆ ಕಾರಣವು ಗೊತ್ತಾಯಿತು. ಅವನ ಪೆಟ್ಟಿಗೆಯನ್ನು ತೆರೆದು ನೋಡಲು, ನಾಲ್ಕು ಸಾವಿರದ ಐನೂರರವತ್ತು ವರಹಗಳಿದ್ದುವು. ತಾನು ಇಂದ್ರಪ್ರಸ್ಥದಲ್ಲಿ ಬಹು ದಿನಗಳು ನಿಲ್ಲುವ ಯೋಚನೆಯಿಲ್ಲದಿದ್ದುದರಿಂದ ತನ್ನಲ್ಲಿ ಒಂದು ಸಾವಿರದ ನಾನೂರ ನಲವತ್ತು ವರಹಗಳು ಇರಲಾರವು, ಎಷ್ಟಿರುವುವೋ ನೋಡೋಣವೆಂದು ವೀರಸಿಂಹನು ತನ್ನ ಪೆಟ್ಟಿಗೆಯನ್ನು ತೆರೆದು ನೋಡಲು ನಾನೂರ ಇಪ್ಪತ್ತು ವರಹಗಳು ಮಾತ್ರವಿದ್ದುವು. ಇನ್ನು ಸಾವಿರದ ನೂರ ಇಪ್ಪತ್ತು ವರಹಗಳನ್ನು ಹೇಗೆ ಜತೆಮಾಡುವುದೆಂದು ಯೋಚಿಸುತ್ತಿರುವಾಗ ಅವನಿಗೆ ಮಲಯಸಿಂಹನ ನೆನಪು ಬಂದು, ಪಶುಪತಿಯನ್ನು ಕರೆದು ನಾನು ರಾಜಾಮಲಯಸಿಂಹರನ್ನು ಒಡನೆಯೇ ನೋಡಬೇಕಾಗಿದೆ, ಅವರು ಇದಾರೆಯೇ ನೋಡಿಬಾ ಎಂದನು. ಪಶುಪತಿಯು ನೋಡಿ ಬಂದು ಮಹಾಸ್ವಾಮೀ, ರಾಜರು ಇದ್ದಾರೆ, ಭೇಟಿ ಮಾಡಬಹುದು ಎಂದು ಹೇಳಿದನು.

ಒಡನೆಯೇ ವೀರಸಿಂಹನು ಮಲಯಸಿಂಹನ ಕೊಟ್ಟಡಿಗೆ ಹೋದನು. ಅವನು ಇದೇನು ಇಷ್ಟು ಹೊತ್ತಿನಲ್ಲಿ ಜಿಜಯಮಾಡಿಸಿದಿರಿ ಎನ್ನಲು, ಸ್ವಾಮೀ, ಉದಯಸಿಂಹನಿಗೆ ದೊಡ್ಡ ಗಂಡವು ಬಂದಿದೆ. ತಮ್ಮ ಸಾಹಾಯ್ಯವನ್ನು ಬಯಸಿ ಬಂದೆನು.

ಅಂತಹ ಅಪಾಯವಾವುದು?

ಈ ಕಾಗದವನ್ನು ನೋಡಿದರೆ ತಮಗೆ ಎಲ್ಲವೂ ಗೊತ್ತಾಗುವುದು. ಈ ವಿಷಯವಾಗಿ ತಮಗೇನು ತೋರುತ್ತದೆ?

ಲುಂಗಿಬಂಪನು ಬರೆದಿರುವಂತೆ ಹಣವನ್ನು ಸೂರ್ಯೋದಯದೊಳಗಾಗಿ ಕೊಡದಿದ್ದರೆ ಉದಯಸಿಂಹನು ಬದುಕುವ ಸಂಭವವೇ ಇಲ್ಲ; ಅವನು ಕೇಳುವಷ್ಟು ಹಣವು ನಿಮ್ಮಲ್ಲಿದೆಯೋ?

ಇಲ್ಲ; ಒಂದು ಸಾವಿರದ ನೂರ ಇಪ್ಪತ್ತು ವರಹಗಳು ಬೇಕಾಗಿವೆ.

ಆಗ ಮಲಯಸಿಂಹನು ತನ್ನ ಕೈಪೆಟ್ಟಿಗೆಯನ್ನು ತರಿಸಿ ಅದರಲ್ಲಿದ್ದ ಹಣದ ಚೀಲವನ್ನು ತೆಗೆದು ವೀರಸಿಂಹನ ಮುಂದಿಟ್ಟು ನಿಮಗೆ ಎಷ್ಟು ಹಣ ಬೇಕೋ ಅಷ್ಟನ್ನು ತೆಗೆದುಕೊಂಡು ಈಗಲೇ ಕಳ್ಹಿಸಿ ಎಂದನು,

ಸ್ವಾಮೀ, ಲುಂಗಿಬಂಪನಿಗೆ ಈ ಹಣವನ್ನು ಕೊಟ್ಟೀ ತೀರಬೇಕೋ?

ನೀವೇ ಯೋಚಿಸಿ ನೋಡಿ.

ತಾವು ಇಷ್ಟಪಟ್ಟರೆ ಅವನಿಗೆ ಒಂದು ಕಾಸನ್ನೂ ಕೊಡದೆ ಉದಯಸಿಂಹನನ್ನು ಬಿಡಿಸಿಕೊಂಡು ಬರಬಹುದು.

ಅದನ್ನು ಕೇಳಿ ಮಲಯಸಿಂಹನು ಸ್ವಲ್ಪ ಬೆಚ್ಚಿ ಅದು ಹೇಗೆ ಎನ್ನಲು ತಾವು ಅವನೊಡನೆ ಒಂದು ಮಾತನಾಡಿದರೆ ಸಾಕು; ಅವನು ಉದಯಸಿಂಹನನ್ನು ಖಂಡಿತ ವಾಗಿ ಬಿಡುವನು.

ಅವನ ಮೇಲೆ ನನ್ನ ಅಧಿಕಾರವೇನಿದೆ?

ಅವನಿಗೆ ತಾವು ಈಗ ತಾನೆ ಒತ್ತಾಸೆಯನ್ನು ಮಾಡಿರುವಿರಿ, ಅದನ್ನು ಅವನು ಮರೆತಿರಲಾರ.

ನಾನು ಅವನಿಗೆ ಆವ ಉಪಕಾರ ಮಾಡಿದೆ?

ಪ್ರತಿರೋಧಿಯನ್ನು ಬಿಡಿಸಿ ಕೊಟ್ಟಿರಿ.

ನಾನು ಬಿಡಿಸಿಕೊಟ್ಟಿನೆಂದು ನಿಮಗಾರು ಹೇಳಿದರು?

ಆರಾದರೂ ಹೇಳಲಿ, ನಾನದನ್ನು ಒಲ್ಲೆನು ಎಂದು ವೀರಸಿಂಹನು ಹೇಳಲು, ಮಲಯಸಿಂಹನು ಹುಬ್ಬುಗಳನ್ನು ಗಂಟುಹಾಕಿಕೊಂಡು ಸ್ವಲ್ಪಹೊತ್ತು ಯೋಚಿಸಿ, ನಾನು ಬಂಪನ ಬಳಿಗೆ ಹೋದರೆ ನೀವೂ ಜತೆಯಲ್ಲಿ ಬರುವಿರೋ ಎಂದನು.

ತಮಗೆ ಅಸಮಾಧಾನವಾಗದಿದ್ದರೆ ಆಗಬಹುದು.

ಹಾಗಾದರೆ ಹೊರಡೋಣ ಏಳಿ ಎನ್ನಲು, ವೀರಸಿಂಹನು ಆಯುಧವನ್ನು ತರಲೋ ಎಂದು ಕೇಳಿದನು.

ಏತಕ್ಕೆ? ಅದರಿಂದ ಏನೂ ಪ್ರಯೋಜನವಿಲ್ಲ. ಈ ಕಾಗದವನ್ನು ತಂದ ವನೆಲ್ಲಿ? "ಜೀದಿಯಲ್ಲಿ ನಿಂತಿದ್ದಾನೆ."

ಅವನನ್ನು ಕರೆಸೋಣ. "ಅವನಿಲ್ಲಿಗೆ ಬರುವುದಿಲ್ಲ."

ನಾನು ಕೂಗಿದರೆ ಅವನು ಬಾರದಿರನು. ಎಂದು ಬೀದಿಯ ಕಿಟಕಿಯ ಸಮೀಪಕ್ಕೆ ಹೋಗಿ ಒಂದು ವಿಧವಾಗಿ ಸಿಳ್ಳು ಹಾಕಿದನು. ಕೂಡಲೆ ಬೀದಿಯಲ್ಲಿ ನಿಂತಿದ್ದ

ವನು ಬೇಗಬೇಗನೆ ಮಹಡಿಯನ್ನು ಹತ್ತಿ ಬಂದು, ಮಲಯಸಿಂಹನ ಕಾಲಿನ ಮೇಲೆ ಬಿದ್ದು ತಾವು ಮಾಡಿದ ಉಪಕಾರವನ್ನು ನಾನೆಂದಿಗೂ ಮರೆಯಲಾರೆ ಎಂದನು.

ಇದೇನು ಪ್ರತಿರೋಧಿ, ಸಮಾಚಾರವೇನು, ಎಂದು ಮಲಯಸಿಂಹನು ಕೇಳಲು ಪ್ರತಿರೋಧಿಯು ವೀರಸಿಂಹನನ್ನು ನೋಡಿ ಸುಮ್ಮನಿದ್ದನು. ಆದನ್ನರಿತು ಮಲಯಸಿಂಹನು ಅವರು ನಮ್ಮ ಸ್ನೇಹಿತರು; ನಡೆದ ಸಂಗತಿಯನ್ನು ಧಾರಾಳವಾಗಿ ನೀನು ತಿಳಿಸಬಹುದು ಎಂದನು.

ಮಹಾಸ್ವಾಮೀ, ತಾರಕೆಯ ಬಂಡಿಯೂ ಉದಯಸಿಂಹನ ಬಂಡಿಯೂ ಉತ್ಸವ ಕಾಲದಲ್ಲಿ ಅನೇಕಾವೃತ್ತಿ ಸಂಧಿಸಿದಾಗ—

ತಾರಕೆ ಯಾರು? "ನಮ್ಮ ಯಜಮಾನನ ಹೆಂಡತಿ."

ಸಂಧಿಸಿದಾಗ ಏನಾಯಿತು?

ಉದಯಸಿಂಹನು ಅವಳನ್ನು ನೋಡಿ ಮೋಹಿಸಿ ತನ್ನ ಕೈಯಲ್ಲಿದ್ದ ಹೂವಿನ ಚೆಂಡನ್ನು ಅವಳ ಮೇಲೆ ಹಾಕಲು, ಬಂಪನ ಅನುಮತಿಯಿಂದ ಅವಳು ಬಂದು ಗುಲಾಬಿ ಹೂವನ್ನು ಅವನ ಮೇಲೆ ಎಸೆದಳು.

ಅವಳ ಪಕ್ಕದಲ್ಲಿ ಆಗ ಲಂಗಿ ಬಂಪನು ಇದ್ದನೋ ಎಂದು ವೀರಸಿಂಹನು ಕೇಳಲು, ಮಹಾಸ್ವಾಮೀ! ಅವನು ಸಾರಥಿಯಂತೆ ವೇಷವನ್ನು ಹಾಕಿಕೊಂಡು ಬಂಡಿಯನ್ನು ನಡೆಸುತ್ತಲಿದ್ದನು ಎಂದನು.

ಆಮೇಲೇನಾಯಿತು?

ಮತ್ತೊಂದು ಸಾರಿ ಅವರ ರಥಗಳು ಸಂಧಿಸಿದಾಗ ಗಂಡನ ಅನುಮತಿಯಿಂದ ತಾರಕೆಯು ತನ್ನ ಮುಖದ ತೆರೆಯನ್ನು ತೆಗೆದು ಸಂಜ್ಞೆಯನ್ನು ಮಾಡಿದಳು. ಪುನಃ ತಾರಕೆಯ ಬಂಡಿ ಸಿಕ್ಕಿದಾಗ ಉದಯಸಿಂಹನು ಹೂವಿನ ಚೆಂಡಿನಲ್ಲಿ ಬಂದು ಚೀಟನ್ನಿಟ್ಟು ಅವಳ ಮೇಲೆ ಎಸೆಯಲು, ಅವಳು ಅದನ್ನು ಬಂಪನಿಗೆ ತೋರಿಸಿ ಅವನು ಹೇಳಿದಂತೆ ಬಂದು ಸ್ಥಾನವನ್ನು ಗೊತ್ತುಮಾಡಿ ಅಲ್ಲಿಗೆ ನೀವು ಸಾಯಂಕಾಲ ಬಂದರೆ ನಿಮ್ಮ ಆಸೆಯು ಪೂರ್ತಿಯಾಗುವುದು ಎಂಬ ಅಭಿಪ್ರಾಯವುಳ್ಳ ಬದಲು ಚೀಟನ್ನು ಬರೆದು ಅದನ್ನು ಒಂದು ರೋಜಾಹೂವಿನ ಗೊಂಚಲಿನಲ್ಲಿ ಸಿಕ್ಕಿಸಿ ಉದಯಸಿಂಹನ ಮೇಲೆ ಹಾಕಿದಳು. ಅದನ್ನು ನೋಡಿಕೊಂಡು ಉದಯಸಿಂಹನು ಸಂತೋಷದಿಂದ ಮೈಯುಬ್ಬಿ

ದವನಾಗಿ ಏರ್ಪಾಡಾಗಿದ್ದ ಸ್ಥಳಕ್ಕೆ ಬಂದಾಗ ತಾರಕೆಗೆ ಬದಲಾಗಿ ದೇವದೂತನು ಹೆಣ್ಣು ವೇಷವನ್ನು ಹಾಕಿಕೊಂಡು ಬಂದು ಅವನನ್ನು ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಹೋದನು. ಉದಯಸಿಂಹನು ಕೊಂಚ ಹೊತ್ತಿನ ವರೆಗೆ ನೆಮ್ಮದಿಯಾಗಿದ್ದು ಬಂಡಿಯು ಊರ ಹೊರಗೆ ಹೋದಮೇಲೆ ದೇವದೂತನ ಮೇಲೆ ಕೈ ಹಾಕಲು ಅವನು ಪಿಸ್ತೂಲನ್ನು ಗುರಿಕಟ್ಟಿ ಸುಮ್ಮನಿದ್ದರೆ ಸರಿ, ಇಲ್ಲವಾದರೆ ನಿನ್ನ ಪ್ರಾಣವು ಉಳಿಯದು ಎಂದನು. ಆಗ ಉದಯಸಿಂಹನು ಇಳಿದು ಓಡಿ ಹೋಗಬೇಕೆಂದು ಪ್ರಯತ್ನಮಾಡಲು ದೇವದೂತನು ತನ್ನ ಜತೆಯಲ್ಲಿದ್ದ ನಾಲ್ವರೊಡನೆ ಅವನನ್ನು ಕರೆದುಕೊಂಡು ಹೋಗಿ ಬಂಪನಲ್ಲಿ ಬಿಟ್ಟನು.

ಅದನ್ನು ಕೇಳಿ ಮಲಯಸಿಂಹನು ವೀರಸಿಂಹನ ಮುಖವನ್ನು ನೋಡಿ ಇವನು ಹೇಳುವುದು ನಿಜ ; ನೀವೇನು ಹೇಳುತ್ತೀರಿ ? ಎಂದನು.

ಉದಯಸಿಂಹನಿಗಲ್ಲದೆ ಮತ್ತಾರಿಗಾದರೂ ಈ ಅವಸ್ಥೆಯು ಪ್ರಾಪ್ತವಾಗಿದ್ದಿದ್ದರೆ ಬಹು ವಿನೋದವಾದ ಸಂಗತಿಯೆಂದೇ ಹೇಳುತ್ತಿದ್ದೆನು.

ನೀವು ಈಗ ನನ್ನ ಬಳಿ ಬಾರದೆ ಇದ್ದಿದ್ದರೆ, ಮಾಡಿದ ಕಾರ್ಯಕ್ಕಾಗಿ ಉದಯ ಸಿಂಹರು ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಲಿದ್ದರು. ಈಗ ಆ ಭಯವೇನೂ ಇಲ್ಲ.

ನಾವು ಹೋದರೆ ಅವನು ಸಿಕ್ಕುವನೋ ?

ಓಹೋ ! ಅದರಲ್ಲಿ ಏನೂ ಅಡ್ಡಿ ಇಲ್ಲ. ಅವರಿರುವ ಸ್ಥಳವು ಬಲು ಅಂದವಾಗಿದೆ ; ಅದೂ ನೋಡಬೇಕಾದುದೇ.

ಹೊರಡೋಣವೋ ? " ಹೊರಡೋಣ "

ನಿಮ್ಮ ರಥವು ಸಿದ್ಧವಾಗಿದೆಯೋ ? " ಇಲ್ಲ "

ಚಿಂತೆಯಿಲ್ಲ ; ನನ್ನ ಬಂಡಿಯು ಆವಾಗಲೂ ಸಿದ್ಧವಾಗಿರುವುದು. ಏಳಿರಿ ಎಂದು ಹೇಳಿ, ಯಾರೋ ಅಲ್ಲಿ ಎಂದು ಕೂಗಿದ ಕೂಡಲೆ ಒಬ್ಬ ಆಳು ದಡ ದಡನೆ ಓಡಿ ಬಂದು ಮಹಾಸ್ವಾಮೀ, ಏನಪ್ಪಣೆ ಎಂದನು.

ಬಂಡಿಯನ್ನು ಸಿದ್ಧಪಡಿಸಿ, ಅದರಲ್ಲಿರುವ ಪಿಸ್ತೂಲುಗಳನ್ನು ತೆಗೆದು ಒಳಗೆ ಇಡು. ಸಾರಥಿಯು ನಿದ್ದೆಮಾಡುತ್ತಲಿರುವನು, ಅವನನ್ನು ಎಬ್ಬಿಸಬೇಡ ; ವಾಮನಭಟ್ಟನು ಬಂಡಿಯನ್ನು ಹೊಡೆಯುವನು ಎನ್ನಲು, ಸ್ವಲ್ಪಕಾಲದಲ್ಲಿಯೇ ರಥವು ಸಿದ್ಧವಾಗಿ ಬಿಡಾರದ ಮುಂದೆ ಬಂದು ನಿಂತಿತು.

ಆಗ ಇಬ್ಬರೂ ಅದರಲ್ಲಿ ಕುಳಿತರು; ಪ್ರತಿರೋಧಿಯು ವಾಮನಭಟ್ಟನ ಪಕ್ಕದಲ್ಲಿ ಕುಳಿತನು. ಕೋಟೆಯ ಬಾಗಿಲನ್ನು ಸೇರುತ್ತಲೇ ಅಲ್ಲಿದ್ದ ಕಾವಲುಗಾರನು ಇಷ್ಟು ಹೊತ್ತಿನಲ್ಲಿ ಹೊರಗೆ ಬಿಡುವುದಿಲ್ಲ ಎಂದು ಬಂಡಿಯನ್ನು ತಡೆದನು. ಮಲಯಸಿಂಹನು ಅವ ವೇಳೆಯಲ್ಲಿ ಎಲ್ಲಿಗೆ ಹೋಗಬೇಕಾದರೂ ತಡೆ ಮಾಡದೆ ತನ್ನನ್ನು ಬಿಡಬೇಕೆಂದು ಇಂದ್ರಪ್ರಸ್ಥದ ರಾಜನು ತನಗೆ ಕೊಟ್ಟಿದ್ದ ನಿರೂಪವನ್ನು ತೋರಿಸಲು ಅವನು ಬಾಗಿಲನ್ನು ತೆಗೆದು ಬಂಡಿಯನ್ನು ಹೊರಕ್ಕೆ ಬಿಟ್ಟನು. ಸ್ವಲ್ಪದೂರ ಹೋದ ಅನಂತರ ಬಂಡಿಯು ನಿಂತಿತು; ಪ್ರತಿರೋಧಿಯು ಇಳಿದು ಬಾಗಿಲನ್ನು ತೆಗೆದು ಮಹಾ ಸ್ವಾಮೀ, ಇನ್ನಮುಂದೆ ಬಂಡಿಯು ಹೋಗಲಾರದು ಎಂದನು.

ಆಗ ವೀರಸಿಂಹ ಮಲಯಸಿಂಹರಿಬ್ಬರೂ ಇಳಿದರು. ಅಷ್ಟರಲ್ಲಿಯೇ ಪ್ರತಿರೋಧಿಯು ಮಾರ್ಗದ ಪಕ್ಕದಲ್ಲಿದ್ದ ಬಂಡೆಯ ಸಮೀಪ ಹೋಗಿ ಅಲ್ಲಿ ಹೊದರಿನಲ್ಲಿದ್ದ ದೀವಟಿಗೆಯನ್ನು ಹೊತ್ತಿಸಿಕೊಂಡು ಬಂದನು. ಇವರೂ ಅವನ ಹಿಂದೆ ಹೊರಟರು. ಎಲ್ಲರೂ ತಗ್ಗು ಪ್ರದೇಶವನ್ನಿಳಿದು ಕಾಲು ದಾರಿಯಲ್ಲಿ ಹೋಗುತ್ತಿರುವಾಗ ಒಂದು ಕಡೆ ಇಬ್ಬರು ಕಾವಲುಗಾರರನ್ನು ಕಂಡು ವೀರಸಿಂಹನು ನಾವಿಲ್ಲೇ ನಿಲ್ಲಬೇಕೋ ಎನ್ನಲು ಮಲಯಸಿಂಹನು ಅವಶ್ಯಕವಿಲ್ಲ, ಅವರಿಗೆ ಹೇಳಬೇಕಾದುದನ್ನು ಪ್ರತಿರೋಧಿಯು ಹೇಳುವನು ಎಂದನು.

ಪ್ರತಿರೋಧಿಯು ಮುಂದೆ ಹೋಗಿ ಕಾವಲುಗಾರರಿಗೆ ಬರುವರು ಇಂಥವರೆಂದು ತಿಳಿಸಲು, ಅವರು ವೀರಸಿಂಹ ಮಲಯಸಿಂಹರನ್ನು ನೋಡಿ ಮುಂದೆ ಜಿಜ್ಞಾಸಮಾಡಿಸ ಬಹುದು ಎಂದರು.

ಅನಂತರ ಅವರು ಒಂದು ಹೊದರಿನ ಸಂದಿನಲ್ಲಿ ನುಗ್ಗಿ, ಗುಹೆಯಂತಿದ್ದ ದಾರಿಯನ್ನು ಹೊಕ್ಕು, ಸ್ವಲ್ಪ ದೂರ ಬಗ್ಗಿ ಹೋದ ಮೇಲೆ ಒಂದು ಒಯಲು ಸಿಕ್ಕಿತು. ಅಲ್ಲಿಯ ಕಾವಲುಗಾರರು ಅದಾರು ಎಂದು ಗದ್ದರಿಸಲು ಪ್ರತಿರೋಧಿಯು ಅವರ ಸಮೀಪ ಹೋಗಿ ಕೆಲವು ಮಾತುಗಳನ್ನಾಡಿದನು. ಅವರೂ ಇವರಿಗೆ ಮರ್ಯಾದೆಯನ್ನು ಮಾಡಿ ಜಿಜ್ಞಾಸಮಾಡಬಹುದೆಂದು ಹೇಳಿದರು.

ಮಲಯಸಿಂಹನು ವೀರಸಿಂಹನ ಕಯ್ಯನ್ನು ಹಿಡಿದು, ಕೆಲವು ಮೆಟ್ಟಲುಗಳನ್ನು ಏರಿ ಇಳಿದು ಒಂದು ಕಡೆ ನಿಂತು ನೋಡಲು, ಅಲ್ಲಿ ಕೆಲವು ಕಟ್ಟಡಗಳು ಕಾಣಿಸಿದುವು.

ಒಂದು ಪಡಸಾಲೆಯಲ್ಲಿ ದೀಪವನ್ನಿಟ್ಟುಕೊಂಡು ಅವನೋ ಒಬ್ಬನು ಒಂದು ಪುಸ್ತಕವನ್ನು ಓದುತ್ತಲಿದ್ದನು. ಅವನ ಸುತ್ತಮುತ್ತಲೂ ಅಲ್ಲಲ್ಲಿ ಕೆಲವರು ಕಟ್ಟಡಗಳಲ್ಲಿಯೂ ಕೆಲವರು ಒಯಲಿಸಲ್ಲಿಯೂ, ಕೆಲವರು ಮರಗಳ ಕೆಳಗೂ, ಕಂಬಳಿಗಳನ್ನೂ ತೊಗಲುಗಳನ್ನೂ ಹೊದ್ದು ತುಪಾಕಿಗಳನ್ನು ಪಕ್ಕದಲ್ಲಿಟ್ಟುಕೊಂಡು ಮಲಗಿದ್ದರು.

ವೀರಸಿಂಹನು ಈ ಸನ್ನಿವೇಶವನ್ನು ಚೆನ್ನಾಗಿ ನೋಡಿದನೆಂದು ಮಲಯಸಿಂಹನು ತಿಳಿದು, ಕೂಡಲೇ, ಸದ್ದುಮಾಡಬೇಡವೆಂದು ಸಂಜ್ಞೆಮಾಡಿ, ಮೆಲ್ಲಗೆ ಒಂಪನಿದ್ದೆಡೆಗೆ ಹೊರಟನು. ಆಗ ಇದಿರಿಗಿದ್ದ ಕಾವಲುಗಾರನು ಅದಾರು ಎಂದು ಕೂಗಲು, ಕಳ್ಳರೆಲ್ಲರೂ ತುವಾಕಿಗಳನ್ನು ಕಯ್ಯಲ್ಲಿ ಪಿಡಿದು ಒಂದೇಸಾರಿ ಎದ್ದು ಮಲಯಸಿಂಹ ವೀರಸಿಂಹರಿಗೆ ಗುರಿಕಟ್ಟಿದರು. ಆಗ ಮಲಯಸಿಂಹನು ಲೇಶವೂ ಭಯಪಡದೆ ಅಲ್ಲಿಯೇ ನಿಂತು ಒಂಪನನ್ನು ಕರಿತು ಏನಪ್ಪ ಒಂಪ, ನಿನ್ನನ್ನು ನೋಡಬಂದರೆ ನಿನ್ನ ಕಡೆಯವರು ನನ್ನನ್ನು ಬಹು ಮರ್ಯಾದೆಯಿಂದ ಕಾಣವಂತೆ ತೋರುತ್ತಲಿದೆ ಎಂದು ಹೇಳಲು, ಅವನು ತುಪಾಕಿಗಳನ್ನು ಕೆಳಗೆ ಇಡಿರಿ. ನಮ್ಮ ಸ್ವಾಮಿಗಳು ಬಂದಿದ್ದಾರೆ ಎಂದು ಎದ್ದು ಮಲಯಸಿಂಹನಿಗೆ ಮರ್ಯಾದೆಮಾಡಿ ಮಹಾಸ್ವಾಮೀ, ತಾವು ಇಷ್ಟು ಹೊತ್ತಿನಲ್ಲಿ ಇಲ್ಲಿಗೆ ವಿಜಯಮಾಡಿಸುವಿರಿ ಎಂದು ನನಗೆ ಹೇಗೆ ತಿಳಿಯುವುದು, ಕ್ಷಮಿಸಬೇಕು ಎಂದನು.

ಇದೇನೋ ಸರಿ. ಆದರೆ ನೀನು ನನ್ನ ಸಂಗಡ ಮಾಡಿಕೊಂಡಿದ್ದ ಮುಗುವಳಿಯನ್ನು ಮರೆತೆಯೋ ?

ಮಹಾಸ್ವಾಮೀ, ನಾನು ಯಾವುದನ್ನು ಮರೆತೆನೋ ಅಪ್ಪಣೆಯಾಗಬೇಕು.

ನನ್ನ ಸ್ನೇಹಿತರ ಮತ್ತು ನನ್ನ ಕಡೆಯವರ ಗೋಜಿಗೆ ಬರುವುದಿಲ್ಲವೆಂದು ನೀನು ಹೇಳಿರಲಿಲ್ಲವೇ ?

ಅಹುದು, ಹೇಳಿದ್ದೆ. ಆದರೆ ಅದರಲ್ಲಿ ಈಗ ವ್ಯತ್ಯಾಸ ಬಂದುದೇನು?

ಈ ಉದಯಸಿಂಹನು ನನ್ನ ಸ್ನೇಹಿತನು : ನಾನಿದ್ದ ಪಿಡಾರದಲ್ಲಿಯೇ ಇಳಿದು, ನನ್ನ ಬಂಡಿಯಲ್ಲಿಯೇ ಓಡಾಡುತ್ತಲಿದ್ದರೂ ನೀನೂ ನಿನ್ನ ಕಡೆಯವರೂ ಅನ್ಯನೆಂದು ಭಾವಿಸಿ ಅವನನ್ನು ಪಿಡುಗಡೆ ಹಣವನ್ನು ಕೇಳಿದ್ದೀರಿ.

ಮಲಯಸಿಂಹನು ಈ ಮಾತನ್ನು ಕೋಪದಿಂದಾಡುತ್ತಲೆ ಒಂಪನು ಗಡಗಡನೆ

ನಡುಗಿ ಕೋಪವಿಂದ ತನ್ನ ಜನಗಳ ಕಡೆ ತಿರುಗಿ ಈ ಸನ್ಯಾಚಾರಗಳನ್ನೆಲ್ಲಾ ನನಗೆ ಏತಕ್ಕೆ ನೀವು ತಿಳಿಸಲಿಲ್ಲ? ಇವರಿಗೆ ನಾನು ಕೊಟ್ಟಿದ್ದ ಮಾತನ್ನು ಸುಳ್ಳುಮಾಡಿದಿರಿ. ಇನ್ನು ಮುಂದೆ ಆರಾದರೂ ಇಂತಹ ಕೆಲಸವನ್ನು ಮಾಡಿದರೆ ಅವರ ತಲೆಯನ್ನು ನುಗ್ಗುನುರಿಮಾಡಿಬಿಡುವೆನು ಎಂದು ಗರ್ಜಿಸಿದನು.

ಆಗ ಮಲಯಸಿಂಹನು ವೀರಸಿಂಹನನ್ನು ನೋಡಿ ಇದು ಒಂಪನ ತಪ್ಪಲ್ಲ ಎನ್ನಲು, ಒಂಪನು ಗಾಬರಿಬಿದ್ದು ಇನ್ನಾರೋ ಬಂದಿರುವಂತಿದೆ ಎಂದನು.

ಇವರು ವೀರಸಿಂಹರು, ಇವರ ಹೆಸರಿಗೇ ನೀನು ಕಾಗದ ಬರೆದಿದ್ದುದು ಎನ್ನಲು, ಅವನು ವೀರಸಿಂಹನನ್ನು ನೋಡಿ ಮಹಾಸ್ವಾಮೀ, ನನಗೆ ಹಣವೇ ಮುಖ್ಯವಲ್ಲ; ಇದು ನಮ್ಮ ಮಹಾಸ್ವಾಮಿಗಳಿಗೆ ಗೊತ್ತು. ನಾಲಗೆಯೊಂದು ಸರಿಯಾಗಿದ್ದರೆ ಲೋಕವೆಲ್ಲವೂ ನಮ್ಮನ್ನು ಗೌರವಿಸುವುದು ಎಂದನು.

ವೀರಸಿಂಹನು ಸುತ್ತಲೂ ನೋಡಿ ಉದಯಸಿಂಹನನ್ನು ಕಾಣದೆ ಅವನೆಲ್ಲಿರುವನೆಂದು ಒಂಪನನ್ನು ಕೇಳಲು, ಇದಿರಿಗಿರುವ ಮಂಟಪವನ್ನು ತೋರಿಸಿ ಅದರಲ್ಲಿದಾರೆ ಎಂದು ಹೇಳಿ ನಾನೇ ಅವರನ್ನು ಕರೆದುಕೊಂಡು ಬರುವೆನು ಎಂದು ಹೊರಟನು. ಅವನ ಜತೆಯಲ್ಲಿ ಇವರೂ ಹೋದರು. ಮಂಟಪದ ಬಾಗಿಲನ್ನು ತೆರೆದು ಒಳಗೆ ನೋಡಲು, ಉದಯಸಿಂಹನು ಗೊರಕೆಯನ್ನು ಹೊಡೆಯುತ್ತಿದ್ದನು.

ಇದನ್ನು ಕಂಡು ಮಲಯಸಿಂಹನು ನಾಳೆಯ ಬೆಳಿಗ್ಗೆ ಸಾಯುವವನು ಇಷ್ಟು ನೆಮ್ಮದಿಯಾಗಿ ಮಲಗಿರುವುದು ವಿಶೇಷವೇ ಸರಿ ಎಂದನು. ಒಂಪನೂ ಇದನ್ನು ನೋಡಿ ಆಶ್ಚರ್ಯಪಟ್ಟನು. ಧೈರ್ಯಶಾಲಿಯೆಂದರೆ ಒಂಪನಿಗೂ ಗೌರವವುಂಟು.

ಒಂಪನು ಉದಯಸಿಂಹನ ಸಮೀಪಕ್ಕೆ ಹೋಗಿ ಅವನನ್ನು ತಟ್ಟಿ ಮಹಾಸ್ವಾಮೀ, ಏಳಬೇಕು ಎನ್ನಲು, ಅವನು ಈಗ ಗಂಟೆ ಎಷ್ಟು ಎಂದನು.

ಸ್ವಾಮೀ! ಬಂದೂವರೆ. ತಾವು ಬಂಧನವಿಮುಕ್ತರಾದಿರಿ.

ವೀರಸಿಂಹನು ಹಣವನ್ನು ಕಳುಹಿಸಿದನೋ? "ಇಲ್ಲ ಮಹಾಸ್ವಾಮಿ"

ಹಾಗಾದರೆ ನನಗೆ ವಿಮೋಚನವು ಹೇಗೆ ಆಯಿತು.

ಮಹಾಸ್ವಾಮೀ, ನನಗೆ ಒಬ್ಬರು ಉಪಕಾರಕರುಂಟು. ಅವರ ಅಪ್ಪಣೆಯನ್ನು ತಲೆಯುಲ್ಲಿಟ್ಟು ನಡೆಸುವೆನು. ಅವರು ಇಲ್ಲಿಗೆ ವಿಜಯಮಾಡಿಸಿದ್ದಾರೆ.

ಉದಯಸಿಂಹನು ಕಣ್ಣನ್ನುಜ್ಜಿಕೊಂಡು ವೀರಸಿಂಹನನ್ನು ನೋಡಿ ಓಹೋ ವೀರಸಿಂಹ! ನನಗಾಗಿ ಇಷ್ಟು ತೊಂದರೆ ತೆಗೆದುಕೊಂಡು ನೀನು ಇಲ್ಲಿಗೆಬಂದೆ; ಸ್ನೇಹ ವೆಂದರೆ ಹೀಗಲ್ಲವೇ ಇರಬೇಕು! ಒಂಪನಿಗೂ ನೀನು ಉಪಕಾರಮಾಡಿರುವಂತೆ ತೋರುತ್ತದೆ ಎಂದನು.

ಅಪ್ಪಾ ಉದಯ! ಇದು ನನ್ನ ಕೆಲಸವಲ್ಲ; ನಮ್ಮ ರಾಜಾವಮಲಯಸಿಂಹರ ಕೃಪೆ ಯಿಂದಾದುದು. ಇಗೋ ನೋಡು ಎಂದು ಮಲಯಸಿಂಹನನ್ನು ತೋರಿಸಿದನು.

ಆಗ ಉದಯಸಿಂಹನು ಎದ್ದು ಸ್ವಾಮೀ! ತಾವು ಮಾಡಿದ ಉಪಕಾರವನ್ನು ನಾನೆಂದಿಗೂ ಮರೆಯುಲಾರೆ. ಮೊದಲು ತಮ್ಮ ಬಂಡಿಯನ್ನು ನನಗೆ ಕೊಟ್ಟು ಈಗ ಇಲ್ಲಿಗೆ ಬಂದು ನನ್ನ ಬಂಧನವನ್ನು ಬಿಡಿಸಿದಿರಿ ಎನ್ನಲು, ಮಲಯಸಿಂಹನು ಏನೋ ಯೋಚನೆ ಮಾಡುತ್ತಲಿದ್ದು ಆವ ಮಾತನ್ನೂ ಆಡದೆ ಇದ್ದನು.

ಒಳಿಕ ಉದಯಸಿಂಹನು ತನ್ನ ಪದಾರ್ಥಗಳನು ತೆಗೆದುಕೊಂಡು, ಇನ್ನು ನಾನು ಹೊರಡಲೋ ಎಂದು ಒಂಪನನ್ನು ಕೇಳಲು, ಅವನು ಆಗಬಹುದು ಎಂದು ಹೇಳಿ ಬಂದು ದೀವಟಿಗೆಯನ್ನು ಹೊತ್ತಿಸಿ, ಮಹಾಸ್ವಾಮಿಗಳು ಇತ್ತ ದಯೆಮಾಡಿಸಿದರೆ ನಾನೇ ದಾರಿ ತೋರಿಸುವೆನು. ನನ್ನಿಂದ ಆವ ಅಪರಾಧವಿದ್ದರೂ ಕ್ಷಮಿಸಬೇಕು ಎಂದನು.

ಅಪ್ಪಾ ಒಂಪ! ನೀನು ಮಾಡುವ ಉಪಚಾರಗಳನ್ನು ನೋಡಿದರೆ ಇಂತಹ ಅಪರಾಧವನ್ನು ಮತ್ತೊಂದು ಸಾರಿ ಮಾಡುವಿಯೋ ಎಂದು ಅನಿಸುವಾಗುವುದು ಎಂದು ಮಲಯಸಿಂಹನು ಹೇಳಿ ಮುಂದಕ್ಕೆ ಹೊರಟನು. ಉದಯಸಿಂಹನು ಅವನ ಹಿಂದೆ ಹೊರಟನು. ವೀರಸಿಂಹನು ಮಾತ್ರ ಸ್ವಲ್ಪ ಅನುಮಾನಿಸಿ ಹಿಂದೆ ನಿಲ್ಲಲು, ಒಂಪನು ಮಹಾಸ್ವಾಮೀ! ನನ್ನನ್ನು ಕೇಳತಕ್ಕುದು ಏನೋ ಇರುವಂತೆ ತೋರುತ್ತದೆ; ಅಪ್ಪಣೆ ಯಾಗಲಿ ಎಂದನು.

ನೀನು ಓದುತ್ತಲಿದ್ದ ಪುಸ್ತಕವು ಆವುದು?

ಅದು ಭಾರತ ಯುದ್ಧ; ಅದನ್ನು ಓದುವುದೆಂದರೆ ನನಗೆ ಬಹಳ ಇಷ್ಟ.

ಈ ಸ್ಥಳವು ಬಲು ಅಂದವಾಗಿದೆ ಎಂದು ಉದಯಸಿಂಹನು ಹೇಳಲು ಒಂಪನು, ಮಹಾಸ್ವಾಮಿಯವರು ಆನ ವೇಳೆಯಲ್ಲಿ ಇಲ್ಲಿಗೆ ವಿಜಯಮಾಡಿಸಿದರೂ ಸೇವಕನು

ಸಿದ್ಧವಾಗಿದ್ದು ತಮ್ಮನ್ನು ಅತ್ಯಾದರದಿಂದ ಕಾಣುವನು ಎಂದು ಮುಂದೆ ಹೋಗುತ್ತಿದ್ದ ಉದಯಸಿಂಹನನ್ನು ಸೇರಿದನು.

ಇಪ್ಪತ್ತೇಳನೆಯ ಅಧ್ಯಾಯ

ಒಪ್ಪಂದ

ಮಾರನೆಯ ದಿನ ಬೆಳಿಗ್ಗೆ ಉದಯಸಿಂಹನು ಮಲಯಸಿಂಹನನ್ನು ನೋಡಬೇಕೆಂದು ಉದ್ದೇಶಪಟ್ಟು, ವೀರಸಿಂಹನನ್ನೂ ಕರೆದನು. ವೀರಸಿಂಹನಿಗೆ ಮಲಯಸಿಂಹನ ವಿಷಯದಲ್ಲಿ ಒಂದು ಒಗೆಯ ಅನುಮಾನವೂ ಭಯವೂ ಇದ್ದುದರಿಂದ ಉದಯಸಿಂಹನೊಡನೆ ಹೋಗಲು ಇಷ್ಟಪಡಲಿಲ್ಲ; ಆದರೂ ಅವನಲ್ಲಿದ್ದ ಒಂದು ವಿಧವಾದ ಅಪೂರ್ವ ಶಕ್ತಿಯು ಇವನ ಮನಸ್ಸನ್ನು ಆವಾಗಲೂ ಅವನ ಬಳಿಗೆ ಸೆಳೆಯುತ್ತಲಿದ್ದಿತು. ಇವನಲ್ಲದೆ ಗೆಳೆಯನೊಬ್ಬನೇ ಹೋದರೆ ಏನು ಅಪಾಯವುಂಟಾದೀತೋ ಎಂದು ದಿಗಿಲುಬಿದ್ದು ಉದಯಸಿಂಹನ ಜತೆಯಲ್ಲಿ ಹೋದನು.

ಇಬ್ಬರೂ ಮಲಯಸಿಂಹನ ಬಿಡಾರವನ್ನು ಸೇರಿದರು. ಅವನು ಇವರನ್ನು ಆದರದೊಡನೆ ಬರಮಾಡಿಕೊಂಡು ಆಸನದಲ್ಲಿ ಕೂಳ್ಳಿರಿಸಿ ತಾನೂ ಕೂಳಿತು ಇದೇನು ಬಿಜಯಮಾಡಿಸಿದುದು ಎಂದು ಕೇಳಲು, ಉದಯಸಿಂಹನು ಸ್ವಾಮೀ ರಾಜರೇ! ತಾವು ನನಗೆ ಪ್ರಾಣದಾನವನ್ನು ಮಾಡಿದಿರಿ; ನನ್ನ ಪ್ರಾಣವಿರುವವರೆಗೂ ನಿಮ್ಮ ಉಪಕಾರವನ್ನು ಮರೆಯಲಾರೆನು ಎಂದನು.

ಆ ಕಳ್ಳನಿಗೆ ನೀವು ಕೊಟ್ಟ ಆರು ಸಾವಿರ ವರಹಗಳನ್ನು ಕೊಟ್ಟಿದ್ದರೆ ನಿಮ್ಮನ್ನು ಬಿಟ್ಟು ಬಿಡುತ್ತಲಿದ್ದನು; ನಾನು ಅದನ್ನು ನಿಮಗೆ ಉಳಿಸಿದೆನೇ ಹೊರತು ಬೇರೇನೂ ಇಲ್ಲ. ಅದು ಹಾಗಿರಲಿ; ಅಂತಹ ಆಪತ್ತಿನಲ್ಲಿಯೂ ಕೂಡ ನೀವು ಅಷ್ಟು ಧೈರ್ಯವಾಗಿ ನಿದ್ದೆಮಾಡುತ್ತಿದ್ದುದು ಆಶ್ಚರ್ಯವೇ ಸರಿ ಎಂದು ಮಲಯಸಿಂಹನು ಹೇಳಿದನು.

ಉದಯಸಿಂಹನು ಆ ಮಾತನ್ನು ಮರೆಸಿ ನಿಮ್ಮ ಉಪಕಾರಕ್ಕೆ ಪ್ರತ್ಯುಪಕಾರಮಾಡಲು ನನ್ನಿಂದಾಗದು; ನನ್ನ ತಂದೆಯಾದ ರಾಜಸಿಂಹನು ಅಮರಪುರದಲ್ಲಿ ಪ್ರಸಿದ್ಧನಾಗಿರುವನು; ಅವನಿಂದಲೇ ಆಗಲಿ ನನ್ನಿಂದಲೇ ಆಗಲಿ ತಮಗೆ ಏನಾದರೂ ಆಗಬೇಕಾದ

ಕೆಲಸವಿದ್ದಲ್ಲಿ ತಾವು ಒಂದು ಮಾತನ್ನು ಅಪ್ಪಣೆ ಕೊಡಿಸಿದರೆ ಸಾಕು, ಅದನ್ನು ಶಿರಸಾ ವಹಿಸಿ ನಡೆಸಿಕೊಡುತ್ತೇವೆ.

ಹಾಗಾದರೆ ನನಗೊಂದು ಕೆಲಸವನ್ನು ಮಾಡಿಕೊಡುವಿರಾ ?

ಅದೇನು ?

ನಾನು ಅಮರಪುರವನ್ನು ನೋಡಿಲ್ಲ, ಅಲ್ಲಿಗೆ——.

ಏನು ! ನಮ್ಮ ಖಂಡದಲ್ಲಿ ಇಂದ್ರಪ್ರಸ್ಥವನ್ನು ಬಿಟ್ಟರೆ ಅಮರಪುರವೇ ದೊಡ್ಡ ಪಟ್ಟಣ ; ತಾವು ಇಷ್ಟು ದೇಶಗಳನ್ನು ಸುತ್ತಿಯೂ ಆ ಪಟ್ಟಣವನ್ನು ನೋಡಿಲ್ಲವೇ !

ಇಲ್ಲ ; ಅಲ್ಲಿ ನನಗೆ ಯಾರ ಪರಿಚಯವೂ ಇಲ್ಲ.

ತಮ್ಮಂಥವರಿಗೆ ಆರ ಪರಿಚಯವೂ ಬೇಕಾದುದಿಲ್ಲ.

ಇದು ಬರಿಯ ಉಪಚಾರದ ಮಾತು. ಆವ ಯೋಗ್ಯತೆಯೂ ಇಲ್ಲದೆ ಧನವೊಂದಿದ್ದರೆ ಏನು ಪ್ರಯೋಜನ ? ನಿಮ್ಮ ಪರಿಚಯವಾದುದು ನನಗೆ ಬಲು ಅನುಕೂಲವಾಯಿತು.

ತಾವು ಅಲ್ಲಿಗೆ ಆವಾಗ ಬಿಜಯಮಾಡಿಸುವಿರಿ ?

ನೀವು ಆವಾಗ ಹೊರಡುವಿರಿ ?

ನನ್ನನ್ನು ಬೇಗನೆ ಬರಹೇಳಿ ನನ್ನ ತಂದೆಯು ಬರೆದಿದ್ದಾನೆ ; ಬಹುಶಃ ನನ್ನ ಮದುವೆಯು ಏರ್ಪಾಡು ಮಾಡುವಂತೆ ತೋರುತ್ತಲಿದೆ.

ವಧುವು ಯಾರು ?

ಅಮರಪುರದಲ್ಲಿ ಧನಾಗಾರಪತಿಯೂ ರಾಜಪೂಜಿತರೂ ಆದ ದುರ್ಮತಿಯವರ ಮಗಳು.

ಹಾಗೆಯೇ ! ಸಂತೋಷ. ನೀವು ಎಂದು ಹೊರಡುವಿರಿ ?

ನಾಳೆ ಸಾಯಂಕಾಲ.

ವೀರಸಿಂಹರೋ ?

ಅವರೂ. ಆದರೆ ಅವರು ಅಮರಪುರಕ್ಕೆ ಈಗಲೇ ಬರುವುದಿಲ್ಲ. ಈ ದೇಶದ ಜಲಂಧರಪುರ ಎಂಬ ರೇವುಪಟ್ಟಣದಲ್ಲಿ ಒಂದು ವರ್ಷವಿರಬೇಕೆಂದು ಯೋಚಿಸಿದ್ದಾರೆ.

ನಾಳೆಯ ದಿನ ಹೊರಟರೆ ನೀವು ಅಮರಪುರಕ್ಕೆ ಸೇರುವುದು ಆವಾಗ?

ಸುಮಾರು ಒಂದು ತಿಂಗಳೊಳಗೆ.

ಹಾಗಾದರೆ ನೀವಲ್ಲಿಗೆ ಹೋದ ಎರಡು ತಿಂಗಳಲ್ಲಿ ನಾನು ಅಲ್ಲಿಗೆ ಬರುತ್ತೇನೆ. ಅಷ್ಟರೊಳಗೆ ಇಲ್ಲಿ ನನ್ನ ಕೆಲಸಗಳನ್ನು ಅನುಕೂಲಮಾಡಿಕೊಳ್ಳುವೆನು.

ಮಲಯಸಿಂಹನು ಹೀಗೆಂದ ಕೂಡಲೆ ವೀರಸಿಂಹನಿಗೆ ಮಲಯದ್ವೀಪದಲ್ಲಿ ನಾವಿಕಸೈಂಧವನು ಸೂಚಿಸಿದ್ದುದು ಜ್ಞಾಪಕಕ್ಕೆ ಬಂದು, ಇವನು ಒಲು ಚತುರ, ಇವನ ಆಳವನ್ನು ಕಂಡು ಹಿಡಿಯುವುದು ಅಸಾಧ್ಯ ಎಂದು ಯೋಚಿಸಿದನು.

ತಾವು ಅಮರಪುರಕ್ಕೆ ಪ್ರಯಾಣಮಾಡಿಸುವ ದಿನವನ್ನು ತಿಳಿಸಿದರೆ ನಮ್ಮ ಮನೆಯಲ್ಲಿ ಭೋಜನಕ್ಕೆ ಏರ್ಪಾಡಮಾಡಿ ತಮ್ಮ ಆಗಮನವನ್ನು ನಿರೀಕ್ಷಿಸುತ್ತಿರುವೆನು.

ಭೋಜನವು ಬೇಡ; ಫಲಾಹಾರಕ್ಕೆ ಏರ್ಪಾಡಮಾಡಿದರೆ ಸಾಕು. ಇಂದು ವೈಶಾಖ ಶುದ್ಧ ದಶಮಿ, ಬರುವ ಶ್ರಾವಣ ಶುದ್ಧ ದಶಮಿಯದಿನ ಬೆಳಿಗ್ಗೆ ಹತ್ತು ಗಂಟೆಗೆ ಸರಿಯಾಗಿ ನಿಮ್ಮ ದರ್ಶನಲಾಭಕ್ಕಾಗಿ ಬರುವೆನು. ನಿಮ್ಮ ಮನೆಯು ಗುರುತು ತಿಳಿದರೆ ಅನುಕೂಲ.

ನಿಜ, ಮರೆತೆ. ಅಮರಪುರದ ಉತ್ತರ ರಾಜವೀಥಿಯಲ್ಲಡುವೆ ಇರುವ 'ಸುಖಾವಾಸ'ವೆಂಬುದೇ ನಮ್ಮ ಮನೆ ಎಂದು ಉದಯಸಿಂಹನು ಹೇಳಲು, ಮಲಯಸಿಂಹನು ಅದನ್ನು ಗುರುತು ಹಚ್ಚಿಕೊಂಡನು. ತರುವಾಯ ಉದಯಸಿಂಹ ವೀರಸಿಂಹ ರಿಬ್ಬರೂ ಅಲ್ಲಿಂದ ಹೊರಟು ತಮ್ಮ ಪರಿವಾರವನ್ನು ಸೇರಿದರು.

ತಾನು ಮಲಯಸಿಂಹನ ಸಂಗಡ ಮಾತನಾಡುತ್ತಲಿದ್ದಾಗ ವೀರಸಿಂಹನು ಅವ ಮಾತನ್ನೂ ಆಡದೆ ಬಹು ಯೋಜನಾಪರನಾಗಿದ್ದುದನ್ನು ನೋಡಿದ್ದ ಉದಯಸಿಂಹನು ಏನಯ್ಯಾ! ಬಹು ಯೋಚನೆಮಾಡುತ್ತಲಿದ್ದೆ ಎಂದು ಕೇಳಲು, ಅವನು ಮಲಯಸಿಂಹನು ಬಲು ಸೋಜಿಗದವನು; ನೀನು ಅವನ ಸಂಗಡ ಮಾಡಿಕೊಂಡ ಒಪ್ಪಂದವು ನನಗೇಕೋ ಭಯವನ್ನುಂಟುಮಾಡುತ್ತಲಿದೆ ಎಂದನು.

ನಾನು ಅವನೊಂದಿಗೆ ಮಾಡಿದ ಏರ್ಪಾಡಿನಲ್ಲಿ ಭಯಕ್ಕೆ ಕಾರಣವೇ ಇಲ್ಲ; ನಿನಗೆ ಈಚೆಗೆ ಬುದ್ಧಿಶೂನ್ಯವಾದಂತೆ ತೋರುತ್ತದೆ.

ಏನ ಬೇಕಾದರೂ ಹೇಳು, ನನಗೇನೋ ಅವನ ವಿಷಯದಲ್ಲಿ ಸಂಪೂರ್ಣವಾದ ಅನುಮಾನ.

ಅವನು ನಿನಗೇನಾದರೂ ಕೆಡುಕನ್ನು ಮಾಡಿದ್ದಾನೋ?

ಇಲ್ಲ.

ಹಿಂದೆ ಅವನನ್ನು ಆವಾಗಲಾದರೂ ನೋಡಿದ್ದೆಯೋ?

ಹೂ; ನೋಡಿದ್ದೆ. ಎಲ್ಲಿ, ಆವಾಗ?

ಆರಿಗೂ ಹೇಳುವುದಿಲ್ಲವೆಂದು ಪ್ರಮಾಣ ಮಾಡಿದರೆ ಹೇಳುತ್ತೇನೆ.

''ಆಗಲಿ.'' ''ನಿನ್ನಾಣೆಗೂ?'' ''ನನ್ನಾಣೆಗೂ.''

ತಾನು ಮಲಯದ್ವೀಪಕ್ಕೆ ಹೋಗಿದ್ದಾಗ ಅಲ್ಲಿ ನಡೆದ ಸಂಗತಿಗಳನ್ನೂ, ಚಕ್ರಭೀಮನಕೋಟೆಯಲ್ಲಿ ನಡೆದ ಸಮಾಚಾರವನ್ನೂ, ಒಂಪನಿಗೆ ಕೊಡಲು ಹಣ ಸಾಲದೇ ಹೋದುದರಿಂದ ಮಲಯಸಿಂಹನ ಬಳಿಗೆ ತಾನು ಹೋದಾಗ ನಡೆದ ವರ್ತಮಾನಗಳನ್ನೂ ಉದಯಸಿಂಹನಿಗೆ ವಿಸ್ತಾರವಾಗಿ ತಿಳಿಸಿದನು. ಎಲ್ಲವನ್ನೂ ಕೇಳಿ ಉದಯಸಿಂಹನು ಇವುಗಳಲ್ಲಿ ನನಗೇನೂ ಅನುಮಾನ ತೋರುವುದಿಲ್ಲ. ಮಲಯಸಿಂಹನು ಧನಿಕನಾದುದರಿಂದ ವಿಹಾರಾರ್ಥವಾಗಿ ಒಂದು ಹಡಗನ್ನೂ, ಬೇಸರಹತ್ತಿದಾಗ ಏಕಾಂತವಾಗಿರಲು ಮಲಯದ್ವೀಪದಲ್ಲಿ ಒಂದು ನಿವಾಸಸ್ಥಾನವನ್ನೂ, ಮಾಡಿಕೊಂಡಿರಬಹುದು; ಪರಸ್ಥಳದಿಂದ ಬಂದವರನ್ನು ಆದರಿಸುವುದು ಪ್ರತಿಯೊಬ್ಬನಿಗೂ ಕರ್ತವ್ಯ; ಹೀಗಿರುವಲ್ಲಿ, ನೀನು ಅಲ್ಲಿಗೆ ಅಪೂರ್ವವಾಗಿ ಒಬ್ಬನೇ ಹೋದಾಗ ಅವನು ನಿನಗೆ ಆತಿಥ್ಯಮಾಡಿದನು; ಇದರಲ್ಲಿ ಅನುಮಾನವೇತಕ್ಕೆ ಎಂದನು.

ಮಲಯದ್ವೀಪದ ಇಬ್ಬರು ಕಳ್ಳರು?

ಅವರು ಕಳ್ಳರಲ್ಲವೆಂದು ನೀನೇ ಹೇಳಿದೆಯಲ್ಲಾ.

ಅದು ಹೋಗಲಿ; ಲುಂಗಿಬಂಪನ ಸ್ನೇಹವೋ?

ಅಪ್ಪಾ! ಅವನಿಗೆ ಆದಿದ್ದುದರಿಂದ ನಾನು ಬದುಕಿ ಬಂದೆನು; ಆದಕಾರಣ ಅವರವರ ಗೆಳೆತನವನ್ನು ವಿಚಾರಿಸುವುದು ಸರಿಯುಲ್ಲ.

ಅವನಾರು? ಎಲ್ಲಿಯವನು? ಅವನ ಪೂರ್ವೋತ್ತರವೇನು? ಅವನಿಗೆ ಮನುಷ್ಯರಲ್ಲಿ ದ್ವೇಷವೇತಕ್ಕೆ? ಅವನು ಅಮರಪುರಕ್ಕೆ ಬರುವ ಉದ್ದೇಶವೇನು? ಇವುಗ

ಳನ್ನೆಲ್ಲಾ ಚೆನ್ನಾಗಿ ತಿಳಿದುಕೊಳ್ಳದೆ ಅವನ ಸಹವಾಸವನ್ನು ಮಾಡುವುದು ಸರಿಯಲ್ಲ; ನಾನಾಗಿದ್ದರೆ ಹಾಗೆ ಮಾಡುತ್ತಿರಲಿಲ್ಲ.

ನೀನು ನೆನ್ನೆಯದಿನ ನನ್ನ ಕಾಗದವನ್ನು ತೆಗೆದುಕೊಂಡು ಅವನ ಬಳಿಗೆ ಹೋಗಿ ಅವನ ಸಾಹಾಯ್ಯವನ್ನು ಕೋರಿದಾಗ ನಮ್ಮಿಬ್ಬರ ಪೂರ್ವೋತ್ತರಗಳನ್ನು ತಿಳಿದುಕೊಂಡ ಮೇಲೆ ಅವನೇನಾದರೂ ನಿನ್ನ ಸಂಗಡ ಬಂದನೇ? ಇಲ್ಲ; ನೀನು ಕೇಳಿದ ಒಡನೆಯೇ ನಿನ್ನ ಸಂಗಡ ಬಂದನು. ಅವನು ಮನುಷ್ಯರನ್ನು ವಾಸ್ತವವಾಗಿಯೂ ದ್ವೇಷಿಸುವವನಾಗಿದ್ದರೆ ಆ ಕಳ್ಳನ ಕಯ್ಯಿಂದ ನನ್ನನ್ನು ಬಿಡಿಸಿಕೊಂಡು ಬರುತ್ತಿದ್ದನೇ? ಅವನ ಉಪಕಾರಕ್ಕೆ ಪ್ರತಿಯಾಗಿ ನಮ್ಮೂರಿನ ದೊಡ್ಡ ಮನುಷ್ಯರ ಪರಿಚಯವನ್ನು ಮಾಡಿಕೊಡಬೇಕೆಂದು ನನ್ನನ್ನು ಕೇಳಿರುವನು. ಇದರಿಂದೇನು ಅಪಾಯ? ಎನ್ನಲು, ಅವನು ನಿಟ್ಟುಸಿರನ್ನು ಬಿಟ್ಟು ಅಪ್ಪಾ! ನಿನಗೆ ಬದಲು ಹೇಳಲು ನನ್ನಿಂದಾಗದು; ಆದರೂ ಅವನ ರೀತಿಯನ್ನು ನೋಡಿದರೆ ನನಗೇಕೋ ಒಂದು ವಿಧವಾದ ಅನುಮಾನವು ತೋರುತ್ತಿದೆ ಎಂದನು.

ಹೋಗಲಿ ಬಿಡಪ್ಪ! ಆ ಪ್ರಸ್ತಾಪವೇಕೆ? ನಾಳೆಯ ಪ್ರಯಾಣಕ್ಕೆ ಬೇಕಾದ ಏರ್ಪಾಡನ್ನು ಮಾಡಿಕೊಳ್ಳೋಣ.

ಮರುದಿನ ಸಾಯಂಕಾಲ ಉದಯಸಿಂಹನು ಅಮರಪುರಕ್ಕೂ ವೀರಸಿಂಹನು ಜಲಂಧರಪುರಕ್ಕೂ ಪ್ರಯಾಣಮಾಡಿದರು. ಉದಯಸಿಂಹನು ಹೊರಟು ಒಂದು ತಿಂಗಳೊಳಗೆ ಸುಖಾವಾಸವನ್ನು ಸೇರಿದನು.

ಸುಖಾವಾಸವೆಂಬುದು ಅಮರಪುರದಲ್ಲಿ ಒಂದು ದೊಡ್ಡ ಮನೆ. ಅದನ್ನು ರಾಜಸಿಂಹನು ಕಟ್ಟಿಸಿ ಅಲ್ಲಿ ವಾಸಮಾಡುತ್ತಿದ್ದನು. ಮುಂಭಾಗದಲ್ಲಿ ರಾಜಬೀದಿ; ಮಿಕ್ಕ ಮೂರು ಕಡೆಗಳಲ್ಲಿ ತೋಟ; ಅವನ ಪತ್ನಿಯಾದ ರಾಧಾಬಾಯಿಯ ಜಾಣ್ಮೆಯಿಂದ ಮನೆಯೂ ತೊಟವೂ ನೋಡುವವರೆಲ್ಲರಿಗೂ ಆನಂದವನ್ನುಂಟುಮಾಡುವಂತೆ ಅಚ್ಚುಮೆಚ್ಚಾಗಿದ್ದುವು.

ಉದಯಸಿಂಹನು ಒಬ್ಬನೇ ಮಗನಾದುದರಿಂದ ತಂದೆತಾಯಿಗಳು ಅವನನ್ನು ಅತಿಪ್ರೀತಿಯಿಂದ ಸಾಕುತ್ತಲಿದ್ದರು. ಶ್ರೀಮಂತರಾದುದರಿಂದ ಅವನು ಕೇಳುವಷ್ಟು ಧನವನ್ನು ಕೊಟ್ಟು, ಅವನ ಇಷ್ಟದಂತೆ ಬಿಟ್ಟಿದ್ದರು. ಇದೂ ಅಲ್ಲದೆ, ಅವನ ಸ್ನೇಹಿತರು

ಧಾರಾಳವಾಗಿ ಬಂದು ಹೋಗುವುದಕ್ಕೆ ಅನುಕೂಲವಾಗಿ ನಾಲ್ಕು ಕೊಟ್ಟಡಿಗಳನ್ನು ಬಿಟ್ಟುಕೊಟ್ಟಿದ್ದರು.

ಉದಯಸಿಂಹನ ಕೊಟ್ಟಡಿಯಿಂದ ತೋಟಕ್ಕೆ ಹೋಗುವುದಕ್ಕೂ, ತೋಟದಿಂದ ಹೆಬ್ಬಾಗಿಲನ್ನು ತೆರೆಯದೆ ಹೊರಗೆ ಹೋಗುವುದಕ್ಕೂ ಎರಡು ದಿಡ್ಡಿಬಾಗಿಲುಗಳಿದ್ದುವು. ಒಂದು ಬಾಗಿಲಿನಿಂದ ಮತ್ತೊಂದು ಬಾಗಿಲವರೆಗೆ ಮಾಡಿದ್ದ ಸಣ್ಣ ಕಾಲುಹಾದಿಯ ಉದ್ದಕ್ಕೂ ಎರಡು ಕಡೆಯಲ್ಲಿಯೂ ಕಲ್ಲುಕಂಬಗಳನ್ನು ನಿಲ್ಲಿಸಿ, ಅವುಗಳ ಮೇಲೆ ಕಬ್ಬಿಣದ ಕಂಬಿಗಳನ್ನು ಹಾಕಿ, ಆ ಕಂಬಗಳ ಮೇಲೆ ಆಲಂಕಾರಕ್ಕಾಗಿ ವಾಸನೆಯಾಗಿಯೂ ಮನೋಹರವಾಗಿಯೂ ಇರುವ ಹೂಬಳ್ಳಿಗಳನ್ನು ಹಬ್ಬಿಸಿದ್ದರು. ಅವು ದಪ್ಪವಾಗಿ ಬೆಳೆದಿದ್ದುದರಿಂದ ಇತರರಿಗೆ ಆ ದಾರಿಯಲ್ಲಿ ಓಡಾಡುವವರು ಕಾಣುತ್ತಿರಲಿಲ್ಲ. ಈ ಎರಡು ಬಾಗಿಲುಗಳ ಬೀಗದಕೈಗಳು ಉದಯಸಿಂಹನ ಅಂತರಂಗನಾದ ಸೂಕ್ಷ್ಮಬುದ್ಧಿ ಎಂಬ ತೂಳಿಗದವನ ಹತ್ತಿರ ಇರುತ್ತ, ರಾತ್ರಿಯಲ್ಲಿ ಸ್ವೈರಿಣಿಯರಾದ ರಮಣಿಯರು ತಮ್ಮ ಸುಸ್ವರದಿಂದ ಕೂಗಿದ ಹೊರತು ಆ ಬಾಗಿಲುಗಳು ತೆರೆಯಲ್ಪಡುತ್ತಿರಲಿಲ್ಲ.

ಪಲಯಸಿಂಹನು ಬರುವನೆಂದು ಉದಯಸಿಂಹನು ಕೈಬಾದವರೆಗೂ ಆ ಕೊಟ್ಟಡಿಗಳನ್ನು ಅಲಂಕರಿಸಿದ್ದನು. ಅವನ ಆಗಮನವು ಸಮೀಪಿಸುತ್ತ ಬಂದ ಹಾಗೆಲ್ಲಾ ಇವನ ಏರ್ಪಾಡುಗಳು ಪೂರೈಸುತ್ತ ಬಂದುವು. ಉದಯಸಿಂಹನಿಗೆ ಶ್ರಾವಣ ಶುದ್ಧ ನವಮಿಯ ದಿನವೆಲ್ಲಾ ಫಲಾಹಾರದ ಪದಾರ್ಥಗಳನ್ನು ಒದಗಿಸಿಕೊಳ್ಳುವುದರಲ್ಲಿಯೇ ಆಯಿತು. ದಶಮಿಯದಿನ ಬೆಳಿಗ್ಗೆ ಪಲಯಸಿಂಹನ ಜತೆಯಲ್ಲಿರಲು ತಕ್ಕ ಸ್ನೇಹಿತರು ಕೆಲವರನ್ನು ಕರೆಯುವುದಕ್ಕೆ ಸುಮಾರು ಎಂಟುಗಂಟೆಯವರೆಗೆ ಹೋಗಿದ್ದು, ಸತ್ಕಾರಕ್ಕೆ ಸಿದ್ಧಪಡಿಸಿಕೊಂಡನು.

ಬೆಳಿಗ್ಗೆ ಸುಮಾರು ಒಂಭತ್ತುವರೆ ಗಂಟೆಯ ಸಮಯದಲ್ಲಿ ಸೂಕ್ಷ್ಮಬುದ್ಧಿಯು ಆ ದಿನ ಬಂದ ವೃತ್ತಾಂತ ಪತ್ರಿಕೆಗಳನ್ನೂ ಕಾಗದಗಳನ್ನೂ ತಂದು ಉದಯಸಿಂಹನಿಗೆ ಕೊಟ್ಟನು. ಅವನು ಪತ್ರಿಕೆಗಳನ್ನೆಲ್ಲಾ ಮೇಜಿನಮೇಲೆ ಇಟ್ಟು ವಾಸನೆ ಹಚ್ಚಿ ಹೆಂಗುಸು ಬರೆದಿದ್ದಂತಿದ್ದ ಎರಡು ಕಾಗದಗಳನ್ನು ಮೊದಲು ತೆಗೆದು ಓದಿ, ಕಿಂಕರನನ್ನು ಕುರಿತು ಎಲೋ ಸೂಕ್ಷ್ಮಬುದ್ಧಿ! ತಾರಾಬಾಯಿಗೆ ಬೇಕಾದ ಪದಾರ್ಥಗಳನ್ನು ಅಂಗಡಿ

ಯಿಂದ ತಂದುಕೊಡು; ಈ ರಾತ್ರೆ ಎಂಟುಗಂಟೆಗೆ ಅಲ್ಲಿಗೇ ಊಟಕ್ಕೆ ಬರುವೆನೆಂದು ಹೇಳು. ವಿಲಾಸಿನಿಯು ಪರಿಚಾರಕನೊಡನೆ ಅವನ ಒಡತಿಯು ಇಷ್ಟದಂತೆ ಈ ರಾತ್ರೆ ನಾಟಕಕ್ಕೆ ಒಂಭತ್ತುಗಂಟೆಗೆ ಬರುವೆನೆಂದು ಹೇಳಿ ಕಳುಹಿಸು. ಎಂದನು.

ಮಹಾಸ್ವಾಮಿ! ಅಪ್ಪಣೆ; ಫಲಾಹಾರವು ಎಷ್ಟು ಹೊತ್ತಿಗೆ?

ಹತ್ತುಗಂಟೆಗೆ. ತಾಯಿಯವರು ಏನಮಾಡುತ್ತಲಿದ್ದಾರೆ?

ನೋಡಿಬರುವೆನು.

ಹಾಗೆಯೇಮಾಡು; ಬರುವಾಗ ನಾನು ಕೇಳಿದೆನೆಂದು ಹೇಳಿ ಚಿನ್ನದ ದೊಡ್ಡ ತಾಂಬೂಲದ ತಟ್ಟಿಯನ್ನು ತೆಗೆದುಕೊಂಡು ಬಾ.

ಒಳಿಕ ಉದಯಸಿಂಹನು ಗಡಿಯಾರವನ್ನು ನೋಡಿ ಮಲಯಸಿಂಹನ ಆಗಮನಕ್ಕೆ ಇನ್ನೂ ಸಾವಕಾಶವಿರುವುದೆಂದು ತಿಳಿದು ವೃತ್ತಾಂತಪತ್ರಿಕೆಗಳನ್ನು ಒಂದೊಂದಾಗಿ ಬಿಚ್ಚಿನೋಡಿ, ತಾನು ಕೇಳಿದ್ದ ಪ್ರಸಿದ್ಧವಾದ ಹಲ್ಲುಪುಡಿಯ ಪ್ರಕಟನೆಯು ಅವುಗಳಲ್ಲಿ ಇಲ್ಲದಿರುವುದನ್ನು ಕಂಡು, ಏಕೋ ಬರುತ್ತಬರುತ್ತ ಈ ಪತ್ರಿಕೆಗಳು ದರಿದ್ರಗಳಾಗಿ ಹೋದುವು ಎಂದು ಅವುಗಳನ್ನೆಲ್ಲಾ ಒಂದು ಕಡೆ ಬಿಸುಟನು.

ಈ ವೇಳೆಗೆ ಸರಿಯಾಗಿ ಅಳು, ದಮನಕರು ಬಂದರು ಎಂದನು; ಕೂಡಲೇ ಅತನೂ ಒಳಕ್ಕೆ ಬಂದನು. ಅವನು ಮೂವತ್ತು ವಯಸ್ಸಿನವನು; ತೆಳ್ಳಗೆ ಉದ್ದವಾಗಿದ್ದನು; ನಡೆನುಡಿಗಳು ರಾಜ್ಯಾಂಗದಲ್ಲಿ ಅತನಿಗಿದ್ದ ಮಹತ್ಪದವಿಯನ್ನು ತೋರುತ್ತಿದ್ದುವು. ಅವನು ಒಳಗೆ ಬರುತಲೆ ಉದಯಸಿಂಹನು ಓಹೋ ದಮನಕ! ಇದೇನು? ಯಾವಾಗಲೂ ಕಡೆಯುಲ್ಲಿ ಒರತಕ್ಕನನು ಈ ದಿನ ಎಲ್ಲರಿಗೂ ಮೊದಲು ಬಂದೆ? ನಿಮ್ಮ ಪ್ರಧಾನನು ಕೆಲಸದಿಂದ ನಿವೃತ್ತನಾದನೋ? ಎನ್ನಲು, ಅಯ್ಯಾ! ನನಗೆಬಹಳ ಹಸಿವು, ಅದಕ್ಕಾಗಿ ಜಾಗ್ರತೆಯಾಗಿ ಬಂದೆನು. ನಮ್ಮ ಯಜಮಾನನ ಅಧಿಕಾರಕ್ಕೆ ಚ್ಯುತಿಯಿಲ್ಲವೆಂದು ತಿಳಿ. ಅವನು ಯಾವಾಗಲೂ ವೇಗವಾಗಿ ನಡೆಯುತ್ತಲಿದ್ದರೂ ಮುಗ್ಗರಿಸಿ ಕೆಳಗೆ ಬೀಳನು ಎಂದನು.

ಪಕ್ಕದ ರಾಜ್ಯದ ಅರಸಾದ ದಾನಚರಣನನ್ನು ಓಡಿಸುವ ಪ್ರಯತ್ನವೇ ನಾಯಿತು?

ಅವನನ್ನು ನಾವು ಓಡಿಸಲಿಲ್ಲ. ಅತ್ತಲಿಂದ ಸೆರೆತಂದು ಇತ್ತ ಒಂದು ಭದ್ರವಾದ ಕೋಟೆಯಲ್ಲಿ ಮೂರು ದಿನಗಳ ಮುಂಚೆ ಇರಿಸಿ, ಹಿಂದೆ ರಾಜ್ಯವಾಳುತ್ತಿದ್ದ ರಾಜಪಿಂಡೆಯವನೊಬ್ಬನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದೆವು.

ದುರ್ಮತಿಗೆ ಈ ಸಮಾಚಾರವು ಹೇಗೋ ಗೊತ್ತಾಗಿ ಅದರಿಂದ ವಿಶೇಷಲಾಭವನ್ನು ಸಂಪಾದಿಸಿದನೆಂದು ಹೇಳುತ್ತಾರೆ; ಅದು ನಿಜವೋ?

ನಿಜ. ಅವನಿಗೆ ಇಂತಹ ಸಮಾಚಾರಗಳು ಹೇಗೋ ಪ್ರಧಾನನಿಗಿಂತ ಮೊದಲು ತಿಳಿದು ತನ್ನ ಹತ್ತಿರ ಇದ್ದ ದಾಸಚರಣನ ಪತ್ರಗಳನ್ನು ಮಾರಿ ಇದುವರೆಗೆ ಬಿಲಿಯಾಗದೆ ಇದ್ದ ಹಳೆಯ ರಾಜರ ಪತ್ರಗಳನ್ನು ಕೊಂಡು ಎರಡು ಲಕ್ಷ ವರಹಗಳನ್ನು ಸಂಪಾದಿಸಿದನು.

ಅದರಲ್ಲಿ ನಿನಗೇನೂ ಪ್ರಯೋಜನವಾಗಲಿಲ್ಲವೋ?

ನನಗೇನು ಪ್ರಯೋಜನ ಎಂದು ದಮನಕನು ಉದಯಸಿಂಹನ ಮುಖವನ್ನು ದೃಷ್ಟಿಸಿ ನೋಡಿದನು.

ನಿನ್ನ ಅಂಗಿಯ ಮೇಲೆ ಹಾಕಿಕೊಂಡಿರುವ ಬಿರುದಿನ ಜಿಲ್ಲೆಯೇ ನಿನಗಾದ ಪ್ರಯೋಜನವನ್ನು ವ್ಯಕ್ತಪಡಿಸುತ್ತದೆ.

ಇದೇನು ಹಣಕಾಸಿಲ್ಲದ ಬರಿಯ ಅಲಂಕಾರ.

ಇಂತಹ ಅಲಂಕಾರಕ್ಕಾಗಿಯೇ ಜನರು ಎಷ್ಟೋ ಹಣವನ್ನು ವೆಚ್ಚಮಾಡಿ ಸರ್ಕಾರದ ಉದ್ಯೋಗಸ್ಥರ ಬಳಿಗೆ ಹೋಗಿ, ನಿಹೀನವಾದ ಸೇವಾವೃತ್ತಿಯನ್ನು ಕೂಡ ಮಾಡುವರು ಎಂದು ಉದಯಸಿಂಹನು ಹೇಳುತ್ತಲಿರುವಾಗ, ಆ ಪಟ್ಟಣದ ಮುಖ್ಯ ಪತ್ರಿಕಾಸಂಪಾದಕನಾದ ಭದ್ರಸಿಂಹನು ಒಂದನು. ಅವನು ಉದಯಸಿಂಹ ದಮನಕರಿಬ್ಬರೇ ಇದ್ದುದನ್ನು ನೋಡಿ, ನನಗೆ ಹಸಿವಾಗುತ್ತಲಿದೆ; ಎಷ್ಟು ಹೊತ್ತಿಗೆ ಫಲಾಹಾರ ಮಾಡುವೆವು ಎಂದು ಉದಯಸಿಂಹನನ್ನು ಕೇಳಿದುದಕ್ಕೆ, ಹತ್ತು ಗಂಟೆಗೆ, ಎಂದನು.

ಅದು ವರೆಗೆ ಕಾಯಬೇಕೇ?

ಎಲೋ ಭದ್ರಸಿಂಹ! ದಮನಕನ ಪ್ರತಿಕಕ್ಷಿಯಾಗಿದ್ದೂ ನೀನೂ ಅವನಂತೆ ಹೊತ್ತಾಗುತ್ತದೆಂದು ವಿಷಾದಪಡುತ್ತೀಯಾ? ಅವನು ಹಾಗಿದ್ದರೆ ನೀನು ನ್ಯಾಯವಾಗಿ ಉತ್ಸಾಹದಲ್ಲಿರಬೇಕು.

ಪ್ರತಿಕಕ್ಷಿಯಾಗಿದ್ದರೂ ಅವನಂತೆ ನಾನೂ ಮನುಷ್ಯನೇ. ಹಸಿವನ್ನು ತಡೆಯಲು ಆರಿಂದ ಸಾಧ್ಯ? ಈ ದಿನ ಮಧ್ಯಾಹ್ನ ಅರ್ಥಶಾಸ್ತ್ರಪರಿಣತನಾದ ದುರ್ಮತಿಯು ಧನಾರ್ಜನೆಯ ವಿಚಾರವಾಗಿ ಉಪನ್ಯಸಿಸುವನಂತೆ: ಆ ಉಪನ್ಯಾಸದ ಗುಣದೋಷಗಳನ್ನು ವಿಚಾರಮಾಡಿ ನನ್ನ ಪತ್ರಿಕೆಯಲ್ಲಿ ಪ್ರಕಟಿಸಬೇಕು. ಆದುದರಿಂದ ಬೇಗ ಹೋಗಬೇಕು.

ಅವನಿಗೆಲ್ಲಿಯ ಶಾಸ್ತ್ರಪರಿಚಯ? ಅದೃಷ್ಟವಿದ್ದುದರಿಂದ ಐಶ್ವರ್ಯವಂತನಾದನು; ಐಶ್ವರ್ಯಕ್ಕಾಗಿ ಅವನಿಗೆ ಆ ಬಿರುದು ಬಂದಿತು ಎಂದು ದಮನಕನು ಹೇಳಲು, ಭದ್ರಸಿಂಹನು ಅದಕ್ಕಾಗಿಯೇ 'ಪರಿಣತನು' ಎಂದು ನಾನು ಮರ್ಯಾದೆಯಿಂದ ಹೇಳಿದುದು ಎಂದನು.

ಅವ್ವಾ ಭದ್ರಸಿಂಹ! ಅವನ ಮಗಳನ್ನು ನನಗೆ ಮದುವೆಮಾಡಿ ಕೊಡುವುದಾಗಿ ಏರ್ಪಾಡು ನಡೆಯುತ್ತಲಿದೆ. ನನ್ನ ಮಾವನನ್ನು ನೀನು ಪರಿಹಾಸ್ಯಮಾಡಬಹುದೇ? ಇದೂ ಅಲ್ಲದೆ ಅವನು ನಿನ್ನ ಕಕ್ಷಿಗೇ ಸೇರಿದವನು.

ನಿಜ, ನಿಜ; ದುರ್ಮತಿಯು ಮಗಳಿಗೆ ಎರಡು ಲಕ್ಷ ವರಹಗಳ ಸ್ತ್ರೀಧನವನ್ನು ಕೊಡುತ್ತಾನಂತೆ; ಅದಕ್ಕಾಗಿ ಆ ದುಂದುಭಿಯನ್ನು ನೀನು ಮದುವೆಯಾಗುವುದಾಗಿ ಊರೆಲ್ಲ ವರ್ತಮಾನವಿದೆ. ಅವನು ಹಣವನ್ನೇನೋ ತುಂಬ ಸಂಪಾದಿಸಿದ್ದಾನೆ; ದೊರೆಗೆ ವಿಶೇಷವಾಗಿ ಸಾಲಕೊಟ್ಟಿರುವುದರಿಂದ ಅನೇಕ ಮರ್ಯಾದೆಗಳೂ ಬಿರುದಗಳೂ ಬಂದಿವೆ; ಆದರೂ ಅವನನ್ನು ದೊಡ್ಡ ಮನುಷ್ಯನೆಂದು ಯಾರು ತಾನೇ ಗಣಿಸುವರು?

ಅವನು ಹೇಗಿದ್ದರೇನು? ನಾನು ಅವನ ಮಗಳನ್ನು ಮದುವೆಯಾಗುವೆನೆಲ್ಲದೆ ಅವನನ್ನು ಬೇರೆ ಮದುವೆಯಾಗುವುದಿಲ್ಲ. ಎರಡು ಲಕ್ಷ ವರಹಗಳು ಸಿಕ್ಕುವುದಾದರೆ ಆರು ತಾನೇ ಅವಳನ್ನು ತಿರಸ್ಕರಿಸುವರು?

ಆಗ ದಮನಕನು ಉದಯಸಿಂಹನನ್ನು ನೋಡಿ ಭದ್ರಸಿಂಹನ ಮಾತನ್ನು ನೀನು ಕೇಳಬೇಡ. ಈ ಕಾಲದಲ್ಲಿ ಹಣವೇ ಮುಖ್ಯ. ಅದೊಂದಿದ್ದರೆ ದಡ್ಡನು ಬುದ್ಧಿಮಂತನು; ನೀಚನು ದೊಡ್ಡವನು; ಕಳ್ಳನು ಯೋಗ್ಯನು; ಜಾರೆಯರು ಪತಿವ್ರತೆಯರು.

ಧನಮುಳ್ಳವನೆ ಕುಲೀನಂ ।
ಗುಣಿ ರೂಪಾಢ್ಯಂ ಸಮಸ್ತವಿದ್ಯಾನಿಪುಣಂ ॥
ಎಣಿಸಲ್ ವಾಗ್ಮಿಯುಮಾತನೆ ।
ಗುಣಮೆಲ್ಲಂ ಜಗದೆ ಧನಮನಾಶ್ರಯಿಸಿರ್ಪುಂ ॥

ಎಂದಲ್ಲವೆ ಭರ್ತೃಹರಿಯು ಹೇಳಿರುವನು ಎನ್ನಲು, ಭದ್ರಸಿಂಹನು ಗುಣ, ನಡತೆ, ಆಚಾರ ವ್ಯವಹಾರ, ಸತ್ಯ, ಇವುಗಳಿಲ್ಲದೆ ಬರಿಯ ಹಣವುಳ್ಳವನ ಜನ್ಮವನ್ನು ಸುಡಬೇಕು. ಅಂಥವನ ಮಗಳನ್ನು ಹಣಕ್ಕಾಗಿ ಮದುವೆಯಾಗುವುದಕ್ಕಿಂತಲೂ, ದುಡ್ಡಿಲ್ಲದ ಶೀಲವಂತನ ಮಗಳನ್ನು ಮದುವೆಯಾಗಿ ಭಿಕ್ಷಬೇಡಿ ಜೀವಿಸುವುದು ಮೇಲು ಎಂದನು.

ಅದಿರಲಿ ; ದುರ್ಮತಿಯ ಮಗಳನ್ನು ದುಂದುಭಿಯೆಂದೆಯಲ್ಲಾ, ಅದೇನು ಅವಳ ಹೆಸರೋ ?

ಅವಳ ತಂದೆಯು ಅವಳಿಗೆ ವಿಲಾಸಿನಿ ಎಂದು ಹೆಸರಿಟ್ಟಿದಾನೆ; ಆದರೆ ದುರ್ಮತಿಯಾದ ಬಳಿಕ ದುಂದುಭಿ ತಾನೆ !

ಈ ವೇಳೆಗೆ ಮಹಾನ್ವಾಮೀ, ಚಿತ್ರಸೇನ ಜಯವೀರರು ಜಿಜಯಮಾಡಿದರು ಎಂದು ಆಳು ಸೂಚಿಸಲು, ಉದಯಸಿಂಹನು ಜಯವೀರನಾರು ಎಂದು ಯೋಚಿಸುವುದರಲ್ಲಿಯೇ ಚಿತ್ರಸೇನನು ಬಂದು, ಅಪ್ಪಾ ಉದಯ, ನಿನ್ನ ಸ್ನೇಹಿತನೆಂದು ನೀನು ನನ್ನನ್ನು ಕರೆದೆ; ನಾನು ಜತೆಯಲ್ಲಿ ನನ್ನ ಸ್ನೇಹಿತ ಜಯವೀರನನ್ನು ಕರೆದುಕೊಂಡು ಬಂದೆನು ; ಇವನು ನನ್ನ ಪ್ರಾಣವನ್ನು ಕಾಪಿಟ್ಟವನು ಎಂದನು.

ನಿನ್ನ ಸ್ನೇಹಿತನು ನಮಗೆಲ್ಲರಿಗೂ ಸ್ನೇಹಿತನೇ ಎಂದು ಎಲ್ಲರೂ ಎದ್ದು ಜಯವೀರನಿಗೆ ತಕ್ಕ ಮರ್ಯಾದೆಯನ್ನು ಮಾಡಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡರು.

ಏನಪ್ಪಾ ಚಿತ್ರಸೇನ, ಇವನು ನಿನ್ನ ಪ್ರಾಣವನ್ನು ಕಾಪಿಟ್ಟನೆಂದು ಹೇಳಿದೆಯಲ್ಲಾ, ಅದೇನು, ಎಂದು ಭದ್ರಸಿಂಹನು ಕೇಳಲು, ಜಯವೀರನು ಅಂತಹ ದೊಡ್ಡ ಕಾರ್ಯವಾವುದೂ ಇಲ್ಲ; ಚಿತ್ರಸೇನನು ಉತ್ತಮಪುರುಷನಾದುದರಿಂದ ತೃಣವನ್ನೂ ಪರ್ವತವನ್ನಾಗಿ ಮಾಡಿ ಹೇಳಿರುವನು ಎಂದನು.

ಅಪ್ಪಾ ಭದ್ರ ! ನಡೆದ ಸಂಗತಿಯನ್ನು ಹೇಳುತ್ತೇನೆ, ನಾನು ಉತ್ತಮ ಪುರುಷನೋ ಇವನು ಉತ್ತಮ ಪುರುಷನೋ ನೀನೇ ಹೇಳು. ನಮ್ಮ ಸೈನ್ಯಕ್ಕೂ ಪಿಂಡಾರ

ಸೈನ್ಯಕ್ಕೂ ಈಚೆಗೆ ಯುದ್ಧ ನಡೆದ ಸಂಗತಿಯನ್ನು ನೀನು ಬಲ್ಲೆಯಷ್ಟೆ; ಆ ಯುದ್ಧದಲ್ಲಿ ನಾವಿಬ್ಬರೂ ಜತೆಯಲ್ಲಿಯೇ ಇರುತ್ತಲಿದ್ದೆವು. ಒಂದಾನೊಂದು ದಿನ ಏಳೆಂಟು ಪಿಂಡಾರರನ್ನು ನಾನೊಬ್ಬನೇ ತರುಬಿಕೊಂಡು ಹೋದಾಗ ಅವರಲ್ಲಿ ಒಬ್ಬನು ನನ್ನ ಮೇಲೆ ತುಪಾಕಿಯನ್ನು ಹಾರಿಸಿದನು. ದೈವಾಧೀನದಿಂದ ನನ್ನ ಕುದುರೆಗೆ ಗುಂಡು ತಗಲಿ ಅದು ಸತ್ತು ಬೀಳಲು, ನಾನೂ ಕೆಳಗೆ ಬಿದ್ದೆನು. ನನ್ನ ಬಲಗಾಲು ಕುದುರೆಯ ಅಡಿಗೆ ಸಿಕ್ಕಿ ಜಜ್ಜಿಹೋಯಿತು. ಕಷ್ಟದಿಂದ ಏಳುವುದರೊಳಗಾಗಿ, ಅವರು ನನ್ನನ್ನು ಸುತ್ತಿಕೊಂಡು ತಮ್ಮ ಕತ್ತಿಗಳನ್ನೆತ್ತಿ ನನ್ನ ತಲೆಯ ಮೇಲೆ ಬೀಳುವುದರೊಳಗಾಗಿ ಇವನು ಎಲ್ಲಿಂದಲೋ ಓಡಿ ಬಂದು ಅವರ ಕೈಗಳನ್ನು ಒಂದೇ ಪೆಟ್ಟಿನಲ್ಲಿ ಕಡಿದು ನನ್ನನ್ನು ಎತ್ತಿಕೊಂಡು ಹೋಗಿ ನಮ್ಮ ಸೈನ್ಯದಲ್ಲಿ ಬಿಟ್ಟನು. ಆ ವೇಳೆಯಲ್ಲಿ ಇವನು ಬಾರದಿದ್ದರೆ ನಾನು ಯಮಪಟ್ಟಣವನ್ನು ಸೇರುತ್ತಲಿದ್ದೆನು ಎಂದನು.

ಚಿತ್ರಸೇನನು ಹೀಗೆನ್ನುತಲೆ, ಜಯವೀರನು ಅಂದು ಮಾರ್ಗಶಿರ ಶುದ್ಧ ಪಂಚಮಿ; ಹಿಂದೆ ನನ್ನ ತಂದೆಯವರು ತಮ್ಮ ಹಡಗುಗಳೆಲ್ಲಾ ಮುಳುಗಿ, ಹಣವನ್ನಿಟ್ಟಿದ್ದ ಧನಾಗಾರಗಳೆಲ್ಲಾ ದಿವಾಳಿಯಾಗಿ, ಮಾಡಿದ ಸಾಲಗಳನ್ನು ಹರಿಸಲಾರದೆ, ಮಾನ ಕಳೆದುಕೊಂಡಿರುವುದಕ್ಕಿಂತಲೂ ಪ್ರಾಣ ಬಿಡುವುದೇ ಲೇಸೆಂದು ಪ್ರಾಣಬಿಡಲು ಸಿದ್ಧರಾಗಿದ್ದಾಗ, ಅವನೋ ಒಬ್ಬ ಮಹಾತ್ಮನು ಅರಿಗೂ ತಿಳಿಯದಂತೆ ಸಾಲವನ್ನೆಲ್ಲಾ ತೀರಿಸಿ ವಿಪತ್ತಿನಿಂದ ಉದ್ಧರಿಸಿ ಸಾಹಾಯ್ಯಮಾಡಿದನು. ಆದುದರಿಂದ ಪ್ರತಿವರ್ಷವೂ ಆ ದಿನ ನಾನು ಅವುದಾದರೂ ಒಂದು ಒಳ್ಳೆಯ ಕೆಲಸವನ್ನು ಮಾಡಬೇಕೆಂದು ಸಂಕಲ್ಪಿಸಿದ್ದೇನೆ ಎಂದನು.

ಅಂತಹ ಮಹಾಪುರುಷನಾರಪ್ಪ! ಎಂದು ಎಲ್ಲರೂ ಕೇಳಲು ಅವನಾವನೋ ಗೊತ್ತಿಲ್ಲ ಎಂದನು.

ಉಪಕಾರಮಾಡಿದರೆ ಹೀಗೆ ಮಾಡಬೇಕು ಎಂದು ಎಲ್ಲರೂ ಆಶ್ಚರ್ಯಪಟ್ಟರು.

ಆಗ ಭದ್ರಸಿಂಹನು ಉದಯಸಿಂಹನನ್ನು ನೋಡಿ ಏನಪ್ಪಾ! ನನಗೆ ಹಸಿವು ಎಂದರೆ ಕಥೆಗಳನ್ನು ಹೇಳಿ ಕಾಲಹರಣ ಮಾಡುತ್ತಿರುವುದನ್ನು ನೋಡಿದರೆ ಇನ್ನೂ ಫಲಾಹಾರಕ್ಕೆ ಸಿದ್ಧವಾಗಿಲ್ಲವೆಂದು ತೋರುತ್ತದೆ ಎಂದನು. ಅದಕ್ಕೆ ಉದಯಸಿಂಹನು ಇನ್ನೂ ಹತ್ತು ಗಂಟೆಯಾಗಿಲ್ಲ; ನನ್ನನ್ನು ರಕ್ಷಿಸಿದವನೊಬ್ಬ ಮಹಾಪುರುಷನು ಹತ್ತು

ಗಂಟೆಗೆ ಸರಿಯಾಗಿ ಇಲ್ಲಿಗೆ ಬರುವೆನೆಂದು ಹೇಳಿದ್ದಾನೆ. ಅದುವರೆಗೆ ಆ ಕಥೆಯನ್ನು ಹೇಳುತ್ತೇನೆ ಕೇಳು ಎನ್ನಲು, ದಮನಕನು ಇಂತಹ ಉಪಕಾರಿಗಳಿಗೆ ನಮ್ಮ ರಾಜನು ವರ್ಷಕ್ಕೊಮ್ಮೆ ಒಂದು ಬಹುಮಾನವನ್ನು ಕೊಡುವ ಏರ್ಪಾಡ ಮಾಡಿದ್ದಾನೆ; ಈ ವರ್ಷ ಆ ಬಹುಮಾನಕ್ಕೆ ಇಬ್ಬರಿರುವುದರಿಂದ ಅದನ್ನು ಆರಿಗೆ ಕೊಡುವುದು ಎಂದನು.

ಒಡನೆಯೇ ಭದ್ರಸಿಂಹನು ನಿಮ್ಮ ರಾಜನು ಕೊಡುವುದು ತಿಳಿದೇ ಇದೆ; ಅವನೋ ಒಬ್ಬ ಅಯೋಗ್ಯನಿಗೆ ತಾನೇ ಎನ್ನಲು, ಎಲ್ಲರೂ ಗೊಳ್ ಎಂದು ನಕ್ಕರು.

ನಿನ್ನ ಪ್ರಾಣದಾತನು ಎಲ್ಲಿಂದ ಬರುವನು ಎಂದು ದಮನಕನು ಕೇಳಲು, ಉದಯಸಿಂಹನು ಅವನು ಆಗ ಇಂದ್ರಪ್ರಸ್ಥದಲ್ಲಿದ್ದನು, ಈಗೆಲ್ಲಿದಾನೆಯೋ ಕಾಣೆ ಎಂದನು.

ಅವನು ಬರುವುದು ಖಂಡಿತವೋ?

ಖಂಡಿತವಾಗಿಯೂ ಬರುತ್ತೇನೆಂದು ಹೇಳಿದ್ದಾನೆ.

ಅವನ ಕಥೆಯು ನನ್ನ ಪತ್ರಿಕೆಯಲ್ಲಿ ಪ್ರಕಟಿಸಲು ಸ್ವಾರಸ್ಯವಾಗಿದ್ದರೆ ಹೇಳು ಎಂದು ಭದ್ರಸಿಂಹನು ಕೇಳಲು,

ಕಥೆಯನ್ನು ಕೇಳಿದ ಮೇಲೆ ಸ್ವಾರಸ್ಯವೋ ಇಲ್ಲವೋ ನಿಮಗೇ ಗೊತ್ತಾಗುವುದು ಎಂದನು. "ಹಾಗಾದರೆ ಸರಿ."

ಇಂದ್ರಪ್ರಸ್ಥದ ಉತ್ಸವಕ್ಕೆ ನಾನು ಹೋಗಿದ್ದಾಗ——

ಅದನ್ನು ನಾವು ಬಲ್ಲೆವು.

ಅಲ್ಲಿ ನಾನು ಕಳ್ಳರ ಕೈಗೆ ಸಿಕ್ಕಿಬಿದ್ದುದು ನಿಮಗೆ ತಿಳಿಯದು.

ಇಂದ್ರಪ್ರಸ್ಥದಲ್ಲಿ ಕಳ್ಳರೇ ಇಲ್ಲ ಎಂದು ದಮನಕನು ಹೇಳಲು, ಉದಯಸಿಂಹನು ಇಲ್ಲದೇ ಏನು, ಅನೇಕರಿದ್ದಾರೆ ಎಂದನು.

ಅಡಿಗೆಯವನು ಬಡ್ಡಿಸಿದ ಅರೆಬೆಂದ ಪದಾರ್ಥವನ್ನು ತಿಂದು ಅಜೀರ್ಣವಾಗಿದ್ದುದರಿಂದ ನೀನು ಎಲ್ಲಿಯೋ ಕಳ್ಳರಿಗೆ ಸಿಕ್ಕಿಬಿದ್ದಂತೆ ಕನಸನ್ನು ಕಂಡಿರಬಹುದು.

ನಾನು ಹೇಳುವುದರಲ್ಲಿ ಎಳ್ಳಷ್ಟಾದರೂ ಸುಳ್ಳಿಲ್ಲ. ಕಳ್ಳರು ನನ್ನನ್ನು ಹಿಡಿದುಕೊಂಡು ಹೋಗಿ ತಮ್ಮ ಯಜಮಾನನಿಗೆ ಒಪ್ಪಿಸಲು, ಅವನು 'ನಾಳೆಯು ಬೆಳಗಾಗುವುದರೊಳಗಾಗಿ ಆರು ಸಾವಿರ ವರಹಗಳು ನನ್ನ ಕಯ್ಯಿಗೆ ಬಂದರೆ ಸರಿ; ಇಲ್ಲವಾದರೆ

ನಿನ್ನನ್ನು ಪ್ರಾಣದೊಂದಿಗೆ ಬಿಡುವುದಿಲ್ಲ' ಎಂದು ಹೇಳಿದನು. ಆ ಕಳ್ಳರ ಯಜಮಾನನಲ್ಲಿ ಆಡುವುದೊಂದು ಮಾಡುವುದೊಂದಿಲ್ಲವಾದುದರಿಂದ ನಾನು ಒಡನೆಯೇ ವೀರಸಿಂಹನಿಗೆ ಒಂದು ಕಾಗದವನ್ನು ಬರೆದೆನು.

ವೀರಸಿಂಹನು ಅಷ್ಟು ಹಣವನ್ನು ತೆತ್ತು ನಿನ್ನನ್ನು ಬಿಡಿಸಿಕೊಂಡನೋ ?

ಇಲ್ಲ. ವೀರಸಿಂಹನು ನಾನು ಈಗ ನಿರೀಕ್ಷಿಸುತ್ತಲಿರುವ ಮಹಾತ್ಮನನ್ನು ಕರೆದು ಕೊಂಡು ಬಂದನು.

ಓಹೋ, ಅವನೇನು ಭೀಮಸೇನನೋ ! ತನ್ನ ಗದೆಯಿಂದ ಕಳ್ಳರನ್ನೆಲ್ಲಾ ಸದೆದು ನಿನ್ನನ್ನು ಬಿಡಿಸಿಕೊಂಡು ಬಂದನೋ ?

ಅವನು ಭೀಮಸೇನನೂ ಅಲ್ಲ, ಅವನಲ್ಲಿ ಗದೆಯೂ ಇಲ್ಲ; ನನ್ನಂತೆಯೇ ಅವನೂ ಮನುಷ್ಯನೇ. ಆದರೂ ಅವನು ಕಳ್ಳರ ಯಜಮಾನನ ಸಂಗಡ ಒಂದೆರಡು ಮಾತನ್ನಾಡಲು ನನಗೆ ಬಂಧವಿಮೋಚನವಾಯಿತು.

ಆ ಮೇಲೆ ಆ ಕಳ್ಳನು ನಿನ್ನ ರಕ್ಷಕನಲ್ಲಿ ಅಪರಾಧಕ್ಷಮಾಪಣೆಯನ್ನು ಮಾಡಿ ಕೊಂಡನೋ ? " ಹೂಂ "

ನಿನ್ನ ರಕ್ಷಕನ ಹೆಸರೇನು ? " ರಾಜಾಮಲಯಸಿಂಹ "

ಅಂತಹ ರಾಜನು ಇದ್ದರೆ ನನಗೆ ಗೊತ್ತಿರಬೇಕು, ಆ ಹೆಸರಿನವನು ಅವನೂ ಇಲ್ಲ ಎಂದು ದಮನಕನು ಹೇಳಿದನು. ಚಿತ್ರಸೇನನು ನನಗೆ ಎಲ್ಲಾ ರಾಜರ ಹೆಸ ರುಗಳೂ ಗೊತ್ತು; ಆದರೂ ಅಂತಹ ಹೆಸರನ್ನು ಎಂದೂ ಕೇಳಿದುದಿಲ್ಲ. ಅವನ ವಿಷ ಯವನ್ನು ಆರಾದರೂ ಬಲ್ಲಿರೋ ಎಂದನು. ಆಗ ಜಯವೀರನು ನಾನು ಸ್ವಲ್ಪ ಕೇಳಿ ಬಲ್ಲೆ ; ನಾವಿಕಸೈಂಧವನೆಂಬನೊಬ್ಬನು ಮಲಯದ್ವೀಪವನ್ನು ಬೆಲೆಗೆ ಕೊಂಡು ಅಲ್ಲಿಯ ಗುಹೆಯೊಂದನ್ನು ತನ್ನ ವಾಸಕ್ಕೆ ಅನುಕೂಲವಾಗಿ ಮಾಡಿಕೊಂಡಿದ್ದಾನೆಂದು ನಮ್ಮ ನಾವಿಕನೊಬ್ಬನು ಹೇಳಿದ್ದನು. ಬಹುಶಃ ಅವನು ಆ ದ್ವೀಪಕ್ಕೆ ರಾಜನಾಗಿರಬಹುದು ಎಂದನು.

ಹಾಗಾದರೆ ಅವನು ಬಲು ಹಣಗಾರನಾಗಿರಬೇಕು.

ಅಪ್ಪಾ ದಮನಕ ! ನೀನು ಯವನಯಾಮಿನೀವಿನೋದಗಳಲ್ಲಿ ಅಲ್ಲೀಬಾಬನ

ಕಥೆಯನ್ನು ಕೇಳಿ ಒಲ್ಲೆಯೋ ಎಂದು ಉದಯಸಿಂಹನು ಕೇಳಲು, ಇದೇನು ಮಾತು? ನಾಟಶಾಲೆಗೆ ಹೋಗುವ ಪ್ರತಿಯೊಬ್ಬ ಸಣ್ಣ ಹುಡುಗನೂ ಅದನ್ನು ಬಲ್ಲನು ಎಂದನು.

ಇವನಿಗೂ ಅಲ್ಲೀಬಾಬನಿಗೆ ಸಿಕ್ಕಿದಂತೆ ಒಂದು ಗುಹೆಯೂ ಅದರ ತುಂಬ ಧನವೂ ಸಿಕ್ಕಿರುವುವು.

ನೀನು ಆ ಗುಹೆಯನ್ನು ನೋಡಿದ್ದೀಯೋ?

ನಾನು ನೋಡಿಲ್ಲ, ವೀರಸಿಂಹನು ನೋಡಿದ್ದಾನೆ. ನಿಮ್ಮ ಧರ್ಮಕ್ಕೆ ಆ ರಾಜನ ಮುಂದೆ ಎಲ್ಲಿಯಾದರೂ ಈ ಪ್ರಸ್ತಾಪವನ್ನು ಮಾಡೀರಿ, ಜೋಕೆ. ಕಣ್ಣನ್ನು ಕಟ್ಟಿ ವೀರಸಿಂಹನನ್ನು ಆ ಗುಹೆಯೊಳಗೆ ಕರೆದುಕೊಂಡು ಹೋಗಿದ್ದರಂತೆ ಎಂದು ಪ್ರಾರಂಭಿಸಿ ಅವನು ಅಲ್ಲಿ ಅನುಭವಿಸಿದುದನ್ನೂ, ಅನಂತರ ಇಂದ್ರಪ್ರಸ್ಥದಲ್ಲಿ ನಡೆದುದನ್ನೂ ಆದ್ಯೋಪಾಂತವಾಗಿ ಹೇಳಿದನು. ಆಗ ಉದಯಸಿಂಹನಿಗೇನಾದರೂ ಹುಚ್ಚು ಹಿಡಿಯಿತೋ ಎಂದು ಅವರೆಲ್ಲರೂ ಅವನ ಮುಖವನ್ನು ನೋಡುತ್ತಿರಲು, ಜಯವೀರನು ನಮ್ಮ ನಾವಿಕನಿಂದ ನಾನೂ ಹೀಗೆಯೇ ಕೇಳಿದ್ದೆನು ಎಂದನು.

ಸ್ವಾಮೀ ಜಯವೀರರೇ! ನೀವಿಲ್ಲಿಲ್ಲದಿದ್ದರೆ ಇವರು ನನ್ನನ್ನು ಹುಚ್ಚನೆಂದೇ ಹೇಳಿಬಿಡುತ್ತಲಿದ್ದರು ಎಂದು ಉದಯಸಿಂಹನು ಹೇಳಲು, ದಮನಕನು ನಾನು ಅದನ್ನು ನಂಬುವುದಿಲ್ಲ; ಅದು ಹಾಗಿರಲಿ. ಆ ಯವನದೇಶದ ಯುವತಿಯನ್ನು ನೋಡಿದೆಯೋ ಎನ್ನಲು, ಉದಯಸಿಂಹನು ಒಂದು ದಿನ ಅವಳನ್ನು ನಾಟಕಶಾಲೆಯಲ್ಲಿ ನೋಡಿದ್ದೆನು. ಅವನ ಮನೆಗೆ ಊಟಕ್ಕೆ ಹೋಗಿದ್ದಾಗ ಅಲ್ಲಿ ಅವಳ ಸಂಗೀತವನ್ನು ಕೂಡ ಸ್ವಲ್ಪ ಕೇಳಿದೆನೆಂದು ಆಗಲೇ ಹೇಳಲಿಲ್ಲವೇ ಎಂದನು.

ಓಹೋ! ನಿಮ್ಮ ರಾಜನೂ ನಮ್ಮಂತೆಯೇ ಊಟಮಾಡುತ್ತಾನೆ.

ಅವನು ಸ್ವಲ್ಪವೇ ಊಟಮಾಡುತ್ತಾನೆ.

ಹಾಗಾದರೆ ಅವನು ಒಂದು ಪಿಶಾಚಿ.

ಇಂದ್ರಪ್ರಸ್ಥದ ರಂಗಾಬಾಯಿಯೂ ಹೀಗೆಯೇ ಹೇಳಿದಳು.

ಸರಿ ಸರಿ. ಈಗ ಅವನ ಸಮಾಚಾರ ಗೊತ್ತಾಯಿತು. ದೊಡ್ಡ ಕಣ್ಣು; ಅದರ ತಾರಕೆಯನ್ನು ಇಸ್ಪಬಂದಂತೆ ದೊಡ್ಡದನ್ನೂ ಸಣ್ಣದನ್ನೂ ಮಾಡುವನು; ಮುಖವು ಸ್ವಲ್ಪ ಉದ್ದ; ಅಗಲವಾದ ಹಣೆ; ಸೀಸದ ಬಣ್ಣ; ಕಪ್ಪು ಕೂದಲು; ಜಿಳಿಯ ಹಲ್ಲು;

ವಿಪರೀತ ವಿನಯ; ಇದೆಲ್ಲಾ ನಿಜ ತಾನೆ ಎಂದು ದಮನಕನು ಕೇಳಲು, ಉದಯಸಿಂಹನು ಭಲಾ, ಭಲಾ! ಅವನನ್ನು ಬಹು ಸರಿಯಾಗಿ ವರ್ಣಿಸಿದೆ ಎಂದನು.

ಅವನಿಗೆ ತಲೆಯಲ್ಲಿ ಕೊಂಬಿರುವುದೋ ಎಂದು ಒಬ್ಬನೂ, ಅವನಿಗೆ ಹಜ್ಜೆಗಳು ಹಿಂದಿರುಗಿರುವುವೋ ಎಂದು ಇನ್ನೊಬ್ಬನೂ, ಅವನು ಭೂಮಿಯಲ್ಲಿ ನಡೆಯುವನೋ ಅಥವಾ ಗಾಳಿಯಲ್ಲಿ ಹಾರುವನೋ ಎಂದು ಮತ್ತೊಬ್ಬನೂ ಕೇಳಲು, ಉದಯಸಿಂಹನು ನೀವೆಲ್ಲರೂ ಅವನನ್ನು ನೋಡದಿರುವುದರಿಂದ ಈಗ ಹೀಗೆ ಹಾಸ್ಯಮಾಡುತ್ತೀರಿ; ನೋಡಿದಾಗ ನೀವೇ ಆಶ್ಚರ್ಯಪಡುತ್ತೀರಿ ಎಂದನು.

ಆಗ ಚಿತ್ರಸೇನನು ನೀವುಗಳೆಲ್ಲಾ ಹೇಳುವುದು ಹಾಗಿರಲಿ; ಆ ಕಳ್ಳನ ಸಹವಾಸವಿಲ್ಲದಿದ್ದರೆ ಅವನು ನಿಜವಾಗಿಯೂ ದೊಡ್ಡ ಮನುಷ್ಯನೆಂದು ನಾನು ಹೇಳುತ್ತಲಿದ್ದೆ ಎಂದನು.

ಕಳ್ಳರೂ ಸುಳ್ಳು, ಪಿಶಾಚನೂ ಸುಳ್ಳು, ರಾಜನೂ ಸುಳ್ಳು; ಇವುಗಳನ್ನೆಲ್ಲಾ ನೀನು ಸ್ವಪ್ನದಲ್ಲಿ ಕಂಡುದೇ ಹೊರತು ಮತ್ತೆ ಬೇರೆ ಇಲ್ಲ. ಇದೋ, ಗಡಿಯಾರದಲ್ಲಿ ಹತ್ತು ಗಂಟೆ ಬಡಿಯುತ್ತಿದೆ; ಫಲಾಹಾರವಾಗಿದ್ದರೆ ಕೊಡು; ಇಲ್ಲವಾದರೆ—

ಎಂದು ದಮನಕನು ಹೇಳುವುದರೊಳಗಾಗಿಯೇ, ರಾಜಾಮಲಯಸಿಂಹರು ವಿಜಯಮಾಡಿಸಿದರು ಎಂದು ಅಳು ಹೇಳಿದನು. ಆ ಹೆಸರನ್ನು ಕೇಳುತ್ತಲೆ ಎಲ್ಲರೂ ಬೆಚ್ಚಿಬಿದ್ದರು.

ಇಪ್ಪತ್ತೆಂಟನೆಯ ಅಧ್ಯಾಯ

ಫಲಾಹಾರ

ಮಲಯಸಿಂಹನು ಮುಗುಳುನಗೆಯನ್ನು ಬೀರುತ್ತ ಒಳಗೆ ಬಂದು ಉದಯಸಿಂಹನೊಡನೆ ಕುಶಲಪ್ರಶ್ನೆಯನ್ನು ಮಾಡಿ ನಾನು ಬರುವುದು ಅರ್ಧನಿಮಿಷ ಸಾವಕಾಶವಾಯಿತು; ಕ್ಷಮಿಸಬೇಕು. ಐನೂರು ಮೈಲಿಗಳ ದೂರ ಒಂದೇಸಾರಿ ಪ್ರಯಾಣ ಮಾಡುವುದು ಬಾಯಮಾತೇ ಎಂದನು.

ಐನೂರು ಮೈಲಿಗಳೇ! ಎಂದು ಎಲ್ಲರೂ ಆಶ್ಚರ್ಯಪಟ್ಟರು.

ಸ್ವಾಮೀ ರಾಜರೇ, ನನ್ನ ಸ್ನೇಹಿತರಾದ ಈ ದೊಡ್ಡ ಮನುಷ್ಯರನ್ನು ತಮ್ಮ ಜತೆಯಲ್ಲಿ ಫಲಾಹಾರಮಾಡಲು ಕರೆದೆನು. ತಮ್ಮ ಅಪ್ಪಣೆಯನ್ನು ನಿರೀಕ್ಷಿಸಿ ಅವರ ಪರಿಚಯವನ್ನು ತಮಗೆ ಮಾಡಿಕೊಡುವೆನು. ಇವರೇ ದಮನಕರು, ಇಲ್ಲಿಯ ಪ್ರಧಾನನಿಗೆ ದಕ್ಷಿಣಭುಜವೆಂದೆನಿಸಿಕೊಂಡಿದ್ದಾರೆ; ಇವರು ಈ ಪಟ್ಟಣದಲ್ಲಿ 'ಸಿಂಹನಾದ'ವೆಂಬ ಮುಖ್ಯಪತ್ರಿಕಾಪ್ರಕಾಶಕರಾದ ಭದ್ರಸಿಂಹರು, ಇವರ ಪತ್ರಿಕೆಯೆಂದರೆ ರಾಜಾಂಗವು ಗಡಗಡನೆ ನಡುಗುವುದು; ಇವರು ಶ್ರೀಮಂತರಲ್ಲಿ ಅಗ್ರೇಸರರಾದ ಚಿತ್ರಸೇನರು, ಒಲು ದೊಡ್ಡ ವಂಶಕ್ಕೆ ಸೇರಿದವರು; ಇವರು ಧನಕೋಟಿಯವರ ಕುಮಾರ ಜಯವೀರರು, ಯುದ್ಧದಲ್ಲಿ ನಿಪುಣರು. ಹೀಗೆಂದು ಅವರವರ ಹೆಸರನ್ನು ಹೇಳಿದಾಗೆಲ್ಲಾ ಅವರವರಿಗೆ ಸುಮ್ಮನೆ ಕೈ ಮುಗಿಯುತ್ತಲಿದ್ದ ಮಲಯಸಿಂಹನು ಜಯವೀರನ ಹೆಸರನ್ನು ಕೇಳಿ ನಗುತ್ತ, ಓಹೋ, ನೀನೆ ಈಗಿನ ದೊರೆಯ ಸೈನ್ಯವನ್ನು ಸೇರ್ದ್ದೀದೋ ಎಂದನು.

ಇವರು ಉತ್ಕೃಷ್ಟಹೃದಯರೂ ಧೈರ್ಯಶಾಲಿಯೂ ಆದುದರಿಂದ ಸೈನ್ಯದಲ್ಲಿ ಸೇರಿರುವುದು ನ್ಯಾಯವೇ ಎಂದು ಉದಯಸಿಂಹನು ಹೇಳಲು, ಜಯವೀರನು ಇಷ್ಟು ಸ್ತೋತ್ರಕ್ಕೆ ನಾನು ಅರ್ಹನಲ್ಲ; ದಯವಿಟ್ಟು ತಾವು ಸುಮ್ಮನಿರಬೇಕು ಎಂದನು.

ಉದಯಸಿಂಹನು ಕ್ಷಮಿಸಿ ಎಂದು ಹೇಳಿ, ಮಲಯಸಿಂಹನ ಕಡೆಗೆ ತಿರುಗಿ ಇವರು ಚಿತ್ರಸೇನನಿಗೆ ಮಹೋಪಕಾರವನ್ನು ಮಾಡಿದರು ಎಂದು ಆ ವಿಷಯವನ್ನು ವಿಶದವಾಗಿ ಹೇಳಲು, ಮಲಯಸಿಂಹನು 'ಸಂತೋಷ; ಹಾಗೆ ಉಪಕಾರಮಾಡುತ್ತಿದ್ದರೆ ದೇವರು ತಕ್ಕ ಪ್ರತ್ಯುಪಕಾರವನ್ನು ಮಾಡದೇ ಇರಲಾರನು' ಎಂದನು.

ಆಗ ಭದ್ರಸಿಂಹನು ಚಿತ್ರಸೇನನನ್ನು ಕುರಿತು ಈ ರಾಜನಿಗೆ ಉದಯಸಿಂಹನ ಮಾತಿನಲ್ಲಿ ಅನುಮಾನವಿರುವಂತೆ ಕಾಣುತ್ತದೆ, ಅದೇತಕ್ಕೆ ಎಂದು ಕೇಳಲು, ಅವನು ಜಯವೀರನ ವಿಷಯವಾವುದೂ ತಿಳಿಯದಾದುದರಿಂದ ಅವನು ಹಾಗೆ ಹೇಳಿರಬಹುದು; ಸಾಧಾರಣವಾಗಿ ಒಬ್ಬ ಮನುಷ್ಯನ ಮುಖವನ್ನು ನೋಡಿದರೆ ಅವನ ಗುಣಾವಗುಣಗಳನ್ನೂ, ಸಂಗಡ ಕೆಲವು ಮಾತನ್ನಾಡಿದರೆ ಯೋಗ್ಯತೆಯನ್ನೂ, ಕಂಡು ಹಿಡಿಯಬಹುದು. ಈ ರಾಜನನ್ನು ನೋಡಿದರೆ ಉದಯಸಿಂಹನು ಹೇಳುತ್ತಿದ್ದುದೆಲ್ಲಾ ನಿಜ

ವೆಂದೇ ತೋರುತ್ತದೆ; ಏನಪ್ಪಾ ಜಯವೀರ, ಈ ವಿಷಯದಲ್ಲಿ ನಿನ್ನ ಅಭಿಪ್ರಾಯವೇನು ಎಂದನು.

ಮಲಯಸಿಂಹನು ದೊಡ್ಡ ಮನುಷ್ಯ; ನಿಷ್ಕಪಟಿ.

ಈ ವೇಳೆಗೆ ಸೂಕ್ಷ್ಮಬುದ್ಧಿಯು ಬಂದು ಫಲಾಹಾರಕ್ಕೆ ಎಲ್ಲವೂ ಸಿದ್ಧವಾಗಿದೆ ಎಂದು ಸೂಚಿಸಲು, ಉದಯಸಿಂಹನು ಎಲ್ಲರಿಗೂ ಕೈ ಕಾಲುಗಳಿಗೆ ನೀರ ಕೊಟ್ಟು ಭೋಜನಶಾಲೆಗೆ ಕರೆದುಕೊಂಡು ಹೋಗಿ, ಕುಳ್ಳಿರಿಸಿದನು. ಆಗ ಮಲಯಸಿಂಹನು ಎಲ್ಲರನ್ನೂ ನೋಡಿ 'ನನ್ನದೊಂದರಿಕೆ; ನಾನು ಪರದೇಶದವನು, ಇತ್ತ ಕಡೆ ಎಂದೂ ಬಂದವನಲ್ಲ; ಇಲ್ಲಿಯ ಆಚಾರ ವ್ಯವಹಾರ ಸಂಪ್ರದಾಯಗಳಾವುವೂ ತಿಳಿಯವು; ಏನಾದರೂ ಲೋಪವಾದರೆ ತಾವುಗಳು ಕ್ಷಮಿಸಬೇಕು.' ಎಂದು ವಿನಯದಿಂದ ಕೇಳಿಕೊಂಡನು.

ಭದ್ರಸಿಂಹನು ಈ ಮಾತನ್ನು ಕೇಳಿದ ಒಡನೆಯೇ ದಮನಕನನ್ನು ನೋಡಿ ಇವನು ದೊಡ್ಡ ಮನುಷ್ಯನಲ್ಲದಿದ್ದರೆ ಈ ಮಾತು ಹೊರಡುತ್ತಿರಲಿಲ್ಲ ಎನ್ನಲು, ಅವನು ಇವನ ದೇಶದಲ್ಲಿಯೋ ಎಂದು ಕೇಳಿದನು. ಅದೇನು ಹಾಗೆನ್ನುತ್ತೀ? ದೊಡ್ಡ ಮನುಷ್ಯನು ಎಲ್ಲೆಲ್ಲಿಯೂ ದೊಡ್ಡ ಮನುಷ್ಯನೇ ಎಂದನು.

ಅತಿ ವಿನಯಂ ಧೂರ್ತಲಕ್ಷಣಂ, ಎಂಬ ಗಾದೆಯು ನನಗೆ ಜ್ಞಾಪಕಕ್ಕೆ ಬರುತ್ತದೆ. 'ಈ ಮಾತಿಗೆ ನಾನೊಪ್ಪುವುದಿಲ್ಲ."

ಉದಯಸಿಂಹನು ಮಲಯಸಿಂಹನನ್ನು ಕುರಿತು ನಾನು ಆದರಪೂರ್ವಕ ಅರ್ಪಿಸುವ ಇವುಗಳನ್ನು ತಾವು ದಯೆಮಾಡಿ ಸ್ವೀಕರಿಸಬೇಕು ಎಂದು ಪ್ರಾರ್ಥಿಸಲು, ಅವನು 'ಸ್ವಾಮೀ, ನನ್ನ ಸನಾಚಾರವನ್ನು ನೀವು ಅರಿಯಿರಾ? ಇದೇನು ಹೀಗೆ ಹೇಳುತ್ತೀರಿ? ಸರ್ವದಾ ಪ್ರಯಾಣ ಮಾಡುತ್ತಿರುವವನು ಆವ ತಿಂಡಿ ಸಿಕ್ಕಿದರೂ ತಿನ್ನಬೇಕು, ಇಲ್ಲದಿದ್ದರೆ ಉಪವಾಸ ಮಾಡಬೇಕು; ಹಾಗೆ ಮಾಡದಿದ್ದರೆ ಹೇಗಾದೀತು? ನಾನು ಮೊನ್ನೆಯ ದಿನ ಊಟ-ಮಾಡಿದವನು' ಎಂದನು.

ಏನಾದರೂ ಅಲ್ಪಾಹಾರವಾಗಿರಲಾರದೇ ಎಂದು ದಮನಕನು ಕೇಳಲು, ಇಲ್ಲ, ಇಲ್ಲ; ಸುಮ್ಮನೆ ಬಂಡಿಯಲ್ಲಿ ನಿದ್ದೆ ಮಾಡಿದೆನು ಎಂದನು. ಹಸಿದಿರುವಾಗ ನಿದ್ದೆ ಬರುತ್ತದೆಯೋ ಎಂದು ಜಯವೀರನು ಮಾಡಿದ ಪ್ರಶ್ನೆಗೆ ಹಸಿದಿದ್ದರೂ, ಮಾಡುವು

ದಕ್ಕೆ ಕೆಲಸವಿಲ್ಲದಿದ್ದರೂ, ಇರುವ ಕೆಲಸವನ್ನು ಮಾಡುವುದಕ್ಕೆ ಮನಸ್ಸಿಲ್ಲದಿದ್ದರೂ, ನಾನು ನಿದ್ದೆಮಾಡುವ ಪದ್ಧತಿ ಎಂದನು.

ಮನಸ್ಸಿಗೆ ತೋರಿದಾಗ ನಿದ್ದೆಮಾಡುವುದು ಹೇಗೆ? ಏನಾದರೂ ಉಪಾಯ ವುಂಟೋ? ಉಂಟು.

ಈಗ ತಮ್ಮಲ್ಲಿದ್ದರೆ ನನಗೆ ತೋರಿಸಲಾದೀತೇ ಎಂದು ಜಯವೀರನು ಕೇಳಲು ಮಲಯಸಿಂಹನು ಚಿನ್ನದ ಕಟ್ಟಾ ಮುಚ್ಚಳವೂ ಇದ್ದ ಪಚ್ಚೆಯ ಸಣ್ಣ ಬುರುಡೆಯನ್ನು ಅವನಿಗೆ ಕೊಟ್ಟನು. ಅದು ನಿಂಬೆಯ ಹಣ್ಣಿನ ಗಾತ್ರವಿದ್ದ ಅತ್ಯುತ್ಕೃಷ್ಟವಾದ ಪಚ್ಚೆ ಯಾಗಿದ್ದುದರಿಂದ ಅದನ್ನು ನೋಡಿ ಎಲ್ಲರೂ ಬೆರಗಾದರು.

ಇದರಲ್ಲಿರುವ ಔಷಧಿಯು ಹೆಸರೇನು ಎಂದು ದಮನಕನು ಕೇಳಿದುದಕ್ಕೆ, ಮಲಯಸಿಂಹನು ಅದರ ಹೆಸರು "ಕಲ್ಪವಲ್ಲೀಚೂರ್ಣ"; ಅದರ ಗುಣವನ್ನು ಉದಯ ಸಿಂಹರ ಗೆಳೆಯರಾದ ವೀರಸಿಂಹರು ಬಲ್ಲರು ಎಂದನು. ಅದಕ್ಕೆ ಉದಯಸಿಂಹನು ಅಹುದು, ಅಹುದು; ಅವನು ಇದರ ವಿಷಯವನ್ನು ನನಗೊಂದು ಸಾರಿ ತಿಳಿಸಿದ್ದನು, ಎಂದನು.

ಇಂತಹ ಔಷಧವನ್ನು ಮಾಡುವವರಾರು? ನಿಮ್ಮ ಪರಿಚಾರಕರೋ?

ನಾನು ಇವುಗಳನ್ನು ಅವರಿಂದ ಮಾಡಿಸುವುದಿಲ್ಲ. ನನಗೆ ಪದಾರ್ಥಶಾಸ್ತ್ರದ ಪರಿಚಯವು ಸ್ವಲ್ಪ ಇರುವುದರಿಂದ ನಾನೇ ಮಾಡುವೆನು.

ದಮನಕನು ಆ ಪಚ್ಚೆಯ ಬುರುಡೆಯನ್ನು ನೋಡಿ ನಾನು ಬಹು ರತ್ನಗಳನ್ನು ನೋಡಿದ್ದೇನೆ, ಆದರೆ ಇಂತಹ ಪಚ್ಚೆಯನ್ನು ಎಂದೂ ಎಲ್ಲಿಯೂ ನೋಡಿಲ್ಲ. ಇನ್ನೂ ಇಂಥವು ತಮ್ಮಲ್ಲಿ ಇವೆಯೋ ಎಂದು ಕೇಳಲು, ಮಲಯಸಿಂಹನು ನನ್ನಲ್ಲಿ ಮೂರು ಇದ್ದುವು, ಅವುಗಳಲ್ಲಿ ಒಂದನ್ನು ಒಬ್ಬ ಸುಲ್ತಾನನಿಗೆ ಕೊಟ್ಟೆನು; ಇನ್ನೊಂದನ್ನು ಇಂದ್ರ ಪ್ರಸ್ಥದ ರಾಜನಿಗೆ ಕೊಟ್ಟೆನು; ಇದನ್ನು ಈ ಔಷಧಿಯನ್ನಿಡುವ ಬುರುಡೆಯನ್ನಾಗಿ ಮಾಡಿಸಿದೆನು. ಹೀಗೆ ಮಾಡಿಸಿದುದರಿಂದ ಪಚ್ಚೆಯ ಬೆಲೆಯು ಕಡಿಮೆಯಾಯಿತು; ಆದರೂ ನನಗೆ ಈ ಕೆಲಸಕ್ಕೆ ಅನುಕೂಲವಾಗಿದೆ, ಎಂದನು. ಅದನ್ನು ಕೇಳಿ ಎಲ್ಲರೂ ಆಶ್ಚರ್ಯಪಟ್ಟು ಮಲಯಸಿಂಹನ ಮುಖವನ್ನು ನೋಡಿದರು.

ನಿಮ್ಮಿಂದ ಈ ಪಚ್ಚೆಗಳನ್ನು ತೆಗೆದುಕೊಂಡ ಅರಸರಿಬ್ಬರೂ ನಿಮಗೇನ ಕೊಟ್ಟರು

ಎಂದು ದಮನಕನು ಕೇಳಲು, ಅವನು ' ಸುಲ್ತಾನನು ಬಂದಿಯವಳನ್ನೂ, ರಾಜನು ಒಬ್ಬನ ಪ್ರಾಣವನ್ನೂ ಕೊಟ್ಟನು. ನನ್ನ ಆಯುಸ್ಸಿನಲ್ಲಿ ನಾನೂ ಒಂದಾವೃತ್ತಿ ಸಿಂಹಾಸನಾಧಿಪತಿಗಳು ಮಾಡುವ ಕೆಲಸವನ್ನು ಮಾಡಿದೆ ' ಎಂದನು.

ಆಗ ಉದಯಸಿಂಹನು ನನ್ನ ಪ್ರಾಣವನ್ನು ಉಳಿಸಿದುದು ಎನ್ನಲು, ಮಲಯಸಿಂಹನು ನೀವು ಆ ಪ್ರಸ್ತಾಪವನ್ನು ಮಾಡುವುದಿಲ್ಲವೆಂದು ಹೇಳಿಬಿಟ್ಟು ಈಗ ಮರಳಿ ಅದನ್ನು ಎತ್ತುವುದು ನ್ಯಾಯವೋ ಎಂದನು. ' ನಾನು ಹಾಗೆ ಹೇಳಿರಲಿಲ್ಲ; ನಿನ್ನಿಂದ ಉಪಕಾರ ಹೊಂದ್ದಿದ್ದ ಇನ್ನಾರಾದರೂ ಹೇಳಿರಬಹುದು. ಆ ಲುಂಗಿಬಂಪನಿಗೆ ತಮ್ಮಲ್ಲಿ ಅಷ್ಟು ಭಯಭಕ್ತಿ ಹೇಗೆ ಉಂಟಾಯಿತು ' ಎಂದು ಕೇಳಿದನು.

ಅವನು ಚಿಕ್ಕವನಾಗಿ ಕುರಿಗಳನ್ನು ಕಾಯುತ್ತಲಿದ್ದಾಗ ನನಗೆ ಸರಿಯಾದ ದಾರಿಯನ್ನು ತೋರಿಸಿದ್ದನು; ಅದಕ್ಕಾಗಿ ಅವನಿಗೆ ಬಹುಮಾನಮಾಡಿದ್ದೆನು. ಕೆಲವು ವರ್ಷಗಳ ಮೇಲೆ ಪುನಃ ನಾನೂ ಅವನೂ ಕಲೆತಾಗ ಅವನು ಹಿಂದಿನ ಸಮಾಚಾರವನ್ನು ಮರೆತು ನನ್ನನ್ನು ಹಿಡಿಯಲು ಪ್ರಯತ್ನಪಟ್ಟನು; ಆದರೆ ನಾನು ಅವನನೂ ಅವನ ಕಡೆಯ ಕೆಲವರನ್ನೂ ಹಿಡಿದು, ರಾಜನ ವಶಕ್ಕೆ ಕೊಡುವುದಕ್ಕೆ ಬದಲಾಗಿ ಮನ್ನಿಸಿ ಬಿಟ್ಟುಬಿಟ್ಟೆನು. ಆದಕ್ಕಾಗಿ ಅವನು ನನ್ನನ್ನು ಗೌರವಿಸುತ್ತಾನೆ.

ಅದಕ್ಕೆ ಭದ್ರಸಿಂಹನು ಇನ್ನು ಮುಂದೆ ಆವಾಗಲೂ ಇಂತಹ ಅಕ್ರಮಗಳನ್ನು ಮಾಡುವುದಿಲ್ಲವೆಂದು ಮಾತ ತೆಗೆದುಕೊಂಡು ಬಿಟ್ಟರೋ ಎನ್ನಲು, ಹಾಗೆ ಮಾಡಲಿಲ್ಲ; ನನ್ನ ಗೋಜಿಗೂ ನನ್ನ ಕಡೆಯವರ ಗೋಜಿಗೂ ಬರುವುದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿಸಿ ಬಿಟ್ಟುಬಿಟ್ಟೆನು. ನೀವೆಲ್ಲಾ ಉಪಕಾರಿಗಳು; ನಿಮಗೆ ಇದು ವಿಚಿತ್ರವಾಗಿ ತೋರಬಹುದು. ನನಗೆ ಅಪಕಾರವನ್ನು ಮಾಡುವವರಿಗೆ ನಾನು ಏತಕ್ಕೆ ಉಪಕಾರವನ್ನು ಮಾಡಬೇಕು ಎಂದನು.

ಆಗ ದಮನಕನು ಭಲಾ, ಭಲಾ! ಆತ್ಮಾಭಿಮಾನೋಪದೇಶಮಾಡುವವರು ಇಲ್ಲಿ ಯಾರೂ ಇರಲಿಲ್ಲ ಎಂದುದಕ್ಕೆ, ಮಲಯಸಿಂಹನು ಈ ಲೋಕದಲ್ಲಿ ಆತ್ಮಾಭಿಮಾನಿಯಲ್ಲದವನೇ ಇಲ್ಲ; ನೀವೆಲ್ಲರೂ ಬಾಯಲ್ಲಿ ಹೇಳದಿದ್ದರೂ ಕೆಲಸದಲ್ಲಿ ತೋರಿಸುವಿರಿ ಎಂದನು.

ಇದೀಗ ಸರಿಯಾದ ಮಾತು; ಆದರೆ ನೀವು ಮಾಡಿಕೊಂಡಿರುವ ಸಿದ್ಧಾಂತಕ್ಕೆ

ವಿರೋಧನಾಗಿ ನೀವೇ ಆಗಾಗ ನಡೆಯುವಂತಿದೆ ಎಂದು ಜಯವೀರನು ಹೇಳಲು, ಮಲಯಸಿಂಹನು ಜಯವೀರನ ಮುಖವನ್ನು ದೃಷ್ಟಿಸಿ ನೋಡಿ ಅದು ಹೇಗೆ ಎಂದನು.

ಉದಯಸಿಂಹನನ್ನು ತಾವು ಕಾಪಿಟ್ಟುದು ನೀವು ಹೇಳಿದುದಕ್ಕೆ ವಿರೋಧವಲ್ಲವೇ ಎಂದು ಜಯವೀರನು ಕೇಳಲು, ಉದಯಸಿಂಹನು ಸ್ವಾಮೀ ಮಲಯಸಿಂಹರೇ, ನಿಮ್ಮಲ್ಲಿರುವ ಗುಣಗಳನ್ನು ಮುಚ್ಚಿಕೊಂಡು ಇಲ್ಲದೆ ಇರುವ ದೋಷಗಳನ್ನು ಆರೋಪಿಸಿಕೊಂಡು ಮಾತನಾಡುತ್ತೀರಿ, ಅದನ್ನು ನಾನು ಒಪ್ಪುವುದಿಲ್ಲ ಎನ್ನಲು, ರಾಜನು ಇಂದ್ರಪ್ರಸ್ಥದಲ್ಲಿ ನಿಮ್ಮ ಪೇಚಾಟವನ್ನು ನೋಡಿ ಸಹಿಸಲಾರದೆ ನಿಮಗೆ ಸ್ಥಳವನ್ನೂ ಬಂಡಿಯನ್ನೂ ಮಾಡಿಕೊಟ್ಟು, ನಿಮ್ಮನ್ನು ಅತಿಥಿಗಳಂತೆ ಭಾವಿಸಿದ್ದು, ಆ ಕಳ್ಳನ ಕೈಯಲ್ಲಿ ನಿಮ್ಮನ್ನು ಸಿಕ್ಕಿಸಿಬಿಡುವುದು ಉಚಿತವೇ? ಹೀಗೆ ಮಾಡುವುದರಲ್ಲಿ ನನಗೆ ಪ್ರಯೋಜನವೂ ಇದ್ದಿತು.

ತಮಗೆ ಪ್ರಯೋಜನವೇನು?

ನಿಮ್ಮ ಸ್ನೇಹವಿಲ್ಲದಿದ್ದರೆ ಈ ದೊಡ್ಡ ಮನುಷ್ಯರ ಸ್ನೇಹವು ನನಗೆ ಹೇಗೆ ಆಗುತ್ತಲಿದ್ದಿತು ಎಂದನು.

ಇಷ್ಟು ಹೊತ್ತಿಗೆ ಫಲಾಹಾರವು ಮುಗಿಯಿತು. ಎಲ್ಲರೂ ಎದ್ದು ತಮ್ಮ ತಮ್ಮ ಮೊದಲಿನ ಸ್ಥಾನಗಳಲ್ಲಿ ಬಂದು ಕುಳಿತರು. ತಾಂಬೂಲವನ್ನು ಎಲ್ಲರಿಗೂ ಕೊಡುತ್ತಲಿರುವಾಗ ಉದಯಸಿಂಹನು ನಾನು ಬ್ರಹ್ಮಚಾರಿ; ಈ ಮನೆಯಲ್ಲಿರುವ ನನ್ನ ಕೊಟ್ಟಡಿಗಳಲ್ಲಿ ರಾಜನಿಗೆ ಅನುಕೂಲವಾದರೆ ಸಂತೋಷ; ಹಾಗೆ ಆಗದಿದ್ದರೆ ಎಲ್ಲಿ ಬಿಡಾರವನ್ನು ಮಾಡೋಣ ಎಂದು ತನ್ನ ಸ್ನೇಹಿತರನ್ನು ಕೇಳಲು, ಮಲಯಸಿಂಹನು ನೀವು ಇಂದ್ರಪ್ರಸ್ಥದಲ್ಲಿದ್ದಾಗ ನಿಮಗೆ ಜಾಗ್ರತೆಯಾಗಿಯೇ ಮದುವೆಯಾಗುವುದೆಂದು ಹೇಳಿದಂತೆ ನನಗೆ ನೆನಪಿದೆ; ಇನ್ನೂ ಆಗಲಿಲ್ಲವೋ ಎಂದನು.

ಇನ್ನೂ ಆಗುವುದರಲ್ಲಿಯೇ ಇದೆ.

ಏರ್ಪಾಡು ಆಗುತ್ತಲಿದೆ ಎಂದರೆ ಆಯಿತೆಂದೇ ಹಣವಂತರಲ್ಲಿ ಲೆಕ್ಕ ಎಂದು ದಮನಕನು ಹೇಳಲು, ಉದಯಸಿಂಹನು ಹಾಗೆ ಹೇಳುವುದು ತಪ್ಪು ಎಂದನು.

ಆಗ ಮಲಯಸಿಂಹನು ಕನ್ಯೆಯು ಒಬ್ಬ ಶ್ರೀಮಂತನ ಮಗಳೆಂದು ನೀವು ಹೇಳಿದಂತೆ ಜ್ಞಾಪಕವಿದೆ ಎನ್ನಲು, ಅಹುದು, ದುರ್ಮತಿಗಳ ಮಗಳು ಎಂದನು.

ಅವನು ಈಚೆಗೆ ಶ್ರೀಮಂತನಾದವನು.

ಅದೇನು? ನಾನು ಕೇಳಿದುದರಲ್ಲಿ ಆತನು ಉದಯಸಿಂಹರಂತೆ ವಂಶಪಾರಂಪರ್ಯವಾಗಿ ಶ್ರೀಮಂತನಲ್ಲದಿದ್ದರೂ ಸ್ವಸಾಮರ್ಥ್ಯದಿಂದ ವಿಶೇಷ ಧನವನ್ನು ಸಂಪಾದಿಸಿ ಈ ರಾಜ್ಯಕ್ಕೆ ಬಹು ಉಪಕಾರವನ್ನು ಮಾಡಿ ಅನೇಕ ಬಿರುದುಗಳನ್ನು ಸಂಪಾದಿಸಿದ್ದಾನೆಂದು ತಿಳಿಯುಬಂದಿದೆ ಎಂದು ಮಲಯಸಿಂಹನು ಹೇಳಲು, ಭದ್ರಸೇನನು ಒಹು ಉಪಕಾರ! ಒಹು ಕಷ್ಟಪಟ್ಟು ಸಂಪಾದಿಸಿದ ಬಿರುದುಗಳು! ಎಂದನು.

ಅಲ್ಪನಿಗೆ ಐಶ್ವರ್ಯಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿದ ಎಂಬ ಗಾದೆಗೆ ಸರಿಯಾಗಿ ನಮ್ಮ ದುರ್ಮತಿಯು ಅವಾಗಲೂ ಎಲ್ಲರಿಗೂ ತಿಳಿಯುವಂತೆ ತನ್ನ ಬಿರುದುಗಳನ್ನು ಧರಿಸಿಕೊಳ್ಳುತ್ತಿರುವನು.

ಅಪ್ಪಾ ದಮನಕ, ನನಗೆ ಮಾವನಾಗುವವನನ್ನು ನೀನು ನನ್ನ ಮುಂದೆ ಹೀಗೆನ್ನುವುದು ಸರಿಯೇ ಎಂದು ಹೇಳಿ ಉದಯಸಿಂಹನು ಮಲಯಸಿಂಹನನ್ನು ನೋಡಿ, ನೀವು ಈಗಾಡಿದ ಮಾತಿನಿಂದ ದುರ್ಮತಿಯನ್ನು ಬಲ್ಲಿರೆಂದು ತೋರುತ್ತದೆ ಎಂದನು.

ನಾನು ಅವರನ್ನು ನೋಡಿಲ್ಲ; ಆದರೂ ಶೀಘ್ರದಲ್ಲಿಯೇ ಅವರ ಪರಿಚಯವನ್ನು ಮಾಡಬೇಕಾದ ಸಂಭವವಿದೆ.

ಅದೇನು?

ಧನಾಗಾರಪತಿ ನಂದಕುಮಾರರ ಒಳಿ ನನ್ನ ಹಣವು ಇರುವುದು. ಇಲ್ಲಿ ನನ್ನ ವೆಚ್ಚಕ್ಕಾಗಿ ಸ್ವಲ್ಪ ಹಣವನ್ನು ಶ್ರೀಮಂತ ದುರ್ಮತಿಗಳಲ್ಲಿ ಇಡುವಂತೆ ಹೇಳಿದ್ದೆನು ಎಂದು ಹೇಳಿ ಜಯವೀರನ ಮುಖವನ್ನು ನೋಡಲು, ಅವನು ನಂದಕುಮಾರ ಎಂಬ ಹೆಸರನ್ನು ಕೇಳಿ, ಬೆಚ್ಚಿ, ಸ್ವಾಮೀ, ಮಲಯಸಿಂಹರೇ! ನಂದಕುಮಾರನನ್ನು ನೀವು ಬಲ್ಲಿರೋ ಎಂದು ಕೇಳಿದನು.

ಬಲ್ಲೆ, ಯಾತಕ್ಕೆ?

ಅವರು ಹಿಂದೆ ನಮಗೆ ಬಹು ಉಪಕಾರವನ್ನು ಮಾಡಿದ್ದಾರೆ. ನನ್ನ ತಂದೆಯವರು ಸಾಯುವವರೆಗೆ ಅವರ ಉಪಕಾರಸ್ಮರಣೆಯನ್ನೇ ಮಾಡುತ್ತಲಿದ್ದು ನನ್ನನ್ನು ಕರೆದು ಆ ಉಪಕಾರಿಯನ್ನು ಕಂಡು ವಂದಿಸುವಂತೆ ಹೇಳಿದರು. ಎಷ್ಟೆಷ್ಟು ಕೇಳಿ

ದರೂ ಏನು ಕಾರಣದಿಂದಲೋ ತಮಗೆ ಆ ಸಂಗತಿಯೇ ಗೊತ್ತಿಲ್ಲವೆಂದು ಅವರು ಹೇಳಿಬಿಟ್ಟರು.

ಮಲಯಸಿಂಹನು ಮುಗುಳುನಗೆಯೊಡನೆ ಕಾರಣವೇನು? ತಿಳಿದೇ ಇದೆ. ಉತ್ತಮಪುರುಷರು ತಾವು ಮಾಡಿದ ಉಪಕಾರವನ್ನು ಎಂದಿಗೂ ಹೇಳಿಕೊಳ್ಳರು, ಎಂದನು.

ಆಗ ಉದಯಸಿಂಹನು ಮಧ್ಯೆ ಏನೇನೋ ಪ್ರಸ್ತಾಪಗಳು ಬಂದು ರಾಜರಿಗೆ ಅನುಕೂಲವಾದ ಮನೆಯು ಸಂಗತಿಯೇ ಮರೆತು ಹೋಯಿತು ಎನ್ನಲು, ಅವರವರು ಅಪರವರಿಗೆ ತಿಳಿದಿದ್ದ ಮನೆಗಳ ಅನುಕೂಲಪ್ರತಿಕೂಲಗಳನ್ನು ಹೇಳಿದರು. ಜಯವೀರನು ಸುಮ್ಮನಿರಲು, ಚಿತ್ರಸೇನನು ನೀನೇಕೆ ಸುಮ್ಮನಿದ್ದೀಯೆ? ಅನುಕೂಲವಾದ ಮನೆ ಅವುದಾದರೂ ನಿನಗೆ ತಿಳಿದಿದ್ದರೆ ಹೇಳಬಾರದೇ ಎಂದು ಹೇಳಿದುದಕ್ಕೆ, ಅವನು ನನ್ನ ಮನೆಯು ದೊಡ್ಡದಾಗಿ ಅನುಕೂಲವಾಗಿದ್ದರೂ ನನ್ನ ತಂಗಿಯೂ ಅವಳ ಗಂಡನೂ ಒಂದು ಭಾಗದಲ್ಲಿರುವುದರಿಂದ ಸಂಕೋಚಪಟ್ಟಿನು. ಆದರಿಂದ ರಾಜರಿಗೆ ಆವ ಅನಾನುಕೂಲವೂ ಇಲ್ಲದಿದ್ದರೆ ಅವಶ್ಯಕವಾಗಿ ಅವರು ಅಲ್ಲಿಗೆ ಬರಬಹುದು ಎಂದನು.

ಇದನ್ನು ಕೇಳಿ ಮಲಯಸಿಂಹನು ನಿಮಗೆ ತಂಗಿಯೊಬ್ಬಳಿರುವಳೋ ಎನ್ನಲು ರತ್ನಾಂಬೆಯೆಂಬುವಳೊಬ್ಬಳುಂಟು ಎಂದನು.

ಮದುವೆಯಾಗಿದೆಯೋ?

ಹೂಂ, ಒಂಭತ್ತು ವರ್ಷಗಳಾದುವು.

ಗಂಡ ಹೆಂಡಿರು ಸುಖವಾಗಿದ್ದಾರೆಯೋ?

ಮನುಷ್ಯರು ಎಷ್ಟು ಮಟ್ಟಿಗೆ ಸುಖವಾಗಿರಬಹುದೋ ಅಷ್ಟು ಮಟ್ಟಿಗೆ ತಮ್ಮ ಅನುಗ್ರಹದಿಂದ ಸುಖವಾಗಿದ್ದಾರೆ. ರತ್ನಾಂಬೆಯು ಗಂಡನು ಕಷ್ಟಕಾಲದಲ್ಲಿ ನಮ್ಮನ್ನು ಕೈಬಿಡಲಿಲ್ಲ. ಅವನು ಯೋಗ್ಯನು.

ಆಗ ಉದಯಸಿಂಹನು ಜಯವೀರನನ್ನು ಕುರಿತು, ಅಯ್ಯಾ, ಒಂದು ಮಾತು. ರಾಜರು ಅಮರಪುರವನ್ನು ನೋಡಲು ಒಂದಿದ್ದಾರೆ; ಅವರನ್ನು ನಿಮ್ಮ ಕೊಂಪೆಯಲ್ಲಿ

ಸೇರಿಸಬೇಡಿರಿ ಎಂದುದಕ್ಕೆ, ಅನನು ಅವರಿಗೆ ಇನ್ನಾವ ಮನೆಯೂ ಸಿಕ್ಕದೆ ಅದು ಅನು ಕೂಲವಾದರೆ ಇರಲಿ ಎಂದು ಹೇಳಿದೆ ಎಂದನು.

ಮಲಯಸಿಂಹನು ಜಯನೀರನನ್ನು ನೋಡಿ ನಿಮ್ಮ-ತಂಗಿ ಭಾವಂದಿರ ಪರಿಚಯವನ್ನು ಮಾಡಿಕೊಟ್ಟರೆ ಸಾಕು ; ನಾನು ಅವರನ್ನು ನೋಡಿ ಸಂತೋಷಪಡುವೆನು ಎಂದು ಹೇಳಿ, ನನ್ನ ಮನೆಯು ಆವಾಗಲೇ ಸಿದ್ಧವಾಗಿದೆ ಎಂದನು.

ಅದು ಹೇಗೆ ?

ನನ್ನ ಪರಿಚಾರಕನನ್ನೂ ಕಯ್ಯಾಳನ್ನೂ ಒಂದು ವಾರ ಮುಂದಾಗಿಯೇ ಇಲ್ಲಿಗೆ ಕಳುಹಿಸಿದ್ದೆನು ನಾನು ಇಲ್ಲಿಗೆ ಬರುವಾಗ, ದಾರಿಯಲ್ಲಿ ಕಾದಿದ್ದು, ಅವರು ಮಾಡಿರುವ ಮನೆಯ ಸನ್ನಿವೇಶವನ್ನು ಗುರುತು ಹಚ್ಚಿದ ಈ ಚೀಟಿಯನ್ನು ಕೊಟ್ಟರು. ಇದನ್ನು ಓದಿ ನೋಡಿ ಎಂದು ಆ ಚೀಟಿಯನ್ನು ಉದಯಸಿಂಹನ ಕೈಯಲ್ಲಿ ಕೊಟ್ಟನು.

ಇದೀಗ ಏರ್ಪಾಡಿನ ಕ್ರಮ ಎಂದು ಭದ್ರಸಿಂಹನು ಹೇಳಲು, ಚಿತ್ರಸೇನನು ಅದು ರಾಜರ ಏರ್ಪಾಡು ಎಂದನು.

ಹಾಗಾದರೆ ನಿಮ್ಮ ಮನೆಯೇ ನಿಮಗೆ ಇನ್ನೂ ಗೊತ್ತಿಲ್ಲವೋ ಎಂದು ಕೇಳಲು ಮಲಯಸಿಂಹನು ಹೊತ್ತಾಗಿ ಹೋಗಿದ್ದುದರಿಂದ ನೆಟ್ಟಗೆ ಇಲ್ಲಿಗೇ ಬಂದೆನೆಂದು ಮೊದಲೇ ಹೇಳಲಿಲ್ಲವೇ ಎಂದನು.

ಇದನ್ನು ಕೇಳಿ ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಇವನು ಹಾಸ್ಯ ಮಾಡುತ್ತಾನೋ, ನಿಜವಾಗಿಯೇ ಹೇಳುತ್ತಾನೋ ? ನಮ್ಮೊಂದಿಗೆ ಸುಳ್ಳಾಡಿ ಇವನಿಗೇನು ಪ್ರಯೋಜನ ಎಂದು ಆಲೋಚಿಸಿದರು.

ಭದ್ರಸಿಂಹನು ಮಿಕ್ಕವರನ್ನು ನೋಡಿ ಹಾಗಾದರೆ ನಮ್ಮಿಂದಾಗುವ ಅಲ್ಪ ಸ್ವಲ್ಪ ಕೆಲಸಗಳನ್ನು ಇವರಿಗೆ ಮಾಡಿಕೊಡೋಣ. ನಾನು ಪತ್ರಿಕೆಯ ಪ್ರಕಾಶಕನಾದುದರಿಂದ ಈ ಪಟ್ಟಣದ ನಾಟಕಶಾಲೆಗಳನ್ನೂ, ನೋಡಲು ಯೋಗ್ಯವಾದ ಇತರಸ್ಥಳಗಳನ್ನೂ ಇವರಿಗೆ ತಿಳಿಸುವೆನು ಎಂದನು.

ತಮಗೇಕೆ ತೊಂದರೆ ? ಮೊದಲೇ ನಾನು ನನ್ನ ಮನೆವಾರ್ತೆಯವನಿಗೆ ಊರಿನಲ್ಲಿರುವ ಪ್ರತಿಯೊಂದು ನಾಟಕಶಾಲೆಯಲ್ಲಿಯೂ ಒಂದೊಂದು ಸ್ಥಳವನ್ನು ಗೊತ್ತು ಮಾಡುವಂತೆ ಹೇಳಿದ್ದೇನೆ ಎಂದು ಮಲಯಸಿಂಹನು ಹೇಳಿದನು,

ನಿಮ್ಮ ವರ್ತಮಾನವನ್ನಿಗೆ ಈ ಊರಿನ ಪರಿಚಯವುಂಟೋ ಎಂದು ದಮನಕನು ಕೇಳಿದುದಕ್ಕೆ, 'ಇಲ್ಲ; ಅವನೂ ನನ್ನಂತೆಯೇ ಈ ಪಟ್ಟಣಕ್ಕೆ ಇದೇ ಮೊದಲು ಬಂದುದು; ಆದರೆ, ಅವನು ಮೊದಲು ಸಿವಾಯಿಯಾಗಿದ್ದು, ಅನಂತರ ಕಳ್ಳ ವ್ಯಾಪಾರಿಯಾಗಿದ್ದು, ಕೊನೆಗೆ ನನ್ನಲ್ಲಿ ಬಂದು ಸೇರಿದ್ದಾನೆ. ಅವನಿಗೆ ತಿಳಿಯದೇ ಇರುವುದು ಆವುದೂ ಇಲ್ಲ' ಎಂದನು.

ಈ ಯೋಗ್ಯನನ್ನು ನೀವು ಮನವಾರ್ತೆಗೆ ಇಟ್ಟುಕೊಂಡಿರುವುದರಲ್ಲಿ ನಿಮಗೆ ವರ್ಷಕ್ಕೆ ಎಷ್ಟು ಲಾಭ?

ಕದಿಯುವ ವಿಷಯದಲ್ಲಿ ಎಲ್ಲರೂ ಒಂದೇ.

ನಿಮಗೆ ಮನೆಯೂ ಪರಿಚಾರಕರೂ ಎಲ್ಲರೂ ಸಿದ್ಧವಾಗಿದ್ದ ಮೇಲೆ ಒಬ್ಬ ಉಪಪತ್ನಿ ಬೇಕಲ್ಲವೇ ಎಂದು ಚಿತ್ರಸೇನನು ಕೇಳಲು, ಉದಯಸಿಂಹನು ಆ ಯವನದೇಶದ ಯುವತಿಯನ್ನು ನೆನೆಸಿಕೊಂಡು ಮಲಯಸಿಂಹನ ಮುಖವನ್ನು ನೋಡಿ ನಕ್ಕನು. ಆಗ ಮಲಯಸಿಂಹನು 'ಅವಳೂ ಸಿದ್ಧವಾಗಿದ್ದಾಳೆ. ನಾನೊಬ್ಬ ಬಂದಿಯವಳನ್ನು ಬೆಲೆಗೆ ಕೊಂಡಿದ್ದೇನೆ' ಎನ್ನಲು, ದಮನಕನು ಈ ರಾಜ್ಯದಲ್ಲಿ ಬಂದಿಯವಳನ್ನು ಇಟ್ಟುಕೊಳ್ಳಕೂಡದೆಂಬ ಕಟ್ಟಳೆಯುಂಟು. ಅವಳು ಈ ರಾಜ್ಯಕ್ಕೆ ಕಾಲಿಟ್ಟಾಗಲೇ ಅವಳ ಸೆರೆಯು ತೊಲಗಿ ಹೋಗುವುದು ಎಂದನು.

ಅವಳಿಗೆ ಆ ಸಮಾಚಾರವನ್ನು ಹೇಳುವವರಾರು?

ಆರಾದರೂ ಸರಿಯೆ.

ಅವಳು ಹೊರಗೆ ಬರುವುದೇ ಇಲ್ಲವಲ್ಲಾ?

ಹಾಗಾದರೆ ಕಷ್ಟ ಎಂದು ದಮನಕನು ಹೇಳಲು, ಭದ್ರಸಿಂಹನು ಅವಳನ್ನು ಆವಾಗಲೂ ಸೆರೆಯಲ್ಲೇ ಇಟ್ಟಿರುವಿರೋ ಎಂದು ಕೇಳಿದನು.

ಸ್ವಾಮೀ, ನಾನು ಅಷ್ಟು ಕ್ರೂರಿಯಲ್ಲ. ನನ್ನಲ್ಲಿರುವುದಕ್ಕೆ ಒಪ್ಪಿದರೆ ಇರಬಹುದು, ಇಲ್ಲವಾದರೆ ಬೇಕಾದ ಕಡೆ ಹೋಗಬಹುದು. ಅವಳಿಗೆ ನನ್ನ ಬಳಿ ಆವ ವಿಷಯದಲ್ಲಿಯೂ ಕೊರತೆಯಿಲ್ಲದಿರುವುದರಿಂದ ಅವಳು ನನ್ನನ್ನು ಬಿಟ್ಟು ಹೋಗಲು ಇಷ್ಟಪಡಳು.

ಆಗ ಹೊತ್ತಾಯಿತೆಂದು ದಮನಕನು ಮೊದಲು ಹೊರಟನು. ಅವನನ್ನು ಕಳು

ಹಿಸಿಕೊಡಲು ಉದಯಸಿಂಹನು ತಲೆಬಾಗಿಲಿಗೆ ಬಂದಾಗ, ಅಪ್ಪಾ ಉದಯ, ಇವ ನಾರೋ ಒಬ್ಬ ಅಸಾಧ್ಯನೆಂದು ಕಾಣುತ್ತದೆ. ನಾನು ಪ್ರಧಾನನ ಒಳಿಗೆ ಹೋಗಿ ಇವನ ಸಮಾಚಾರವನ್ನು ತಿಳಿಸಿ, ಪೋಲೀಸಿನವರ ಮೂಲಕ ಇವನ ಪೂರ್ವೋತ್ತರ ವನ್ನು ತಿಳಿಯುವೆನು ಎಂದು ಹೇಳಿ ಹೊರಟನು.

ದುರ್ಮತಿಯು ಉಪನ್ಯಾಸಕ್ಕೆ ಹೋಗಿ ಅದರ ವಿಷಯವಾಗಿ ನನಗೆ ತೋರಿದು ದನ್ನು ಪತ್ರಿಕೆಯಲ್ಲಿ ಬರೆಯಬೇಕೆಂದಿದ್ದೆನು; ಈಗ ನಾನಲ್ಲಿಗೆ ಹೋಗಲಾರೆನು. ಈ ರಾಜನ ಸಮಾಚಾರವು ಆದಕ್ಕಿಂತಲೂ ಸೊಗಸಾಗಿರುವುದರಿಂದ ಇದನ್ನೇ ಪ್ರಕಟಿಸು ವೆನು ಎಂದು ಹೇಳಿ ಭದ್ರಸಿಂಹನು ಹೊರಟನು.

ಚಿತ್ರಸೇನನು ಜಯುನೀರನನ್ನು ಕುರಿತು ನಾವೂ ಹೋಗೋಣ ಬಾ ಎನ್ನಲು, ಅವನು ಮಲಯಸಿಂಹರಿಗೆ ನನ್ನ ಮನೆಯ ವಿಳಾಸವನ್ನು ತಿಳಿಸಿ ಬರುವೆನು ಎಂದು ಹೇಳಿ ಅದನ್ನು ಒಂದು ಚೀಟಿಯಲ್ಲಿ ಗುರುತ ಹಚ್ಚಿ ಕೊಟ್ಟು, ಚಿತ್ರಸೇನನ ಜತೆಯಲ್ಲಿ ಹೊರಟನು.

ಇಪ್ಪತ್ತೊಂಬತ್ತನೆಯ ಅಧ್ಯಾಯ

ಸಂದರ್ಶನ

ಅತಿಥಿಗಳೆಲ್ಲರೂ ಹೊರಟು ಹೋದ ಮೇಲೆ ಉದಯಸಿಂಹನು ತಾನು ವಾಸವಾಗಿ ರುವ ಭಾಗವನ್ನು ಮಲಯಸಿಂಹನಿಗೆ ತೋರಿಸಬೇಕೆಂದು ಅವನನ್ನು ಮೊದಲು ತನ್ನ ಮುಖ್ಯವಾದ ಕೊಟ್ಟಡಿಗೆ ಕರೆದುಕೊಂಡು ಹೋದನು. ಅದರಲ್ಲಿ ಬಹುಕಾಲದಿಂದ ಕಷ್ಟಪಟ್ಟು ವಿಶೇಷದ್ರವ್ಯವನ್ನು ವೆಚ್ಚಮಾಡಿ ಅಪೂರ್ವವಾದ ಪದಾರ್ಥಗಳನ್ನು ಶೇಖ ರಿಸಿ ಇಟ್ಟಿದ್ದನು. ಆ ಪದಾರ್ಥಗಳ ವಿಷಯವಾಗಿ ತನಗೆ ತಿಳಿದಷ್ಟು ಮಲಯಸಿಂಹ ನಿಗೆ ತಿಳಿಯದೆಂದು ಉದಯಸಿಂಹನು ಪ್ರತಿಯೊಂದು ಪದಾರ್ಥಗಳ ವಿಷಯವನ್ನೂ ವಿವರವಾಗಿ ಹೇಳತೊಡಗಿದನು. ಮಲಯಸಿಂಹನು ಪುರಾಣ, ವಸ್ತುಶಾಸ್ತ್ರ, ಧಾತು ವಿದ್ಯೆ ಪ್ರಾಣಿಶಾಸ್ತ್ರಗಳಲ್ಲಿ ಪ್ರವೀಣನಾಗಿದ್ದುದರಿಂದ ಕಂಡೊಡನೆಯೇ ಪ್ರತಿ ಯೊಂದು ಪದಾರ್ಥದ ವೃತ್ತಾಂತವನ್ನೂ ಅನುಕೂಲವಾಗಿ ಹೇಳತೊಡಗಿದನು. ಇದನ್ನು ನೋಡಿ ಉದಯಸಿಂಹನು ಇವನಿಗೆ ತಿಳಿಯದ ಸಮಾಚಾರವೇ ಇಲ್ಲ

ವಲ್ಲಾ ಎಂದು ಆತ್ಯಾಶ್ಚರ್ಯಪಟ್ಟು, ಅಲ್ಲಿಂದ ತನ್ನ ಶಯ್ಯಾಗೃಹಕ್ಕೆ ಕರೆದುಕೊಂಡು ಹೋದನು.

ಆ ಗೃಹದ ಸೊಬಗನ್ನು ನೋಡಿ ಮಲಯಸಿಂಹನು ಸಂತೋಷಪಟ್ಟು, ಅಲ್ಲಿ ಕಟ್ಟಿದ್ದ ಒಂದು ಚಿತ್ರ ಪಟವನ್ನು ನೋಡಿ ಭ್ರಮಿಸಿ ನಿಂತನು. ಅದು ಸುಮಾರು ಇಪ್ಪತ್ತೈದು ಇಪ್ಪತ್ತಾರು ವಯಸ್ಸಿನ ಒಬ್ಬ ಅನ್ಯದೇಶದ ತರಳೆಯ ಚಿತ್ರ. ಆ ತರಳೆಯು ಸಮುದ್ರತೀರದಲ್ಲಿ ನಿಂತು ಕಡಲನ್ನು ನೋಡುತ್ತ, ಆರ ಆಗಮನವನ್ನೋ ನಿರೀಕ್ಷಿಸುತ್ತಲಿರುವಂತೆ ತೋರುತ್ತಲಿದ್ದಿತು; ಉಡಿಗೆ ತೊಡಿಗೆಗಳಿಂದ ಅವಳು ಅಂಜಿಗರವಳೆಂದು ಬೋಧೆಯಾಗುತ್ತಲಿದ್ದಿತು. ಮಲಯಸಿಂಹನು ಆ ಚಿತ್ರವನ್ನು ನೋಡಿ ವ್ಯಸನಾಕ್ರಾಂತನಾದನು; ದೈವಾಧೀನದಿಂದ ಆ ಕೊಟ್ಟಡಿಯು ಸ್ವಲ್ಪ ಕತ್ತಲೆಯಾಗಿದ್ದುದರಿಂದ ಉದಯಸಿಂಹನಿಗೆ ಇವನ ವ್ಯಸನವು ಗೊತ್ತಾಗಲಿಲ್ಲ. ಮಲಯಸಿಂಹನು ಹಾಗೆಯೇ ಸ್ವಲ್ಪ ಸಮಾಧಾನವನ್ನು ಮಾಡಿಕೊಂಡು, ಅಯ್ಯಾ ಉದಯಸಿಂಹ, ನಮ್ಮ ದೇಶದಲ್ಲಿ ಮದುವೆಯಿಲ್ಲದ ತರುಣರು ತಾವು ಮೋಹಿಸಿರುವ ಕಾಂತೆಯರ ಚಿತ್ರಗಳನ್ನು ಬರೆಯಿಸಿ ಶಯ್ಯಾಗೃಹದಲ್ಲಿ ಕಟ್ಟಿಕೊಳ್ಳುವ ಪದ್ಧತಿ; ಇಲ್ಲಿಯೂ ಅದೇ ಪದ್ಧತಿಯಿರುವಂತೆ ಇದೆ. ಈ ಯುವತಿಯ ಸೌಂದರ್ಯವು ಯೋಗಿಗಳ ಮನಸ್ಸನ್ನೂ ಕೂಡ ಸೆಳೆಯುವುದು ಎಂದನು.

ಸ್ವಾಮೀ ರಾಜರೇ, ನನ್ನ ತಾಯಿಯನ್ನು ತಾವು ನೋಡಿದ್ದರೆ ಈ ತಪ್ಪು ಮಾಡುತ್ತಿರಲಿಲ್ಲ. ಇಗೋ ಇದರ ಇದುರಿಗೆ ಇರುವ ಚಿತ್ರವನ್ನು ನೋಡಿ.

ಅದು ಆರದು? ಅದು ನನ್ನ ತಂದೆಯದು.

ಈ ಎರಡು ಚಿತ್ರಗಳೂ ಅವರ ಪ್ರಾಯಕಾಲದಲ್ಲಿ ಬರೆಸಿದಂತೆ ತೋರುತ್ತದೆ.

ಇಲ್ಲ. ಇವನ್ನು ಬರೆಯಿಸಿ ಈಗ ಐದು ವರ್ಷವಾಯಿತು. ನನ್ನ ತಂದೆಯು ಊರಲ್ಲಿಲ್ಲದ ವೇಳೆಯಲ್ಲಿ, ನನ್ನ ತಾಯಿಯು ಇವುಗಳನ್ನು ಬರೆಯಿಸಿ ಅವರು ಬರುತ್ತಲೆ ತೋರಿಸಿದಳು. ಅವರು ಇವುಗಳನ್ನು ನೋಡಿ ಅಸಮಾಧಾನಪಟ್ಟುದರಿಂದ ಅವರ ಕಣ್ಣಿಗೆ ಬೀಳದಂತೆ ಕಟ್ಟಿಕೊಂಡಿರಲು ಇವುಗಳನ್ನು ನನಗೆ ಕೊಟ್ಟಳು. ನನ್ನ ತಂದೆಯು ಇಲ್ಲಿಗೆ ಬರುವುದೇ ಇಲ್ಲ; ತಾಯಿಯು ಮಾತ್ರ ಆಗಾಗ ಬರುವುದುಂಟು. ಅವಳು ಬಂದಾಗೆಲ್ಲಾ ಇದನ್ನು ನೋಡದೆ ಇರುವುದಿಲ್ಲ; ನೋಡಿದಾಗೆಲ್ಲಾ ಸಂಕಟಪಡದೆ

ಇರಳು. ಏಕೆಂದು ಕೇಳಿದರೆ ಅಳುವಳು; ಇದೊಂದು ವಿನಾ, ಮಿಕ್ಕ ವಿಷಯಗಳಲ್ಲೆಲ್ಲಾ ಅವರಿಬ್ಬರೂ ಹೊದ್ದಿಕೊಂಡಿರುವರು.

ಉದಯಸಿಂಹನು ಹೀಗೆ ಹೇಳುತ್ತಲೆ, ಈ ಮಾತನ್ನಾಡುವುದರಲ್ಲಿ ಇವನ ಅಂತರಂಗಾಭಿಪ್ರಾಯವೇನಿರಬಹುದೆಂದು ಮಲಯಸಿಂಹನು ಅವನ ಮುಖವನ್ನು ಗುರ್ತಿಸಿ ನೋಡಿ ಅವನು ಅದನ್ನು ಸಹಜವಾಗಿ ಆಡಿದುದು ಎಂದು ತಿಳಿದನು.

ಅಯ್ಯಾ ರಾಜರೇ, ಇದೇ ನನ್ನ ಮನೆ, ಇವುಗಳೇ ನನ್ನ ವಸ್ತುಗಳು; ಇವೆಲ್ಲವನ್ನೂ ತಮ್ಮದೆಂತಲೇ ಭಾವಿಸಿ ಇಷ್ಟಾನುಸಾರ ಉಪಯೋಗಿಸಿಕೊಳ್ಳಬಹುದು. ತಮ್ಮ ವಿಷಯವಾಗಿ ಇಂದ್ರಪ್ರಸ್ಥದಿಂದಲೇ ನನ್ನ ತಂದೆಗೆ ಬರೆದು ಇದ್ದೆನು; ಇಂದು ಬೆಳಿಗ್ಗೆ ತಾವು ಇಲ್ಲಿಗೆ ಜಿಜಯಮಾಡಿಸುವಿರೆಂಬುದನ್ನು ತಿಳಿಸಿದ್ದೆನು. ಅವರು ಬಹುಶಃ ತಮ್ಮ ಆಗಮನವನ್ನು ಇದಿರು ನೋಡುತ್ತಲಿರಬಹುದು; ಅಲ್ಲಿಗೆ ಹೋಗೋಣವೋ?

ಕೂಡಲೇ ಮಲಯಸಿಂಹನು ರಾಧಾಬಾಯಿಯನ್ನೂ ಅವಳ ಗಂಡನನ್ನೂ ನೋಡುವುದರಲ್ಲಿ ತನಗಿದ್ದ ಅಭಿಪ್ರಾಯವೊಂದನ್ನೂ ಹೊರಪಡಿಸದೆ, ಮರ್ಯಾದೆಗಾಗಿ ಮಾಡಬೇಕಾದುದನ್ನು ಮಾಡುವವನಂತೆ ಸುಮ್ಮನಿದ್ದನು. ಆಗ ಉದಯಸಿಂಹನು ಒಬ್ಬ ಸೇವಕನನ್ನು ಕರೆದು ರಾಜಾ ಮಲಯಸಿಂಹರು ತಮ್ಮ ದರ್ಶನಾರ್ಥವಾಗಿ ಬರುವರು ಎಂದು ನನ್ನ ತಂದೆ ತಾಯಿಗಳಿಗೆ ತಿಳಿಸು ಎಂದು ಹೇಳಿ, ಮಲಯಸಿಂಹನನ್ನು ಕರೆದುಕೊಂಡು ಹೋದನು.

ಅಲ್ಲಿ ಸುಮಾರು ಮೂವತ್ತೈದು ಮೂವತ್ತಾರು ವಯಸ್ಸುಳ್ಳ, ಸೇನಾಧಿಪತಿಯಂತೆ ಮೆರೆಯುತ್ತಲಿದ್ದವನೊಬ್ಬನ ಒಂದು ಚಿತ್ರಪಟವು ಕಟ್ಟಿದ್ದಿತು. ಇದು ಆರ ಚಿತ್ರವೆಂದು ಮಲಯಸಿಂಹನು ಕೇಳಲು, ಉದಯಸಿಂಹನು ನನ್ನ ತಂದೆಯವರ ಚಿತ್ರ. ಅವರು ಅನೇಕಯುದ್ಧಗಳನ್ನು ಮಾಡಿ ಜಯವನ್ನು ಹೊದ್ದಿದ್ದ ಕಾರಣ ಸ್ವದೇಶದಲ್ಲಿಯೂ ಯವನ ದೇಶದಲ್ಲಿಯೂ ಅನೇಕ ಬಹುಮಾನಗಳನ್ನು ಹೊದ್ದಿರುವರು ಎಂದನು.

ಹಾಗೋ, ಎಂದು ಮಲಯಸಿಂಹನು ಆ ಚಿತ್ರವನ್ನು ವಿಶೇಷವಾಗಿ ನೋಡುತ್ತಲಿರುವಾಗ, ಸುಮಾರು ನಲವತ್ತು ನಲವತ್ತೈದು ವಯಸ್ಸುಳ್ಳವನೊಬ್ಬನು ಇದಿರು ಕಡೆಯ ಬಾಗಿಲನ್ನು ತೆರೆದುಕೊಂಡು ಒಳಗೆ ಬಂದನು. ಆಗ ಉದಯಸಿಂಹನು ಅಪ್ಪಾಜೀ!

ಇವರೀಗ ನನ್ನ ಆಪತ್ಕಾಲದಲ್ಲಿ ಸಹಾಯಮಾಡಿದ ಮಹಾನುಭಾವರಾದ ರಾಜಾಮಲಯಸಿಂಹರು ಎಂದನು.

ರಾಜಸಿಂಹನು ಮಲಯಸಿಂಹನಿಗೆ ವಂದಿಸಿ ಸ್ವಾಮಿ, ನೀವು ನಮ್ಮ ವಂಶವನ್ನು ಉದ್ಧಾರಮಾಡಿದ ಉಪಕಾರಕ್ಕಾಗಿ ನಾನು ಕೃತಜ್ಞನಾಗಿದೇನೆ ಎಂದು ಹೇಳಿ ಒಂದು ಆಸನವನ್ನು ತೋರಿಸಿ ತಾನು ಗವಾಕ್ಷಿಯ ಇದುರಿಗೆ ಇದ್ದ ಆಸನದಲ್ಲಿ ಕುಳಿತನು. ಮಲಯಸಿಂಹನು ಕಿಟಕಿಗೆ ಹಾಕಿ ಅರ್ಧ ಎಳೆದಿದ್ದ ತೆರೆಯ ಮರೆಯಲ್ಲಿ ಸ್ವಲ್ಪ ಕತ್ತಲೆಯಾಗಿದ್ದ ಕಡೆಗೆ ಆಸನವನ್ನು ಎಳೆದುಕೊಂಡು ಕುಳಿತು, ರಾಜಸಿಂಹನ ಮುಖವನ್ನು ಚೆನ್ನಾಗಿ ನೋಡಿ, ಅವನು ಸುಖವಾಗಿರುವನಂತೆ ತೋರಿದರೂ ಸುಖಿಯಲ್ಲವೆಂದು ತಿಳಿದುಕೊಂಡನು.

ರಾಧಾಬಾಯಿಯು ಇನ್ನೇನು ಬರಬಹುದು ಎಂದು ರಾಜಸಿಂಹನು ಹೇಳಲು, ಮಲಯಸಿಂಹನು ಮಹಾಸ್ವಾಮಿ! ನನ್ನ ಪುಣ್ಯಕ್ಕೆ ಎಣೆಯೇ ಇಲ್ಲ; ತಮ್ಮ ಶೌರ್ಯಶಕ್ತಿ ಬಲ ಐಶ್ವರ್ಯಗಳನ್ನೂ ಗುಣಾತಿಶಯಗಳನ್ನೂ ವಿಶೇಷವಾಗಿ ಕೇಳಿದ್ದೆನು; ತಮ್ಮ ಯಶಸ್ಸು ಲೋಕಪ್ರಸಿದ್ಧವಾದುದು. ನಾನು ಅಮರಪುರಕ್ಕೆ ಬಂದ ದಿನವೇ ತಮ್ಮಂಥ ಪುಣ್ಯಪುರುಷರ ದರ್ಶನವಾದುದು ಬಹು ಶ್ರೇಯಸ್ಕರ. ತಾವು ಕಳಿಂಗ ದೇಶದವರೆಂದು ಕೇಳಿ ಬಲ್ಲೆ; ಅಲ್ಲಿಯೂ ಯವನದೇಶದಲ್ಲಿಯೂ ತಾವು ಮಾಡಿದ ಸಾಹಸಗಳಿಗೆ ತಮಗೆ ಸೈನ್ಯಾಧೀಶಪದವಿಯು ಬರಬೇಕಾಗಿದ್ದಿತು; ಕೊಡದೇ ಇದ್ದುದು ಅನ್ಯಾಯವಲ್ಲವೇ ಎಂದನು.

ನಾನು ಈಚೆಗೆ ಯುದ್ಧಪ್ರಸಕ್ತಿಯನ್ನೇ ಬಿಟ್ಟುಬಿಟ್ಟಿನು; ಬಿಡದೆ ಇದ್ದಲ್ಲಿ ನೀವು ಹೇಳಿದಂತೆ ಸೈನ್ಯಾಧೀಶನಾಗಬಹುದಾಗಿದ್ದಿತು. ಸಾಧಾರಣವಾಗಿ ರಾಜರಿಗೆ ಮರವು ಹೆಚ್ಚು. ಇಪ್ಪತ್ತು ವರ್ಷಗಳು ಸೈನ್ಯದಲ್ಲಿ ಕೆಲಸಮಾಡಿ ಜಯಶೀಲನಾಗಿದ್ದರೂ ಪಟ್ಟ ಶ್ರಮಕ್ಕೆ ತಕ್ಕ ಪ್ರಯೋಜನವಿಲ್ಲದಿದ್ದರೆ ಹೇಗೆ ತಾನೇ ಜುಗುಪ್ಸೆ ಹುಟ್ಟದು? ರಾಜನು ಸಚಿವನಾಗಿರಬೇಕೆಂದು ಒಲಾತ್ಕರಿಸಿದುದರಿಂದ ಈಗ ಸಚಿವನಾಗಿರುತ್ತೇನೆ; ಹೆಚ್ಚಾಗಿ ಕೆಲಸವಿಲ್ಲದುದರಿಂದ ವ್ಯವಹಾರೋಪಯುಕ್ತವಾದ ವಿದ್ಯೆಗಳನ್ನು ಕಲಿಯುತ್ತಲಿದ್ದೇನೆ.

ಸ್ವಾಮೀ! ತಾವು ಅಗರ್ಭಶ್ರೀಮಂತರಾಗಿದ್ದು ಅನಾಮಧೇಯನಂತೆ ಸೈನ್ಯದಲ್ಲಿ ಕಾಲಾಳಾಗಿ ಸೇರಿ, ಕ್ರಮಕ್ರಮವಾಗಿ ಉನ್ನತಪದವಿಯನ್ನು ಹೊಂದಿ, ಕೊನೆಗೆ ರಾಜ

ನಿಗೆ ಎರಡನೆಯ ಸಚಿವರಾಗಿ ಸಭೆಯನ್ನು ಅಲಂಕರಿಸುತ್ತಲಿದ್ದರೂ, ಲೋಕೋಪಕಾರ ವಿದ್ಯೆಯನ್ನು ಕಲಿಯಲು ಪ್ರಾರಂಭಿಸಿದುದು ಶ್ಲಾಘ್ಯವೇ ಸರಿ.

ಈ ರೀತಿ ಅರನ್ನೂ ಎಂದೂ ಸ್ತೋತ್ರಮಾಡದ ಮಲಯಸಿಂಹನು ತನ್ನ ತಂದೆಯನ್ನು ಸ್ತೋತ್ರಮಾಡಿದುದನ್ನು ಕಂಡು, ಉದಯಸಿಂಹನಿಗೆ ಆಶ್ಚರ್ಯವುಂಟಾಯಿತು; ಈ ಸ್ತೋತ್ರದಿಂದ ರಾಜಸಿಂಹನಿಗೆ ಸ್ವಲ್ಪ ಅಸಮಾಧಾನವಾಯಿತೆಂದು ತಿಳಿದು, ಮಲಯಸಿಂಹನು ನಮ್ಮ ದೇಶದವರು ಹೀಗೆ ಮಾಡಲರಿಯರು. ಅಲ್ಪಸಂತೋಷಿಗಳಾದುದರಿಂದ ತಮ್ಮ ಜೀವನಕ್ಕೆ ಸ್ವಲ್ಪಮಟ್ಟಿಗೆ ಅನುಕೂಲವಾದರೂ ಅವರು ವೃಥಾಕಾಲಹರಣ ಮಾಡುವರೇ ಹೊರತು ಉಪಯೋಗವಾದ ಕೆಲಸವನ್ನು ಮಾಡುವುದಿಲ್ಲ ಎಂದನು.

ಮಲಯಸಿಂಹರೇ! ನಿಮ್ಮ ಯೋಗ್ಯತೆಗೆ ಆ ದೇಶವು ಪ್ರಯೋಜನವಿಲ್ಲ; ಅಮರ ದೇಶದಲ್ಲಿ ಬಂದಿದ್ದರೆ ನಮ್ಮ ರಾಜನು ಇಲ್ಲಿಯವರನ್ನು ಪುರಸ್ಕರಿಸದಿದ್ದರೂ ಅನ್ಯದೇಶದವರಿಗೆ ವಿಶೇಷವಾಗಿ ಮರ್ಯಾದೆ ಮಾಡುವನು ಎಂದು ರಾಜಸಿಂಹನು ಹೇಳಲು, ಉದಯಸಿಂಹನು ಅಪ್ಪಾಜೀ! ಮಲಯಸಿಂಹರ ಸಮಾಚಾರ ನಿಮಗೆ ತಿಳಿಯದು; ಅವರಿಗೆ ಮರ್ಯಾದೆಯೆನ್ನುವುದು ತೃಣಪ್ರಾಯ ಎಂದನು.

ಇದೀಗ ಸತ್ಯವಾದ ಮಾತು; ಉದಯಸಿಂಹರು ನನ್ನ ಪ್ರಕೃತಿಯನ್ನು ಚೆನ್ನಾಗಿ ಬಲ್ಲರು. ಎಂದು ಮಲಯಸಿಂಹನು ನಗುತ್ತ ಹೇಳಿದನು.

ರಾಜಸಿಂಹನು ಇದರಿಂದ ಸುಪ್ರೀತನಾಗಿ ಮಲಯಸಿಂಹನಿಗೆ ಬೇಕಾದ ಉಪಚಾರೋಕ್ತಿಗಳನ್ನು ಹೇಳಿದಂತಾಯಿತೆಂದು ಭಾವಿಸಿ, ನಾನು ಈಗ ಆಸ್ಥಾನಕ್ಕೆ ಹೋಗಬೇಕಾಗಿದೆ; ನಿಮಗೆ ಪಯಣದಿಂದ ಆಯಾಸವಾಗಿಲ್ಲದಿದ್ದರೆ ನಿಮ್ಮನ್ನೂ ಜತೆಯಲ್ಲಿ ಕರೆದುಕೊಂಡು ಹೋಗಬೇಕೆಂದಿದ್ದೇನೆ ಎಂದನು.

ಸ್ವಾಮೀ ರಾಜಸಿಂಹರೇ, ಮತ್ತೊಂದು ವೇಳೆಯಲ್ಲಿ ನನ್ನನ್ನು ಕರೆದುಕೊಂಡು ಹೋದರೆ ಆಗತ್ಯ ಬರುತ್ತೇನೆ. ಬಹುದೂರ ಪಯಣಮಾಡಿ ಬಂದು ತಮ್ಮ ಮಂದಿರದಲ್ಲಿ ಇಳಿದು ಇನ್ನೂ ಅತ್ತಿತ್ತ ಕದಲದೆ ಇದ್ದೇನೆ; ಇದಲ್ಲದೆ ರಾಧಾಬಾಯಿಯವರ ಸಂದರ್ಶನವು ಇನ್ನೂ ನನಗೆ ಆಗಲಿಲ್ಲ ಎಂದನು.

ಆ ವೇಳೆಗೆ ಸರಿಯಾಗಿ ರಾಧಾಬಾಯಿಯು ತನ್ನ ಕೊಟ್ಟಡಿಯ ಬಾಗಿಲನ್ನು ತೆರೆದು ಎರಡು ಕೈಗಳಿಂದ ಎರಡು ನಿಲುವನ್ನೂ ಹಿಡಿದುಕೊಂಡು ನಿಂತು, ಮಲಯಸಿಂಹನನ್ನು

ನೋಡುತ್ತಲಿದ್ದಳು. ಪ್ರಾಯಶಃ ಅವಳು ಮಲಯಸಿಂಹನ ಧ್ವನಿಯನ್ನೂ ಮಾತು ಗಳನ್ನೂ ಕೇಳಿರಬಹುದು. ಅವನನ್ನು ನೋಡಿದ ಕೂಡಲೇ ಅವಳು ತನ್ನ ಎರಡು ಕೈಗಳನ್ನೂ ಜೋಲು ಬಿಟ್ಟು ಕಳೆಗುಂದಿ ಕಂಬದಂತೆ ನಿಂತುಬಿಟ್ಟಳು.

ಅವಳ ಸ್ಥಿತಿಯನ್ನು ನೋಡಿ, ಉದಯಸಿಂಹನು ಅಮ್ಮಾ, ಇದೇನು? ನಿನಗೆ ದೇಹದಲ್ಲಿ ಸ್ವಸ್ಥವಿಲ್ಲವೇ ಎಂದು ಕೇಳಲು ಅವ್ವಾ, ಮಗನ ಪ್ರಾಣವನ್ನು ಉಳಿಸಿ ಮಹೋಪಕಾರ ಮಾಡಿದ ಪುರುಷನನ್ನು ಮೊದಲು ನೋಡುವಾಗ ಯಾವ ತಾಯಿಗೆ ತಾನೇ ಚಿತ್ತವಿಕಾರವಾಗದು ಎಂದು ಹೇಳಿ, ಮಲಯಸಿಂಹನನ್ನು ನೋಡಿ ಸ್ವಾಮೀ! ತಮ್ಮ ಸಾಹಾಯ್ಯವಿಲ್ಲದಿದ್ದರೆ ನಮ್ಮ ವಂಶವು ನಿರ್ವಂಶವಾಗುತ್ತಲಿದ್ದಿತು. ಉದಯಸಿಂಹ ನನ್ನು ತಮ್ಮ ಮಗನಂತೆ ಭಾವಿಸಿ ಕಾಪಿಟ್ಟ ಉಪಕಾರಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿರು ವೆವು ಎಂದು ತಲೆಬಾಗಿದಳು.

ಅವಳನ್ನು ನೋಡಿ ಅವಳ ಮಾತನ್ನು ಕೇಳುತ್ತಲೆ ಮಲಯಸಿಂಹನಿಗೂ ಚಿತ್ತ ವಿಕಾರವುಂಟಾಯಿತು. ಹಾಗೆಯೇ ಸಮಾಧಾನಮಾಡಿಕೊಂಡು ಆಸನದಿಂದೆದ್ದು 'ಆವನಾದರೂ ಒಬ್ಬನು ಆಪಾಯದಲ್ಲಿರುವಾಗ ಅದನ್ನು ತಪ್ಪಿಸುವುದು ಪ್ರತಿಯೊಬ್ಬನಿಗೂ ಕರ್ತವ್ಯವಾಗಿದೆ. ಹೀಗಿರುವಲ್ಲಿ ನನ್ನ ಈ ಅಲ್ಪಕಾರ್ಯವು ಅಷ್ಟು ಸ್ತೋತ್ರಾರ್ಹ ವಾದುದಲ್ಲ' ಎಂದನು.

ಇಂತಹ ಸಖನು ನನ್ನ ಮಗನಿಗೆ ಸಿಕ್ಕಿದುದು ನಮ್ಮ ಅದೃಷ್ಟವೇ ಸರಿ ಎಂದು ಕಣ್ಣಲ್ಲಿ ನೀರ ತಂದುಕೊಂಡಳು. ರಾಜಸಿಂಹನು ಮಗನನ್ನು ನೋಡಿ ನಿನ್ನ ತಾಯಿಗೆ ಮೈ ಸ್ವಸ್ಥವಿಲ್ಲವೆಂದು ತೋರುತ್ತದೆ; ನೋಡಿಕೋ. ನಾನು ಹೋಗಿಬರುವೆನು ಎಂದು ಹೇಳಿ ಮಲಯಸಿಂಹನ ಅಪ್ಪಣೆಯನ್ನು ಪಡೆದು ಹೊರಟುಹೋದನು.

ಅನಂತರ ರಾಧಾಬಾಯಿಯು ಮೆಲ್ಲಗೆ ಬಂದು ತನ್ನ ಗಂಡನು ಕುಳಿತಿದ್ದ ಆಸನ ದಲ್ಲಿ ಕುಳಿತು ಮಲಯಸಿಂಹನನ್ನೂ ಕುಳಿತುಕೊಳ್ಳುವಂತೆ ಹೇಳಿ, " ಸ್ವಾಮೀ ರಾಜರೇ, ಈ ದಿನ ಇಲ್ಲಿ ವಿಶ್ರಮಿಸಿಕೊಂಡು ನಮ್ಮ ಮನಸ್ಸು ಸಂತೋಷಪಡಿಸಬೇಕು, ಎಂದನು.

ನಿಮ್ಮ ಮನೆಯುಲ್ಲಿರುವುದು ನನಗೇನೋ ಗೌರವವೇ ಸರಿ; ಆದರೂ ಬಹು ದೂರ ಪ್ರಯಾಣಮಾಡಿ ನೆಟ್ಟಗೆ ನಿಮ್ಮ ಮನೆಗೇ ಬಂದೆನಾದುದರಿಂದ ನನ್ನ ಜನ ಗಳು ಮನೆ ಮುಂತಾದುದನ್ನು ಮಾಡಿದರೋ ಇನ್ನೂ ಗೊತ್ತಾಗಲಿಲ್ಲ; ಆದುದರಿಂದ

ನಿಲ್ಲುವುದಕ್ಕಾಗುವುದಿಲ್ಲ. ಕ್ಷಮಿಸಬೇಕು ಎಂದು ಮಲಯಸಿಂಹನು ಹೊರಡಲು, ಉದಯಸಿಂಹನು ಸ್ವಾಮೀ, ತಮಗೆ ಅನುಕೂಲವಾದ ಬಂಡಿಯು ಸಿಕ್ಕುವ ವರೆಗೆ ನನ್ನ ಬಂಡಿಯನ್ನು ತಾವು ಉಪಯೋಗಿಸಿಕೊಳ್ಳಬಹುದು ಎಂದನು.

ಇಷ್ಟು ಹೊತ್ತಿಗೆ ಭದ್ರಕನು ಒಹುಶಃ ಒಂದು ಕುದುರೆ ಬಂಡಿಯನ್ನು ಕ್ರಯಕ್ಕೆ ತೆಗೆದಿರಬಹುದು ಎಂದು ಹೇಳಿ ಜೇದಿಯ ಕಡೆ ತಿರುಗಲು ಅಲ್ಲಿ ಎರಡು ಕುದುರೆಯ ಬಂಡಿಯೊಂದು ಸಿದ್ಧವಾಗಿ ನಿಂತಿದ್ದಿತು. ಆ ಬಂಡಿಯನ್ನೂ ಕುದುರೆಗಳನ್ನೂ ನೋಡಿ ಉದಯಸಿಂಹನು ಅಸೂಯಾಪರನಾಗಿ, ಈ ಕುದುರೆಗಳನ್ನೂ ಬಂಡಿಯನ್ನೂ ನೋಡಿ ಆಸೆಪಟ್ಟು ಯುವರಾಜನು ನೆನ್ನೆಯ ದಿನ ಏಳು ಸಾವಿರ ವರಹಗಳಿಗೆ ಕೇಳಿದ್ದನು; ಮಾಲಿಕನು ಹತ್ತು ಸಾವಿರ ವರಹಗಳಿಗೆ ಒಂದು ಕಾಸು ಕಡಿಮೆಯಾದರೂ ಕೊಡುವುದಿಲ್ಲವೆಂದು ಹೇಳಿಬಿಟ್ಟನು ಎಂದನು.

ಹಣವು ಎಷ್ಟು ವೆಚ್ಚವಾದರೂ ಆಗಲಿ, ಅನುಕೂಲವಾಗುವುದು ಮುಖ್ಯ ಎಂದು ಹೇಳಿ ಮಲಯಸಿಂಹನು ಬಂಡಿಯಲ್ಲಿ ಕುಳಿತು ಅಯ್ಯಾ ಉದಯಸಿಂಹರೇ, ನಾಳೆ ಒಂದು ದಿನ ಸಾವಕಾಶವಾದರೆ ನಾನು ಮಾಡಿರುವ ಕುಟೀರವನ್ನು ನಿಮ್ಮ ಆಗಮನಕ್ಕೆ ತಕ್ಕ ಮಟ್ಟಿಗೆ ಅಲಂಕರಿಸಿ ತಮ್ಮನ್ನು ಬರಮಾಡಿಕೊಳ್ಳುವೆನು ಎನ್ನಲು, ಉದಯಸಿಂಹನು ಸ್ವಾಮೀ, ಆವ ಕುಟೀರವನ್ನಾದರೂ ಒಂದು ದಿನದಲ್ಲಿ ಅರಮನೆಯನ್ನಾಗಿ ಮಾಡುವ ಶಕ್ತಿಯೂ ಯುಕ್ತಿಯೂ ನಿಮ್ಮಲ್ಲಿ ನೆಲೆಗೊಂಡಿವೆ. ಕೆಲವರು ಆವುದಾದರೂ ಒಂದು ಯಕ್ಷಿಣಿಯ ಸಾಹಾಯ್ಯದಿಂದ ಅನೇಕ ಕೆಲಸಗಳನ್ನು ಮಾಡುವರು; ತಾವು ಅಂತಹ ಸಾಹಾಯ್ಯವಾವುದೂ ಇಲ್ಲದೆ ಅದಕ್ಕಿಂತ ಹೆಚ್ಚಾಗಿ ಮಾಡಬಲ್ಲಿರಿ ಎಂದನು.

ಅದಕ್ಕೆ ಮಲಯಸಿಂಹನು ನಗುತ್ತ ನೀವು ಈ ವರ್ತಮಾನವನ್ನು ಈ ಪಟ್ಟಣದಲ್ಲಿ ಹರಡಿದರೆ ಅದು ಇಲ್ಲಿಯ ರಮಣಿಯರಿಗೆ ಚಿತ್ತಕ್ಷೋಭೆಯನ್ನುಂಟುಮಾಡುವುದು ಎಂದು ಹೇಳಿ ಹೊರಟು ಹೋದನು.

ಉದಯಸಿಂಹನು ಪುನಃ ತಾಯಿಯ ಬಳಿಗೆ ಬಂದನು. ಅವಳು ಚಿಂತಾಕ್ರಾಂತೆಯಾಗಿದ್ದುದನ್ನು ನೋಡಿ, ಅಮ್ಮಾ, ನಿನ್ನ ಮುಖವೇಕೆ ಇಂದು ವಿವರ್ಣವಾಗಿದೆ ಎಂದು ಕೇಳಲು, ಅಪ್ಪಾ ಮಗೂ! ಇದನ್ನು ನಿನ್ನ ತಂದೆಯು ನೋಡಿ ನಿನ್ನನ್ನೇನಾದರೂ ಕೇಳಿ

ದರೋ ಎಂದುದಕ್ಕೆ, ಉದಯಸಿಂಹನು ಅಮ್ಮಾ, ಅವರೇನೋ ಅದನ್ನು ನೋಡಿದರು; ನಿನಗೆ ಮೈ ಸ್ವಸ್ಥವಿಲ್ಲವೆಂದು ಹೇಳಲಿಲ್ಲವೆ?

ಅದು ಹೋಗಲಿ. ಈ ರಾಜಾಮಲಯಸಿಂಹನಾರು?

ಮಲಯದ್ವೀಪದ ರಾಜನೆಂದು ಅವನು ಹೇಳಿಕೊಳ್ಳುತ್ತಾನೆ. ಆ ದ್ವೀಪವು ನಿರ್ಮಾನುಷ್ಯವಾದುದೆಂತಲೂ, ಬರೆಯು ಬಂಡೆಯು ನೆಲವೆಂತಲೂ, ಕಡಲಗಳ್ಳರೂ ಕಳ್ಳವ್ಯಾಪಾರಿಗಳೂ ಆಗಾಗ ಬಂದು ತಂಗುವ ಸ್ಥಳವೆಂತಲೂ ವೀರಸಿಂಹನು ಹೇಳುತ್ತಿದ್ದನು. ಈ ರಾಜನು ಕಳ್ಳನೋ ಕಳ್ಳ ವ್ಯಾಪಾರಿಯೋ ತಿಳಿಯದು. ಹಣವಿರುವುದರಿಂದ ದಾನಧರ್ಮಗಳನ್ನು ವಿಶೇಷವಾಗಿ ಮಾಡುತ್ತಾನೆ; ನೋಡಿದವರೆಲ್ಲಾ ಅವನ ಗುಣವನ್ನೂ ನಡತೆಯನ್ನೂ ಶ್ಲಾಘಿಸುವರು.

ನಾನು ನೋಡಿದ ವರೆಗೂ ನೀನು ಹೇಳುವಂತೆ ಅವನ ಗುಣ ನಡತೆಗಳು ಶ್ಲಾಘ್ಯವಾಗಿಯೇ ಇವೆ.

ಅಮ್ಮಾ, ನಾನೂ ಅನೇಕದೇಶಗಳನ್ನು ಸುತ್ತಿ ಅನೇಕ ದೊಡ್ಡ ಮನುಷ್ಯರಲ್ಲಿ ಕಲೆತು ಅವರ ಔದಾರ್ಯವನ್ನೂ ನಡತೆಗಳನ್ನೂ ನೋಡಿದ್ದೇನೆ; ಹೀಗಿರುವವರನ್ನು ಎಲ್ಲಿಯೂ ನೋಡಲಿಲ್ಲ ಎಂದು ಉದಯಸಿಂಹನು ಹೇಳುತ್ತಲೆ, ರಾಧಾಬಾಯಿಯು ಸ್ವಲ್ಪ ಯೋಚಿಸಿ ಅಪ್ಪಾ ಮಗೂ, ನೀನೇನೂ ಚಿಕ್ಕವನಲ್ಲ; ಇದಲ್ಲದೆ ನಿನ್ನ ವಯಸ್ಸಿಗೆ ಹೆಚ್ಚಾದ ಬುದ್ಧಿಯನ್ನೂ ವಿವೇಕವನ್ನೂ ಪಡೆದಿದ್ದೀಯೆ. ನಿನ್ನ ಮೇಗಣ ಪ್ರೀತಿಯಿಂದ ಒಂದು ಮಾತನ್ನು ಕೇಳುತ್ತೇನೆ; ಸರಿಯಾಗಿ ಬದಲನ್ನು ಹೇಳು. ಮಲಯಸಿಂಹನನ್ನೂ ಅವನ ನಡತೆಯನ್ನೂ ನೀನು ವಿಶೇಷವಾಗಿ ನೋಡಿರಬಹುದು; ಅವನು ನಿಜವಾಗಿಯೂ ದೊಡ್ಡ ಮನುಷ್ಯನೋ ಎಂದು ಕೇಳಿದಳು.

ಅಮ್ಮಾ, ಅವನು ದೊಡ್ಡ ಮನುಷ್ಯನೋ ಅಲ್ಲವೋ ನನಗೆ ತಿಳಿಯದು; ನಡತೆಯೇನೋ ಒಳ್ಳೆಯದು. ನೋಡಿದವರೆಲ್ಲರೂ ಅವನನ್ನು ದೊಡ್ಡ ಮನುಷ್ಯನೆಂದೇ ಹೇಳುತ್ತಾರೆ.

ನಿನ್ನ ನಿಜವಾದ ಅಭಿಪ್ರಾಯವೇನು?

ಅವನ ವಿಷಯದಲ್ಲಿ ನನಗೆ ಇನ್ನೂ ಆವ ಅಭಿಪ್ರಾಯವೂ ಊಂಟಾಗಿಲ್ಲ. ಅವನ ಸ್ಥಿತಿಯನ್ನು ನೋಡಿ 'ಪೂರ್ವಜನ್ಮದಲ್ಲಿ ಆರೋ ಅವನನ್ನು ಹಿಂಸೆಪಡಿಸಿ ಕೊಂದುಹಾಕಿರ

ಬಹುದು. ಆದುದರಿಂದಲೇ ಈಗ ಅವನು ಅವರನ್ನು ಶಿಕ್ಷಿಸುವುದಕ್ಕಾಗಿ ಮನುಷ್ಯವೇಷವನ್ನು ತಾಳಿ ವಿಶೇಷ ದ್ರವ್ಯವನ್ನು ಸಂಪಾದಿಸಿ ದೊಡ್ಡವನಾಗಿರಬಹುದು' ಎಂದು ವೀರಸಿಂಹನು ಹೇಳಿದ್ದನು.

ಇದನ್ನು ಕೇಳುತ್ತಲೆ ರಾಧಾಬಾಯಿಯು ಗಡಗಡನೆ ನಡುಗಿ ಸ್ವಲ್ಪ ಹೊತ್ತು ಸುಮ್ಮನಿದ್ದು, ಬಳಿಕ ಅವನ ವಯಸ್ಸೇನು ಎಂದು ಕೇಳಿದಳು.

ಸುಮಾರು ಮೂವತ್ತೈದು ಮೂವತ್ತಾರು ಇರಬಹುದು.

ಅಷ್ಟು ಸ್ವಲ್ಪ ವಯಸ್ಸಿರಲಾರದು.

ಅದರಲ್ಲಿ ಏನೂ ಸಂದೇಹವಿಲ್ಲ. ಅವನು ಅನೇಕಾವೃತ್ತಿ ಇಂಥಿಂಥ ವಯಸ್ಸಿನಲ್ಲಿ ಇಂಥಿಂಥ ಕೆಲಸಗಳನ್ನು ಮಾಡಿದೆನೆಂದು ನನ್ನೊಂದಿಗೆ ಹೇಳಿರುವನು; ಅದನ್ನೆಲ್ಲಾ ನಾನು ಜ್ಞಾಪಕವಿಟ್ಟುಕೊಂಡು ತಾಳೆ ನೋಡಿದಾಗ ಅವನ ವಯಸ್ಸಿನಲ್ಲಿ ಅವ ತಪ್ಪು ನನಗೆ ಸಿಕ್ಕಲಿಲ್ಲ. ಇದಲ್ಲದೆ, ಅವನ ಕಣ್ಣಿನ ಹೊಳಪೂ, ಸುಕ್ಕಿಲ್ಲದ ಹಣೆಯೂ, ಕರಿಯ ಕೂದಲೂ ಯೌವನವನ್ನು ಸೂಚಿಸುತ್ತಲಿದೆ ಎನಲು, ರಾಧಾಬಾಯಿಯು ತಲೆಯನ್ನು ತಗ್ಗಿಸಿಕೊಂಡು ಕಣ್ಣೀರನ್ನು ಸುರಿಸುತ್ತ, ಮಗೂ, ಆ ರಾಜನು ನಿನ್ನ ಸ್ನೇಸೋ ಕಾಪಿಟ್ಟನು; ಅವನ ಸ್ನೇಹದಿಂದ ನಿನಗೆ ಮೇಲಾಗುವುದೋ?

ಅದರಿಂದ ನನಗೇನೂ ಅಪಾಯವಾಗುವುದಿಲ್ಲ.

ಏನೂ ತೋರಲಿಲ್ಲ. ನೀನು ವಿವೇಕಿ, ಆದರೂ ಪ್ರೀತಿಯಿಂದ ನಾನು ಹೇಳುವ ಮಾತನ್ನು ಕೇಳು. ಅವನ ವಿಷಯದಲ್ಲಿ ಬಲು ಎಚ್ಚರಿಕೆಯಿಂದಿರು.

ಅಮ್ಮಾ, ಅವನು ಜೂಜಾಡುವವನಲ್ಲ, ಕುಡಿಯುವವನಲ್ಲ, ವಿಶೇಷ ದ್ರವ್ಯವನ್ನು ಸಂಪಾದಿಸಿರುವುದರಿಂದ ಸಾಲವನ್ನೂ ಮಾಡುವವನಲ್ಲ; ಹೀಗಿರುವಲ್ಲಿ ಅವನಿಂದ ನಮಗೇನು ಭಯ?

ಅದೇನೋ ಸರಿ. ನಿನ್ನ ಪ್ರಾಣವನ್ನು ಕಾಪಿಟ್ಟವನು ನಿನಗೆ ಅವ ಅಪಾಯವನ್ನೂ ಮಾಡಲಾರನು. ನಿಮ್ಮಪ್ಪನ ವಿಷಯದಲ್ಲಿ ಅವನು ಹೇಗಿದ್ದನು?

ಅವನು ನಮ್ಮಪ್ಪನ ಸಂಗಡ ಮಾತನಾಡುತ್ತಲಿದ್ದಾಗ ಮಧ್ಯೆಮಧ್ಯೆ ಯಾಥೋಚಿತವಾಗಿ ಸ್ತೋತ್ರವನ್ನು ಮಾಡುತ್ತಲಿದ್ದುದರಿಂದ ಅವರು ಸಂತೋಷಪಟ್ಟುಕೊಂಡು ಹೋದರು ಎನ್ನಲು, ರಾಧಾಬಾಯಿಯು ಆಲೋಚನಾಪರಳಾಗಿ ನಿದ್ದೆಬಂದವಳಂತೆ

ಕಣ್ಣುಗಳನ್ನು ಮುಚ್ಚಿಕೊಂಡಳು. ಉದಯಸಿಂಹನು ಅವಳಿಗೆ ನಿದ್ದೆ ಬಂದಿತೆಂದು ತಿಳಿದು ಮೆಲ್ಲಗೆ ಎದ್ದು ಹೊರಗೆ ಬಂದು ಸದ್ದಾಗದಂತೆ ಬಾಗಿಲನ್ನು ಮುಚ್ಚಿಕೊಂಡು ಅಾಯಕ್ಕೆ ಹೋಗಿ ಮಲಯಸಿಂಹನ ಕುದುರೆಗಳ ಅಂದವನ್ನು ನೆನೆಸಿಕೊಂಡು ಸಂಕಟ ಪಡುತ್ತಿದ್ದನು.

ಮೂವತ್ತನೆಯ ಅಧ್ಯಾಯ

ಮುಯ್ಯಿಗೆ ಮುಯ್ಯಿ

ದೊಡ್ಡಮನುಷ್ಯರು ಇರುವ ಶ್ರೇಣಿಯೊಳಗೆ ಮಲಯಸಿಂಹನ ಕಡೆಯವರು ಆವರಣವುಳ್ಳ ಸೌಧವೊಂದನ್ನು ಸಿದ್ಧಪಡಿಸಿದ್ದರು. ಅದರ ಉದ್ಯಾನದಲ್ಲಿ ಬಗೆಬಗೆಯ ಹೂಗಿಡುಗಳೂ, ಅಪೂರ್ವವಾಗಿಯೂ ಮನೋಹರವಾಗಿಯೂ ಇರುವ ಮರಗಳೂ, ಕುಳಿತುಕೊಳ್ಳುವ ಆಸನಗಳೂ, ಲತಾಗೃಹಗಳೂ ಇದ್ದುವು. ಉದಯಸಿಂಹನ ಮನೆಯಿಂದ ಆರು ನಿಮಿಷಗಳೊಳಗೆ ಮಲಯಸಿಂಹನು ತನ್ನ ಮನೆಗೆ ಬಂದು ಸೇರಿದನು. ಆ ದಾರಿಯಲ್ಲಿ ಕುದುರೆ ಸವಾರಿಯನ್ನು ಮಾಡಿಕೊಂಡು ಹೋಗುತ್ತಲಿದ್ದ ಶ್ರೀಮಂತರ ಮಕ್ಕಳು ಮಲಯಸಿಂಹನ ಕುದುರೆಗಳನ್ನು ಕಂಡು ಇಂತಹ ಬಂಡಿಯನ್ನೂ ಕುದುರೆಗಳನ್ನೂ ನಾವೆಂದೂ ಕಾಣೆವು. ಇವುಗಳಿಗೆ ಯಾವ ಭಾಗ್ಯಶಾಲಿಯು ಸ್ವಾಮಿಯೋ ನೋಡಬೇಕೆಂಬ ಕುತೂಹಲದಿಂದ, ತಮ್ಮ ಕುದುರೆಗಳನ್ನು ವೇಗವಾಗಿ ಓಡಿಸಿಕೊಂಡು ಆ ಬಂಡಿಯ ಹಿಂದೆಯೇ ಬಂದರು. ಆದರೆ ಬಂಡಿಯು ಎಲ್ಲಿಯೂ ನಿಲ್ಲದೆ ನೆಟ್ಟಗೆ ಆವರಣವನ್ನು ಹೊಕ್ಕು ಮನೆಯ ಬಾಗಿಲ ಮುಂದೆ ನಿಂತುದರಿಂದ ಇವರೆಲ್ಲರೂ ಆಶಾಭಂಗದಿಂದ ತಮ್ಮ ತಮ್ಮ ದಾರಿಯನ್ನು ಹಿಡಿದುಕೊಂಡು ಹೋದರು.

ಯಜಮಾನನು ಸುಖವಾಗಿ ಊರಿಗೆ ಬಂದು ಸೇರಿದನೆಂಬ ಸಂತೋಷದಿಂದ ತಲೆಬಾಗಿಲಲ್ಲಿ ನಿಂತಿದ್ದ ವಾಮನಭಟ್ಟನು ನಗುಮೊಗದೊಡನೆ ಬಂಡಿಯು ಬಳಿಗೆ ಬಂದು ಕೈಲಾಗನ್ನು ಕೊಟ್ಟು ಒಳಗೆ ಕರೆದುಕೊಂಡು ಹೋದನು. ಕೂಡಲೇ ಭದ್ರಕನು ಮಲಯಸಿಂಹನನ್ನು ಕಾಣಿಸಿಕೊಂಡು, ಮಹಾಸ್ವಾಮಿ, ಇದೇ ತಮಗೋಸ್ಕರ ಮಾಡಿದ ಮನೆ, ಇದನ್ನು ಪರಾಂಬರಿಸಬೇಕು ಎಂದು ಹೇಳಿ, ಯಜಮಾನನಿಗೆ ಮನೆಯನ್ನೆಲ್ಲ

ತೋರಿಸಿದನು. ಎಲ್ಲವನ್ನೂ ನೋಡಿ ಮಲಯಸಿಂಹನು, ಮನೆಯೇನೋ ಅನುಕೂಲವಾಗಿದೆ, ನಡುಮನೆಗೆ ಹಾಸಿರುವ ಕಲ್ಲುಗಳು ಈಗಿನ ಕಾಲಕ್ಕೆ ತಕ್ಕಂತೆ ಅಂದವಾಗಿಲ್ಲ; ಅವುಗಳನ್ನು ಕೀಳಿಸಿ ಪಂಚರಂಗೀ ಕಲ್ಲುಗಳನ್ನು ನಾಳೆಯೇ ಹಾಸಿಸಿ ಬಿಡು, ನಾನು ಈ ವೂರಿಗೆ ಬಂದ ಸುದ್ದಿಯನ್ನು ಧನಾಗಾರಪತಿ ಶ್ರೀಮಂತ ದುರ್ಮತಿಯವರಿಗೆ ತಿಳಿಸಿದೆಯೋ? ನಾನು ಹೇಳಿದ್ದ ದಳ್ಳಾಳಿಯು ಬಂದಿರುವನೋ ಎಂದನು.

ಮಹಾಸ್ವಾಮೀ! ಅಪ್ಪಣೆಯಾದಂತೆ ದುರ್ಮತಿಯವರಿಗೆ ತಮ್ಮ ಆಗಮನವನ್ನು ಆಗಲೇ ತಿಳಿಸಿದೆನು; ದಳ್ಳಾಳಿಯನ್ನೂ ಕರೆದುಕೊಂಡು ಬಂದಿದ್ದೇನೆ. ಅವನು ಇಲ್ಲಿರುವನು ಎಂದು ಹೇಳಿ ಯಜಮಾನನ ಅಪ್ಪಣೆಯನ್ನು ನಿರೀಕ್ಷಿಸುತ್ತ ಅಲ್ಲಿಯೇ ನಿಂತನು.

ಮಲಯಸಿಂಹನು ದಳ್ಳಾಳಿಯನ್ನು ಕರೆಸಿ ಏನಪ್ಪಾ, ಆ ಮನೆಯ ಕ್ರಯಪತ್ರವು ಸಿದ್ಧವಾಗಿದೆಯೋ ಎಂದು ಕೇಳಿದುದಕ್ಕೆ, ಅವನು ಮಹಾಸ್ವಾಮೀ, ಸಿದ್ಧವಾಗಿದೆ ಎಂದನು.

ಆ ಮನೆಯಿರುವುದೆಲ್ಲಿ? ಎಂದು ಮಲಯಸಿಂಹನು ಕೇಳಲು, ದಳ್ಳಾಳಿಯು ಆಶ್ಚರ್ಯದಿಂದ ಮಹಾಸ್ವಾಮಿ! ಮನೆಯನ್ನು ಕೊಂಡುಕೊಳ್ಳುವವರು ಅದು ಇಂತಹ ಕಡೆಯಿದೆ ಎಂದು ತಿಳಿಯಬೇಡವೇ ಎಂದನು. ಅದಕ್ಕೆ ತಾನು ಮಾಡಿದ ಪ್ರಶ್ನೆಯು ಸ್ವಲ್ಪ ವೆಚ್ಚಾಯಿತೆಂದು ತಿಳಿದು ಮಲಯಸಿಂಹನು ಅಪ್ಪಾ! ನಾನು ಈವೂರಿನವನಲ್ಲ, ಈವೂರನ್ನು ಎಂದೂ ನೋಡಿದವನಲ್ಲ; ಈಗ ತಾನೇ ಬಂದಿದ್ದೇನೆ. ಅದಕ್ಕಾಗಿ ಹಾಗೆ ಕೇಳಿದೆನು ಎಂದನು.

ಹಾಗಾದರೆ ಸರಿ, ಮಹಾಸ್ವಾಮೀ! ಆ ಮನೆಯು ಇಲ್ಲಿಗೆ ಸುಮಾರು ಮುನ್ನೂರು ಗಜಗಳ ದೂರದಲ್ಲಿರುವ ಸಂಪಗೆಯ ವನದಲ್ಲಿದೆ ಎಂದು ಹೇಳಿದ ಮಾತನ್ನು ಕೇಳಿ ಭದ್ರಕನು ಸ್ವಲ್ಪ ಬೆಪ್ಪಾದನು. ಅದನ್ನು ಮಲಯಸಿಂಹನು ಕಂಡೂ ಕಾಣದವನಂತೆ ದಳ್ಳಾಳಿಯನ್ನು ಕುರಿತು ಅಷ್ಟು ಸಮೀಪವಾಗಿದ್ದರೆ ಅದು ಊರ ಹೊರಗಿರಲಾರದು ಎಂದನು.

ಮಹಾಸ್ವಾಮೀ, ಇಲ್ಲ.

ಅಂತಹ ಮನೆಯನ್ನು ಏತಕ್ಕೆ ಗೊತ್ತುಮಾಡಿದೆ ಎಂದು ಮಲಯಸಿಂಹನು ಭದ್ರಕನನ್ನು ಕೇಳಲು, ಅವನು ಅದನ್ನು ನಾನು ಗೊತ್ತುಮಾಡಲಿಲ್ಲವಲ್ಲಾ, ದಯೆಮಾಡಿ ಜ್ಞಾಪಿಸಿಕೊಂಡರೆ —— —, ಎನ್ನುವಷ್ಟರಲ್ಲಿಯೇ ಮಲಯಸಿಂಹನು ಓಹೋ! ಈಗ

ಜ್ಞಾಪಕಕ್ಕೆ ಬಂದಿತು; ಅವುದೋ ಒಂದು ವೃತ್ತಾಂತಪತ್ರಿಕೆಯಲ್ಲಿ ಓದಿ ಮೋಸಹೋದೆನು ಎಂದನು.

ಆ ವೇಳೆಗೆ ಭದ್ರಕನು ಸ್ವಲ್ಪ ಎಚ್ಚತ್ತು ಮಹಾಸ್ವಾಮೀ, ಈಗಲೂ ಅಪ್ಪಣೆಯಾದರೆ ಊರ ಹೊರಗೆ ಅನುಕೂಲವಾದ ಒಂದು ಮನೆಯನ್ನು ಮಾಡುವೆನು ಎಂದು ಹೇಳಲು, ದಳ್ಳಾಳಿಯು ತನಗೆ ಬರುವ ಲಾಭವು ಎಲ್ಲಿ ತಪ್ಪಿಹೋಗುವುದೋ ಎಂದು ತಟ್ಟನೆ ಮಹಾಸ್ವಾಮೀ! ಈ ಮನೆಯು ಊರೊಳಗಿದ್ದರೂ ದೊಡ್ಡ ಸಂಪಗೆಯ ವನದ ಮಧ್ಯೆ ಇರುವುದರಿಂದ ಊರ ಹೊರಗಿದ್ದಂತೆಯೇ ಏಕಾಂತವಾಗಿ ಅನುಕೂಲವಾಗಿರುವುದು. ಇದಲ್ಲದೆ ತಮಗೋಸ್ಕರ ತುಂಬ ಶ್ರಮಪಟ್ಟು ಕ್ರಯಪತ್ರವನ್ನು ಸಿದ್ಧಪಡಿಸಿದ್ದೇನೆ ಎಂದನು.

ಭದ್ರಕನು ಏನನ್ನೋ ಹೇಳಲು ತೊಡಗಿದನು; ಅಷ್ಟರಲ್ಲಿಯೇ ಮಲಯಸಿಂಹನು ದಳ್ಳಾಳಿಯಿಂದ ಕ್ರಯಪತ್ರವನ್ನು ತೆಗೆದುಕೊಂಡು ಓದಿ ನೋಡಿ, ಭದ್ರಕಾ, ಇವನಿಗೆ ಐವತ್ತು ಸಾವಿರ ವರಹಗಳನ್ನು ಕೊಟ್ಟು ಕಳುಹಿಸು ಎಂದನು. ಅದನ್ನು ಕೇಳಿ ದಳ್ಳಾಳಿಯು ಮಹಾಸ್ವಾಮೀ, ನನಗೆ ಬರಬೇಕಾದುದು ಒಟ್ಟು ನಲವತ್ತೈದು ಸಾವಿರ ವರಹಗಳು ಎನ್ನಲು, ರಾಜನು ಅಪ್ಪಾ, ನೀನು ಸತ್ಯವಾದಿ, ನಿನ್ನ ಸತ್ಯಕ್ಕಾಗಿಯೂ ಶ್ರಮಕ್ಕಾಗಿಯೂ ಐದು ಸಾವಿರ ವರಹಗಳನ್ನು ಉಚಿತವಾಗಿ ಕೊಟ್ಟಿರುವೆನು; ಹೋಗು ಎಂದು ಹೇಳಿ ಕ್ರಯಪತ್ರವನ್ನು ಪೆಟ್ಟಿಗೆಯಲ್ಲಿಟ್ಟುಕೊಂಡು ಅವನನ್ನು ಕಳುಹಿಸಿ ಕೊಟ್ಟನು.

ಇವನಂತಹ ಉದಾರಿಯನ್ನು ನಾನೆಲ್ಲಿಯೂ ಕಂಡಿಲ್ಲವೆಂದು ದಳ್ಳಾಳಿಯು ಅವನನ್ನು ಬಹುವಾಗಿ ಸ್ತೋತ್ರಮಾಡುತ್ತ ಭದ್ರಕನ ಹಿಂದೆ ಹೊರಟನು. ಇಬ್ಬರೂ ಹೋದ ಅನಂತರ ಮಲಯಸಿಂಹನು ತಾನು ಪುಸ್ತಕದಲ್ಲಿ ಗುರುತುಮಾಡಿಕೊಂಡಿದ ಮನೆಯೂ ಕ್ರಯಪತ್ರದಲ್ಲಿ ಕಾಣಿಸಿರುವ ಮನೆಯೂ ಒಂದೇ ಎಂಬುದನ್ನು ದೃಢಪಡಿಸಿಕೊಳ್ಳಲು ತನ್ನ ಪೆಟ್ಟಿಗೆಯಿಂದ ಪತ್ರವನ್ನೂ ಪುಸ್ತಕವನ್ನೂ ತೆಗೆದು ಹೋಲಿಸಿನೋಡಿ ತೃಪ್ತಿಪಟ್ಟು ಭದ್ರಕನು ಹಿಂದೆ ಧರ್ಮಭೀತಿಯಿಂದ ಮಾಡಿದ್ದ ಒಪ್ಪಿಗೆಯನ್ನು ನಂಬಿ ಮುಂದಿನ ಕೆಲಸವನ್ನು ನಡೆಸಬೇಕಾಗಿದೆ; ಆ ಒಪ್ಪಿಗೆಯು ನಿಜವೋ ಸುಳ್ಳೋ ಜಾಗ್ರತೆಯಾಗಿಯೇ ನಿಶ್ಚಯಿಸುವೆನು ಎಂದು ಯೋಚಿಸಿ, ಭದ್ರಕನನ್ನು ಕರೆದು ರಾತ್ರಿಯೂಟ

ವಾದ ಕೂಡಲೆ ಸಂಪಗೆಯು ವನದ ಮನೆಯನ್ನು ನೋಡುವುದಕ್ಕೆ ಹೋಗುತ್ತೇನೆ, ಆ ವೇಳೆಗೆ ಬಂಡಿಯನ್ನು ಸಿದ್ಧಪಡಿಸು ; ಇಬ್ಬರೂ ಹೋಗೋಣ ಎಂದನು.

ಮಹಾಸ್ವಾಮೀ ! ನಾನೂ ——- ಅಲ್ಲಿಗೆ—— ಬರಬೇಕೇ ಎಂದು ಭದ್ರಕನು ಭೀತಿಯಿಂದ ತೊದಲುತ್ತ ಕೇಳಿದುದಕೆ, ಮಲಯಸಿಂಹನು ಏನು ! ನಾನಿರುವ ಕಡೆ ನೀನಿರಬೇಕು, ನಾನು ಹೋಗುವ ಕಡೆ ನೀನೂ ಹೋಗಬೇಕು ಎಂದನು. ಆ ಮಾತನ್ನು ಕೇಳಿ ಭದ್ರಕನು ಏನನ್ನೂ ಹೇಳದೆ ಸುಮ್ಮನಿರಲು, ಮಲಯಸಿಂಹನು ಭದ್ರಕಾ, ಇಂದು ನಿನಗೆ ಬುದ್ಧಿ ಸರಿಯಾಗಿಲ್ಲವೆಂದು ತೋರುತ್ತದೆ ; ನೀನು ಕುಡಿಯುವುದಿಲ್ಲವೆಂದು ನನ್ನ ಸಂಗಡ ಸುಳ್ಳು ಹೇಳಿದಂತೆ ಕಾಣುತ್ತದೆ ಎಂದನು.

ಮಹಾಸ್ವಾಮೀ ! ನಾನು ಸುಳ್ಳನ್ನಾಡಲಿಲ್ಲ. ನನಗೆ ಆ ದುರಭ್ಯಾಸವೇ ಇಲ್ಲ.

ಹಾಗಾದರೆ ಇದೇಕೆ ಹೀಗಿದ್ದೀಯೆ ? ನಾನು ಹೇಳಿದುದು ನಿನಗೆ ತಿಳಿಯಲಿಲ್ಲವೋ ಎಂದು ಗದ್ದರಿಸಿಕೊಳ್ಳಲು, ಭದ್ರಕನು ಒಂದೇ ಹಾರಿನಲ್ಲಿ ಲಾಯವನ್ನು ಸೇರಿ ಬಂಡಿಯನ್ನು ಸಿದ್ಧಪಡಿಸಿರುವಂತೆ ಹೇಳಿ ಬಂದನು.

ಊಟವಾದ ಮೇಲೆ ಮಲಯಸಿಂಹನೂ ಭದ್ರಕನೂ ಬಂಡಿಯಲ್ಲಿ ಕುಳಿತು ಹೊರಟರು. ಬಂಡಿಯು ಹೊರಟಾಗಲೇ ಭದ್ರಕನಿಗೆ ಮನಸ್ಸಿನಲ್ಲಿ ಒಂದು ವಿಧವಾದ ಕಳವಳವುಂಟಾಯಿತು ; ಸಂಪಗೆಯ ವನವು ಹತ್ತಿರವಾದ ಹಾಗೆಲ್ಲಾ ಅವನ ಕಳವಳವು ಹೆಚ್ಚುತ್ತ ಬಂದಿತು. ಬಂಡಿಯು ಮನೆಯ ಮುಂದೆ ನಿಂತ ಕೂಡಲೆ ಮಲಯಸಿಂಹನು ಕೆಳಗೆ ಇಳಿದು ಭದ್ರಕನನ್ನು ಮುಂದಿಟ್ಟುಕೊಂಡು ಹೊರಟನು. ಭದ್ರಕನು ಬಾಯಲ್ಲಿ ಏನನ್ನೋ ಗೊಣಗುತ್ತ, ಅನುಮಾನಿಸಿ ಅನುಮಾನಿಸಿ, ಮೆಲ್ಲಮೆಲ್ಲಗೆ ಮುಂದೆ ಹೋಗುತ್ತಲಿದ್ದನು. ಮನೆಯ ತಲೆಬಾಗಿಲನ್ನು ಸೇರುವ ವೇಳೆಗೆ ಅವನ ಮುಖವು ಬೆವತು ನೀರು ಹರಿಯುತ್ತಿದ್ದಿತು.

ಬಾಗಿಲನ್ನು ತಟ್ಟಿ ಒಳಗಿರುವ ಆಳನ್ನು ಎಚ್ಚರಿಸು ಎಂದು ಮಲಯಸಿಂಹನು ಹೇಳಲು, ಭದ್ರಕನು ಎಷ್ಟು ಪ್ರಯತ್ನಮಾಡಿದರೂ ಮುಂದೆ ಹೋಗಲು ಕಾಲು ಏಳಲೇ ಇಲ್ಲ, ಕೈಗಳು ಸೇದಿಕೊಂಡಂತಾದುವು. ಯಜಮಾನನು ಕೋಪಿಸಿಕೊಳ್ಳುವನೆಂಬ ಭಯದಿಂದ ಅವನು ಅತಿಸಾಹಸದಿಂದ ಬಾಗಿಲನ್ನು ತಟ್ಟಲು ಒಳಗಿದ್ದ ಆಳು ಅರದು ? ಎಂದನು.

ರಾಜಾಮಲಯಸಿಂಹರು ಕ್ರಯಕ್ಕೆ ಕೊಂಡು ಈ ಮನೆಯನ್ನು ನೋಡಬೇಕೆಂದು ಬಿಜಯಮಾಡಿದ್ದಾರೆ ಎಂದು ಭದ್ರಕನು ನಡುಗುತ್ತ ಹೇಳಲು, ಅವನ ಅವಸ್ಥೆಯನ್ನು ನೋಡುತ್ತಲಿದ್ದ ಮಲಯಸಿಂಹನು ಇವನ ರೀತಿಯನ್ನು ನೋಡಿದರೆ ಇವನು ಹಿಂದೆ ಹೇಳಿದ್ದುದು ನಿಶ್ಚಯವೆಂದು ತೋರುತ್ತಲಿದೆ; ಆದರೂ ಇನ್ನೂ ಪರೀಕ್ಷಿಸಿ ನೋಡೋಣ ವೆಂದು ಯೋಚಿಸುತ್ತಲಿರುವಾಗ, ಒಳಗಿದ್ದ ಆಳು ಬಾಗಿಲನ್ನು ತೆರೆದು ಮಹಾಸ್ವಾಮೀ, ಈ ಮನೆಗೆ ಈಗ ತಾವು ಯಜಮಾನರಾದಿರೆಂಬುದನ್ನು ದಳ್ಳಾಳಿಯು ನನಗೆ ಹೇಳಿ ಹೋದನು ಎಂದು ಹೇಳಿ ಅಡ್ಡಬಿದ್ದು ಮಹಾಸ್ವಾಮೀ, ಹಿಂದೆ ಇದ್ದ ಯಜಮಾನರು ನನ್ನನ್ನು ಕಾಪಿಟ್ಟುಕೊಂಡು ಬಂದಂತೆಯೇ ತಾವೂ ವಾಡಸೇವಕನನ್ನು ಕಾಪಿಟ್ಟುಕೊಂಡು ಬರಬೇಕು ಎಂದು ಬೇಡಿದನು.

ಈ ಮನೆಯು ಹಿಂದೆ ಯಾರದು ಎಂದು ಕೇಳಲು, ಇದು ಶ್ರೀಮಂತ ಶಾಂತ ವೀರರ ಮನೆ ಎಂದನು.

ಓಹೋ! ಹಾಗೋ? ಆ ಹೆಸರನ್ನು ನಾನೆಲ್ಲೋ ಕೇಳಿದ ನೆನಪಿದೆ. ತಾಳು, ತಾಳು; ಅವನಿಗೆ ಒಬ್ಬಳೇ ಮಗಳಲ್ಲವೆ? ಅವಳನ್ನು ವಲ್ಲಭದೇವನೆಂಬ ನ್ಯಾಯಾಧಿಪತಿಗೆ ಮದುವೆಮಾಡಿಕೊಟ್ಟನಲ್ಲವೆ ಎಂದು ಹೇಳುತ್ತ ಭದ್ರಕನನ್ನು ನೋಡಲು ಅವನಿಗೆ ಮುಖವು ಬೆಳ್ಳೇರಿ ಕಾಲುಗಳು ನಡುಗಿ ಕೆಳಗೆ ಬೀಳುವಂತಾಗಿ ಪಕ್ಕದ ಗೋಡೆಯನ್ನು ಹಾಗೆಯೇ ಒರಗಿಕ್ಕೊಂಡನು.

ಒಂದು ದೀಪವನ್ನು ಹೊತ್ತಿಸು, ಮನೆಯನ್ನು ನೋಡೋಣ ಎಂದು ಮಲಯಸಿಂಹನು ಆಳಿಗೆ ಹೇಳಲು, ಅವನು ಮಹಾಸ್ವಾಮೀ, ದೀಪದಲ್ಲಿ ಎಣ್ಣೆ ಬತ್ತಿ ಎರಡೂ ಇಲ್ಲ ಎಂದನು.

ಆಗ ಭದ್ರಕನು ಮಹಾಸ್ವಾಮೀ, ಈ ಕತ್ತಲೆಯಲ್ಲಿ ಮನೆಯನ್ನು ನೋಡುವುದಕ್ಕಿಂತ ಬೆಳಿಗ್ಗೆ ನೋಡುವುದು ಉತ್ತಮವಲ್ಲವೇ ಎಂದುದಕ್ಕೆ ಮಲಯಸಿಂಹನು ಬಂಡಿಯ ಲಾಂದರಗಳಲ್ಲಿ ಬಂದನ್ನು ತೆಗೆದುಕೊಂಡು ಬಾ ಎಂದನು.

ಭದ್ರಕನಿಗೆ ಲಾಂದರವನ್ನು ತರಲು ಶುದ್ಧವಾಗಿ ಮನಸ್ಸುರಲಿಲ್ಲ; ತರದಿದ್ದರೆ ಮಲಯಸಿಂಹನು ಏನ ಹೇಳುವನೋ ಎಂಬ ಭಯದಿಂದ ಮೆಲ್ಲಗೆ ಬಂಡಿಗೆ ಸಿಕ್ಕಿಸಿದ್ದ

ಬೆಳಕನ್ನು ತರಲು, ರಾಜನು ನೀನು ಮುಂದೆ ನಡೆ ಎಂದು ಹೇಳಿ, ತಾನು ಅವನ ಹಿಂದೆ ಮನೆಯನ್ನು ಪ್ರವೇಶಿಸಿದನು.

ಮನೆಯು ಸುಮಾರಾಗಿ ವಿಸ್ತಾರವಾಗಿದ್ದಿತು. ಅದನ್ನೆಲ್ಲಾ ನೋಡಿ ಇನ್ನು ಮಹಡಿಯನ್ನು ನೋಡೋಣ ಬಾ ಎಂದು ಹೊರಟನು. ಮಹಡಿಯ ಮೇಲೆ ಮಧ್ಯೆ ಒಂದು ದೊಡ್ಡ ಪಡಸಾಲೆಯೂ ಅತ್ತಿತ್ತ ಎರಡು ಸಣ್ಣ ಕೋಣೆಗಳೂ ಇದ್ದುವು. ಆ ಸಣ್ಣ ಮನೆಗಳಿಗೆ ಸೇರಿದಂತೆ ಎರಡು ಸಣ್ಣ ಒಚ್ಚಲು ಮನೆಗಳೂ ಅವುಗಳಲ್ಲಿ ಒಂದರಿಂದ ಹಿತ್ತಿಲ ತೋಟಕ್ಕೆ ಇಳಿಯುವುದಕ್ಕೆ ಹಂತಗಳೂ ಇದ್ದುವು.

ಇವುಗಳನ್ನು ನೋಡಿ ಮಲಯಸಿಂಹನು ಎಲಾ ಭದ್ರಕ! ಈ ಹಂತಗಳು ಎಲ್ಲಿಗೆ ಹೋಗುತ್ತವೆ ನೋಡೋಣ, ನಡೆ ಎನ್ನಲು, ಭದ್ರಕನು ಮಹಾಸ್ವಾಮೀ, ಇವು ಹಿಂಭಾಗದ ತೋಟಕ್ಕೆ ಹೋಗುತ್ತವೆ ಎಂದನು.

ಅದು ನಿನಗೆ ಹೇಗೆ ತಿಳಿಯಿತು?

ಸುಮಾರು ಅಲ್ಲಿಗೆ ಹೋಗಬಹುದೆಂದು ಊಹಿಸಿದೆ.

ನೋಡೋಣ ಹೋಗು, ಎಂದು ಮಲಯಸಿಂಹನೆನ್ನಲು, ಭದ್ರಕನು ನಿಟ್ಟುಸಿರನ್ನು ಬಿಡುತ್ತ ಬೆದರುಗಣ್ಣುಗಳಿಂದಲೂ ನಡುಗುವ ಕಾಲುಗಳಿಂದಲೂ ಮೆಲ್ಲಮೆಲ್ಲಗೆ ನಾಲ್ಕಾರು ಮೆಟ್ಟಿಲುಗಳನ್ನು ಇಳಿದು ಅಲ್ಲಿದ್ದ ಬಾಗಿಲ ಬಳಿಗೆ ಬಂದು ಅಲ್ಲಿ ನಿಂತನು. ಏತಕ್ಕೆ ನಿಂತೆ, ಮುಂದೆ ಹೋಗು ಎಂದು ಮಲಯಸಿಂಹನು ಎಷ್ಟು ಹೇಳಿದರೂ ಅವನು ಮುಂದೆ ಒಂದು ಹೆಜ್ಜೆಯನ್ನೂ ಇಡಲಿಲ್ಲ.

ಭದ್ರಕಾ, ನಿನಗೇನು ಹುಚ್ಚು ಹಿಡಿಯಿತೋ? ಅಥವಾ ಪಿಶಾಚಿಗಿಶಾಚಿ ಮೆಟ್ಟಿಕೊಂಡಿತೋ?

ಮಹಾಸ್ವಾಮೀ! ಇದು ದೈವಗತಿಯೇ ಹೊರತು ಮತ್ತೇನೂ ಅಲ್ಲ; ಅಯ್ಯೋ! ನಾನು ಇದನ್ನು ಮೊದಲೇ ತಮಗೇಕೆ ತಿಳಿಸಲಿಲ್ಲ? ತಾವು ಈ ಊರಿಗೆ ಬಂದು ಈ ಸಂಪಗೆಯು ವನದ ಮನೆಯನ್ನೇ ಕೊಳ್ಳಬೇಕೇ? ಕೊಂಡ ಮನೆಯನ್ನು ನೋಡಲು ರಾತ್ರಿಯಲ್ಲಿಯೇ ಬರಬೇಕೇ? ಬಂದ ಮೇಲೆ ಮಹಡಿಯಿಂದ ಈ ದಾರಿಯಲ್ಲಿಯೇ ಇಳಿಯಬೇಕೇ? ನನ್ನನ್ನು ತಾವು ಕೊಂದರೂ ಸರಿಯೆ, ಇಲ್ಲಿಂದ ಮುಂದೆ ಹೋಗಲು ನನ್ನಿಂದಾಗದು.

ಮುಂದೆ ಹೋಗುವೆಯೋ ಇಲ್ಲವೋ ಎಂದು ಮಲಯಸಿಂಹ ಎಂದ ಕೂಗಲು ಜೀವಭಯದಿಂದ ಓಡುವನಂತೆ ಮಿಕ್ಕ ಪೆಟ್ಟಿಗಳನ್ನು ಭದ್ರಕನು ದಡದಡನೆ ಇಳಿದು, ತೋಟದ ಆವರಣದ ಗೋಡೆಯಲ್ಲಿದ್ದ ಸಣ್ಣ ಬಾಗಿಲಿಗೆ ಮಾಡಿದ್ದ ಕಾಲವಾರಿಯಲ್ಲಿ ಹೋದನು. ಇದನ್ನು ನೋಡುತ್ತಲಿದ್ದ ಮಲಯಸಿಂಹನು ಹಾಗೆ ಏಕೆ ಹೋಗುತ್ತೀಯೆ? ಈ ಕಡೆ ಬಾ ಎಂದು ಹಚ್ಚಗೆ ಹುಲ್ಲು ಬೆಳೆದಿದ್ದ ಬಯಲ ಮಧ್ಯೆ ಇದ್ದ ದಟ್ಟವಾದ ತೋಪಿನ ಕಡೆಗೆ ಹೊರಟು ಅಲ್ಲಿ ಒಂದು ಕಡೆ ನಿಂತನು.

ಮಹಾಸ್ವಾಮೀ! ಮಹಾಸ್ವಾಮೀ! ಅದೇಸ್ಥಳ, ಅದೇಸ್ಥಳ; ಅಲ್ಲಿ ನಿಲ್ಲಬೇಡಿ ಎಂದು ಭದ್ರಕನು ವಿಕಾರಧ್ವನಿಯಿಂದ ಕೂಗಲು, ಮಲಯಸಿಂಹನು ಹಾಗೆಂದರೇನು ಎಂದು ಕೇಳಿದನು.

ಅಲ್ಲಿಯೇ ಅವನು ಸತ್ತು ನೆಲಕ್ಕೆ ಬಿದ್ದುದು.

ಭದ್ರಕಾ! ನಿನಗೆ ಹುಚ್ಚು ಹಿಡಿದಹಾಗೆ ತೋರುತ್ತಲಿದೆ; ಇದೇ ರೀತಿ ನೀನಿದ್ದರೆ ಹುಚ್ಚರ ಶಾಲೆಗೆ ನಿನ್ನನ್ನು ಸೇರಿಸಬೇಕಾಗುವುದು.

ಮಹಾಸ್ವಾಮೀ! ನನಗೆ ಹುಚ್ಚಿಲ್ಲ, ನಾನು ಹೇಳುವುದು ಸತ್ಯ; ತಾವು ಇತ್ತ ಬಿಜಯಮಾಡಬೇಕು.

ಎಲೋ ಭದ್ರಕ! ನೀನು ಆಡುವ ಮಾತುಗಳನ್ನೂ ಇರುವ ರೀತಿಯನ್ನೂ ನೋಡಿದರೆ ಅರನ್ನೋ ನೀನಿಲ್ಲಿ ಕೊಂದಿರುವಂತೆ ತೋರುತ್ತಲಿದೆ. ಈ ದೇಶವು ಇತರ ದೇಶಗಳಂತಲ್ಲ; ಕೆಟ್ಟ ಕೆಲಸಮಾಡಿದವರನ್ನು ಇಲ್ಲಿಯ ಪೋಲೀಸಿನವರು ಅಗತ್ಯ ಹಿಡಿಯುವರು; ನ್ಯಾಯಾಧಿಪತಿಗಳು ತಕ್ಕ ಶಿಕ್ಷೆಯನ್ನು ವಿಧಿಸುವರು; ಶೂಲಗಳು ಅನೇಕ ವಿರುವುವು. ಆವ ಕಾಲದಲ್ಲಿ ಆವ ದೇಶದಲ್ಲಿ ನಾವಿರುವೆವೋ ಅಲ್ಲಿಯ ನ್ಯಾಯಕ್ಕೆ ನಾವು ಒಳಪಡಬೇಕು; ನಿನಗಾಗಿ ನಾನು ತೊಂದರೆಯಲ್ಲಿ ಸಿಕ್ಕಿಬೀಳಲು ಇಷ್ಟವಿಲ್ಲ. ನಿರ್ಮಲಾನಂದರು ನಿನ್ನನ್ನು ನನ್ನಲ್ಲಿ ಕಳುಹಿಸಿಕೊಟ್ಟಾಗ ನೀನು ಬಹು ಯೋಗ್ಯನೆಂದು ಹೇಳಿದ್ದರು; ನಿನ್ನ ವಿಷಯವಾಗಿ ಅವರಿಗೆ ಬರೆಯುವೆನು.

ಸ್ವಾಮೀ! ತಾವು ಹಾಗೆ ಮಾತ್ರ ಮಾಡಕೂಡದು. ನಾನು ತಮ್ಮಲ್ಲಿ ಎಷ್ಟೋ ಭಯಭಕ್ತಿಯಿಂದ ಕೆಲಸಗಳನ್ನು ಮಾಡುತ್ತಲಿದ್ದೇನೆ.

ಹಾಗಿಲ್ಲವೆಂದು ನಾನು ಹೇಳಿದೆನೇ? ನೀನು ಅವ್ಯ ನ್ನ
ಮಾಡಿರುವುದರಿಂದ ನಿನಗೆ ಇಷ್ಟು ಗಾಬರಿ. ಶುದ್ಧ ಮನಸ್ಕ .ವೂ
ಇರುವುದಿಲ್ಲ.

ಮಹಾಸ್ವಾಮೀ, ನನ್ನ ಪುರುಷಾಯುಷದಲ್ಲಿ ನಾನು ಮಾಡಿರುವುದು ಒಂದೇ ತಪ್ಪು; ಬಂದಿಶಾಲೆಯಲ್ಲಿದ್ದಾಗ ನಿರ್ಮಲಾನಂದರಿಗೆ ಅದನ್ನು ತಿಳಿಸಿದ್ದೆ; ಅವರು ಅದನ್ನು ತಮಗೆ ತಿಳಿಸಲಿಲ್ಲವೆಂದು ತೋರುತ್ತದೆ.

ಅವರು ಹೇಳಿದುದರಲ್ಲಿ ನೀನು ಅವ್ಯದೋ ಒಂದು ಕಳವು ಮಾಡಿ, ಸೆರೆಯಲ್ಲಿ ಬಿದ್ದು, ಪಶ್ಚಾತ್ತಾಪಪಟ್ಟುದಾಗಿ ನಾನು ತಿಳಿದಿದ್ದೆನು; ಈಗ ನೋಡಿದರೆ ಅದಕ್ಕಿಂತ ಘೋರತರವಾದ ಕೃತ್ಯವನ್ನು ಮಾಡಿರುವಂತೆ ತೋರುತ್ತಲಿದೆ; ಆದುದರಿಂದ ನಿನ್ನನ್ನು ನನ್ನ ಬಳಿ ಇಟ್ಟುಕೊಳ್ಳಲು ತಾತ್ಪರ್ಯವಿಲ್ಲ. ಮನೆಗೆ ಹೋದ ಕೂಡಲೆ ನಿನಗೆ ಬರಬೇಕಾದ ಸಂಬಳವನ್ನು ಕೊಟ್ಟುಬಿಡುತ್ತೇನೆ; ಎಲ್ಲಿಯಾದರೂ ಹೋಗು.

ಮಲಯಸಿಂಹನು ಈ ರೀತಿ ಹೇಳಿದುದನ್ನು ಕೇಳಿ ಭದ್ರಕನು ಅವನ ಕಾಲಿನ ಮೇಲೆ ಬಿದ್ದು ನಾನು ಮುಯ್ಯಿಗೆ ಮುಯ್ಯಿ ಮಾಡಿದೆನೇ ಹೊರತು ಮತ್ತಾವುದನ್ನೂ ನಡೆಸಿದವನಲ್ಲ ಎಂದನು.

ಇರಬಹುದು, ಅದಕ್ಕಾಗಿ ಇಲ್ಲಿ ಏಕೆ ನಿನಗಿಷ್ಟು ಭಯ?

ಮಹಾಸ್ವಾಮೀ, ಈ ಮನೆಯಲ್ಲಿ ತಾವು ನಿಂತಿರುವ ಸ್ಥಳದಲ್ಲಿಯೇ ಆ ಕೃತ್ಯ ನಡೆಯಿತು.

ಏನು, ನನ್ನ ಮನೆಯಲ್ಲಿಯೇ?

ಆವಾಗ ಇದು ತಮ್ಮ ಮನೆಯಾಗಿರಲಿಲ್ಲ. "ಮತ್ತೆ ಆರದಾಗಿದ್ದಿತು?"

ಶ್ರೀಮಂತ ಶಾಂತನೀಶರದು. "ಅವರನ್ನೋ ನೀನು ಕೊಂದುದು?"

ಅವರನ್ನಲ್ಲ. "ಮತ್ತೆ ಯಾರನ್ನ?"

ಮಹಾಸ್ವಾಮೀ, ತಾವು ನಿಂತಿರುವ ಸ್ಥಳದಿಂದ ಇತ್ತ ಬಿಜಯಮಾಡಿದರೆ ಎಲ್ಲವನ್ನೂ ಹೇಳುವೆನು. ತಾವು ಅಲ್ಲಿ ನಿಂತಿರುವ ವರೆಗೆ ವಲ್ಲಭದೇವನ ಚ್ಛಾಪಕವೇ ಬಡುತ್ತಲಿರುವುದು.

ಓಹೋ! ನೀನು ವಲ್ಲಭದೇವನನ್ನು ಕೊಂದೆಯೋ?

ಹೂಂ. "ಅವನು ನರಪುರದಲ್ಲಿ ನ್ಯಾಯಾಧಿಪತಿಯಾಗಿರಲಿಲ್ಲವೇ?"

ಅಹುದು. ತಾವು ಅವರನ್ನು ಬಲ್ಲಿರೆಂದು ಕಾಣುತ್ತದೆ.

ಅವನು ದೀನನಾಥನ ಮಗನಲ್ಲವೇ? "ಹೂಂ"

ಪ್ರಾಮಾಣಿಕನೆಂದೂ, ಧರ್ಮಶೀಲನೆಂದೂ, ಅವನು ಹೆಸರ ಪಡೆದಿದ್ದನಲ್ಲವೇ? ಅವನನ್ನೇ ನೀನು ಕೊಂದುದು?

ಮಹಾಸ್ವಾಮೀ! ಅವನು ಪ್ರಾಮಾಣಿಕನೂ ಅಲ್ಲ, ಏನೂ ಅಲ್ಲ; ಅನ್ಯಾಯ ಶಿಖಾಮಣಿ.

ಆ ಮಾತನ್ನು ನಾನು ನಂಬಲಾರೆ.

ಮಹಾಸ್ವಾಮೀ! ನಾನು ಹೇಳುವುದು ಸತ್ಯ.

ಅದು ಹೇಗೆ? "ಅದಕ್ಕೆ ನನ್ನಲ್ಲಿ ಒಂದು ಕುರುಹು ಇದ್ದಿತು."

ಈಗೆಲ್ಲಿ?

ಹುಡುಕಿದರೆ ಸಿಕ್ಕಬಹುದು ಎಂದು ಭದ್ರಕನು ಹೇಳುತ್ತಲೆ ಮಲಯಸಿಂಹನು ತೋಪಿನಿಂದ ಹೊರಗೆ ಬಂದು ಪಕ್ಕದಲ್ಲಿ ಹಾಕಿದ್ದ ಕಲ್ಲು ಚಾವಡಿಯ ಮೇಲೆ ಕುಳಿತು ಈಗ ನಿನ್ನ ಕಥೆಯನ್ನು ಮೊದಲಿನಿಂದ ಹೇಳು ಎಂದನು.

ಆಗ ಭದ್ರಕನು ತನ್ನ ಕಥೆಯನ್ನು ಈ ರೀತಿ ಹೇಳತೊಡಗಿದನು.

ಮಹಾಸ್ವಾಮೀ! ನನಗೊಬ್ಬ ಅಣ್ಣನಿದ್ದನು. ಅವನು ಚಕ್ರವರ್ತಿಯ ಸೈನ್ಯದಲ್ಲಿ ಸೇರಿ ಹದಿನೆಂಟನೆಯ ವಯಸ್ಸಿನಲ್ಲೇ ತನ್ನ ಯೋಗ್ಯತೆಗೆ ತಕ್ಕ ಅಧಿಕಾರವನ್ನು ಪಡೆದು ಚಕ್ರವರ್ತಿಯ ಅಭಿಮಾನಕ್ಕೆ ಪಾತ್ರವಾಗಿದ್ದನು. ಚಕ್ರವರ್ತಿಯು ಪರಾಜಿತನಾದ ಮೇಲೆ ನನ್ನ ಅಣ್ಣನು ನರಪುರದ ಮಾರ್ಗವಾಗಿ ಊರಿಗೆ ಹಿಂದಿರುಗಿ ಬರುವುದಾಗಿ ನಿಶ್ಚಯಿಸಿ ಹಾದಿಯ ವೆಚ್ಚಕ್ಕೆ ಅನುಕೂಲವಾಗುವಂತೆ ಆ ಪುರದ ಮುಖ್ಯಧೋ ಜನಶಾಲೆಯ ಯಜಮಾನನಲ್ಲಿಗೆ ಸ್ವಲ್ಪ ಹಣವನ್ನು ಕಳುಹಿಸ ಹೇಳಿ ನನಗೆ ಬರೆದಿದ್ದನು. ಆಗ ನಮ್ಮಲ್ಲಿ ಸಾಮಿತ ವರಹಗಳಿದ್ದುವು.

ಆ ಹಣ ಕಳ್ಳವ್ಯಾಪಾರದಲ್ಲಿ ಸಂಪಾದಿಸಿದುದೋ ಎಂದು ಮಲಯಸಿಂಹನು ಕೇಳಿದುದಕ್ಕೆ ಭದ್ರಕನು ಮಹಾಸ್ವಾಮೀ, ಹೇಗಾದರೂ ಜೀವನ ನಡೆಯಬೇಕಲ್ಲವೇ ಎಂದನು. "ಆಮೇಲೆ ಹೇಳು"

ಅವನಿವರ ಕಯ್ಯಲ್ಲಿ ಹಣವನ್ನು ಕಳುಹಿಸಿದರೆ ಅಣ್ಣನಿಗೆ ಸೇರುವುದೋ ಇಲ್ಲವೋ ಎಂಬ ಭಯದಿಂದ ಅರ್ಧ ಹಣವನ್ನು ನನ್ನ ನಾದಿನಿಯ ಒಳಿ ಕೊಟ್ಟು ವಿಕ್ಕುದನ್ನು ನಾನೇ ತೆಗೆದುಕೊಂಡು ನರವೂರಕ್ಕೆ ಹೊರಟಿನು. ನಾನು ಅಲ್ಲಿಗೆ ಹೋದಾಗ ಊರೆಲ್ಲ ರಕ್ತಮಯವಾಗಿ ಎಲ್ಲಿ ನೋಡಿದರೂ ಹೆಣಗಳು ಬಿದ್ದಿದ್ದುವು. ಕಾರಣವೇನೆಂದು ವಿಚಾರಿಸಲು, ಜಯಸಿಂಹರಾಜನ ಕಡೆಯವರು ಚಕ್ರವರ್ತಿಯ ಕಡೆಯವರನ್ನು ಕೊಲ್ಲುತ್ತಲಿದ್ದಾರೆ ಎಂದು ಜನಗಳು ಹೇಳಿದರು. ಅದನ್ನು ಕೇಳಿ ನನ್ನಣ್ಣನೇನಾದನೋ ಎಂದು ದಿಗಿಲಿನಿಂದ ಅವನು ಹೇಳಿದ್ದ ಭೋಜನಶಾಲೆಯನ್ನು ವಿಚಾರಿಸಿಕೊಂಡು ಹೋಗಲು ಆದರ ತಲೆಬಾಗಿಲಲ್ಲಿಯೇ ಅವನು ಸತ್ತುಬಿದ್ದಿದ್ದನು. ಮೆಯ್ಯೆಲ್ಲ ರಕ್ತದಿಂದ ತೋದುಹೋಗಿ ಗಾಯಗಳಿಂದ ರಕ್ತವು ಇನ್ನೂ ಸರಿಯುತ್ತಲಿದ್ದಿತು.

ಆಗ ನನಗೆ ಬಹು ಸಂಕಟವಾಗಿ ಅವನನ್ನು ಕೊಂದವರಾರೆಂದು ವಿಚಾರಿಸಲು ಇಂಥವನೆಂದು ಒಬ್ಬರೂ ಹೇಳಲಿಲ್ಲ. ಅಲ್ಲಿಗೆ ನ್ಯಾಯಾಧಿಪತಿಯಾಗಿದ್ದ ವಲ್ಲಭದೇವನ ಒಳಿಗೆ ಹೋಗಿ ನಡೆದ ಸಂಗತಿಯನ್ನು ತಿಳಿಸಿ ಮೊರೆಯಿಡಲು, ಅವನು ಅವ ವಿಚಾರಣೆಯನ್ನೂ ಮಾಡದೆ, ನಿನ್ನಣ್ಣನು ಚಕ್ರವರ್ತಿಯ ಕಡೆಯವನಾದುದರಿಂದ ಅವನನ್ನು ಕೊಂದುದೇ ನ್ಯಾಯ, ಹೋಗು ಎಂದನು. 'ಮಹಾಸ್ವಾಮೀ! ತಾವು ಧರ್ಮಪ್ರಭುಗಳು, ತಾವೇ ಹೀಗೆ ಆಪ್ಪಣೆ ಕೊಡಿಸಿದರೆ ನಾನು ಇನ್ನಾರಲ್ಲಿ ಹೋಗಿ ಹೇಳಿಕೊಳ್ಳಲಿ: ಅವನು ಯುದ್ಧದಲ್ಲಿ ಸತ್ತಿದ್ದರೆ ನಾನೇನೂ ಚಿಂತಿಸುತ್ತಿರಲಿಲ್ಲ; ಯುದ್ಧ ಮುಗಿದು ಊರಿಗೆ ಹಿಂದಿರುಗಿ ಬರುತ್ತಲಿದ್ದಾಗ ಅವನನ್ನು ಕೊಂದುದು ಅನ್ಯಾಯವಲ್ಲವೇ? ಅವನು ಸತ್ತುದರಿಂದ ಅವನ ಹೆಂಡತಿಯು ನಿರಾಧಾರಳಾಗಿದ್ದಾಳೆ; ಅದಕ್ಕಾಗಿಯಾದರೂ ತಾವು ವಿಚಾರಣೆ ಮಾಡಿ ಅವಳಿಗೆ ಮಾಸಾಶನವನ್ನಾದರೂ ಕೊಡಿಸಿ ಕೊಟ್ಟರೆ ತಮಗೆ ಪುಣ್ಯವುಂಟಾಗುವುದು' ಎಂದು ನಾನು ಎಷ್ಟು ಬಗೆಯಲ್ಲಿ ಕೇಳಿಕೊಂಡರೂ ಆ ವಲ್ಲಭದೇವನ ಕಲ್ಲು ಮನಸ್ಸು ಕರಗದೆ, ಕೋಪಿಸಿಕೊಂಡು ಅವನು ನನ್ನನ್ನು ಕತ್ತು ಹಿಡಿದು ದಬ್ಬಿಸಿ ಬಿಟ್ಟನು.

ಆಗ ನನಗೂ ಸಿಟ್ಟು ಬಂದು ಎಲಾ ಕಟುಕ! ನೀನು ಮಾಡಿದ ಅನ್ಯಾಯಕ್ಕೆ ನಿನ್ನನ್ನು ನಾನು ಕೊಲ್ಲದಿದ್ದರೆ ನನ್ನ ಜನ್ಮವನ್ನು ಸುಡಬೇಕು. ಎಂದು ಹೇಳಿ ಹೋದೆನು. ಅಂದು ಪೊದಲು ಅವನು ಕೂಡಿದ ಮಟ್ಟಿಗೂ ಹೊರಗೆ ಬಾರದೆ ಮನೆಯಲ್ಲಿಯೇ ಇರುತ್ತ,

ಹೊರಗೆ ಬರುವಾಗ ಯಾವಾಗಲೂ ನಾಲ್ಕೈದು ಜನರ ಜತೆಯಲ್ಲಿಯೇ ಬರುತ್ತಲಿದ್ದನು. ಅವನನ್ನು ಕೊಲ್ಲಲು ಬೇಕಾದಷ್ಟು ಅವಕಾಶ ಸಿಕ್ಕಿದ್ದರೂ, ಅವನನ್ನು ಕೊಂದು ಒಂದು ವೇಳೆ ನಾನು ಸಿಕ್ಕಿಬಿದ್ದರೆ ನನ್ನ ನಾದಿನಿಗೆ ದಿಕ್ಕಿಲ್ಲದೆ ಹೋಗುವುದಲ್ಲಾ ಎಂದು ಯೋಚಿಸಿ, ಆರಿಗೂ ಗೊತ್ತಾಗದಂತೆ ಅವನನ್ನು ಹತಮಾಡಲು ಕಾದಿದ್ದೆನು.

ಹೀಗೆ ಕೆಲವು ದಿನಗಳು ಕಳೆದ ಮೇಲೆ, ನರಪುರದಲ್ಲಿ ತಾನಿದ್ದರೆ ಹೇಗಾದರೂ ತನಗೆ ಅಪಾಯವುಂಟಾಗುವುದೆಂದು ತಿಳಿದು ವಲ್ಲಭದೇವನು ಈ ಪಟ್ಟಣಕ್ಕೆ ವರ್ಗ ಮಾಡಿಸಿಕೊಂಡನು. ಅವನೊಡನೆ ನಾನೂ ಇಲ್ಲಿಗೆ ಬಂದೆನು. ಸುಮಾರು ಮೂರು ನಾಲ್ಕು ತಿಂಗಳ ವರೆಗೆ ಅವನು ಈ ಊರಿನಲ್ಲಿ ಹೋಗಿ ಬರುತ್ತಲಿದ್ದ ಸ್ಥಳಗಳಲ್ಲಿ ಸಮಯ ನೋಡುತ್ತಲಿದ್ದು, ಒಂದಾನೊಂದು ರಾತ್ರಿ ಸುಮಾರು ಎಂಟು ಗಂಟೆಯು ವೇಳೆಯಲ್ಲಿ ಕುದುರೆಯನ್ನು ಹತ್ತಿ ತನ್ನ ಮನೆಯಿಂದ ಹೊರಟು ಈ ಮನೆಯ ಒಳಿಗೆ ಬಂದು, ಕತ್ತಲಾಗಿದ್ದ ಒಂದು ಕಡೆಯಲ್ಲಿ ನಿಂದು ಕುದುರೆಯಿಂದಿಳಿದು ಅದನ್ನು ಒಂದು ಮರಕ್ಕೆ ಕಟ್ಟಿ, ಈ ತೋಟದ ಸಣ್ಣ ಬಾಗಿಲನ್ನು ತನ್ನಲ್ಲಿದ್ದ ಬೀಗದ ಕಯ್ಯಿಂದ ತೆಗೆದು ಒಳಗೆ ಬಂದು ಪುನಃ ಬಾಗಿಲನ್ನು ಮುಚ್ಚಿ ಬೀಗವನ್ನು ಹಾಕಿದನು.

ಅವನು ತೋಟದೊಳಹೊಕ್ಕು ಬಾಗಿಲನ್ನು ಬಿಗಿದುಕೊಂಡ ಕೂಡಲೆ, ನಾನು ಆವರಣದ ಗೋಡೆಯನ್ನು ಏರಿ ಗಿಡದ ಮರೆಯಲ್ಲಿ ಆ ಗೋಡೆಯ ಮೇಲೆಯೇ ಮಲಗಿಕೊಂಡೆನು. ವಲ್ಲಭದೇವನು ತೋಟವನ್ನು ಪ್ರವೇಶಿಸಿದಾಗ, ಅಲ್ಲಿ ಬೆಳುದಿಂಗಳಲ್ಲಿ ಒಬ್ಬ ಸುಂದರಿಯು ಕುಳಿತಿದ್ದಳು. ವಲ್ಲಭದೇವನು ಹತ್ತಿರಕ್ಕೆ ಬರುತ್ತಲೆ ಅವಳು ಎದ್ದು ಅವನನ್ನು ಆಲಿಂಗಿಸಿಕೊಂಡು ಪ್ರಿಯನೇ, ನೀನು ಇದುವರೆಗೂ ಬಾರದಿದ್ದುದರಿಂದ ಈ ಚಂದ್ರನು ಚಂಡಕರನಾದನು ; ಬೆಳುದಿಂಗಳು ಬಿಸಿಲಿನಂತಾಯಿತು ಎಂದು ನವ್ಯವಚನಗಳನ್ನು ನುಡಿಯುತ್ತ, ಅವನ ಜತೆಯಲ್ಲಿ ಮನೆಯೊಳಗೆ ಹೋದಳು. ಅದನ್ನು ನೋಡುತ್ತಿದ್ದ ನಾನು ಆ ಯುವತಿಯು ವಲ್ಲಭದೇವನ ಉಪಪತ್ನಿಯಿರಬಹುದು, ಆದಕಾರಣ ಅವನು ಇಲ್ಲಿಗೆ ಆಡಿಗಡಿಗೆ ಬರುತ್ತಿರುವನು. ಇಲ್ಲಿಯೇ ಕಾದಿದ್ದರೆ ಆವುದಾದರೂ ಒಂದು ದಿನ ಅವನನ್ನು ನನ್ನ ಕೋಪಕ್ಕೆ ಬಲಿಗುಡಬಹುದು ಎಂದು ಯೋಚಿಸಿಕೊಂಡೆನು.

ಆ ಸುಂದರಿಯು ಹೆಸರೇನು ಎಂದು ಮಲಯಸಿಂಹನು ಕೇಳಲು, ಮಹಾಸ್ವಾಮೀ, ಅದನ್ನು ನಾನು ವಿಚಾರಿಸಲಿಲ್ಲ ಎಂದನು.

ಮುಂದೆ ಏನಾಯಿತು ?

ಆ ದಿನವೇ ನಾನು ಅವನನ್ನು ಕೊಲ್ಲಬಹುದಾಗಿದ್ದಿತು ; ಆದರೆ ಅಲ್ಲಿಯ ಸನ್ನಿವೇಶವು ನನಗೆ ಚೆನ್ನಾಗಿ ಗೊತ್ತಿರಲಿಲ್ಲವಾದುದರಿಂದ ಅಂದು ನಾನು ಆ ಕೆಲಸಕ್ಕೆ ಪ್ರಯತ್ನಪಡಲಿಲ್ಲ. ಸುಮಾರು ಏಳೆಂಟು ತಿಂಗಳಾದ ಮೇಲೆ ಒಂದು ರಾತ್ರಿ ಒಬ್ಬನು ತನ್ನ ಗುರುತು ಆರಿಗೂ ತಿಳಿಯದಂತೆ ಮೈಯ್ಯ ತುಂಬ ಶಾಲನ್ನು ಹೊದ್ದು, ಮುಸುಕು ಹಾಕಿಕೊಂಡು, ತೋಟದ ಸಣ್ಣ ಬಾಗಿಲ ಬೀಗವನ್ನು ಬಿಚ್ಚಿ ಒಳಗೆ ಪ್ರವೇಶಮಾಡಿ ಪುನಃ ಬಾಗಿಲನ್ನು ಬೀಗಹಾಕಿ ದೈವಾಧೀನದಿಂದ ಬೀಗದ ಕಯ್ಯನ್ನು ಅಲ್ಲಿಯೇ ಬಿಟ್ಟು ಹೋದನು. ಆಗ ರಾತ್ರಿ ಸುಮಾರು ಹತ್ತು ಗಂಟೆಯಿರಬಹುದು. ಬಂದವನು ವಲ್ಲಭದೇವನೇ ಇರಬಹುದೆಂದು ನಿಶ್ಚಯಿಸಿ ಕ್ಷಣಮಾತ್ರದಲ್ಲಿ ತೋಟದ ಆವರಣದ ಗೋಡೆಯನ್ನು ಏರಿ ನೋಡಲು, ಆಗ ತಾನೇ ಅವನು ಶಾಲನ್ನು ತೆಗೆದು ಮಡಿಸಿ ಕಯ್ಯ ಮೇಲೆ ಹಾಕಿಕೊಂಡು ಮನೆಯ ಕಡೆ ಹೋಗುತ್ತಲಿದ್ದನು.

ಅವನು ಮನೆಯ ಒಳಗೆ ಹೋಗುತ್ತಲೆ ನಾನು ತೋಟದೊಳಗೆ ಇಳಿದು ತೋಪಸನ್ನು ಹೊಕ್ಕು ನಡುವಿನಲ್ಲಿ ಸಿಕ್ಕಿಸಿದ್ದ ಕಠಾರಿಯನ್ನು ಕಯ್ಯಲ್ಲಿ ಹಿಡಿದುಕೊಂಡು, ಅವನು ದಾರಿಯಲ್ಲಿ ಪುನಃ ಬರುವುದನ್ನೇ ನೋಡುತ್ತಲಿದ್ದೆನು. ಅಂದು ಆಷಾಢಶುಕ್ಲ ಪೌರ್ಣಮಿ ; ಗಾಳಿಯು ವಿಪರೀತವಾಗಿದ್ದುದರಿಂದ ಮೇಘಗಳು ಚದರಿ ಹೋಗುತ್ತಲೂ ಮರಳಿ ದಟ್ಟವಾಗಿ ಸೇರುತ್ತಲೂ ನಿಂತಲ್ಲಿ ನಿಲ್ಲದೆ ಆಕಾಶದಲ್ಲಿ ತೇಲುತ್ತಲಿದ್ದುವು. ತೋಪಿನಲ್ಲಿ ಮರಗಳು ದಟ್ಟವಾಗಿದ್ದುದರಿಂದ ವಿರಳವಾದ ಮೇಘಗಳಿಂದ ಬಿಡಲ್ಪಟ್ಟ ಚಂದ್ರಿಕೆಯು ಧಾರಾಳವಾಗಿ ಆ ತೋಪಿನೊಳಗೆ ಪ್ರವೇಶಮಾಡಲರಿಯದಿದ್ದಿತು. ಆಗ ಆರೋ ಮನೆಯೊಳಗೆ ನರಳುತ್ತಿರುವಂತೆ ನನಗೆ ಕೇಳಿಸಿತು. ಕೊಲೆಯನ್ನು ಮಾಡಲು ಉದ್ಯುಕ್ತನಾಗಿರುವನಿಗೆ ಇಂತಹ ವಿಕಾರಧ್ವನಿಗಳು ಕೇಳಿಸುವುದುಂಟು ಎಂದು ಕೇಳಿದ್ದುದರಿಂದ ಇದು ನನ್ನ ಭ್ರಾಂತಿಯೆಂದಿದ್ದೆನು. ಸುಮಾರು ಅರ್ಧರಾತ್ರದ ವೇಳೆಯಲ್ಲಿ ನಾವು ಈಗ ಇಳಿದು ಬಂದ ಮೆಟ್ಟಲುಗಳ ಮೇಲಿನ ಹಂತದ ಮೇಲೆ ಒಂದು ಸಣ್ಣ ಬೆಳಕನ್ನಿಟ್ಟು, ವಲ್ಲಭದೇವನು ಹಂತಗಳನ್ನಿಳಿದು ಕೌಂಕುಳಲ್ಲಿ ಒಂದು ಸಣ್ಣ

ಪೆಟ್ಟಿಗೆಯನ್ನಿಟ್ಟುಕೊಂಡು ಕಯ್ಯಲ್ಲಿ ಒಂದು ಗುದ್ದಲಿಯನ್ನು ಹಿಡಿದು ಕೆಳಗೆ ಇಳಿದು ನಾನಿನ್ದ ಕಡೆಗೆ ಬಂದು, ಅತ್ತಿತ್ತ ನೋಡಿ ಯಾರೂ ಇಲ್ಲವೆಂದು ನಿಶ್ಚಯಿಸಿಕೊಂಡು ಕೌಂಕುಳಲ್ಲಿದ್ದ ಪೆಟ್ಟಿಗೆಯನ್ನು ಕೆಳಗಿಟ್ಟು, ಗುದ್ದಲಿಯಿಂದ ನೆಲವನ್ನು ಅಗೆಯಲು ಪ್ರಾರಂಭಿಸಿದನು.

ವಲ್ಲಭದೇವನು ಇಳಿದು ಬಂದ ಕೂಡಲೇ ನಾನು ಆ ತೋಪಿನ ಒಂದು ದೊಡ್ಡ ಮರದ ಮರೆಯಲ್ಲಿ ಅವನಿಗೆ ಕಾಣದಂತೆ ನಿಂತಿದ್ದೆನು. ಅವನು ಪೆಟ್ಟಿಗೆಯನ್ನು ನೆಲದ ಮೇಲೆ ಇಟ್ಟು ಅಗೆಯಲು ಪ್ರಾರಂಭಮಾಡಿದಾಗ ಆ ಪೆಟ್ಟಿಗೆಯಲ್ಲಿ ಪ್ರಾಯಶಃ ಹಣ ವಿರಬಹುದು ಅದನ್ನು ಇಲ್ಲಿ ಆರಿಗೂ ತಿಳಿಯದಂತೆ ಹೂಳಿಡುವನು; ಇವನನ್ನು ಈಗ ಕೊಂದರೆ ನನ್ನ ದ್ವೇಷವನ್ನು ತೀರಿಸಿಕೊಳ್ಳುವುದಲ್ಲದೆ ನನ್ನ ನಾದಿನಿಗೆ ಜೀವನಕ್ಕೆ ಬೇಕಾದಷ್ಟು ಹಣವು ದೊರಕುವುದು ಎಂದು ಸಂತೋಷದಿಂದ ಕೂಡಿದವನಾಗಿ ಸಮಯವನ್ನು ಕಾದಿದ್ದ ತಟ್ಟನೆ ವಲ್ಲಭದೇವನ ಸಮೀಪಕ್ಕೆ ಹಾರಿಬಂದು 'ಇಗೋ! ನನ್ನ ಅಣ್ಣನ ಸಾವಿಗೆ ನಿನ್ನ ಸಾವು. ಅವನ ಮಡದಿಯ ಜೀವನಕ್ಕೆ ನಿನ್ನ ಪೆಟ್ಟಿಗೆಯ ಹಣ; ಇಂದಿಗೆ ನನ್ನ ಹಗೆಯು ಹರಿಯಿತು' ಎಂದು ಹೇಳಿ ಕಠಾರಿಯನ್ನು ಅವನ ಎದೆಯಲ್ಲಿ ನಾಟಿದೆನು.

ನಾನಾಡಿದ ಮಾತು ಅವನ ಕಿವಿಗೆ ಬಿದ್ದಿತೋ ಇಲ್ಲವೋ ಕಾಣೆ; ಅವನು ಪಿಟ್ ಪಟ್ ಎನ್ನದೆ ನೆಲದ ಮೇಲೆ ಸತ್ತು ಬಿದ್ದನು. ಅವನ ಎದೆಯಿಂದ ಕಠಾರಿಯನ್ನು ಹಿರಿದಾಗ ರಕ್ತವು ನನ್ನ ಮುಖಕ್ಕೆ ಚಿಮ್ಮಿದಂತು ಹಾರಿತು; ಅದು ನನಗೆ ಅತ್ಯಾನಂದವನ್ನುಂಟುಮಾಡಿತು. ಕೂಡಲೆ ಪೆಟ್ಟಿಗೆಯನ್ನು ಎತ್ತಿಕೊಂಡು ತೋಟದ ಬಾಗಿಲನ್ನು ತೆರೆದು ವುನಃ ಅದನ್ನು ಮುಚ್ಚಿಕೊಂಡು ಹೊರಗಿನಿಂದ ಬೀಗವನ್ನು ಹಾಕಿ, ಬೀಗದ ಕಯ್ಯನ್ನು ದೂರದ ಒಂದು ಕುಂಟಿಯಲ್ಲಿ ಬಿಸುಟು ಓಡಿಹೋದೆನು.

ಆಗ ಮಲಯಸಿಂಹನು ಹಾಗಾದರೆ ನೀನು ಅವನನ್ನು ಕೊಂದುದಲ್ಲದೆ ಅವನ ದ್ರವ್ಯವನ್ನೂ ಅಪಹರಿಸಿದಂತಾಯಿತು ಎಂದು ಹೇಳಲು, ಭದ್ರಕನು ಮಹಾಸ್ವಾಮೀ! ನಾನು ಕೊಲೆಯನ್ನೂ ಮಾಡಲಿಲ್ಲ, ದ್ರವ್ಯವನ್ನೂ ಅಪಹರಿಸಲಿಲ್ಲ; ಮುಯ್ಯಿಗೆ ಮುಯ್ಯಿ ಮಾಡಿ ನನ್ನ ನಾದಿನಿಗೆ ಉಂಟಾದ ನಷ್ಟಕ್ಕೆ ಪ್ರತಿಯಾಗಿ ಆ ಪೆಟ್ಟಿಗೆಯನ್ನು ತೆಗೆದು ಕೊಂಡೆನು.

ಆ ಪೆಟ್ಟಿಗೆಯಲ್ಲಿ ಏಷ್ಟು ಹಣವಿದ್ದಿತು?

ಮಹಾಸ್ವಾಮಿ, ಆ ಪೆಟ್ಟಿಗೆಯಲ್ಲಿ ಹಣವಿರಲಿಲ್ಲ; ಹೆಣದಂತೆ ಒಂದು ಮಗು ವಿದ್ದಿತು. ನನ್ನ ಮುಖದ ಮೇಲೆ ಹಾರಿದ್ದ ರಕ್ತವನ್ನು ತೊಳೆದುಕೊಳ್ಳುವುದಕ್ಕಾಗಿ ಊರಿನ ಹೊರಗಿರುವ ನದಿಗೆ ಹೋಗಿ ಪೆಟ್ಟಿಗೆಯನ್ನು ಕೆಳಗಿಟ್ಟು, ಮುಖವನ್ನೂ ಕಠಾರಿ ಯನ್ನೂ ತೊಳೆದು ಪೆಟ್ಟಿಗೆಯ ಮುಚ್ಚಳವನ್ನು ತೆರೆದು ನೋಡಲು 'ಭಾ' ಎಂಬ ಅಕ್ಷರ ವನ್ನು ಎರಡು ಸೆರಗುಗಳಲ್ಲಿಯೂ ಹಾಕಿದ್ದ ಒಂದು ದುಪ್ಪಟಿಯಲ್ಲಿ ಆಗತಾನೇ ಹುಟ್ಟಿದ್ದ ಒಂದು ಗಂಡು ಮಗುವನ್ನು ಸುತ್ತಿ ಇಟ್ಟಿದ್ದಿತು. ಅದು ಉಸಿರಿಲ್ಲದೆ ಇದ್ದುದನ್ನು ಕಂಡು ಅದನ್ನು ನದಿಯಲ್ಲಿ ಬಿಸುಟು ಹೋಗಬೇಕೆಂದು ಎತ್ತಿದಾಗ ಅದರ ಮೈ ಬೆಚ್ಚಗೆ ಇದ್ದುದ ರಿಂದ, ಇನ್ನೂ ಪ್ರಾಣವಿರುವುದೋ ಏನೋ ಎಂದು ನೋಡುತ್ತಿರುವಷ್ಟರಲ್ಲಿಯೇ ಅದು ಅಳುವುದಕ್ಕೆ ಪ್ರಾರಂಭಿಸಿತು. ಒಂದು ಪ್ರಾಣವನ್ನು ಕೊಂದುದಕ್ಕೆ ಮತ್ತೊಂದನ್ನು ಉಳಿಸುವಂತೆ ದೇವರು ಅನುಕೂಲಪಡಿಸಿದನಲ್ಲಾ ಎಂದು ಸಂತೋಷಪಟ್ಟು, ಶಿಶುವನ್ನು ಸುತ್ತಿದ್ದ ದುಪ್ಪಟಿಯನ್ನು ಎರಡು ಅಕ್ಷರಗಳ ಮಧ್ಯೆ ಹರಿದು ಒಂದು ಭಾಗವನ್ನು ನಾನಿ ಟ್ಟುಕೊಂಡು ಮತ್ತೊಂದರಲ್ಲಿ ಆ ಶಿಶುವನ್ನು ಸುತ್ತಿ ಪೆಟ್ಟಿಗೆಯು ಕೂಡ ಅಲ್ಲಿಗೆ ಸಮೀಪ ದಲ್ಲಿದ್ದ ಅನಾಥಾಲಯದ ಜಗುಲಿಯ ಮೇಲೆ ಇಟ್ಟು ನಮ್ಮೂರಿಗೆ ಹೊರಟುಹೋದೆನು.

ಗಂಡನನ್ನು ಕರೆದುಕೊಂಡು ಬರುವೆನೆಂದು ಬಹು ದಿನಗಳಿಂದ ಕಾದಿದ್ದ ನನ್ನ ನಾದಿನಿಯು ನಾನೊಬ್ಬನೇ ಬಂದುದನ್ನು ಕಂಡು, ನಿಮ್ಮಣ್ಣನವರೆಲ್ಲಿ ಎಂದು ಕೇಳಲು, ಅಮ್ಮಾ! ಅಣ್ಣನನ್ನು ನರಪುರದಲ್ಲಿ ಈಗಿನ ರಾಜನ ಕಡೆಯವರು ಕೊಂದರು, ಅದಕ್ಕೆ ಪ್ರತಿಯಾಗಿ ಮಾಡಿ ಬಂದೆನು ಎಂದನು. 'ಹಾಗೆಂದರೇನು' ಎಂದು ಅವಳು ಗೋಳಾಡಲು ನಡೆದ ಸಂಗತಿಯನ್ನು ವಿಸ್ತಾರವಾಗಿ ತಿಳಿಸಿದೆನು. ಅಯ್ಯೋ! ಆ ಮಗು ವನ್ನಾದರೂ ತಂದಿದ್ದರೆ ಅದನ್ನು ಸಾಕಿ ಸಲಹುತ್ತ ಹೊತ್ತ ಕಳೆಯುತ್ತಲಿದ್ದೆನಲ್ಲಾ ಎಂದು ಹೇಳಲು, ಅಮ್ಮಾ! ಆ ಮಗುವನ್ನು ಸಾಕಲು ನಮಗೆ ಈಗ ಶಕ್ತಿಸಾಲದು; ಮುಂದೆ ದೇವರು ಅನುಕೂಲಮಾಡಿಕೊಟ್ಟರೆ ಆಗ ಕರೆದುಕೊಂಡು ಬರೋಣ. ಈ ಅರ್ಧ ದುಪ್ಪಟಿಯನ್ನು ಅನಾಥಾಲಯದಲ್ಲಿ ತೋರಿಸಿದರೆ ಆ ಮಗುವನ್ನು ಅವರು ನಮಗೆ ಕೊಡುವರು. ಇದನ್ನು ಜೋಪಾನವಾಗಿಟ್ಟಿರು ಎಂದು ಹೇಳಿ ತಂದಿದ್ದ ದುಪ್ಪಟಿಯ ಅರ್ಧಭಾಗವನ್ನು ಅವಳಲ್ಲಿ ಕೊಟ್ಟಿನು.

ಸ್ವಲ್ಪ ದಿವಸಗಳಲ್ಲಿಯೇ ದೈವಾನುಗ್ರಹದಿಂದ ನನ್ನ ವ್ಯಾಪಾರವು ವೃದ್ಧಿಯಾಗಿ ದ್ರವ್ಯಾನುಕೂಲಗಳು ಹೆಚ್ಚುತ್ತ, ಬಂದಾನೊಂದು ಸಾರಿ ವ್ಯಾಪಾರಸಂಬಂಧದಲ್ಲಿ ದೂರದೇಶಕ್ಕೆ ನಾನು ಹೋಗಬೇಕಾಗಿ ಬಂದಿತು. ಅಲ್ಲಿಗೆ ಹೋಗಿ ಕೆಲಸಗಳನ್ನು ಮುಗಿಯಿಸಿಕೊಂಡು ಹಿಂದಿರುಗಿ ಮನೆಗೆ ಬಂದಾಗ ಅಲ್ಲಿ ತೊಟ್ಟಿಲೂ ಒಂದು ಮಗುವೂ ಇದ್ದಿತು. ಆರ ಮಗುವೆಂದು ಕೇಳಿದುದಕ್ಕೆ ಅವಳು ಅನಾಥಾಲಯದಲ್ಲಿದ್ದ ಮಗುವು ಎಂದಳು. ಗಂಡನೂ ಸತ್ತು ಮಕ್ಕಳೂ ಇಲ್ಲದೆ ಕೊರತೆಪಡುತ್ತಲಿದ್ದವಳಿಗೆ ಹೊತ್ತು ಕಳೆಯಲು ಇದೊಂದು ವಿಧವಾಗಿ ಅನುಕೂಲವಾಯಿತೆಂದು ತಿಳಿದು ಅಮ್ಮಾ, ಒಳ್ಳೆಯ ಕೆಲಸವಾಯಿತು ಎಂದು ನಾನು ಸಂತೋಷಪಟ್ಟುಕೊಂಡೆನು. ದೇವರ ದಯೆಯಿಂದ ಆ ಮಗುವು ನನಗೆ ಸಿಕ್ಕಿದುದರಿಂದ ನಾವು ಅದಕ್ಕೆ ಭದ್ರದತ್ತನೆಂದು ಹೆಸರಿಟ್ಟಿವು. ಅದು ಚಟುವಟಿಕೆಯಾಗಿಯೂ ಸುಂದರವಾಗಿಯೂ ಇದ್ದುದರಿಂದ ಅದನ್ನು ಅತಿಪ್ರೀತಿಯಿಂದ ಸಾಕುತ್ತ ಅದಕ್ಕೆ ತಕ್ಕ ವಿದ್ಯೆಯನ್ನು ಕಲಿಸುತ್ತ ಬಂದೆವು. ಹದಿನೆಂಟು ವಯಸ್ಸಾಗುವುದರಲ್ಲಿಯೇ ಅವನು ಎಲ್ಲಾ ವಿದ್ಯೆಯನ್ನೂ ಕಲಿತು ಜತೆಯಲ್ಲಿ ತುಂಟತನವನ್ನೂ ಕಲಿತನು.

ಒಂದಾನೊಂದು ದಿನ ಸಂಜೆ, ನನ್ನ ಮಂಗ್ಗಲ ಮನೆಯವನು ಬಂದು ಅಪ್ಪಾ ಭದ್ರಕ, ನಾನಿಲ್ಲದ ವೇಳೆಯಲ್ಲಿ ಅಯೋ ನನ್ನ ಮನೆಯ ಬೀಗವನ್ನು ಮುರಿದು ಒಳಗಿದ್ದ ಹಣವನ್ನು ಕಳವು ಮಾಡಿದ್ದಾರೆ ಎಂದನು. ನಮ್ಮೂರಿನಲ್ಲಿ ಕಳವು ಎಂಬ ಹೆಸರೇ ಇರಲಿಲ್ಲ. ಹೊರಗಣವರು ಆರೂ ಬಂದಿರಲಿಲ್ಲ; ಹೀಗಿರುವಲ್ಲಿ ಆರು ಕಳವು ಮಾಡಿರಬಹುದೆಂದು ಯೋಚಿಸುತ್ತ ಭದ್ರದತ್ತನ ಮೇಲೆ ಅನುಮಾನವುಂಟಾಗಿ, ಅವನೆಲ್ಲಿ ಎಂದು ನನ್ನ ನಾದಿನಿಯನ್ನು ಕೇಳಲು, ಅವಳು 'ಬೆಳಿಗ್ಗೆ ಎದ್ದು ಹೋದವನು ಇನ್ನೂ ಬಂದಿಲ್ಲ' ಎಂದಳು.

ಮೂವತ್ತೈದನೆಯ ಅಧ್ಯಾಯ

ದುರಾಶೆಯ ಫಲ

ಊರೆಲ್ಲ ಸುತ್ತಿ ಭದ್ರದತ್ತನನ್ನು ಕಾಣದೆ ಬೇಸತ್ತು ಮನೆಗೆ ಹಿಂದಿರುಗಿ ಬರುತ್ತಲಿದ್ದಾಗ ಅವನು ಒಂದು ಕೋತಿಯು ಮರಿಯು ನಡುವಿಗೆ ಸರಪಣಿ ಕಟ್ಟಿ ಹಿಡಿದು

ಕೊಂಡು ಬರುತ್ತಲಿದ್ದುದನ್ನು ಕಂಡು, ಎಲಾ ಭದ್ರದತ್ತ ! ಈ ಕೋತಿಯ ಮನಿಯು ಎಲ್ಲಿಯದು? ಏತಕ್ಕೆ ತಂದೆ ಎಂದು ಕೇಳಲು, ಇದು ಊರ ಹೊರಗಿನ ತೋಪಿನಲ್ಲಿ ಕಟ್ಟಿದ್ದಿತು; ಬೆಚ್ಚಿಕೊಂಡು ಒಂದೆನು ಎಂದನು. ಕೆಲವು ದಿನಗಳ ಹಿಂದೆ ಒಬ್ಬ ನಾವಿಕನು ಕೆಲವು ಕೋತಿಗಳನ್ನು ನಮ್ಮೂರಿಗೆ ತಂದು ಆಡಿಸಿದ್ದುದನ್ನು ಭದ್ರದತ್ತನು ನೋಡಿದ್ದನು. ಅಂದಿನಿಂದ ಅವನಿಗೆ ಹೇಗಾದರೂ ಬಂದು ಕೋತಿಯನ್ನು ಸಂಪಾದಿಸಬೇಕೆಂಬ ಆಸೆಯು ಬಲವಾಗಿದ್ದಿತು. ಕೋತಿಗಳನ್ನು ಮರಕ್ಕೆ ಕಟ್ಟಿದ್ದುದನ್ನು ನಾನೆಂದೂ ಕಾಣೆ, ನಿಜವನ್ನು ಹೇಳು ಎಂದು ಕೇಳಲು, ಅವನು ಸುಳ್ಳುಗಳನ್ನು ಒಂದಕ್ಕೊಂದು ಜೋಡಿಸಿ ತಾನು ಹೇಳಿದ್ದುದೇ ನಿಜವೆಂದು ನಂಬಿಸುತ್ತ, ನನಗೆ ಕೋಪ ಬಂದಿತೆಂದು ತಿಳಿದು ನಗುತ್ತಿದ್ದನು. ಅದನ್ನು ಕಂಡು ನನಗೆ ಮತ್ತಷ್ಟು ಕೋಪವು ಹೆಚ್ಚಿ ಅವನನ್ನು ಹೊಡೆಯಬೇಕೆಂದು ಕಯ್ಯೆತ್ತಿದೆನು. ಆಗವನು ನನ್ನನ್ನು ಹೊಡೆಯುವುದಕ್ಕೆ ನೀನಾರು? ನಿನಗೇನು ಬಾಧ್ಯತೆ? ನೀನೇನು ನಮ್ಮಪ್ಪನೋ ಎಂದು ಕೇಳಿದನು.

ಅವನು ಹೀಗೆನ್ನುತ್ತಲೇ ನನಗೆ ಬಹು ಆಶ್ಚರ್ಯವಾಗಿ ಎತ್ತಿದ ಕಯ್ಯನ್ನು ಹಾಗೇ ಕೆಳಗೆ ಇಳಿಸಿ ಇವನು ನಮ್ಮ ಮಗನಲ್ಲವೆಂಬುದನ್ನು ನಾವು ಎಷ್ಟೋ ಗುಟ್ಟಾಗಿ ಇಟ್ಟಿದ್ದರೂ, ಇದು ಇವನಿಗೆ ಗೊತ್ತಾದ ಬಗೆ ಹೇಗೆ ಎಂದು ಯೋಚಿಸುತ್ತಿದ್ದೆನು. ಅಂದಿನಿಂದ ಅವನಿಗೆ ವಿಶೇಷ ಧೈರ್ಯವುಂಟಾಗಿ, ದಿನೇದಿನೇ ದುಸ್ಸಹವಾಸವೂ ಅವಿವೇಕವೂ ಹೆಚ್ಚಿ, ಮನೆಯಲ್ಲಿ ಕಯ್ಯಿಗೆ ಸಿಕ್ಕಿದುದನ್ನೆಲ್ಲ ಕದಿಯುತ್ತ ಸ್ವೇಚ್ಛೆಯಾಗಿರುತ್ತಿದ್ದನು. ಅವನ ಶಕ್ತಿಯನ್ನೂ ಯುಕ್ತಿಯನ್ನೂ ಧೈರ್ಯವನ್ನೂ ಸಾಹಸವನ್ನೂ ನೋಡಿ ಮೆಚ್ಚಿ ಇವನನ್ನು ನಮ್ಮ ಕಳ್ಳ ವ್ಯಾಪಾರದಲ್ಲಿ ಸೇರಿಸಿದರೆ ಮುಂದೆ ಸರಿಯಾದ ಮಾರ್ಗಕ್ಕೆ ಬರಬಹುದು ಎಂದು ಯೋಚಿಸಿ, ಆದಕ್ಕಾಗಿ ಒಬ್ಬ ಸ್ನೇಹಿತನ ಸಂಗಡ ತಕ್ಕ ಏರ್ಪಾಡನ್ನು ಮಾಡಿ, ಒಂದು ದಿನ ಅವನನ್ನು ಕರೆದು ಅಪ್ಪಾ, ಇಷ್ಟು ದಿನಗಳು ನೀನು ಸಣ್ಣವನಾಗಿದ್ದುದರಿಂದ ನಮ್ಮನೆ ಆಟವಾಡುತ್ತ ಹೊತ್ತು ಕಳೆದೆ; ಈಗ ದೊಡ್ಡವನಾದೆ, ಇನ್ನು ಹೀಗಿರುವುದು ಸರಿಯಲ್ಲ ಎಂದು ನಾನು ಮಾಡಿದ ಏರ್ಪಾಡನ್ನೆಲ್ಲ ಅವನಿಗೆ ತಿಳಿಸಲು, ಅವನು ಎಲ್ಲವನ್ನೂ ಕೇಳಿ, ನಿನಗೇನು ಹುಚ್ಚೋ? ನೆಮ್ಮದಿಯಾಗಿ ಬದುಕುತ್ತಿರುವುದನ್ನು ಬಿಟ್ಟು ನಿನ್ನಂತೆ ಕಷ್ಟಪಡುವುದಕ್ಕೆ ನನಗೇನು ತಲೆಯು ಹಿಡಿದಿದೆಯೋ? ನನ್ನ ಮನಸ್ಸು ಎಂದಿಗೂ ಅದಕ್ಕೆ ಒಡಂಬಡದು ಎಂದನು.

ಅವನು ಹೀಗೆಂದುದನ್ನು ಕೇಳಿ ನನಗೆ ಆಶ್ಚರ್ಯವಾಗಿ ಏನನ್ನು ಹೇಳುವುದಕ್ಕೂ ತೋಚದೆ ಸುಮ್ಮನೆ ನಿಂತೆನು. ಅಷ್ಟು ಹೊತ್ತಿಗೆ ಅವನ ಜನಿಗಾರರು ಅವನನ್ನು ಹುಡುಕಿ ಕೊಂಡು ಬಂದರು. ಅವರ ಸಂಗಡ ಹೋಗುತ್ತ ಅವರಿಗೆ ನನ್ನನ್ನು ತೋರಿಸಿ ಏನನ್ನೋ ಹೇಳುತ್ತ ಹೋದನು. ನನ್ನ ಮಗನಾಗಿದ್ದಿದ್ದರೂ ನನ್ನ ಅಣ್ಣನ ಮಗನಾಗಿದ್ದಿದ್ದರೂ ಅವನನ್ನು ದಂಡಿಸಿ ಒಳ್ಳೆಯ ಮಾರ್ಗಕ್ಕೆ ತರುತ್ತಲಿದ್ದೆನು. ಅವನ ತಂದೆಯನ್ನು ನನ್ನ ಕಯ್ಯಾರೆ ಕೊಂದು, ಹುಟ್ಟಿದಾರಭ್ಯ ತಾಯಿಯ ಮುಖವನ್ನು ಕಂಡರಿಯದ ಆ ಹುಡುಗ ನನ್ನ ಹೊಡೆಯಲು ಕೈ ಬರಲಿಲ್ಲ. ಎರಡು ಮೂರು ದಿನಗಳಲ್ಲಿಯೇ ವ್ಯಾಪಾರದ ನಿಮಿತ್ತ ನಾನು ಹೊರಡಬೇಕಾಗಿ ಬಂದುದರಿಂದ, ಭದ್ರದತ್ತನ ಸಂಗತಿಯನ್ನು ನನ್ನ ನಾದಿನಿಗೆ ತಿಳಿಸಿ, ಹತ್ತಿರಿದ್ದ ಹಣಕಾಸುಗಳನ್ನು ನೆಲದಲ್ಲಿ ಹೂಳಿ ಆ ಸ್ಥಳವನ್ನು ಅವಳಿಗೆ ತೋರಿಸಿ, ನೀನು ಎಚ್ಚರಿಕೆಯಾಗಿರು ಎಂದು ಹೇಳಿ ಹೊರಟು ಹೋದೆನು.

ಆ ಸಲದ ವ್ಯಾಪಾರವು ಮೊತ್ತಮೊದಲು ಅನುಕೂಲವಾಗಿದ್ದರೂ ಕೊನೆಕೊನೆಗೆ ಬಹು ಕಷ್ಟಕ್ಕೆ ಹೇತುವಾಯಿತು. ಎಲ್ಲೆಲ್ಲಿಯೋ ಸುತ್ತಿ ವ್ಯಾಪಾರವನ್ನು ಮಾಡಿ ಕೊಂಡು, ಕೊನೆಗೆ ಮನೋರಂಜಿನಿ ಎಂಬ ಊರಿನ ಮನೆಯ ಸಮೀಪದಲ್ಲಿ ಸಾಮಾನುಗಳನ್ನು ಇಳಿಸಿಕೊಡುವುದಾಗಿ ಒಪ್ಪಿಕೊಂಡು, ಅಲ್ಲಿ ಅವುಗಳನ್ನು ಇಳಿಸುತ್ತಲಿದ್ದಾಗ ಸರ್ಕಾರದವರು ಹೇಗೋ ಅದನ್ನು ತಿಳಿದು ನನ್ನನ್ನು ಹಿಡಿಯಬೇಕೆಂದು ಆಯುಧ ಸಮೇತರಾಗಿ ಬರುತ್ತಲಿದ್ದರು. ದೈವಾಧೀನದಿಂದ ಆ ವೇಳೆಗೆ ಸೂರ್ಯನು ಅಸ್ತಂಗತನಾದನು. ಅವರು ಬರುತ್ತಲಿದ್ದುದನ್ನು ದೂರದಲ್ಲಿಯೇ ಕಂಡು ನನ್ನ ಜತೆಯವರಿಗೆ ಹೇಳಿ ಸದ್ದಿಲ್ಲದೆ ನದಿಯಲ್ಲಿ ಇಳಿದು ಅಲ್ಲಿಂದ ಒಂದು ಚರಂಡಿಯಲ್ಲಿ ನುಗ್ಗಿ ಮನೋರಂಜಿನಿಯ ಹಿಂದುಗಡೆಯ ಕಾಲುವೆಯಲ್ಲಿ ಎದ್ದು ಮನೆಯ ಹಿಂಬಾಗವನ್ನು ಸೇರಿದೆನು. ಆ ಮನೋರಂಜಿನಿಯ ಯಜಮಾನನು ನಮಗೆ ಆಪ್ತನು. ಸರ್ಕಾರದವರ ತೊಂದರೆ ಬಂದಾಗಲೆಲ್ಲ ಅವರ ಕಣ್ಣಿಗೆ ನಾವು ಬೀಳದಂತೆ ನಮ್ಮನ್ನು ಮರೆಮಾಡಿ ರಕ್ಷಿಸುತ್ತಲಿದ್ದನು. ಅದರಿಂದ ಆ ಮನೆಯ ಹಿತ್ತಿಲ ಬಾಗಿಲಲ್ಲಿ ನಿಂತು ಒಳಗೆ ಹೊಸಬರಾರೂ ಇಲ್ಲದಿದ್ದರೆ ಕದವನ್ನು ತಟ್ಟೋಣವೆಂದು ಇದ್ದೆನು.

ನನ್ನ ಗ್ರಹಚಾರಕ್ಕೆ ಒಳಗೆ ಆರೋ ಹೊಸಬರಿದ್ದರು. ಅವರು ಹೋದ ಮೇಲೆ ಕದವನ್ನು ತಟ್ಟಿ ಒಳಗೆ ಹೋಗುವುದು ಸರಿಯೆಂದು ತಿಳಿದು, ಒದ್ದೆಯಾಗಿದ್ದ ಉಡುಪು

ಗಳಲ್ಲಿ ಕೆಲವನ್ನು ಹಿಂಡಿ ಆತ ಹಾಕಿ ಒಳಗಿನಿಂದ ಮಹಡಿಗೆ ಹತ್ತುವುದಕ್ಕೆ ಮಾಡಿದ್ದ ಮರದ ಹಂತಗಳ ಮೇಲೆಯಲ್ಲಿ ಕುಳಿತುಕೊಂಡೆನು.

ಅದುವರೆಗೆ ಸುಮ್ಮನೆ ಕೇಳುತ್ತಲಿದ್ದ ಮಲಯಸಿಂಹನಿಗೆ ಆ ಸಂಗತಿಯನ್ನು ಕೇಳಿ ಈ ಕಥೆಯಲ್ಲಿ ರುಚಿಯು ಹೆಚ್ಚಿ ಮನೋರಂಜನಿಯು ಯಜಮಾನನ ಹೆಸರೇನು ಎಂದು ಪ್ರಶ್ನೆ ಮಾಡಲು, ಭದ್ರಕನು ಕದರ್ಥಕ ಎಂದನು.

ಇದು ನಡೆದುದು ಯಾವಾಗ?

ಮಹಾಸ್ವಾಮೀ, ಇದು ನಡೆದು ಬಹು ದಿವಸಗಳಾದುವು.

ಸರಿ ಸರಿ, ಆಮೇಲೆ?

ನಾನು ಅಲ್ಲಿ ಕುಳಿತಿದ್ದಾಗ ಒಳಗೆ ಕದರ್ಥಕನು ಹೊಸಬನೊಡನೆ 'ಅಯ್ಯಾ ಶೆಟ್ಟರೇ, ನಿಜವಾಗಿಯೂ ನಮಗೆ ಇದನ್ನು ಬಬ್ಬ ಆನಂದನು ಕೊಟ್ಟನು. ಅವನು ಈ ರೀತಿ ವಜ್ರಗಳನ್ನು ನಮಗೆ ಉಚಿತವಾಗಿ ಕೊಡುತ್ತಾನೆಂದು ನಾನು ಕನಸಿನಲ್ಲಿಯೂ ಕಂಡಿರಲಿಲ್ಲ' ಎಂದನು. ಅದಕ್ಕೆ ಶೆಟ್ಟಿಯು ಆನಂದರು ಈ ರೀತಿ ವಜ್ರದುಂಗುರಗಳನ್ನು ಕೊಟ್ಟು ಹೋಗುವುದನ್ನು ನಾನು ಕಂಡೂ ಇಲ್ಲ ಕೇಳಿಯೂ ಇಲ್ಲ ಎನ್ನಲು, ಮಹಡಿಯು ಹಂತದ ಮೇಲೆ ನರಳುತ್ತ ಕುಳಿತಿದ್ದ ಕದರ್ಥಕನ ಹೆಂಡತಿ ಕಳಾಕಾಂತೆಯು ಮೆಲ್ಲಗೆ ಇಳಿದು ಶೆಟ್ಟಿಯ ಒಳಗೆ ಬಂದು " ನಮ್ಮ ಯಜಮಾನರಿಗೆ ಪೂರ್ವದಲ್ಲಿ ಧರ್ಮದೇವನೆಂಬ ಒಬ್ಬ ಸ್ನೇಹಿತನಿದ್ದನು; ದುರದೃಷ್ಟವಶಾತ್ ಅವನಿಗೆ ಕಾರಾಗೃಹ ಪ್ರಾಪ್ತಿಯಾಯಿತು. ಅವನು ತನ್ನ ಜತೆಯಲ್ಲಿ ಸೆರೆಯಲ್ಲಿದ್ದ ಒಬ್ಬ ದೊಡ್ಡ ಮನುಷ್ಯನಿಗೆ ಅಲಸ್ಯವಾಗಿದ್ದಾಗ ಅವನಿಗೆ ಸಾಹಾಯ್ಯಮಾಡುವುದು ತನ್ನ ಧರ್ಮವೆಂದು ತಿಳಿದು ನಿಷ್ಕಾಮನಾಗಿ ಉಪಚಾರಮಾಡಿದ್ದುದಕ್ಕಾಗಿ, ಒಂದು ವಿಮುಕ್ತನಾದಾಗ ಆ ಶ್ರೀಮಂತನು ಧರ್ಮದೇವನಿಗೆ ಈ ಉಂಗುರವನ್ನು ಕೊಟ್ಟನಂತೆ; ಅವನು ತನ್ನ ಮರಣ ಕಾಲದಲ್ಲಿ ಅದನ್ನು ಒಬ್ಬ ಆನಂದನಲ್ಲಿ ಕೊಟ್ಟ ಇವರಿಗೆ ಕೊಡುವಂತೆ ಹೇಳಿ ಸತ್ತನಂತೆ" ಎಂದಳು.

ಅಮ್ಮಾ! ನಿಮ್ಮ ಯಜಮಾನರು ಹೇಳಿದುದನ್ನೇ ನೀವೂ ಹೇಳುತ್ತೀರಿ ಎಂದು ಶೆಟ್ಟಿಯು ಉಸಿರಲು, ಅವಳು ಎಷ್ಟ ಜನ ಎಷ್ಟು ಸಾರಿ ಹೇಳಿದರೂ ನಿಜವು ಎಂದಿಗಾದರೂ ವ್ಯತ್ಯಾಸವಾದೀತೇ, ಇಲ್ಲ ಎಂದಳು. ಇದರ ಬೆಲೆಯೇನು ಎಂದುದಕ್ಕೆ

ಕದರ್ಥಕನು ಸೆಟ್ಟರೇ, ಇದನ್ನು ಕೊಡುವಾಗ ಆ ಆನಂದನು ಕಟ್ಟಡವನ್ನು ಳಿದು ಬರಿಯ ವಜ್ರಕ್ಕೆ ಮಾತ್ರ ಐವತ್ತು ಸಾವಿರ ವರಹಗಳೆಂದು ಹೇಳಿದ್ದನು ಎಂದನು. ಸೆಟ್ಟಿಯು ಉಂಗುರವನ್ನು ಸಾಯಂಕಾಲದ ಬೆಳಕಿನಲ್ಲಿ ನೋಡಿ ಈಗ ಚೆನ್ನಾಗಿ ತಿಳಿಯುವುದಿಲ್ಲ, ಬೆಳಿಗ್ಗೆ ನೋಡಿದರೆ ಇದರ ಯೋಗ್ಯತೆಯು ಗೊತ್ತಾಗುವುದು. ನನಗೇನೋ ನಲವತ್ತು ಸಾವಿರದ ಮೇಲೆ ಏರುವುದಿಲ್ಲವೆಂದು ತೋರುತ್ತದೆ. ಆ ಆನಂದನ ಹೆಸರೇನು ಎಂದು ಕೇಳಲು ನಿರ್ಮಲಾನಂದನೆಂದನು.

ಆಗ ಮಲಯಸಿಂಹನು ಎಲೋ ಭದ್ರಕಾ, ಕದರ್ಥಕನೂ ಅವನ ಹೆಂಡತಿಯೂ ಹೇಳಿದ ಕಥೆಯನ್ನು ನೀನು ನಂಬಿದೆಯೋ ಎಂದು ಕೇಳಿದನು.

ಸ್ವಾಮೀ, ಕದರ್ಥಕನು ಎಂದೂ ಸುಳ್ಳು ಹೇಳಿದುದನ್ನು ಕಾಣೆ. ನಾನು ಅದನ್ನು ನಂಬಿದೆನು.

ಹಾಗಾದರೆ ನಿನ್ನ ಮನಸ್ಸು ಒಳ್ಳೆಯದೆಂದು ತೋರುತ್ತದೆ. ಆ ಧರ್ಮದೇವ ನಾರು ಬಲ್ಲೆಯೋ ?

ಸ್ವಾಮೀ, ನಾನರಿಯೆ ; ನರವುರದ ಬಂದಿಶಾಲೆಯಲ್ಲಿ ನಾನಿದ್ದಾಗ ನಿರ್ಮಲಾನಂದರು ಅವನ ವರ್ತಮಾನವನ್ನು ಸ್ವಲ್ಪ ಹೇಳಿದ್ದರು.

ಸರಿ ; ಮುಂದೆ ನಿನ್ನ ಕಥೆಯನ್ನು ಹೇಳು.

ಸ್ವಾಮೀ ! ಅಪ್ಪಣೆ, ಲಾಲಿಸಬೇಕು. ಸೆಟ್ಟಿಯು ಪುನಃ ಉಂಗುರವನ್ನು ಕಯ್ಯಲ್ಲಿ ತೆಗೆದುಕೊಂಡು ಹೀಗೂ ಹಾಗೂ ತಿರುಗಿಸಿ ಅದನ್ನು ತಾನು ತಂದಿದ್ದ ಸಣ್ಣ ತ್ರಾಸಿನಲ್ಲಿ ತೂಕಮಾಡಿ ಏನೋ ಹೋದರೂ ಹೋಗಲಿ, ಇನ್ನೂ ಐದು ಸಾವಿರ ವರಹಗಳನ್ನು ಕೊಟ್ಟುಬಿಡುತ್ತೇನೆ ; ಅದರ ಮೇಲೆ ಒಂದು ಚಿಕ್ಕ ಕಾಸನ್ನೂ ಕೊಡಲಾರೆ ಎಂದನು. ಆಗ ಕದರ್ಥಕನು ಆನಂದನು ಹೇಳಿದ ಬೆಲೆಗೆ ಒಂದು ಕಾಸು ಕಡಮೆಯಾದರೂ ಕೊಡೆನು. ನಿಮಗೆ ಇಷ್ಟವಿದ್ದರೆ ಅಷ್ಟಕ್ಕೆ ಕೊಳ್ಳಬಹುದು, ಇಲ್ಲದಿದ್ದರೆ ಬಿಡಬಹುದು. ಬೇರೆ ಯಾರಾದರೂ ಕೊಳ್ಳುವರು ಎಂದನು. ಅದಕ್ಕೆ ಆ ಸೆಟ್ಟಿಯು ಇನ್ನಾರಾದರೂ ನಿನ್ನ ಆನಂದನ ಕಥೆಯನ್ನು ಕೇಳಿ ನನ್ನಂತೆ ಮರುಳಾಗುವರೇ ? ಅವರು ಒಡನೆಯೇ ಪೋಲೀಸಿನವರಿಗೆ ಈ ಸಂಗತಿಯನ್ನು ತಿಳಿಸಿಬಿಟ್ಟರೆ ನಿನ್ನಂಥವನಿಗೆ ಇಂತಹ ವಜ್ರದುಂಗುರವು ಹೇಗೆ ಸಿಕ್ಕಿತು ; ಇದನ್ನು ಎಲ್ಲಿಯೋ ಕದ್ದಿರಬೇಕೆಂದು ಅವರು ಒದ್ದು ನಿನ್ನನ್ನು

ನೆಮನೆಗೆ ಸೇರಿಸುವರು. ಆಗ ನಿನ್ನ ಅನಂದನು ನಿನ್ನನ್ನು ಬಿಡಿಸಿಕೊಳ್ಳಲಿಕ್ಕೆ ಬರುವನೋ? ನೀನು ನೆನೆಮನೆಯಿಂದ ಒರುವುದರೊಳಗಾಗಿ ನಿನ್ನ ಉಂಗುರದ ವಜ್ರವು ಮಾಯವಾಗಿ ಒಂದು ಬಿಳಿಯ ಕಲ್ಲಿನ ಉಂಗುರ ಮಟ್ಟಿಗೆ ಉಳಿಯುವುದು. ಇದನ್ನೆಲ್ಲಾ ಚೆನ್ನಾಗಿ ಯೋಚಿಸಿ ನೋಡು ಎಂದು ಹೇಳಲು, ಕದರ್ಥಕನು ಏನಾದರೂ ಆಗಲಿ, ಐವತ್ತು ಸಾವಿರ ವರಹಗಳಿಗೆ ಕಡಿಮೆಯಾಗಿ ಕೊಡುವುದಕ್ಕೆ ಆಗುವುದಿಲ್ಲ ಎಂದನು.

ಹಾಗಾದರೆ ನಿಮ್ಮ ಇಷ್ಟ; ನಾನು ತಂದಿರುವ ಹಣವು ಇಷ್ಟೇ; ಇಲ್ಲಿ ನೋಡಿ, ಎಂದು ಸೆಟ್ಟಿಯು ಚೀಲದಿಂದ ಹೊನ್ನ ವರಹಗಳನ್ನೂ ನೋಟುಗಳನ್ನೂ ಮೇಜಿನ ಮೇಲೆ ಸುರಿದನು. ತಳತಳಿಸುತ್ತಲಿರುವ ಹೊನ್ನ ವರಹಗಳ ರಾಶಿಯನ್ನು ನೋಡುತ್ತಲೆ ಗಂಡ ಹೆಂಡಿರು ಒಬ್ಬರ ಮುಖವನ್ನೊಬ್ಬರು ನೋಡುತ್ತ ಕೆಲವು ಹೊತ್ತು ಬೆರಗಾಗಿ ನಿಂತು, ಕಣ್ಣಿನಿಂದಲೇ ಒಬ್ಬರನ್ನೊಬ್ಬರು ಪ್ರಶ್ನೆಮಾಡುತ್ತ ಇಬ್ಬರೂ ಪ್ರತ್ಯೇಕ ಒಂದು ಕಡೆಗೆ ಹೋಗಿ, ಈಗ ಇವನು ಹೇಳುವುದಕ್ಕೆ ಒಪ್ಪದಿದ್ದರೆ ಮುಂದೆ ನಮಗೇನಾಗುವುದೋ? ಇವನು ಉಂಗುರವನ್ನು ಕೊಳ್ಳದೆ ಮರಳಿ ಹೋದನಾದರೆ ಅವುದಾದರೂ ಕಿರುಕುಳವನ್ನು ಹುಟ್ಟಿಸಿ ಪೋಲೀಸಿನವರಿಂದ ನಮಗೆ ಇಲ್ಲದ ತೊಂದರೆಯನ್ನು ತಂದಿಟ್ಟಾನು. ಹೋದರೆ ಹೋಗಲಿ; ಸಲವತ್ತೈದು ಸಾವಿರ ವರಹಗಳಿಗೆ ಕೊಟ್ಟುಬಿಡೋಣ ಎಂದು ನಿಶ್ಚಯಮಾಡಿಕೊಂಡರು.

ಆಗ ಕದರ್ಥಕನು ಸೆಟ್ಟಿಯ ಸಮೀಪಕ್ಕೆ ಬಂದು, ಅಯ್ಯಾ ಸೆಟ್ಟರೇ! ನೀವು ಹೇಳಿದಂತೆಯೇ ಆಗಲಿ; ಆದರೆ ನನ್ನ ಹೆಂಡತಿಗೆ ಒಂದು ಚಿನ್ನದ ಸರ ಬೇಕಂತೆ, ಈ ಹಣದ ಜತೆಗೆ ಒಂದು ಸರವನ್ನೂ ಕೊಟ್ಟರೆ ಉಂಗುರವನ್ನು ತೆಗೆದುಕೊಂಡು ಹೋಗಬಹುದು ಎನ್ನಲು, ಒಡನೆಯೇ ವ್ಯಾಪಾರಿಯು ತನ್ನಲ್ಲಿದ್ದ ಮೂರು ನಾಲ್ಕು ಸರಗಳನ್ನು ತೋರಿಸಿ, ಇವುಗಳಲ್ಲಿ ನಿಮಗೆ ಆವುದು ಬೇಕೋ ಆದನ್ನು ತೆಗೆದುಕೊಳ್ಳಿರಿ ಎಂದನು. ಕಳಾಕಾಂತೆಯು ಆ ಸರಗಳನ್ನು ಒಂದೊಂದಾಗಿ ಕುತ್ತಿಗೆಗೆ ಹಾಕಿಕೊಂಡು ಮನಸ್ಸಿಗೆ ಒಪ್ಪಿದುದೊಂದನ್ನು ತೆಗೆದಿಟ್ಟುಕೊಂಡಳು.

ಅಷ್ಟು ಹೊತ್ತಿಗೆ ಗಾಳಿಯೂ ಮೋಡವೂ ಹೆಚ್ಚಿ ಗುಡುಗೂ ಮಿಂಚೂ ಮಳೆಯೂ ಮೊದಲಾದುವು. ಮನೆಯೊಳಗಿದ್ದ ಮೂವರೂ ಧನಪಿಶಾಚಗ್ರಸ್ತರಾಗಿದ್ದುದರಿಂದ ಇದಾವುದೂ ಅವರಿಗೆ ಗೊತ್ತಾಗಲಿಲ್ಲ. ಕದರ್ಥಕನು ಹಣವನ್ನು ಎಣಿಸಿ ಎಣಿಸಿ

ಚೀಲಕ್ಕೆ ಹಾಕುವುದೂ ತೆಗೆಯುವುದೂ, ಇದರಲ್ಲಿಯೇ ಮಗ್ನನಾಗಿದ್ದನು; ಕಳಾ ಕಾಂತೆಯು ಕೊರಳಿಗೆ ಸರವನ್ನು ಹಾಕಿಕೊಂಡು ಕನ್ನಡಿಯ ಮುಂದೆ ನಿಂತು ತನ್ನ ಸೌಂದರ್ಯವನ್ನು ನೋಡಿಕೊಂಡು ಹಿಗ್ಗುತ್ತಲಿದ್ದಳು; ಸಟ್ಟಿಯೋ, ಆ ಉಂಗುರವನ್ನು ದೀಪದ ಬೆಳಕಿನಲ್ಲಿ ಹಿಡಿದು ಅದರ ಕಾಂತಿಯನ್ನು ನೋಡಿ ನೋಡಿ ತನಗೆ ತುಂಬ ಅದಾಯವಾಗುವುದೆಂದು ಆನಂದದಲ್ಲಿದ್ದನು.

ಕದರ್ಥಕನು ಹಣದ ಚೀಲವನ್ನು ಭದ್ರವಾಗಿ ಇರಿಸಿ ಅಯ್ಯಾ ಸೆಟ್ಟಿಯೇ, ಈ ವ್ಯಾಪಾರದಿಂದ ನನಗೆ ಐದು ನಾಣಿಗ ವರಹಗಳು ನಷ್ಟವಾಗಿ ಹೋದುವು; ಆದರೂ ಚಿಂತೆಯಿಲ್ಲ, ಏನಾದರೂ ಅಷ್ಟು ಫಲಾಹಾರವನ್ನು ಮಾಡಿಕೊಂಡು ಹೋಗಿ ಎಂದನು.

ಅದಕ್ಕೆ ವ್ಯಾಪಾರಿಯು ಗಡಿಯಾರವನ್ನು ತೆಗೆದು ನೋಡಿ, ಈಗ ಏಳು ಗಂಟೆಯಾ ಯಿತು; ಊರಿಗೆ ಹೋಗುವುದಕ್ಕೆ ಇನ್ನೂ ಬ್ರಹ್ಮಾಂಡ ಹೊತ್ತಾಗುತ್ತದೆ; ನಾನು ಇಲ್ಲಿ ನಿಲ್ಲುವುದಕ್ಕೆ ಆಗುವುದಿಲ್ಲ, ಕ್ಷಮಿಸಬೇಕು ಎಂದು ಹೇಳಿ ಬೀದಿಗೆ ಹೋದನು. ಆ ವೇಳೆಗೆ ಸಂಜಾವದಲ್ಲಿ ಒಂದು ಸಿಡಿಲು ಬಿದ್ದಿತು. ದಾರಿಯನ್ನು ಬಿಡಲು ಒಂದಿದ್ದ ಕದ ರ್ಥಕನು ಅದನ್ನು ನೋಡಿ ನ್ಯಾಪೀ ನಾಹುಕಾರರೇ, ಮಳೆ ಗಾಳಿ ಸಿಡಿಲು ಬಲವಾ ಗಿದೆ, ನೀವು ಈಗ ಊರಿಗೆ ಹೋಗುವುದು ಸರಿಯಲ್ಲ; ಸುಖವಾಗಿ ಭೋಜನಮಾಡಿ ಕೊಂಡು ಇಲ್ಲಿಯೇ ಮಲಗಿದ್ದು ಬೆಳಗಾಗುತ್ತಲೆ ಎದ್ದು ಹೊರಡುವುದು ಮೇಲು ಎಂದನು. ಅದಕ್ಕೆ ಸೆಟ್ಟಿಯು ನಾನೇನೂ ಮಳೆ ಗಾಳಿಗೆ ಹೆದರುವನಲ್ಲ ಎಂದನು. ಕಳರು ಬಂದರೋ! ಎಂದು ಕಳಾಕಾಂತೆಯು ಕೇಳಲು, ಅವನು ಇಗೋ ನೋಡಿ, ನನ್ನಲ್ಲಿ ಎರಡು ನಾಣ್ಯಿಗಳು ಇರುವುವು; ಇವು ಬಗ್ಗುಳುವುದಕ್ಕೆ ಮೊದಲೇ ಕಚ್ಚುವುವು ಎಂದು ತನ್ನಲ್ಲಿದ್ದ ಎರಡು ಪಿಸ್ತೂಲುಗಳನ್ನು ತೋರಿಸಿದನು.

ಹಾಗಾದರೆ ನಿಮ್ಮಿಷ್ಟ ಎಂದು ಕದರ್ಥಕನು ಅವನನ್ನು ನಾಗಳಾಪುರ ಮನೆಯೊ ಳಕ್ಕೆ ಬಂದನು. ಬಾಗಿಲಲ್ಲಿ ನಿಂತಿದ್ದ ಕಳಾಕಾಂತೆಯೂ ಹಿಂದಿರುಗಿ ಗಂಡನನ್ನು ಕುರಿತು ಮಳೆ ಗಾಳಿ ಹೆಚ್ಚಾಗಿರುವಾಗ ಬಾಗಿಲ ತೆರೆದಿರುವುದು ಸರಿಯಲ್ಲ; ಮೊದಲು ಅದನ್ನು ಮುಚ್ಚಿ ಎನ್ನಲು, ಅವನು ಮನೆಯೊಳಗೆ ಹಣವಿರುವಾಗ ಬಾಗಿಲ ತೆರೆದಿರುವುದು ನನಗೂ ಇಷ್ಟವಿಲ್ಲ ಎಂದು ಬಾಗಿಲನ್ನು ಹೊಚ್ಚಿ ಅಗಳಿಯನ್ನು ಹಾಕಿದನು.

ಕಳಾಕಾಂತೆಯು ಹಿಂದಿರುಗಿ ಬಂದಾಗ ಅವಳ ಮುಖವು ಪಿಶಾಚದ ಮುಖದಂ

ತಿದ್ದಿತು. ಜಿಂಕೆಯನ್ನುಗುಳುತ್ತಿದ್ದ ಅವಳ ಕಣ್ಣುಗಳು ಕೆಂಪಾಗಿ ಭಯಂಕರಗಳಾಗಿದ್ದುವು; ಗಂಡನು ಬಾಗಿಲನ್ನು ಮುಚ್ಚಿ ಅವಳ ಇದಿರಿಗೆ ಬಂದು ನಿಲ್ಲಲು, ನೀವು ಏತಕ್ಕೆ ಅವನನ್ನು ಇಲ್ಲಿಯೇ ಮಲಗು ಎಂದು ಹೇಳಿದಿರಿ ಎಂದಳು. —— ಏಕೆ? ಮಳೆಗಾಳಿಯಲ್ಲಿ ಅವನು ಊರಿಗೆ ಪ್ರಯಾಣ ಮಾಡುವುದು ಸರಿಯಲ್ಲವೆಂದು ಹೇಳಿದೆ. —— ನನಗಿನ್ನೇನೋ ತೋರಿತು. —— ಹಾಗೆಂದರೇನು? —— ನೀವು ಬೇರೆ ಯೋಚನೆಯಿಂದ ಅವನನ್ನು ಇಲ್ಲಿ ನಿಲ್ಲಿಸುವ ಪ್ರಯತ್ನಮಾಡಿದಿರೆಂದಿದ್ದೆನು. —— ಹೆಂಗಸಿಗೆ ಮೈಯ್ಯೆಲ್ಲ ವಿಷವೆಂಬುದು ಸುಳ್ಳಲ್ಲ, ಇಂತಹ ದುರ್ಬುದ್ಧಿ ನಿನಗೇಕೆ ಹುಟ್ಟಿತು? —— ನೀವು ಗಂಡುಸು ಎಂದಿದ್ದೆ —— ಹಾಗೆಂದರೇನು? ನೀವು ಗಂಡುಸಾಗಿದ್ದಿದ್ದರೆ ಅವನನ್ನು ಬೇರೆ ಹೊರಗೆ ಕಳುಹುತ್ತಲೇ ಇರಲಿಲ್ಲ. ——ಅಯ್ಯೋ, ದೇವರೇ! ಇನಕಿಗೇನು ದುರ್ಬುದ್ಧಿ? ಒಂದು ವೇಳೆ ಕಳುಹಿದರೂ ಅವನು ಊರನ್ನು ಸೇರುತ್ತಿರಲಿಲ್ಲ. —— ವಿಷ, ವಿಷ, ವಿಷ? —— ತೋಪಿನ ರಸ್ತೆಯಲ್ಲಿ ಹೋದರೆ ಸುತ್ತು, ಸೀಳು ದಾರಿಯಲ್ಲಿ ಹೋದರೆ ಅವನನ್ನು ಒಂದು ನಿಮಿಷದಲ್ಲಿ ಹಿಡಿಯಬಹುದು. —— ಎಲೌ ವಿಷಪುತ್ತಳಿಯೇ! ನಿನ್ನ ದುರಾಲೋಚನೆಗೆ ದೇವರು ಎಂದಾದರೂ ಸಮ್ಮತಿಸುವನೇ, ಎಂದು ಕದರ್ಥಕನು ಹೇಳುತ್ತಲಿದ್ದಾಗ ದಿಢೀರೆಂದು ಒಂದು ಸಿಡಿಲು ಪಕ್ಕದಲ್ಲಿದ್ದ ತೋಪಿನಲ್ಲಿ ಬಿದ್ದಿತು.

ಆಗ ಅವನು ಹೆಂಡತಿಯನ್ನು ನೋಡಿ, ನೋಡಿದೆಯಾ, ನಿನ್ನ ದುರಾಲೋಚನೆಗೆ ದೈವಸಮ್ಮತವಿಲ್ಲವೆಂದು ನಾನಾಗಲೇ ಹೇಳಲಿಲ್ಲವೇ ಎಂದನು. ಆ ಮಾತು ಮುಗಿಯುವುದರಲ್ಲಿಯೇ ಬೀದಿಯ ಕದವನ್ನು ಆರೋ ದಬದಬನೆ ಬಡಿಯುವ ಸದ್ದು ಕೇಳಿಸಿತು. ಗಂಡಹೆಂಡಿರಿಬ್ಬರೂ ಹೆದರಿ ಅದಾರು ಎನ್ನಲು, ನಾನು, ನಾನು, ಬಾಗಿಲನ್ನು ತೆರೆಯಿರಿ ಎಂದು ಆರೋ ಹೇಳಿದರು. ನೀನಾರೆಂದು ಕದರ್ಥಕನು ಕೇಳಲು ಆಗಂತುಕನು ನಾನು, ಸೆಟ್ಟಿ, ಸೆಟ್ಟಿ ಎಂದನು. ಆಗ ಕಳಾಕಾಂತೆಯು ಗಂಡನ ಮುಖವನ್ನು ನೋಡಿ ದೇವರು ಒಪ್ಪಲಾರ ಎಂದು ಹೇಳಿದ್ದಿರಿ, ಇಗೋ ದೇವರೇ ಅವನನ್ನು ಇಲ್ಲಿಗೆ ತಂದು ಬಿಟ್ಟಿದ್ದಾನೆ ಎಂದಳು. ಆ ಮಾತನ್ನು ಕೇಳುತ್ತಲೆ ಕದರ್ಥಕನು ಕಳೆಗುಂದಿ ಕೈಕಾಲುಗಳು ನಡುಗಿ ಅಲ್ಲಿದ್ದ ಒಂದು ಕುರ್ಚಿಯ ಮೇಲೆ ಬಿದ್ದುಕೊಂಡನು.

ಒಡನೆಯೇ ಕಳಾಕಾಂತೆಯು ಬಾಗಿಲನ್ನು ತೆರೆದು ಸಾಹುಕಾರರೇ, ಇಲ್ಲಿಯೇ

ಇರಿ ಎಂದು ಆಗಲೇ ನಾವು ಹೇಳಲಿಲ್ಲವೇ? ನಮ್ಮ ಮಾತನ್ನು ಕೇಳದೆ ಹೋಗಿ ಅನ್ಯಾಯವಾಗಿ ಅದ್ದಿ ಮುದ್ದೆಯಾದಿರಲ್ಲ; ಬನ್ನಿರಿ, ಒದ್ದೆ ಬಟ್ಟೆಯನ್ನು ತೆಗೆದು ಹಾಕಿರಿ, ನಾನು ಬೇರೆ ಬಟ್ಟೆಯನ್ನು ಕೊಡುತ್ತೇನೆ ಎಂದು ಹೇಳುತ್ತ ಬಾಗಿಲನ್ನು ಮುಚ್ಚಿ, ಅಗಳಿಯನ್ನು ಹಾಕಿದಳು. ಅದಕ್ಕವನು ಅಮ್ಮಾ ನನಗೆ ಇಂದು ಊರಿಗೆ ಹೋಗಿ ಸೇರುವ ಪ್ರಾಪ್ತಿಯಿಲ್ಲ; ಆದರದಿಂದ ನೀವು ಭೋಜನಕ್ಕೆ ಕರೆದಿದ್ದಿರಿ, ಇಗೋ ಬಂದಿದ್ದೇನೆ; ಮಲಗುವುದಕ್ಕೆ ಸ್ವಲ್ಪ ಸ್ಥಳಕೊಟ್ಟರೆ ನಿಮ್ಮ ಉಪಕಾರವನ್ನು ಎಂದಿಗೂ ಮರೆಯೆನು ಎಂದನು.

ಕುಳಿತಿದ್ದ ಕಡೆಯಿಂದಲೇ ವರ್ತಕನು ಮನೆಯನ್ನು ಪರಿಶೋಧಿಸಿ, ಆವ ಭಾಗದಲ್ಲೂ ಅನುಮಾನಕ್ಕೆ ಕಾರಣವಿಲ್ಲನೆಂದು ಮನಸ್ಸಿನಲ್ಲಿ ಧೈರ್ಯಮಾಡಿಕೊಂಡು, ತನ್ನ ಒದ್ದೆ ಬಟ್ಟೆಯನ್ನು ಬಿಚ್ಚುತ್ತ ಅಮ್ಮಾ, ಈ ಮನೆಯಲ್ಲಿ ಇನ್ನಾರಾದರೂ ಉಂಟೋ ಎಂದು ಕೇಳಲು, ನಾವಿಬ್ಬರಲ್ಲದೆ ಬೇರೆ ಯಾರೂ ಇಲ್ಲ ಎಂದಳು. "ಹಾಗಾದರೆ ನಿಮಗೆ ನನ್ನಿಂದ ತೊಂದರೆಯಾಗಬಹುದು" "ನನಗೇನೂ ತೊಂದರೆಯಿಲ್ಲ. ಮಹಡಿಯ ಮೇಲೆ ಪ್ರತ್ಯೇಕವಾಗಿ ಒಂದು ಕೋಣೆಯಿರುವುದು; ಅಲ್ಲಿ ನೀವು ಸುಖವಾಗಿ ಮಲಗಬಹುದು" ಎಂದು ಹೇಳಿ ಹೊಸಬಟ್ಟೆಗಳನ್ನೂ ಊಟದ ಸಾಮಾನನ್ನೂ ತಂದಿಟ್ಟಳು. ಆಗ ವರ್ತಕನು ನಿನಗೆ ಊಟವಾಯಿತೋ ಎಂದು ಕೇಳಲು, ಅವಳು ನಾವು ಹೊತ್ತು ಮುಳುಗುವುದರೊಳಗಾಗಿಯೇ ಊಟಮಾಡುವ ಪದ್ಧತಿ ಎಂದಳು. ಹಾಗಾದರೆ ನಾನೊಬ್ಬನೇ ಊಟಮಾಡಬೇಕು" "ನನ್ನ ಯಜಮಾನರು ನೋಡುತ್ತ ಕುಳಿತಿರುತ್ತಾರೆ, ನಾನೇ ನಿಮ್ಮನ್ನು ಉಪಚರಿಸುವೆನು."

ಇದು ವರೆಗೆ ಎರಿಗೂ ಇಷ್ಟು ಆದರದಿಂದ ಉಪಚರಿಸಿ ಕಾಣದ ಕಳಾಕಾಂತೆಯು ವರ್ತಕನಿಗೆ ಈಗ ಮಾಡುತ್ತಲಿದ್ದ ಉಪಚಾರವನ್ನು ಕಂಡು ಕದರ್ಥಕನು ಗಡಗಡನೆ ನಡುಗಿ ಊಟಮಾಡುತ್ತಲಿದ್ದವನನ್ನು ನೋಡಿ ಸ್ವಲ್ಪ ನಕ್ಕು, ಕೂಡಲೆ ಎದ್ದು ವರ್ತಕನನ್ನು ನೋಡಿ ನೀವು ಈ ರಾತ್ರಿ ಇಲ್ಲಿ ನಿಂತುದು ಒಳ್ಳೆಯದಾಯಿತು. ನನಗೆ ನಿದ್ದೆ ಬರುವುದರಿಂದ ಮಲಗಲಿಕ್ಕೆ ಹೋಗುವೆನು, ಕ್ಷಮಿಸಬೇಕು ಎಂದು ಹೇಳಿ ಮನೆಯ ಹಿಂದುಗಡೆಯ ಕೊಟ್ಟಡಿಯಲ್ಲಿ ಹಾಕಿದ್ದ ಮಂಚದ ಮೇಲೆ ಮಲಗಿದನು. ಆ ಸೆಟ್ಟಿಯು ಮನೆಯಲ್ಲಿರುವ ವರೆಗೆ, ನಾನು ಒಳಗೆ ಹೋಗುವುದು ತರವಲ್ಲವೆಂದು ತಿಳಿದು, ಹೀಗೆಯೇ

ಹಂತದ ಕೆಳಗೆ ರಾತ್ರಿಯೆಲ್ಲಾ ಮಲಗಿದ್ದು ಒಂದು ಹೊತ್ತಿನಲ್ಲಿ ಎದ್ದು ಇನ್ನೆಲ್ಲಿಗಾದರೂ ಹೋಗೋಣವೆಂದು ನಿಶ್ಚಯಿಸಿಕೊಂಡೆನು. ಬಲು ಹೊತ್ತು ನೀರಿನಲ್ಲಿ ಬದ್ದಾಡಿದ್ದುದರಿಂದಲೂ ಹೊಟ್ಟೆಗೇನೂ ಇಲ್ಲದಿದ್ದುದರಿಂದಲೂ ನನಗೆ ಬೇಗ ನಿದ್ದೆ ಬರಲಿಲ್ಲ. ಸ್ವಲ್ಪ ಹೊತ್ತು ಹಾಗೆಯೇ ಇರಲು ಕಣ್ಣು ಮುಚ್ಚಿ ಹೋಯಿತು. ಈ ರೀತಿ ಎಷ್ಟು ಹೊತ್ತು ನಿದ್ದೆ ಮಾಡಿದೆನೋ ಕಾಣೆ.

ಒಂದು ಹೊತ್ತಿನಲ್ಲಿ ಪಿಸ್ತೂಲನ್ನು ಹಾರಿಸಿದ ಸದ್ದು ಕೇಳಿಸಿತು; 'ಅಲೋ ಕಳಿಚಿಕೊಂಡರು. ಓಹೋ! ಇಂದಿಗೆ ನನ್ನ ಪರಿಣಾಮವು ಮುಗಿಯಿತು; ನಾನಿಲ್ಲಿರುವುದನ್ನು ಸರ್ಕಾರದವರು ಹೇಗೋ ಕಂಡು ನನ್ನನ್ನು ಗುಂಡಿನಿಂದ ಸುಟ್ಟುರಬಹುದು ಎಂದು ಬೆಬ್ಬರ ಬಿದ್ದೆದ್ದು ಮೈಯ್ಯಿಗೆ ಯಾವ ಕಡೆ ಪೆಟ್ಟುತಾಗಿದೆ ನೋಡೋಣವೆಂದು ನೋಡಿದೆನು. ಎಲ್ಲಿಯೂ ಪೆಟ್ಟು ಬಿದ್ದಂತೆ ತೋರದಿದ್ದುದರಿಂದ, ಅಯ್ಯೋ! ಇದು ಬರಿಯ ಬೇಳಂಬವೆಂದು ನಿಶ್ಚಯಿಸಿ, ಇನ್ನೆಲ್ಲಾದರೂ ಹೋಗೋಣವೆಂದು ಯೋಚಿಸಿ ಬಟ್ಟೆಗಳನ್ನು ಡುತ್ತಲಿದ್ದಾಗ ಅಟ್ಟದ ಮೇಲಿನಿಂದ ನನ್ನ ತಲೆಯು ಮೇಲೆಯೂ ಬಟ್ಟೆಯು ಮೇಲೆಯೂ ಅವ್ವದೋ ತೊಟ್ಟು ತೊಟ್ಟಾಗಿ ಬೀಳಲು ಪ್ರಾರಂಭವಾಯಿತು. ಆ ದಿನ ಮಳೆಯು ವಿಪರೀತವಾಗಿ ಸುರಿದಿದ್ದುದರಿಂದ ಎಲ್ಲಿಯೋ ಮಹಡಿಯ ಮೇಲೆ ನಿಂತಿದ್ದ ನೀರು ಕೆಳಗೆ ತೊಟ್ಟಿಕ್ಕುವುದೆಂದು ಭಾವಿಸಿಕೊಂಡೆನು. ಅಷ್ಟರಲ್ಲಿಯೇ ಅಲೋ ಮಹಡಿಯಿಂದ ಕೆಳಗೆ ಇಳಿಯುವ ಸದ್ದಾಯಿತು. ಈ ಮೇಳೆಯಲ್ಲಿ ಹೀಗೆ ಕೆಳಗಿಳಿದು ಒರುವನ ರಾರಿರಬಹುದು ನೋಡೋಣವೆಂದು ಕದದ ಕಂಡಿಯಲ್ಲಿ ಹಾಗೆಯೇ ಇಣಿಕಿ ನೋಡಲು, ಕದರ್ಥಕನು ಒಂದು ಕಯ್ಯಲ್ಲಿ ದೀಪವನ್ನೂ ಮತ್ತೊಂದು ಕಯ್ಯಲ್ಲಿ ಹಣದ ಚೀಲವನ್ನೂ ಹಿಡಿದುಕೊಂಡು ಕೆಳಗಿಳಿದು ಅಲ್ಲಿದ್ದ ಮೇಜಿನ ಮೇಲೆ ಅವೆರಡನ್ನೂ ಇಟ್ಟು ಅಂಗಿಯ ಜೇಬಿನಿಂದ ಉಂಗುರದ ಪೆಟ್ಟಿಗೆಯನ್ನು ತೆಗೆದು ಅದರಲ್ಲಿ ಉಂಗುರ ವಿರುವುದೋ ಇಲ್ಲವೋ ಎಂದು ನೋಡಿ ಪುನಃ ಜೇಬಿನಲ್ಲಿಟ್ಟುಕೊಂಡು, ಹಣವನ್ನೆಲ್ಲಾ ನಡುಕಟ್ಟಿನ ಚೀಲದಲ್ಲಿ ಭದ್ರಪಡಿಸಿಕೊಂಡು ಆ ಚೀಲವನ್ನು ಅಲ್ಲಿಯೇ ಬಿಸುಟು, ಬೀದಿಯ ಬಾಗಿಲನ್ನು ತೆರೆದುಕೊಂಡು ಹೊರಗೆ ಹೊರಟು ಹೋದನು. ಅವನ ಬಟ್ಟೆಯೂ ಮುಖವೂ ರಕ್ತದಿಂದ ತೋದಿಹೋಗಿದ್ದುವು.

ಅದನ್ನು ನೋಡುತ್ತಲೇ ಕಳಾಕಾಂತೆಯು ಗಂಡನನ್ನು ಹೀಯಾಳಿಸುತ್ತಿದ್ದುದು

ಜ್ಞಾಪಕಕ್ಕೆ ಬಂದು, ಅಯ್ಯೋ! ಈ ಚಂಡಾಳನು ಆ ವರ್ತಕನನ್ನು ಕೊಂದು ಉಂಗುರ ವನ್ನು ಅಪಹರಿಸಿಕೊಂಡು ಹೋದನು; ನಾನು ಎಚ್ಚರವಾಗಿದ್ದಿದ್ದರೆ ಇದು ಎಂದೂ ನಡೆಯುತ್ತಿರಲಿಲ್ಲ ಎಂದು ಚಿಂತಿಸುತ್ತಿದ್ದೆನು. ಆಗ ಆತೋ ಮಹಡಿಯ ಮೇಲೆ ಮೆಲ್ಲಗೆ ನರಳುತ್ತಿರುವಂತೆ ಕೇಳಿಸಿತು. ಇದರಿಂದ ಆ ವರ್ತಕನಿಗೆ ಬಹುಶಃ ಇನ್ನೂ ಪ್ರಾಣ ಹೋಗಿರಲಾರದು, ಈಗ ಏನಾದರೂ ಸ್ವಲ್ಪ ಒತ್ತಾಸೆಯನ್ನು ಮಾಡೋಣವೆಂದುಕೊಂಡು ಬಲಾತ್ಕಾರದಿಂದ ಆ ಹಿತ್ತಿಲ ಬಾಗಿಲನ್ನು ಮೀಟಿ ಒಳಹೊಕ್ಕು ದೀಪವನ್ನು ತೆಗೆದುಕೊಂಡು ಮಹಡಿಯ ಮೇಲಕ್ಕೆ ಹೋಗಲು, ಕಳಾಕಾಂತೆಯು ಮಧ್ಯದಲ್ಲಿ ನರಳುತ್ತ ಬಿದ್ದಿದ್ದಳು. ಅವಳ ಎದೆಯಲ್ಲಿ ಬಂದು ಕಠಾರಿಯು ನಾಟಿದ್ದಿತು. ನಾನು ಅದನ್ನು ಈಚೆಗೆ ತೆಗೆದೊಡನೆಯೇ ಅವಳಿಗೆ ಪ್ರಾಣವು ಹೋಯಿತು. ವರ್ತಕನೇನಾಗಿರುವನೋ ನೋಡೋಣವೆಂದು ಮೇಲೆ ಹತ್ತಿ ಕೊಟ್ಟಡಿಗೆ ಹೋಗಲು ಆಲ್ಲಿ ಅವನ ಹೆಣವು ಬಿದ್ದಿದ್ದಿತು. ಈ ಎರಡು ಘೋರ ಕೃತ್ಯಗಳನ್ನು ಕಂಡು ನನಗೆ ಮೈಯ್ ನಡುಗಿ ಆವುದೂ ತೋರದೆ ಅಯ್ಯೋ! ಎಂದು ಗಟ್ಟಿಯಾಗಿ ಕೂಗಿಕೊಂಡೆನು.

ಆಗ ಸಿಪಾಯಿಗಳು ನನ್ನನ್ನು ಹುಡುಕುತ್ತ ಸಮೀಪದಲ್ಲಿಯೇ ಇದ್ದುದರಿಂದ ಅವರು ನನ್ನ ಸದ್ದನ್ನು ಕೇಳಿ ಇಗೋ ಆಪನು ಈ ಮನೆಯಲ್ಲಿರುವಂತೆ ತೋರುತ್ತಲಿದೆ ಎಂದುಕೊಂಡು ನಿಮಿಷಮಾತ್ರದಲ್ಲಿಯೇ ಮನೆಯನ್ನು ಸುತ್ತಿಕೊಳ್ಳಲು, ಅವರಲ್ಲಿ ಇಬ್ಬರು ಬೆಳಕನ್ನು ಹಿಡಿದುಕೊಂಡು ನಾನಿದ್ದೆಡೆಗೆ ಬಂದು ನನ್ನ ತಲೆಯನ್ನೂ ಬಟ್ಟೆಗಳನ್ನೂ ಬಿದ್ದಿದ್ದ ಎರಡು ಹೆಣಗಳನ್ನೂ ನೋಡಿ, ಇದೇನು ಎಂದು ಕೇಳಿದರು. ಅದು ವರೆಗೆ ಮೇಲಿನಿಂದ ಸುರಿದುದು ಮಳೆಯಲ್ಲ; ಆ ಚಂಡಾಳನು ಕೊಂದ ಶರೀರದಿಂದ ಸುರಿದ ರಕ್ತದ ಮಳೆಯೆಂದು ನನಗೆ ತೋರಿಯೇ ಇರಲಿಲ್ಲ. 'ಸ್ವಾಮೀ! ಈ ಕೊಲೆಗಳನ್ನು ನಾನು ಮಾಡಿದವನಲ್ಲ; ಈ ಮನೆಯ ಯಜಮಾನನಾಗಿದ್ದ ಕದರ್ಥಕನನ್ನೂ ನಿರ್ಮಲಾನಂದರೆಂಬ ಸನ್ಯಾಸಿಗಳನ್ನೂ ವಿಚಾರಿಸಿದರೆ ಆರು ಮಾಡಿದವನೆಂಬುದು ಗೊತ್ತಾಗುವುದು' ಎಂದು ಎಷ್ಟು ಹೇಳಿದರೂ ಕೇಳದೆ ಅವರು ನನ್ನ ಎರಡು ಕೈಗಳನ್ನೂ ಕಟ್ಟಿ ವಿಚಾರಣೆಗಾಗಿ ಬಂಧನದಲ್ಲಿಟ್ಟರು.

ಇದಾದ ಮೂರು ತಿಂಗಳಮೇಲೆ ವಿಚಾರಣೆಯು ಆರಂಭವಾಯಿತು. ಈ ಮಧ್ಯೆ ಸರ್ಕಾರದವರು ನಾನು ಹೇಳಿದುದನ್ನು ಪತ್ರಿಕೆಗಳಲ್ಲಿ ಪ್ರಕಟಿಸಿದ್ದರು. 'ಕದರ್ಥಕನು

ಬಹುಶಃ ಸಿಕ್ಕಲಾರ; ಒ ೇಳೆ ಸಿಕ್ಕಿದರೂ ನಿಜವನ್ನು ಹೇಳಲಾರ; ನಿರ್ಮಲಾ
ನಂದನು ಸಿಕ್ಕಿದರೆ ನ ಎದುಕುತ್ತೇನೆ; ಇಲ್ಲವಾದರೆ ಆಗಿನ ಸನ್ನಿವೇಶದಿಂದ ಆ
ಕೊಲೆಗಳನ್ನು ನಾ ಡಿದೆನೆಂದು ನಿಶ್ಚಯಿಸಿ ನನ್ನನ್ನು ಹೇಗಿದ್ದರೂ ಗಲ್ಲಿಗೆ ಏರಿಸಿ
ಬಿಡುವರು.' ಎ ಂಡು ಪ್ರತಿದಿನವೂ ದೇವರನ್ನು ಪ್ರಾರ್ಥಿಸುತ್ತಲಿದ್ದೆನು. ಹೀಗೆ
ಯೇ ಎಂಬತ್ತೈ ಗಳು ಕಳೆದು ಹೋದುವು. ಆನಂದನ ವರ್ತಮಾನವೇ ಇಲ್ಲ;
ವಿಚಾರಣೆಯು ಪೂ ಸಮಾಪಿಸಿತು, ಆಗಲೂ ಆನಂದನ ಸುದ್ದಿಯೇ ಇಲ್ಲ. ತಪ್ಪು
ಮಾಡಿದವನ ಹೋಗಿ ನಿರಪರಾಧಿಯಾದ ನಾನು ಸಿಕ್ಕಿ ಅನ್ಯಾಯವಾಗಿ ಪ್ರಾಣ
ಬಿಡಬೇಕಾ ಣ್ಣ ತಿಂದವನು ನಾಣುಚಿಕೊಂಡ; ಸಿಪ್ಪೆ ತಿಂದವನು ಸಿಕ್ಕಿ ಹಾಕಿ
ಕೊಂಡ' ಾದೆ ನನ್ನ ವಿಷಯದಲ್ಲಿ ಈಗ ಪ್ರಮಾಣಕ್ಕೆ ಬಂದಿತು ಎಂದು ದೇವರಲ್ಲಿ
ನಿತ್ಯವೂ ಡುತ್ತಿರಲು, ಆ ವೇಳೆಗೆ ಸರಿಯಾಗಿ ಆನಂದರು ನಾನಿದ್ದ ಕಾರಾಗೃ
ಹಕ್ಕೆ ಬಂ ೇಯೋ ನನ್ನ ಆಗಮನವನ್ನು ನಿರೀಕ್ಷಿಸುತ್ತಲಿದ್ದವನ. ಎಂದು ಕೇಳಿ
ದರು. ದು ನಾನು ಹೇಳಲು, ಅವರು 'ನಿನ್ನ ನಿಷ್ಕಾಮವನ್ನು ವರ್ತಮಾನ
ಪತ್ರಿಕೆಯ ಇಲ್ಲಿಗೆ ಬಂದೆನು. ನಡೆದ ಸಂಗತಿಯನ್ನು ನಿಜವಾಗಿ ಹೇಳಿಬಿಟ್ಟರೆ
ನಾನು ನಿ ೂಲಮಾಡಿ ಕೊಡುವೆನು' ಎಂದರು.

ು ಕಂಡುದನ್ನೂ ಕೇಳಿದುದನ್ನೂ ಸ್ವಲ್ಪವೂ ಲೋಪವಿಲ್ಲದಂತೆ ಹೇಳಿ
ಬಿಟ್ಟೆನ ದುಂಗುರದ ಸಂಗತಿ ಬಂದಾಗ ನನ್ನ ಮಾತನ್ನು ನಂಬುವರೋ ಇಲ್ಲವೋ
ಎಂದ ನುಮಾನವಾಗಿದ್ದಿತು. ನಾನು ಹೇಳಿದುದನ್ನೆಲ್ಲಾ ಅವರು ನಿಜವೆಂದು
ಒಪ್ಪಿ ು. ಬಳಿಕ ನಾನು ಸಂಪಗೆಯ ವನದ ಮನೆಯಲ್ಲಿ ಮಾಡಿದ ಪಾಪ
ಕ್ಕೆ ಆ ಮಹಾತ್ಮರಿಗೆ ತಿಳಿಸಿ, ಅವರ ಕ್ಷಮೆಯನ್ನು ಕೇಳಿಕೊಂಡರೆ ಕ್ಷೇಮವಾದೀ
ತೆ ದು, ಅದನ್ನೂ ತಿಳಿಸಲು ಅವರಿಗೆ ನನ್ನಲ್ಲಿ ಪೂರ್ಣವಾಗಿ ನಂಬುಗೆಯು ಹುಟ್ಟ
ುವಿಗಲು ಪಡಬೇಡ, ಧೈರ್ಯವಾಗಿರು ಎಂದು ಭರವಸೆ ಕೊಟ್ಟು ಹೊರಟು
ರು.

ನನ್ನ ಅದೃಷ್ಟಕ್ಕೆ ಸರಿಯಾಗಿ ವಿಚಾರಣೆಗೆ ಮೊದಲೇ ಕಡಥಕನು ಸಿಕ್ಕಿ. ತಾನು
ಸದ ಆಸೆಯಿಂದ ಪ್ರೇರಿತನಾಗಿ ಆ ಕೃತ್ಯಗಳನ್ನು ಮಾಡಿದುದು ಉಚಿತವೆಂದು ಒಪ್ಪಿ

ಕೊಂಡನು. ನ್ಯಾಯಾಧಿಪತಿಯು ಅವನಿಗೆ ಯಾವಜ್ಜೀವವೂ ಕಾರಾಗೃಹದಲ್ಲಿರು ವಂತೆ ದಂಡವನ್ನು ವಿಧಿಸಿ, ನನ್ನನ್ನು ಬಿಟ್ಟು ಬಿಡುವಂತೆ ಆಜ್ಞೆಯನ್ನು ಮಾಡಿದನು.

ಇದೆಲ್ಲಾ ಆದ ಮೇಲೆ ನೀನು ನನ್ನ ಬಳಿಗೆ ಬಂದೆಯೋ ?

ಮಹಾಸ್ವಾಮೀ! ನನ್ನ ಅವಸ್ಥೆಯನ್ನೂ ನಾನು ಮಾಡುತ್ತಲಿದ್ದ ವ್ಯಾಪಾರದ ಅಪಾಯವನ್ನೂ ನೋಡಿ, ಅನಂದರು ಮನಮರುಗಿ 'ಅಪ್ಪಾ! ಇದು ನಿನಗೆ ತರವಲ್ಲ; ನನ್ನ ಶಿಷ್ಯನಾದ ಸಂಪನ್ನನೊಬ್ಬನು ತನಗೊಬ್ಬ ನಂಬಿಕೆಯಾದ ಸೇವಕನು ಬೇಕು ಎಂದು ಹೇಳುತ್ತಲಿದ್ದಾನೆ. ನೀನು ಅವನಲ್ಲಿ ಸೇರಿದರೆ ಅನುಕೂಲವಾದೀತು' ಎಂದರು. ಮಹಾಸ್ವಾಮೀ! ಅಪ್ಪಣೆ ಎಂದು ಒಪ್ಪಿಕೊಳ್ಳಲು, ಅವರು 'ಅವಾಗಲೂ ಸುಳ್ಳ ಹೇಳು ವುದಿಲ್ಲವೆಂದೂ, ಆ ದೊಡ್ಡವನ ಮನಸ್ಸಿಗೆ ಸ್ವಲ್ಪವೂ ಅಸಮಾಧಾನವಾಗದಂತೆ ಕೆಲಸ ಮಾಡಿಕೊಂಡಿರುವೆನೆಂದೂ, ನೀನು ಪ್ರಮಾಣಮಾಡಿಕೊಡು; ಹಾಗೆ ಮಾಡಿದರೆ ನಾನು ಅವರಿಗೆ ಒಂದು ಕಾಗದವನ್ನು ಬರೆದು ಕೊಡುವೆನು' ಎಂದರು.

ಆ ಮೇಲೆ ನೀನು ನನ್ನ ಒಳಿಗೆ ಬಂದೆಯೋ ? "ಅಹುದು"

ಈಗ ನಿನ್ನ ನಾದಿನಿಯೂ ಭದ್ರದತ್ತನೂ ಎಲ್ಲಿದ್ದಾರೆ ?

ಸ್ವಾಮೀ! ಅದೊಂದು ದೊಡ್ಡ ಅನ್ಯಾಯ. ನಾನು ಊರಿನಲ್ಲಿಲ್ಲದಿದ್ದಾಗ ನನ್ನ ನಾದಿನಿಯು ತನಗೆ ಬೇಕಾದಷ್ಟು ಹಣವನ್ನು ಕೊಡಲಿಲ್ಲವೆಂದು ಭದ್ರದತ್ತನು ಅವಳ ಕೈ ಕಾಲುಗಳನ್ನು ಕಟ್ಟಿಹಾಕಿ ಮೈಮೇಲಿದ್ದ ಒಟ್ಟಿಗೆ ಎಣ್ಣೆಯನ್ನು ಸುರಿದು ಬೆಂಕಿಯನ್ನು ಹೊತ್ತಿಸಿ ಮನೆಗೆ ಬೀಗ ಹಾಕಿಕೊಂಡು ಓಡಿ ಹೋದನು.

ಅನ್ಯಾಯ, ಅನ್ಯಾಯ! ಇಗ ಅವನು ಎಲ್ಲಿದ್ದಾನೆ;

ಆ ದುರಾತ್ಮನ ಮುಖವನ್ನು ನೋಡುವುದಕ್ಕೆ ಇಷ್ಟವಿಲ್ಲದೆ ನಾನು ಈಗವನೆಲ್ಲಿ ದ್ದಾನೆಂಬುದನ್ನೇ ವಿಚಾರಿಸಲಿಲ್ಲ. ಮಹಾಸ್ವಾಮಿ, ಇದೇ ನನ್ನ ಕಥೆಯು. ನಾನು ಈ ಸ್ಥಳಕ್ಕೆ ಬಾರದಿದ್ದುದಕ್ಕೆ ಕಾರಣವು ಈಗ ತಮಗೆ ಗೊತ್ತಾಯಿತಷ್ಟೆ?

ಅದು ಸರಿ, ನೀನು ಒಳಗೆ ನಡೆ, ನಾನೂ ಬರುತ್ತೇನೆ ಎಂದು ಹೇಳಿ ಭದ್ರಕ ನನ್ನು ಕಳುಹಿ, ಮಲಯಸಿಂಹನು ಸ್ವಲ್ಪ ಹೊತ್ತು ಅಲ್ಲಿಯೇ ಇದ್ದು ಆ ತೋಪನ್ನೆಲ್ಲಾ ಚೆನ್ನಾಗಿ ನೋಡಿಕೊಂಡು ಭದ್ರಕನೊಂದಿಗೆ ತನ್ನ ಮನೆಗೆ ಹೋದನು.

ಮನೆಗೆ ಹೋಗುತ್ತಲೆ ಮಲಯಸಿಂಹನು ವಾಮನಭಟ್ಟನನ್ನು ಕರೆದು ಈಗ

ಹನ್ನೊಂದು ಗಂಟೆಯು ಸಮಯ, ಕೋಮಲೆಯು ಬರುವ ಹೊತ್ತಾಯಿತು ; ಅಮರದೇಶದ ದಾಸಿಗಳು ಸಿದ್ಧರಾಗಿದ್ದಾರೆಯೋ ಎಂದನು.

ಅದಕ್ಕವನು ಕೋಮಲೆಯಮ್ಮನವರಿಗಾಗಿ ಸಿದ್ಧವಾಗಿರುವ ಕೋಣೆಗಳನ್ನು ತೋರಿಸಿ, ಬಲಗೈಯ ಮೂರು ಬೆರಳುಗಳನ್ನು ನೀಡಿ ತನ್ನ ತಲೆಯ ಮೇಲಿಟ್ಟು ಕಣ್ಣುಗಳನ್ನು ಮುಚ್ಚಿಕೊಂಡು ನಿದ್ದೆಮಾಡುವಸಂತೆ ತೋರಿಸಿದನು. ಅವನ ಸಂಜ್ಞೆಗಳನ್ನು ಮಲಯಸಿಂಹನು ಚೆನ್ನಾಗಿ ತಿಳಿದಿದ್ದುದರಿಂದ ಆ ಅಭಿಪ್ರಾಯವನ್ನು ಗ್ರಹಿಸಿ ಅಮರದೇಶದ ಮೂವರು ದಾಸಿಗಳು ಕೋಮಲೆಯು ಮಲಗುವ ಮನೆಯಲ್ಲಿ ಸಿದ್ಧರಾಗಿರುವರೆಂದಲ್ಲನೇ ನೀನು ಹೇಳಿದುದು ಎನ್ನಲು ವಾಮನಭಟ್ಟನು ಅಹುದೆಂದು ತಲೆಯನ್ನು ಅಲುಗಿಸಿದನು.

ಅಮರದೇಶದ ದಾಸಿಯರು ಯವನದೇಶದ ದಾಸಿಯರ ಸಂಗಡ ಅವಾಗಲೂ ಸೇರದಂತೆಯೂ ಮಾತು ಕಥೆಗಳನ್ನಾಡದಂತೆಯೂ ಜೋಪಾನವಾಗಿ ನೋಡಿಕೋ ಎಂದು ಮಲಯಸಿಂಹನು ಹೇಳಿ ಮುಗಿಸುವುದರಲ್ಲಿಯೇ, ಅವರಣದ ಹೆಬ್ಬಾಗಿಲು ತೆರೆಯಲ್ಪಟ್ಟು ಬಂಡಿಯೊಂದು ಝಗ್ರೆಂದು ಬಂದು ಮನೆಯ ಬಾಗಿಲಲ್ಲಿ ನಿಂತಿತು. ಕೂಡಲೇ ಮಲಯಸಿಂಹನು ಬಾಗಿಲಿಗೆ ಬಂದು ನಿಂತು ಬಂಡಿಯಲ್ಲಿದ್ದ ಯುವತಿಯು ಯೋಗಕ್ಷೇಮವನ್ನು ವಿಚಾರಿಸಿ, ಅವಳನ್ನು ಇಳಿಸಿಕೊಂಡು ಅವಳಿಗಾಗಿ ಅಣಿಯಾಗಿದ ಕೋಣೆಗೆ ಕರೆದುಕೊಂಡು ಹೋಗಿ ಬಿಟ್ಟು, ಅವಳಿಗೆ ಊಟ ಉಪಚಾರಗಳಾಗುವ ವರೆಗೂ ಅಲ್ಲಿಯೇ ಇದ್ದು, ಅವಳು ಮಲಗಿದ ಮೇಲೆ ತಾನೂ ತನ್ನ ಕೊಟ್ಟಡಿಗೆ ಹೋಗಿ ಮಲಗಿಕೊಂಡನು.

ಮೂವತ್ತೆರಡನೆಯ ಅಧ್ಯಾಯ

ಹುಂಡಿಯ ಬೆರಗು

ಮಾರನೆಯ ದಿನ ಮಧ್ಯಾಹ್ನ ಸುಮಾರು ಎರಡು ಗಂಟೆಯ ವೇಳೆಯಲ್ಲಿ ಶ್ಲಾಘ್ಯವಾದ ಎರಡು ಅರಬ್ಬಿಯ ಕುದುರೆಗಳನ್ನು ಹೂಡಿದ್ದ ಒಂದು ಬಂಡಿಯು ಮಲಯಸಿಂಹನ ಮನೆಯ ಮುಂದೆ ಬಂದು ನಿಂತಿತು. ಅದರಲ್ಲಿ ಸರಿಗೆಯ ಪಂಚೆಯನ್ನುಟ್ಟು

ಕೆಂಕಾವು ಅಂಗಿಯನ್ನು ತೊಟ್ಟು, ಪಟ್ಟಿಯ ರುಮಾಲನ್ನಿಟ್ಟು, ಸರಿಗೆಯ ಒಲ್ಲೆಯನ್ನು ಹೊದೆದು ಆ ದೇಶದ ರಾಜನಿಂದ ಬಹುಮಾನವಾಗಿ ಪಡೆದಿದ್ದ ಕಂಠೀಸರವನ್ನೂ ಬಿರುದ ಬಿಲ್ಲೆಗಳನ್ನೂ ಎಲ್ಲರಿಗೂ ಕಾಣುವಂತೆ ಅಂಗಿಯ ಮೇಲೆ ಅಳವಡಿಸಿಕೊಂಡು ಒಬ್ಬ ದೊಡ್ಡ ಮನುಷ್ಯನು ಕುಳಿತಿದ್ದನು.

ಬಂಡಿಯು ನಿಲ್ಲುತ್ತಲೆ ಅದರ ಮೇಲಿದ್ದ ಆಳು ತಟ್ಟನೆ ಕೆಳಗಿಳಿದು ಬಂಡಿಯ ಬಾಗಿಲನ್ನು ತೆರೆದು ನಿಂತನು. ಅವನನ್ನು ಕಂಡು ಯಜಮಾನನು ಎಲಾ, ಮಲಯ ಸಿಂಹರು ಮನೆಯಲ್ಲಿದ್ದರೆ ಈ ಚೀಟನ್ನು ಕೊಡು ಎನ್ನುತ್ತಲೆ, ಆಳು ಹೆಬ್ಬಾಗಿಲನ್ನು ದಾಟಿ ಒಳಗಿದ್ದ ಕಾವಲುಗಾರನಿಗೆ ಆ ಚೀಟನ್ನು ಕೊಡಲು, ಯಜಮಾನರು ಇಂದು ಆವನ್ನೂ ನೋಡಲಾರರು ಎಂದನು.

ಆಳು ಅತ್ತ ಹೋಗುತ್ತಲೆ, ಬಂಡಿಯಲ್ಲಿ ಕುಳಿತಿದ್ದವನು ಹಾಗೆಯೇ ಕಿಟಕಿಯ ಹೊರಗೆ ತಲೆಯನ್ನು ಚಾಚಿ ಅರಮನೆಯನ್ನು ಹಳಿಯುವ ಮಲಯಸಿಂಹನ ಮನೆಯು ಅಂದವನ್ನೂ, ಅಲ್ಲಿಯ ಉದ್ಯಾನದ ಸೊಂಪನ್ನೂ, ಅದರ ಹೂಗಿಡುಗಳ ಸೊಗ ಸನ್ನೂ, ಅಲ್ಲಿ ಓಡಾಡುತ್ತಲಿರುವ ಆಳುಗಳ ಉಡುಪುಗಳ ಆಡಂಬರವನ್ನೂ ನೋಡಿ ಬೆರಗಾದನು ಕೆಲವರು ಇತರರ ಸಂಪತ್ತನ್ನು ನೋಡಿ, ನಮಗಿಲ್ಲದಿದ್ದರೂ ಚಿಂತೆ ಯಿಲ್ಲ, ದೇವರು ಅವರನ್ನಾದರೂ ಈ ರೀತಿ ಒಳ್ಳೆಯ ಸ್ಥಿತಿಯಲ್ಲಿ ಇಟ್ಟಿರುವನಲ್ಲ, ಅಷ್ಟೇ ಸಾಕು ಎಂದು ಸಂತೋಷಪಡುವರು ; ಮತ್ತೆ ಕೆಲವರು ನಮಗಿಲ್ಲದ ಸಂಪತ್ತು ಅವರಿಗೆ ಇದೆಯಲ್ಲಾ ಎಂದು ಕರುಬುವರು ; ಇನ್ನು ಕೆಲವರು ನಮ್ಮ ಸಂಪತ್ತಿನಂತೆ ಅವರಿಗೂ ಇದೆಯಲ್ಲ ಎಂದು ಹೊಟ್ಟೆಯುರಿಯಿಂದ ಬೇಯುವರು. ಬಂಡಿಯಲ್ಲಿ ಕುಳಿತಿದ್ದ ದೊಡ್ಡಮನುಷ್ಯನು ಈ ಪಂಗಡಕ್ಕೆ ಸೇರಿದವನು. ಅವನ ಮುಖದಲ್ಲಿ ಕ್ರೌರ್ಯವೂ ಅಹಂಕಾರವೂ ಕೆಡುಕು ಬುದ್ಧಿಯೂ ನೀಚತನವೂ ಕಾಣಿಸುತ್ತಲಿದ್ದುವು.

ಮಲಯಸಿಂಹನ ಊಳಿಗದವನು ಹೇಳಿದುದನ್ನು ಆಳು ಬಂದು ತಿಳಿಸಲು, ಸರಿ ಸರಿ, ನ್ಯಾಯವಿಧಾಯಕಸಭೆಗೆ ಹೋಗುತ್ತ ಹಾಗೆಯೇ ಇವರನ್ನು ನೋಡಿಕೊಂಡು ಹೋಗೋಣವೆಂದು ಈ ಹಾದಿಯಲ್ಲಿ ಬಂದಿದ್ದೆನೆಂದು ಮಲಯಸಿಂಹನಿಗೆ ತಿಳಿಸುವಂತೆ ಹೇಳಿ ಬಾ ಎಂದು ಅಜ್ಞಾಪಿಸಲು, ಅದನ್ನು ಆಳು ಕಾವಲುಗಾರನಿಗೆ ಹೇಳಿದನು.

ಇವನು ಒರುವ ಸಮಾಚಾರವನ್ನು ಮೊದಲೇ ಬಲ್ಲ ಮಲಯಸಿಂಹನು ಕಿಟ

ಕೆಯ ತೆರೆಯ ಮರೆಯಲ್ಲಿ ನಿಂತು ದೂರದರ್ಶಕ ಯಂತ್ರದಿಂದ ಬಂಡಿಯಲ್ಲಿದ್ದವನನ್ನು ನೋಡಿ ಇವನ ಮುಖವನ್ನು ನೋಡಿದರೆ ಇವನ ದುರ್ಮಾರ್ಗತನವು ಅರಿಗಾದರೂ ಚೆನ್ನಾಗಿ ತಿಳಿಯಬರುವುದು. ಇವನನ್ನು ಜನರು ಏಕೆ ತ್ಯಜಿಸುವುದಿಲ್ಲ! ಎಂದು ತನ್ನೊಳು ತಾನೇ ಆಡಿಕೊಂಡು, ಭದ್ರಕನನ್ನು ಕೂಗಿ ಎಲೋ ಭದ್ರಕ, ಈ ಮನೆಯ ಮುಂದೆ ಈಗ ನಿಂತಿದ್ದ ಬಂಡಿಗೆ ಹೂಡಿದ್ದ ಕುದುರೆಗಳನ್ನು ನೋಡಿದೆಯಾ ಎನ್ನಲು, ಬುದ್ಧೀ, ನೋಡಿದೆ ಎಂದನು.

ಅವು ಚೆನ್ನಾಗಿದ್ದುವೋ!

ಮಹಾಸ್ವಾಮೀ! ಅವು ಅತ್ಯುತ್ತಮವಾದ ಯವನಾಶ್ವಗಳು.

ಈ ಪಟ್ಟಣದಲ್ಲಿ ದೊರೆಯುತಕ್ಕ ಅತ್ಯುತ್ತಮವಾದ ಕುದುರೆಗಳನ್ನು ಕೊಂಡು ಕೊಳ್ಳೆಂದು ಅಪ್ಪಣೆ ಮಾಡಿದ್ದರೂ ನೀನು ಏಕೆ ಆ ಕುದುರೆಗಳನ್ನು ತೆಗೆಯುಲಿಲ್ಲ?

ಮಹಾಸ್ವಾಮೀ! ಕ್ಷಮಿಸಬೇಕು. ನಾನು ವಿಚಾರಿಸಿದಾಗ ಅವುಗಳನ್ನು ಮಾರುವುದಿಲ್ಲವೆಂದು ಹೇಳಿದರು.

ಹಣ ಕೊಟ್ಟರೆ ಲೋಕದಲ್ಲಿ ಸಿಕ್ಕದಿರುವ ಪದಾರ್ಥವೂ ಉಂಟೋ?

ಮಹಾಸ್ವಾಮೀ! ಈ ಜತೆಗೆ ಹದಿನಾರು ಸಾವಿರ ವರಹಗಳನ್ನು ಕೊಟ್ಟು ಶ್ರೀಮಂತ ದುರ್ಮತಿಗಳು ತೆಗೆದುಕೊಂಡರಂತೆ.

ಆದರೇನು? ತಮಗೆ ಲಾಭ ಬರುವುದಾದರೆ ಧನಾಗಾರಪತಿಗಳು ಅವುದನ್ನಾದರೂ ಮಾರಿಬಿಡುವರು. ಈ ದಿನ ಸಾಯಂಕಾಲ ಐದು ಗಂಟೆಗೆ ಸರಿಯಾಗಿ ಒಬ್ಬ ದೊಡ ಮನುಷ್ಯನನ್ನು ನೋಡುವುದಕ್ಕೆ ಹೋಗಬೇಕು, ಅಷ್ಟರೊಳಗೆ ಆ ಕುದುರೆಗಳನ್ನು ಕೊಂಡು ನನ್ನ ಬಂಡಿಗೆ ಹೂಡಿಸಿರಬೇಕು, ಕಂಡೆಯಾ; ಜೋಕೆ ಎಂದು ಹೇಳಿ ಅವನನ್ನು ಕಳುಹಿಸಿ, ವಾಮನಭಟ್ಟನನ್ನು ಕೂಗಿ ಎಲಾ! ನಮ್ಮ ಲಾಯದಲ್ಲಿರುವ ಕುದುರೆಗಳೆಲ್ಲವನ್ನೂ ಕೋಮಲೆಗೆ ಕಾಣುವಂತೆ ಕಿಟಕಿಯ ಬಳಿ ನಿಲ್ಲಿಸಿ, ಅವಳು ಒಪ್ಪುವ ಎರಡು ಕುದುರೆಗಳನ್ನು ಅವಳ ಬಂಡಿಗೆ ಪ್ರತ್ಯೇಕವಾಗಿರಿಸು; ಭೈರವನನ್ನು ಬರಹೇಳು ಎಂದನು. ಸ್ವಲ್ಪ ಹೊತ್ತಿನ ಮೇಲೆ ಭೈರವನು ಒಂದು ಇದಿರಿಗೆ ನಿಂತನು.

ಭೈರವ! ನೀನು ನಮ್ಮಲ್ಲಿ ಸೇರಿ ಒಂದು ವರ್ಷವಾಯಿತು, ಇಷ್ಟರೊಳಗಾಗಿ

ನಿನಗೂ ನನಗೂ ಸರಿ ಹೋಗುವುದೂ ಇಲ್ಲದುದೂ ಗೊತ್ತಾಗಿರಬೇಕು. ನಾನೇನೋ ನಿನ್ನ ಕೆಲಸವನ್ನು ಒಪ್ಪಿದೆ; ನನ್ನ ಒಳಿಯಿರುವುದು ನಿನಗೆ ಸರಿ ಹೋಗುವುದೋ ಇಲ್ಲವೋ ಹೇಳು. ಅದನ್ನು ನಿನ್ನ ಬಾಯಿಂದಲೇ ತಿಳಿಯಬೇಕಾಗಿದೆ.

ಮಹಾಸ್ವಾಮೀ! ನನಗೆ ತಮ್ಮಂಥಾವರು———.

ನಾನು ಹೇಳುವುದನ್ನೆಲ್ಲಾ ಪೂರ್ತಿಯಾಗಿ ಕೇಳು; ಆಮೇಲೆ ಹೇಳತಕ್ಕುದು ಏನಾದರೂ ಇದ್ದರೆ ಹೇಳು. ಯಾವ ಕೆಲಸವೂ ಇಲ್ಲದೆ ಸುಮ್ಮನೆ ಕಯ್ಯಾಳಾಗಿರುವುದಕ್ಕೇ ನಿನಗೆ ತಿಂಗಳು ಒಂದಕ್ಕೆ ನೂರ ಇಪ್ಪತ್ತೈದು ಪರಹಗಳ ಸಂಬಳ ಕೊಡುತ್ತಲಿದ್ದೇನೆ. ನೀನೇ ಆಳು, ಆದರೂ ನಿನ್ನ ಒಳಿ ಕೆಲಸಮಾಡಲು ಬೇರೆ ಆಳುಗಳಿದ್ದಾರೆ. ಇದಲ್ಲದೆ ಸಂಸಾರ ವೆಚ್ಚಕ್ಕಾಗಿ ಕೊಡುವ ಹಣದಲ್ಲಿ ಕೂಡ ನಿನಗೆ ವಿಗುತ್ತದೆ.

ಮಹಾಸ್ವಾಮೀ! ನಾನು ಆ ರೀತಿ ———.

ಸುಮ್ಮನೆ ಕೇಳು. ನೀನು ಹಾಗೆ ಮಾಡುವುದು ತಪ್ಪು ಎಂದು ನಾನು ಆಕ್ಷೇಪಿಸುವುದಿಲ್ಲ. ಇಷ್ಟರಲ್ಲಿಯೇ ತೃಪ್ತಿಪಡು; ಬೇರೆ ಸಂಪಾದನೆಯ ಯೋಚನೆ ಮಾಡಬೇಡ. ಇಷ್ಟು ಅನುಕೂಲವಾಗಿಯೂ ಲಾಭಕರವಾಗಿಯೂ ಇರುವ ಚಾಕರಿಯು ನಿನಗೆ ಎಂದಿಗೂ ಖಂಡಿತವಾಗಿ ಬೇರೊಂದು ಕಡೆ ದೊರೆಯುವಾರದು. ಆದರೂ ಜನರು ಹಣ ಕೊಡುತ್ತೇವೆಂದು ಆಸೆ ತೋರಿಸಿ ನನ್ನ ವರ್ತಮಾನವನ್ನೇ ಆಗಲಿ, ಮನೆಯ ವಿಚಾರವನ್ನೇ ಆಗಲಿ, ಕೇಳುವರು; ಈ ವಿಚಾರಗಳು ಈಷದಪಿ ಹೊರಗೆ ಬಂದುದೇ ಆದರೆ ಒಡನೆಯೇ ನಿನ್ನನ್ನು ಕೆಲಸದಿಂದ ನಿವೃತ್ತಿಮಾಡುವೆನು. ನನಗೆ ಬೇಕಾದಷ್ಟು ಹಣವಿರುವುದರಿಂದ ಎಲ್ಲಿ ಆವ ಸಮಾಚಾರ ನಡೆದರೂ ಕ್ಷಣದಲ್ಲಿ ಅದನ್ನು ತಿಳಿದುಕೊಳ್ಳುವ ಅನುಕೂಲವುಂಟು. ಇದಲ್ಲದೆ ನನ್ನ ಮನ ಮೆಚ್ಚುವಂತೆ ಊಳಿಗಮಾಡುವವರಿಗೆ ಸಂಬಳ ಕೊಡುವುದು ಮಾತ್ರವಲ್ಲದೆ ವರ್ಷಂಪ್ರತಿಯೂ ಬಹು ಮಾನವಾಗಿ ಇಷ್ಟು ಹಣವನ್ನು ಪ್ರತ್ಯೇಕ ತೆಗೆದಿಟ್ಟು ಅದನ್ನು ನನ್ನ ಕಾಲಾನಂತರ ಅವರು ಕಷ್ಟಪಡದಂತೆ ಜೀವನ ಮಾಡಿಕೊಳ್ಳುವ ಸಲುವಾಗಿ ಅವರಿಗೆ ಹಂಚಿ ಕೊಡುವಂತೆ ಏರ್ಪಾಡ ಮಾಡಿದ್ದೇನೆ. ಅಂತಹ ಬಹುಮಾನವು ನಿವೃತ್ತರಾದ ಸೇವಕರಿಗೆ ಸಿಕ್ಕದು; ತಿಳಿಯಿತೋ! ನಡೆ.

ಐದು ಗಂಟೆಯಾಗುವುದಕ್ಕೆ ಮೊದಲೇ ಮಲಯಸಿಂಹನ ಬಳಿಗೆ ಭದ್ರಕನು

ಬಂದು ಮಹಾಸ್ವಾಮೀ, ಬಂಡಿಯು ಕಟ್ಟಿ ಸಿದ್ಧವಾಗಿದೆ; ತಮ್ಮ ಸಂಗಡ ನಾನೂ ಬರ ಬೇಕೋ ಎಂದನು.

ನೀನು ಬರಬೇಕಾದುದಿಲ್ಲ; ವಾಮನಭಟ್ಟನು ಒಂಡಿಯನ್ನು ಹೊಡೆಯಲಿ, ಸಂಗಡ ಭೈರವನು ಬರಲಿ ಎಂದು ಹೇಳಿ ಮಲಯಸಿಂಹನು ಹೊರಗೆ ಬಂದು ಬಂಡಿಯು ಸಮೀಪದಲ್ಲಿ ನಿಂತು, ಹೂಡಿದ್ದ ಕುದುರೆಗಳನ್ನು ನೋಡಿ 'ಉತ್ಕೃಷ್ಟವಾದುವು, ಇವುಗಳನ್ನು ಕೊಂಡುಕೊಂಡುದು ಒಳ್ಳೆಯದಾಯಿತು' ಎಂದು ಭದ್ರಕನನ್ನು ನೋಡಿ ಹೇಳಲು, ಅವನು ಮಹಾಸ್ವಾಮೀ, ಅವರು ಈ ಕುದುರೆಗಳನ್ನು ಕೊಡರು, ನಾನು ಬಿಡೆನು; ಈ ರೀತಿ ಹೆಣಗಾಟದಲ್ಲಿ ಬೆಲೆಯು ಬಂದಕ್ಕೆರಡಾಯಿತು ಎಂದನು.

ಹೆಚ್ಚು ಕೊಟ್ಟುದರಿಂದ ಕುದುರೆಯು ಶ್ಲಾಘ್ಯತೆಗೆ ಏನಾದರೂ ಕೊರತೆಯೇ, ಎಂದು ಹೇಳಿ ಮಲಯಸಿಂಹನು ಬಂಡಿಯನ್ನು ಹತ್ತಲು ವಾಮನಭಟ್ಟನು ಮಹಾಸ್ವಾಮೀ, ಎಲ್ಲಿಗೆ ಹೊಡೆಯಲಿ ಎಂದನು.

ಸ್ವಲ್ಪ ತಾಳು, ಎಂದು ಭದ್ರಕನನ್ನು ಹತ್ತಿರ ಕರೆದು "ಈ ದೇಶದ ಸಮುದ್ರತೀರದಲ್ಲಿ ಅನೇಕಸರ್ವಮಾನ್ಯಗ್ರಾಮಗಳು ಇವೆಯೆಂದು ಕೇಳಿದ್ದೇನೆ; ಅವುಗಳಲ್ಲಿ ವಿಸ್ತಾರವಾಗಿಯೂ ಹಡಗುಗಳು ನಿಲ್ಲಲು ಅನುಕೂಲವಾಗಿರುವ ಕೊಲ್ಲಿಗಳುಳ್ಳದಾಗಿಯೂ ಇಲ್ಲಿಗೆ ಸಮೀಪವಾಗಿಯೂ ಇರುವ ಬಂದು ದೊಡ್ಡ ಗ್ರಾಮವನ್ನು ಕ್ರಯಕ್ಕೆ ಕೊಂಡು, ಅಲ್ಲಿಂದ ಇಲ್ಲಿಗೆ ಬಂದೊಂದು ಹರದಾರಿಗೆ ಬಂದೊಂದು ಜತೆಯು ಟಪ್ಪಾಲು ಕುದುರೆಗಳನ್ನು ಏರ್ಪಾಡ ಮಾಡಬೇಕು. ಇದಕ್ಕಾಗಿ ಒಂದು ವಾರ ಅವಧಿಕೊಟ್ಟರುವೆನು; ಅಷ್ಟರೊಳಗಾಗಿ ಎಲ್ಲವನ್ನೂ ಸಿದ್ಧಪಡಿಸು. ಹಣದ ವಿಷಯದಲ್ಲಿ ಸ್ವಲ್ಪವೂ ಯೋಚಿಸಬೇಡ; ಆದಷ್ಟು ವೆಚ್ಚವಾಗಲಿ" ಎಂದನು. ಮಹಾಸ್ವಾಮೀ, ಅಪ್ಪಣೆ ಎಂದು ಭದ್ರಕನು ಹೊರಟನು. ಮಲಯಸಿಂಹನು 'ವಾಮನಭಟ್ಟ, ದುರ್ಮತಿಯ ಮನೆಗೆ ಹೊಡೆ' ಎಂದನು.

ಮಲಯಸಿಂಹನ ಬಂಡಿಯು ದುರ್ಮತಿಯ ಮನೆಯ ಮುಂದೆ ನಿಂತಿತು. ಕಾವಲುಗಾರನು ಅದನ್ನು ತನ್ನ ಯಜಮಾನನಿಗೆ ತಿಳಿಸಲು, 'ಕೊಟ್ಟಡಿಗೆ ಕರೆದುಕೊಂಡು ಹೋಗು, ನಾನು ಕೂಡಲೆ ಬರುವೆನು' ಎಂದು ಅಪ್ಪಣೆ ಮಾಡಿದನು. ದುರ್ಮತಿಯು ಬರುವುದು ಸ್ವಲ್ಪ ಅವಕಾಶವಾಯಿತು; ಅಷ್ಟರಲ್ಲಿಯೇ ಮಲಯಸಿಂಹನು ಆ ಕೊಟ್ಟಡಿ

ಯಲ್ಲಿ ಕಟ್ಟಿದ್ದ ಪಟಗಳನ್ನೂ ಇತರ ಅಲಂಕಾರಗಳನ್ನೂ ನೋಡಿ ಇವನ ಬುದ್ಧಿಗೆ ತಕ್ಕಂತೆ ಈ ಕೊಟ್ಟಡಿಯು ರಚನೆಯೂ ಇದೆ ಎಂದುಕೊಂಡು, ಅಷ್ಟರಲ್ಲಿಯೇ ದುರ್ಮತಿಯು ಬರಲು ವಂದನೆ ಪ್ರತಿವಂದನೆಗಳು ನಡೆದು ಇಬ್ಬರೂ ಆಸನಗಳಲ್ಲಿ ಕುಳಿತರು.

ಮಲಯಸಿಂಹರು ತಾವೇಯೋ ಎಂದು ದುರ್ಮತಿಯು ಕೇಳಲು, ಮಲಯ ಸಿಂಹನು ಅಹುದೆಂದು ತಲೆಯನ್ನಲುಗಿಸಿ, ತಾವು ಮಹಾರಾಜರವರಿಂದ ಅನೇಕ ಬಹು ಮಾನಗಳನ್ನು ಪಡೆದು ವಿಶೇಷಪ್ರಖ್ಯಾತಿಯನ್ನು ಪಡೆದ ಶ್ರೀಮಂತ ಧನಾಗಾರಪತಿ ದುರ್ಮತಿಗಳಲ್ಲವೇ ಎಂದು ದುರ್ಮತಿಯು ತನಗೆ ಕೊಟ್ಟುಕಳುಹಿದ್ದ ಚೀಟಲ್ಲಿ ಬರೆದಿದ್ದುದನ್ನೆಲ್ಲಾ ಸ್ವಲ್ಪವೂ ಬಿಡದೆ ಹೇಳಿ ಮೂದಲಿಸಿದನು. ದುರ್ಮತಿಯು ಮಲಯ ಸಿಂಹನ ಉಪಾಯವನ್ನರಿತು ಅಸಮಾಧಾನದಿಂದ ಬೊಡನ್ನು ಕಚ್ಚಿಕೊಂಡನು.

ನಾನು ನಿಮ್ಮನ್ನು ರಾಜಾಮಲಯಸಿಂಹರೆಂದು ಕರೆಯುದೆ ಹೋದೆನು, ಕ್ಷಮಿಸ ಬೇಕು. ಇಂತಹ ಒಣ ಮರ್ಯಾದೆಗಳಲ್ಲಿ ನನಗೇನೂ ಮಮತೆಯಿಲ್ಲ. ನಾನು ಶ್ರೀಮನ್ಮಹಾರಾಜರಿಗೆ ಸಮಯದಲ್ಲಿ ಸ್ವಲ್ಪ ಉಪಕಾರ ಮಾಡಿದ್ದೆನು; ಅದಕ್ಕಾಗಿ ಅವರು ಅಪ್ರಾರ್ಥಿತವಾದ ಈ ಬಿರುದಗಳನ್ನು ನನಗೆ ಕೊಟ್ಟರು.

ತಮಗೆ ಆ ಮರ್ಯಾದಾಶಬ್ದಗಳಲ್ಲಿ ಮಮತೆಯಿಲ್ಲವೆಂಬುದು ತಾವು ಕೊಟ್ಟ ಚೀಟಿಂದಲೇ ವ್ಯಕ್ತವಾಗುತ್ತದೆ.

ಕೆಲವು ವೇಳೆ ಅದೂ ಬೇಕಾಗುತ್ತದೆ. ಒಂದು ವೇಳೆ ನಮ್ಮ ಸೇವಕರಲ್ಲಿ—.

ಓಹೋ! ಈಗ ತಮ್ಮ ಅಭಿಪ್ರಾಯವು ನನಗೆ ಗೊತ್ತಾಯಿತು; ತಮ್ಮ ಸೇವಕರಿಗೆ ತಾವು ಶ್ರೀಮಂತರು; ತಮ್ಮ ಬಳಿಗೆ ಸಾಲ ತೆಗೆಯಲು ಬರುವವರಿಗೆ ತಾವು ಧನಾಗಾರಪತಿಗಳು; ಶ್ರೀಮನ್ಮಹಾರಾಜರಿಗೆ ತಾವು ಬಿರುದಾಂಕಿತರು; ಇತರರಿಗೆ ತಾವು ಬರಿಯ ಹುರುಳಿಲ್ಲದ ದುರ್ಮತಿಗಳು; ಇದಲ್ಲವೇ ತಮ್ಮಭಿಪ್ರಾಯ ಎನ್ನುತ್ತಲೆ ದುರ್ಮತಿಯು ಪುನಃ ಒಸಡನ್ನು ಕಚ್ಚಿ ಇವನ ಸಂಗಡ ಮಾತನಾಡಿ ಜಯಿಸಲು ತನ್ನಿಂದ ಸಾಗದೆಂದು ತಿಳಿದು ಬೇರೆ ಮಾತನ್ನೆತ್ತಿದನು.

ರಾಜನೇ! ತಮಗೆ ಆವಶ್ಯಕವಾದ ಹಣ ಕೊಡುವಂತೆ ಧನಾಗಾರಪತಿ ನಂದ ಕುಮಾರರು ಹುಂಡಿಯನ್ನು ಕಳುಹಿಸಿದ್ದಾರೆ. ಅದರ ಅಭಿಪ್ರಾಯವು ನನಗೆ ಚೆನ್ನಾಗಿ ಗೊತ್ತಾಗಲಿಲ್ಲ.

ಶ್ರೀಮಂತರೇ, (ತಮ್ಮ ಸೇವಕರಂತೆ ನಾನೂ ತಮ್ಮನ್ನು ಶ್ರೀಮಂತರೆಂದು ಕರೆಯಲು ಅಪ್ಪಣೆಯಾಗಬೇಕು.) ಆ ಹುಂಡಿಯಲ್ಲಿ ತಮಗೆ ಗೊತ್ತಾಗದೆ ಇರುವ ಅಂಶವನ್ನು ದಯೆಮಾಡಿ ತಿಳಿಸಿದರೆ ನನ್ನಿಂದ ಸಾಧ್ಯವಾದ ಮಟ್ಟಿಗೂ ಸ್ಪಷ್ಟಪಡಿಸುವೆನು.

ಅದರಲ್ಲಿ ಅಮಿತವಾದ ಎನ್ನುವ ಪದಕ್ಕೆ ಅರ್ಥವಾಗಲಿಲ್ಲ.

ಅಮಿತವಾದ ಎಂದರೆ ಕೇಳಿದಷ್ಟು ಎಂದು ಅರ್ಥ ; ತಮ್ಮಲ್ಲಿ ಈ ಪದವೇ ರೂಢಿಯಲ್ಲಿಲ್ಲವೋ?

ರೂಢಿಯಲ್ಲಿದ್ದರೂ ಅದು ಅನುಮಾನಕ್ಕೆ ಕಾರಣ.

ಓಹೋ! ನಂದಕುಮಾರರಲ್ಲಿ ತಮಗೆ ಅನುಮಾನಕ್ಕೆ ಕಾರಣವೇ? ನನ್ನ ಆಸ್ತಿಯನ್ನೆಲ್ಲಾ ಅವರ ವಶಮಾಡಿ ಬಂದಿರುತ್ತೇನೆಯಾಗಿ ಅವರ ವಿಷಯದಲ್ಲಿ ತಮಗೆ ಅನುಮಾನಕ್ಕೆ ಕಾರಣವಿದ್ದರೆ ನಾನು ಮುಳುಗಿಯೇ ಹೋಗುತ್ತೇನೆ.

ಅವರಲ್ಲಿ ಅನುಮಾನವೇನೂ ಇಲ್ಲ. ಆದರೂ ಹಣದ ವಿಷಯದಲ್ಲಿ ಈ ರೀತಿ ಹುಂಡಿಯನ್ನು ಬರೆಯುವುದು ಅಪೂರ್ವ.

ಅವರು ನಿಮ್ಮನ್ನು ಸಾಧಾರಣಧನವಾಗಾರ ಪತಿಗಳೆಂದು ತಿಳಿದಿರಲಿಲ್ಲ ; ನೀವು ಹೇಳುವುದನ್ನು ನೋಡಿದರೆ ನಿನ್ನ ವಿಷಯದಲ್ಲಿ ಅವರಿಗಿದ್ದ ಅಭಿಪ್ರಾಯವು ತಪ್ಪೆಂದೂ ಈ ಹುಂಡಿಯು ತಮ್ಮ ಯೋಗ್ಯತೆಗೆ ಮೀರಿದುದೆಂತಲೂ ತೋರುತ್ತಲಿದೆ.

ಇದುವರೆಗೆ ನನ್ನ ಯೋಗ್ಯತೆಯು ಇಷ್ಟೇ ಎಂದು ಮಿತಿಮಾಡಿ ಹೇಳಿದವರಾರೂ ಇಲ್ಲ.

ಹಾಗೆ ಹೇಳುವ ಭಾರವನ್ನು ನನಗಾಗಿಯೇ ಎಲ್ಲರೂ ಬಿಟ್ಟಿದ್ದಂತೆ ತೋರುತ್ತದೆ.

ಅದು ಹೇಗೆ?

ತಾವು ದೊಡ್ಡ ಧನವಾಗಾರಪತಿಗಳೆಂತಲೂ, ರಾಜಾಧಿರಾಜರುಗಳಿಗೆಲ್ಲಾ ಸಾಲಗಳನ್ನು ಕೊಡುತ್ತಿದ್ದೀರೆಂತಲೂ ಕೇಳಿ ತಮಗೆ ಹುಂಡಿಯನ್ನು ಬರೆಯುವಂತೆ ನಂದಕುಮಾರರಿಗೆ ಹೇಳಿ ಬಂದಿದ್ದೆನು. ತಮಗೆ ಅನುಮಾನವಿದ್ದರೂ ಸರಿಯೆ, ತಮ್ಮ ಯೋಗ್ಯತೆಗೆ ಮೀರಿದ್ದರೂ ಸರಿಯೆ, ತಿಳಿಸೋಣವಾಗಲಿ; ನಾನು ಬೇರೆ ಕಡೆ ಹಣಕ್ಕೆ ಏರ್ಪಾಡ ಮಾಡಿಕೊಳ್ಳುವೆನು. ಸಂದರ್ಭ ಹೇಗೆ ಆಗುವುದೋ ಎಂದು ಇದರಂತೆಯೇ ಇನ್ನಿಬ್ಬರು ಧನವಾಗಾರಪತಿಗಳಿಗೂ ಎರಡು ಹುಂಡಿಗಳನ್ನು ತಂದಿದ್ದೇನೆ ಎಂದು ಮಲ್ಲಯ.

ಸಿಂಹನು ಅಂಗಿಯ ಜೇಬಿನಿಂದ ಎರಡು ಕಾಗದಗಳನ್ನು ತೆಗೆದು ದುರ್ಮತಿಗೆ ತೋರಿಸಿದನು. ದುರ್ಮತಿಯು ಅವುಗಳನ್ನು ಓದಿ, ಇವು ನಿಜವಾದ ಹುಂಡಿಗಳೋ ಅಲ್ಲವೋ ಎಂದು ಯೋಚಿಸಿ ಹುಂಡಿಗಳನ್ನು ಪರೀಕ್ಷಿಸಿ ನೋಡಿ ನಿಜವಾದುವೆಂದು ತಿಳಿದು ಆಶ್ಚರ್ಯಪಟ್ಟು ಇಷ್ಟು ಹಣವುಳ್ಳ ರಾಜನನ್ನು ಇತರರ ಬಳಿಗೆ ಕಳುಹಿಸಿದರೆ ನಮ್ಮ ಗೌರವಕ್ಕೆ ನ್ಯೂನತೆಯುಂಟಾಗುವುದಲ್ಲದೆ, ಒಂದು ವೇಳೆ ಏನಾದರೂ ಪ್ರಯೋಜನವುಂಟಾಗುವುದಾಗಿದ್ದರೆ ಅದೂ ತಪ್ಪಿ ಹೋಗುವುದು ಎಂದು ಯೋಚಿಸಿ, ರಾಜರೇ! ಈ ಹುಂಡಿಯನ್ನು ನಾನು ಒಪ್ಪಿದೆನು; ನಿಮಗೆ ಹತ್ತು ಲಕ್ಷ ವರಹಗಳು ಬೇಕಾಗಿದ್ದರೂ ನಿಮಿಷದಲ್ಲಿ ಕೊಡುವೆನು ಎಂದನು.

ಉಶ್! ಹತ್ತುಲಕ್ಷ ವರಹಗಳೇ! ಯಾವ ಮೂಲೆಗೆ ಸಾಕು? ಸಾಧಾರಣವಾಗಿ ಅಷ್ಟು ಹಣವನ್ನು ನಾನು ಎವಾಗಲೂ ನನ್ನ ಜೇಬಿನಲ್ಲೇ ಇಟ್ಟುಕೊಂಡಿರುವೆನು; ಇಗೋ ಪರಾಂಬರಿಸೋಣವಾಗಲಿ ಎಂದು ತಾನು ಅಮರಪುರದ ಖಜಾನೆಯ ಮೇಲೆ ತಂದಿದ್ದ ಐದು ಲಕ್ಷ ವರಹಗಳ ಎರಡು ಹುಂಡಿಗಳನ್ನು ದುರ್ಮತಿಯ ಮುಂದೆ ಬಿಸುಟನು. ದುರ್ಮತಿಯು ಅವುಗಳನ್ನೂ ಪರೀಕ್ಷಿಸಿ ಬಿರಬಿರನೆ ಕಣ್ಣು ಬಿಟ್ಟು ನೋಡಿ ಅಯ್ಯಾ ರಾಜರೇ, ನಾನು ಇದುವರೆಗೆ ಅನುಮಾನಪಟ್ಟುದಕ್ಕಾಗಿ ಕ್ಷಮಿಸಿ; ಇನ್ನು ನನಗೆ ಎವ ಅನುಮಾನವೂ ಇಲ್ಲ ಎಂದನು.

'ಕೊಂಕಿನ ದೇವರಿಗೆ ಕೊಡತಿ ಮದ್ದು' ಎಂಬಂತೆ ಈ ರೀತಿ ಮಾಡದಿದ್ದರೆ ಇವನು ದಾರಿಗೆ ಬರುತ್ತಿದ್ದನೇ ಎಂದು ಮಲಯಸಿಂಹನು ಮನದಲ್ಲಿ ಯೋಚಿಸಿ, ಆನಂದಗೊಂಡು, ಹಾಗಾದರೆ ಈ ವರ್ಷ ನನ್ನ ವೆಚ್ಚಕ್ಕೆ ಸುಮಾರು ಅರುವತ್ತು ಲಕ್ಷ ವರಹಗಳು ಬೇಕಾದೀತು ಎಂದನು.

ಅರುವತ್ತು ಲಕ್ಷವೇ!

ಇನ್ನೂ ಬೇಕಾದರೆ ಸಕಾಲದಲ್ಲಿ ತಿಳಿಸುವೆನು. ತಾವು ದಯವಿಟ್ಟು ನಾಳೆಯೇ ಐದು ಲಕ್ಷ ವರಹಗಳನ್ನು ನನ್ನ ಮನೆಗೆ ಕಳುಹಿಸಿ ಕೊಡಬೇಕು.

ಅವಶ್ಯಕವಾಗಿ ಆಗಲಿ ಸ್ವಾಮೀ, ಈ ಭರತಖಂಡದಲ್ಲಿರುವ ಎಲ್ಲಾ ಶ್ರೀಮಂತರ, ಎಲ್ಲಾ ರಾಜರ, ಆಸ್ತಿಯೂ ಇಷ್ಟೇ ಎಂದು ನನಗೆ ಗೊತ್ತು; ಆದರೆ ನಿಮ್ಮ ಆಸ್ತಿಯ ಪರಿಮಿತಿಯನ್ನು ಅರಿತಿಲ್ಲ.

ತಾವು ನನ್ನ ಆಸ್ತಿಯನ್ನು ತಿಳಿಯದಿರುವುದಕ್ಕೆ ಕಾರಣವುಂಟು? ನಮ್ಮ ಪೂರ್ವೀಕರೊಬ್ಬರು ಬಲು ಹಣಗಾರರು; ಅವರ ದೇಶದ ರಾಜನು ಆ ಹಣವನ್ನೆಲ್ಲಾ ಸುಲಿದುಕೊಳ್ಳಬೇಕೆಂದು ಪ್ರಯತ್ನಪಟ್ಟನು. ಆಗ ಅವರು ಅನ್ಯದೇಶದಲ್ಲಿ ನಂಬಿಗೆಯಾಗಿದ್ದ ಒಬ್ಬ ಧನಾಗಾರಪತಿಯಲ್ಲಿ ಆ ಹಣವನ್ನಿಟ್ಟು ಕಾಲವಾದರು. ಅದು ಬಹು ಕಾಲದ ವರೆಗೆ ಆ ವಂಶದವರಾರಿಗೂ ತಿಳಿಯದೆ, ಒಡ್ಡಿಗೆ ಒಡ್ಡಿ ಸೇರಿ ಬೆಳೆಯಿತು. ಹೋದ ವರ್ಷ ನನಗೆ ಆ ಸಮಾಚಾರವು ಗೊತ್ತಾಗಿ ಆ ಧನಾಗಾರಪತಿಯನ್ನು ಕೇಳಲು ಅವನು ಆ ಹಣವನ್ನು ನನ್ನ ವಶಮಾಡಿದನು. ಇನ್ನು ಮುಂದೆ ನನ್ನ ಸಮಾಚಾರವೆಲ್ಲವೂ ತಮಗೆ ಚೆನ್ನಾಗಿ ವೇದ್ಯವಾಗುವುದು ಎಂದು ಹೇಳಿ ದುರ್ಮತಿಯು ಮುಖವನ್ನು ನೋಡಿ ನಸುನಕ್ಕು ಮನೆಗೆ ಹೊರಡುವ ಪ್ರಯತ್ನಮಾಡಿದನು.

ರಾಜರೇ! ನಿಮಗೆ ಇಷ್ಟವಾಗಿದ್ದರೆ ನನ್ನ ಪತ್ನಿ ಭಾಮಿನೀ, ಪುತ್ರಿ ವಿಲಾಸಿನೀ ಇವರಿಗೆ ತನ್ನ ಆಗಮನವನ್ನು ತಿಳುಹಿಸುವೆನು ಎಂದು ದುರ್ಮತಿಯು ಹೇಳಲು, ಆಗತ್ಯವಾಗಿ ಆಗಬಹುದು ಎಂದು ಮಲಯಸಿಂಹನು ಹೇಳಿದನು.

ಮೂವತ್ತಮೂರನೆಯ ಅಧ್ಯಾಯ

ಅರಬ್ಬಿಯ ಕುದುರೆಗಳು

ರಾಜಾಮಲಯಸಿಂಹನ ಆಗಮನವನ್ನು ಭಾಮಿನಿಗೆ ತಿಳುಹಿಸೆಂದು ದುರ್ಮತಿಯು ಕಳುಹಿಸಿದ ಆಳು ಒಳಗೆ ಬಂದಾಗ, ಅವಳೂ ದಮನಕನೂ ಏಕಾಂತದಲ್ಲಿದ್ದರು. ದಮನಕನಿಗೆ ಭಾಮಿನಿಯಲ್ಲಿ ಅತಿಪ್ರೀತಿ; ಅವಳೂ ಅವನನ್ನು ಗಂಡನಿಗಿಂತ ಹೆಚ್ಚಾಗಿ ಕಾಣುತ್ತಿದ್ದಳು. ಈ ಮರ್ಮವು ದುರ್ಮತಿಗೆ ಗೊತ್ತಿದ್ದರೂ ತನಗೆ ಅದು ಪ್ರಯೋಜನಕರವಾಗಿದ್ದುದರಿಂದ ಅವನು ಅದರ ವಿಷಯವಾಗಿ ಯಾವ ತೊಂದರೆಯನ್ನೂ ಹಚ್ಚಿಕೊಳ್ಳುತ್ತಿರಲಿಲ್ಲ. ದುರ್ಮತಿಯೂ ರಾಜಾಮಲಯಸಿಂಹನೂ ಬರುವರೆಂದು ಆಳು ತಿಳಿಸಿದ ಕೂಡಲೆ ಭಾಮಿನಿಯು ತಟ್ಟನೆ ಎದ್ದು ಒಂದು ಶಾಲನ್ನು ಹೊದ್ದುಕೊಂಡು, ಕಯ್ಯಲ್ಲಿ ವೀಣೆಯನ್ನು ಹಿಡಿದು ಪ್ರತ್ಯೇಕವಾದ ಪೀಠದ ಮೇಲೆ ಕುಳಿತಳು. ಅವಳ ಮುಂದೆ ಸ್ವಲ್ಪ ದೂರದಲ್ಲಿದ್ದ ಒಂದು ಸಣ್ಣ ಕಾಲುಮಣೆಯು ಮುಂದೆ ನಿಂತು, ದಮನ

ಕನು ಅಲ್ಲಿದ್ದ ಒಂದು ಪುಸ್ತಕವನ್ನು ಬಿಚ್ಚಿ ಹಾಳೆಗಳನ್ನು ಒಂದೊಂದಾಗಿ ತಿರುವಿ ಹಾಕುತ್ತ ಲಿದ್ದನು. ಮಲಯಸಿಂಹನು ಒಳಗೆ ಬರುವುದರೊಳಗಾಗಿಯೇ ಅವನ ವಿಷಯವಾಗಿ ತನಗೆ ತಿಳಿದಿದ್ದುದನ್ನೆಲ್ಲಾ ದಮನಕನು ಭಾವಿನಿಯೊಡನೆ ಹೇಳಿದನು. ಅವನ ವಿಷಯು ವನ್ನು ಅವಳು ಉದಯಸಿಂಹನಿಂದಲೂ ಸ್ವಲ್ಪ ಕೇಳಿ ತಿಳಿದಿದ್ದಳು.

ದುರ್ಮತಿಯು ಮಲಯಸಿಂಹನನ್ನು ಮರ್ಯಾದೆಯೊಡನೆ ತನ್ನ ಹೆಂಡತಿಯ ಬಳಿಗೆ ತರೆತಂದು 'ಇವರೇ ರಾಜಾಮಲಯಸಿಂಹರು. ಒಂದು ವಿಷಯವನ್ನು ನಿಮಗೆ ತಿಳಿಸಿ ದರೆ ಇವರ ಮಿಕ್ಕ ಎಲ್ಲಾ ವಿಷಯಗಳೂ ನಿಮಗೆ ಗೊತ್ತಾದ ಹಾಗೆಯೇ ಆಗುವುದು. ಇವರು ಇಲ್ಲಿ ವಾಸಮಾಡಬೇಕೆಂದಿರುವ ಒಂದು ವರ್ಷದಲ್ಲಿ ಅರವತ್ತು ಲಕ್ಷ ವರಹಗ ಳನ್ನು ವೆಚ್ಚಮಾಡಬೇಕೆಂದಿದ್ದಾರೆ' ಎಂದನು. ದುರ್ಮತಿಯು ಅಪ್ರಸಕ್ತವಾದ ಈ ಮಾತನ್ನು ಕೇಳಿ ಮಲಯಸಿಂಹನಿಗೆ ಬಹು ಅಸಹ್ಯವಾಯಿತು. ಅವನ ಮನೆಗೆ ಬಂ ದುದು ಇದೇ ಮೊದಲನೆಯು ಸಲವಾದುದರಿಂದ ಹಾಗೆಯೇ ಮನಸ್ಸಿನ ಭಾವವನ್ನು ಅಡ ಗಿಸಿಕೊಂಡು ಸುಮ್ಮನಿದ್ದನು. ಭಾವಿನಿಯು ತಕ್ಕ ಉಪಚಾರೋಕ್ತಿಗಳಿಂದ ರಾಜನಿಗೆ ಆಸನವನ್ನು ಕೊಟ್ಟು ತಾವು ಇಲ್ಲಿಗೆ ಆವಾಗ ಜಿಜಯು ಮಾಡಿದುದು ಎಂದು ಕೇಳಲು, ನಾನು ಈ ಊರಿಗೆ ನೆನ್ನೆ ಬೆಳಿಗ್ಗೆ ಬಂದೆನು ಎಂದನು.

ನಿನ್ನ ಪದ್ಧತಿಯಂತೆ ಈ ಸಲವೂ ಭೂಮಂಡಲದ ಕೊನೆಯಿಂದ ಬಂದಿರೋ ಎನ್ನಲು, ಮಲಯಸಿಂಹನು ಸ್ವಲ್ಪ ನಕ್ಕು, ಅಮ್ಮಾ ಈ ಸಾರಿ ನಾನು ಅಲ್ಲಿಂದ ಬರಲಿಲ್ಲ ಎಂದನು.

ಈ ಊರಿಗೆ ನೀವು ಸರಿಯಾದ ಕಾಲಕ್ಕೆ ಬರಲಿಲ್ಲ. ಸದ್ಯಕ್ಕೆ ಇಲ್ಲಿ ಆಟಸ್ಪೋಟ ಗಳಾವುವೂ ಇಲ್ಲದೆ ಇರುವುದರಿಂದ ನಿಮಗೆ ಸ್ವಲ್ಪ ದಿನಗಳಲ್ಲೇ ಬೇಸರ ಹತ್ತೀತು; ಆದರೆ ಕುದುರೆಯು ಜೂಜು ಮಾತ್ರ ನಡೆಯುತ್ತಲಿದೆ. ಅದನ್ನು ನೋಡುವುದರಲ್ಲಿ ನಿಮಗೆ ಕುತೂಹಲವಿದ್ದು ಕುದುರೆಗಳನ್ನು ಜೂಜಿಗೆ ಕಳುಹಿಸುವ ಉದ್ದೇಶವೂ ಇದ್ದರೆ ಹೊತ್ತು ಕಳೆಯಲು ಸ್ವಲ್ಪ ಅನುಕೂಲವಾಗುವುದು.

ಅಮ್ಮಾ! ನಾನು ಈ ಊರಿಗೆ ಹೊಸಬ; ಇಲ್ಲಿಯ ಜನರ ರೀತಿಗೀತಿಗಳಾವುವೂ ತಿಳಿಯದು. ನಿಮ್ಮಂಥವರು ಆಜ್ಞಾಪಿಸಿದರೂ ಮುಂದಾಳಾಗಿ ನಿಂತು ಹೇಗೆ ಮಾಡಬೇಕೋ ತೋರಿಸಿಕೊಟ್ಟರೆ ಅದರಂತೆಯೇ ನಾನೂ ನಡೆದುಕೊಳ್ಳುವೆನು.

ನಿನಗೆ ಕುದುರೆಗಳಲ್ಲಿ ಅಭಿಮಾನವು ಹೆಚ್ಚೋ ?

ನಮ್ಮ ದೇಶದವರಿಗೆ ಕುದುರೆಗಳು, ಸ್ತ್ರೀಯರು ಇವೆರಡರಲ್ಲಿಯೇ ಪ್ರೀತಿ ಹೆಚ್ಚು.

ಆಹಾ! ರಾಜರೇ, ಮೊದಲು ಸ್ತ್ರೀಯರೆಂದು ಹೇಳದೆ ಅವರನ್ನು ಕುದುರೆಗಳಿಗಿಂತ ಕಡೆ ಮಾಡಿದರಲ್ಲಾ ?

ಇದಕ್ಕಾಗಿಯೇ ನಿಮ್ಮಂಥ ಮಾರ್ಗದರ್ಶಿಗಳು ಆಗಬೇಕು ಎಂದು ನಾನು ಹೇಳಿದುದು ಎಂದು ಮಲಯಸಿಂಹನು ಹೇಳುತ್ತಲಿದ್ದಾಗ, ಭಾಮಿನಿಯ ಮುಖ್ಯ ದಾಸಿಯೊಬ್ಬಳು ಬಂದು ಅವಳ ಕಿವಿಯಲ್ಲಿ ಏನನ್ನೋ ಹೇಳಲು, ಯಜಮಾನಿಯು ನಾನು ಅದನ್ನು ನಂಬಲಾರೆನೆಂದಳು. ಅದು ನಿಶ್ಚಯವೆಂದು ದಾಸಿಯು ಖಂಡಿತವಾಗಿ ತಿಳಿಸಲು, ಯಜಮಾನಿಯು ಗಂಡನ ಮುಖವನ್ನು ನೋಡಿ ಇವಳು ಹೇಳುವುದು ನಿಶ್ಚಯವೋ ಎಂದು ಕೇಳಿದಳು.

ಅವಳು ಏನ ಹೇಳುತ್ತಾಳೆ ?

ನನ್ನ ಗೆಳತಿ ನಾಗಮಣಿಗೆ ಕುದುರೆ ಬಂಡಿಗಳನ್ನು ಒಂದು ದಿನದ ಮಟ್ಟಿಗೆ ಕಳುಹಿಸಿ ಕೊಡುವುದಾಗಿ ಒಪ್ಪಿ ಬಂಡಿಯನ್ನು ಕಟ್ಟಿಕೊಂಡು ಹೋಗುವಂತೆ ಆಳಿಗೆ ಹೇಳಿದ್ದೆನು. ಕುದುರೆಗಳನ್ನು ತರಲು ಆಳು ಲಾಯಕ್ಕೆ ಹೋಗಿ ನೋಡಿದರೆ ಅಲ್ಲಿ ಕುದುರೆಗಳೇ ಇರಲಿಲ್ಲವಂತೆ. ಇದಕ್ಕೇನು ಅರ್ಥ ?

ನಾನು ಹೇಳುವುದನ್ನು ಕೇಳು.

ಕೇಳುವುದೇನು? ನೀವು ಹೇಳುವುದು ನನಗೆ ತಿಳಿದೇ ಇದೆ ಎಂದು ಹೇಳಿ, ಮಲಯಸಿಂಹನನ್ನು ನೋಡಿ, ಸ್ವಾಮೀ ರಾಜರೇ ! ತಾವೂ ದಮನಕರೂ ಇಬ್ಬರೂ ಈ ವಿಷಯವನ್ನು ಚೆನ್ನಾಗಿ ಕೇಳಿ ನ್ಯಾಯವಾದ ತೀರ್ಪನ್ನು ಹೇಳಬೇಕು. ನಾನು ಬಲು ಆಸೆಪಟ್ಟು ನನ್ನ ಸ್ವಂತ ಹಣದಿಂದ ಕೊಂಡಿದ್ದ ಶ್ಲಾಘ್ಯವಾದ ಅರಬ್ಬಿಯ ಕುದುರೆಗಳನ್ನು ನನ್ನ ಯಜಮಾನರು ನನ್ನನ್ನು ಕೇಳದೆಯೇ ಲಾಭಕ್ಕೆ ಆಸೆಪಟ್ಟು ಮಾರಿಬಿಟ್ಟಿಂತಿದೆ. ಇವರು ಹೀಗೆ ಮಾಡುವುದು ನ್ಯಾಯವೋ ಅಪ್ಪಣೆಯಾಗಬೇಕು ಎಂದಳು. ಅದಕ್ಕೆ ದುರ್ಮತಿಯು ಅವು ಬಲು ತುಂಟೆ ಕುದುರೆಗಳು ; ಅವನ್ನು ಮಾರಿ ಸಾಧುವಾದ ಬೇರೆ ಒಂದು ಜತೆಯನ್ನು ತೆಗೆಯುವ ಏರ್ಪಾಡಮಾಡಿದ್ದೇನೆ. ಅವು ನಾಳೆಯೇ ಬರಬಹುದು ಎಂದನು.

ಇದೇನು ಅವಿವೇಕದ ಮಾತು? ಎರಡು ತಿಂಗಳಿಂದ ಆ ಕುದುರೆಗಳನ್ನು ನಾನು ಉಪಯೋಗಿಸುತ್ತಿರಲಿಲ್ಲವೇ? ಅದರಿಂದ ನನಗೇನೂ ಅಪಾಯವಾಗಲಿಲ್ಲವಲ್ಲಾ? ನಿನ್ನ ದುರಾಶೆಯೇ ಆ ಕುದುರೆಗಳಲ್ಲಿ ಇಲ್ಲದ ಕೆಟ್ಟ ಚಾಳಿಯನ್ನು ಕಲ್ಪಿಸಿತು.

ತನ್ನ ಹೆಂಡತಿಯು ಕಣ್ಣುಗಳಿಂದ ಹೊಮ್ಮುತ್ತಿದ್ದ ಕೋಪದ ವೇಗವನ್ನು ಸಹಿಸ ಲಾರದೆ ದುರ್ಮತಿಯು ಮೆಲ್ಲಗೆ ಮಲಯಸಿಂಹನ ಕಡೆಗೆ ತಿರುಗಿ ರಾಜರೇ! ಹೆಂಗಸರ ಬುದ್ಧಿಯನ್ನು ನೋಡಿರಿ; ಅವರ ಹಿತಕ್ಕಾಗಿ ನಾವು ಮಾಡುವುದನ್ನು ಅವರು ಅನ್ಯಥಾ ಭಾವಿಸುವರು. ಆ ಕುದುರೆಗಳು ಕೈಬಿಟ್ಟು ಹೋದರೆ ನಾಕೆಂದು ಈ ದಿನ ಬೆಳಿಗ್ಗೆ ಧರ್ಮಾರ್ಥವಾಗಿ ಕೊಟ್ಟಂತೆ ಬಹು ಅಲ್ಪವಾದ ಬೆಲೆಗೆ ಕೊಟ್ಟುಬಿಟ್ಟಿನು ನಿಮ್ಮ ಪರಿಚಯವು ನನಗೆ ಮೊದಲೇ ಆಗಿದ್ದಲ್ಲಿ ನಿಮಗೇ ಕೊಡಬಹುದಾಗಿದ್ದಿತು ಎಂದನು.

ಸ್ವಾಮೀ! ನಾನೊಂದು ಜತೆಯನ್ನು ಈ ದಿನ ತೆಗೆದೆನು ಎಂದು ದುರ್ಮತಿಗೆ ಹೇಳಿ, ದಮನಕನ ಕಡೆಗೆ ತಿರುಗಿ ದಮನಕರೇ! ನೀವು ಅಶ್ವಪರೀಕ್ಷೆಯಲ್ಲಿ ನಿಪುಣರೆಂದು ಕೇಳಿದ್ದೇನೆ; ನಾನು ಕೊಂಡ ಜತೆಯನ್ನು ನೋಡಿ ನಿಮ್ಮ ಅಭಿಪ್ರಾಯವನ್ನು ಹೇಳಿ, ಎಂದು ಅವನನ್ನು ಕಿಟಕಿಯ ಬಳಿಗೆ ಕರೆದುಕೊಂಡು ಹೋಗಿ ಬೀದಿಯಲ್ಲಿ ನಿಂತಿದ್ದ ತನ್ನ ಕುದುರೆಗಳನ್ನು ತೋರಿಸಿದನು. ಆ ಸಮಯವನ್ನು ನೋಡಿಕೊಂಡು ದುರ್ಮತಿಯು ಮಡದಿಯು ಸಮೀಪವನ್ನು ಸೇರಿ ಅವನೋ ಒಬ್ಬ ಹುಚ್ಚನು ಹದಿನಾರು ಸಾವಿರ ವರಹಗಳ ಲಾಭವನ್ನು ಕೊಟ್ಟು ಆ ಕುದುರೆಗಳನ್ನು ಕ್ರಯಕ್ಕೆ ಕೊಂಡನು. ಬಂದ ಲಾಭದಲ್ಲಿ ನಿನ್ನ ಸ್ವಂತಕ್ಕೆ ಆರು ಸಾವಿರ ವರಹಗಳನ್ನೂ ನಿನ್ನ ಮಗಳ ವೆಚ್ಚಕ್ಕೂ ಎರಡು ಸಾವಿರ ವರಹಗಳನ್ನೂ ತೆಗೆದುಕೋ. ಸುಮ್ಮನೆ ಅವರಿದಿರಿಗೆ ಕೋಪ ಮಾಡಬೇಡ. ಇದನ್ನೆಲ್ಲಾ ಅವರ ಮುಂದೆ ನಿನಗೆ ಹೇಗೆ ಹೇಳಲಿ ಎಂದು ಸುಮ್ಮನಿದ್ದೆನು ಎಂದನು.

ಅತ್ತ ದಮನಕನು ಆ ಕುದುರೆಗಳನ್ನು ನೋಡಿ ಇವೇ ಭಾವಿನಿಯ ಕುದುರೆಗಳು ಎಂದು ಮಲಯಸಿಂಹನಿಗೆ ಹೇಳಿ, ಕೂಡಲೇ ಭಾವಿನಿಯ ಬಳಿಗೆ ಬಂದು ಅವಳಿಗೂ ಆ ಸಮಾಚಾರವನ್ನು ತಿಳಿಸಿದನು. ಅವಳು ಎದ್ದು ಬಂದು ಆ ಕುದುರೆಗಳನ್ನು ನೋಡಿ ಇವೇ ನನ್ನವು ಎಂದು ಕೋಪದಿಂದ ದುರದುರನೆ ಗಂಡನ ಮುಖವನ್ನು ನೋಡಿದಳು. ದುರ್ಮತಿಯು ಗಡಗಡನೆ ನಡುಗುತ್ತ ಅವುದೋ ಬಂದು ಕೆಲಸದ ನೆಪ

ಮಾಡಿಕೊಂಡು ಆಚೆಗೆ ಹೊರಟನು. ಗಂಡಹೆಂಡಿರ ಜಗಳದಲ್ಲಿ ತಾನಿರುವುದು ಅನುಚಿತವೆಂದು ತಿಳಿದು ಮೆಲ್ಲಗೆ ದಮನಕನು ಎಲ್ಲಿಗೋ ಇಳಿಯುಬಿದ್ದನು.

ಮಲಯಸಿಂಹನು ಹೊರಗೆ ಹೋಗುತ್ತಲಿದ್ದ ದುರ್ಮತಿಯನ್ನು ಹಿಮ್ಮೆಟ್ಟಿ ಅಯ್ಯಾ ಶ್ರೀಮಂತರೇ! ಹೆಂಗುಸರು ಮೂರ್ಖರು; ಅವರು ಹೋದ ದಾರಿಯಲ್ಲಿಯೇ ಅವರನ್ನು ಬಿಟ್ಟರೆ, ಅವರ ಅನಿನೇಕದಿಂದುಂಟಾಗುವ ಅಪಾಯಕ್ಕೆ ಮತ್ತೊಬ್ಬರನ್ನು ಗುರಿಮಾಡಲಾರರು; ಕೆಲವು ಮಡದಿಯರಿಗೆ ತಮ್ಮ ಮಾರ್ಗವೇ ಮಾರ್ಗ; ಅಂಧವರ ಗೋಜಿಗೆ ಹೋಗುವುದೇ ತಪ್ಪು. ನಾನು ಒಂದ ಕೆಲಸವಾಯಿತು; ಅಪ್ಪಣೆಯಾದರೆ ಹೋಗಿ ಬರುತ್ತೇನೆ ಎಂದು ಹೊರಟನು.

ಮಲಯಸಿಂಹನು ಬಂಡಿಯಲ್ಲಿ ಕುಳಿತು ಮನೆಗೆ ಹಿಂದಿರುಗಿ ಹೋಗುತ್ತ ಇದುವರೆಗೆ ನಾನು ಯೋಚಿಸಿಡಂತೆಯೇ ಎಲ್ಲವೂ ಅನುಕೂಲಿಸಿದುವು. ಇನ್ನು ಮುಂದೆ ಈ ಗಂಡಹೆಂಡಿರ ಅನುಕೂಲ್ಯವೂ ಈ ಮನೆಯು ನಾಶ್ಯವೂ ನನ್ನ ಕೈಯಲ್ಲಿನೆ. ಈಗ ನಾನು ಇನ್ನೊಂದು ಕೆಲಸ ಮಾಡಿದರೆ ದಂಪತಿಗಳಿಬ್ಬರ ಮನಸ್ಸಿಗೂ ಸಂತೋಷವಾಗುವುದಲ್ಲದೆ ನನ್ನ ಮುಂದಣ ಕೆಲಸಕ್ಕೂ ಅನುಕೂಲವಾಗುವುದು. ದುರ್ಮತಿಯ ಮಗಳನ್ನು ಪರಿಚಯಮಾಡಿಕೊಳ್ಳುವುದಕ್ಕೆ ಅನುಕೂಲಿಸಲಿಲ್ಲ; ಅದಕ್ಕೆ ಈಗ ಅವಸರವೇನು? ಬೇಕಾದಷ್ಟು ಕಾಲವಿದೆ ಎಂದು ಯೋಚಿಸುತ್ತ ಮನೆಯನ್ನು ಸೇರಿದನು.

ಮನೆಗೆ ಹೋದ ಕೂಡಲೇ ಭಾವಿನಿಗೂ ದುರ್ಮತಿಗೂ ಬೇರೆ ಬೇರೆ ಎರಡು ಲೇಖನಗಳನ್ನು ಬರೆದು, ತಾನು ದುರ್ಮತಿಯಿಂದ ಕೊಂಡಿದ್ದ ಅರಬ್ಬಿಯ ಕುದುರೆಗಳನ್ನೂ ಅವುಗಳಿಗಾಗಿ ಹೊಸದಾಗಿ ಮಾಡಿಸಿದ್ದ ಜೀನು ಹಲ್ಲಣ ಮೊದಲಾದುವುಗಳನ್ನೂ ಶಿರೋಭೂಷಣಗಳಾಗಿದ್ದ ತುರಾಯಿಗಳಲ್ಲಿ ಎರಡು ಉತ್ತಮವಾದ ವಜ್ರಗಳನ್ನೂ ಇಟ್ಟು ವಾಮನಭಟ್ಟನ ಜತೆಯಲ್ಲಿ ಕಳುಹಿಸಿಕೊಟ್ಟನು. ಭಾವಿನಿಗೆ ಈ ರೀತಿ ಲೇಖನವು ಬರೆದಿದ್ದಿತು:

ಅವ್ವಾ! ನಿನ್ನಂಥ ರೂಪವತಿಯರಾದ ಹೆಂಗುಸರ ಮನದ ಸಂಕಟವನ್ನು ನೋಡಿ ಸಹಿಸಲಾರದೆ, ನೀವು ಆಸೆಪಟ್ಟು ಇಟ್ಟುಕೊಂಡಿದ್ದ ಕುದುರೆಗಳನ್ನು ನಮ್ಮ ದೇಶದ ವಾಡಿಕೆಯಂತೆ ಅಲಂಕರಿಸಿ ನಿಮಗೆ ಉಪಾಯನವಾಗಿ ಕಳುಹಿಸಿಕೊಟ್ಟಿದ್ದೇನೆ.

ತಾವು ದಯೆಮಾಡಿ ಇವುಗಳನ್ನು ಸ್ವೀಕರಿಸಬೇಕು. ಈ ವಿಷಯವಾಗಿ ನಿಮ್ಮ ಯಜಮಾನರಿಗೂ ಬರೆದಿದ್ದೇನೆ.

ಮಾರನೆಯ ದಿನ ಹೊತ್ತು ಹುಟ್ಟುತ್ತಲೆ ಮಲಯಸಿಂಹನು ಎದ್ದು ವಾಮನಭಟ್ಟನನ್ನು ಕರೆದುಕೊಂಡು ಸಂಸಗೆಯ ವನದ ಮನೆಗೆ ಹೋಗಿ ಮಹಡಿಯ ಮೇಲೆ ಕುಳಿತು ಭಟ್ಟಾ! ನೀನು ನಿನ್ನ ದೇಶದಲ್ಲಿದ್ದಾಗ ಕುಣಿಕೆಹಾಕಿದ್ದ ನೂಲ ಹಗ್ಗದಿಂದ ಓಡಿ ಹೋಗುತ್ತಲಿರುವ ಎಂತಹ ಕಾಡುಮೃಗಗಳನ್ನಾದರೂ ನಿಲ್ಲಿಸಿ ಬೇಟೆಯಾಡುತ್ತಲಿದ್ದೆ ಎಂದು ನನ್ನೊಡನೆ ಹೇಳಿದ್ದಂತೆ ಜ್ಞಾಪಕವಿದೆ. ಈ ಅಭ್ಯಾಸವು ಈಗಲೂ ನಿನ್ನಲ್ಲಿದೆಯೋ ಎನ್ನಲು, ವಾಮನಭಟ್ಟನು ಇದೆ ಎಂದು ಸೂಚಿಸಿದನು.

ಎಷ್ಟು ಬಲವಾದ ಮೃಗವಾದರೂ, ಎಷ್ಟು ವೇಗವಾಗಿ ಹೋಗುತ್ತಲಿದ್ದರೂ, ಅದನ್ನು ನಿಲ್ಲಿಸಬಲ್ಲೆಯೋ?———ಹೂಂ.

ಸಿಂಹವನ್ನಾದರೂ ನಿಲ್ಲಿಸಬಲ್ಲೆಯೋ?———ಹೂಂ.

ಹಾಗಾದರೆ ಇಲ್ಲಿ ಬಾ ಎಂದು ಮಹಡಿಯಿಂದಿಳಿದು ಅವನನ್ನು ಬೀದಿಗೆ ಕರೆದುಕೊಂಡು ಹೋಗಿ ಇನ್ನು ಸ್ವಲ್ಪ ಹೊತ್ತಿನಲ್ಲಿ ನೆನ್ನೆಯ ದಿನ ನಮ್ಮ ಬಂಡಿಗೆ ಹೂಡಿದ ಕುದುರೆಗಳು ಮತ್ತೊಂದು ಬಂಡಿಯನ್ನು ಅತಿವೇಗದಿಂದ ಎಳೆದುಕೊಂಡು ಈ ಮಾರ್ಗವಾಗಿ ಬರುವುವು; ಅವುಗಳನ್ನು ಹೇಗಾದರೂ ಮಾಡಿ ನೀನು ನಿಲ್ಲಿಸಬೇಕು ಎನ್ನಲು ಅವನು ಮನೆಯಿಂದ ಬಂದು ನೂಲ ಹಗ್ಗವನ್ನು ತಂದು ಕುಣಿಕೆಯನ್ನು ಹಾಕಿ ಮನೆಯ ಇದಿರಿಗಿದ್ದ ಬಂಡೆಯ ಮೇಲೆ ಕುಳಿತು ಹಗ್ಗವನ್ನು ಹೇಗೆ ಎಸೆದರೆ ಬೀದಿಯಲ್ಲಿ ಹೋಗುವ ಕುದುರೆಯ ಕಾಲಿಗೆ ಕುಣಿಕೆಯು ಬೀಳುವುದೋ ಅದನ್ನು ಮಲಯಸಿಂಹನಿಗೆ ತೋರಿಸಿದನು. ಆಗ ಮಲಯಸಿಂಹನು ಅವನ ಬೆನ್ನನ್ನು ತಟ್ಟಿ ನೀನಿಲ್ಲಿಯೇ ಇದ್ದು ಆ ಕೆಲಸವನ್ನು ಮಾಡು ಎಂದು ಹೇಳಿ, ತಾನು ಮಹಡಿಯ ಮೇಲೆ ಬೀದಿಯಲ್ಲಿ ನಡೆಯುವುವೆಲ್ಲಾ ಕಾಣುವಂತೆ ಒಂದು ಕೊಟ್ಟಡಿಯಲ್ಲಿ ಕುರ್ಚಿಯನ್ನು ಹಾಕಿಕೊಂಡು ಕುಳಿತನು.

ಇತ್ತ ವಾಮನಭಟ್ಟನು ಬಂಡೆಯ ಮೇಲೆ ಕುಳಿತು ಬಂಡಿಯು ಬರುವುದನ್ನೇ ನೋಡುತ್ತಲಿದ್ದನು. ಮಲಯಸಿಂಹನು ಆಗಾಗ ಬಂಡಿಯು ಬರುವ ದಿಕ್ಕನ್ನೇ ನೋಡುತ್ತ ಇನ್ನೂ ಏಕೆ ಬರಲಿಲ್ಲ ಎಂದು ಭ್ರಮೆಪಡುತ್ತಲಿದ್ದನು. ಬಲು ಹೊತ್ತಾಯಿತು,

ಇನ್ನು ಮೇಲೆ ಬಹುಶಃ ಬರಲಾರದು ಎಂದು ಗಡಿಯಾರವನ್ನು ತೆಗೆದು ನೋಡುವ ವೇಳೆಗೆ ಬಂಡಿಯು ಬರುವ ಸಪ್ಪಳವು ಕೇಳಿಸಿತು. ಎದ್ದು ನೋಡುವಲ್ಲಿ ದೂರದಲ್ಲಿ ಬಂಡಿಯು ಕಾಣಿಸಿತು. ನೋಡುತ್ತಲಿದ್ದ ಹಾಗೆಯೇ ಕುದುರೆಗಳೆರಡೂ ಕಡಿವಾಳವನ್ನು ಕಚ್ಚಿಕೊಂಡು, ಸಾರಥಿಯು ಆಧೀನದಲ್ಲಿ ನಿಲ್ಲದೆ ಸ್ವೇಚ್ಛೆಯಾಗಿ ರಥವನ್ನೆಳೆದುಕೊಂಡು ವಾಯುವೇಗದಿಂದ ಓಡಿಬರುತ್ತಲಿದ್ದುದೂ ಕಾಣಿಸಿತು. ಬಂಡಿಯು ನಿಮಿಷಮಾತ್ರ ದಲ್ಲಿ ಸವಿಾಪಕ್ಕೆ ಬಂದಿತು.

ಆ ಬಂಡಿಯಲ್ಲಿ ಒಬ್ಬ ಯುವತಿಯೂ ಸುಮಾರು ಎಂಟು ವಯಸ್ಸುಳ್ಳ ಒಬ್ಬ ಬಾಲಕನೂ ಕುಳಿತಿದ್ದರು. ಈ ರೀತಿ ಕುದುರೆಗಳು ಬಂಡಿಯನ್ನು ದಿಕ್ಕುಪಾಲಾಗಿ ಎಳೆದು ಕೊಂಡು ಹೋಗುತ್ತಿರುವುದನ್ನು ಕಂಡು ಅವರು ಅತಿಭೀತರಾಗಿ ಜೀವದಾಸೆಯಿಲ್ಲದೆ ಒಬ್ಬರನ್ನೊಬ್ಬರು ಅಪ್ಪಿಕೊಂಡಿದ್ದರು. ದಾರಿಯಲ್ಲಿ ಓಡಾಡುತ್ತಲಿದ್ದವರು ಕುದುರೆಗಳು ಈ ರೀತಿ ವೇಗವಾಗಿ ಬರುತ್ತಲಿದ್ದುದನ್ನು ನೋಡಿ ಈ ಬಂಡಿ ಎಲ್ಲಿಯೋ ಉರುಳಿ ಚೂರ್ಣವಾಗಿ ಹೋಗಿ ಒಳಗಿರುವವರು ನಿಜವಾಗಿಯೂ ಸಾಯುವರೆಂದೇ ನಿಶ್ಚಯಿಸಿದ್ದರು.

ಬಂಡಿಯು ಮನೆಯ ಮುಂದೆ ಬರುವ ವರೆಗೂ ವಾಮನಭಟ್ಟನು ಸುಮ್ಮನಿದ್ದು, ಬಂದಕೂಡಲೆ ನಿಮಿಷಮಾತ್ರದಲ್ಲಿ ಕಯ್ಯಲ್ಲಿದ್ದ ಹಗ್ಗವನ್ನು ಎಸೆಯಲು ಕುಣಿಕೆಯು ಅವನ ಕಡೆಯಿದ್ದ ಕುದುರೆಯ ಮುಂಗಾಲಿಗೆ ಸಿಕ್ಕಿ ಜೀರಿಕೊಂಡಿತು. ಅದು ಅತಿವೇಗ ವಾಗಿ ಬರುತ್ತಲಿದ್ದುದಾದ ಕಾರಣ ಕಾಲಿಗೆ ತೊಡರಿಕೊಂಡ ಹಗ್ಗವನ್ನೂ, ಅದನ್ನು ಎಳೆದು ಹಿಡಿದಿದ್ದ ವಾಮನಭಟ್ಟನನ್ನೂ, ಸ್ವಲ್ಪ ದೂರ ಎಳೆದುಕೊಂಡು ಹೋಗಿ ದೊಪ್ಪೆಂದು ಕೆಳಗೆ ಬಿದ್ದಿತು. ತಕ್ಷಣವೇ ವಾಮನಭಟ್ಟನು ಓಡಿಹೋಗಿ ಮತ್ತೊಂದು ಕುದುರೆಯು ಎರಡು ಮೂಗಿಸಲ್ಲಿಯೂ ಹೆಬ್ಬೆಟ್ಟನ್ನೂ ಆನಾಮಿಕವನ್ನೂ ಇಟ್ಟು ಗಟ್ಟಿ ಯಾಗಿ ಒತ್ತಲು ಆ ನೋವನ್ನು ಸಹಿಸಲಾರದೆ ಆ ಕುದುರೆಯೂ ಕೆಳಗೆ ಬಿದ್ದಿತು. ಒಂದಿ ಯಲ್ಲಿದ್ದವರಿಬ್ಬರೂ ದಿಗಿಲಿನಿಂದ ಮೂರ್ಛಾಕ್ರಾಂತರಾದರು. ಇಷ್ಟರಲ್ಲಿಯೇ ಮಲಯ ಸಿಂಹನು ಮನೆಯಿಂದ ಆಳುಗಳನ್ನು ಕರೆದುಕೊಂಡು ಬಂದು ಮೂರ್ಛಿತರಾಗಿದ್ದ ಇಬ್ಬ ರನ್ನೂ ಮಹಡಿಯ ಮೇಲಕ್ಕೆ ಸಾಗಿಸಿ ಅಲ್ಲಿ ಹಾಕಿದ್ದ ಎರಡು ಸೋಫಾಗಳ ಮೇಲೆ ಮಲಗಿಸಿ, ಅವರಿಗೆ ಶೈತ್ಯೋಪಚಾರಗಳನ್ನು ಮಾಡುತ್ತಲಿದ್ದನು.

ಯುವತಿಯು ಸ್ವಲ್ಪ ಹೊತ್ತಿನ ಮೇಲೆ ಮೂರ್ಛೆ ತಿಳಿದು ಕಣ್ಣನ್ನು ತೆರೆದು ಸುತ್ತಲೂ ನೋಡಿದಳು. ಆಗ ಮಲಯಸಿಂಹನು ಅಮ್ಮ! ನಿಮಗೆ ಒದಗಿದ್ದ ವಿಪತ್ತು ಕಳೆದು ಹೋಯಿತು, ಹೆದರಬೇಡಿ ಎಂದನು. ಅವಳು ತನ್ನ ಮಗನಿಗಿನ್ನೂ ಜ್ಞಾನ ಬಾರದಿದ್ದುದನ್ನು ಕಂಡು ಬಹುವಾಗಿ ದುಃಖಿಸಿದಳು. ಅದಕ್ಕೆ ಮಲಯಸಿಂಹನು ಅಮ್ಮಾ, ಸುಮ್ಮನೆ ಏಕೆ ದುಃಖಿಸುವಿರಿ? ಈ ಬಾಲಕನು ಗಾಬರಿಯಿಂದ ಮೂರ್ಛಿತನಾಗಿದ್ದಾನೆ; ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ಎಚ್ಚರಗೊಳ್ಳುವನು. ನೀವು ಗಾಬರಿ ಪಡದೆ ಧೈರ್ಯವಾಗಿರಿ ಎಂದು ಹೇಳಲು, ಅವಳು ಸ್ವಾಮೀ! ನನ್ನನ್ನು ಸಮಾಧಾನಪಡಿಸುವ ಉದ್ದಿಶ್ಯ ತಾವು ಹೀಗೆ ಹೇಳುವಂತೆ ತೋರುತ್ತದೆ ಎಂದು ಹೇಳಿ ಮಗುವಿನ ಕಡೆಗೆ ತಿರುಗಿ ಮಗೂ, ನನ್ನ ಕಂದಾ, ಒಂದು ಸಾರಿ ಕಣ್ಣ ಬಿಟ್ಟು ನನ್ನನ್ನು ನೋಡಬಾರದೇ? ನನ್ನ ಮುದ್ದು ಕಂದಾ! ನನ್ನೊಡನೆ ಏಕೆ ಮಾತನಾಡದಿರುವೆ? ಎಂದು ಪ್ರಜ್ಞೆಯಿಲ್ಲದ ಮಗುವನ್ನು ಕುರಿತು ಹಳವಳಿಸುತ್ತ, ಅದು ಮಾತನಾಡದೇ ಇರಲು ಅಯ್ಯೋ ದೇವರೇ! ಈ ಮಗು ಸತ್ತು ನಾನು ಹೇಗೆ ತಾನೇ ಬದುಕಿರಲಿ ಎಂದು ಗೋಳಿಡುತ್ತಿದ್ದಳು.

ಹಾಗೆಯೇ ಸ್ವಲ್ಪ ಸಮಾಧಾನಗೊಂಡು ಸ್ವಾಮೀ! ಸವಿಾಪದಲ್ಲಿ ಆರಾದರೂ ವೈದ್ಯರಿದ್ದರೆ ಅವರನ್ನು ಬೊದಲು ಕರೆಸೋಣವಾಗಲಿ; ನನ್ನ ಆಸ್ತಿಯೆಲ್ಲಾ ಹೋದರೂ ಚಿಂತೆಯಿಲ್ಲ, ಈ ಮಗುವೊಂದಿದ್ದರೆ ಸಾಕು ಎಂದಳು. ಮಲಯಸಿಂಹನು ಆ ಯುವತಿಗೆ ಧೈರ್ಯವನ್ನು ಹೇಳುತ್ತ ಅಲ್ಲಿ ಒಂದು ಮೂಲೆಯಲ್ಲಿ ಇಟ್ಟಿದ್ದ ಸೀಸೆಗಳಲ್ಲಿ ಒಂದನ್ನು ತಂದು ಅದರಲ್ಲಿದ್ದ ದ್ರಾವಕದಲ್ಲಿ ಒಂದು ತೊಟ್ಟನ್ನು ಮಗುವಿನ ಬಾಯಿಗೆ ಬಿಟ್ಟನು. ಕೂಡಲೇ ಮಗುವು ಕಣ್ಣ ತೆರೆದು ಸುತ್ತ ಮುತ್ತಲೂ ನೋಡಿ ತಾಯಿಯ ಮುಖವನ್ನು ಕಂಡು ಸ್ವಲ್ಪ ನಕ್ಕು, ಪುನಃ ಕಣ್ಣ ಮುಚ್ಚಿಕೊಂಡಿತು.

ಅದನ್ನು ನೋಡಿ ತಾಯಿಯು ಖಿನ್ನಳಾಗಿ ಸ್ವಾಮೀ! ಆ ದ್ರಾವಕದಲ್ಲಿ ಇನ್ನೊಂದು ತೊಟ್ಟನ್ನು ಬಿಡಿರಿ; ಮಗುವು ಏಕೋ ಮರಳಿ ಕಣ್ಣ ಮುಚ್ಚಿಕೊಂಡಿತು ಎಂದಳು.

ಅಮ್ಮಾ! ಈ ದ್ರಾವಕದ ಒಂದು ತೊಟ್ಟು ಸಂಜೀವನದಂತೆ ಆರೋಗ್ಯವನ್ನುಂಟುಮಾಡುವುದು; ಅದಕ್ಕೆ ಹೆಚ್ಚಾದರೆ ಕ್ರೂರವಾದ ಕಾಲಕೂಟದಂತೆ ಕೊಲ್ಲದೆ

ಬಿಡದು. ನೀವು ಇನ್ನು ಎರಡು ನಿಮಿಷಗಳು ಸುಮ್ಮನಿದ್ದರೆ ಈ ಬಾಲಕನೆದ್ದು ಓಡಾಡುವನು ಎಂದನು.

ಅವನು ಹೇಳಿದಂತೆಯೇ ಎರಡು ನಿಮಿಷಗಳಾದ ಮೇಲೆ ಬಾಲಕನೆದ್ದು ತಾಯಿಯ ಒಳಿಗೆ ಬಂದನು. ಅದನ್ನು ಕಂಡು ಅವಳಿಗೆ ಉಂಟಾದ ಆನಂದವನ್ನು ಆರು ತಾನೇ ಸರಿಯಾಗಿ ವಿವರಿಸಬಲ್ಲರು? ಮಗನನ್ನು ಅಪ್ಪಿ ಬಾರಿ ಬಾರಿಗೂ ಮುದ್ದಾಡುತ್ತ ಸ್ವಾಮೀ! ಇದು ಆರ ಮನೆ? ನನಗೆ ಜೀವದಾನವನ್ನೂ ಪುತ್ರದಾನವನ್ನೂ ಮಾಡಿದ ಆ ಮಹಾನುಭಾವರ ದಿವ್ಯ ನಾಮಾಕ್ಷರಗಳಾವುವು? ಈ ಪರೋಪಕಾರವನ್ನು ನಾನು ಹೇಗೆ ತಾನೇ ಮರೆತೇನು ಎಂದಳು.

ಅಮ್ಮಾ! ಇದು ನಿಮ್ಮ ಈ ದುರ್ದಶೆಯಲ್ಲಿ ಕಿಂಚಿತ್ಸಹಾಯಮಾಡುವ ಪುಣ್ಯವನ್ನು ಹೊದ್ದಿದ ನನ್ನ ಮನೆ. ನಿಮ್ಮ ಬಂಡಿಯು ಸ್ವಲ್ಪ ಶಿಥಿಲವಾಗಿದೆ; ಸ್ವಲ್ಪ ವಿಶ್ರಮಿಸಿಕೊಳ್ಳಿರಿ, ನನ್ನ ಬಂಡಿಯ ಕಟ್ಟಿಸಿ ಕೊಡುತ್ತೇನೆ. ಆದರಲ್ಲಿ ಕುಳಿತು ತಾವು ಸುಖವಾಗಿ ಮನೆಯನ್ನು ಸೇರಬಹುದು.

ಸ್ವಾಮೀ! ಇದು ನಮ್ಮ ದುರ್ದಶೆಯೇ ಸರಿ. ಊರೆಲ್ಲ ಕೊಂಡಾಡುತ್ತಲಿದ್ದ ಈ ಕುದುರೆಗಳು ಹೇಗಿವೆ ಎಂದು ನೋಡಲೋಸುಗ ನಾನು ನನ್ನ ಗೆಳತಿ ಭಾಮಿನಿಯನ್ನು ಕೇಳಿ ರಥವನ್ನು ಕಟ್ಟಿಸಿಕೊಂಡು ಬಂದುದಕ್ಕೆ ಈ ಗತಿಯಾಯಿತು. ನಿಮಗೇನಾದರೂ ಅವಳ ಪರಿಚಯವುಂಟೋ?

ನೆನ್ನೆ ನಾನು ಈ ಕುದುರೆಗಳನ್ನು ಕೊಂಡುಕೊಂಡು ಸ್ವಲ್ಪ ಕೆಲಸವಿದ್ದುದರಿಂದ ಇವುಗಳನ್ನೇ ಬಂಡಿಗೆ ಹೂಡಿಸಿ ಶ್ರೀಮಂತದುರ್ಮತಿಯವರ ಮನೆಗೆ ಹೋಗಿದ್ದೆನು. ಈ ಕುದುರೆಗಳನ್ನು ನೋಡಿ 'ನಾನು ಸ್ವಂತ ಹಣ ಕೊಟ್ಟು ತೆಗೆದು ಅತಿಮೋಹದಿಂದ ಟ್ಟುಕೊಂಡಿದ್ದ ಈ ಕುದುರೆಗಳನ್ನು ನನ್ನ ತಿಳುವಳಿಕೆಗೆ ಬಾರದಂತೆಯೇ ಶ್ರೀಮಂತರು ಲಾಭಕ್ಕೆ ಮಾರಿದರಲ್ಲ' ಎಂದು ಭಾಮಿನಿಯವರು ವ್ಯಥೆಪಟ್ಟರು. ಅದನ್ನು ನೋಡಿ ನಾನು ಮನಗರಗಿದವನಾಗಿ ಇವುಗಳನ್ನು ಅವರಿಗೆ ಒಪ್ಪಿಸಿ ಬಿಟ್ಟೆನು.

ಹಾಗೇ! ಭಾಮಿನಿಯು ಬಹುವಾಗಿ ಸ್ತೋತ್ರಮಾಡುತ್ತಲಿದ್ದ ರಾಜಾಮಲಯಸಿಂಹರೆಂಬವರು ತಾವೇ ಎಂದು ಕಾಣುತ್ತದೆ.

ನಿಮ್ಮ ಊಹೆಯು ತಪ್ಪಲ್ಲ. ತಾವು ಆರೆಂಬುದನ್ನು ಹೇಳಲು ಅಭ್ಯಂತರವಿಲ್ಲ ದಿದ್ದರೆ ಅದನ್ನು ನಾನು ತಿಳಿಯಲಪೇಕ್ಷಿಸುತ್ತೇನೆ.

ನಾನು ಇಲ್ಲಿಯ ನ್ಯಾಯಾಧಿಪತಿಗಳ ಕುಟುಂಬ; ನನ್ನ ಹೆಸರು ನಾಗಮಣಿ. ತಾವು ಮಾಡಿದ ಉಪಕಾರಕ್ಕೆ ನಾನೂ ನನ್ನ ಯಜಮಾನರೂ ಜೀವಾವಧಿ ಋಣಪಟ್ಟ ದ್ದೇವೆ ಎಂದು ಅವಳು ಹೇಳುತ್ತಲಿದ್ದಾಗ ಬಾಲಕನು ಅವಳ ಅಲಿಂಗನದಿಂದ ಬಿಡಿಸಿ ಕೊಂಡು ಔಷಧಿಗಳಿಟ್ಟಿದ್ದ ಪೀಜಿನ ಬಳಿಗೆ ಓಡಿಹೋಗಿ ಅಲ್ಲಿ ಆವುದೋ ಒಂದು ಸೀಸೆಗೆ ಕೈಹಾಕಿದನು. ಅದನ್ನು ನೋಡುತ್ತಲಿದ್ದ ಮಲಯಸಿಂಹನು ಅಪ್ಪಾ ಮಗೂ! ಆ ಸೀಸೆಗಳಲ್ಲಿ ಅನೇಕ ವಿಷಗಳಿರುವುವು; ಅವನ್ನು ಮುಟ್ಟಬೇಡ ಎನ್ನಲು ತಾಯಿಯು ಗಾಬರಿಯಿಂದೆದ್ದು ಮಗನನ್ನು ಕರೆದುಕೊಂಡು ಬಂದಳು.

ಸ್ವಾಮೀ! ತಾವಿಲ್ಲಿಯೇ ವಾಸವಾಗಿರುವಿರೋ?

ಇದು ನನ್ನ ಮನೆಯಾದರೂ ನಾನು ಇಲ್ಲಿ ಯಾವಾಗಲೂ ವಾಸವಾಗಿಲ್ಲ; ಆಗಾಗ ಇಲ್ಲಿಗೆ ಬರುವ್ರದುಂಟು.

ಬಂಡಿಯು ಸಿದ್ಧವಾಗಿದೆಯೆಂದು ವಾಮನಭಟ್ಟನು ಬಂದು ತಿಳಿಸಿದನು. ಆವ ನನ್ನು ನೋಡುತ್ತಲೆ ತಾಯಿಯು ಮಗನನ್ನು ನೋಡಿ ಮಗೂ! ಇವನೀಗ ನಿನ್ನನ್ನು ಕಾಪಿಟ್ಟವನು; ಇವನಿಗೆ ವಂದನೆಮಾಡಪ್ಪ ಎಂದು ಮುದ್ದಿಸಿದಳು.

ಊಹೂಂ, ನಾನೊಲ್ಲೆ, ಅವನು ಕುರೂಪಿ ಎಂದು ಮಗುವು ಎನ್ನುತ್ತಲೆ ತಾಯಿಯು ಅದನ್ನು ಶಿಕ್ಷಿಸುವುದಕ್ಕೆ ಬದಲಾಗಿ ಮುದ್ದಿಸಿ ಮಲಯಸಿಂಹನ ಜತೆಯಲ್ಲಿ ಮಹಡಿಯಿಂದಿಳಿದು ಬಂಡಿಯು ಸನಿಹಾಪದಲ್ಲಿ ನಿಂತು, ಬಂಡಿಗೆ ಆದೇ ಕುದುರೆಗಳನ್ನು ಕಟ್ಟಿರುವುದನ್ನು ಕಂಡು ಸ್ವಾಮೀ! ಈ ಕೆಟ್ಟ ಕುದುರೆಗಳನ್ನು ಕಟ್ಟಿರುವ ಬಂಡಿಯಲ್ಲಿ ಕುಳಿತುಕೊಳ್ಳುವುದಕ್ಕೆ ನನಗೆ ದಿಗಿಲಾಗುತ್ತದೆ ಎಂದಳು.

ಅಮ್ಮಾ! ನೀವು ಹೆದರಬೇಡಿ, ವಾಮನಭಟ್ಟನು ಹೇಳಿದಂತೆ ಈ ಕುದುರೆಗಳು ಕೇಳುವುವು ಎಂದು ಮಲಯಸಿಂಹನು ಧೈರ್ಯವನ್ನು ಹೇಳಲು, ನಾಗಮಣಿಯು ಮಗುವನ್ನೆತ್ತಿಕೊಂಡು ಬಂಡಿಯಲ್ಲಿ ಕುಳಿತಳು. ವಾಮನಭಟ್ಟನು ಕುದುರೆಗಳ ಮೈಮ್ಲೆ ಆವುದೋ ಬಂದು ದ್ರಾವಕವನ್ನು ಸವರಿ ಬಂಡಿಯು ಮೇಲೆ ಹತ್ತಿ ಕಡಿವಾಳವನ್ನು ಹಿಡಿದು ಚಾಟಿಯಿಂದ ಹೊಡೆದ ಹೊರತು ಕುದುರೆಗಳು ಮುಂದೆ ಹಜ್ಜೆಯನ್ನೇ ಇಡ

ಲಿಲ್ಲ. ಅವುಗಳ ಸೇಗವು ಮೊದಲು ಇದ್ದುದರಲ್ಲಿ ನೂರರಲ್ಲಿ ಒಂದು ಪಾಲೂ ಇರ ಲಿಲ್ಲ. ಬೀದಿಯವರೆಲ್ಲರೂ ಅತ್ಯುತ್ತಮವಾದ ಈ ಅರಬ್ಬಿಯ ಕುದುರೆಗಳು ಇದೇಕೆ ಹೀಗೆ ಕತ್ತೆಗಳಂತಾದುವು ಎಂದುಕೊಂಡು ಹೋಗುತ್ತಲಿದ್ದರು.

ಮನೆಯನ್ನು ಸೇರಿದ ಕೂಡಲೇ ನಾಗಮಣಿಯು ತನ್ನ ಗೆಳತಿ ಭಾಮಿನಿಗೆ ಒಂದು ಲೇಖನವನ್ನು ಬರೆದು ಕಳುಹಿಸಿಕೊಟ್ಟಳು. ಆ ಲೇಖನವು ಈ ತೆರದಿಂದಿದ್ದಿತು :—

ಪ್ರಿಯ ಸಖಿಯೇ! ಇಂದು ನಿನ್ನ ಕುದುರೆಗಳ ದೆಸೆಯಿಂದ ನನಗೆ ಒಂದು ದೊಡ್ಡ ವಿಪತ್ತುಂಟಾಗಿ ನಾನೂ ನನ್ನ ಮುದ್ದು ಕಂದನೂ ಸಾಯುವುದರಲ್ಲಿದ್ದೆವು. ದೈವಾಧೀನ ದಿಂದ ರಾಜಾಮಲಯಸಿಂಹನು ಆ ವೇಳೆಗೆ ಒಂದು ನಮ್ಮನ್ನು ಕಾಪಿಟ್ಟನು.

ನೆನ್ನೆಯ ದಿನ ನೀನು ಅವನನ್ನು ಸ್ತೋತ್ರಮಾಡುತ್ತಲಿದ್ದರೆ ಇದೇಕೆ ಹೀಗೆ ನೀನು ಅವನನ್ನು ಮಿತಿಮೀರಿ ಸ್ತೋತ್ರಮಾಡುತ್ತಲಿದ್ದೀಯೆ ಎಂದು ನಾನು ಗೇಲಿ ಮಾಡಿದೆನು. ಅವನನ್ನು ಸಾಕ್ಷಾತ್ತಾಗಿ ನೋಡಿದ ಮೇಲೆ ನೀನು ಮಾಡಿದ ಸ್ತೋತ್ರವು ಏನೂ ಅತಿಶಯೋಕ್ತಿಯಲ್ಲವೆಂದೇ ತೋರುತ್ತಲಿದೆ. ನಿನ್ನ ಕುದುರೆಗಳ ದೆಸೆಯಿಂದಲೇ ನನಗೆ ಆ ಪ್ರಖ್ಯಾತಪುರುಷನ ಪರಿಚಯವಾಯಿತು. ಅವನ ವಿಚಾರವನ್ನು ಕೂಲಂ ಕಷವಾಗಿ ತಿಳಿಯಬೇಕೆಂಬ ಕುತೂಹಲವು ನನಗೆ ಉಂಟಾಗಿದೆ. ನೀನು ಆವುದಾದರೂ ಒಂದು ನೆಪದಿಂದ ಆ ರಾಜನನ್ನು ನಿನ್ನ ಮನೆಗೆ ಕರೆಸು ; ನಾನೂ ಬರುತ್ತೇನೆ. ಆಗ ನಾವಿಬ್ಬರೂ ಕಲೆತು ಅವನ ಸಂಗಡ ಮಾತನಾಡಬಹುದು.

ನಮ್ಮ ಯಜಮಾನರನ್ನು ಅವನ ಬಳಿಗೆ ಕಳುಹಿಸುವೆನು. ಅವರು ಅಲ್ಲಿಗೆ ಹೋದರೆ ಅವನು ಬಂದಾವೃತ್ತಿಯಾದರೂ ನಮ್ಮ ಮನೆಗೆ ಬಾರದೆ ಇರನು. ಆಗ ನಿನ್ನನ್ನೂ ಕರೆಸುವೆನು. ನಿನ್ನ ಬಂಡಿಯು ಶಿಥಿಲವಾಗಿದೆ; ಅದನ್ನು ಸರಿಪಡಿಸಿ ಕಳುಹಿಸಿ ಕೊಡುವೆನು.

ಇತಿ,

ನಿನ್ನ ಪ್ರಿಯ ಸಖಿ ನಾಗಮಣಿ.

ಮೂವತ್ತನಾಲ್ಕನೆಯ ಅಧ್ಯಾಯ

ದಾರ್ಶನಿಕ ಶಾಸ್ತ್ರ

ಮಲಯಸಿಂಹನು ಅಮರಪುರದಲ್ಲೇ ಬಹುಕಾಲ ವಾಸವಾಗಿದ್ದು ಅಲ್ಲಿಯ ದೊಡ್ಡವರ ನಡತೆಗಳನ್ನು ಚೆನ್ನಾಗಿ ಅರಿತಿದ್ದರೆ ವಲ್ಲಭದೇವನ ಆಗಮನದಿಂದ ತನಗುಂಟಾದ ಗೌರವವಿಶೇಷವು ಅವನಿಗೆ ಪರಿಷ್ಕಾರವಾಗಿ ಗೊತ್ತಾಗುತ್ತಲಿದ್ದಿತು. ರಾಜಾಸ್ಥಾನದಲ್ಲಿ ಗೌರವವನ್ನು ಸಂಪಾದಿಸಿ, ಜನರಲ್ಲಿ ಬುದ್ಧಿಮಂತನೆಂದೆಣಿಸಲ್ಪಟ್ಟು, ವಲ್ಲಭದೇವನು ಅವಾಗಲೂ ತನ್ನ ಮೇಲುಪಟ್ಟವರ ಜಕೆಯಲ್ಲಿಯೇ ಸ್ನೇಹವನ್ನು ಒಳೆಸುತ್ತಲಿದ್ದನು. ನಾವೇ ನಮ್ಮನ್ನು ಗೌರವಿಸಿಕೊಳ್ಳದಿದ್ದರೆ ಇತರರು ಹೇಗೆ ತಾನೇ ನಮ್ಮನ್ನು ಗೌರವಿಸಾರು ಎಂದು ಆತನು ತಿಳಿದುಕೊಂಡು, ತನ್ನ ಮಿತ್ರರಿಗೆ ರಕ್ಷಕನಾಗಿಯೂ ಶತ್ರುಗಳಿಗೆ ಶಿಕ್ಷಕನಾಗಿಯೂ ಉದಾಸೀನರಿಗೆ ನ್ಯಾಯಸ್ತಂಭನಾಗಿಯೂ ಇದ್ದನು.

ಇಂಥ ಪ್ರಸಿದ್ಧನ್ಯಾಯಾಧಿಕಾರಿಯು ಬಂಡಿಯು ಮಲಯಸಿಂಹನ ಮನೆಯ ಮುಂದೆ ಬಂದು ನಿಂತಿತು. ಅವನು ಬರುವನೆಂಬುದನ್ನು ತಿಳಿದು ಮಲಯಸಿಂಹನು ಒಂದು ಭೂಪಟವನ್ನು ಕೈಯ್ಯಲ್ಲಿಟ್ಟುಕೊಂಡು ನೋಡುತ್ತಲಿದ್ದನು. ವಲ್ಲಭದೇವನು ನ್ಯಾಯಸ್ಥಾನವನ್ನು ಪ್ರವೇಶಮಾಡುವಂತೆ ಗಾಂಭೀರ್ಯವನ್ನು ತಾಳಿ ರಾಜನ ಮನೆಯೊಳಗೆ ಪ್ರವೇಶಮಾಡಿದನು.

ವಲ್ಲಭದೇವನ ಮುಖದಲ್ಲಿ ಮುಪ್ಪಿನ ಗುರುತುಗಳು ತಲೆಹಾಕುತ್ತಲಿದ್ದುವು. ಆದರೂ ಹಿಂದೆ ನಾವು ಮಲಯಪಟ್ಟಣದಲ್ಲಿ ಅವನನ್ನು ನೋಡಿದಾಗ ಹೇಗೆ ಇದ್ದನೋ ಹಾಗೆಯೇ ಇದ್ದನು. ಮಲಯಸಿಂಹನು ತನ್ನ ಮನೋಭಾವವನ್ನು ಮುಖದಿಂದ ಇತರರಿಗೆ ಎಳ್ಳಷ್ಟಾದರೂ ತೋರ್ಪಡಿಸದಿರುವ ಶಕ್ತಿಯುಳ್ಳವನಾಗಿದ್ದರೂ, ವಲ್ಲಭದೇವನು ಇದಿರಿಗೆ ಬಂದು ನಿಂತು ನಮಸ್ಕಾರ ಮಾಡಲು, ಅವನನ್ನು ಪರಿಶೋಧಿಸಬೇಕೆಂಬ ತನಗಿದ್ದ ಕುತೂಹಲವನ್ನು ಸ್ವಲ್ಪ ವ್ಯಕ್ತಪಡಿಸಿ, ಹೃದಯವನ್ನು ಭೇದಿಸಿ ಅವರ ವ್ಯಾಪಾರವನ್ನು ತಿಳಿಯಲಾಸಕ್ತಿಯುಳ್ಳವನಂತೆ ಅವನ ಮುಖವನ್ನೇ ನೋಡ ತೊಡಗಿದನು. ವಲ್ಲಭದೇವನೋ, ಮಲಯಸಿಂಹನ ಮುಖವನ್ನು ನೋಡಿದ ಕೂಡಲೇ ಇವನು ಪ್ರಖ್ಯಾತಪುರುಷನಾಗಿದ್ದರೂ ದೇಶಸಂಚಾರಮಾಡುತ್ತ ಸಾಹಸಕಾರ್ಯಗಳಲ್ಲಿ

ಉದ್ಯುಕ್ತನಾದವನಾಗಿಯೋ, ಅಥವಾ ಬಂದಿಶಾಲೆಯಿಂದ ತಪ್ಪಿಸಿಕೊಂಡು ಬಂದ ಸೆರೆಯಾಳಾಗಿಯೋ ಇರಬೇಕಲ್ಲದೆ ಎಷ್ಟು ಮಾತ್ರವೂ ರಾಜನು ಬೇರೆ ಅಲ್ಲನೆಂದು ನಿಶ್ಚಯಿಸಿಕೊಂಡು, ಅವನನ್ನು ರಾಜನೆಂದು ಕರೆಯಲು ಇಷ್ಟವಿಲ್ಲದೆ ಮಲಯಸಿಂಹರೇ! ನನ್ನ ಹೆಂಡತಿ ಮಕ್ಕಳಿಗೆ ನೀವು ಇಂದು ಮಾಡಿದ ಉಪಕಾರಕ್ಕಾಗಿ ನಿಮ್ಮನ್ನು ಕಂಡು ವಂದಿಸುವುದು ನನ್ನ ಕರ್ತವ್ಯವೆಂದು ನಿಮ್ಮ ಮನೆಗೆ ಬಂದೆನು ಎಂದನು.

ಅದಕ್ಕೆ ಮಲಯಸಿಂಹನು ನಸುನಗುತ್ತ ಈ ಅಲ್ಪ ಕಾರ್ಯಕ್ಕಾಗಿ ತಾವೂ ಇಷ್ಟು ದೂರ ಬರಬೇಕೇ? ವಿಶೇಷಗೌರವಸ್ಥರಾದುದರಿಂದ ತಾವು ಅರಮನೆಗೆ ಕೂಡ ಹೋಗುವುದಿಲ್ಲ ಎಂದು ಕೇಳಿದ್ದೇನೆ. ಹೀಗಿರುವಲ್ಲಿ ಈ ನನ್ನ ಮನೆಗೆ ತಾವು ಬಿಜಯ ಮಾಡಿಸಿದುದರಿಂದ ನನಗೆ ವಿಶೇಷಗೌರವವನ್ನು ತೋರಿಸೋಣವಾಯಿತು. ತಂದೆಗಿಂತ ತಾಯಿಗೆ ಮಕ್ಕಳಲ್ಲಿ ಹೆಚ್ಚು ವಾತ್ಸಲ್ಯವೆಂಬುದು ತಮಗೆ ತಿಳಿಯದ ಸಂಗತಿಯಲ್ಲ. ಸನ್ನಿಹಿತವಾಗಿದ್ದ ವಿಪತ್ತನ್ನು ತಪ್ಪಿಸಿ ತಾಯಿಮಕ್ಕಳಿಬ್ಬರನ್ನೂ ಸುರಕ್ಷಿತರನ್ನಾಗಿ ಮನೆಗೆ ಸೇರಿಸಿದ ಸಂತೋಷಕ್ಕಿಂತಲೂ ತಮ್ಮ ಅಗಮನದಿಂದುಂಟಾದ ಗೌರವವು ಹೆಚ್ಚೆಂದು ತೋರುವುದಿಲ್ಲವೆನ್ನಲು, ವಾಗಸ್ತ್ರಪ್ರಯೋಗದಲ್ಲಿ ತಾನೇ ನಿಪುಣನೆಂದೆಣಿಸಿಕೊಂಡಿದ್ದ ವಲ್ಲಭದೇವನು ಆಶ್ಚರ್ಯಪಟ್ಟು ಈ ಅಸ್ತ್ರಗಳು ನನ್ನ ಕಬ್ಬಿಣದ ಕವಚವನ್ನೂ ಭೇದಿಸಿ ಮನಸ್ಸನ್ನು ಇರಿಯುತ್ತಲಿವೆ. ಇವನು ಹೀಗೆ ಮಾತನಾಡುವನೆಂದು ನಾನು ಕನಸಿನಲ್ಲಿಯೂ ಕಂಡಿರಲಿಲ್ಲ ಎಂದು ತನ್ನೊಳು ತಾನೇ ಹೇಳಿಕೊಂಡು ಪ್ರಸ್ತಾಪವನ್ನು ಬದಲಾಯಿಸಲೋಸುಗ ಸುತ್ತಮುತ್ತ ನೋಡಿ, ಮಲಯಸಿಂಹನು ಹಿಡಿದಿದ್ದ ಭೂಪಟವನ್ನು ಕಂಡು ಓಹೋ! ನೀವು ಭೂಗೋಳಶಾಸ್ತ್ರವನ್ನು ಅಭ್ಯಸಿಸುವಂತೆ ತೋರುತ್ತಲಿದೆ. ನೀವು ಲೋಕಸಂಚಾರಿಗಳಲ್ಲವೇ? ಆದುದರಿಂದಲೇ ಆ ಶಾಸ್ತ್ರದ ಪರಿಚಯವು ನಿಮಗೆ ಅತ್ಯವಶ್ಯಕ ಎಂದನು.

ಕ್ಷಮಿಸಬೇಕು. ಇದು ಭೂಗೋಳಶಾಸ್ತ್ರವಲ್ಲ; ಇದನ್ನು ಅಧ್ಯಾತ್ಮಿಕಶಾಸ್ತ್ರವೆಂದು ಹೇಳುತ್ತಾರೆ. ತಮ್ಮಂಥಾ ನ್ಯಾಯಾಧಿಪತಿಗಳು ಆಯಾಯ ದೇಶದಲ್ಲಿರುವ ಪ್ರತಿಯೊಬ್ಬ ಮನುಷ್ಯನೆನ್ನೂ ಪ್ರತಿನಿತ್ಯವೂ ಪರೀಕ್ಷಿಸಿ ಆಯಾಯ ದೇಶದ ಜನರ ವಿಷಯವಾಗಿ ಕೆಲ್ಲಿಸುವುದನ್ನು ನಾನು ಮನುಷ್ಯಜಾತಿಯಿಂದ ಪ್ರಾರಂಭಿಸಿ ಪ್ರತಿಯೊಂದು ದೇಶದ ಪ್ರತಿಯೊಬ್ಬನ ವಿಷಯವಾಗಿಯೂ ಕಲ್ಪಿಸುತ್ತೇನೆ. ಆರೋಹಣಕ್ರಮಕ್ಕಿಂತ ಅವ

ರೋಹಣಕ್ರಮದಲ್ಲಿ ಪ್ರಮಾದವು ಕಡಮೆಯೆಂಬುದು ತಮಗೆ ತಿಳಿದಿರಬಹುದು ಎಂದು ಹೇಳಿ ಓಹೋ! ತಾವು ನಿಂತೇ ಇದ್ದೀರಿ ಎಂದು ಸಮೀಪದಲ್ಲಿದ್ದ ಕುರ್ಚಿಯನ್ನು ತೋರಿಸಲು ವಲ್ಲಭದೇವನು ಅದರಲ್ಲಿ ಕುಳಿತನು.

ಅಯ್ಯಾ ಮಲಯಸಿಂಹರೇ! ಮಾಡುವುದಕ್ಕೆ ಬೇರೇ ಕೆಲಸವಿಲ್ಲದಿದ್ದರೆ ಈ ಶಾಸನವನ್ನು ಓದುತ್ತ ವಿನೋದವಾಗಿ ಹೊತ್ತು ಹೋಗಿಸಬಹುದು.

ಬ್ರಹ್ಮನ ನೇತ್ರದಿಂದ ನೋಡಿದರೆ ಮನುಷ್ಯನು ಒಂದು ಕೀಟವು; ಈ ಕೀಟದ ಮರ್ಮವನ್ನು ತಿಳಿದು ಅದರ ಜನ್ಮವು ಸಾರ್ಥಕವಾಗುವಂತೆ ಮಾಡುವುದಕ್ಕಿಂತ ಬೇರೇ ಕೆಲಸವಾವುದುಂಟು? ನನಗೆ ಬೇರೆ ಕೆಲಸವಿಲ್ಲದಿದ್ದುದರಿಂದ ಇದನ್ನು ಓದುತ್ತೇನೆಂದು ನೀವು ಹೇಳುವಂತೆ ಅಭಿಪ್ರಾಯವಾಗುವುದು. ಹಾಗೆಯೇ ನೋಡಿದರೆ, ನಿಜವಾಗಿಯೂ ನಿಮಗೇನು ಕೆಲಸವಿದೆ? ನೀವು ಮಾಡುವುದನ್ನು ಕೆಲಸವೆಂದು ಹೇಳಬಹುದೋ? ನೀವೇ ಯೋಚಿಸಿ ನೋಡಿ ಎನ್ನಲು, ಮಲಯಸಿಂಹನ ಮಾತಿಗೆ ವಲ್ಲಭದೇವನು, ಇದು ವರೆಗೆ ಈ ರೀತಿ ಮಾತಿನಲ್ಲಿ ನನ್ನನ್ನು ಸೋಲಿಸಿದವರಾರೂ ಇಲ್ಲ; ಇವನೊಬ್ಬ ಅಸಾಧ್ಯ ಎಂದು ಯೋಚಿಸಿ, ಅಯ್ಯಾ! ನೀವು ಪೂರ್ವದೇಶಗಳಲ್ಲಿಯೇ ಓಡಾಡುತ್ತಲಿರುವುದರಿಂದ ಇಲ್ಲಿಯ ನ್ಯಾಯಕ್ರಮವನ್ನೇ ಆಗಲಿ ನ್ಯಾಯಾಧಿಪತಿಗಳ ಕೆಲಸವನ್ನೇ ಆಗಲಿ ಅರಿಯಿರಿ ಎಂದನು.

ನಾನು ಎಲ್ಲಾ ದೇಶದ ನ್ಯಾಯಕ್ರಮಗಳನ್ನೂ ನ್ಯಾಯಾಧಿಪತಿಗಳ ಕೃತ್ಯಗಳನ್ನೂ ಬಲ್ಲೆನು. ಅಷ್ಟೇ ಅಲ್ಲದೆ ಅವುಗಳನ್ನು ಬಂದಕ್ಕೊಂದು ಹೋಲಿಸಿ ಒಂದು ಸಿದ್ಧಾಂತಮಾಡಿ ಇಟ್ಟುಕೊಂಡಿರುವೆನು.

ಅದೇನು ಸಿದ್ಧಾಂತ?

ಪೂರ್ವಕಾಲದಲ್ಲಿದ್ದ ಮುಯ್ಯಿಗೆ ಮುಯ್ಯಿ ಎಂಬ ನ್ಯಾಯವೇ ಸರಿಯೆಂಬುದು.

ಈ ನ್ಯಾಯವನ್ನಿಟ್ಟುಕೊಂಡರೆ ಧರ್ಮಶಾಸ್ತ್ರವೂ ಬೇಡ, ನ್ಯಾಯಾಧಿಪತಿಗಳೂ ಬೇಡ.

ಇದ್ದು ತಾನೇ ಏನು ಪ್ರಯೋಜನ? ಅವನಾದರೂ ಒಬ್ಬ ನ್ಯಾಯಾಧಿಪನು ದ್ವೇಷಾಸೂಯೆಗಳಿಂದಲೋ ಮಹತ್ವಾಕಾಕ್ಷೆಯಿಂದಲೋ ಸುಳ್ಳು ಕಾಗದ ಪತ್ರಗಳನ್ನು ಹವಣಿಸಿಕೊಂಡು ನಿರಪರಾಧಿಯಾದವನೊಬ್ಬನನ್ನು ಶಿಕ್ಷಿಸಿದರೆ, ಆಗ ನ್ಯಾಯವೆಲ್ಲಿಯದು?

ಧರ್ಮಶಾಸ್ತ್ರವಿದ್ದೇನು? ನ್ಯಾಯಾಧಿಪರಿದ್ದೇನು? ಮುಂದೆ ಹೋಗುತ್ತ ಹೋಗುತ್ತ ತಾವು ಹೇಳಿದಂತೆಯೇ ಆಗಿ ನನ್ನ ಸಿದ್ಧಾಂತವೇ ಸರಿಯೆಂದಾಗುವುದು.

ಅಲ್ಲಿಯ ವರೆಗೆ ಈ ದೇಶದ ಧರ್ಮಶಾಸ್ತ್ರದಂತೆ ಇಲ್ಲಿ ಶಿಕ್ಷೆರಕ್ಷೆಗಳು ನಡೆಯುವುವು. ನಾನಾದೇಶದ ಧರ್ಮಶಾಸ್ತ್ರಗಳನ್ನು ಕಲಿಯುವುದರಲ್ಲಿ ನಿಮ್ಮ ಉದ್ದೇಶ್ಯವೇನು ಎಂದು ವಲ್ಲಭದೇವನು ಕೇಳಲು, ಮಲಯಸಿಂಹನು ಸ್ವಲ್ಪ ನಕ್ಕು ಎಷ್ಟು ದೊಡ್ಡವರಾದರೇನು? ಎಷ್ಟು ವಿದ್ಯಾವಂತರಾದರೇನು? ಅವರವರ ಸ್ವಭಾವಗಳು ಎಂದೂ ತಲೆಯೆತ್ತದಿರವು. ತಾತ್ಕಾಲಿಕವಾದ ಭೌತಿಕಪ್ರಯೋಜನದಿಂದ ಕಾರ್ಯಗಳ ಫಲಗಳನ್ನು ನಿರ್ಣಯಿಸುವುದು ತಪ್ಪೆಂಬುವುದು ತಮ್ಮಂಥಾ ಪ್ರಾಜ್ಞರಿಗೆ ತಿಳಿಯದಿರುವುದು ಆತ್ಯಾಶ್ಚರ್ಯವೇ ಸರಿ ಎಂದನು.

ನಿಮ್ಮ ಅಭಿಪ್ರಾಯವು ನನಗೆ ಗೊತ್ತಾಗಲಿಲ್ಲ.

ಹಾಗಾದರೆ ಹೇಳುತ್ತೇನೆ ಕೇಳಿ. ಈ ಪ್ರಪಂಚವು ಒಂದು ದೊಡ್ಡ ಯಂತ್ರ; ಇದರಲ್ಲಿ ಆವುದೋ ಒಂದು ಭಾಗವನ್ನು ನೋಡಿ, ಅದು ಯಂತ್ರದಲ್ಲಿ ಒಂದು ಭಾಗವೆಂಬುದನ್ನೂ, ಆ ಯಂತ್ರಕ್ಕೆ ಇತರ ಭಾಗಗಳು ಉಂಟೆಂಬುದನ್ನೂ, ಆ ಯಂತ್ರವನ್ನು ನಡೆಸುವ ಪರಮಪುರುಷನೊಬ್ಬನು ಪ್ರತ್ಯೇಕವಿರುವನೆಂಬುದನ್ನೂ ಮರೆತು, ಅವನ ಅನುಗ್ರಹಕ್ಕೆ ಪಾತ್ರವಾಗಲು ಮಾಡಬೇಕಾದುದನ್ನು ಮಾಡದೆ, ಇಹಲೋಕವ್ಯಾಪಾರವೇ ದೊಡ್ಡದೆಂತಲೂ ಮೇಲುಪಟ್ಟ ಅಧಿಕಾರಿಗಳೇ ಪರದೇವತೆಗಳೆಂತಲೂ ಭಾವಿಸಿ, ಇದಿರಿಗಿರುವವರು ಆರೆಂಬುದನ್ನೇ ತಿಳಿಯದೆ ಮೂಢರಾಗಿರುವಿರಿ; ದುಷ್ಟರನ್ನು ನಿಗ್ರಹಿಸಿ ಶಿಷ್ಟರನ್ನು ಪರಿಪಾಲಿಸಲೋಸುಗ ದೇವರು ಅಲ್ಲಲ್ಲಿ ಮಹಾಪುರುಷರನ್ನು ನಿರ್ಮಿಸಿರುವನೆಂಬುದನ್ನೂ, ಅಯ್ಯೋ ಪಾಪ! ನೀವು ಕಾಣಿರಿ.

ಹಾಗಾದರೆ ತಾವು ಅಂತಹ ಮಹಾಪುರುಷರೋ?

ಏಕೆ ಆಗಬಾರದು?

ನಾನಿಲ್ಲಿಗೆ ಬರುವಾಗ ಇದು ನನಗೆ ತಿಳಿದಿರಲಿಲ್ಲ. ಕ್ಷಮಿಸಬೇಕು.

ಬಹುಕಾಲದಿಂದ ನ್ಯಾಯಾಧಿಪತಿಯಾಗಿದ್ದು ಪ್ರಜ್ಞಾಶಾಲಿಗಳೆಂದು ಹೆಸರನ್ನು ಪಡೆದು ಇದಿರಿಗೆ ಇಂಥಾವರಿರುವರೆಂಬುದನ್ನೇ ತಿಳಿಯುದ್ದರೆ, ನಾನು ಏನ ಹೇಳಲಿ?

ಅಯ್ಯಾ! ನಿಮ್ಮಂತೆ ವಾದಿಸುವರನ್ನು ಇದುವರೆಗೆ ನಾನೆಲ್ಲಿಯೂ ನೋಡಲಿಲ್ಲ; ನಿಮ್ಮನ್ನು ಸೋಲಿಸಲು ನನ್ನಿಂದಾಗದು.

ಇದರ ಕಾರಣ ತಮಗೆ ತಿಳಿಯುವುದೋ?

ಇಲ್ಲ.

ನೀವು ಆವಾಗಲೂ ಅಧಿಕಾರವೇ ಪ್ರಧಾನ, ಮೇಲಿನ ಅಧಿಕಾರಿಗಳೇ ಪರದೇವತೆಗಳು ಎಂದು ಇರುವಿರಿ. ಪಾಪಿಷ್ಠರಿಗೆ ಕಾಣಿಸಿಕೊಳ್ಳದೆ ಪುಣ್ಯಭೂಮಿಗಳಲ್ಲಿ ನೆಲೆಗೊಂಡಿರುವ ಮಹಾತ್ಮರ ಪಾದಗಳನ್ನು ಆಶ್ರಯಿಸದೆ ಇರುವುದೇ ಇದಕ್ಕೆ ಕಾರಣ.

ಅಂತಹ ಮಹಾತ್ಮರೂ ಇರುವರೆಂದು ನೀವು ನಂಬುವಿರೋ?

ಕಣ್ಣಿಗೆ ಕಾಣದಿದ್ದರೂ ಗಾಳಿಯನ್ನು ಇಲ್ಲವೆಂದು ಹೇಳಲಾದೀತೋ. ಅದಿಲ್ಲದಿದ್ದರೆ ನಾವು ಒಂದು ನಿಮಿಷವಾಗಲಿ ಬದುಕಲಾಪೆವೋ?

ಹಾಗಾದರೆ ಅಂತಹ ಮಹಾತ್ಮರನ್ನು ಕಾಣುವುದು ಅಸಾಧ್ಯ. ಅಸಾಧ್ಯವಾದುದನ್ನು ಕಾಣಲು ಪ್ರಯತ್ನಮಾಡಿದರೇನು ಪ್ರಯೋಜನ?

ಹಾಗೆನ್ನಬೇಡಿ. ನೀವು ಪ್ರಯತ್ನಮಾಡಿದರೆ ದೈವಾನುಗ್ರಹವುಂಟಾಗಿ ಮಹಾತ್ಮರು ಗೋಚರವಾಗುವರು. ದೈವಾನುಗ್ರಹವಿಲ್ಲದಿದ್ದರೆ ಅವರು ನಿಮ್ಮ ಸಂಗಡ ಓಡಾಡುತ್ತ ಮಾತನಾಡುತ್ತಲಿದ್ದರೂ ನಿಮಗೆ ಅವರಾರೆಂಬುದು ತಿಳಿಯುವಾಗದು; ಅಥವಾ ಇವರೇ ಎಂದು ತೋರಿಸಿ ಕೊಟ್ಟರೂ ನಂಬಲಾರಿರಿ.

ಅಂಥವರಾರಾದರೂ ಇದ್ದರೆ ಮೊದಲು ತಿಳಿಸಿರಿ; ಅವರು ನನ್ನಿದಿರಿಗೆ ಬಂದು ನಿಲ್ಲಲ್ಲಿ; ಅವರನ್ನು ನೋಡುವೆನು.

ಇದನ್ನು ನಾನು ಮೊದಲೇ ನಿಮಗೆ ಸೂಚಿಸಿದ್ದೇನೆ. ಈಗಲೂ ಸೂಚನೆ ಕೊಡುತ್ತೇನೆ.

ನೀವು ಹೇಳುವುದನ್ನು ಕೇಳಿದರೆ ನೀವೂ ಒಬ್ಬ ಮಹಾಪುರುಷರೆಂದು ತೋರುತ್ತಲಿದೆ.

ಹಾಗೆಯೇ ತಿಳಿದುಕೊಳ್ಳಿರಿ. ಇದುವರೆಗೆ ನನ್ನ ಸ್ಥಿತಿಗೆ ಅರೂ ಬಂದಿಲ್ಲ. ರಾಜ್ಯಕ್ಕೆ ನದಿ, ಸಮುದ್ರ, ಪರ್ವತ ಮುಂತಾದ ಎಲ್ಲೆಗಳುಂಟು. ಈ ಭೂಮಂಡಲವೇ ನನ್ನ ರಾಜ್ಯ; ಇದರ ಎಲ್ಲೆಗಳೇ ನನ ರಾಜ್ಯದ ಎಲ್ಲೆಗಳು. ನಾನು ಎಲ್ಲಾ ದೇಶಭಾಷೆಗಳನ್ನೂ

ಕಲಿತು ಅಯಾಯ ದೇಶದವರಂತೆ ಮಾತನಾಡುತ್ತೇನೆ. ಆದುದರಿಂದ ಆಯಾಯ ದೇಶದವರು ನನ್ನನ್ನು ತಮ್ಮ ತಮ್ಮ ದೇಶಕ್ಕೆ ಸೇರಿದವನೆಂದು ಹೇಳುತ್ತಾರೆ. ನಾನು ಇಂತಹ ದೇಶದವನೆಂದು ಆರೂ ಆರಿಯರು; ನನ್ನ ಜನನಭೂಮಿಯಿದು ಎಂದು ಆರಿಗೂ ಗೊತ್ತಿಲ್ಲ; ಮರಣಭೂಮಿಯಾವುದೋ ದೇವರೇ ಬಲ್ಲ. ನಾನು ಆವ ದೇಶಕ್ಕೂ ಸೇರದೆ ಸರ್ವತ್ರ ವಸಿಸುವೆನು. ಆವ ದೇಶಕ್ಕೂ ಸೇರದೆ ಆವ ರಾಜನ ರಕ್ಷಣೆಗೂ ಒಳಪಡದೆ ಒಬ್ಬ ಮನುಷ್ಯನನ್ನಾದರೂ ಒಡಹುಟ್ಟಿದವನೆಂದು ಭಾವಿಸದೆ ಇರುವುದರಿಂದಲೇ ಬಲಿಷ್ಠರಿಗಿರುವ ವಿಕಲ್ಪಗಳಾಗಲಿ ದುರ್ಬಲರಿಗಿರುವ ವ್ಯಾಘಾತಗಳಾಗಲಿ ಅವುವೂ ನನಗಿಲ್ಲ. ಆದರೆ ನನಗೆ ಕಾಲ ದೇಶಗಳೆಂಬ ಎರಡು ಶತ್ರುಗಳುಂಟು; ಅವುಗಳನ್ನೂ ನನ್ನ ಸಾಹಸದಿಂದ ಜಯಿಸಬಲ್ಲೆನು. ಇವುಗಳೆಲ್ಲಕ್ಕಿಂತಲೂ ಭಯಂಕರವಾದುದು ಮೃತ್ಯು; ಅದನ್ನು ಜಯಿಸಲು ಅಸಾಧ್ಯ. ಆದರೆ ಮೃತ್ಯುವು ನನ್ನ ಬಳಿಗೆ ಬರುವುದರೊಳಗಾಗಿಯೇ ನಾನು ಉದ್ದೇಶಿಸಿರುವ ಕಾರ್ಯಗಳನ್ನು ಮುಗಿಸಿಬಿಡಬೇಕೆಂದಿದ್ದೇನೆ. ಸತ್ತರೆ ಹೊರತು, ನಾನು ಹೀಗೆಯೇ ಆಗಲೂ ನನ್ನ ಕೆಲಸಗಳನ್ನು ನೆರವೇರಿಸುತ್ತಲಿರುವೆನು. ದೊರೆಗಳಿಗೆ ನಿಮ್ಮ ದಾಕ್ಷಿಣ್ಯ ಬೇಕು, ಆದರಲ್ಲಿ ಸಾಧಾರಣರಿಗಂತೂ ಹೇಳಬೇಕೇ. ನನಗಾದರೋ ಒಬ್ಬರ ದಾಕ್ಷಿಣ್ಯವೂ ಅವಶ್ಯಕವಿಲ್ಲ.

ನೀವು ಅಮರದೇಶದಲ್ಲಿ ಕಾಲಿಟ್ಟ ಕೂಡಲೇ ಈ ರಾಜ್ಯದ ಕಟ್ಟಳೆಗಳಿಗೆ ಬದ್ಧರಾಗುತ್ತೀರಿ; ಆದುದರಿಂದ ನಿಮಗೆ ಇಲ್ಲಿಯ ನ್ಯಾಯಾಧಿಪತಿಯ ದಾಕ್ಷಿಣ್ಯವು ಬೇಕೇ ಬೇಕು.

ಅವಶ್ಯಕವಿಲ್ಲ. ನಾನು ಎಲ್ಲಾ ದೇಶದ ನ್ಯಾಯಗಳನ್ನೂ ಓದಿ ಅಯಾಯ ನ್ಯಾಯಾಧಿಪತಿಗಳ ಗುಣ ದೋಷಗಳನ್ನೂ ಕೃತ್ಯಾಕೃತ್ಯಗಳನ್ನೂ ತಿಳಿದಿರುವೆನು. ನನ್ನ ಸಮಾಚಾರವಾವುದನ್ನೂ ಇತರರಿಗೆ ತಿಳಿಸದೆಯೇ ಎಲ್ಲರ ಸಮಾಚಾರವನ್ನೂ ನಾನು ತಿಳಿದುಕೊಳ್ಳಬಲ್ಲೆನು. ಆದುದರಿಂದಲೇ ನಾನು ನಿರ್ಭೀತನಾಗಿಯೂ ಇತರರು ನನ್ನಲ್ಲಿ ಭಯವುಳ್ಳವರಾಗಿಯೂ ಇರುವರು.

ಹಾಗಾದರೆ, ನ್ಯಾಯಾಧಿಪತಿಗಳೆಲ್ಲರೂ ತಪ್ಪಿತಸ್ಥರು; ನೀವು ಒಬ್ಬರು ಮಾತ್ರ ನಿರ್ದೋಷಿಗಳೋ?

ಅವರು ತಪ್ಪಿತಸ್ಥರೋ ಪಾತಕಿಗಳೋ ಆ ಮಾತು ನನಗೇಕೆ? ನಿಮ್ಮ ನ್ಯಾಯ

ವೆಂದರೆ ನನಗೆ ನಿರ್ಭಯ; ನನ್ನ ಜ್ಞಾನದೃಷ್ಟಿಯೆಂದರೆ ನಿಮಗೂ ನಿರ್ಭಯವಾಗಿರ ಬಹುದು. ಈ ಪ್ರಸ್ತಾಪವು ನಿಮ್ಮ ಚಿತ್ತಕ್ಕೆ ಸಮಾಧಾನಕರವಲ್ಲದಿದ್ದಲ್ಲಿ, ಇದನ್ನು ಇಲ್ಲಿಗೇ ನಿಲ್ಲಿಸಿಬಿಡೋಣ.

ನೀವು ಮಾಡುವ ತತ್ವಬೋಧನೆಯು ಜ್ಞಾನೋದಯವನ್ನುಂಟುಮಾಡಿ ನಮ್ಮಂಥ ಮೂಢರನ್ನೂ ಉತ್ಕೃಷ್ಟರನ್ನಾಗಿ ಮಾಡುವುದು. ನೀವು ಸಾಮಾನ್ಯರಲ್ಲ; ಆದರೂ ನಿಮ್ಮ ಅಹಂಕಾರವನ್ನು ನೋಡಿದರೆ ನಿಮ್ಮ ಮೇಲೆ ದೇವರೊಬ್ಬನಿದ್ದಾನೆ ಎಂಬು ದನ್ನು ಮರೆತಿದ್ದೀರೆಂದು ತೋರುತ್ತದೆ.

ನನ್ನ ಮೇಲೆ ಮಾತ್ರವೇ? ನಿಮ್ಮ, ನನ್ನ, ಮತ್ತು ಈ ಲೋಕದ ಸಮಸ್ತ ಚರಾ ಚರವಸ್ತುಗಳೆಲ್ಲರ ಮೇಲೆಯೂ ಇದ್ದಾನೆ ಎನ್ನಿರಿ ಎಂದು 'ನಿಮ್ಮ' ಎಂಬ ಪದವನ್ನು ಒತ್ತಿ ಹೇಳಿ, ಅಜ್ಞಾತನಾಗಿಯೂ ನಿಷ್ಪ್ರಯೋಜಕನಾಗಿಯೂ ಇದ್ದ ನನ್ನನ್ನು ಈ ಸ್ಥಿತಿಗೆ ತಂದ ಆ ದೇವರನ್ನು ಎಂದಿಗೆ ತಾನೇ ನಾನು ಮರೆತೇನು ಎಂದನು.

ಇದುವರೆಗೆ ಮಲಯಸಿಂಹನನ್ನು ರಾಜನೆಂದು ಕರೆಯದಿದ್ದ ವಲ್ಲಭದೇವನು, ಈಗ ರಾಜನೇ ಎಂದು ಸಂಬೋಧಿಸತೊಡಗಿ ರಾಜನೇ! ನಿಮ್ಮ ಸಲ್ಲಾಪವು ಬಹು ರುಚಿಕರವಾಗಿಯೂ ಆಶ್ಚರ್ಯಕರವಾಗಿಯೂ ಇದೆ. ನೀವು ಆವುದೋ ಒಂದು ಉದ್ದೇಶ ವಿಟ್ಟುಕೊಂಡು ಈ ರೀತಿ ಮಾತನಾಡಿದಂತೆ ತೋರುತ್ತದೆ ಎಂದನು.

ಉದ್ದೇಶವಿಲ್ಲದೆ ಲೋಕದಲ್ಲಿ ಅವನೂ ಅವ ಕೆಲಸವನ್ನೂ ಮಾಡನು. 'ಪ್ರಯೋ ಜನಮನುದ್ದಿಶ್ಯ ನಮಂದೋಪಿ ಪ್ರವರ್ತತೇ' ಎಂದು ಹೇಳುವ ಹಿರಿಯರ ಮಾತನ್ನು ಕೇಳಿ ಅರಿಯಿರಾ. ಒಂದಾನೊಂದು ಕಾಲದಲ್ಲಿ ನಾನು ಘೋರವಾದ ತಪಸ್ಸನ್ನು ಮಾಡಲು ಅದಕ್ಕೆ ಮೆಚ್ಚಿ ಒಬ್ಬ ಮಹಾಪುರುಷನು ಪ್ರತ್ಯಕ್ಷನಾಗಿ ನಿನಗೇನು ಬೇಕು, ಬೇಡು, ಎಂದನು; ಆದಕ್ಕೆ ನಾನು ಸ್ವಾಮೀ! ದೇವರೊಬ್ಬನು ಉಂಟೆಂದು ಎಲ್ಲರೂ ಹೇಳುತ್ತಾರೆ, ಒಂದು ದಿನವಾದರೂ ನಾನು ಅವನನ್ನು ನೋಡಿಲ್ಲ. ಅವನಿರುವುದು ಸತ್ಯವೇ, ಆದರೆ ಲೋಕದಲ್ಲಿ ಏತಕ್ಕೆ ಇಷ್ಟು ಅನ್ಯಾಯಗಳೂ ಪಾತಕಗಳೂ ನಡೆಯುತ್ತಿರುವುವು? ಪಾಪಿಗಳಿಗೆ ಏಕೆ ತಕ್ಕ ಶಿಕ್ಷೆಗಳಾಗುವುದಿಲ್ಲ? ಈ ವಿಷಯವನ್ನು ನನಗೆ ಚೆನ್ನಾಗಿ ಮಂದಟ್ಟಾಗುವಂತೆ ತಿಳಿಸಬೇಕು, ಎಂದು ಪ್ರಾರ್ಥಿಸಿದೆನು. ಆ ಮಹಾ ಪುರುಷನು ಆಪ್ತ! ಪರಮಾತ್ಮನೊಬ್ಬನು ಇರುವುದು ಸತ್ಯ, ಅವನು ದುಷ್ಟರನ್ನು

ನಿಗ್ರಹಿಸುವುದೂ ಸತ್ಯ ; ಜ್ಞಾನಿಗಳಿಗೆ ವಿನಾ ಮತ್ತಾರಿಗೂ ಅವನು ಗೋಚರನಾಗನು. ಸದಾಚಾರ್ಯನನ್ನು ಆಶ್ರಯಿಸಿ ಜ್ಞಾನವನ್ನು ಸಂಪಾದಿಸಿ ನಿರಂತರಭಕ್ತಿಯಿಂದ ದೇವರನ್ನು ಪೂಜಿಸುತ್ತಲಿದ್ದರೆ ಅವನು ಪ್ರತ್ಯಕ್ಷನಾಗುವನು. ಜನರು ತಮ್ಮ ತಮ್ಮ ಪೂರ್ವಾರ್ಜಿತ ಪುಣ್ಯಪಾಪರೂಪವಾದ ಕರ್ಮಾನುಗುಣವಾಗಿ ಸುಖದುಃಖಗಳನ್ನನುಭವಿಸುವರಲ್ಲದೆ ಆ ಪೂರ್ವಜನ್ಮಗಳ ವಾಸನೆಯಿಂದ ಪ್ರೇರಿತರಾಗಿ ಪುಣ್ಯವನ್ನೋ ಪಾಪವನ್ನೋ ಮಾಡಿ ಮುಂದಿನ ಜನ್ಮಕ್ಕಾಗಿ ಸುಖದುಃಖಗಳನ್ನು ಗಳಿಸುತ್ತಲಿರುವರು. ದುಷ್ಕರ್ಮಗಳಿಗೆ ಶಿಕ್ಷೆಯಿಲ್ಲವೆಂದು ಎಂದಿಗೂ ತಿಳಿಯಬೇಡ. ಪೂರ್ವಜನ್ಮಸುಕೃತಾನುಭವಪ್ರಾಪ್ತಿಯಿದ್ದರೆ ಮೊದಲು ಸುಖಾನುಭವವಾಗಿ ಬಳಿಕ ಪಾಪಕ್ಕೆ ಶಿಕ್ಷೆಯು ಆಗುವುದು. ಬೆಂಕಿಯಲ್ಲಿ ಕೈಯಿಟ್ಟರೆ ಎಂದಿಗೂ ಸುಡದಿರದು ಎಂದರು. ಸ್ವಾಮೀ ! ನನ್ನದು ಇನ್ನೊಂದು ಅರಿಕೆ ಇದೆ. ಲೋಕದಲ್ಲಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರಿಗೆ ಅನುಕೂಲಮಾಡುವುದಕ್ಕಿಂತ ಉತ್ತಮವಾದ ಕೆಲಸವಾವುದೂ ಇಲ್ಲವೆಂದು ಕೇಳಿದ್ದೇನೆ ; ಆದುದರಿಂದ ಆ ಕೆಲಸ ಮಾಡಲು ಶಕ್ತಿಯನ್ನು ತಾವು ನನಗೆ ಕರುಣಿಸಬೇಕು ಎಂದುಪ್ರಾರ್ಥಿಸಲು ಅವರು ' ತಥಾಸ್ತು ' ಎಂದು ಹೇಳಿ ಅಂತರ್ಧಾನರಾದರು.

ಈ ಮಾತನ್ನು ಕೇಳಿ ವಲ್ಲಭದೇವನು ಬೆರಗಾಗಿ ರಾಜರೇ ! ನಿಮಗೆ ಬಂಧುಗಳಾರಾದರೂ ಉಂಟೋ ಎಂದು ಕೇಳಲು ರಾಜನು ಅಹೂ ಇಲ್ಲ ಎಂದನು.

ಹಾಗಾದರೆ ಕಷ್ಟ. " ಕಷ್ಟವೇನು "

ಮೃತ್ಯುವಿಗೆ ವಿನಾ ಇನ್ನಾವುದಕ್ಕೂ ಹೆದರುವುದಿಲ್ಲವೆಂದು ಹೇಳಿದಿರಿ ; ನಾನೊಬ್ಬರನ್ನು ನಿಮಗೆ ತೋರಿಸುವೆನು. ಅವರ ಅವಸ್ಥೆಯನ್ನು ನೀವು ನೋಡಿದರೆ ನಿಮಿಗಿರುವ ಅಹಂಕಾರವು ನಿವೃತ್ತಿಯಾಗುವುದು.

ನಾನು ' ಸತ್ತರೆ ವಿನಾ ಉದ್ದೇಶಿಸಿದ ಕೆಲಸವನ್ನು ಎಂದಿಗೂ ಮಾಡದೆ ಬಿಡೆನು ' ಎಂದು ಹೇಳಿದನೇ ಹೊರತು ಸಾವಿಗೆ ಹೆದರುವೆನೆಂದು ಹೇಳಲಿಲ್ಲ.

ಮೃತ್ಯುವಿಲ್ಲದಿದ್ದರೆ ವಾರ್ಧಿಕ್ಯವಿಲ್ಲವೇ?

ಮುಪ್ಪು ಬರುವುದಕ್ಕೆ ಮುಂದೆಯೇ ನನ್ನ ಕೆಲಸವನ್ನು ಪೂರೈಸಿಕೊಳ್ಳುವ ಏರ್ಪಾಡನ್ನು ಮಾಡಿಕೊಂಡಿದ್ದೇನೆ.

ಹುಚ್ಚು ಹಿಡಿದಿದೋ ?

ಒಂದಾನೊಂದು ಕಾಲದಲ್ಲಿ ಹಿಡಿಯುವ ಸಂದರ್ಭವಿದ್ದು ದೈವಾಧೀನದಿಂದ ತಪ್ಪಿತು. ಇನ್ನು ಆ ಭಯವಿಲ್ಲ.

ರಾಜರೇ! ನಾವು ಭಯಪಡತಕ್ಕದು ಮೃತ್ಯು, ಮುಪ್ಪು, ಹುಚ್ಚು. ಇವುಗಳೇ ಅಲ್ಲ; ವಾತರೋಗವನ್ನು ನೋಡಿ! ಇದು ಇದ್ದಕ್ಕಿದ್ದ ಹಾಗೆ ಬಂದು ಕೈ, ಕಾಲು, ಬುದ್ಧಿಗಳನ್ನು ಸ್ವಾಧೀನ ತಪ್ಪಿಸಿ ಮನುಷ್ಯನನ್ನು ಜೀವಚ್ಛವದಂತೆ ಮಾಡಿಬಿಡುವುದು. ನಿಮಗನುಕೂಲವಿದ್ದಾಗ ನನ್ನ ಮನೆಗೆ ಬಿಜಯಮಾಡಿಸಿದರೆ ನನ್ನ ತಂದೆಯ ಸ್ಥಿತಿಯನ್ನು ತೋರಿಸುವೆನು. ಎಷ್ಟು ದೊಡ್ಡ ಕೆಲಸಗಳನ್ನು ಮಾಡುತ್ತ ದೃಢಾಂಗನಾಗಿದ್ದವನು ಆ ವಾಯುವಿನ ಚೇಷ್ಟೆಯಿಂದ ಒಂದು ನಿಮಿಷದಲ್ಲಿ ಗತಶಕ್ತನಾಗಿ ಆಗ ಹುಟ್ಟಿದ ಕೂಸಿಗಿಂತ ಕಡೆಯಾಗಿರುವನು.

ಇಂತಹ ಅನೇಕ ರೋಗಗಳನ್ನು ನಾನು ನೋಡಿದ್ದೇನೆ; ಅದಕ್ಕಾಗಿಯೇ ಸ್ವಲ್ಪ ಮಟ್ಟಿಗೆ ವೈದ್ಯಶಾಸ್ತ್ರ ರಸಾಯನಶಾಸ್ತ್ರಗಳನ್ನು ಓದಿ ಪರಿಚಯಮಾಡಿಕೊಂಡಿದ್ದೇನೆ. ಅನುಕೂಲವಾದಾಗ ನಿಮ್ಮ ತಂದೆಯನ್ನು ನೋಡಲು ಬರುವೆನು. ಅವರ ಸ್ಥಿತಿಯು ನಿಮಗೆ ಅತಿ ದುಃಖಕರವಾಗಿದ್ದೀತು.

ಅದನ್ನು ಮರೆಯಿಸುವ ಬೇರೆ ಸುಖವಿಲ್ಲದಿದ್ದರೆ ನೀವು ಹೇಳುವಂತೆಯೇ ಅದು ದುಃಖಕರವಾಗಿ ಇರುತ್ತಲಿದ್ದಿತು.

ಅದಾವುದು? "ಎರಡು ರತ್ನಗಳು"

ಇದರಿಂದ ನೀವು ಮಾಡಿಕೊಂಡಿರುವ ಸಿದ್ಧಾಂತವೇನು?

ನನ್ನ ತಂದೆಯು ತನ್ನ ಪಾಪದಿಂದ ದೈವನಿಗ್ರಹಕ್ಕೆ ಪಾತ್ರವಾಗಿ ಅದರ ಫಲವನ್ನು ಭುಜಿಸುತ್ತಲಿದ್ದಾನೆ. ರಾಜರೇ! ಈಗ ಹೊತ್ತಾಯಿತು, ಇನ್ನಾವಾಗಲಾದರೂ ನಿಮಗೆ ವಿರಾಮವಿದ್ದರೆ ಇದೇ ವಿಷಯವನ್ನು ಚರ್ಚಿಸೋಣ. ನಿಮ್ಮ ದರ್ಶನದಿಂದಲೂ ಸಲ್ಲಾಪದಿಂದಲೂ ನಿನ್ನಲ್ಲಿ ನನಗುಂಟಾದ ಗೌರವವನ್ನು ಅಷ್ಟಿಷ್ಟೆಂದು ಹೇಳಲಾರೆ. ನಿಮ್ಮ ಸ್ನೇಹಲಾಭವಾದುದಕ್ಕಾಗಿ ನನ್ನ ಕುಟುಂಬಕ್ಕೆ ಅತ್ಯಾನಂದವಾಯಿತು ಎಂದು ಹೇಳಿ ವಲ್ಲಭದೇವನು ಹೊರಟುಹೋದನು.

ಅವನು ಹೊರಗೆ ಹೋದ ಕೂಡಲೇ ಮಲಯಸಿಂಹನು ನಿಟ್ಟುಸಿರನ್ನು ಬಿಟ್ಟು ಈ ವಿಷವಿಷ್ಟಕ್ಕೇ ಸಾಕು; ಇನ್ನು ವಿಷಹರಚಿಕಿತ್ಸೆಯನ್ನು ಮಾಡೋಣ ಎಂದು

ಕೊಂಡು ವಾಮನಭಟ್ಟನನ್ನು ಕರೆದು ನಾನು ಬರಬಹುದೋ ಎಂದು ಕೋಮಲೆಯನ್ನು ಕೇಳಿಕೊಂಡು ಬಾ. ಒಂದು ಗಂಟೆಗೆ ಸರಿಯಾಗಿ ನನ್ನ ಬಂಡಿಯನ್ನು ಸಿದ್ಧಪಡಿಸು ಎಂದು ಆಜ್ಞಾಪಿಸಿದನು.

ಮೂನತ್ತೈದನೆಯ ಅಧ್ಯಾಯ

ಅಪೂರ್ವಸಂತೋಷ

ಜಯವೀರನು ಮಲಯಸಿಂಹನನ್ನು ತನ್ನ ಮನೆಗೆ ಕರೆದಿದ್ದುದೂ, ಅವನು ಬರುವೆನೆಂದು ಒಪ್ಪಿದುದೂ ನಮ್ಮ ಪಾಠಕರಿಗೆ ಜ್ಞಾಪಕವಿರಬಹುದು. ಅಲ್ಲಿಗೆ ಹೊರಡಬೇಕೆಂಬ ಯೋಚನೆಯು ಹುಟ್ಟಿದಾಗಲೇ ಮಲಯಸಿಂಹನಿಗೆ ಮುಖವಿಕಾಸವಾಗಿ ಜಯವೀರನನ್ನೂ ಅವನ ತಂಗಿ ಮೊದಲಾದವರನ್ನೂ ಕಂಡು ಅವರ ಸಂಗಡ ಮಾತನಾಡುವುದರಿಂದ ಉಂಟಾಗುವ ಸಂತೋಷಾನುಭವವನ್ನು ತನ್ನ ಮನದಲ್ಲಿಯೇ ಮಾಡತೊಡಗಿದನು.

ವಲ್ಲಭದೇವನ ಆಗಮನದಿಂದ ಮಲಯಸಿಂಹನಿಗುಂಟಾದ ಮನಃಕ್ಲೇಶವನು ಹೇಳಲು ಅಸಾಧ್ಯ. ವಿಷವನ್ನು ಕುಡಿದು ತಾಪವನ್ನು ಸಹಿಸಲಾರದೆ ಮದ್ದನ್ನು ಹುಡುಕುವನಂತೆ ಅವನು ಜಯವೀರನ ಮನೆಗೆ ಹೋಗಲು ನಿಶ್ಚಯಿಸಿ, ಮೊದಲು ಮನಸ್ಸನ್ನು ಒಂದು ಸ್ಥಿಮಿತಕ್ಕೆ ತಂದುಕೊಳ್ಳಲು, ಕೋಮಲೆಯು ಸಂಗಡ ಸ್ವಲ್ಪ ಹೊತ್ತು ಮಾತನಾಡೋಣವೆಂದು ಅವಳ ಕೊಟ್ಟಡಿಗೆ ಹೋದನು.

ಮಲಯಸಿಂಹನು ಅಲ್ಲಿಗೆ ಹೋದಾಗ ಕೋಮಲೆಯು ಸೋಫಾದಲ್ಲಿ ಕುಳಿತು ಜಾರುದಿಂಬನ್ನು ಒರಗಿಕೊಂಡು ವೀಣಾಗಾನವನ್ನು ಆಲಿಸುತ್ತಲಿದ್ದಳು. ಹೊಸದಾದ ಪಟ್ಟೆಯ ಸೀರೆಯನ್ನೂ ಕಿಂಕಾಪಿನ ರವಿಕೆಯನ್ನೂ ತೊಟ್ಟು ಎಡಗಯ್ಯನ್ನು ತಲೆಯ ಕೆಳಗಿಟ್ಟು ಬಲಗಯ್ಯಲ್ಲಿ ಚೀನಾದೇಶದ ಲಘುವಾದ ಒಂದು ಬಿಳಿಯ ವಸ್ತ್ರವನ್ನು ಹಿಡಿದಿದ್ದಳು. ಅವಳ ರೂಪಲಾವಣ್ಯಯೌವನಾದಿಗಳು ವಣಿಸಲಸದಳವಾಗಿದ್ದುವು. ಅವಳ ಮುಖಚಂದ್ರನಿಂದ ಪ್ರಸರಿಸುತ್ತಲಿದ್ದ ಬೆಳದಿಂಗಳಲ್ಲಿ ಉಡಿಗೆತೊಡಿಗೆಗಳ ಕಾಂತಿಯು ಮಂಕಾಗಿದ್ದಿತು.

ಮಲಯಸಿಂಹನು ಒಳಗೆ ಹೋದ ಕೂಡಲೇ ಕೋಮಲೆಯು ಎದ್ದು, ಕೋಮಲಸ್ವರದಿಂದ, ಸ್ವಾಮೀ! ತಾವು ನನ್ನನ್ನು ನೋಡುವುದಕ್ಕೆ ಬರಬೇಕಾದರೆ ಹೇಳಿ ಕಳುಹಿಸಬೇಕೇ? ತಾವು ಸರ್ವಸ್ವತಂತ್ರರು, ನಾನು ತಮ್ಮ ದಾಸಿ; ಹೀಗಿರುವಲ್ಲಿ ತಾವು ಹೇಳಿ ಕಳುಹಿಸಿದುದನ್ನು ನೋಡಿದರೆ ನನ್ನ ಮೇಲೆ ತಮಗೆ ಕೋಪವೋ ಏನೋ ಎಂದಳು.

ಕೋಮಲೇ! ಹೆಂಗುಸರ ಕೊಟ್ಟಡಿಗೆ ಗಂಡಸರು ಒರಬೇಕಾದರೆ ಮೊದಲು ಅವರಿಗೆ ತಿಳಿಸಿ ಬರಬೇಕಾದುದು ನ್ಯಾಯ. ಇದಲ್ಲದೆ ಈಗ ನಾವು ಅಮರದೇಶದಲ್ಲಿದ್ದೇವೆ. ಇಲ್ಲಿ ನೀನು ಸ್ವತಂತ್ರೆ. "ಆವ ಭಾಗದಲ್ಲಿ?"

ಎಲ್ಲಾ ಭಾಗದಲ್ಲಿಯೂ. ನಿನಗೆ ಇಷ್ಟವಿದ್ದರೆ ಮನಸ್ಸು ಬಂದ ಕಡೆಗೆ ಹೋಗ ಬಹುದು.

ಸ್ವಾಮೀ! ನಿಮ್ಮನ್ನು ಬಿಟ್ಟು ನಾನೆಲ್ಲಿ ಹೋಗಲಿ?

ಅದಕ್ಕೆ ನಾನೇನು ಹೇಳಲಿ? ಇದು ನಿಮ್ಮ ದೇಶದಂತೆ ಅಲ್ಲ; ಇಲ್ಲಿರುವ ವರೆಗೆ ನಾವು ಜನರೊಡನೆ ಕೂಡಾಡಬೇಕಾಗುವುದು.

ನಾನೆಲ್ಲಿಯೂ ಹೋಗೆನು.

ಇನ್ನಾರಾದರೂ ನನಗಿಂತ ಅನುಕೂಲರಾದವರು ಸಿಕ್ಕಿದರೆ?

ನಿಮಗಿಂತ ನನಗಾರು ಅನುಕೂಲರು? ನನ್ನ ತಂದೆಯೊಬ್ಬನಿದ್ದನು, ಅವನೂ ಸತ್ತು ಹೋದನು. ಈಗ ತಾವು ಒಬ್ಬರೇ.

ನಿನ್ನ ತಂದೆಯನ್ನು ಬಲ್ಲೆಯೋ ಎಂದು ಮಲಯಸಿಂಹನು ಕೇಳಲು, ಕೋಮಲೆಯು ಕಣ್ಣೀರನ್ನು ಸುರಿಸುತ್ತ ಇಲ್ಲಿದ್ದಾನೆ, ಇಲ್ಲಿದ್ದಾನೆ ಎಂದು ತನ್ನ ಕಣ್ಣುಗಳನ್ನು ಮುಟ್ಟಿ ತೋರಿಸಿದಳು. ನಾನೆಲ್ಲಿದ್ದೇನೆ ಎಂದು ಕೇಳಿದುದಕ್ಕೆ ತಾವು ನನ್ನ ಸ್ವಾಮಿಯಾದುದರಿಂದ ನನ್ನ ಶರೀರದಲ್ಲೆಲ್ಲಾ ಇರುತ್ತೀರಿ. ಎಂದು ಅವನ ಮೇಲಿದ್ದ ತನ್ನ ಅನುರಾಗವನ್ನು ಸೂಚಿಸಿದಳು. ಮಲಯಸಿಂಹನು ಸುಪ್ರೀತನಾದನು.

ಎಲೌ ಕೋಮಲೆ! ಇಂದು ಮೊದಲು ನೀನು ಸರ್ವಸ್ವತಂತ್ರಳು; ನನ್ನ ಮನೆಯಲ್ಲಿಯೇ ಇದ್ದರೆ ಸರ್ವಾಧಿಕಾರವನ್ನು ನಿನಗೆ ಕೊಟ್ಟು ನಿನ್ನನ್ನು ನನ್ನ ಮಗಳಂತೆ ಭಾವಿಸುವೆನು. ನೀನು ನನಗೆ ಒಂದು ಉಪಕಾರ ಮಾತ್ರ ಮಾಡಬೇಕು.

ಅದೇನು ಅಪ್ಪಣೆಯಾಗಲಿ.

ನೀನಿಂಥವಳೆಂಬುದನ್ನೂ, ನಿನ್ನ ತಾಯಿತಂದೆಗಳ ಹೆಸರುಗಳನ್ನೂ ಅಮೊಡನೆಯೂ ಹೇಳದೆ ಬಲು ಗುಟ್ಟಾಗಿಟ್ಟಿರಬೇಕು.

ಸ್ವಾಮೀ! ನಾನೊಬ್ಬರನ್ನೂ ನೋಡುವುದಿಲ್ಲವೆಂದು ಮೊದಲೇ ತಮ್ಮಲ್ಲಿ ಅರಿಕೆ ಮಾಡಿದ್ದೇನೆಯಲ್ಲವೇ?

ಇಲ್ಲಿ ನಿಮ್ಮ ದೇಶದಂತೆ ಇರಲಾಗದು. ಇಲ್ಲಿಯ ಹೆಂಗುಸರು ಗಂಡಸರೊಡನೆ ಧಾರಾಳವಾಗಿಯೂ ನಿರ್ಭಯವಾಗಿಯೂ ಕಲೆಯುತ್ತ ಸ್ನೇಹವನ್ನು ಬಳೆಸುವರು. ಇದು ನಮ್ಮ ದೇಶದ ಪದ್ಧತಿಯಾದುದರಿಂದ ಇಲ್ಲಿ ನಾವಿರುವ ವರೆಗೆ ಇದಕ್ಕನುಗುಣವಾಗಿ ನೀನೂ ಇರಬೇಕಾಗುವುದು. ಈ ರೀತಿ ನೀನಿರುವುದಾದರೆ ನೀನೆಲ್ಲಿದ್ದರೂ ಸರಿಯೆ ನಿನಗೆ ಅನುಕೂಲವೆಂಟು.

ಸ್ವಾಮೀ! ತಾವು ಈಗ ಅಪ್ಪಣೆ ಕೊಡಿಸಿದ ಮಾತಿನಲ್ಲಿ 'ನಾವು, ನಮಗೆ' ಎನ್ನದೆ 'ನೀನು, ನಿನಗೆ' ಎಂದುದಕ್ಕೆ ನನಗೆ ಅರ್ಥವಾಗಲಿಲ್ಲ. ದಯೆಮಾಡಿ ಅಪ್ಪಣೆಯಾಗಬೇಕು.

ಎಲೌ ಕೋಮಲೆ! ಪುಷ್ಪವು ಗಿಡವನ್ನು ಬಿಟ್ಟು ಕೆಳಗೆ ಬೀಳುವುದೇ ಹೊರತು ಗಿಡವು ಪುಷ್ಪವನ್ನು ಎಂದಿಗಾದರೂ ಬಿಟ್ಟೀತೇ?

ಸ್ವಾಮೀ! ಗಿಡವನ್ನು ಬಿಟ್ಟು ಕೆಳಗೆ ಬಿದ್ದ ಪುಷ್ಪದ ಗತಿಯೇನಾಗುವುದು? ತಮ್ಮನ್ನು ಬಿಟ್ಟು ನಾನು ಒಂದು ಕ್ಷಣಮಾತ್ರವೂ ಜೀವಿಸಲಾರೆನು.

ಕೋಮಲೆ! ಇನ್ನು ಹತ್ತು ವರ್ಷಗಳಲ್ಲಿ ನಾನು ಮುದುಕನಾಗುವೆನು, ಆಗ ನಿನ್ನ ಯೌವನಸಂಪತ್ತು ಅಧಿಕವಾಗುವುದು. ಅದು ವ್ಯರ್ಥವಾಗಬಾರದಲ್ಲವೇ?

ನನ್ನ ತಂದೆಯು ಹಣ್ಣುಹಣ್ಣು ಮುದುಕನಾಗಿದ್ದನು, ಆದರೂ ಅವನನ್ನು ನಾನು ಪ್ರೀತಿಸುತ್ತಲಿರಲಿಲ್ಲವೇ?

ಹಾಗಾದರೆ ನಾವು ತಂದೆ ಮಕ್ಕಳಂತೆ ಇರಲು ನಿನಗೆ ಸಮ್ಮತವೋ?

ಸ್ವಾಮೀ! ಪ್ರತಿನಿತ್ಯವೂ ತಮ್ಮ ದರ್ಶನವಾಗುತ್ತಿದ್ದರೆ ತಾವು ಹೇಗಿಟ್ಟರೆ ಹಾಗಿರುವೆನು.

ಅದಕ್ಕೇನು ಅಡ್ಡಿ?

ಹಾಗಾದರೆ ತಮಗೆ ಭಯವೇನು ?

ಚಿಕ್ಕ ಪ್ರಾಯದಲ್ಲಿ ಹೀಗಿರುವುದು ನಿನಗೆ ಸಂತೋಷಕರವಲ್ಲ.

ಸ್ವಾಮೀ ! ಬೆಳಿಗ್ಗೆ ಎದ್ದರೆ ತಮ್ಮ ದರ್ಶನವಾಗುವುದೆಂಬ ಸಂತೋಷವೂ, ದರ್ಶನವಾದ ಮೇಲೆ ಅದರಿಂದುಂಟಾದ ಸಂತೋಷಾನುಭವವೂ, ತಮ್ಮಲ್ಲಿ ಕೃತಜ್ಞತೆಯೂ ಅನುರಾಗವೂ ಇರುವಾಗ ನನ್ನ ಸಂತೋಷಕ್ಕೆ ಏನು ಕಡಿಮೆ?

ನೀನಿಷ್ಟಪಟ್ಟರೆ ನಿನಗೆ ತಕ್ಕ ಒಂದು ವರನನ್ನು ನೋಡುವೆನು.

ಸ್ವಾಮೀ ! ತಮ್ಮ ಅಭಿಪ್ರಾಯವೇನೋ ನನಗೆ ತಿಳಿಯದು. ನನ್ನ ತಂದೆಯಲ್ಲಿ ನನಗಿದ್ದ ಪ್ರೀತಿಗೂ ತಮ್ಮಲ್ಲಿ ನನಗಿರುವ ಪ್ರೀತಿಗೂ ತಾರತಮ್ಯವುಂಟು. ನನ್ನ ತಂದೆಯು ಕಾಲವಾದಾಗ ನಾನು ಸಾಯಲಿಲ್ಲ; ತಮ್ಮನ್ನು ಬಿಟ್ಟು ಅಗಲಿದ ಕ್ಷಣವೇ ನನ್ನ ಪ್ರಾಣವಿರಲಾರದು.

ಕೋಮಲೆಯು ಹೀಗೆಂದುದನ್ನು ಕೇಳಿ ಮೊದಲೇ ಅರಳಿದ್ದ ಮಲಯಸಿಂಹನ ಮುಖವು ಮತ್ತಷ್ಟು ಅರಳಿತು. ಅವಳು ಅವನ ಕಯ್ಯನ್ನು ಮುದ್ದಿಟ್ಟು ಕಣ್ಣಿಗೆ ಒತ್ತಿ ಕೊಂಡಳು. ಬಳಿಕ ಮಲಯಸಿಂಹನು ಅಲ್ಲಿಂದ ಹೊರಟು, 'ಕೋಮಲೆಯರ ದೇಹ ಲತೆಯಲ್ಲಿ ಯೌವನವೇ ಸುವಾಸನೆಯಾದ ಹೂವು, ಮೋಹವೇ ಫಲ; ಈ ಪುಷ್ಪ ವನ್ನೂ ಫಲವನ್ನೂ ಸಕಾಲದಲ್ಲಿ ಅನುಭವಿಸುವವನೇ ಧನ್ಯನು' ಎಂದುಕೊಂಡು, ಸಿದ್ಧವಾಗಿ ನಿಂತಿದ್ದ ಬಂಡಿಯಲ್ಲಿ ಕುಳಿತನು.

ಬಂಡಿಯು ಸ್ವಲ್ಪ ಕಾಲದಲ್ಲಿಯೇ ಜಯವೀರನ ಮನೆಯ ಮುಂದೆ ನಿಂತಿತು. ಭೈರವನು ಬಂಡಿಯಿಂದಿಳಿದು ಏನಪ್ಪಣೆಯೆಂದು ಕೇಳಲು, ಮಲಯಸಿಂಹನು ನಾನು ಬಂದಿದ್ದೇನೆಂದು ಮನೆಯವರಿಗೆ ತಿಳಿಸು ಎಂದನು. ಭೈರವನು ಮನೆಯೊಳಗೆ ಪ್ರವೇಶಿಸಿ ಆರನ್ನೂ ಕಾಣದೆ ಕುದುರೆಯನ್ನು ತಿಕ್ಕಿಸುತ್ತ ನಿಂತಿದ್ದ ಜಯವೀರನನ್ನು ಕಂಡು ಸ್ವಾಮೀ ! ರಾಜಾಮಲಯಸಿಂಹರು ಬಿಜಯಮಾಡಿಸಿದ್ದಾರೆ, ಅವರನ್ನು ನೋಡಲು ತಮಗೆ ಅನುಕೂಲವೇ ಎಂದು ತಿಳಿದುಕೊಂಡು ಬರುವಂತೆ ಹೇಳಿದ್ದಾರೆ ಎನ್ನಲು, ಒಡನೆಯೇ ಜಯವೀರನು ರಾಜರನ್ನು ನೋಡಲು ಅನುಕೂಲವೇ ! ಅವರು ಬಿಜಯ ಮಾಡಿಸಿದಾಗಲೇ ಅನುಕೂಲ ಎಂದು ಹೇಳಿ ಬೀದಿಯಲ್ಲಿ ಬಂಡಿಯು ನಿಂತಿರುವುದನ್ನು ಕಂಡು ತಟ್ಟನೆ ಅಲ್ಲಿಗೆ ಓಡಿ ಬಂದು ರಾಜರೇ ! ಬಿಜಯಂಗೆಯ್ಯಬೇಕು. ತಮ್ಮ ಮನೆಗೆ

ತಾವು ಬಿಜಯಮಾಡಿಸಲಿಕ್ಕೆ ಮತ್ತೊಬ್ಬರ ಅನುಮತಿಯನ್ನು ಕೇಳಬೇಕೆ ? ರತ್ನಾಂಬೆಯು ತೋಟದಲ್ಲಿರುತ್ತಾಳೆ, ಅಲ್ಲಿಗೇ ಹೋಗೋಣವೋ ಎಂದು ಕೇಳಿದನು.

ಆಗಬಹುದು.

ಹೂವನ್ನು ಕೊಯ್ಯುತ್ತಲಿದ್ದ ರತ್ನಾಂಬೆಯು ಇವರ ಹಜ್ಜೆಯ ಸದ್ದನ್ನು ಕೇಳಿ ತಲೆಯೆತ್ತಿ ನೋಡಲು ತನ್ನಣ್ಣನ ಸಂಗಡ ಅನ್ಯಪುರುಷನಾವನೋ ಬರುತ್ತಿದ್ದುದನ್ನು ಕಂಡು ನಾಚಿಕೊಂಡಳು. ಅಷ್ಟರಲ್ಲಿಯೇ ಜಯವೀರನು ಅಮ್ಮಾ ರತ್ನ ! ಇವರೇ ರಾಜಾಮಲಯಸಿಂಹರು. ಸ್ವಾಮೀ ! ಇವಳೇ ನನ್ನ ತಂಗಿ ರತ್ನಾಂಬೆ ಎಂದು ಇಬ್ಬರಿಗೂ ಪರಿಚಯಮಾಡಿಕೊಟ್ಟನು. ಆಗವಳು ರಾಜರೇ ! ನಮ್ಮಣ್ಣನಿಗೆ ತಂಗಿಯೆಂದರೆ ಸ್ವಲ್ಪವೂ ಗೌರವವಿಲ್ಲ. ನಾನು ಈ ವೇಷದಲ್ಲಿರುವಾಗ ತಮ್ಮನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದಾನೆ ಎಂದು ಹೇಳಲು, ರಾಜನು ಅಮ್ಮಾ ! ನಾನೂ ನಿಮ್ಮ ಸಂಸಾರಕ್ಕೆ ಸೇರಿದವನು ಎಂದನು.

ಸ್ವಾಮೀ ! ತಾವು ಅಣ್ಣನ ಜತೆಯಲ್ಲಿ ಕೊಟ್ಟಡಿಗೆ ಬಿಜಯಮಾಡಿಸುವುದರೊಳಗಾಗಿ ಒರುವೆನು, ಕ್ಷಮಿಸಬೇಕು ಎಂದು ಹೇಳಿ ರತ್ನಾಂಬೆಯು ಸಮೀಪದಲ್ಲಿ ಅಗೆಯುತ್ತಲಿದ್ದವನನ್ನು ನೋಡಿ, ಎಲೋ ದಾಶ ! ಎಂದು ಕೂಗಿದಳು. ಅಗೆಯುತ್ತಲಿದ್ದ ಮುದುಕನು ನಮ್ಮ ಜಯಲಕ್ಷ್ಮಿಯಲ್ಲಿ ಬಹು ದಿನಗಳು ನಾವಿಕನಾಗಿದ್ದು ಧನಕೋಟಿಯ ಮನೆಯನ್ನು ಬಿಡಲಾರದೆ ಈಗ ತೋಟಗಾರನಾದನು. ರತ್ನಾಂಬೆಯು ಕರೆಯುತ್ತಲೇ ಬಾಯಲ್ಲಿದ್ದ ಹೊಗೆಯ ಸೊಪ್ಪನ್ನು ದವಡೆಯಲ್ಲಿ ಒತ್ತರಿಸಿಕೊಂಡು ಅಮ್ಮಾ ! ಏನು ಆಜ್ಞೆ ಎನ್ನಲು, ಅವಳು ರಾಜಾಮಲಯಸಿಂಹರು ಬಿಜಯಮಾಡಿಸಿದ್ದಾರೆಂದು ಯಜಮಾನರಿಗೆ ತಿಳಿಸಿ ಅವರನ್ನು ಈ ಕ್ಷಣ ಬರುವಂತೆ ಹೇಳು ಎಂದು ಹೇಳಿ ಪಕ್ಕದ ಸಣ್ಣ ಬಾಗಿಲಿಂದ ಮನೆಯನ್ನು ಹೊಕ್ಕಳು. ರಾಜನೂ ಜಯವೀರನೂ ಕೊಟ್ಟಡಿಗೆ ಹೋಗಿ ಕುಳಿತರು.

ನಾನು ಬಂದುದು ಇಷ್ಟು ಅವಾಂತರಕ್ಕೆ ಕಾರಣವಾಯಿತು ಎಂದು ರಾಜನು ಹೇಳಲು, ಜಯವೀರನು ತಾವು ಬರುವುದೇ ಅಪರೂಪ, ಬಂದಾಗ ಎಲ್ಲರೂ ತಮ್ಮ ದರ್ಶನವನ್ನು ಮಾಡಿಕೊಳ್ಳದಿದ್ದರೆ ಮನಸ್ಸು ನೆಮ್ಮದಿಯಾಗಿರದು. ನನ್ನ ಭಾವ ಮನೋಮೋಹನನು ಜಾಗ್ರತೆಯಾಗಿಯೇ ಬರುತ್ತಾನೆ ಎಂದನು.

ಜಯವೀರರೇ! ನೀವೆಲ್ಲರೂ ಸುಖವಾಗಿದ್ದೀರಾ?

ಸ್ವಾಮೀ! ತಮ್ಮ ಅನುಗ್ರಹದಿಂದ ನಾವೆಲ್ಲರೂ ಕ್ಷೇಮವಾಗಿದ್ದೇವೆ. ನನ್ನ ತಂಗಿಯೂ ಅವಳ ಗಂಡನೂ ಸಣ್ಣವರಾಗಿದ್ದರೂ ಅನುರಾಗವುಳ್ಳವರಾಗಿಯೂ ಸಂತೋಷಚಿತ್ತರಾಗಿಯೂ ಇದ್ದಾರೆ. ಅವರಿಗೆ ವರ್ಷವೊಂದಕ್ಕೆ ಇಪ್ಪತ್ತೈದು ಸಾವಿರ ವರಹಗಳ ವರಮಾನವಿದೆ, ಅದರಿಂದ ನೆಮ್ಮದಿಯಾಗಿ ಜೀವನಮಾಡಿಕೊಂಡಿದಾರೆ.

ಇಪ್ಪತ್ತೈದು ಸಾವಿರ ವರಹಗಳು ಸಾಕೇ ಎಂದು ಕೇಳಿದ ಮಲಯಸಿಂಹನ ಮಾತಿಗೆ ಜಯವೀರನ ಮನಸ್ಸು ಕರಗಿ ಹೋಯಿತು.

ನಿಮ್ಮ ಭಾವನವರು ವೈದ್ಯರೋ, ವ್ಯವಹಾರಪಂಡಿತರೋ?

ಅವನು ನಮ್ಮ ವ್ಯಾಪಾರಧಲ್ಲಿ ಒತ್ತಾಸೆ ಮಾಡುತ್ತಲಿದ್ದು ನಮ್ಮಪ್ಪನ ಕಾಲಾನಂತರ ಎರಡು ಲಕ್ಷವೂ ಐವತ್ತು ಸಾವಿರ ವರಹಗಳ ಆಸ್ತಿಯನ್ನು ಸಂಪಾದಿಸಿ ವ್ಯಾಪಾರವನ್ನು ಬಿಟ್ಟು ಒಡ್ಡಿಯಿಂದ ನೆಮ್ಮದಿಯಾಗಿ ಜೀವನಮಾಡಿಕೊಂಡು ಇದ್ದಾನೆ.

ಅದನ್ನು ಕೇಳಿ ಮಲಯಸಿಂಹನು ಆನಂದಪಡುತ್ತಲಿದ್ದಾಗ ಮನೋಮೋಹನನು ಬಂದು ಅವನಿಗೆ ನಮಸ್ಕರಿಸಿ ಕುಳಿತನು. ಇವನೇ ಮನೋಮೋಹನನ್ನೋ, ಎಂದು ರಾಜನು ಕೇಳಲು, ಹೌದು ಎಂದು ಜಯವೀರನು ಹೇಳಿ ಮನೋಮೋಹನಾ! ಇವರೇ ರಾಜಾಮಲಯಸಿಂಹರು ಎಂದನು. ಅಷ್ಟು ಹೊತ್ತಿಗೆ ರತ್ನಾಂಬೆಯೂ ಅಲ್ಲಿಗೆ ಬಂದಳು.

ಆ ದಂಪತಿಗಳ ಮುಖದಲ್ಲಿ ತೃಪ್ತಿಯೂ ಸಂತೋಷವೂ ತುಂಬಿ ತುಳುಕುತ್ತಲಿರುವುದನ್ನು ಕಂಡು ಮಲಯಸಿಂಹನು ರತ್ನಾಂಬೆಯನ್ನು ನೋಡಿ ಅಮ್ಮಾ! ಹೀಗೆ ಅತೃಷ್ಣರಾಗಿಯೂ ಸಂತೋಷಿಗಳಾಗಿಯೂ ಇರುವವರನ್ನು ನಾನು ನೋಡಲಿಲ್ಲ. ಆದುದರಿಂದ ಈಗ ನಿಮ್ಮನ್ನು ಎಷ್ಟು ನೋಡಿದರೂ ನನಗೆ ತೃಪ್ತಿಯೇ ಇಲ್ಲ. ಹುಟ್ಟಿದಾರಭ್ಯದಿಂದ ಹೀಗೆಯೇ ಇರುವಿರೋ ಎಂದು ಕೇಳಿದನು.

ಸ್ವಾಮೀ! ಬಂದಾನೊಂದು ಕಾಲದಲ್ಲಿ ನಮಗೂ ಕಷ್ಟ ನಷ್ಟಗಳು ಸಂಪ್ರಾಪ್ತವಾಗಿದ್ದುವು. ಅದೇನು? ಆವಾಗ?

ಇದು ನಮ್ಮ ಗೃಹಕೃತ್ಯಕ್ಕೆ ಸೇರಿದ ವಿಷಯವಾದುದರಿಂದ ತಮಗೆ ರುಚಿಸಲಾರದು,

ಸತ್ಪುರುಷರು ಕಷ್ಟಪಡುವುದನ್ನು ಕಂಡು ದೇವವು ಸಹಿಸಲಾರನು. ಪ್ರಾಯಶಃ ಅವನು ಅದನ್ನು ಆಗಲೇ ನಿವೃತ್ತಿಸಿರಬೇಕು.

ಸ್ವಾಮೀ! ನಿಜ. ಹಾಗೆಯೇ ನಿವೃತ್ತಿಯಾಯಿತು. ಅವನೋ ಒಬ್ಬ ಮಹಾ ಪುರುಷನು ನಮ್ಮ ಕಷ್ಟವನ್ನು ಪರಿಹಾರಮಾಡಿದನು ಎಂದು ರತ್ನಾಂಬೆಯು ಹೇಳುತ್ತಲೆ ಮಲಯಸಿಂಹನು ಕೆಮ್ಮುವ ನೆಪದಿಂದ ಮುಖವನ್ನು ಮುಚ್ಚಿಕೊಂಡು ಹೊರಗೆ ತಲೆಹಾಕಿದ್ದ ಆನಂದಬಾಷ್ಪಗಳನ್ನು ಒರಸಿಕೊಂಡನು. ಆಗ ಮನೋಮೋಹನನು ಸ್ವಾಮೀ! ಆ ಮಹಾಪುರುಷನು ಮಾಡಿದ ಉಪಕಾರದಿಂದ ನಮಗೆ ಉಂಟಾದ ಆನಂದವನ್ನು ತಿಳಿಸುವುದು ಅಸಾಧ್ಯ- ಅನುಭವಿಸಿದವರಿಗೆ ವಿನಾ ಅದು ಇತರರಿಗೆ ಗೊತ್ತಾಗದು. ಆಗರ್ಭಶ್ರೀಮಂತರು ಸುಖದಲ್ಲಿಯೇ ಹುಟ್ಟಿ ಒಳೆಯುವುದರಿಂದ ಅವರಿಗೆ ಕಷ್ಟ ಸುಖಗಳು ಅವ್ಯವೂ ತಿಳಿಯುವ ಸಂಭವವಿಲ್ಲ. ಸಮುದ್ರದಲ್ಲಿ ಬಿರುಗಾಳಿ ಮಳೆ ಸಿಡಿಲುಗಳಿಗೆ ಸಿಕ್ಕಿ ಪಾಡುಪಟ್ಟಿದ್ದ ನಾವಿಕರಿಗಲ್ಲದೆ ಸಮುದ್ರದ ಕೋಟಲೆಗಳು ಮತ್ತಾರಿಗಾದರೂ ತಿಳಿಯುವುದೇ ಎಂದನು.

ಹುಣ್ಣಿಮೆಯ ಚಂದ್ರನನ್ನು ನೋಡಿ ಉಕ್ಕುವ ಸಮುದ್ರದೋಪಾದಿ ಈ ದಂಪತಿಗಳ ಆನಂದವನ್ನು ನೋಡಿ ಉಕ್ಕಿಬರುತ್ತಲಿರುವ ಸಂತೋಷವನ್ನು ಮಲಯಸಿಂಹನು ಮುಚ್ಚಲರಿಯದೆ ಎದ್ದು ಹಾಗೆಯೇ ಶತಪಥವನ್ನು ಮಾಡತೊಡಗಲು, ಜಯನೀರನು ಸ್ವಾಮೀ ರಾಜರೇ, ನಮ್ಮ ಈ ಅಲ್ಪಸಂಪತ್ತನ್ನು ನೋಡಿ ತಮಗೆ ನಗುಬರುತ್ತಿಂದು ತೋರುತ್ತದೆ ಎಂದನು. ಮಲಯಸಿಂಹನಿಗೆ ಮಾತು ಹೊರಡದೆ ಡಬಡಬ ಎಂದು ಹಾರುತ್ತಲಿದ್ದ ಎದೆಯನ್ನು ಒಂದು ಕೈಯಲ್ಲಿ ನೀವಿಕೊಳ್ಳುತ್ತ ಮತ್ತೊಂದು ಕಯ್ಯಿಂದ ಕನ್ನಡಿಯ ಗೂಡಿನಲ್ಲಿ ಎಲ್ಲರಿಗೂ ಸ್ಪಷ್ಟವಾಗಿ ಕಾಣುವಂತೆ ಇದಿರಿಗೆ ಇಟ್ಟಿದ್ದ ಒಂದು ಹಳೆಯ ಪಟ್ಟಿಯ ಚೀಲವನ್ನು ತೋರಿಸಿ ಇದೇನು? ಇದಕ್ಕೆ ಒಂದು ಕಡೆ ಒಂದು ಚೀಟಿಯೂ ಮತ್ತೊಂದು ಕಡೆ ಒಂದು ದೊಡ್ಡ ವಜ್ರವೂ ಕಟ್ಟಿದೆ ಎಂದು ಜಯನೀರನನ್ನು ಕೇಳಿದನು.

ಸ್ವಾಮೀ! ಅದೇ ನಮ್ಮ ವಂಶವನ್ನು ಕಾಪಿಟ್ಟ ಕಲ್ಪವೃಕ್ಷ. ಅದಿಲ್ಲದಿದ್ದರೆ ನಾವು ಈ ರೀತಿಯಲ್ಲಿ ಇರುವುದಕ್ಕಾಗುತ್ತಿದ್ದಿತೇ? ತಿರುಪಕ್ಕೆ ಹೋಗಬೇಕಾಗಿದ್ದಿತು.

ಆ ವಜ್ರವು ಉತ್ತಮವಾದುದೆಂದು ತೋರುತ್ತದೆ, ಎಂದು ರಾಜನು ಕೇಳಲು

ರತ್ನಾಂಬೆಯು ಸ್ವಾಮೀ! ಆ ವಜ್ರಕ್ಕೆಂತ ಚೀಲವೇ ನಮಗೆ ಹೆಚ್ಚು ಎಂದಳು.

ಅದೇನು ಹಾಗೆ ಹೇಳುತ್ತೀರಿ? ಅದನ್ನು ನನಗೆ ತಿಳಿಸಬಹುದಾಗಿದ್ದರೆ ಸಂತೋಷ.

ಸ್ವಾಮೀ! ಬಹುದಿನಗಳ ಕೆಳಗೆ ನಮಗೆ ಅತಿಕಷ್ಟಕಾಲವು ಪ್ರಾಪ್ತವಾಗಿದ್ದಾಗ ಆರಿಗೂ ಗೋಚರನಾಗದಂತೆ ಇವನೋ ಒಬ್ಬ ಮಹಾತ್ಮನು ನಮಗೆ ಮಹೋಪಕಾರವನ್ನು ಮಾಡಿ ಹೋದನು. ಅಂದಿನಿಂದ ನಾವು ಅವನ ದರ್ಶನಮಾಡಬೇಕೆಂದು ಎಷ್ಟೆಷ್ಟು ವಿಚಾರಿಸಿ ಹುಡುಕಿದರೂ ಅವನು ನಮಗೆ ಸಿಕ್ಕಲಿಲ್ಲ. ನಾವು ಮಾಡುವ ಉಪಕಾರಸ್ಮರಣೆಯು ಅವನ ಕಿವಿಗೆ ಬಿದ್ದು ಅವನ ಮನಸ್ಸು ಕರಗಿ ಎಂದಾದರೂ ಪ್ರತ್ಯಕ್ಷನಾದಾನೋ ಎಂಬ ಚಾಪಲ್ಯದಿಂದ ಈ ಚೀಲವನ್ನು ದೇವರಂತೆ ಭಾವಿಸಿ ಎಲ್ಲರಿಗೂ ಕಾಣುವಂತೆ ಇಟ್ಟು ಒಂದಪೆಲ್ಲರ ಸಂಗಡಲೂ ಈ ಸಮಾಚಾರವನ್ನು ಹೇಳುತ್ತಲಿದ್ದೇವೆ.

ಓಹೋ! ಹಾಗೇ! ಎಂದು ಏನೂ ತಿಳಿಯದವನಂತೆ ನಟಿಸಿ ವಲಯಸಿಂಹನು ಇದರಿಂದೇನು ಉಪಕಾರವಾಯಿತು ಎಂದು ಪ್ರಶ್ನೆಮಾಡಿದನು.

ಆಗ ಜಯವೀರನೆದ್ದು ಗೂಡಿನಿಂದ ಚೀಲವನ್ನು ಕೆಗೆದು,

ಇದು ತಾತಂಗೊಡವಿದ ದು ।
ರ್ನಿಧಿಯುಂ ಮಾಣಿಸಿದುದಿದುವೆ ನಮ್ಮಯ ದಾರಿ ॥
ದ್ರವ್ಯದ ಕಂದಂ ಕಳೆದುದು ದೇ ।
ವದತ್ತಮಿದು ನೋಡಲತಿವಿಶಾಲಂ ಚೀಲಂ ॥ (S. G. G.)

ಅದುದರಿಂದಲೇ ಈ ಚೀಲದಲ್ಲಿ ನಮಗೆ ಅಷ್ಟು ವಿಶ್ವಾಸ. ಈ ಚೀಲಕ್ಕೆ ಕಟ್ಟಿರುವ ಚೀಟನ್ನು ಆ ಉಪಕಾರಕನೇ ಬರೆದನು. ಈ ವಜ್ರವನ್ನು ನಮ್ಮ ರತ್ನಾಂಬೆಗೆ ಸ್ತ್ರೀಧನವೆಂದು ಅವನೇ ಕೊಟ್ಟನು ಎಂದು ಆ ಚೀಟನ್ನು ವಲಯಸಿಂಹನ ಕಯ್ಯಲ್ಲಿ ಕೊಡಲು ಅವನು ಅದನ್ನು ಓದಿ ಆನಂದಭರಿತನಾದನು. ಆ ಲೇಖನವೇ ನಮ್ಮ ನಾವಿಕ ಸೈಂಧವನು ಬರೆದಿದ್ದುದೆಂಬುದನ್ನು ನಮ್ಮ ಪಾಠಕರು ಇನ್ನೂ ಮರೆತಿರಲಾರರು.

ಜಯವೀರರೇ! ನಿಮ್ಮನ್ನು ನೋಡುವ ವರೆಗೆ ಲೋಕದಲ್ಲಿ ಕೃತಜ್ಞತೆಯೆಂಬುದೇ ಇಲ್ಲ ಎಂದು ನಾನು ತಿಳಿದಿದ್ದೆನು. ಸಾಧಾರಣವಾಗಿ ಜನರು ತಮಗೆ ಉಪಕಾರವಾಗುವ ವರೆಗೆ ಇತರರನ್ನು ಆಶ್ರಯಿಸುವರೇ ಅಲ್ಲದೆ ತದನಂತರ ಆಶ್ರಯಿಸುವುದಿಲ್ಲ.

ನಾವಿರಕ್ಕೊಬ್ಬನು ಮಾಡಿದ ಉಪಕಾರವನ್ನು ಒಂದೆರಡಾವೃತ್ತಿ ಸ್ಮರಿಸುವನು. ಬಹು ಕಾಲದ ಹಿಂದೆ ಮಾಡಿದ ಈ ಉಪಕಾರವನ್ನು ನೀವು ಇನ್ನೂ ಜ್ಞಾಪಕವಿಟ್ಟುಕೊಂಡು ಆ ಉಪಕಾರಿಯನ್ನು ಕೊಂಡಾಡುತ್ತಲಿರುವುದು ನಿಮ್ಮ ಸದ್ಗುಣವನ್ನು ಪ್ರಕಾಶಪಡಿಸುತ್ತದೆ. ಈ ಉಪಕಾರವನ್ನು ಮಾಡಿದವನು ಇಂಥವನೆಂದು ಇನ್ನೂ ನಿಮಗೆ ಗೊತ್ತಾಗಲಿಲ್ಲವೋ ?

ಸ್ವಾಮೀ ರಾಜರೇ ! ನಾವು ಮಾಡಿದ ಮನುಷ್ಯಪ್ರಯತ್ನಗಳೆಲ್ಲವೂ ನಿಷ್ಫಲವೋ ಜನವಾದುವು; ದೇವರಿಗೆ ಎಷ್ಟೋ ನಾರಿ ಹರಕೆಮಾಡಿಕೊಂಡೆವು ; ಆದರೂ ಈ ಉಪಕಾರಿಯನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. ಮುಂದೆ ದೇವರ ದಯೆಯು ಹೇಗಿರುವುದೋ ಎಂದು ಜಯವೀರನು ಹೇಳಲು, ರತ್ನಾಂಬೆಯು ಅಣ್ಣಯ್ಯ ! ದೇವರಿಗೆ ಮಾಡಿದ ಪ್ರಾರ್ಥನೆಯು ಎಂದಿಗೂ ವ್ಯರ್ಥವಾಗದು ; ಸಕಾಲದಲ್ಲಿ ಫಲಿಸುವುದು. ಈಗ ಚೀಲವನ್ನು ನಾವು ಕಣ್ಣಿಗೆ ಒತ್ತಿಕೊಳ್ಳುವಂತೆ ಆಗ ಅವನ ಎರಡು ಪಾದಗಳನ್ನೂ ಕಣ್ಣಿಗೆ ಒತ್ತಿಕೊಳ್ಳುವೆವು. ನಮ್ಮ ನಾವಿಕ ದಾಶನು ಹಿಂದೆ ತನ್ನ ಪ್ರಯಾಣಗಳೊಂದರಲ್ಲಿ ನೋಡಿದ್ದ ಆಂಗ್ಲೇಯ ದೇಶೀಯನಂತೆ ಇದ್ದ ಒಬ್ಬನು ನಮ್ಮ ತಂದೆಯನ್ನು ಕಾಪಿಟ್ಟನೆಂದು ಹೇಳಿದ್ದನು ಎಂದಳು.

ಆಂಗ್ಲೇಯದೇಶೀಯನೇ, ಎಂದು ಮಲಯಸಿಂಹನು ಕೇಳಲು ರತ್ನಾಂಬೆಯು ಹಾಗೆ ದಾಶನು ಹೇಳಿದನು ಎಂದಳು.

ಅಮ್ಮಾ ! ನಿಮ್ಮ ತಂದೆಯು ಆರಿಗೋ ಕಿವುದೋ ಒಂದು ಉಪಕಾರವನ್ನು ಮಾಡಿರಬಹುದು ; ಆ ಉಪಕಾರವನ್ನು ಹೊದ್ದಿದವನು ಅದನ್ನು ಮರೆಯದೆ ಈ ರೀತಿ ಪ್ರತ್ಯುಪಕಾರವನ್ನು ಮಾಡಿರಬಹುದು. ಆ ಚೀಟಲ್ಲಿ ಏನೆಂದು ಹೆಸರು ಕೊಟ್ಟಿದ್ದಾನೆ? "ನಾವಿಕ ಸೈಂಧವ"

ನಾವಿಕ ಸೈಂಧವ ! ನಾವಿಕ ಸೈಂಧವ ! ಅದು ಅವನ ನಿಜವಾದ ಹೆಸರಲ್ಲ ಎಂದು ಮಲಯಸಿಂಹನು ಹೇಳಿ, ರತ್ನಾಂಬೆಯು ತನ್ನ ಧ್ವನಿಯನ್ನೇ ಕೇಳುತ್ತಲಿದ್ದುದನ್ನು ಕಂಡು ಅಮ್ಮಾ ನೀನು ಹೇಳು. ಆ ಸೈಂಧವನು ನನ್ನಷ್ಟು ಇದ್ದಾನೋ? ನನ್ನ ಹಾಗೆಯೇ ಅವನೂ ಮಾತಾಡುತ್ತಿದ್ದನೋ ? ನನ್ನಂತೆಯೇ ಸಿಲವಂಗಿಯನ್ನು ತೊಟ್ಟು

ಕಯ್ಯಲ್ಲಿ ಒಂದು ಸೀಸದ ಕಡ್ಡಿಯನ್ನು ಹಿಡಿದಿದ್ದನೋ ಎನ್ನಲು, ಅವಳು ಸಂತೋಷದಿಂದ ಅಹುದಹುದು, ಅವನನ್ನು ನೀವು ಬಲ್ಲಿರಾ ಎಂದಳು.

ಅಮ್ಮಾ! ಆಂಗ್ಲೇಯ ದೇಶಕ್ಕೆ ಹೋಗಿ ಅಲ್ಲಿಯ ಜನರಂತೆ ಉಡಿಗೆ ತೊಡಿಗೆಗಳನ್ನು ಹಾಕಿಕೊಂಡು ವಿಜಯಧ್ವಜನೆಂಬುವನೊಬ್ಬನು ಈ ರೀತಿ ಜನರಿಗೆ ಉಪಕಾರ ಮಾಡುತ್ತಿದ್ದುದನ್ನು ನಾನು ನೋಡಿದ್ದೆನು — "ತಾನಿಂಧವನೆಂದು ಅರಿಗೂ ತಿಳಿಸದೇ"

ಲೋಕದಲ್ಲಿ ಕೃತಜ್ಞತೆಯೇ ಇಲ್ಲವೆಂದು ನಸ್ಸಂತೆಯೇ ನಂಬಿದ್ದ ಅವನೊಬ್ಬ ವಿಲಕ್ಷಣ ಪುರುಷ.— "ಹಾಗಾದರೆ ಅವನಿಗೆ ಏತರಲ್ಲಿ ನಂಬಿಕೆ?"

ಆ ಕಾಲದಲ್ಲಿ ಅವನಿಗೆ ಆ ನಂಬಿಕೆಯು ಇರಲಿಲ್ಲ. ಈಚೆಗೆ ನಿಮ್ಮಂಥವರನ್ನು ನೋಡಿ ಆ ಅಭಿಪ್ರಾಯವನ್ನು ಬದಲಾಯಿಸಿದ್ದಾನು.

ತಾವು ಅವರನ್ನು ಬಲ್ಲಿರೋ ಎಂದು ಮನೋಮೋಹನನು ಕೇಳಲು ರತ್ನಾಂಬೆಯು ತಮಗೆ ಅವರು ತಿಳಿದಿದ್ದರೆ ಅವರಿರುವ ಸ್ಥಳವನ್ನು ಹೇಳಿರಿ. ಅವರ ಮುಂದೆ ನಮ್ಮ ಹೃದಯವನ್ನು ಬಿಚ್ಚಿ ಕೃತಜ್ಞತೆಯು ಲೋಕದಲ್ಲಿ ಉಂಟೆಂಬುದನ್ನು ತಿಳಿಸುತ್ತೇವೆ ಎಂದಳು. ಇದನ್ನು ಕೇಳಿದ ಕೂಡಲೆ ಮಲಯಸಿಂಹನಿಗೆ ಆನಂದಬಾಷ್ಪಗಳು ಉಕ್ಕಿಬರುತ್ತಿರಲು ಪುನಃ ಶತಪಥಮಾಡತೊಡಗಿ, ಮಿತಿಮೀರಿ ಬಂದ ಆನಂದವನ್ನು ಹಾಗೆಯೇ ಅಡಗಿಸಿಕೊಂಡು ನಿಮ್ಮ ಉಪಕಾರಕನು ವಿಜಯಧ್ವಜನೇ ಆಗಿದ್ದರೆ ನೀವು ಅವನನ್ನು ನೋಡಲಾರಿರಿ. ಎರಡು ವರ್ಷಗಳ ಹಿಂದೆ ಅವನನ್ನು ನಾನು ನೋಡಿದ್ದಾಗ 'ನಾನು ಒಹು ದೂರ ಸಂಚಾರಮಾಡುತ್ತೇನೆ' ಎಂದು ಹೇಳಿದ್ದನು. ಇದಲ್ಲದೆ ಅವನು ನನ್ನ ಆಪ್ತಸ್ನೇಹಿತನು. ಆಪ್ತನೆಂದರೆ ನಾನೇ ಅವನು, ಅವನೇ ನಾನು ಎಂದು ಹೇಳಲು ಒಹುದು. ಹೀಗಿರುವಲ್ಲಿ ಈ ಉಪಕಾರವನ್ನು ನಿಮಗೆ ಅವನು ಮಾಡಿದ್ದರೆ ನನ್ನ ಸಂಗಡ ಹೇಳುತ್ತಲಿದ್ದನು.

ಆಗ ಜಾಮೀರನು ತಂಗಿಯನ್ನು ಕುರಿತು ಅಮ್ಮಾ! ರಾಜರು ಹೇಳುವುದು ಸರಿಯೆ. ತನ್ನನ್ನು ಕಾಪಿಟ್ಟ ಮಹಾಪುರುಷನು ಆಂಗ್ಲೇಯನಲ್ಲವೆಂದು ನಮ್ಮ ತಂದೆಯು ಹೇಳುತ್ತಲಿದ್ದನು. ನೀನು ಕಾಣೆಯಾ ಎಂದು ಹೇಳಲು ಮಲಯಸಿಂಹನು ಸ್ವಲ್ಪ ಬೆಚ್ಚಿ ನಿಮ್ಮ ತಂದೆಯು ಏನನ್ನು ಹೇಳುತ್ತಲಿದ್ದರು ಎಂದು ಕೇಳಿದನು.

ಸ್ವಾಮೀ! ನಮ್ಮ ತಂದೆಯು ನಾಯುವ ವರೆಗೆ ಎಷ್ಟೋ ವಿಚಾರಮಾಡಿ

ಅವ್ವದೂ ತಿಳಿಯದೆ ಕೊನೆಗೆ ಅವನಾನಕಾಲದಲ್ಲಿ ನನ್ನನ್ನು ಕರೆದು ಅಪ್ಪಾ! ನಮಗೆ ಉಪಕಾರ ಮಾಡಿದವನು ಜಯಲಕ್ಷ್ಮಿಯಲ್ಲಿದ್ದ ಧರ್ಮದೇವನಲ್ಲದೆ ಮತ್ತಾರೂ ಅಲ್ಲ ವೆಂದು ನನ್ನ ಮನಸ್ಸಿಗೆ ತೋರುತ್ತಲಿದೆ ಎಂದು ಹೇಳುತ್ತ ಪ್ರಾಣವನ್ನು ಬಿಟ್ಟನು ಎಂದನು. ಜಯವೀರನು ಹೀಗೆಂದುದನ್ನು ಕೇಳಿದೊಡನೆಯೇ ಮಲಯಸಿಂಹನ ಮುಖಸ್ರ ಬೆಪ್ಪೇರಿ ಅವ ಮಾತನ್ನೂ ಆಡಲಿಯದೆ ಗಡಿಯಾರವನ್ನು ನೋಡಿ, ಈಗ ಹೊತ್ತಾಯಿತು; ನಾನು ಹೋಗಿ ಒರುವೆನು. ನಿಮ್ಮ ಸುಖವನ್ನು ನೋಡಿ ನನಗೆ ಪರಮಾನಂದವಾಯಿತು. ಬಹುಕಾಲದಿಂದ ಇಂತಹ ಆನಂದವನ್ನು ಕಂಡರಿಯೆನಾದುದರಿಂದ ನೀವುಗಳು ಅಪ್ಪಣೆಯನ್ನಿತ್ತರೆ ಜಾರಿಬಾರಿಗೂ ಇಲ್ಲಿ ಬಂದು ನಿಮ್ಮ ಸಂತೋಷದಲ್ಲಿ ನಾನೂ ಭಾಗಿಯಾಗುತ್ತೇನೆ. ನಿಮ್ಮುಗಳ ಸ್ನೇಹವು ನನಗೆ ಅಮೌಲ್ಯವಾದುದು ಎಂದು ಹೇಳಿ ಮೂವರಲ್ಲಿಯೂ ತನಗಿದ್ದ ಪ್ರೀತಿಯನ್ನು ತೋರಿಸಿ ಹೊರಟುಹೋದನು.

ಅವನತ್ತ ಹೋದ ಕೂಡಲೆ ಮನೋಮೋಹನನು 'ಇವನು ವಿಜಾತೀಯ ರಾಜನು' ಎಂದುಡಕ್ಕೆ, ಜಯವೀರನು ಅಹುದು, ಆದರೆ ಉತ್ಕೃಷ್ಟಹೃದಯನು. ನಮ್ಮನ್ನು ಕಂಡರೆ ಬಹುಪ್ರೀತಿ ಎಂದನು. ಆಗ ರತ್ನಾಂಬೆಯು ಇವನ ಧ್ವನಿಯನ್ನು ಹಿಂದೆ ಎಲ್ಲಿಯೋ ಕೇಳಿದ್ದೇನೆ ಎಂದಳು.

ಮೂವತ್ತಾರನೆಯ ಅಧ್ಯಾಯ

ಪ್ರೇಮಭಾವ

ಮಲಯಸಿಂಹನ ಮನೆಗೆ ಸುಮಾರು ಮುಕ್ಕಾಲು ಮೈಲಿಯು ದೂರದಲ್ಲಿ ಒಂದು ದೊಡ್ಡ ಮಹಡಿಯು ಮನೆಯಿದ್ದಿತು. ಆ ಮನೆಯು ಹಿಂಭಾಗದಲ್ಲಿ ವಿಸ್ತಾರವಾಗಿ ಪ್ರತ್ಯೇಕವಾದ ಎರಡು ಉಪವನಗಳು ಒಂದರ ಹಿಂದೆ ಒಂದು ಇದ್ದುವು. ಮನೆಯು ಒತ್ತಿನಲ್ಲಿದ್ದ ಆರಾಮದಲ್ಲಿ ನಾನಾವಿಧವಾದ ಆಕಾರಗಳುಳ್ಳ ದಟ್ಟವಾದ ಪಾತಿಗಳೂ, ಮಾಲತಿ ಜಾಜಿ ಮುಂತಾದ ಸುವಾಸನೆಯನ್ನು ಬೀರುವ ಹೂವಿನ ಬಳ್ಳಿಗಳೂ, ಲತಾಗೃಹಗಳೂ, ವಿಶ್ರಮಿಸಿಕೊಳ್ಳಲು ಅಲ್ಲಲ್ಲಿ ಹಾಕಿದ್ದ ಉನ್ನತಶಿಲಾಸ್ತರಣಗಳೂ, ರಮಣೀಯವಾದ ಸಣ್ಣಸಣ್ಣ ಕೃತಕಕತಟಾಕಗಳೂ, ಗಿಡಗಳಿಂದ ತುಂಬಿದ ಕೃತ್ರಿಮಪರ್ವತ

ಗಳೂ, ಕುಳಿತು ಬೇಸರಿಕೆಯಾದರೆ ವಿನೋದವಾಗಿ ಓಡಾಡುವುದಕ್ಕೆ ಅನುಕೂಲವಾಗಿರುವಂತೆ ಮಾಡಿದ್ದ ಕಾಲ ಹಾದಿಗಳೂ, ಕಣ್ಣಿಗೆ ಇಂಪಾಗಿ ತೋರುವ ಗರುಕೆಯು ಒಯಲ-ಗಳೂ ಇದ್ದುವು. ಇನ್ನೊಂದು ತೋಟವು ಒರಿಯ ಕರಡು ನೆಲವಾಗಿ ಪಾಳು ಬಿದ್ದಿದ್ದಿತು.

ಈ ಎರಡು ತೋಟಗಳ ಸುತ್ತಲೂ ಆಳು ಮಟ್ಟಕ್ಕೆ ವೌಳಿಯು ಗೋಡೆಯು ಇದ್ದಿತು. ಇವುಗಳ ನಡುವೆ ಒಂದು ಅಡ್ಡ ಗೋಡೆಯು ಇದ್ದಿತು. ಈ ಅಡ್ಡ ಗೋಡೆಯೊಳಗೆ ಪೂರ್ವದಲ್ಲಿ ಇಟ್ಟಿದ್ದ ಕಬ್ಬಿಣದ ಬಾಗಿಲೂ ಮರದ ಕದಗಳೂ ಹಾಗೆಯೇ ಇದ್ದರೂ ತೋಟವನ್ನು ಮಾರಿದಂದಿನಿಂದ ಆ ಬಾಗಿಲನ್ನು ತೆಗೆಯುಲೇ ಇಲ್ಲ. ಆ ತೋಟದಿಂದ ಪಕ್ಕದ ಬೀದಿಗೆ ಹೋಗಲು ಒಂದು ಸಣ್ಣ ಬಾಗಿಲೂ ಕದವೂ ಇದ್ದುವು.

ಮನೆಯ ಒತ್ತಿನಲ್ಲಿದ್ದ ಉಪವನದಲ್ಲಿದ್ದ ತೋಪುಗಳು ದಟ್ಟವಾಗಿದ್ದರೂ ಅವುಗಳಲ್ಲಿ ಒಂದು ಮಾತ್ರ ಬಹಳವಿಸ್ತಾರವಾಗಿಯೂ ಒಳ್ಳೆಯ ಬೇಸಗೆಯ ಬೇಗೆಯುಲ್ಲಿ ಕೂಡ ತಂಪಾಗಿಯೂ ಇರುತ್ತಿದ್ದಿತು. ವಸಂತ ಋತುವಿನ ಒಂದಾನೊಂದು ಸಾಯಂಕಾಲ ಸುಮಾರು ಐದು ಗಂಟೆಯ ವೇಳೆಯುಲ್ಲಿ ಆ ತೋಪಿನ ಮಧ್ಯೆ ಹಾಕಿದ್ದ ಶಿಲಾಸನದ ಮೇಲೆ ಒಂದು ತೆರೆದ ಪುಸ್ತಕವೂ ಕಸೂತಿ ಕೆಲಸದ ಸಾಮಾನುಗಳನ್ನಿಟ್ಟಿದ್ದ ಹುಲ್ಲಿನ ಪೆಟ್ಟಿಗೆಯೂ ಇದ್ದುವು. ಅದಕ್ಕೆ ಸ್ವಲ್ಪ ದೂರದಲ್ಲಿ ಕಬ್ಬಿಣದ ಬಾಗಿಲ ಕದದ ಸಂದಿನಲ್ಲಿ ಅವುದನ್ನೋ ಅತ್ಯಾಸಕ್ತಿಯಿಂದ ನೋಡುತ್ತ ಯುವತಿಯೊಬ್ಬಳು ನಿಂತಿದ್ದಳು. ಇವಳು ನೋಡಿ ನೋಡಿ ಬೇಸತ್ತು ಅತ್ತಿತ್ತ ತಿರುಗುತ್ತ ಪುನಃ ನೋಡುತ್ತಲಿದ್ದಾಗ ಒಬ್ಬ ಯುವಕನು ಪಕ್ಕದ ತೋಟದ ಸಣ್ಣ ಬಾಗಿಲನ್ನು ತೆರೆದುಕೊಂಡು, ಪುನಃ ಕದವನ್ನು ಮುಚ್ಚಿ, ಅತ್ತಿತ್ತ ನೋಡಿ ಆರೂ ಇಲ್ಲವೆಂದು ದೃಢಪಡಿಸಿಕೊಂಡು ಅವಸರದಿಂದ ಕಬ್ಬಿಣದ ಬಾಗಿಲ ಬಳಿಗೆ ಬರುತ್ತಿದ್ದನು.

ಅವನ ಉಡುಪನ್ನು ನೋಡಿ ಆ ಯುವತಿಯು ಹೆದರಿ ಮರೆಯಾದುದನ್ನು ಕಂಡು ಆ ಯುವಕನು ಅವಳು ನೋಡುತ್ತಲಿದ್ದ ಬಾಗಿಲ ಸಂದಿನಲ್ಲಿ ತನ್ನ ಮುಖವನ್ನಿಟ್ಟು ವಿಮಲೇ! ಏಕೆ ಓಡಿ ಹೋದೆ ಎಂದನು.

ಆಗ ವಿಮಲೆಯು ಪುನಃ ಬಾಗಿಲ ಸಮೀಪಕ್ಕೆ ಬಂದು ಪ್ರಿಯನೇ! ಇಂದು ನೀನು ಬರುವುದಕ್ಕೆ ಏಕೆ ಇಷ್ಟು ಹೊತ್ತಾಯಿತು? ಈಗ ಅಲ್ಪಾಹಾರದ ಸಮಯ;

ಆವಾಗಲೂ ನನ್ನ ಆಟಪಾಟಗಳನ್ನು ಅತಿಚಾತುರ್ಯಕತೆಯಿಂದ ನೋಡುತ್ತಲಿರುವ ನನ್ನ ಮಲತಾಯಿ, ಒಂದು ನಿಮಿಷವೂ ನನ್ನನ್ನು ಬೀಡಿಸದೆ ಇರದ ನನ್ನ ಮಲತಮ್ಮ ಅತಿಶ್ರದ್ಧೆಯಿಂದ ನೋಡುತ್ತಲಿರುವ ನನ್ನ ದಾಸಿ, ಇವರುಗಳಿಂದ ಉಪಾಯವಾಗಿ ತಪ್ಪಿಸಿಕೊಂಡು ಬರುವುದೇ ಕೃತಾವಸ್ಥೆಯಾಯಿತು. ಹೊತ್ತು ಹೋಗಿ ಬಂದ ತಪ್ಪಿಗಾಗಿ ನಿನಗೇನ ಮಾಡಲಿ? ಅದಿರಲಿ; ಇದೇನು ವೇಷ? ನಿನ್ನ ಗುರುತೇ ಸಿಕ್ಕಲಿಲ್ಲನಲ್ಲ.

ನೀನು ದೊಡ್ಡವರ ಮಗಳು, ನಾನು ಬಡವರ ಹೊಟ್ಟೆಯಲ್ಲಿ ಹುಟ್ಟಿದವನು; ನಿನ್ನ ಸ್ಥಿತಿಗೂ ನನ್ನ ಸ್ಥಿತಿಗೂ ಬಹು ವ್ಯತ್ಯಾಸ; ಆದುದರಿಂದ ನಿನ್ನಲ್ಲಿ ಪ್ರೀತಿಯನ್ನಿಟ್ಟಿರುವೆನೆಂದು ತಿಳಿಸುವುದಕ್ಕೆ ನನಗೆ ಹೆದರಿಕೆ. ನನ್ನ ಪ್ರಾಣವನ್ನೇ ನಿನಗೆ ಅರ್ಪಿಸಿ ಪ್ರತಿದಿನವೂ ನಿನ್ನನ್ನು ನೋಡಿ ನಿನ್ನ ಸಂಗಡ ಒಂದೆರಡು ಮಾತನ್ನಾಡದಿದ್ದರೆ ನಾನು ಬೀಳಿಸಲಾರೆನು. ಈ ವೇಷವೇನೆಂದು ಕೇಳಿದೆಯಲ್ಲವೇ? ನಾನು ಬಾರಿಬಾರಿಗೆ ಈ ಪಾಳು ತೋಟಕ್ಕೆ ಬರುವುದನ್ನೂ ಹೋಗುವುದನ್ನೂ ಆರಾದರೂ ನೋಡಿದರೆ ಏನನ್ನಾದರೂ ಹೇಳುವರು; ಅದಕ್ಕೆ ಆಸ್ಪದ ಕೊಡದಂತೆ ಇರಲು ಈ ಪಾಳು ಸೆಲವನ್ನು ವ್ಯವಸಾಯಕ್ಕೆ ತೆಗೆದುಕೊಂಡು ತೋಟಗಾರನಂತೆ ವೇಷವನ್ನು ಹಾಕಿಕೊಂಡಿದ್ದೇನೆ.

ನಿನಗೆ ಶುದ್ಧ ಹುಚ್ಚು.

ಈ ವೇಷದಿಂದ ನಮ್ಮಿಬ್ಬರ ಸಮಾಗಮವು ಆರಿಗೂ ಗೊತ್ತಾಗುವುದಿಲ್ಲ. ಇಲ್ಲಿ ಒಂದು ಸಣ್ಣ ಗುಡಿಸಲನ್ನು ಹಾಕಿಕೊಂಡು ಮನಾಲೆಯ ಸೊಪ್ಪನ್ನು ಬೆಳೆಯಿಸುತ್ತ ವ್ಯವಸಾಯ ಮಾಡುತ್ತಲಿದ್ದರೆ ನಿನ್ನನ್ನು ಆಗಾಗ ನೋಡುತ್ತ ಕಣ್ಣುಗಳನ್ನು ಸಾರ್ಥಕ ಪಡಿಸಿಕೊಳ್ಳುತ್ತೇನೆ. ನಿನ್ನ ಧ್ವನಿಯನ್ನು ಕೇಳಿ ಕಿವಿಗಳು ಧನ್ಯವಾಗುವವು. ಇದರ ಮೇಲೆ ನನಗೆ ನಿನ್ನಲ್ಲಿರುವ ಪ್ರೀತಿಯನ್ನು ಬಣ್ಣಿಸಿ ನಾಲಗೆಯನ್ನು ಸಫಲಗೊಳಿಸುವೆನು.

ಜಯವೀರ! ನೀನು ಹೀಗೆ ಹೇಳುವುದು ಸರಿಯಲ್ಲ. ಎಷ್ಟೋ ಚಿಕ್ಕವರು ತಮ್ಮ ತಮ್ಮ ಬುದ್ಧಿಯನ್ನು ನಚ್ಚಿ ಕೆಲಸವನಾಡಿ ಪಾಡುಪಟ್ಟಿರುವುದನ್ನು ನಾವು ನೋಡಿಯೂ ಕೇಳಿಯೂ ಇಲ್ಲವೇ?

ವಿಮಲೆ! ನಾನೇನು ಅಷ್ಟು ಅವಿವೇಕಿಯೇ? ನಾವು ಮೊದಲು ಸಂಧಿಸಿ ಮಾತನಾಡಿದಂದಿನಿಂದ ಮಾತಿನಿಂದಲೇ ಆಗಲಿ ಚರ್ಯದಿಂದಲೇ ಆಗಲಿ ಅವುದಾದರೂ ಅವಿವೇಕವನ್ನು ಕಂಡಿರುವೆಯಾ? ನಮ್ಮಿಬ್ಬರ ಅಭಿಪ್ರಾಯಗಳು ಹೇಗಾದರೂ ಇರಲಿ. ನಿನ್ನ

ತಂದೆಯು ನಿನ್ನನ್ನು ವೀರಸಿಂಹನಿಗೆ ಕೊಟ್ಟು ಮದುವೆ ಮಾಡಬೇಕೆಂದು ನಿಶ್ಚಯಿಸಿದ್ದಾನೆಂದು ನೀನು ತಿಳಿಸಿದಂದಿನಿಂದ ದೇವರು ಏನ ಮಾಡತ್ತಾನೋ ನೋಡೋಣವೆಂದು ನಾನು ಆತುರದಿಂದ ಇರುತ್ತಿದ್ದೇನೆ ಅಲ್ಲವೆ? ನನ್ನ ಹಿಂದೆ ಮುಂದೆ ತಿರುಗಬೇಡವೆಂದು ನೀನು ಹೇಳಿದುದಕ್ಕೆ ನಾನು ಎಂದಾದರೂ ತಪ್ಪಿ ನಡೆದಿದ್ದೇನೆಯೇ? ಹೇಳು.

ವಿಮಲೆಯು ಇಲ್ಲ, ಇಲ್ಲ. ನಿನ್ನ ಮಾತಿನಂತೆ ನೀನು ನಡೆದಿದ್ದೀಯೆ, ಸಂದೇಹವೇ ಇಲ್ಲ; ಆದರೆ ಅದು ನಿನ್ನ ಸುಖಕ್ಕಾಗಿಯೇ ಘಾಡಿದುದು. ಈ ಲೋಕದಲ್ಲಿ ನನಗೆ ಹಿತಸಂಕರರಾರೂ ಇಲ್ಲ. ತಂದೆಯು ಲಕ್ಷ್ಯಮಾಡದೆ ಮಲ್ಲತಾಯಿಯು ಪ್ರೀತಿಸದಿರುವ ಈ ಸ್ಥಿತಿಯಲ್ಲಿ ಕೈ ಕಾಲು ಸ್ವಾಧೀನವಿಲ್ಲದಿದ್ದರೂ ತಾತನು ನನ್ನನ್ನು ಪ್ರೀತಿಸದಿದ್ದರೆ ನನ್ನ ಗತಿ ಏನಾಗಬೇಕು. ಎಲ್ಲರೂ ಶತ್ರುಗಳಾಗಿರುವಾಗ ಹಿತೈಷಿಯಾದ ತಾತನೂ ಜೀವಚ್ಛವವಾಗಿದಾನೆ. ನನ್ನ ಅದೃಷ್ಟಕ್ಕೆ ಎಣೆಯುಂಟೇ? ಇಂಥ ನನ್ನನ್ನು ನೀನು ಕೇವಲಕೃಪೆಯಿಂದ ಪ್ರೀತಿಸಬೇಕೇ ಅಲ್ಲದೆ ಮತ್ತಾವ ಪ್ರತ್ಯಾಶೆಯಿಂದಲೂ ಅಲ್ಲ

ಪ್ರಿಯೇ! ನನಗೆ ಮದುವೆಯಾಗಿರುವ ತಂಗಿಯೊಬ್ಬಳುಂಟು. ಅವಳನ್ನು ಕಂಡರೆ ನನಗೆ ಅತಿಪ್ರೀತಿ; ಅವಳಲ್ಲಿರುವ ಪ್ರೀತಿಗೂ ನಿನ್ನ ಮೇಲಿರುವ ಪ್ರೀತಿಗೂ ತುಂಬ ತಾರತಮ್ಯವಿದೆ ನಿನ್ನ ಯೋಜನೆಯು ಬಂದ ಕೂಡಲೇ ಎದೆಯು ಝಲ್ಲೆಂದು ಹಾರಿ ರೋಮಾಂಚವುಂಟಾಗುವುದು. ಹೀಗಿದ್ದರೂ ನಿನ್ನ ಪಾಣಿಗ್ರಹಣ ಮಾಡುವವರೆಗೂ ನನ್ನ ಪ್ರೇಮಾಧಿಕ್ಯವನ್ನು ನಿನ್ನಾಣೆಗೂ ತಡೆದಿರುವೆನು ಎಂದನು.

ಆ ಮಾತನ್ನು ಕೇಳಿ ವಿಮಲೆಯು ಸುಮ್ಮನಿದ್ದಳು. ಜಯವೀರನು ಮುನಃ ಹೇಳಲಾರಂಭಿಸಿ, ಎಲೌ ಪ್ರಿಯೇ! ವೀರಸಿಂಹನು ಇನ್ನೂ ಒಂದು ವರ್ಷ ಊರಿಗೆ ಬರುವುದಿಲ್ಲವಂತೆ; ಅದು ನಿಜವಾಗಿ ದೈವಸಹಾಯವೂ ಅನುಕೂಲಿಸಿದರೆ ಏಕೆ ನಮಗನುಕೂಲವಾಗಬಾರದು? ನನ್ನ ಇಷ್ಟಾರ್ಥವನ್ನು ದೇವರಲ್ಲಿ ದೃಢಭಕ್ತಿಯಿಂದ ಅರಿಕೆ ಮಾಡಿಕೊಂಡಿರುವೆನಾದುದರಿಂದ ನನ್ನ ಪ್ರಾರ್ಥನೆಯು ವ್ಯರ್ಥವಾಗಲಾರದು. ನನ್ನನ್ನು ನೀನು ನಿರ್ಭಾಗ್ಯನೆಂದು ನಿಂದಿಸಿದೆ. ನನಗಾಗಿ ನೀನು ಏನ ಮಾಡಿದ್ದೀಯೆ, ಸೋಜೋಣ? ಅಂದಿನಿಂದ ಪುತ್ಥಳಿಯಂತೆ ನನ್ನ ಇದಿರಿಗೆ ಒಂದು ನಿಲ್ಲುತ್ತೀಯೆ, ಅಲ್ಲದೆ ಮುಂದೆ ನನ್ನ ಇಷ್ಟಾರ್ಥವನ್ನು ನೆರವೇರಿಸಲು ಅವ ಏನಾದರೂ ಮಾಡಿದ್ದೀಯೆ ಎಂಬ

ದನ್ನು ಆವಾಗಲಾದರೂ ನನ್ನೊಡನೆ ಹೇಳಿದ್ದೀಯಾ? ವೀರಸಿಂಹನಲ್ಲಿ ನಿನಗೆ ಪ್ರೇಮ ವಿಲ್ಲದಿದ್ದರೂ ತಂದೆಯು ಬಲಾತ್ಕಾರದಿಂದ ಅವನ ಕೈ ಹಿಡಿಯಬೇಕಲ್ಲಾ ಎಂಬುದೊಂದೇ ದುಃಖವೋ ನಿನಗೆ? ಮತ್ತೇನಾದರೂ ಉಂಟೋ? ನಾನು ನಿನ್ನ ವಿಷಯದಲ್ಲಿ ಪ್ರಾಣ ವನ್ನಾದರೂ ಒಪ್ಪಿಸುತ್ತೇನೆ; ನನ್ನ ಪ್ರಾಣವು ನಿನ್ನ ಪ್ರಾಣದಲ್ಲಿ ಐಕ್ಯವಾಗಿ ಹೋಗಿದೆ. ನೀನು ಮತ್ತೊಬ್ಬನ ಕೈ ಹಿಡಿದ ಪೇಲೆ ನಾನು ಒಂದು ನಿಮಿಷವೂ ಬದುಕಿರಲಾರೆನು. ಹೀಗಿರುವಲ್ಲಿ ನಿನ್ನ ತಂದೆಯು ಮಾಡಿದ ಏರ್ಪಾಡನ್ನು ಇಷ್ಟು ಸಂಕೋಚವಿಲ್ಲದೆ ನನ್ನೊಡನೆ ಹೇಳಲು ನಿನಗೆ ಹೇಗೆ ತಾನೇ ಮನಸ್ಸು ಬಂದಿತು? ವಿಮಲೇ! ನಾನೇ ನೀನಾಗಿದ್ದು ನಾನು ನಿನ್ನನ್ನು ಪ್ರೀತಿಸುವಂತೆ ನೀನು ನನ್ನನ್ನು ಪ್ರೀತಿಸುತ್ತಿದ್ದಿದ್ದರೆ ನನ್ನ ಪ್ರಾಣಪ್ರಿಯನೇ! ಹೇಗಾದರೂ ಆಗಲಿ, ನಾನು ನಿನ್ನವಳೇ ಎನ್ನುತ್ತಲಿದ್ದೆನು ಎಂದನು.

ಅದನ್ನು ಕೇಳಿ ವಿಮಲೆಯ ಮುಖವು ಕೆಚ್ಚನಾಯಿತು. ಜಯವೀರನು ನೋಡಿ ನನ್ನಿಂದೇನಾದರೂ ತಪ್ಪು ಆಯಿತೇ? ನಾನು ಈಗ ಹೇಳಿದುದನ್ನೆಲ್ಲಾ ಮರೆತುಬಿಡು ಎಂದನು.

ನಿನ್ನಿಂದೇನು ಅಪರಾಧ? ತಾಯಿಯಿಲ್ಲದ ತಬ್ಬಲಿ ಏನ ಮಾಡಾಳು? ತಂದೆಯು ಆವುದನ್ನೂ ಪೆಯ್ಯ ಮೇಲೆ ಹಾಕಿಕೊಳ್ಳನು; ಮಲತಾಯಿಯು ಆವಾಗಲೂ ನನಗೆ ಪೊಗಗೊಡದೆ ದ್ವೇಷಿಸುತ್ತಲಿರುವಳು; ಮಲತಮ್ಮನು ಆವಾಗಲೂ ಕಲ್ಮಷಬುದ್ಧಿಯಿಂದ ಹಿಂಸಿಸುತ್ತಿರುವನು. ಹೀಗಿರುವಲ್ಲಿ ನಾನೇನ ತಾನೇ ಮಾಡಲಾಪೆನು?

ಏನು! ಮಲತಾಯಿಯು ನಿನ್ನನ್ನು ದ್ವೇಷಿಸುತ್ತಾಳೆಯೇ? ನಿನ್ನಂಥವಳನ್ನು ದ್ವೇಷಿಸಲು ಲೋಕದಲ್ಲಿ ಆರಿಗೆ ತಾನೇ ಮನಸ್ಸು ಬರುವುದು?

ಅವಳು ನನ್ನನ್ನು ದ್ವೇಷಿಸುವುದಕ್ಕೆ ಒಂದು ಕಾರಣವುಂಟು. ಅವಳಿಗೆ ತಾಯಿ ತಂದೆಯು ಆಸ್ತಿಯು ಆವುದೂ ಇಲ್ಲ. ನನ್ನ ಮಾತಾಮಹನ ಆಸ್ತಿಯೆಲ್ಲಾ ಅವನ ಕಾಲಾನಂತರ ನನಗೆ ಬರುವುದು; ತನ್ನ ಮಗನಿಗೆ ಆವುದೂ ಇಲ್ಲದೆ ನನಗೆ ಮಾತ್ರ ಇಷ್ಟು ಆಸ್ತಿಯೂ ಬರುವುದಲ್ಲಾ ಎಂದು ಅವಳಿಗೆ ನನ್ನಲ್ಲಿ ಅಸೂಯೆ. ಅವಳು ಜಾಯ ಬಿಟ್ಟು ನನ್ನನ್ನು ಕೇಳಿದರೆ ನನ್ನ ಆಸ್ತಿಯಲ್ಲಿ ಅರ್ಧವನ್ನಾದರೂ ಕೊಟ್ಟೇನು. ಅವಳು ನನ್ನನ್ನು ದ್ವೇಷಿಸದೆ ಪ್ರೀತಿಯುಳ್ಳವಳಾಗಿರುವುದಾದರೆ ನನ್ನ ಆಸ್ತಿಯನ್ನೆಲ್ಲಾ ಬೇಕಾದರೂ ಕೊಟ್ಟೇನು.

"ಅಯ್ಯೋಪಾಪ."

ತಂದೆಯು ಮನೆಯಲ್ಲಿದ್ದರೂ ಬಂದಿಶಾಲೆಯಲ್ಲಿರುವಂತೆ ಇದೆ. ಇಲ್ಲಿಂದ ತಪ್ಪಿಸಿ ಕೊಂಡು ಹೋಗೋಣವೆಂದರೆ ಅನಾಥೆಯಾಗಿ ಹೋಗಿಬಿಡುವೆನು. ತಂದೆಯು ಬುದ್ಧಿಮಂತನೆಂತಲೂ ವ್ಯಾಪಾರಿಕನೆಂತಲೂ ಗಣ್ಯನಾಗಿದ್ದಾನೆ; ಅವನ ಅಧಿಕಾರ ದೊಡ್ಡದು; ಅವನನ್ನು ಕಂಡರೆ ರಾಜನಿಗೂ ಹೆದರಿಕೆ. ತನ್ನ ಯೋಚನೆಯಂತೆ ನನ್ನ ವಿವಾಹವು ನಡೆಯುದಿದ್ದಲ್ಲಿ ಅವನು ನಿನ್ನನ್ನು ಒಂದು ನಿಮಿಷದಲ್ಲಿಯೇ ನಜ್ಜುಗುಜ್ಜು ಮಾಡುವನು. ನಿನ್ನ ಕ್ಷೇಮಾರ್ಥವಾಗಿಯೇ ನಾನು ಈ ಸೆರೆಯನ್ನು ಬಿಟ್ಟು ಬಾರದೆ ಇದ್ದೇನೆ.

ವಿಮಲೇ! ಹೀಗೆ ಏತಕ್ಕೆ ಕೆಟ್ಟುದನ್ನೇ ಯೋಚಿಸುತ್ತೀಯೆ?

ಹಿಂದೆ ನಡೆದು ಬಂದಿರುವುದನ್ನೆಲ್ಲಾ ಯೋಚಿಸಿ ನೋಡಿದರೆ ಮುಂದೆ ಹೀಗೆಯೇ ನಡೆಯುವುದೆಂದು ಖಂಡಿತವಾಗಿ ಹೇಳಬಹುದು. ಅದು ಹೋಗಲಿ. ನಿನ್ನನ್ನು ಒಂದು ಮಾತ ಕೇಳಬೇಕೆಂದಿದ್ದೆನು. "ಅದೇನು?"

ನಿನ್ನ ತಂದೆಗೂ ನನ್ನ ತಂದೆಗೂ ಹಿಂದೆ ಏನಾದರೂ ದ್ವೇಷವಿದ್ದಿತೋ?

ಅವುದನ್ನೂ ಕಾಣೆ; ರಾಜ್ಯತಂತ್ರವಿಚಾರಗಳಲ್ಲಿ ನನ್ನ ತಂದೆಯು ಚಕ್ರವರ್ತಿಯ ಪಕ್ಷವನ್ನೂ ನಿನ್ನ ತಂದೆಯು ರಾಜನ ಪಕ್ಷವನ್ನೂ ವಹಿಸಿದ್ದರು. ಅದಕ್ಕಾಗಿ ಏನಾದರೂ ದ್ವೇಷವಿದೆಯೋ ಏನೋ? ಇದನ್ನು ಏಕೆ ಕೇಳಿದೆ?

ಅದೂ ನಿನಗೆ ತಿಳಿದಿರಬೇಕಾದುದರಿಂದ ಹೇಳುತ್ತೇನೆ ಕೇಳು. ನಾನು ನಿತ್ಯವೂ ನನ್ನ ತಾತನಿಗೆ ವರ್ತಮಾನಪತ್ರಿಕೆಯನ್ನು ಓದಿ ಹೇಳುವ ಪದ್ಧತಿ. ಈಗ ಸುಮಾರು ಎಂಟು ತಿಂಗಳ ಹಿಂದೆ ಎಂದಿನಂತೆ ಪತ್ರಿಕೆಯನ್ನು ಓದುತ್ತಿದ್ದಾಗ ನನ್ನ ತಂದೆಯೂ ದುರ್ಮತಿಯೂ ಅಲ್ಲಿದ್ದರು. ಅಂದಿನ ಪತ್ರಿಕೆಯಲ್ಲಿ ನಿನಗೆ ಸೈನ್ಯದಲ್ಲಿ ದೊಡ್ಡ ಅಧಿಕಾರ ವಾಯಿತೆಂಬ ಸಮಾಚಾರವು ಬರೆದಿದ್ದಿತು. ಆ ವಿಷಯವನ್ನು ನೀನು ಹಿಂದಿನ ಸಾಯಂಕಾಲ ನನಗೆ ತಿಳಿಸಿದ್ದೆಯಾದ ಕಾರಣ ಅವರ ಮುಂದೆ ನಿನ್ನ ಹೆಸರನ್ನು ಹೇಳುವುದಕ್ಕೆ ನಾಚಿಕೊಂಡು ಅದನ್ನು ಓದಲೋ ಬೇಡವೋ, ಓದದಿದ್ದರೆ ಏನೆಂದುಕೊಳ್ಳುತ್ತಾರೆಯೋ, ಏನಾದರೂ ಆಗಲಿ ಎಂದು ಧೈರ್ಯವಾಡಿ ಓದಿದೆನು. ಆಗ ನನ್ನ ತಂದೆಯು 'ಜಯವೀರನಾರು? ಧನಕೋಟಿಯ ಮಗನೋ, ಎಂದು ಕೇಳಲು, ದುರ್ಮತಿಯು ಅಂತರಂಗದಲ್ಲಿ ದ್ವೇಷಾಸೂಯೆಗಳಿಂದ ಕೂಡಿದವನಾಗಿ, ಮೇಲೆ ನಗುತ್ತ, 'ಅಹುದು.'

ಎಂದನು. ಆಗ ನನ್ನ ತಂದೆಯು 'ಅವರೆಲ್ಲಾ ಚಂಡಾಲರು' ಎಂದನು. ಅಲ್ಲಿದ್ದವರಲ್ಲಿ ನಿನ್ನ ಹೆಸರನ್ನು ಕೇಳಿ ಸಂತೋಷಪಟ್ಟವನು ನನ್ನ ತಾತನೊಬ್ಬನೇ. ಅವನಿಗೆ ಸಂತೋಷವುಂಟಾದುದನ್ನು ಕಂಡು ನನಗೆ ಆಶ್ಚರ್ಯವಾಯಿತು. ನಿನಗೂ ಅವನಿಗೂ ಏನಾದರೂ ಸಂಬಂಧವುಂಟೋ?

ನಮ್ಮಪ್ಪನೂ ನಿನ್ನಜ್ಜನೂ ಚಕ್ರವರ್ತಿಪಕ್ಷದವರು; ಆದುದರಿಂದಲೇ ಅವರು ನನ್ನ ಹೆಸರನ್ನು ಕೇಳಿ ಸಂತೋಷಪಟ್ಟಿರಬಹುದು.

ಆಹೋ ನನ್ನನ್ನು ಕೂಗುವಂತಿದೆ; ನೀನು ಬೇಗ ಇಲ್ಲಿಂದ ಹೊರಟು ಹೋಗು ಎಂದು ವಿಮಲೆಯು ಹೊರಟಳು. ಒಡನೆಯೇ ಜಯನೀರನು ಸಮೀಪದಲ್ಲಿದ್ದ ಪೊದರನ್ನು ಹೊಕ್ಕು ಅಲ್ಲಿ ಏನೋ ಕೆಲಸಮಾಡುವವನಂತೆ ಇದ್ದನು.

ಅಮ್ಮಾ ವಿಮಲೆ! ನಿನ್ನನ್ನು ಎಲ್ಲೆಲ್ಲಿ ಹುಡುಕಲಿ? ಆರೋ ನಿನ್ನನ್ನು ನೋಡಬೇಕೆಂದು ಬಂದಿದ್ದಾರೆ, ಬಾ ಎಂದು ತೋಪಿನ ಅತ್ತ ಕಡೆಯಿಂದ ಆರೋ ಕೂಗಿದರು. ಕೂಡಲೆ ದಾಸಿಯೂ ಬಂದಳು.

ನನ್ನನ್ನು ಹುಡುಕಿಕೊಂಡು ಬಂದಿರುವರಾರು?

ಆರೋ ರಾಜಾಮಲಯಸಿಂಹನಂತೆ.

ಸರಿ, ಸರಿ, ಹಾಗಾದರೆ ನಡೆ, ಹೋಗೋಣ ಎಂದು ವಿಮಲೆಯು ಪುಸ್ತಕವನ್ನೂ ಕಸೂತಿಯ ಪೆಟ್ಟಿಗೆಯನ್ನೂ ತೆಗೆದುಕೊಂಡು ಅವಳ ಹಿಂದೆ ಹೊರಟಳು.

ಮೂವತ್ತೇಳನೆಯ ಅಧ್ಯಾಯ

ವಿಷವೈದ್ಯ

ವಲ್ಲಭದೇವನು ತನ್ನ ಮನೆಗೆ ಬಂದ ಮೇಲೆ ತಾನೂ ಅವನ ಮನೆಗೆ ಒಂದು ಸಾರಿ ಹೋಗಿಬರುವುದು ಸಂಪ್ರದಾಯವೆಂದು ಮಲಯಸಿಂಹನು ಅವನನ್ನು ನೋಡಲು ಹೋದನು. ರಾಜನು ಬಂದಾಗ ವಲ್ಲಭದೇವನು ಮನೆಯಲ್ಲಿರಲಿಲ್ಲ. ನಾಗಮಣಿಯೊಬ್ಬಳೇ ಕೊಟ್ಟಡಿಯಲ್ಲಿದ್ದಳು. ಒಡನೆಯೇ ಅವಳು ಮಗನನ್ನು ಕರೆದುಕೊಂಡು ಬರುವಂತೆ ಸೇವಕನಿಗೆ ಹೇಳಿ ಕಳುಹಿಸಿದಳು; ಕೂಡಲೆ ಹುಡುಗನು ಓಡಿ ಬಂದನು. ಹೀಗೆ

ಬಂದುದು ತಾಯಿಯ ಮಾತನ್ನು ಪರಿಪಾಲಿಸುವುದಕ್ಕೇ ಆಗಲಿ ಅಥವಾ ರಾಜನಿಗೆ ತನ್ನ ಕೃತಜ್ಞತೆಯನ್ನು ತೋರಿಸುವುದಕ್ಕೇ ಆಗಲಿ ಅಲ್ಲ ; ಎರಡು ಮೂರು ದಿನಗಳಿಂದ ಮನೆಯೊಳಗೆ ರಾಜನ ಪ್ರಸ್ತಾಪ ವಿನಾ ಮತ್ತಾವುದೂ ನಡೆಯದಿದ್ದುದರಿಂದ, ರಾಜನು ಬಂದನೆ ತನ್ನ ಅಸಂಬದ್ಧವಾದ ಮಾತುಗಳಿಗೆ ಅವಕಾಶವುಂಟಾಗುವುದೆಂದು ಓಡಿ ಬಂದನು. ಅವನಿಗೆ ತಾನಾಡುವ ಮಾತುಗಳು ಅಸಂಬದ್ಧವಾದುವುಗಳೆಂದೇ ಆಗಲಿ ಚಮತ್ಕಾರವಾದುವೆಂದೇ ಆಗಲಿ ತಿಳಿಯದು. ಇಂಥಾ ಮಾತುಗಳನ್ನಾಡಿದಾಗೆಲ್ಲಾ ತಾಯಿಯು 'ಏನು ಅದ್ಭುತಬುದ್ಧಿ' ಎಂದು ಹೇಳಿಕೊಂಡು ಹಿಗ್ಗುತ್ತಲಿದ್ದಳು.

ವಲ್ಲಭದೇವನನ್ನು ಕಾಣದೆ, ಯಜಮಾನರು ಮನೆಯಲ್ಲಿಲ್ಲವೋ ಎಂದು ರಾಜನು ಕೇಳಲು, ನಾಗಮಣಿಯು ಅವರು ಈಗ ತಾನೇ ಮಂತ್ರಿಯ ಮನೆಗೆ ಊಟಕ್ಕೆ ಹೋದರು. ನೀವು ಬಂದ ಸಮಾಚಾರವು ತಿಳಿದರೆ ಈ ವೇಳೆಯಲ್ಲಿ ತಾವು ಮನೆಯಲ್ಲಿರಲಿಲ್ಲವಲ್ಲಾ ಎಂದು ಅವರು ವ್ಯಸನ ಪಡುವರು ಎಂದು ಹೇಳಿ, ಮಗುವನ್ನು ನೋಡಿ ಎಲೋ ಮಗೂ ! ನಿನ್ನ ಅಕ್ಕನೆಲ್ಲಿ? ಅವಳಿಗೆ ರಾಜರನ್ನು ತೋರಿಸೋಣ. ಅರಸನ್ನಾದರೂ ಕಳುಹಿಸೋ, ಕರೆದುಕೊಂಡು ಬರಲಿ ಎಂದಳು.

ಓಹೋ ! ನಿಮಗೊಬ್ಬ ಮಗಳಿದ್ದಾಳೆಯೋ ಎಂದು ಮಲಯಸಿಂಹನು ಕೇಳಿದುದಕ್ಕೆ ಅವಳು ನನ್ನ ಸವತಿಯ ಮಗಳು ; ಬಲು ಚಲೋ ಹುಡುಗಿ ಎಂದಳು.

ನಾಗಮಣಿಯು ಹೀಗೆಂದ ಕೂಡಲೇ ಅಲ್ಲಿ ಇದ್ದ ಸಣ್ಣ ಗಿಣಿಯು ಪುಕ್ಕವನ್ನು ಎಳೆಯುತ್ತ ಆಡುತ್ತಿದ್ದ ನಾಗಕುಮಾರನು ಚಲೋ ಹುಡುಗಿ, ದೊಡ್ಡವಳು, ಆದರೂ ಸದಾ ಅಳುಮೋರೆಯವಳು ಎಂದು ಕೂಗಿಕೊಂಡನು.

ಬಾಯಿ ಮುಚ್ಚು ಎಂದು ಮಗುವನ್ನು ಗದ್ದರಿಸಿಕೊಂಡು ರಾಜನನ್ನು ನೋಡಿ ಸ್ವಾಮೀ ! ಈ ಹುಡುಗನು ಹೇಳುವುದು ನಿಜ. ನಾವು ಎಷ್ಟೆಷ್ಟು ಉಲ್ಲಾಸಗೊಳಿಸುತ್ತಲಿದ್ದರೂ ಅವಳು ಮಾತಾಡದೆ ಅಳುತ್ತ ಇರುವಳು ಎಂದು ಹೇಳಿ, ವಿಮಲೆಯು ಇನ್ನೂ ಬಾರದಿದ್ದುದನ್ನು ನೋಡಿ ಮಗೂ, ಅಕ್ಕನೇಕೆ ಬರಲಿಲ್ಲ, ನೋಡಿ ಬಾ ಎಂದಳು.

ಅವಳಿಲ್ಲದ ಸ್ಥಳದಲ್ಲೆಲ್ಲ ಅವರು ಅವಳನ್ನು ಹುಡುಕುತ್ತಾರೆ.

ಅವರೆಲ್ಲಿ ಹುಡುಕುತ್ತಾರೆ? ತಾತನ ಕೊಟ್ಟಡಿಯಲ್ಲಿ.

ಅವಳಿರುವುದೆಲ್ಲಿ?

ಬೂದಗದ ಮರದ ಕೆಳಗೆ ಎಂದು ಹೇಳಿ, ಹುಡುಗನು ನೊಣಗಳನ್ನು ಹಿಡಿದು ಗಿಣಿಯ ಪಂಜರದೊಳಗೆ ಹಾಕುತ್ತಲಿದ್ದನು.

ಅಷ್ಟರಲ್ಲಿಯೇ ವಿಮಲೆಯೂ ಬಂದಳು. ಅವಳ ಮುಖದಲ್ಲಿ ಚಿಂತೆಯು ತೋರುತ್ತಲಿದ್ದಿತು. ಚೆನ್ನಾಗಿ ಆ ಮುಖವನ್ನು ನೋಡಿದ್ದಲ್ಲಿ ಅವಳ ಹೃದಯದಲ್ಲಿ ಅಡಗಿರುವ ಸಂಕಟವು ಈಗ ತಾನೇ ಉಕ್ಕಿ ಬಂದು ಕಣ್ಣೀರಾಗಿ ಪ್ರವಹಿಸಿದಂತೆ ತೋರುತ್ತಲಿದ್ದಿತು.

ಕಥಾಪ್ರವಾಹದಲ್ಲಿ ನಮ್ಮ ಪಾತಕರಿಗೆ ವಿಮಲೆಯ ಪರಿಚಯವನ್ನು ಮಾಡಿಸುವುದಕ್ಕೆ ನಮಗೆ ಅವಕಾಶವಾಗಲಿಲ್ಲ. ಅವಳು ವಲ್ಲಭದೇವನ ಮೊದಲನೆಯ ಹೆಂಡತಿ ರೇಣುಕೆಯ ಮಗಳು. ಅವಳು ತನ್ನ ತಾಯಿಯಂತೆ ಉದ್ದವಾಗಿಯೂ ಸುಂದರಿಯಾಗಿಯೂ ಇದ್ದಳು. ಅವಳಿಗೆ ಸುಮಾರು ಹತ್ತೊಂಭತ್ತು ವಯಸ್ಸು. ಸ್ಫಟಿಕಶಿಲೆಯಲ್ಲಿ ಕಡೆದು ಮಾಡಿದಂತೆ ತೋರುವ ಅವಳ ತೋಳುಗಳೂ, ಸಣ್ಣ ಕೈ ಬೆರಳುಗಳೂ, ನಸುಗೆಂಪಾದ ಕಪೋಲಗಳೂ, ತಾವರೆಯ ದಳದಂತೆ ನೀಟಾದ ಕಣ್ಣುಗಳೂ, ಆಣಿ ಮುತ್ತುಗಳಂತಿದ್ದ ದಂತಗಳೂ, ಪಸಳವನ್ನು ಹಳಿಯುವ ತುಟಿಗಳೂ, ಅಪ್ಸರಸ್ತ್ರೀಯರ ರೂಪವನ್ನೂ ತುಳಿದು ಮೆಟ್ಟುವಂತಿದ್ದುವು.

ವಿಮಲೆಯು ಒಳಕ್ಕೆ ಬಂದ ಕೂಡಲೇ ಮಲಯಸಿಂಹನಿಗೆ ನಮಸ್ಕರಿಸಿ ಆಸನದಲ್ಲಿ ಕುಳಿತಳು.

ಸ್ವಾಮೀ ರಾಜನೇ! ಇವಳೇ ವಿಮಲೆ, ನನ್ನ ಸವತಿಯ ಮಗಳು ಎಂದು ನಾಗಮಣಿಯು ಹೇಳಿ ಮುಗಿಸುವುದರೊಳಗಾಗಿ ಸಮೀಪದಲ್ಲಿದ್ದ ದುಷ್ಟನಾದ ನಾಗಕುಮಾರನು ಇವರೇ ರಾಜಾಮಲಯಸಿಂಹರು, ಅರಬ್ಬೀದೇಶದ ರಾಜರು, ಚೀನಾದೇಶದ ಚಕ್ರವರ್ತಿ, ವಿಷವೈದ್ಯ ನಾಗರಾಜ ಪಂಡಿತರು ಎಂದು ಗಟ್ಟಿಯಾಗಿ ಅರಚಿಕೊಂಡನು. ಅವನಾಡಿದ ಮಾತನ್ನು ಕೇಳಿ ತಾಯಿಯ ಮುಖವು ಬಿಳ್ಚೀರಿತು; ಮಲಯಸಿಂಹನು ಪ್ರಸನ್ನಮುಖನಾಗಿದ್ದುದರಿಂದ ಅವಳಿಗೆ ಮಗನಲ್ಲಿ ಪ್ರೇಮವು ಇಮ್ಮಡಿಯಾಗಿ ಮುಖವು ಸೂರ್ಯೋದಯದ ಕಮಲದಂತೆ ಅರಳಿತು.

ಆಗ ಮಲಯಸಿಂಹನು ತಾಯಿ ಮಗಳ ಮುಖಗಳನ್ನು ನೋಡುತ್ತ ಅಮ್ಮಾ, ನಿಮ್ಮಿಬ್ಬರ ಮುಖಗಳನ್ನು ನೋಡಿದರೆ ಹಿಂದೆ ಆವಾಗಲೋ ನಾನು ನಿಮ್ಮನ್ನು ನೋಡಿದಂತೆ ತೋರುತ್ತದೆ. ನಾನೆಲ್ಲಿ ನೋಡಿರಬಹುದು ಎಂದನು.

ನಿಮ್ಮನ್ನು ನೋಡಿದಂತೆ ನಮಗೆ ಜ್ಞಾಪಕವಿಲ್ಲ. ವಿಮಲೆಯಂತೂ ಮನೆಯನ್ನು ಬಿಟ್ಟು ಹೋಗುವುದೇ ಇಲ್ಲ.

ಈ ಊರಿಗೆ ನಾನು ಬಂದುದು ಈಗಲೇ, ಇಲ್ಲಿ ನೋಡಿದ್ದೆನೆಂದು ಹೇಳಲಾರೆ ಎಂದು ಮಲಯಸಿಂಹನು ಜ್ಞಾಪಿಸಿಕೊಳ್ಳುವನಂತೆ ಸ್ವಲ್ಪಕಾಲ ಯೋಚನಾಪರನಾಗಿ, ತಾಳಿ, ತಾಳಿ ; ಈಗ ಸ್ವಲ್ಪ ಜ್ಞಾಪಕಕ್ಕೆ ಬಂದಿತು. ಆವುದೋ ಜಾತ್ರೆಯಲ್ಲಿ ನಿಮ್ಮ ಈ ಮಗಳು ಕಯ್ಯಲ್ಲಿ ಹೂವಿನ ಗೊಂಚಲನ್ನು ಹಿಡಿದಿದ್ದಳು ; ಈ ಸಣ್ಣ ಮಗುವು ಒಂದು ನವಿಲನ್ನು ಆಟ್ಟಿಸಿಕೊಂಡು ಹೋಗುತ್ತಿದ್ದಿತು. ನೀವು ಒಂದು ಲತಾಗೃಹದ ಕೆಳಗೆ ಕುಳಿತಿದ್ದಿರಿ; ಅಲ್ಲವೆ! ಇವುಗಳು ನಿಮಗೆ ನೆನಪುಂಟೇ?

ನಿಮ್ಮನ್ನು ನಾನು ಎಲ್ಲಿಯೂ ನೋಡಿದಂತೆ ಇಲ್ಲ ಎಂದು ನಾಗಮಣಿಯು ಹೇಳುತ್ತಿದ್ದಾಗ, ವಿಮಲೆಯು ಬಹುಶಃ ಇಂದ್ರಪ್ರಸ್ಥದಲ್ಲಿ ನಾವು ಇದ್ದಾಗ ತಾವು ಅಲ್ಲಿ ನಮ್ಮನ್ನು ನೋಡಿರಬಹುದು ಎಂದಳು.

ವಿಮಲೆಯು ಅಷ್ಟು ಹೇಳಿದೊಡನೆಯೇ ತನಗೆ ಎಲ್ಲವೂ ಜ್ಞಾಪಕಬಂದಂತೆ ರಾಜನು 'ಅಹುದು, ಪಾಪವಿನಾಶನೀನಗರದ ಉತ್ಸವದಲ್ಲಿ ಮಧುವನದೊಳಗೆ ನಾವೆಲ್ಲಾ ಒಂದು ಕಡೆ ಸೇರಿದ್ದೆವು' ಎಂದನು.

ಊರು, ಉತ್ಸವ, ತೋಟ, ಎಲ್ಲವೂ ಜ್ಞಾಪಕವಿದೆ ; ನಿಮ್ಮನ್ನು ಅಲ್ಲಿ ನೋಡಿದಂತೆ ಜ್ಞಾಪಕವಿಲ್ಲವಲ್ಲಾ, ವಿಮಲೇ ! ನಿನಗೇನಾದರೂ ಜ್ಞಾಪಕವಿದೆಯೇ ?

ನನಗೂ ಇಲ್ಲ.

ಆಗ ನಾಗಕುಮಾರನು ನನಗೆ ಚೆನ್ನಾಗಿ ಜ್ಞಾಪಕವಿದೆ ಎಂದನು.

ಅಮ್ಮಾ ! ನಿಮಗೆ ಜ್ಞಾಪಕಬರಲು ಕೆಲವು ಸಂಗತಿಗಳನ್ನು ಹೇಳುತ್ತೇನೆ ಕೇಳಿರಿ, ಅಂದು ಬಲು ಬಿಸಿಲು ; ಜಾತ್ರೆಯ ಗುಂಪಿನಲ್ಲಿ ಬಂಡಿಯ ಕುದುರೆಗಳು ಬರುವುದು ಸಾಧ್ಯವಾಗಿತ್ತು ; ನೀವು ಕುಂಜದೊಳಗೆ ಉಚ್ಚಾಸನದಲ್ಲಿ ಕುಳಿತಿದ್ದಿರಿ ; ನಿಮ್ಮ ಮಗಳು

ಮಧುವನದ ಸಾಲುಮರದ ನೆರಳಿನಲ್ಲಿ ಓಡಾಡುತ್ತಲಿದ್ದಳು; ಈ ಮಗುವು ನವಿಲನ್ನು ಅಟ್ಟಿಸಿಕೊಂಡು ಹೋಗಿ ಕಣ್ಣಿಗೆ ಮರೆಯಾಯಿತು.

ಸರಿ; ಅಮ್ಮಾ, ಅಹುದು. ಅದರ ವರೂರು ಗರಿಗಳನ್ನು ಕಿತ್ತು ನಾನು ಟೋಪಿಯಲ್ಲಿ ಸಿಕ್ಕಿಸಿಕೊಳ್ಳಲಿಲ್ಲವೇ ಎಂದು ನಾಗಕುಮಾರನು ಕಿರಿಚಿಕೊಂಡನು. ಆಗ ತಾಯಿಯು ರಾಜರೇ! ಅವನ ಮಾತು ಹಾಗಿರಲಿ; ತಾವು ಮುಂದೆ ಹೇಳೋಣಾಗಲಿ ಎಂದಳು.

ಇವರಿಬ್ಬರೂ ಇಲ್ಲದ ಸಮಯದಲ್ಲಿ ಅರೊಂದಿಗೋ ನೀವು ಬಲು ಹೊತ್ತು ಮಾತನಾಡುತ್ತಲಿರಲಿಲ್ಲವೇ, ಎಂದು ಮಲಯಸಿಂಹನು ಕೇಳಲು, ನಾಗಮಣಿಯು ಭಯಾಕ್ರಾಂತಳಾಗಿ ನಿಜ, ಅವರು ವೈದ್ಯರು, ಭಿಷಜ್ಮಣಿಗಳೆಂದು ಅವರನ್ನು ಆ ಊರಿನವರು ಕರೆಯುತ್ತಲಿದ್ದರು. ಆಗ ತಾವೆಲ್ಲಿದ್ದಿರಿ?

ಅಮ್ಮಾ! ಅವನೇ ನಾನು. ಆ ಊರಿನಲ್ಲಿ ಎರಡು ವಾರಗಳಲ್ಲಿ ನನ್ನ ಕಯ್ಯಾಳಿಗೆ ಬಂದಿದ್ದ ಜ್ವರವನ್ನೂ, ನಾನಿದ್ದ ಮನೆಯ ಯಜಮಾನನ ಕಾಮಾಲೆಯನ್ನೂ ವಾಸಿ ಮಾಡಿದೆನು; ಅದಕ್ಕೆ ಅಲ್ಲಿಯವರು ಭಿಷಜ್ಮಣಿ ಎಂದು ನನ್ನನ್ನು ಕರೆಯುತ್ತಲಿದ್ದರು. ಆಗ ಅನೇಕವಿಷಯಗಳ ಪ್ರಸ್ತಾಪ ಬಂದು ಕೊನೆಗೆ ವಿಷವೈದ್ಯದ—— ——.

ಅಷ್ಟು ಹೊತ್ತಿಗೆ ಅಲ್ಲಿದ್ದ ಗಡಿಯಾರವು ಆರು ಗಂಟೆಯನ್ನು ಹೊಡೆಯಲು, ನಾಗಮಣಿಯು ವಿಮಲೆಯನ್ನು ನೋಡಿ ಅಮ್ಮಾ, ನಿನ್ನ ತಾತನಿಗೆ ಔಷಧಿಕೊಡುವ ಹೊತ್ತಾಯಿತು, ಹೋಗು ಎಂದಳು.

ವಿಮಲೆಯು ಅತ್ತ ಹೋಗುತ್ತಲೆ ಇತ್ತ ಮಲಯಸಿಂಹನು ಅಮ್ಮಾ! ನೀವು ನನಗಾಗಿ ವಿಮಲೆಯನ್ನು ಇಲ್ಲಿಂದ ಹೊರಡಿಸಿದಂತೆ ತೋರುತ್ತದೆ ಎನ್ನಲು, ಸ್ವಾಮೀ! ನನ್ನ ಮಾವಂದಿರ ಅವಸ್ಥೆಯನ್ನು ತಾವು ಕೇಳಿರಬಹುದು ಎಂದಳು.

ನಿಮ್ಮ ಯಜಮಾನರು ಹೇಳಿದ್ದರು.

ನಮ್ಮ ಗೃಹಕೃತ್ಯದ ವಿಚಾರ ತಮಗೆ ರುಚಿಸದು. ಅದು ಹಾಗಿರಲಿ. ತಾವೇನೋ ವಿಷವೈದ್ಯರೆಂದು ಹೇಳುತ್ತಲಿದ್ದಿರಿ; ಅದೇನು ಅಪ್ಪಣೆಯಾಗಲಿ.

ನಾನು ವೈದ್ಯನೆಂದು ಹೇಳಿಕೊಳ್ಳಲಿಲ್ಲ ಎಂದು ಮಲಯಸಿಂಹನು ನಕ್ಕು, ಮನುಷ್ಯರ ಶರೀರದಲ್ಲಿ ಯಾವ ಯಾವ ರಸಗಳು ಸೇರಿದರೆ ಏನೇನು ಕೆಲಸ ಮಾಡುತ್ತದೆ

ಎಂಬುದನ್ನು ತಿಳಿದುಕೊಳ್ಳಬೇಕೆಂದು ರಸವಿದ್ಯೆಯನ್ನು ತಿಳಿದುಕೊಂಡಿರುವೆನೇ ಹೊರತು ವೈದ್ಯವನ್ನು ಮಾಡುವುದಕ್ಕಲ್ಲ. ಪೂರ್ವದೇಶಗಳಲ್ಲಿ ವಾಸಮಾಡತಕ್ಕವರಿಗೆ ಈ ವಿದ್ಯೆಯು ಅಗತ್ಯವಾಗಿ ತಿಳಿದಿರಬೇಕು; ಇಲ್ಲವಿದ್ದರೆ ಅವರು ಬದುಕುವುದೇ ಒಹು ಕಷ್ಟ. ನಾನು ಈ ವಿದ್ಯೆಯನ್ನು ನಾಗರಾಜವಿಷವೈದ್ಯನಿಂದ ಕಲಿತೆನು.

ಆ ವೇಳೆಗೆ ಚಿತ್ರದ ಪುಸ್ತಕವನ್ನು ಕಯ್ಯಲ್ಲಿಟ್ಟುಕೊಂಡು ಅದರ ಹಾಳೆಗಳನ್ನು ಬಂದೊಂದಾಗಿ ಹರಿಯುತ್ತಲಿದ್ದ ನಾಗಕುಮಾರನು ಸುಮ್ಮನಿರದೆ ಪ್ರತಿನಿತ್ಯವೂ ಬೆಳಿಗ್ಗೆ ಏಳುತ್ತಲೆ ವಿಷವಿಸ್ರವಾದ ಹಾಲನ್ನು ಕುಡಿಯುತ್ತಲಿದ್ದ ವಿಷವೈದ್ಯ ನಾಗರಾಜ ಎಂದು ಗಟ್ಟಿಯಾಗಿ ಕೂಗಿಕೊಳ್ಳಲು, ತಾಯಿಗೆ ತುಂಬಾ ಅಸಮಾಧಾನವುಂಟಾಗಿ ಹುಡುಗನ ಕಯ್ಯಿಂದ ಚಿತ್ರದ ಪುಸ್ತಕವನ್ನು ಕಿತ್ತುಕೊಂಡು ಹೊರಗೆ ಹೋಗು ಎಂದು ಗದ್ದರಿಸಿ ಕೊಂಡಳು.

ನಾನು ಹೋಗುವುದಿಲ್ಲ. ' ಹೋಗುತ್ತೀಯೋ, ಇಲ್ಲವೋ ? "

ಪುಸ್ತಕವನ್ನು ಕೊಟ್ಟ ಹೊರತು ಹೋಗೆನು.

ಚಿತ್ರಗಳನ್ನು ಹರಿಯುವುದೇಕೆ ? " ಅದರಲ್ಲಿ ನನಗೆ ತೃಪ್ತಿ "

ಹೋಗಪ್ಪಾ ! ಹೋಗು. " ಅದನ್ನು ಕೊಡು, ನಾನು ಹೋಗುತ್ತೇನೆ "

ಹಾಗಾದರೆ ತೊಲಗಿಸಿಕೊಂಡು ಹೋಗು ಎಂದು ಪುಸ್ತಕವನ್ನು ಕೊಟ್ಟು ಹುಡುಗನನ್ನು ಹೊರಗೆ ಬಿಟ್ಟು ಬರಲು ಹೋದಳು. ಆಗ ಮಲಯಸಿಂಹನು ' ಆ ಹುಡುಗನನ್ನು ಕಳುಹಿಸಿದ ಮೇಲೆ ಇವಳು ಕದವನ್ನು ಹಾಕಿಕೊಂಡು ಬರಬಹುದು. ವಿಷವೈದ್ಯದ ರುಚಿಯು ಇವಳ ತಲೆಗೆ ಹತ್ತಿದಂತಿದೆ' ಎಂದು ಯೋಚಿಸುತ್ತಲಿದ್ದ ಹಾಗೇ ಅವಳು ಬಾಗಿಲನ್ನು ಮುಚ್ಚಿಕೊಂಡು ಬಂದಳು.

ಸ್ವಾಮೀ ! ವಿಷವೈದ್ಯನಾಗರಾಜನು ವಿಷವನ್ನು ಸಾಧನೆಮಾಡುತ್ತಲಿದ್ದುದರಿಂದ ಅವನಿಗೇನಾದರೂ ಪ್ರಯೋಜನವಾಯಿತೋ ? ಎಂದು ನಾಗಮಣಿಯು ಕೇಳಲು ರಾಜನು ' ಆಗಿರಬೇಕು; ನನಗೂ ಆ ಅಭ್ಯಾಸವಿಲ್ಲದಿದ್ದಿದ್ದರೆ ನಾನು ಇಷ್ಟು ದಿನಕ್ಕೆ ಎಷ್ಟೋ ಸಾವಿ ಸಾಯುತ್ತಲಿದ್ದೆನು' ಎಂದನು.

ಆ ದೇಶದಲ್ಲಿ ಸಾಧನೆ ಮಾಡುವಂತೆ ನಮ್ಮ ದೇಶದಲ್ಲಿಯೂ ಮಾಡಬಹುದೋ?

ಏಕೆ ಆಗ ಕೂಡದು ?

ಶೀತಸೀಮೆಯಲ್ಲಿರುವವರ ರಕ್ತಕ್ಕೂ ಉಷ್ಣಸೀಮೆಯಲ್ಲಿರುವವರ ರಕ್ತಕ್ಕೂ ತಾರತಮ್ಯವಿದೆ; ಆದುದರಿಂದ ಅಲ್ಲಿ ಆವ ವಿಷವನ್ನು ಪ್ರಯೋಗಮಾಡಿದರೆ ಕೆಂದು ವುದೋ ಆದೇ ವಿಷವನ್ನು ಇಲ್ಲಿ ಪ್ರಯೋಗಮಾಡಿದರೆ ಕೆಂದದು ಎಂದು ಆರೋ ಹೇಳಿ ದ್ದರು. ಆದಕ್ಕಾಗಿ ತಮ್ಮನ್ನು ವಿಚಾರಿಸಿದೆ.

ವಿಷಗಳಲ್ಲಿ ಅನೇಕಭೇದವುಂಟು. "ಅದನ್ನೆಲ್ಲಾ ನಾನು ಬಲ್ಲೆನು."

ಹಾಗಾದರೆ ನನ್ನಿಂದ ನಿಮಗೆ ತಿಳಿಯಬೇಕಾದುದು ಆವುದೂ ಇರಲಾರದು.

ಇಂತಹ ಗುಪ್ತಶಾಸ್ತ್ರಗಳನ್ನು ಕಲಿಯಲು ನನಗೆ ಬಲು ಆಸೆ. ಮುಂದಕ್ಕೆ ಅಪ್ಪಣೆಯಾಗಲಿ.

ಯಾವ ಯಾವ ವಿಷವನ್ನು ಯಾವ ಯಾವ ರೀತಿಯಲ್ಲಿ ಪ್ರಯೋಗಿಸಿದರೆ ಎಷ್ಟೆಷ್ಟು ದಿನಗಳಲ್ಲಿ ಆಯಾ ವಿಷವು ಅದರದರ ಕಾರ್ಯವನ್ನು ಮಾಡುವುದು ಎಂಬುದು ಚೆನ್ನಾಗಿ ತಿಳಿದಿರಬೇಕು.

ಪೂರ್ವದೇಶದ ಹೆಂಗುಸರು ವಿಷಪ್ರಯೋಗ ಮಾಡುವುದರಲ್ಲಿ ಬಹುಚತುರೆಯರೆಂದು ಕೇಳಿದ್ದೇನೆ. ಅದು ನಿಜವೇ ಸ್ವಾಮೀ?

ಅವರು ಬೇಕಾದವರಿಗೆ ಮೆಚ್ಚು ಮದ್ದನ್ನು ಕೊಟ್ಟು ತಮ್ಮ ಸ್ವಾಧೀನ ಮಾಡಿ ಕೊಳ್ಳುವರು. ಬೇಡದೆ ಇದ್ದವರನ್ನು ಲೇಶವೂ ಅನುಮಾನಕ್ಕೆ ಕಾರಣವಿಲ್ಲದಂತೆ ಸಾಗಿಸಿಬಿಡುವರು.

ಅದು ಹೇಗೆ? ನಮ್ಮ ದೇಶದಲ್ಲಿ ಆರಾದರೂ ಸ್ವಲ್ಪ ಅನುಮಾನದಿಂದ ಸತ್ತರೂ, ಪೋಲೀಸಿನವರು ಇಲ್ಲದ ಅವಾಂತರಮಾಡಿ ಬಿಡುವರು. ಅಲ್ಲಿ ಹಾಗಿಲ್ಲವೋ?

ಅಲ್ಲಿಯೂ ಅವರ ಅವಾಂತರವಿದೆ; ಆದರೂ ಅಲ್ಲಿಯ ಹೆಂಗುಸರು ಆದಕ್ಕೆಲ್ಲಾ ಸಿಕ್ಕಿಕೊಳ್ಳುವುದಿಲ್ಲ.

ಅದು ಹೇಗೆ! ದಯೆಮಾಡಿ ತಿಳಿಸಬೇಕು.

ಅವರು ಆವ ವಿಷವನ್ನು ಪ್ರಯೋಗಿಸಬೇಕೆಂದಿರುವರೋ ಆದನ್ನು ನೀರಿನಲ್ಲಿ ಕಲ್ಲೆಸಿ, ಆ ನೀರಿನಿಂದ ಪಲ್ಯವನ್ನು ಬೆಳೆಸಿ, ಆ ಪಲ್ಯವು ಬೆಂದ ನೀರಿನಲ್ಲಿ ಮತ್ತೆ ಪಲ್ಯವನ್ನು ಬೆಳೆಸಿ, ಹೀಗೆ ಏಳೆಂಟಾರಿ ಮಾಡುವರು. ಎಂಟನೆಯ ಸಲ ಬೆಳೆದ ಪಲ್ಯದಲ್ಲಿ ವಿಷದ

ವೇಗವೂ ತೋರದು. ಇಂಥ ಪಲ್ಯವನ್ನು ಅಟ್ಟು ಬಡ್ಡಿಸಿದರೆ ನಿಧಾನವಾಗಿ ಆ ವಿಷವು ಅನುಮಾನಕ್ಕೆ ಕಾರಣವಿಲ್ಲದೆ ತನ್ನ ಕೆಲಸವನ್ನು ಮಾಡುವುದು.

ರಾಜರೇ ! ಹೀಗೆ ವಿಷಪ್ರಯೋಗಮಾಡಿ ಕೊಲ್ಲುವವರಿಗೆ ಸದಸದ್ವಿಚಾರಶಕ್ತಿಯೇ ಇರುವಂತೆ ತೋರುವುದಿಲ್ಲ.

ಆ ಶಕ್ತಿಯಿಲ್ಲವೆಂದು ಹೇಳಲಾಗದು. ಆದರೆ ಅನೇಕಕಾರಣಗಳು ಆ ವಿಚಾರ ಗಳನ್ನು ಮಟ್ಟುಗೊಳಿಸುವುವು. ವ್ಯಭಿಚಾರಿಯಾದ ಹೆಂಗುಸು ವಿಷವಿಕ್ಕಿ ಗಂಡ ನನ್ನು ಕೊಂದು ತನ್ನ ಸ್ವೇಚ್ಛಾವಿಹಾರಕ್ಕೆ ಇದ್ದ ಅಡ್ಡಿಯನ್ನು ನಿವೃತ್ತಿಮಾಡಿಕೊಳ್ಳು ವಳು. ಚೀನಾದೇಶದಲ್ಲಿ ಒಬ್ಬ ರಾಜಪುತ್ರನು ರಾಜನಾಗಿದ್ದ ತನ್ನ ಅಣ್ಣನು ಸಾಯು ತ್ತಲೆ ಅವನ ಇಬ್ಬರು ಮಕ್ಕಳನ್ನು ' ಇವರು ಬದುಕಿದ್ದರೆ ರಾಜ್ಯಕ್ಕೆ ಬರುವರು ; ಆದ ರಿಂದ ಜನಗಳಿಗೆ ಸುಖವಿಲ್ಲ ' ಎಂದು ಆ ಇಬ್ಬರು ಮಕ್ಕಳನ್ನೂ ಕೊಂದು ತಾನು ದೊರೆ ಯಾದನಂತೆ. ಇನ್ನೊಬ್ಬ ಮಹಾರಾಣಿಯು ತನ್ನ ಗಂಡನು ಎಂದಿದ್ದರೂ ಸಾಯಬೇಕು; ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೆ ಈಗಲೇ ಪಟ್ಟಾಭಿಷೇಕಮಾಡಿ ಆ ಸಂತೋಷವನ್ನು ಅನುಭವಿಸಬೇಕೆಂದು ಯೋಚಿಸಿ ಗಂಡನನ್ನೇ ಕೊಂದಳಂತೆ. ಲೋಕದಲ್ಲಿ ತಾಯಿಗೆ ಮಗನಲ್ಲಿರುವ ಪ್ರೀತಿಯು ಸದ್ಗುಣಗಳಲ್ಲಿ ದೊಡ್ಡದೆನಿಸಿಕ್ಕೊಂಡಿರುವುದು ; ಆದಕ್ಕೆ ಅಡ್ಡಿ ಯಾಗಿರುವುದನ್ನೆಲ್ಲಾ ನಿವೃತ್ತಿಮಾಡಲು ಬೇಕಾದಷ್ಟು ಕಾರಣಗಳು ಇರುವುವು. ವಿಚಾ ರಶಕ್ತಿಯಿಲ್ಲದಿದ್ದರೆ ಈ ಯೋಚನೆಗಳು ಹುಟ್ಟವು ಎಂದನು.

ರಾಜನು ಹೇಳುತ್ತಿದ್ದುದನ್ನೆಲ್ಲಾ ಕುತೂಹಲದಿಂದ ಕೇಳಿ, ರಾಜರೇ ! ನೀವು ಅದ್ಭುತವಾದಿಗಳು ; ನಿಮ್ಮ ಮಾತನ್ನು ಕೇಳುತ್ತಿರುವವರು ಮನಸ್ಸು ಕರಗಿ ನಿಮ್ಮ ಮಾರ್ಗಕ್ಕೆ ಬರುವರು. ನನ್ನ ಮಗನಿಗೆ ದ್ರಾವಕವನ್ನು ಕೊಟ್ಟು ಬದುಕಿಸಿದುದರಿಂದ ನೀವು ಒಳ್ಳೆಯ ರಸವೈದ್ಯರೆಂದು ತೋರುತ್ತದೆ ಎಂದಳು.

ಅಮ್ಮಾ ! ಅದರಲ್ಲಿ ಅಷ್ಟು ನಂಬಿಕೆಯನ್ನಿಡಬೇಡಿ ; ಒಂದು ತೊಟ್ಟು ಬಿಟ್ಟರೆ ಸಾಯುವ ಮಗುವು ಬದುಕುವುದು ; ಮೂರು ತೊಟ್ಟುಗಳು ವಾಯುಕೋಶಗಳಿಗೂ ತಲೆಗೂ ರಕ್ತವನ್ನು ತಂದು ತುಂಬುವುವು ; ಆರು ತೊಟ್ಟುಗಳು ಶ್ವಾಸೋಚ್ಛ್ವಾಸವನ್ನು ನಿಲ್ಲಿಸಿ ಮೂರ್ಛೆಯನ್ನುಂಟುಮಾಡುವುವು ; ಹತ್ತು ತೊಟ್ಟುಗಳು ಪ್ರಾಣವನ್ನೇ ಕೊಂಡು

ಹೋಗುವುವು. ಆದುದರಿಂದಲೇ ಅಂದು ನಿನ್ನ ಮಗನು ಆ ಸೀಸೆಗೆ ಕೈ ಹಾಕಲು ನಾನು ಬೇಡವೆಂದು ಹೇಳಿದುದು.

ಅದು ಅಷ್ಟು ಭಯಂಕರವಾದ ವಿಷವೇ?

ಔಷಧಿಗಳಲ್ಲಿ ಕ್ರೂರವಾದ ವಿಷಗಳೂ ಸೇರಿರುತ್ತವೆಯಾಗಿ ಲೋಕದಲ್ಲಿ ವಿಷವೆಂಬುದೇ ಇಲ್ಲವೆಂದು ಇಟ್ಟುಕೊಳ್ಳಬೇಕು. ಪದಾರ್ಥಗಳನ್ನು ಉಪಯೋಗಿಸುವುದರಲ್ಲಿ ಅವು ವಿಷವೂ ಆಗಬಹುದು, ಔಷಧಿಯೂ ಆಗಬಹುದು.

ಸ್ವಾಮೀ! ನನಗೆ ಆಗಾಗ ಉಸಿರು ಹಿಡಿಯುವುದೂ ತಲೆ ತಿರುಗುವುದೂ ಮೂರ್ಛೆಹೋಗುವಂತಾಗುವುದೂ ಉಂಟು. ಅದಕ್ಕೆ ಈ ದ್ರಾವಕವು ಅನುಕೂಲವಾಗುತ್ತದೋ?

ಆಹಾ! ಸಂದೇಹವೇನು?

ಇದನ್ನು ಹೇಗೆ ಮಾಡುವುದು, ಎಂದು ಕೇಳಲಿಕ್ಕೆ ಸಂಕೋಚಪಡುತ್ತೇನೆ.

ನಿಮಗೆ ಸಂಕೋಚವಾದರೂ ನಾನು ಧಾರಾಳವಾಗಿ ಅದನ್ನು ಮಾಡುವ ವಿಧಾನವನ್ನು ಒದೆದು ಕಳುಹಿಸುತ್ತೇನೆ.

ಅಷ್ಟು ಮಾಡಿದರೆ ಬಹುಉಪಕಾರ ಮಾಡಿದಂತೆ ಆಗುವುದು.

ಆಗತ್ಯವಾಗಿ ಆಗಲಿ; ನಾನು ಹೋಗಿಬರುವೆನು ಎಂದು ಹೇಳಿ ಮಲಯಸಿಂಹನು ಹೊರಟನು. ನಾಗಮಣಿಯು ತಲೆಬಾಗಿಲ ವರೆಗೆ ಬಂದು ರಾಜರೇ! ದ್ರಾವಕದ ವಿಧಾನ ಜ್ಞಾಪಕವಿರಲಿ ಎಂದಳು.

ಅಮ್ಮಾ! ನಿಮ್ಮ ಸಂಗಡ ಒಂದು ಗಂಟೆಯಿಂದ ಮಾತನಾಡುತ್ತಲಿದ್ದುದನ್ನು ಮರೆತರೆ ದ್ರಾವಕಮಾಡುವ ವಿಧಾನವನ್ನು ಬರೆದು ಕಳುಹಿಸಬೇಕೆಂಬುದನ್ನು ಮರೆಯುವೆನು ಎಂದು ಹೇಳಿ ಮಲಯಸಿಂಹನು ಬಂಡಿಯಲ್ಲಿ ಕುಳಿತು 'ಇದು ಬಹುಫಲವತ್ತಾದ ಭೂಮಿ; ಇದರಲ್ಲಿ ನಾಟಿದ ಬೀಜವು ವ್ಯರ್ಥವಾಗದು,' ಎಂದುಕೊಂಡು ಸಂತೋಷದಿಂದ ಮನೆಯನ್ನು ಸೇರಿದನು.

ಮೂವತ್ತೊಂಬನೆಯ ಅಧ್ಯಾಯ

ನಾಟಕಶಾಲೆ

ನಮ್ಮ ಕಥೆಯು ನಡೆಯುತ್ತಲಿದ್ದಕಾಲದಲ್ಲಿ ಅಮರಪುರಕ್ಕೆ ಒಂದು ಹೊಸ ನಾಟಕದ ಸಮಾಜವು ಒಂದಿತು. ಅದರ ಯಜಮಾನನು ನಾಟ್ಯವೇದವಿಚಕ್ಷಣನಾಗಿ ಕಲಾವಿದನಾಗಿ ಲೋಕಜ್ಞನಾಗಿ ಇದ್ದನು. ನಟಿಗಳೆಲ್ಲರೂ ತಮ್ಮ ಕಾರ್ಯಗಳಲ್ಲಿ ನಿಪುಣೆಯರಾಗಿ ಇದ್ದುದರಿಂದ ಆ ಪುರದ ಜನರೆಲ್ಲರೂ ಆ ನಾಟಕವನ್ನು ನೋಡಲು ಬಹು ಕುತೂಹಲವುಳ್ಳವರಾಗಿದ್ದರು.

ತಾವು ನಾಟಕಕ್ಕೆ ಹೋಗಲಿ ಹೋಗದಿರಲಿ, ನಾಟಕಶಾಲೆಯಲ್ಲಿ ಒಂದು ಆಸನವನ್ನು ತೆಗೆದಿಟ್ಟಿರುವುದು ಗೌರವವೆಂದು ದೊಡ್ಡ ಮನುಷ್ಯರೆಲ್ಲರೂ ತಿಳಿದುಕೊಂಡಿದ್ದರು. ಇಂದು ನಾಟಕಕ್ಕೆ ಹೋಗುವುದಕ್ಕೆ ಆಗುವುದಿಲ್ಲವೆಂದು ಹೇಳಿ ಮಂತ್ರಿಯು ತನ್ನ ಆಸನವನ್ನು ಆರಾದರೂ ಆಕ್ರಮಿಸಿಕೊಳ್ಳಬಹುದೆಂದು ಮುಖ್ಯಶಿಷ್ಯನಾದ ದಮನಕನಿಗೆ ಹೇಳಿದನು. ಅವನು ಅದನ್ನು ಭಾಮಿನಿಗೆ ತಿಳಿಸುವಂತೆ ದುರ್ಮತಿಗೆ ಹೇಳಿದನು. ಸಾಧಾರಣವಾಗಿ ಧನವಂತರಲ್ಲಿ ಒಂದು ಗುಣ ವಿಶೇಷವುಂಟು :— ಕೋಟ್ಯಧೀಶರಾಗಿ ಅನೇಕ ರಾಜರನ್ನೂ ರಾಜ್ಯಗಳನ್ನೂ ಕ್ರಯಕ್ಕೆ ಕೊಳ್ಳುವ ಶಕ್ತಿಯಿದ್ದರೂ ಕಯ್ಯ ಕಾಸು ಹೋಗದಂತೆ ಅವುದು ಸಿಕ್ಕಿದರೂ ಅದನ್ನು ಅತಿ ಪ್ರೀತಿಯಿಂದ ಸ್ವೀಕರಿಸುವರು. ಸರ್ಕಾರದಲ್ಲಿ ದೊಡ್ಡ ದೊಡ್ಡ ಪದವಿಗಳಲ್ಲಿದ್ದು ಹೆಚ್ಚು ಸಂಬಳಗಳನ್ನು ತೆಗೆಯುತ್ತಲಿದ್ದರೂ, ಬಡವಾಪಿಗಳಿಗಾಗಿ ಏರ್ಪಟ್ಟಿರುವ ಸರ್ಕಾರದ ಸಾಹಾಯ್ಯವನ್ನು ತಮ್ಮ ಮಕ್ಕಳು ನಂಟರು ಮೊದಲಾದವರಿಗೆ ಕೊಡಿಸಲು ವಿಶ್ವಪ್ರಯತ್ನವನ್ನು ಮಾಡುವರು. ಅಂತಹ ಹಣಗಾರ ಕೂಟದಲ್ಲಿ ನಮ್ಮ ದುರ್ಮತಿಯು ಒಬ್ಬನಾದುದರಿಂದ ದಮನಕನ ಆಹ್ವಾನವನ್ನು ಸ್ವೀಕರಿಸಿದನು.

ನಾಟಕಕ್ಕೆ ಹೋಗಬೇಕೆಂದು ಆಸೆಯಿದ್ದರೂ, ಇದಿರು ಕ್ಷಿಯಾದ ಮಂತ್ರಿಯ ಆಸನದಲ್ಲಿ ಕುಳಿತರೆ ತನ್ನ ಕಡೆಯವರು ಆರಾದರೂ ನೋಡಿದರೆ ಏನ ಹೇಳುತ್ತಾರೋ ಎಂದು ಭಯಪಟ್ಟು, ತಾನು ಹೋಗುವುದಿಲ್ಲವೆಂದು ದುರ್ಮತಿಯು ನಿಶ್ಚಯಿಸಿಕೊಂಡನು. ಆ ಸಂಗತಿಯು ಭಾಮಿನಿಗೆ ತಿಳಿದ ಕೂಡಲೇ ಅವಳು ದಮನಕನನ್ನು ಮನೆಗೆ ಕರೆಸಿಕೊಂಡು ಮಗಳನ್ನೂ ಕರೆದುಕೊಂಡು ಅವನ ಜತೆಯಲ್ಲಿ ನಾಟಕಶಾಲೆಗೆ ಹೋ

ದಳು. 'ಇಬ್ಬರು ಹೆಂಗುಸರೇ ಆವ ಪುರುಷನ ಸಾಹಾಯ್ಯವೂ ಇಲ್ಲದೆ ಇಂತಹ ಸ್ಥಳ ಗಳಿಗೆ ಹೋದರೆ ಅವರ ವಿಷಯವಾಗಿ ಜನರು ಆಡಿಕೊಳ್ಳದೇ ಇದ್ದಾರೆಯೇ? ದಮನಕನಾದರೋ ಭಾಮಿನಿಯ ಉಪಪತಿಯೆಂಬುದು ಲೋಕಪ್ರಸಿದ್ಧ. ಆತನು ಜತೆಯಲ್ಲಿ ದ್ದರೆ ಲೋಕಾಪವಾದವು ತಟ್ಟುವುದು' ಎಂದು ವಿಲಾಸಿನಿಯು ತಿಳಿದಿದ್ದಳು.

ಉದಯಸಿಂಹನಿಗೆ ನಾಟಕವನ್ನು ನೋಡುವುದಕ್ಕಿಂತ ನಾಟಕಶಾಲೆಗೆ ಬರುವ ಯುವತಿಯರನ್ನು ನೋಡಿ ಸಂತೋಷಪಡುವುದೇ ಆಸೆ; ಆದುದರಿಂದ ಅವನು ತನ್ನ ಆಪ್ತಸ್ನೇಹಿತನಾದ ಚಿತ್ರಸೇನನೊಡನೆ ಎಲ್ಲರಿಗಿಂತಲೂ ಮೊದಲೇ ಬಂದು ಆಸನದಲ್ಲಿ ಕುಳಿತುಕೊಂಡಿದ್ದನು.

ಅಯ್ಯಾ ಚಿತ್ರಸೇನ, ಇಂದು ಆವ ನಾಟಕ?

ಚಂಡಕೌಶಿಕನಾಟಕವಂತೆ.

ಅದೊಂದು ಗೋಳು ನಾಟಕ.

ನಿನಗೆ ಆವ ನಾಟಕದಲ್ಲಿ ತಾನೇ ರುಚಿಯಿದೆ?

ಉದಯಸಿಂಹನು ನಕ್ಕು ಸುಮ್ಮನಾದನು. ಆ ವೇಳೆಗೆ ನಾಟಕವು ಆರಂಭ ವಾಯಿತು. ಆದಾದ ಐದು ನಿಮಿಷಗಳಲ್ಲಿ ದಮನಕನು ಭಾಮಿನಿವಿಲಾಸಿನಿಯೊ ಡನೆ ಬಂದು ಮಂತ್ರಿಯ ಆಸನದಲ್ಲಿ ಕುಳಿತುಕೊಂಡನು.

ಆಗ ಚಿತ್ರಸೇನನು 'ಅಯ್ಯಾ ಉದಯಸಿಂಹ, ಇತ್ತ ನೋಡು, ನಿನ್ನ ವಿಲಾಸಿ ನಿಯು ಬಂದಿದ್ದಾಳೆ. ಅವಳನ್ನು ನೀನೇಕೆ ಮದುವೆಯಾಗಲು ಒಪ್ಪುವುದಿಲ್ಲ. ಆವ ಳೇನೋ ಕುಲೀನಳಲ್ಲ; ಆದರೆ ಈ ಕಾಲದಲ್ಲಿ ಕುಲವನ್ನು ಆರು ಕೇಳುತ್ತಾರೆ? ಹುಡು ಗಿಯೇನೋ ಚೆನ್ನಾಗಿದ್ದಾಳೆ' ಎನ್ನಲು, ಉದಯಸಿಂಹನು 'ನಿಜ, ಅವಳೇನೋ ಚೆನ್ನಾಗಿದ್ದಾಳೆ, ಆದರೆ ಗಂಡುಬೀರಿ' ಎಂದನು.

ಉದಯಸಿಂಹನು ಹೇಳಿದುದೇನೋ ನಿಜವೇ. ವಿಲಾಸಿನಿಗೆ ಅಮಿತವಸೌಂ ದರ್ಯವಿದ್ದರೂ ಸ್ತ್ರೀಯರುಗಳಿಗೆ ಸಹಜವಾಗಿರಬೇಕಾದ ಮಾರ್ದವವೂ ಲಾಲಿತ್ಯವೂ ಇರಲಿಲ್ಲ.

ಹೀಗೆ ಚಿತ್ರಸೇನನೂ ಉದಯಸಿಂಹನೂ ಒಬ್ಬೊಬ್ಬಳ ಅಂದ ಚೆಂದಗಳನ್ನೂ ಗುಣದೋಷಗಳನ್ನೂ ವಿಚಾರಮಾಡುತ್ತಲಿರುವಾಗ ಮೊದಲನೆಯ ಅಂಕವು ಮುಗಿದು

ತೆರೆಯು ಬಿದ್ದಿತು. ಆಗ ಅವರವರು ಎದ್ದು ತಮ ತಮಗೆ ಪರಿಚಯವಿದ್ದವರನ್ನು ನೋಡಿ ಮಾತನಾಡಿಸಲು ಹೋದರು. ಎರಡನೆಯ ಅಂಕವು ಪ್ರಾರಂಭವಾಗುವ ಸೂಚನೆಯಾದ ಕೂಡಲೇ ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಬಂದು ಸೇರಿದರು.

ಆಗ ರಾಜಾಮಲಯಸಿಂಹನು ಕೋಮಲೆಯೊಡನೆ ಬಂದು ತನ್ನ ಆಸನದಲ್ಲಿ ಕುಳಿತನು. ಅವನ ಜತೆಯಲ್ಲಿ ಬಂದಿದ್ದ ವಾಮನಭಟ್ಟನು ಮುಂದೆ ನಿಂತಿದ್ದನು. ಕೋಮಲೆಯು ತನ್ನ ದೇಶದ ಉಡಿಗೆ ತೊಡಿಗೆಗಳನ್ನು ತೊಟ್ಟಿದ್ದುದರಿಂದ ಆ ಪುರದ ಜನರಿಗೆ ಅದು ವಿಜಾತೀಯವಾಗಿ ತೋರಿ ಎಲ್ಲರೂ ಅವಳನ್ನೇ ನೋಡುತ್ತಲಿದ್ದರು. ತನ್ನ ತಲೆಯ ಮುಸುಕನ್ನು ತೆಗೆದು ಆಸನದ ಮೇಲೆ ಅವಳು ಕುಳಿತ ಕೂಡಲೇ, ಎಲ್ಲರೂ ಅವಳ ರೂಪಲಾವಣ್ಯಗಳನ್ನು ನೋಡಿ ಪರಮಾಶ್ಚರ್ಯಪಡುತ್ತ ಇವಳು ಮನ್ಮಥನ ಸಾಮ್ರಾಜ್ಯಲಕ್ಷ್ಮಿಯೋ! ರತೀದೇವಿಯ ಅಪರಾವತಾರವೋ! ಎಂದು ತಮ ತಮಗೆ ತೋರಿದ ರೀತಿಯಿಂದ ಉಲ್ಲೇಖಿಸುತ್ತಿದ್ದರು.

ಅಯ್ಯಾ ಉದಯಸಿಂಹ, ಈ ಸುಂದರಿಯು ಆರನ್ನು ವರಿಸುವಳೋ ಅವನೇ ಧನ್ಯನು. ಇವಳು ಆರ ಕಯ್ಯನ್ನು ಹಿಡಿಯುವಳೋ ಅವನು ಸದಾ ಮನ್ಮಥನ ಉಪವನದಲ್ಲಿ ರಮಿಸುತ್ತಿರುವಂತಿರುವನು.

ಮನ್ಮಥನ ಉಪವನಕ್ಕೂ ಇವಳಿಗೂ ಎಲ್ಲಿಯ ಸಾಮ್ಯ?

ಹಾಗೋ! ಕೇಳು. ತುಟಿಗಳಿಂದ ಪಲ್ಲವಿಸಿ, ಮಂದಹಾಸದಿಂದ ಕುಸುಮಿಸಿ, ಸುಳಿಗುರುಳುಗಳಿಂದ ಸುಳಿಗೊಂಡು, ಕುಚಯುಗ್ಮದಿಂದ ಫಲಿಸಿ, ಸವಿನುಡಿಗಳಿಂದ ಶುಕಪಿಕಾಯಮಾನವೆನಿಸಿ, ನೇತ್ರವಿಶಾಲಗಳಿಂದ ಕೂಡಿದ ಮುಖಸೌಂದರ್ಯದಿಂದ ಸರೋಜವೆನಿಸಿ ಶೃಂಗಾರರಸವಂ ಚೆಲ್ಲುವ ಮನ್ಮಥನ ಉಪವನ.

ಅಪ್ಪಾ ಚಿತ್ರಸೇನ, ನೀನು ಹೇಳುವುದೇನೋ ಸರಿ; ಆ ನಿರ್ಜೀವಪದಾರ್ಥವಾದ ವನಕ್ಕೂ ತನ್ನ ಸೌಂದರ್ಯದಿಂದ ರತಿಯನ್ನು ಸೋಲಿಸಿ, ಭ್ರೂಲತೆಯಿಂದ ಸಕಲರ ಮನಸ್ಸನ್ನೂ ಕಟ್ಟಿಹಾಕಬಲ್ಲ ಈ ಜಗನ್ಮೋಹಿನಿಗೂ ಎಲ್ಲಿಯ ಸಂಬಂಧ? ಇವಳನ್ನು ನೋಡಿದ ಮೇಲೆ ಇನ್ನು ಆವ ಸ್ತ್ರೀಯನ್ನು ನೋಡುವುದಕ್ಕೂ ಮನಸ್ಸು ಬರುವುದಿಲ್ಲ ಎಂದನು. ಅಷ್ಟರಲ್ಲಿಯೇ ಎರಡನೆಯ ಅಂಕವು ಮುಗಿಯಿತು.

ಕೂಡಲೇ ಭಾಮಿನಿಯು ತನ್ನ ಬಳಿಗೆ ಬರುವಂತೆ ಉದಯಸಿಂಹನಿಗೆ ಸಂಜ್ಞೆ

ಯನ್ನು ಮಾಡಿದಳು. ಹೋಗದಿದ್ದರೆ ಎಲ್ಲಿ ಅವಳಿಗೆ ಅಮರ್ಯಾದೆಮಾಡಿದಂತಾಗು ವುದೋ ಎಂದು ಅವನು ಅಲ್ಲಿಗೆ ಹೋದನು. ಅವಳು ಅವನನ್ನು ಬಹು ಮರ್ಯಾದೆ ಯಿಂದ ಕಂಡಳು; ವಿಲಾಸಿನಿಯು ಮರ್ಯಾದೆಮಾಡಲಿಲ್ಲ. ದಮನಕನು ಉದಯಸಿಂಹ ನನ್ನು ಸೋಡಿ ನೀನು ಒಳ್ಳೆಯ ಸಮಯಕ್ಕೆ ಬಂದೆ; ಮಲಯಸಿಂಹನ ವಿಚಾರವಾಗಿ ಕೇಳಿ ಕೇಳಿ ಇವರು ನನ್ನ ಪ್ರಾಣವನ್ನು ತೆಗೆಯುತ್ತಲಿದ್ದರು. ನಿನ್ನನ್ನು ಕೇಳಿದರೆ ಎಲ್ಲವೂ ತಿಳಿಯುವುದೆಂದು ಹೇಳಿಬಿಟ್ಟಿದ್ದೇನೆ ಎಂದನು.

ಅಯ್ಯಾ ದಮನಕರೇ, ನೀವು ಮಂತ್ರಿಗೆ ಒಳ್ಳೆಯ ಶಿಷ್ಯರು. ಗೂಢಚಾರರ ಮೂಲಕ ಇಂತಹ ಪ್ರಸಿದ್ಧಪುರುಷರ ವರ್ತಮಾನಗಳನ್ನು ತಿಳಿಯಬೇಕೆಂದು ಸರ್ಕಾರ ದವರು ವರ್ಷವೊಂದಕ್ಕೆ ಐವತ್ತು ಸಾವಿರ ವರಹಗಳ ಸಂಬಳವನ್ನು ಕೊಡುತ್ತಾರೆ. ಹೀಗಿರುವಲ್ಲಿ ನಾನು ಕೇಳಿದ ವಿಷಯವು ನಿಮಗೆ ತಿಳಿಯದು ಎಂದರೆ ನನಗೆ ನಾಚಿಗೆ ಯಾಗುತ್ತದೆ ಎಂದು ಭಾಮಿನಿಯು ಹೇಳಲು, ಅವನು "ಆ ರಾಜನು ಗೋಲಕೊಂ ಡದ ನವಾಬನಿಗಿಂತ ಹಣಗಾರನು. ಇದು ಹೊರತು ಮತ್ತಾವುದೂ ನನಗೆ ತಿಳಿ ಯದು" ಎಂದನು.

ಯಾವ ನವಾಬನಾಗಿದ್ದರೂ ಸುಮಾರು ಐವತ್ತು ಸಾವಿರ ವರಹಗಳ ಬೆಲೆ ಬಾಳುವ ಕುದುರೆಗಳನ್ನೂ ವಜ್ರಗಳನ್ನೂ ನನಗೆ ಕೊಡುತ್ತಿರಲಿಲ್ಲ.

ಅಮ್ಮಾ, ಅವನಿಗೆ ವಜ್ರದ ಹುಚ್ಚು. ಆವಾಗಲೂ ಜೇಬಿನಲ್ಲಿ ವಜ್ರಗಳನ್ನು ತುಂಬಿಕೊಂಡು ಬೀದಿಯಲ್ಲಿ ಎರಚುತ್ತ ಹೋಗುತ್ತಿರುವನು ಎಂದು ಉದಯಸಿಂಹನು ಹೇಳಲು, ಅವಳು "ಅವನಿಗೆ ವಜ್ರದ ಗಣಿಯೊಂದು ಸಿಕ್ಕಿರಬಹುದು; ಇಲ್ಲದಿದ್ದರೆ ಹೀಗೆ ವಜ್ರಗಳನ್ನು ಮನಸ್ಸು ಬಂದ ಹಾಗೆ ಕೊಡುತ್ತಿರಲಿಲ್ಲ. ಉದಯಸಿಂಹರೇ! ಅವನು ಯಜಮಾನರ ಮೇಲೆ ಅಮಿತವಾದ ಹಣಕ್ಕೆ ಒಂದು ಹುಂಡಿಯನ್ನು ತಂದಿ ದ್ದಾನೆ. ಅದು ನಿಮಗೆ ತಿಳಿಯದೋ" ಎಂದಳು.

ಅದನ್ನು ನಾನರಿಯೆನು.

ಅವನು ಈ ಪಟ್ಟಣದಲ್ಲಿ ಒಂದು ವರ್ಷವಿರುತ್ತಾನಂತೆ; ಅಷ್ಟರಲ್ಲಿ ಅರುವತ್ತು ಲಕ್ಷ ವರಹಗಳನ್ನು ವೆಚ್ಚಮಾಡುವನಂತೆ.

ಅಮ್ಮಾ! ಅವನು ಕುಬೇರನೇ ಆಗಿರಬೇಕು ಎಂದು ಉದಯಸಿಂಹನು ಹೇಳಿದನು.

ವಿಲಾಸಿನಿಯು ಕೋಮಲೆಯನ್ನು ನೋಡಿ, ದಮನಕರೇ, ರಾಜಾಮಲಯಸಿಂಹರ ಪಕ್ಕದಲ್ಲಿ ಕುಳಿತಿರುವ ಯುವತಿಯನ್ನು ನೋಡಿದಿರಾ ಎನ್ನಲು, ಅವನು " ಅವಳು ಬಲು ಸೊಗಸುಗಾತಿ. ಒಬ್ಬ ಸುಂದರಿಯು ಮತ್ತೊಬ್ಬಳ ಸೌಂದರ್ಯವನ್ನು ನೋಡಿ ಶ್ಲಾಘಿಸುವುದು ಆಶ್ಚರ್ಯವೇ ಸರಿ " ಎಂದನು.

ಅವಳಾರು ಎಂದು ವಿಲಾಸಿನಿಯು ಉದಯಸಿಂಹನನ್ನು ಕೇಳಲು, ಅವಳೊಬ್ಬ ಯವನದೇಶದವಳು ಎಂದನು.

ಅವಳ ಉಡಿಗೆಯಿಂದಲೇ ಅದು ವ್ಯಕ್ತವಾಗುತ್ತದೆ. ನಿಮಗೆ ಇನ್ನೇನೂ ತಿಳಿಯದಿದ್ದರೆ ನೀವೂ ನಮ್ಮಂತೆಯೇ ಆಗುತ್ತೀರಿ.

ಅವಳು ಒಲು ಚೆನ್ನಾಗಿ ಹಾಡುತ್ತಾಳೆ ; ಅಷ್ಟು ಬಲ್ಲೆ.

ನೀವೆಲ್ಲಿ ಅವಳ ಹಾಡನ್ನು ಕೇಳಿದಿರಿ ?

ಒಂದು ದಿನ ರಾಜನು ನನ್ನನ್ನು ಊಟಕ್ಕೆ ಕರೆದಿದ್ದನು. ಅಂದು ತನ್ನ ಕೋಣೆಯಲ್ಲಿ ಕುಳಿತು ಅವಳು ಹಾಡುತ್ತಿದ್ದುದನ್ನು ಕೇಳಿದ್ದೆನು.

ಅದನ್ನು ಕೇಳಿ ಭಾವಿನಿಯು ಆಶ್ಚರ್ಯಪಟ್ಟು ನಿಮ್ಮ ರಾಜನು ಜನಗಳನ್ನು ಊಟಕ್ಕೆ ಕರೆಯುವುದೂ ಅವರ ಮನೆಗೆ ಕರೆದರೆ ತಾನು ಹೋಗುವುದೂ ಉಂಟೋ ಎಂದು ಕೇಳಲು, ಉಂಟು; ಅವನ ಮನೆಯು ಊಟವೆಂದರೆ ರಸಕವಳ ಎಂದನು.

ಹಾಗಾದರೆ ನಮ್ಮ ಯಜಮಾನರಿಗೆ ಹೇಳಿ ಒಂದು ದಿನ ಅವನಿಗೆ ಔತಣಮಾಡಿಸಿದರೆ ಅವನು ನಿರ್ವಾಹವಿಲ್ಲದೆ ನಮ್ಮನ್ನು ಬದಲಿಗೆ ಕರೆಯಬೇಕಾಗುತ್ತದೆ.

ಆಗಬಹುದು.

ನನಗೊಂದು ಕೆಲಸವನ್ನು ನೀವು ಮಾಡಿಕೊಡಬೇಕಲ್ಲ?

ಅದೇನು ಹೇಳೋಣಾಗಲಿ.

ನಿಮ್ಮ ರಾಜನನ್ನು ಇಲ್ಲಿಗೆ ಕರೆದುಕೊಂಡು ಬರಬೇಕು ಎಂದು ಹೇಳಲು, ವಿಲಾಸಿನಿಯು ಅಮ್ಮಾ, ಏತಕ್ಕೆ, ಎಂದು ಕೇಳಿದಳು.

ಅಮ್ಮಾ ವಿಲಾಸಿನೀ ! ನಿನಗೆ ಅವನನ್ನು ನೋಡಬೇಕೆಂಬ ಆಸೆಯಿಲ್ಲವೋ ?

"ಇಲ್ಲ." ನೀನೊಂದು ವಿಜಾತೀಯಳಾದ ಹುಡುಗಿ, ಎಂದು ಹೇಳಿ ಭಾವಿನಿಯು ಉದಯಸಿಂಹನ ಮುಖವನ್ನು ನೋಡಲು, ಅವನು " ಅಮ್ಮಾ ! ರಾಜನು ತಾನಾ

ಗಿಹೇ ಇಲ್ಲಿಗೆ ಬರುವಂತಿದೆ. ಅಗೋ, ಅವನು ನಿನ್ಮುನ್ನು ನೋಡಿ ತಲೆಯನ್ನಲುಗಿ ಸುತ್ತಾನೆ ಎಂದನು.

ಭಾಮಿನಿಯು ಅತಿಪ್ರಸನ್ನಳಾಗಿ ಬದಲಿಗೆ ತಲೆಯನ್ನು ಅಲುಗಿಸಿದಳು. ಉದಯ ಸಿಂಹನು ರಾಜಾಮಲಯಸಿಂಹನ ಬಳಿಗೆ ಹೊರಟನು. ಅದನ್ನು ತಿಳಿದು ರಾಜನು ಅಲ್ಲಿಂದ ಹೊರಟು ವಾಮನಭಟ್ಟನನ್ನು ಅಲ್ಲಿಯೇ ಬಿಟ್ಟು ಉದಯಸಿಂಹನನ್ನು ಇದಿರು ಗೊಂಡು ಬಂದನು.

ಸ್ವಾಮೀ ರಾಜರೇ! ಸಂಗೀತವು ಹೇಗಿದೆ ಎಂದು ಉದಯಸಿಂಹನು ಕೇಳಲು, ಮಲಯಸಿಂಹನು ಮನುಷ್ಯಕಲ್ಪಿತವಾಗಿ ರಕ್ಕೆಪುಕ್ಕಗಳಿಲ್ಲದ ದ್ವಿಪಾದಗಳಿಂದ ಹಾಡಲ್ಪ ಟ್ಟರೆ ಎಷ್ಟು ಮನೋಹರವಾಗಿರಬಹುದೋ ಅಷ್ಟು ಮನೋಹರವಾಗಿದೆ ಎಂದನು.

ದೇವಗಾನದಂತಿರುವ ಸಂಗೀತವನ್ನು ಕೇಳಿದ ಕಿವಿಗಳಿಗೆ ಈ ಸಂಗೀತವು ರುಚಿಸದು.

ಆ ಸಂಗೀತವನ್ನು ಕೇಳಬೇಕಾಗಿದ್ದರೆ ನೀವು ಅವುದಾದರೂ ಒಂದು ದಿನ ನನ್ನ ಮನೆಗೆ ಬನ್ನಿರಿ.

ಅದನ್ನು ನಾನು ಆವಾಗಲೇ ಕೇಳಿದ್ದೇನೆ.

ಇಂದ್ರಪ್ರಸ್ಥದಲ್ಲಲ್ಲವೇ? "ಅಹುದು"

ಉದಯಸಿಂಹನು ಆ ಮಾತನ್ನು ಅಷ್ಟಕ್ಕೇ ನಿಲ್ಲಿಸಿದನು; ಮಲಯಸಿಂಹನು ಏನು ದನ್ನೋ ಯೋಚನೆಮಾಡುತ್ತ ಮೌನವಾಗಿದ್ದನು. ಆಗ ಅಂಕದ ತೆರೆಯನ್ನೆತ್ತುವ ಸೂಚನೆಯಾಯಿತು. ಉದಯಸಿಂಹನು ತನ್ನ ಆಸನಕ್ಕೆ ಹೋಗುವ ಪ್ರಯತ್ನಮಾಡಿ ಭಾಮಿನಿಯವರು ನಿಮ್ಮನ್ನು ನೋಡಬೇಕೆಂದು ಕುತೂಹಲವುಳ್ಳವರಾಗಿದ್ದಾರೆ. ಅವರಿಗೆ ಏನ ಹೇಳಲಿ ಎಂದನು.

ಆ ಮೇಲೆ ಹೋಗಿ ನೋಡುತ್ತೇನೆ. ನಿಮ್ಮ ಯಜಮಾನರು ಶ್ರೀಮಂತ ರಾಜ ಸಿಂಹರನ್ನು ಎಲ್ಲೆಲ್ಲಿ ನೋಡಿದರೂ ಕಾಣಲಿಲ್ಲ. ಅವರು ನಾಟಕಕ್ಕೆ ಬರುವುದಿಲ್ಲವೋ?

ಇನ್ನು ಮೇಲೆ ಬರುವರು ಎಂದು ಹೇಳಿ, ರಾಜನು ಬರುತ್ತೇನೆಂದುದನ್ನು ಭಾಮಿ ನಿಗೆ ಸೂಚಿಸಿ ಉದಯಸಿಂಹನು ತನ್ನ ಸ್ಥಾನಕ್ಕೆ ಹೋದನು.

ಮೂರನೆಯ ಅಂಕವು ಪ್ರಾರಂಭವಾದ ಮೇಲೆ ಶ್ರೀಮಂತರಾಜಸಿಂಹನು ಬಂದು

ಕಂಡು ಕಾಲಕೂಟವಿಷದ ಸರ್ಪನ ತಲೆಯು ಸವಿಾಪದಲ್ಲಿರುವಂತೆ ಕಂಡು ಕಿರ್ರೆಂದು ಕಿರಿಚಿಕೊಂಡಳು. ತಕ್ಷಣನೇ ಬಾಗಿಲಲ್ಲಿದ್ದ ವಾಮನಭಟ್ಟನು ಒಳಕ್ಕೆ ಹೋದನು.

ಇದನ್ನು ನೋಡುತ್ತಲಿದ್ದ ವಿಲಾಸಿನಿಯು ರಾಜರೇ! ನಿಮ್ಮ ಪೋಷಣೆಯುಲ್ಲಿರುವ ಯುವತಿಗೆ ಏನು? ಮೂರ್ಛೆಹೋದಂತೆ ತೋರುತ್ತದೆ ಎಂದುದಕ್ಕೆ, ರಾಜನು ಅವಳ ನರಗಳು ಅತಿಸೂಕ್ಷ್ಮವಾದುವು. ಕೆಲವು ಹೂವುಗಳ ವಾಸನೆಯು ಅವಳಿಗಾಗದು, ಕೆಲವು ಅವಳ ಕಣ್ಣಿಗೆ ಬಿದ್ದರೆ ಸಾಕು, ಮೂರ್ಛೆ ಹೋಗುವಳು. ನೀವೇನೂ ಭಯ ಪಡ ಕೆಲಸವಿಲ್ಲ. ಅಂತಹ ರೋಗಗಳಿಗೆ ಇದು ಸಂಜೀವನ ಎಂದು ತನ್ನ ಜೇಬಿನಲ್ಲಿದ್ದ ಸೀಸೆಯನ್ನು ತೋರಿಸಿ, ಓಡಿ ಹೋಗಿ, ಆ ಸೀಸೆಯ ದ್ರಾವಕದಲ್ಲಿ ಒಂದು ತೊಟ್ಟನ್ನು ಕೋಮಲೆಯ ಬಾಯಿಗೆ ಬಿಟ್ಟನು.

ಐದು ನಿಮಿಷಗಳೊಳಗಾಗಿಯೇ ಕೋಮಲೆಯು ಎದ್ದು ಮಲಯಸಿಂಹನ ಕಯ್ಯನ್ನು ಹಿಡಿದು, ಸ್ವಾಮೀ! ನೀವು ಅಲ್ಲಿ ಅರೊಂದಿಗೆ ಕುಳಿತು ಮಾತನಾಡುತ್ತಲಿದ್ದಿರಿ ಎಂದು ಕೇಳಲು, ರಾಜನು ಶ್ರೀಮಂತರಾಜಸಿಂಹನ ಸಂಗಡ; ತನಗೆ ಮಾಡಿದ ಮಹ ದುಪಕಾರಕ್ಕಾಗಿ ಸಾಯುವ ಕಾಲ್ಪದಲ್ಲಿ ನಿನ್ನ ತಂದೆಯು ಅವನಿಗೆ ವಿಶೇಷದ್ರವ್ಯವನ್ನು ಕೊಟ್ಟನೆಂದು ಅವನು ಹೇಳುತ್ತಿದ್ದನು ಎಂದನು.

ಇದನ್ನು ಕೇಳುತ್ತಲೆ ಕೋಪದಿಂದ ಕೋಮಲೆಯ ಕಣ್ಣುಗಳು ಕೆಂಡದಂತಾಗಿ 'ಅವನು ಖೂಳನು; ವಿಶ್ವಾಸಘಾತುಕನು; ನನ್ನ ತಂದೆಯನ್ನು ನಮ್ಮ ಹಗೆಗಳಿಗೆ ಮಾರಿ ತ್ಛುಚವಾದ ಮೋಸದ ಕೆಲಸಗಳನ್ನು ಮಾಡಿ ಹಣವನ್ನು ಸಂಪಾದಿಸಿದನು.' ನನ್ನ ಸ್ವಾಮಿಯಾದ ನಿಮಗೆ ಈ ಸಮಾಚಾರವು ತಿಳಿಯದೋ ಎಂದಳು.

ಹಿಂದೆ ಎಲ್ಲೋ ಸ್ವಲ್ಪ ಕೇಳಿದ್ದೆನು; ಆದರೆ ಅದರ ವಿವರವು ನನಗೆ ಚೆನ್ನಾಗಿ ತಿಳಿಯದು. ಈಗ ನೀನು ದುರ್ಬಲೆಯಾಗಿರುವುದರಿಂದ ಇನ್ನಾವಾಗಲಾದರೂ ಆ ಕಥೆಯನ್ನು ಮೊದಲಿನಿಂದ ಕೇಳುತ್ತೇನೆ.

ಸ್ವಾಮೀ! ಆ ಚಂಡಾಲನಿರುವ ಕಡೆ ನಾನಿದ್ದರೆ ನನ್ನ ಪ್ರಾಣವೇ ಹೋಗುವುದು. ಮನೆಗೆ ಹೋಗೋಣ ಎಂದು ಎದ್ದು ರಾಜನ ಕಯ್ಯನ್ನು ಹಿಡಿದುಕೊಂಡು ನಾಟಕ ಶಾಲೆಯಿಂದ ಹೊರಟಳು.

ಅದಕ್ಕೆ ಸರಿಯಾಗಿ ತೆರೆಯನ್ನು ಎತ್ತಿದರು. ಮುಂದಿನ ಅಂಕವು ಪ್ರಾರಂಭವಾ ಯಿತು. ಆಗ ಅಲ್ಲಿದ್ದವರಲ್ಲಿ ಕೆಲವರು ಈ ರಾಜನು ಇತರರು ಮಾಡುವಂತೆ ಆವ ಕೆಲಸ ವನ್ನೂ ಮಾಡುವುದಿಲ್ಲ. ಹರಿಶ್ಚಂದ್ರಮಹಾರಾಜನು ಚಂಡಾಲನ ವಶವಾಗುವ ವರೆಗೆ ಕಥೆಯನ್ನು ಕೇಳಿ, ಕೊನೆಯ ವರೆಗೆ ಇರದೆ ಓಡಿಹೋದನು ಎಂದು ಮನಬಂದಂತೆ ಹೇಳಿಕೊಳ್ಳುತ್ತಲಿದ್ದರು.

ಮೊದಲನೆಯ ಸಂಪುಟ ಸಂಪೂರ್ಣ

PRINTED AT THE GURUVILAS PRINTING WORKS, BANGALORE CITY.